(B) 025230

ಕರ್ನಾಟಕ ವಿಧಾನ ಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES.

ಅಧಿಕೃತ ವರದಿ
OFFICIAL REPORT

ಹನ್ನೊಂದನೆಯ ವಿಧಾನ ಸಭೆಯ ಆರನೇ ಅಧಿವೇಶನ
SIXTH SESSION OF THE ELEVENTH LEGISLATIVE ASSEMBLY

ಸಂಪುಟ - 8 (ಕ್ರಮಾಂಕ 2 ರಿಂದ 3) Volume - VIII (No. 2 to 3)

ಭಾಗ-2 Part-2

(31ನೇ ಜುಲೈ 2003 ಮತ್ತು 1ನೇ ಆಗಸ್ಟ್ 2003)

(31st July 2003 and 1st August 2003)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಅಧ್ಯಕ್ಷರು

ಶ್ರೀ ಎಂ.ವಿ. ವೆಂಕಟಪ್ಪನವರು

ಉಪಾಧ್ಯಕ್ಷರು

ಶ್ರೀ ಮನೋಹರ್ ಹೆಚ್. ತಹಸೀಲ್ದಾರ್

ಕಾರ್ಯದರ್ಶಿ

ಶ್ರೀ ಟಿ. ರಾಜಣ್ಣ

ವಿಷಯಾನುಕ್ರಮಣಿಕೆ

ಸಂಪುಟ – 8 (ಕ್ರಮಾಂಕ 2 ರಿಂದ 3)

(31ನೇ ಜುಲೈ 2003 ಮತ್ತು 1ನೇ ಆಗಸ್ಟ್ 2003)

ಗುರುವಾರ 31ನೇ ಜುಲೈ 2003

1) ಪ್ರಶ್ನೋತ್ತರಗಳು 825–907

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಆ) ತಡೆಹಿಡಿಯಲಾದ ಪ್ರಶ್ನೆಗಳು

ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು (ಅನುಬಂಧ-I)

2) ಚುನಾವಣಾ ಪ್ರಸ್ತಾವ 907

ವಿಷಯ: ಕರ್ನಾಟಕ ವಿಧಾನ ಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಸೆನೆಟ್‌ಗೆ ಸದಸ್ಯರುಗಳನ್ನು ನೇಮಿಸುವ ಬಗ್ಗೆ ಪ್ರಸ್ತಾವನೆ ಮಂಡನೆ

ಶ್ರೀ ಡಿ.ಬಿ. ಚಂದ್ರೇಗೌಡ
(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

(ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು)

3) ಅಧ್ಯಕ್ಷರ ಅಪ್ಪಣೆ ಮೇರೆಗೆ 907–913

ಅ) ಕೇಂದ್ರ ಸರ್ಕಾರದವರು ಲೋಕಸಭೆಯಲ್ಲಿ ಕಾವೇರಿ ರಿವರ್ ಅಥಾರಿಟಿ ಮಾನಿಟರಿಂಗ್ ಕಮಿಟಿ ಮೀಟಿಂಗನ್ನು ಕರೆಯುತ್ತೇವೆಂದು ಹೇಳಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ

ಶ್ರೀ ಡಿ.ಬಿ. ಚಂದ್ರೇಗೌಡ
(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

ಆ) ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಪಘಾತದಿಂದ ಸುಮಾರು 7 ಜನ ಕಾರ್ಮಿಕರು ಸಾವಿಗೀಡಾಗಿದ್ದು ಏಳೆಂಟು ಜನ ಆಸ್ಪತ್ರೆಗೆ ದಾಖಲಾಗಿರುವ ಬಗ್ಗೆ.

ಶ್ರೀ ಅರಗಜ್ಞಾನೇಂದ್ರ

ಶ್ರೀ ಆರ್.ವಿ. ದೇಶಪಾಂಡೆ

(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಇ) ಕುಷ್ಟಗಿ ತಾಲ್ಲೂಕಿನ ಮುಕ್ತಾರಾಂಪುರ ಗ್ರಾಮದ ಒಬ್ಬ ಬಡ ರೈತನ ಕುಟುಂಬದಲ್ಲಿ 6 ಜನ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿರುವುದು.

ಶ್ರೀ ಹಸನ್ ಸಾಬ್ ಧ್ಯೋತಿಹಾಳ್

ಶ್ರೀ ಕರಡಿ ಸಂಗಣ್ಣ ಅಮರಪ್ಪ

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ

(ಕಂದಾಯ ರಾಜ್ಯ ಸಚಿವರು)

ಶ್ರೀ ಎಸ್.ಎಸ್. ಪಾಟೀಲ್

ಈ) ಹುಬ್ಬಳ್ಳಿಯಲ್ಲಿರುವ ಉಣಕಲ್ ಕೆರೆ ದಂಡೆ ಮೇಲೆ ಇರತಕ್ಕ 108 ಎಕರೆ ಜಮೀನನ್ನು ಗಾಲ್ಫ್ ಗ್ರೌಂಡ್ ಆಗಿ ಪರಿವರ್ತಿಸುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್

(ವಿರೋಧ ಪಕ್ಷದ ನಾಯಕರು)

ಶ್ರೀ ಆರ್.ವಿ. ದೇಶಪಾಂಡೆ

(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

4) ಸಂವಿಧಾನದ ತಿದ್ದುಪಡಿ ಸ್ಥಿರೀಕರಣ ನಿರ್ಣಯ : 913–925

"ಸಂಸತ್ತಿನ ಎರಡೂ ಸದನಗಳ ಮೂಲಕ ಅಂಗೀಕರಿಸಲಾದಂತೆ ಸಂವಿಧಾನ (ತೊಂಭತ್ತೈದನೇ ತಿದ್ದುಪಡಿ) ವಿಧೇಯಕ, 2003ರಲ್ಲಿ ಮಾಡಲು ಉದ್ದೇಶಿಸಿರುವ, ಭಾರತ ಸಂವಿಧಾನದ 368ನೇ ಅನುಚ್ಛೇದ (2)ನೇ ಖಂಡದ ಪರಂತುಕದ (ಸಿ) ಖಂಡದ ವ್ಯಾಪ್ತಿಯೊಳಗೆ ಬರುವ ತಿದ್ದುಪಡಿಗಳನ್ನು ಈ ಸದನವು ಅಂಗೀಕರಿಸುತ್ತದೆ."

(ಮಂಡಿಸಲಾಯಿತು)

5) ಶಾಸನ ರಚನೆ 925–941

ಅ) ವಿಧೇಯಕ ಮಂಡನೆಗೆ ಅನುಮೋದನೆ ಹಾಗೂ ಮಂಡನೆ

i) ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 2003 (ಅನುಬಂಧ–II)

ii) ಕರ್ನಾಟಕ ವೈದ್ಯಕೀಯ ನೊಂದಣಿ (ತಿದ್ದುಪಡಿ) ವಿಧೇಯಕ, 2003 (ಅನುಬಂಧ–III)

i) ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2003 (ಅನುಬಂಧ–IV)

iv) ಕರ್ನಾಟಕ ಸರ್ಕಾರಿ ಉದ್ಯಾನವನಗಳ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2003 (ಅನುಬಂಧ–V)

V) ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 2003
(ಅನುಬಂಧ–VI)
(ಮಂಡಿಸಲ್ಪಟ್ಟಿತು)
ಆ) ಪರ್ಯಾಲೋಚನಾ ಪ್ರಸ್ತಾವ
ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ)
ವಿಧೇಯಕ, 2003
ಶ್ರೀ ಎಂ. ಶಿವಣ್ಣ
(ತೋಟಗಾರಿಕೆ ಸಚಿವರು)
ಶ್ರೀ ಎಸ್. ಸುರೇಶ್ ಕುಮಾರ್
ಶ್ರೀ ಬಿ.ಎನ್. ಬಚ್ಚೇಗೌಡ
ಶ್ರೀ ವೈ.ಕೆ. ರಾಮಯ್ಯ
ಶ್ರೀ ಅರಗ ಜ್ಞಾನೇಂದ್ರ
ಶ್ರೀ ಪಿ.ಜಿ.ಆರ್. ಸಿಂಧ್ಯಾ
ಶ್ರೀ ಎಸ್.ಪಿ. ಮುದ್ದಹನುಮೇಗೌಡ
ಶ್ರೀ ಬಿ. ಸೋಮಶೇಖರ್
ಶಿವಾನಂದ ಎಸ್. ಪಾಟೀಲ್
ಶ್ರೀ ಬಿ.ಹೆಚ್. ಬನ್ನಿಕೋಡ್
ಶ್ರೀ ಎಸ್.ಎಸ್. ಪಾಟೀಲ್
(ಅಂಗೀಕರಿಸಲಾಯಿತು)
6. ನಿಯಮ 69ರ ಮೇರೆಗೆ 941–959
ಅಕ್ಷರ ದಾಸೋಹ ಯೋಜನೆಯಲ್ಲಿ ಸಹಸ್ರಾರು ಶಾಲೆಯ ಮಕ್ಕಳು
ಅಸ್ವಸ್ಥರಾಗಿರುವ ಬಗ್ಗೆ
ಶ್ರೀ ಬಿ. ಸೋಮಶೇಖರ್
(ವಿರೋಧ ಪಕ್ಷದ ನಾಯಕರು)
ಪ್ರೊ. ಬಿ.ಕೆ. ಚಂದ್ರಶೇಖರ್
(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ
ಸಚಿವರು)
ಶ್ರೀ ಬಿ.ಆರ್. ಯಾವಗಲ್
7. ಅನುಬಂಧ – I - II - III - IV - V - VI 959–1145

ಶುಕ್ರವಾರ 1ನೇ ಆಗಸ್ಟ್ 2003

1. ಸಂತಾಪ ಸೂಚನೆ 1146–1153
ಪ್ರೊ: ಕೀರ್ತಿನಾಥ ಕುರ್ತಕೋಟಿಯವರ ನಿಧನಕ್ಕೆ ಸಂತಾಪ

ಶ್ರೀ ಡಿ.ಬಿ. ಚಂದ್ರೇಗೌಡ
(ಕಾನೂನು ಸಚಿವರು)
ಶ್ರೀ ಜಗದೀಶ್ ಶೆಟ್ಟರ್
(ವಿರೋಧ ಪಕ್ಷದ ನಾಯಕರು)
ಶ್ರೀ ಹೆಚ್.ಕೆ. ಪಾಟೀಲ್
(ಜಲಸಂಪನ್ಮೂಲ ಸಚಿವರು)
ಶ್ರೀ ಎಸ್.ಎಸ್. ಪಾಟೀಲ್
ಶ್ರೀ ಚಂದ್ರಕಾಂತ್ ಜಿ ಬೆಲ್ಲದ್
ಶ್ರೀ ಪಿ.ಜಿ.ಆರ್. ಸಿಂಧ್ಯ

2. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ 1153–1155

ವಿಷಯ: ಕುಷ್ಟಗಿ ತಾಲ್ಲೂಕಿನ ಎಂ. ರಾಂಪುರ ಗ್ರಾಮದ ಒಂದೇ ಕುಟುಂಬದಲ್ಲಿ 6 ಜನ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿರುವುದರ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್
(ವಿರೋಧ ಪಕ್ಷದ ನಾಯಕರು)

3. ಪ್ರಶ್ನೋತ್ತರಗಳು 1155–1198

ಅ) ಚುಕ್ಕೆ ಗುರುತಿನ ಪ್ರಶ್ನೆಗೆ ಸದನದಲ್ಲಿ ನೀಡಲಾದ ಉತ್ತರ
ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರ (ಅನುಬಂಧ-1)

4. ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡಬೇಕೆಂದು ವಿರೋಧ ಪಕ್ಷದವರಿಂದ ಧರಣಿ ಮುಂದುವರಿಕೆ 1198–1201

ಶ್ರೀ ಜಗದೀಶ್ ಶೆಟ್ಟರ್
(ವಿರೋಧ ಪಕ್ಷದ ನಾಯಕರು)
ಶ್ರೀ ಬಿ. ಸೋಮಶೇಖರ್
ಶ್ರೀ ಡಿ.ಬಿ. ಚಂದ್ರೇಗೌಡ
(ಕಾನೂನು ಸಚಿವರು)
ಶ್ರೀ ಮಲ್ಲಿಕಾರ್ಜುನ ಖರ್ಗೆ
(ಗೃಹ ಸಚಿವರು)

5. ಅಧ್ಯಕ್ಷರ ತೀರ್ಪು 1201–1202
"ಧರಣಿ" ನಿರತರಾಗಿ ಸದನದ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದ ಬಿ.ಜೆ.ಪಿ. ಸದಸ್ಯರು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಿಯಮ 347 ರ ಪ್ರಕಾರ ಅಮಾನತ್ತುಗೊಳಿಸಿ ಸದನದಿಂದ ಹೊರಗೆ ಕಳುಹಿಸುವುದರ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ
(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

6. ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಿಯಮ 347ರ ಮೇರೆಗೆ ಮಾನ್ಯ ಸದಸ್ಯರನ್ನು ಅಮಾನತ್ತುಗೊಳಿಸಿದ್ದಕ್ಕೆ ವಿರೋಧ ಪಕ್ಷದವರಿಂದ ಆಕ್ಷೇಪ 1202–1213

ಶ್ರೀ ಬಿ. ಸೋಮಶೇಖರ್
ಶ್ರೀ ಯು.ಆರ್. ಸಭಾಪತಿ
ಶ್ರೀ ಪಿ.ಜಿ.ಆರ್. ಸಿಂಧ್ಯಾ
ಶ್ರೀ ಡಿ.ಬಿ. ಚಂದ್ರೇಗೌಡ
(ಕಾನೂನು ಸಚಿವರು)
ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ
ಶ್ರೀ ಮಲ್ಲಿಕಾರ್ಜುನ ಖರ್ಗೆ
(ಗೃಹ ಸಚಿವರು)
ಶ್ರೀ ಸಿ.ಆರ್. ಸಗೀರ್ ಅಹಮದ್
(ವಸತಿ ಸಚಿವರು)
ಶ್ರೀ ಕೆ.ಎಂ. ಕೃಷ್ಣಮೂರ್ತಿ
ಶ್ರೀ ಶಿವಾನಂದ ಎಸ್. ಪಾಟೀಲ್

7. ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಿಯಮ 347ರ ಪ್ರಕಾರ ಅಮಾನತ್ತುಗೊಳಿಸಿ ಹೊರ ಹಾಕಿದ ಸದಸ್ಯರುಗಳನ್ನು ನಿಯಮ 348 (2) ರ ಪ್ರಕಾರ ಪುನಃ ವಾಪಸ್ಸು ಕರೆಸುವ ಬಗ್ಗೆ 1213–1225

ಶ್ರೀ ಬಿ. ಸೋಮಶೇಖರ್
ಶ್ರೀ ಪಿ.ಜಿ. ಆರ್. ಸಿಂಧ್ಯಾ
ಶ್ರೀ ಕೆ.ಎಂ. ಕೃಷ್ಣಮೂರ್ತಿ
ಶ್ರೀ ಶಿವಾನಂದ ಎಸ್. ಪಾಟೀಲ್
ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ
ಶ್ರೀ ಎಸ್.ಪಿ. ಮುದ್ದಹನುಮೇಗೌಡ
ಶ್ರೀ ಡಿ.ಬಿ. ಚಂದ್ರೇಗೌಡ
(ಕಾನೂನು ಸಚಿವರು)
(ನಿರ್ಣಯವನ್ನು ಹಿಂದಕ್ಕೆ ಪಡೆಯಲಾಯಿತು)

8. ನಿಯಮ 69ರ ಮೇರೆಗೆ ಚರ್ಚೆ 1225–1270

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಎಂ. ರಾಂಪುರ ಗ್ರಾಮದಲ್ಲಿ ಒಂದೇ ಕುಟುಂಬದ ಆರು ಮಂದಿ ಆತ್ಮಹತ್ಯೆ ಮಾಡಿಕೊಂಡಿರುವುದರ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್
(ವಿರೋಧ ಪಕ್ಷದ ನಾಯಕರು)
ಶ್ರೀ ಬಿ. ಸೋಮಶೇಖರ್
ಶ್ರೀ ಪಿ.ಜಿ.ಆರ್. ಸಿಂಧ್ಯಾ
ಶ್ರೀ ಎಸ್.ಪಿ. ಮುದ್ದಹನುಮೇಗೌಡ
ಶ್ರೀ ಕರಡಿ ಸಂಗಣ್ಣ ಅಮರಪ್ಪ
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
ಶ್ರೀ ಶಿವಾನಂದ ಎಸ್. ಪಾಟೀಲ್
ಶ್ರೀ ಜಿ.ಎಸ್. ಗಡ್ಡದೇವರ ಮಠ್
ಶ್ರೀ ಪಿ.ಜಿ.ಆರ್. ಸಿಂಧ್ಯಾ
ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ
(ಕಂದಾಯ ರಾಜ್ಯ ಸಚಿವರು)
ಶ್ರೀ ಮಲ್ಲಿಕಾರ್ಜುನ ಖರ್ಗೆ
(ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

9) ಅನುಬಂಧ 1 1270–1430

ಕರ್ನಾಟಕ ವಿಧಾನ ಸಭೆ

ಗುರುವಾರ 31ನೇ ಜುಲೈ 2003 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ 3-10 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ರವರು

ಪೀಠವನ್ನು ಅಲಂಕರಿಸಿದ್ದರು

1. ಪ್ರಶ್ನೋತ್ತರ

ಅಧ್ಯಕ್ಷರು : ಮೂರು ಪ್ರಶ್ನೆಗಳು ಐಡೆಂಟಿಕಲ್ ಆಗಿವೆ. ಮಾನ್ಯ ಬೆಲ್ಲದ್ ಚಂದ್ರಕಾಂತ್ ಗುರಪ್ಪ ರವರದು ಸದಾನಂದಗೌಡರದು ಮತ್ತು ಅಪ್ಪಯ್ಯಗೌಡ ಬಸವಗೌಡ ಪಾಟೀಲ್‌ರವರದ್ದು ಪ್ರಶ್ನೆಗಳಿವೆ. ಈ ಮೂರು ಪ್ರಶ್ನೆಗಳು ಸ್ವಲ್ಪ ಹೆಚ್ಚು ಕಡಿಮೆ ಸಕ್ಕರೆ ಉದ್ಯಮದ ಬಗ್ಗೆ ಇವೆ. ಮೂರು ಕಂಬೈಂಡ್ ಮಾಡಿದರೆ ಒಳ್ಳೆಯದು. ಇವತ್ತಿನ ಪಟ್ಟಿಯಲ್ಲಿ 22 ಪ್ರಶ್ನೆಗಳು ಇವೆ. ಸ್ವಲ್ಪ ಬೇಗ ಬೇಗ ಮುಗಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಪ್ರತಿ ಸಾರಿ ಬೇರೆ ಬೇರೆ ಪ್ರಶ್ನೆ ಕೇಳುವುದು ತಪ್ಪುತ್ತದೆ. ಮೊದಲು ಮಾನ್ಯ ಬೆಲ್ಲದ್‌ರವರು ಪ್ರಶ್ನೆ ಕೇಳಲಿ.

ಪ್ರಶ್ನೆಗಳು ಸಂಖ್ಯೆಗಳು : 537 (4769)
540 (4911)

ಕಬ್ಬು ಬೆಳೆಯುವ ಪ್ರಮಾಣ ಹಾಗೂ ಸಕ್ಕರೆ ಉತ್ಪಾದನೆ ವಿವರಗಳು

537 (4769) : ಶ್ರೀ ಬೆಲ್ಲದ್ ಚಂದ್ರ ಕಾಂತ್ ಗುರಪ್ಪ (ಧಾರವಾಡ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ಸಕ್ಕರೆ ಅರೆಯುವ ಪ್ರಮಾಣ ಕೋಜನರೇಷನ್ ಇರುವ ಡಿಸ್ಟಿಲರಿ (ಲಿಕ್ಕರ್) ಘಟಕ ಪ್ರಮಾಣದ ವಿವರ ಒದಗಿಸುವುದು.

ಆ) ಸಕ್ಕರೆ ಕಾರ್ಖಾನೆಗಳು ಪಡೆದು ಕೊಳ್ಳುವ ಕಬ್ಬು ಬೆಳೆಯುವ ಭೂಪ್ರದೇಶ ಮತ್ತು ಉತ್ಪನ್ನಗಳ ಹಿಂದಿನ ವರ್ಷಗಳ ವಿವರ ನೀಡುವುದು ಮತ್ತು ಪ್ರತಿ ಕಾರ್ಖಾನೆ ರೈತರಿಗೆ ನೀಡಬೇಕಾಗಿರುವ ಹಣ ಮತ್ತು ಹಾನಿಯಲ್ಲಿರುವ ಕಾರ್ಖಾನೆಗಳ ವಿವರ ಒದಗಿಸುವುದು.

ಇ) ಸದರಿ ಕಾರ್ಖಾನೆಗಳು ಸ್ಟಾಕ್ ಇಟ್ಟು ಕೊಂಡಿರುವ ಸಕ್ಕರೆ ಪ್ರಮಾಣ ಹಿಂದಿನ 3 ವರ್ಷಗಳ ವಿವರ ನೀಡುವುದು.

ಈ) ಈ ಸಕ್ಕರೆಯ ಮಾರಾಟದಿಂದ ರೈತರನ್ನು ಸಂರಕ್ಷಿಸಿ ಕಾರ್ಖಾನೆಗಳು ಲಾಭದಾಯಕವಾಗಿ ನಡೆಸಲು ಸರ್ಕಾರ ಯೋಜನೆಯನ್ನು ರೂಪಿಸಿದೆಯೇ. ವಿವರ ಒದಗಿಸುವುದು.

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿನ 42 ಸಕ್ಕರೆ ಕಾರ್ಖಾನೆಗಳು 2002-03ನೇ ಸಾಲಿನಲ್ಲಿ ಒಟ್ಟು 064.86 ಲಕ್ಷ ಟನ್ ಕಬ್ಬು ನುರಿಸಿ 18.04 ಲಕ್ಷ ಟನ್ ಸಕ್ಕರೆ ಉತ್ಪಾದಿಸಿವೆ. 42 ಸಕ್ಕರೆ ಕಾರ್ಖಾನೆಗಳ ಪೈಕಿ 9 ಸಕ್ಕರೆ ಕಾರ್ಖಾನೆಗಳಲ್ಲಿ ಕೋಜನರೇಷನ್ ಘಟಕ ಅಳವಡಿಸಿಕೊಂಡು ವಿದ್ಯುತ್ ಉತ್ಪಾದನೆ ಮಾಡುತ್ತಿವೆ ಹಾಗೂ 7 ಸಕ್ಕರೆ ಕಾರ್ಖಾನೆಗಳಲ್ಲಿ ಡಿಸ್ಟಿಲರಿ ಘಟಕಗಳು ಇರುತ್ತವೆ.

ಆ) ರಾಜ್ಯದಲ್ಲಿ 3.37 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಂದಾಜು 300 ಲಕ್ಷ ಟನ್ ಕಬ್ಬು ಬೆಳೆಯಲಾಗುತ್ತಿದೆ. ಇದರಲ್ಲಿ ಸಕ್ಕರೆ ಕಾರ್ಖಾನೆಗಳು ಪಡೆದುಕೊಳ್ಳುವ ಕಬ್ಬು ಸುಮಾರು 160.070 ಲಕ್ಷ ಟನ್‌ಗಳಷ್ಟಾಗಿರುತ್ತದೆ. ದಿನಾಂಕ: 05.07.2003 ರಲ್ಲಿದ್ದಂತೆ ಪ್ರತಿ ಕಾರ್ಖಾನೆ ರೈತರಿಗೆ ನೀಡಬೇಕಾಗಿರುವ ಹಣದ ವಿವರ ಅನುಬಂಧ 1ರಲ್ಲಿ ಲಗತ್ತಿಸಿದೆ. 42 ಸಕ್ಕರೆ ಕಾರ್ಖಾನೆಗಳಲ್ಲಿ 20 ಸಕ್ಕರೆ ಕಾರ್ಖಾನೆಗಳು ಸಹಕಾರಿ ರಂಗದಲ್ಲಿದ್ದು, ಈ ಕಾರ್ಖಾನೆಗಳ 2001–02ರಲ್ಲಿನ ಲಾಭ ನಷ್ಟದ ವಿವರಗಳು ಈ ಕೆಳಕಂಡಂತಿವೆ.

1.	ಲಾಭದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ	...	06
2.	ನಷ್ಟದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ	...	02
3.	ಕಳೆದ ಸಾಲಿನಲ್ಲಿ ಕಾರ್ಯಾರಂಭ ಮಾಡಿದ ಹೊಸ ಸಹಕಾರಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ.	...	02

ಇ) ಕಳೆದ 3 ವರ್ಷಗಳಲ್ಲಿ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆ ಪ್ರಮಾಣ ಈ ರೀತಿ ಇವೆ.

2000–01	16.32 ಲಕ್ಷ ಟನ್
2001–02	15.60 "
2002–03	18.04 "

ದಿನಾಂಕ 01–10–2002 ರಲ್ಲಿದ್ದಂತೆ ಉಳಿದು ಬಂದ ಸಕ್ಕರೆ ದಾಸ್ತಾನು 4.32 ಲಕ್ಷ ಟನ್ ಆಗಿದ್ದು, 2002–03ನೇ ಸಾಲಿನ ಉತ್ಪಾದನೆ 18.04 ಲಕ್ಷಟನ್ ಸಕ್ಕರೆ ಸೇರಿ ಒಟ್ಟು 22.36 ಲಕ್ಷಟನ್ ಸಕ್ಕರೆಯ ಲಭ್ಯತೆಯಲ್ಲಿ ಒಟ್ಟು 9.76 ಲಕ್ಷಟನ್ ಸಕ್ಕರೆಯ ಮಾರಾಟವಾಗಿ ದಿ: 30.06.2003 ರಲ್ಲಿದ್ದಂತೆ ಅಖೈರು ದಾಸ್ತಾನು 12.60 ಲಕ್ಷ ಟನ್ ಇರುತ್ತದೆ.

ಈ) ಸಕ್ಕರೆ ದಾಸ್ತಾನನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1. ರಫ್ತು ಮೇಲಿನ ನಿಷೇದವನ್ನು ತೆಗೆದು ಹಾಕಲಾಗಿದೆ.
2. ದೇಶಾದ್ಯಂತ 20.00 ಲಕ್ಷ ಟನ್ ಸಕ್ಕರೆ ಕಾಪು ದಾಸ್ತಾನು ನಿರ್ಮಿಸಿ ಅದರ ನಿರ್ವಹಣೆ, ವಿಮಾ, ಬಡ್ಡಿ, ವೆಚ್ಚಗಳನ್ನು ಕೇಂದ್ರ ಸರ್ಕಾರವು ಭರಿಸುತ್ತಿದೆ.
3. ರಫ್ತು ಹೆಚ್ಚಿಸಿದ ಉದ್ದೇಶದಿಂದ ಸಾಗಣಿಕೆ ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುತ್ತದೆ.

ಈ ಮೇಲಿನ ಕೇಂದ್ರ ಸರ್ಕಾರದ ಕ್ರಮಗಳು ಸಕ್ಕರೆ ಕಾರ್ಖಾನೆಗಳಲ್ಲಿನ ಸಕ್ಕರೆಯ ದಾಸ್ತಾನು ಕಡಿಮೆ ಮಾಡುವಲ್ಲಿ ಸಹಾಯಕವಾಗಬಹುದಾಗಿದೆ.

ANNEXURE - I

CANE PRICE PAYMENT POSITION

State : Karnataka

Positions as on : 15.07.2003

Sugar Season 2002-03 (Rs in Lakh)

Sl. No.	Name of mill sector-wise	Plant code	Cane Crushed in MTs.	Cane price per Qtl. SMP	SAP agreed Price.	Cane Price Payable	Cane Price Paid Rs. In lakh	Cane Price arrears	Cane Price Arreres (Rs. in lakh) 2001-02 Sugar season	2000-01 & earlier seasons	Total
1	2	3	4	5	5(a)	6	7	8	9	9(a)	10
	(A) Public :										
1.	M.P.M. Sugar	26401	418005	89.18	90.00	3761	3759	2	-	-	2
2.	Mysore Sugar co.	26201	915028	90.90	90.00	8233	6482	1751	-	33	1784
3.	Gangavathi	26301	-	75.24	-	-	-	-	-	-	-
	Total		**1333033**			**11994**	**10241**	**1753**	-	**33**	**1786**
	(B) Cooperative										
4.	Shadra SSK	27601	208142	87.54	87.50	1619	1225	394	197	-	591
5.	Bhagyalaxmi SSK	40601	28574	90.82	73.70	210	208	2	1417	-	1419
6.	Bidar SSK	27401	446760	87.54	60.00	2680	2058	622	-	-	622
7.	Dakshina Kannada	28001	56796	73.60	73.60	385	147	238	-	-	238

1	2	3	4	5	5(a)	6	7	8	9	9(a)	10
8.	Doodhaganga Krishna SSK	26901	660313	100.66	89.60	4793	4793	-	-	-	-
9.	Ghataprabha SSK	27101	448933	95.74	70.00	3194	3194	-	-	-	-
10.	Halasiddanatha SSK	26601	213246	103.12	75.00	1608	1139	469	-	-	469
11.	Hemavathy SSK	27901	252214	69.30	82.50	2151	1455	696	-	-	696
12.	Hiranyakeshi SSK	26701	914224	101.48	73.10	5485	5485	-	-	-	-
13.	Karnataka SSK	27801	100443	85.08	82.40	827	476	351	9	45	405
14.	Malaprabha SSK	26801	501368	87.54	71.00	3008	2234	774	-	-	774
15.	Nandi SSK	35401	588963	95.74	78.40	3828	3828	-	-	-	-
16.	Pandarapura	26501	148013		80000	1184	320	864	-	-	864
17.	Raibag SSK	27001	7260	-	-					1642	1642
18.	Raithara SSK	45601	503084	96.56	95.40	3932	2712	1220	-	-	1220
19.	SSK, Aland	32501	68674	79.34	85.00	144	-	144	95	290	529
20.	Sri Srirama SSK	27701	151010		80.00	1532	1451	81	-	-	81
21.	Vanivilasa CSF	27501	-	-	-	-	-	-	410	-	410
22.	Krishna SSK	40501	312810	-	83.10	2002	1427	575	-	-	575

1	2	3	4	5	5(a)	6	7	8	9	9(a)	10
23.	Naranja		395822		60.00	2376	2376	-	-	-	-
	(C) Privare :	**Total**	**6006649**			**40958**	**34528**	**6430**	**2128**	**1977**	**10535**
24.	Bannari Amman Sugars	30902	1141367		87.30	9964	9679	285	-	-	285
25.	Chamudeshwari Sugars	28101	874507	78.52	85.00	6164	2361	3803	-	-	3803
26.	Davangere Sugar	28701	483203	-	88.00	4488	3351	1137	-	-	1137
27.	Godawari Sugars	17203	1558644	96.56	85.01	10801	7317	3484	-	-	3484
28.	India Sugars & Refineries	28501	311481	89.18	83.00	2556	1238	1318	-	-	1318
29.	I.C.L. Sugars	49901	446413	72.50	82.50	4991	3242	1749	-	-	1749
30.	Mahadeshwara Sugars	28801	-	-	-	-	-	-	-	-	-
31.	Prabhulingeshwara Sugars	50301	725992	103.12	88.00	5082	3885	1197	-	-	1197
32.	Renuka Sugars	50201	680120	93.28	93.80	-	-	-	-	-	-
33.	Sirguppa Sugars (Gowribidanur)	27301	---		not working	-					
34.	Sirguppa Sugars (Desanur)	28601	---		not Working	---					

1	2	3	4	5	5(a)	6	7	8	9	9(a)	10
35.	Sundari Sugars	-	---	not working		---					
36.	Shamanur Sugars	49801	476582	83.44	87.50	4170	4170	-	-	-	-
37.	Ugar Sugar Works	28401	1467798	98.20	85.20	10258	9525	733	-	14	747
38.	Jamkhandi Sugars	45401	390974	96.56	-	-	-	-	-	-	-
39.	Nirani Sugars	51901	45735			297	264	33	-	-	33
40.	Attani Farmers	52004	445023	94.92		3115	2009	1106	-	-	1106
41.	Venkareshwars Power Project	52002	214032	90.00	91.60	-	-	-	-	-	-
42.	Gem Sugara	54201	202738		84.00	1217	314	903	-	-	903
	Total		**9464609**	-	-	**63103**	**47355**	**15748**	-	**437**	**16135**
Grand Total : (A)+(B)+(C)			**16804291**	-	-	**116055**	**92124**	**23931**	**2128**	**2447**	**28506**

ಸಕ್ಕರೆ ಉದ್ಯಮ ಉಳಿವಿಗೆ ಕೈಗೊಂಡ ಕ್ರಮ ಮತ್ತು ಸಕ್ಕರೆ ಉತ್ಪಾದನೆ

540 (4911) : ಶ್ರೀ ಸದಾನಂದಗೌಡ ಡಿ.ವಿ (ಪುತ್ತೂರು) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಸಕ್ಕರೆ ಅಭಿವೃದ್ಧಿ ನಿಧಿಯನ್ನು ಸರ್ಕಾರವು ಸಂಗ್ರಹಿಸಿ ಅನುಷ್ಠಾನಗೊಳಿಸಲು ನಿರ್ಧರಿಸಿದೆಯೇ?

ಆ) ಈ ನಿಧಿಯ ಸ್ಥಾಪನೆಯ ಉದ್ದೇಶಗಳು ಯಾವುವು?

ಇ) ಈ ನಿಧಿಗೆ ಪೂರ್ತಿ ಹಣವನ್ನು ಸರ್ಕಾರವು ಒದಗಿಸಲು ನಿರ್ಧರಿಸಿದೆಯೆ? ಹಾಗಿದ್ದಲ್ಲಿ, ಅನುಷ್ಠಾನಗೊಳಿಸಲು ಯೋಜಿಸಲಾದ ಈ ನಿಧಿಯ ಅಂದಾಜು ಮೊತ್ತ ಎಷ್ಟು?

ಈ) ಸರ್ಕಾರಿ, ಸಹಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿರುವ ಸಕ್ಕರೆ ಕಾರ್ಖಾನೆಗಳ ವಿಚಾರದಲ್ಲಿ ಈ ನಿಧಿಯನ್ನು ಹೇಗೆ ಬಳಕೆ ಮಾಡಲಾಗುವುದು.

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಹೌದು

ಆ) ಸಕ್ಕರೆ ಅಭಿವೃದ್ಧಿ ನಿಧಿಯು ಈ ಕೆಳಕಂಡ ಉದ್ದೇಶಗಳನ್ನು ಹೊಂದಿರುತ್ತದೆ.

1. ಯಂತ್ರೋಪಕರಣಗಳನ್ನು ಮೇಲ್ದರ್ಜೆಗೆ ಏರಿಸುವುದು
2. ಮಳೆ ನೀರಿನ ಸಂಗ್ರಹಣೆ ಮತ್ತು ಸದ್ಬಳಕೆ
3. ಸಕ್ಕರೆ ಗುಣಮಟ್ಟ ಸುಧಾರಣೆ
4. ಸಕ್ಕರೆ ಕಾರ್ಖಾನೆಗಳ ಹೆಚ್ಚುವರಿ ಸಿಬ್ಬಂದಿಯನ್ನು ಕಡಿತಗೊಳಿಸಿ ಸ್ವಯಂ ನಿವೃತ್ತಿ ಯೋಜನೆ.
5. ಉಪ ಉತ್ಪನ್ನಗಳ ಕಾರ್ಯ ಚಟುವಟಿಕೆಗಳು (ಸಹ ವಿದ್ಯುತ್ ಮತ್ತು ಎಥನಾಲ್ ಹೊರತು ಪಡಿಸಿ)
6. ಪರಿಸರ ಸಂಬಂಧಿ ಯೋಜನೆಗಳು
7. ತಾಂತ್ರಿಕ ಆರ್ಥಿಕ ಅಧ್ಯಯನ
8. ರೈತರು ಕಬ್ಬಿನ ಬಿಲ್ ಬಾಕಿಯನ್ನು ಸಕಾಲದಲ್ಲಿ ಬಿಲ್ ಪಾವತಿ ಮಾಡಲು ಅನುವಾಗುವುದು.

ಇ) ಯೋಜಿತ ಕರ್ನಾಟಕ ಸಕ್ಕರೆ ಅಭಿವೃದ್ಧಿ ನಿಧಿಗೆ ಸರ್ಕಾರದ ವತಿಯಿಂದ ಮೂಲ ಧನದ ರೂಪದಲ್ಲಿ ರೂ. 25.00 ಕೋಟಿಗಳನ್ನು ಪಡೆದು ಅದರಂತೆ ಮುಂದೆ ಈ ನಿಧಿಗೆ ಕಬ್ಬು ಬೆಳೆಗಾರರಿಂದ, ಕಾರ್ಖಾನೆ ವತಿಯಿಂದ ಹಾಗೂ ಸರ್ಕಾರದ ವತಿಯಿಂದ ಪ್ರತಿ ಟನ್ ಕಬ್ಬು ನುರಿಸುವಿಕೆಗೆ ತಲಾ 5 ರೂ ನಂತೆ ಸಂಗ್ರಹಿಸಲು ಯೋಜಿಸಲಾಗಿದೆ ಇದರಿಂದ ಪ್ರತಿ ವರ್ಷ ಸುಮಾರು ರೂ. 22.51 ಕೋಟಿ ಈ ನಿಧಿಗೆ ಸಂಗ್ರಹವಾಗಲಿದೆ.

ಈ) ಉದ್ದೇಶಿತ ಕರ್ನಾಟಕ ಸಕ್ಕರೆ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲು ರಚಿಸಿರುವ ನಿಯಮಗಳು ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಈ ಸಂಬಂಧದ ರೂಪುರೇಷೆಗಳು ಅನುಮೋದನೆಯಾದ ನಂತರ ಪ್ರಶ್ನೆ 'ಆ' ದಲ್ಲಿ ನಮೂದಿಸಿರುವ ಉದ್ದೇಶಗಳಿಗೆ ಬಳಸುವಲ್ಲಿ ಬರುವುದು.

ಶ್ರೀ ಬೆಲ್ಲದ್ ಚಂದ್ರ ಕಾಂತ್ ಗುರಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಬಹಳ ಮುಖ್ಯವಾಗಿ ಈ ರಾಜ್ಯದಲ್ಲಿ ಏನು ಕಬ್ಬು ಉತ್ಪಾದನೆಯಾಗುತ್ತಿದೆ, ರೈತರು ಉತ್ಪಾದನೆ ಮಾಡುವ ಕಬ್ಬು ಪೂರ್ಣ ಪ್ರಮಾಣದಲ್ಲಿ ಆ ಕಬ್ಬನ್ನು ಸಕ್ಕರೆ ಕಾರ್ಖಾನೆಗಳು ಪಡೆಯುತ್ತಿವೆಯೋ ಹೇಗೆ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ಅದರ ಜೊತೆಗೆ ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳು ಸಹಕಾರಿ ರಂಗದಲ್ಲಿ ಇರುವಂಥದ್ದು, ಇವತ್ತು ಲಾಭದಲ್ಲಿ ಎಷ್ಟು ಇವೆ. ಮತ್ತು ನಷ್ಟದಲ್ಲಿ ಇರುವುದಕ್ಕೆ ಕಾರಣ ಏನು? ರೈತ ಇಷು ದೊಡ್ಡ ಪ್ರಮಾಣದ ಬಾಕಿಯನ್ನು ಕೊಡದೆ, ರೈತರ ಇವತ್ತಿನ ಸ್ಥಿತಿಗತಿಗೆ ಕಾರಣ ಯಾರು?

ಶ್ರೀ ಎಂ. ಮಹದೇವ್ : ಸನ್ಮಾನ್ಯ ಅಧ್ಯಕ್ಷರೆ, ಸುಮಾರು ರಾಜ್ಯದಲ್ಲಿನ 42 ಸಕ್ಕರೆ ಕಾರ್ಖಾನೆಗಳ ಪೈಕಿ 20 ಸಕ್ಕರೆ ಕಾರ್ಖಾನೆಗಳು ಸಹಕಾರಿ ರೂಪದಲ್ಲಿ ಇವೆ. ಈ ಕಾರ್ಖಾನೆಗಳ 2002–03ರ ಲಾಭ ನಷ್ಟಗಳನ್ನು ನೋಡಿದಾಗ ಲಾಭದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ಆರು ಇವೆ. ಒಂದು ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ, ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ, ಘಟ ಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ದೂದ್‌ಗಂಗಾ ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಆಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಇವು ಲಾಭದಲ್ಲಿವೆ. ನಷ್ಟದಲ್ಲಿರತಕ್ಕಂತಹ ಕಾರ್ಖಾನೆಗಳು 12 ಇವೆ. ಅವುಗಳ ಹೆಸರು ಬೇಕೆಂದು ಹೇಳಿದರೆ 12 ಕಾರ್ಖಾನೆಗಳ ಹೆಸರು ಈ ರೀತಿ ಇವೆ. ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ, ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ, ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ, ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ, ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ, ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ, ಮತ್ತು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ; ಇವು ನಷ್ಟದಲ್ಲಿವೆ. ನಷ್ಟದಲ್ಲಿ ಲಾಭದಲ್ಲಿ ಇರುವುದಕ್ಕೆ ಕಾರಣ ಯಾರು ಎಂದರೆ, ಸಕ್ಕರೆ ಕಾರ್ಖಾನೆಗಳ ಆರ್ಥಿಕ ಪರಿಸ್ಥಿತಿ ಮೇಲೆ ಅವಲಂಬಿಸಿದೆ. ಅವರು ಯಾವ ರೀತಿ ಕ್ರಶಿಂಗ್ ಮಾಡುತ್ತಾರೆ, ಯಾವ ರೀತಿ ಪೇಮೆಂಟ್ ಮಾಡುತ್ತಾರೆ. ಯಾವ ರೀತಿ ಮ್ಯಾನೇಜ್‌ಮೆಂಟ್ ಮಾಡುತ್ತಾರೆ. ಅದರ ಮೇಲೆ ಅವಲಂಬಿತವಾಗಿದೆ. ಇತ್ತೀಚಿನ ದಿನಗಳಲ್ಲಿ ಸಕ್ಕರೆ ಉದ್ಯಮ ಸ್ವಲ್ಪ ಸಂಕಷ್ಟದಲ್ಲಿ ಇದೆ. ಕಾರಣ ಬೆಲೆ ಕುಸಿತ. ಕೇಂದ್ರ ಸರ್ಕಾರ ಸಕ್ಕರೆ ನೀತಿಯನ್ನು ಸಕಾಲದಲ್ಲಿ ಬಿಡುಗಡೆ ಮಾಡುತ್ತಿಲ್ಲ. ನೀತಿ ಕೂಡ ಒಂದು ಕಾರಣ. ಡಬ್ಲ್ಯುಟಿಒ ಅಗ್ರಿಮೆಂಟ್ ಪ್ರಕಾರ ವಿದೇಶದಿಂದ ಸಕ್ಕರೆಯನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ. ಇದು ಒಂದನೆಯದು. ಎರಡನೆಯದು ಇಲ್ಲಿ ಸಕ್ಕರೆ ಉದ್ಯಮಕ್ಕೆ ಬೆಲೆ ಸ್ವಲ್ಪ ಒಂದು ವರ್ಷದಿಂದ ಕಡಿಮೆಯಾಗುತ್ತಿದೆ. 1400 1500 ರೂ ಇದ್ದದ್ದು ಈಗ 11.00 ರೂಗೆ ಬಂದಿದೆ. ಈ ಒಂದು ಪರಿಸ್ಥಿತಿಯಲ್ಲಿ ಸಕ್ಕರೆ ಉದ್ಯಮ ಸ್ವಲ್ಪ ಕಷ್ಟದ ಪರಿಸ್ಥಿತಿಯಲ್ಲಿದೆ. ಸರ್ಕಾರ ನಷ್ಟದಲ್ಲಿರುವ ಕಾರ್ಖಾನೆಗಳಿಗೆ ಸ್ವಲ್ಪ ಸಹಾಯ ಮಾಡಲಿಕ್ಕೆ ಸಾಫ್ಟ್ ಲೋನ್ ಸಹಾಯ ಕೊಡುತ್ತಿದೆ. ಸಾಫ್ಟ್ ಲೋನ್ ಕೊಟ್ಟು ಅವುಗಳಿಗೆ ಸಹಾಯ ಮಾಡಬೇಕೆಂದು ಮಾಡುತ್ತಿದೆ. ಕೆಲವು ಕಾರ್ಖಾನೆಗಳು ಸಾಫ್ಟ್ ಲೋನ್‌ಗಳನ್ನು ಬಳಸಿಕೊಂಡು ಮುಂದೆ ಬರಲಿಕ್ಕೆ ಪ್ರಯತ್ನ ಮಾಡುತ್ತಿವೆ. ಇಗ ಸಕ್ಕರೆ ಕಾರ್ಖಾನೆಯವರು ರೈತರ ಕಬ್ಬಿನ ಬಾಕಿ ಏನಿದೆ ಇದನ್ನು ಮರುಪಾವತಿ ಮಾಡಲಿಕ್ಕೆ ನಾವು ಆದೇಶವನ್ನು ಕೊಟ್ಟಿದ್ದೇವೆ. ಸಮಾರು 1155 ಕೋಟಿ ರೂಪಾಯಿಗಳಷ್ಟು ಕಬ್ಬು ಬೆಳೆಗಾರರಿಗೆ

ಕಾರ್ಖಾನೆಯಿಂದ ಹಣ ಪಾವತಿ ಮಾಡಬೇಕಾಗಿದೆ. ನಾವು 879 ಕೋಟಿ ರೂಪಾಯಿ ಅವರಿಗೆ ಪಾವತಿ ಮಾಡಲಿಕ್ಕೆ ಆದೇಶವನ್ನು ಕೊಟ್ಟು ಕಾರ್ಖಾನೆಗಳಿಂದ ಪಾವತಿಯಾಗಿದೆ. ಈಗ ಸುಮಾರು 275 ಕೋಟಿ ರೂಪಾಯಿಗಳಷ್ಟು ಬ್ಯಾಲೆನ್ಸ್ ಇದೆ. 76.15 ಪರ್ಸೆಂಟ್ ರಿಕವರಿ ನಮ್ಮಲ್ಲಿಯೂ ಆಗಿದೆ. ಕರ್ನಾಟಕ ರಾಜ್ಯ ಇಷ್ಟೊಂದು ತೊಂದರೆಯಲ್ಲಿದ್ದರೂ ಸಹ ಬರಗಾಲ ಪರಿಸ್ಥಿತಿ ಇದ್ದರೂ ಸಹ ನಾವು ರೈತರ ಬಾಕಿ ಉಳಿಸಿಕೊಳ್ಳುವುದಕ್ಕೆ ಕಾರ್ಖಾನೆಗಳಿಗೆ ಅವಕಾಶ ಕೊಟ್ಟಿಲ್ಲ. ಯಾವ ಕಾರ್ಖಾನೆಗಳು ಬಾಕಿಯನ್ನು ಬಹಳ ಜಾಸ್ತಿ ಇಟ್ಟು ಕೊಂಡಿವೆ. ಅವರ ಕಡೆಯಿಂದ ರೆವಿನ್ಯೂ ರಿಕವರಿ ಕೂಡ ನಾವು ಮಾಡಿದ್ದೇವೆ. ನಿನ್ನೆ ತಾನೇ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯಿಂದ ರೆವಿನ್ಯೂ ರಿಕವರಿ ಮಾಡಿದ್ದೇವೆ. ಚಾಮುಂಡೇಶ್ವರಿ ಸಹಕಾರಿ ಸಕ್ಕರೆ ಕಾರ್ಖಾನೆಗೆ ರೆವಿನ್ಯೂ ರಿಕವರಿಗೆ ನಿನ್ನೆ ಆದೇಶ ಕೊಟ್ಟಿದ್ದೇವೆ. ಸಾಧ್ಯವಾದಷ್ಟು ಎಲ್ಲೆಲ್ಲಿ ರೈತರ ಹೆವಿ ಬಾಕಿ ಇಟ್ಟು ಕೊಂಡಿದ್ದಾರೆ ಅಂತಹ ಕಡೆ ರೆವಿನ್ಯೂ ರಿಕವರಿಗೆ ಆದೇಶ ಕೊಟ್ಟಿದ್ದೇವೆ. ಆದಷ್ಟು ಬೇಗ ರಿಕವರಿ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಇಡೀ ರಾಜ್ಯದಲ್ಲಿ ಕಬ್ಬು ಬೆಳೆಗಾರರು ಬಹಳ ಸಂಕಷ್ಟದಲ್ಲಿದ್ದಾರೆ. ಈ ಭಾಗ, ಆ ಭಾಗ ಅಲ್ಲ, ಎರಡು – ಮೂರು ಉದಾಹರಣೆ ಹೇಳುತ್ತೇನೆ. ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಇರಬಹುದು. ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ ಖಾನಾಪುರದ್ದು ಇರಬಹುದು. ಬೆಳಗಾಂ ಜಿಲ್ಲೆ ರಾಯಭಾಗ್ ಇರಬಹುದು ಎಲ್ಲಾ ಕಡೆ ಕನಿಷ್ಟ 10 ರಿಂದ 12 ಕೋಟಿ ರೂಪಾಯಿಯವರೆಗೆ ಬಾಕಿ ಇದೆ. ಖಾನಾಪುರದ್ದು 15 ಕೋಟಿ ರೂಪಾಯಿ ಪೆಂಡಿಂಗ್ ಇದೆ. ನಮ್ಮ ಕಬ್ಬು ಬೆಳೆಗಾರರಿಗೆ ರೈತರಿಗೆ ಕೊಡುವಂತಹದ್ದು ಈ ಫ್ಯಾಕ್ಟರಿಗಳು ಕನಿಷ್ಟ 14 ರಿಂದ 15 ಕೋಟಿ ರೂ. ಒಂದೊಂದು ಫ್ಯಾಕ್ಟರಿಯವರು ಕೊಡಬೇಕು. ಕಳೆದ ಆರು ತಿಂಗಳಿನಿಂದ, ಒಂದು ವರ್ಷದಿಂದ ಈ ಹಣವನ್ನು ರೈತರಿಗೆ ಕೊಟ್ಟಿಲ್ಲ. ಹೀಗಾಗಿ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಈಗ ನೀವೇ ಹೇಳಿದಿರಿ. ನಾವು ಅವರ ಮೇಲೆ ರೆವಿನ್ಯೂ ರಿಕವರಿ ಎಲ್ಲಾ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಆದರೆ ಈ ಮೂರು ಫ್ಯಾಕ್ಟರಿಗಳಿಗೆ ಸಂಬಂಧಿಸಿದಂತೆ ಏನು ಮಾಡಿದ್ದೀರಿ? ಬೆಳಗಾಂಗೆ ಮಾನ್ಯ ಮಂತ್ರಿಗಳು 5–6 ತಿಂಗಳ ಹಿಂದೆ ಹೋದಾಗ ಸ್ಟೇಟ್‌ಮೆಂಟ್‌ವೊಂದನ್ನು ಕೊಟ್ಟಿದ್ದಾರೆ. ಅದು ಈ ರೀತಿ ಇದೆ.

> "ಸಚಿವ ಮಹಾದೇವ್‌ರವರ ಎಚ್ಚರಿಕೆ : 15 ದಿವಸಗಳಲ್ಲಿ ಕಬ್ಬಿನ ಹಣದ ಪಾವತಿಗೆ ತಪ್ಪಿದರೆ ಕಾನೂನು ಕ್ರಮ. ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬು ಪೂರೈಸಿದ 15 ದಿನಗಳಲ್ಲಿ ಬಿಲ್ ಅನ್ನು ಪಾವತಿ ಮಾಡದಿದ್ದರೆ ಕಾನೂನು ರೀತ್ಯಾ ಕ್ರಮ ಜರುಗಿಸುವುದಾಗಿ ಮಾನ್ಯ ಸಚಿವರಾದ ಮಹದೇವ್‌ರವರು ಹೇಳಿದರು."

ನಾನು ಹೇಳುತ್ತಿದ್ದೇನೆ. ಈ 14 ಕೋಟಿ ರೂಪಾಯಿಗಳು ಬಾಕಿ ಇದೆಯಲ್ಲಾ, ಈ ಖಾನಾಪುರದ, ಭಾಗ್ಯಲಕ್ಷ್ಮಿಯದ್ದು ಇರಬಹುದು. ರಾಯಭಾಗದ್ದು ಇರಬಹುದು, ಮಲಪ್ರಭಾದ್ದು ಇರಬಹುದು, ಹಾವೇರಿಯ ಸಂಡೂರು ಫ್ಯಾಕ್ಟರಿದ್ದು ಇರಬಹುದು, ಎಲ್ಲಾ ಫ್ಯಾಕ್ಟರಿಗಳದ್ದು ಕನಿಷ್ಟ 12–15 ಕೋಟಿ ರೂಪಾಯಿಗಳು ಬಾಕಿ ಇದೆ. ಇವುಗಳ ಬಾಕಿಯನ್ನು ರಿಕವರಿ ಮಾಡಲಿಕ್ಕೆ ಸರ್ಕಾರದಿಂದ ಏನು ಪ್ರಯತ್ನಗಳು ನಡೆದಿವೆ? 15 ದಿವಸಗಳಲ್ಲಿ ಎಂದು ನೀವು ಹೇಳುತ್ತೀರಿ. ಇದರ ಬಗ್ಗೆ ಸ್ಪಷ್ಟವಾದಂತಹ ಅಭಿಪ್ರಾಯವನ್ನು ಹೇಳಬೇಕು. ಇವತ್ತು ಈ ರೀತಿ ಒಂದು ದುಸ್ಥಿತಿಯಲ್ಲಿ ನಮ್ಮ ಸಕ್ಕರೆ ಕಾರ್ಖಾನೆಗಳು ಇರುವಂತಹ ಸಂದರ್ಭದಲ್ಲಿ ಮಹಾರಾಷ್ಟ್ರದ ಅನುಕರಣೆಯನ್ನು ದಯವಿಟ್ಟು ಮಾಡಿ. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ಸಿನ ಸರ್ಕಾರ ಇದೆ. ಅದರ ಬಗ್ಗೆ ಮೊನ್ನೆ ಪತ್ರಿಕೆಗಳಲ್ಲಿ ಈ ರೀತಿಯಾಗಿ ವರದಿಯಾಗಿದೆ.

"ಇವತ್ತು ರೋಗಗ್ರಸ್ತ ಸಕ್ಕರೆ ಕಾರ್ಖಾನೆಗಳಿಗೆ ಸಹಾಯಧನವನ್ನು ನೀಡುವುದರಲ್ಲಿ ಮಹಾರಾಷ್ಟ್ರ ಸರ್ಕಾರವು ದೇಶದಲ್ಲಿಯೇ ಮೊದಲನೆಯ ರಾಜ್ಯವಾಗಿದೆ. ನವೆಂಬರ್ 15 ರಂದು ನಡೆದ ವಿಶೇಷ ಸಭೆಯಲ್ಲಿ ರಾಜ್ಯ ಮಂತ್ರಿ ಮಂಡಲವು ಸಕ್ಕರೆ ರಫ್ತು ಸಾಗಾಣಿಕೆ, ರವಾನೆ ಶುಲ್ಕಗಳಿಗೆ ಸಹಾಯಧನವನ್ನು ಸಕ್ಕರೆ ಕಾರ್ಖಾನೆಯ ಖರೀದಿ ತೆರಿಗೆ ಸಂದಾಯದ ಮುಂದೂಡಿಕೆಯನ್ನು ಘೋಷಿಸಿತು."

ಈಗ ರಫ್ತು ಮಾಡುವುದಕ್ಕೂ ಸಹಾಯ ಧನ, ಅಲ್ಲಿಗೆ ಸಾಗಾಣಿಕೆಗೆ ಮತ್ತು ರವಾನೆ ಶುಲ್ಕಕ್ಕೂ ಕೂಡ ಸಹಾಯ ಧನವನ್ನು ಅವರು ಘೋಷಿಸಿದ್ದಾರೆ. ಇಷ್ಟೆಲ್ಲಾ facilities ಅನ್ನು ಮಹಾರಾಷ್ಟ್ರದಲ್ಲಿ ಇವತ್ತು ಕೊಡುತ್ತಿದ್ದಾರೆ. ಈಗ ರಾಜ್ಯ ಸರ್ಕಾರವೂ ಅದೇ ರೀತಿಯ ಏನಾದರೂ initiation ತೆಗೆದುಕೊಳ್ಳಬೇಕಾಗುತ್ತದೆ. ಸಕ್ಕರೆ ಕಾರ್ಖಾನೆಗಳನ್ನು ಉಳಿಸುವುದು ಒಂದು ಕಡೆ. ನಮ್ಮ ಕಬ್ಬು ಬೆಳಗಾರರಿಗೆ 15 ದಿವಸಗಳಲ್ಲಿ ಪೇಮೆಂಟ್ ಮಾಡುವಂತಾದ್ದು ಒಂದು ಕಡೆ. ಹೀಗಾಗಿ ದಯವಿಟ್ಟು ಸರ್ಕಾರ ಇದರ ಬಗ್ಗೆ ಏನಾದರೂ ಒಂದು ತೀವ್ರ ರೀತಿಯಲ್ಲಿ ಗಮನ ಹರಿಸಿದರೆ ಮಾತ್ರ ಕಬ್ಬು ಬೆಳೆಗಾರರನ್ನು ಉಳಿಸಲಿಕ್ಕೆ ಸಾಧ್ಯವಿದೆ ಹಾಗೂ ಸಕ್ಕರೆ ಕಾರ್ಖಾನೆಯನ್ನು ಉಳಿಸಲಿಕ್ಕೆ ಸಾಧ್ಯವಿದೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಈಗ ನಾವು ಯಾವ್ಯಾವ ಫ್ಯಾಕ್ಟರಿಗಳು ಬಾಕಿ ಇಟ್ಟುಕೊಂಡಿವೆಯೋ ಅವುಗಳಿಗೆ ನೋಟೀಸ್ ಅನ್ನು ಕೊಟ್ಟಿದ್ದೇವೆ. Cane Control Order ಪ್ರಕಾರ ಕಬ್ಬು ಸರಬರಾಜು ಮಾಡಿದಂತಹ ರೈತರ ಬಾಕಿಯನ್ನು 15 ದಿವಸದೊಳಗಾಗಿ ಕೊಡಬೇಕು. 15 ದಿವಸದೊಳಗಾಗಿ ಕೊಡದಿದ್ದಲ್ಲಿ ಅವರ ವಿರುದ್ಧ ಕಠಿಣವಾದಂತಹ ಕ್ರಮಗಳನ್ನು ಸರ್ಕಾರ ಕೈಗೊಳ್ಳಬಹುದಾಗಿದೆ. ಅವರು with interest ಆ ಹಣವನ್ನು ಕೊಡಬೇಕು ಎಂದು ಇದೆ. ಆದರೆ ನಾವೇನಾದರು ಒಮ್ಮೆಲೇ revenue recovery ಗೇನಾದರೂ ಹಾಕಿ ಬಿಟ್ಟರೆ, ಆ ಫ್ಯಾಕ್ಟರಿಗಳ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟು ಹೋಗುತ್ತದೆ. ಅದಕ್ಕೋಸ್ಕರ ನಾವೇನು ಮಾಡಿದ್ದೇವೆ ಎಂದರೆ, ಸಾಧ್ಯವಾದಷ್ಟೂ ಅವರಿಗೆ ನೋಟೀಸ್‌ಗಳನ್ನು ಕೊಟ್ಟು ಬಾಕಿಯನ್ನು ಪಾವತಿ ಮಾಡಿಸಲಿಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಈ ತರಹ ಕೆಲವೊಂದು ಕಾರ್ಖಾನೆಗಳು ಬಾಕಿ ಇಟ್ಟುಕೊಂಡಿವೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ಗಮನಕ್ಕೆ ತಂದಿದ್ದಾರೆ. ಈ ಕೂಡಲೇ ನಾನು ಅದಕ್ಕೆ ಸಂಬಂಧಪಟ್ಟಂತಹ ಫೈಲ್ ಅನ್ನು ತರಿಸಿಕೊಂಡು, ಬೇರೆ ಫ್ಯಾಕ್ಟರಿಗಳಿಗೆ ನಾವು ಯಾವ ರೀತಿಯಾಗಿ ರಿಕವರಿಯನ್ನು ಮಾಡಲಿಕ್ಕೆ ಆದೇಶವನ್ನು ಕೊಟ್ಟಿದ್ದೇವೋ ಅದೇ ರೀತಿಯ ಆದೇಶವನ್ನು ಅವುಗಳಿಗೆ ಸಂಬಂಧಿಸಿದಂತೆ ಕೊಡಲಿಕ್ಕೆ ನಾನು ಪರಿಶೀಲನೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಮಹಾರಾಷ್ಟ್ರ ಸರ್ಕಾರದವರು ಹಲವಾರು ಸವಲತ್ತುಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಫಾರ್ಮ್ ಮಾಡಿದ್ದೇವೆ. ಕ್ಯಾಬಿನೆಟ್ ಸಬ್ ಕಮಿಟಿಯ ವರದಿ ಬಂದ ಕೂಡಲೇ ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ಈಗ ಸುಮಾರು 1155 ಕೋಟಿ ರೂಪಾಯಿಗಳನ್ನು ರೈತರಿಗೆ ಬಾಕಿ ಪಾವತಿ ಮಾಡಬೇಕು ಅನ್ನತಕ್ಕಂಥದ್ದನ್ನು ಮಾನ್ಯ ಸಚಿವರು ತಿಳಿಸಿದರು. ಅವೆಲ್ಲವನ್ನೂ ಕೂಡ ರೆವಿನ್ಯೂ ರಿಕವರಿಯಲ್ಲಿ ನಾವು ಆರ್ಡರ್ ಮಾಡಿದ್ದೇವೆ. ರೆವಿನ್ಯೂ ರಿಕವರಿ ಮೂಲಕ ಕಬ್ಬಿನ ಬೆಳೆಗಾರರಿಗೆ ಸಕ್ಕರೆಯನ್ನು ಮಾರಿ ಕೊಡಬೇಕು ಅನ್ನತಕ್ಕಂಥದ್ದನ್ನು ತಿಳಿಸಿದ್ದಾರೆ. ಈ ಒಂದು ರೆವಿನ್ಯೂ ರಿಕವರಿ ಮೂಲಕ ಸಕ್ಕರೆ ಮಾರಾಟಕ್ಕೆ ಕೇಂದ್ರ ಸರ್ಕಾರದ ನೀತಿ ಏನಾದರೂ ಅಡ್ಡಿ ಬರುವುದಿಲ್ಲವೇ? ಏಕೆಂದರೆ, ಶುಗರ್ ರಿಲೀಸಸ್ ಎಲ್ಲವೂ ಕೂಡ Government

of India ಗೆ ಸಂಬಂಧಪಟ್ಟಿದ್ದು ಅನ್ನತಕ್ಕಂಥದ್ದನ್ನು ನಾವು ತಿಳಿದುಕೊಂಡಿದ್ದೇವೆ. ಅದು ಏನಾದರೂ ಅಡ್ಡಿ ಬರುವುದಿಲ್ಲವೇ ಎನ್ನುವುದನ್ನು ನಾನು ತಮ್ಮ ಮೂಲಕ ಕೇಳಲಿಕ್ಕೆ ಬಯಸುತ್ತೇನೆ. ರೈತರ ಸಂಕಷ್ಟ ನಿವಾರಣೆಗಾಗಿ ಸಕ್ಕರೆ ಅಭಿವೃದ್ಧಿ ನಿಧಿಯನ್ನು ಸ್ಥಾಪನೆ ಮಾಡತಕ್ಕಂಥ ವಿಚಾರವನ್ನು ಮಾನ್ಯ ಸಚಿವರು ಹೇಳಿದ್ದಾರೆ. ಅದನ್ನು ಯಾವಾಗ ಸ್ಥಾಪನೆ ಮಾಡುತ್ತಾರೆ ಎನ್ನುವುದನ್ನು ಹೇಳಬೇಕು.

ಡಾ: ಭಾರತೀಶಂಕರ್ : ಮಾನ್ಯ ಅಧ್ಯಕ್ಷರೆ, ಈಗ ಒಂದು ಕಡೆ ರೈತರ ಬಾಕಿ 285 ಕೋಟಿ ರೂಪಾಯಿಗಳು ಇದೆ ಎಂದು ಮಿನಿಸ್ಟರ್‌ರವರು ಹೇಳಿದರು. ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು 1400 ಕೋಟಿ ರೂಪಾಯಿಗಳ ಸಕ್ಕರೆ ದಾಸ್ತಾನು ಉಳಿದಿದೆ ಎಂದೂ ಕೂಡ ಅವರು ಹೇಳಿದರು. ಆದರೆ ಈ ನಡುವೆ ಏನಾಗಿದೆ ಎಂದರೆ, KPTCLನ MDಯವರಿಂದ ಶುಗರ್ ಫ್ಯಾಕ್ಟರಿಗಳಿಗೆ ನಿಮ್ಮ ಪವರ್ ಅನ್ನು ಖರೀದಿ ಮಾಡಲಿಕ್ಕಾಗುವುದಿಲ್ಲ ಎನ್ನುವಂತಹ ಒಂದು ವಿಚಾರ ಹೋಗಿದೆ. ಈಗ ಸಕ್ಕರೆ ದಾಸ್ತಾನು ಉಳಿದಿದೆ, ಈ ಕಡೆಗೆ ಸರ್ಕಾರ ವಿದ್ಯುತ್ ಖರೀದಿ ಮಾಡದಿರುವಾಗ, ಯಾವ ರೀತಿಯಲ್ಲಿ ಸಕ್ಕರೆ ಕಾರ್ಖಾನೆಗಳು ರೈತರ ಬಾಕಿಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳಲ್ಲಿ ಒಂದೇ ಒಂದು ಸ್ಪಷ್ಟೀಕರಣವನ್ನು ಕೇಳಬಯಸುತ್ತೇನೆ. ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ರೈತರಿಗೆ ಸಂಬಂಧಪಟ್ಟ ಎರಡು ಫ್ಯಾಕ್ಟರಿಗಳು ಇವೆ. ಅದರಲ್ಲಿ ಕುಂತೂರು ಫ್ಯಾಕ್ಟರಿ ಮುಚ್ಚಿ ಹೋಯಿತು. ಇನ್ನು ಬಣ್ಣಾರಿಯಮ್ಮನ ಶುಗರ್ ಫ್ಯಾಕ್ಟರಿ ಇದೆ. ಅಲ್ಲಿ ಈಗ ಏನಾಗಿದೆ ಎಂದರೆ, ಏನು agreement ಮತ್ತು non agreement ಎಂದು ಇದೆ. ಅದರಲ್ಲಿ non agreement ಕಬ್ಬನ್ನು ನೂರು ರೂಪಾಯಿಗಳಿಗೆ ಕಡಿಮೆ ಕೊಂಡುಕೊಳ್ಳುತ್ತಾರೆ. Agreement ಕಬ್ಬನ್ನು ಅರೆಯುವುದಕ್ಕೆ 18 ತಿಂಗಳು ಮಾಡುತ್ತಿದ್ದಾರೆ. ರೈತರು ಬಹಳ ಕಷ್ಟದಲ್ಲಿದ್ದಾರೆ. ಇದರ ಬಗ್ಗೆ ಏನಾದರೂ ಒಂದು ಆ ಫ್ಯಾಕ್ಟರಿಗೆ ಇಂತಿಷ್ಟೇ ಎಂದೇಳಿ ನೀವು ಗೊತ್ತುವಳಿ ಮಾಡುವುದಕ್ಕಾಗುತ್ತದೆಯೇ? ಸುಮ್ಮನೆ ಇಷ್ಟ ಬಂದಂತೆ ಮಾಡಿ, ಅವರು non agreement ಎಂದೇಳಿ agreement ಕಬ್ಬಿನವರನ್ನು 18 ತಿಂಗಳು ಮಾಡುತ್ತಿದ್ದಾರೆ. 6 ತಿಂಗಳು ರೈತರಿಗೆ ಕಷ್ಟವಾಗಿ ಅವರು ನಷ್ಟವನ್ನು ಅನುಭವಿಸುತ್ತಿದ್ದಾರೆ. ಈ ದಿಕ್ಕಿನಲ್ಲಿ ತಾವು ಏನಾದರೂ ಆಲೋಚನೆ ಮಾಡಿದ್ದೀರಾ? ಎನ್ನುವುದು ನಮಗೆ ಗೊತ್ತಾಗಬೇಕು.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಗುರುಸ್ವಾಮಿಯವರು ಕೇಳಿದಂತಹ ಪ್ರಶ್ನೆ ಏನಿದೆ, ಅದರ ಬಗ್ಗೆ ಅಧಿಕಾರಿಗಳನ್ನು ಕರೆಸಿ ಮಾತನಾಡಿ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಮಾನ್ಯ ಭಾರತೀ ಶಂಕರ್‌ರವರು ಹೇಳಿದಂತಹ ಪ್ರಶ್ನೆಗೆ ನಾನು ಹೇಳುವುದೇನೆಂದರೆ, ಅವರು ಅದರ ಬಗ್ಗೆ ಸಪರೇಟ್ ಆದಂತಹ ಪ್ರಶ್ನೆಯನ್ನು ಹಾಕಿದರೆ ನಾನು ಉತ್ತರಿಸುತ್ತೇನೆ. ಮಾನ್ಯ ಆತ್ಮಾನಂದರವರು ಕೇಳಿದ ಬಗ್ಗೆ ಹೇಳುವುದಾದರೆ, ರೆವಿನ್ಯೂ ರಿಕವರಿಗೆ ನಾವು ಆದೇಶವನ್ನು ಕೊಟ್ಟರೆ, ಕೇಂದ್ರ ಸರ್ಕಾರ ಮಧ್ಯೆ ಪ್ರವೇಶ ಮಾಡಲಿಕ್ಕೆ ಬರುವುದಿಲ್ಲ. ಜಿಲ್ಲಾಧಿಕಾರಿಗಳನ್ನು ನಾವು ರೆವಿನ್ಯೂ ರಿಕವರಿ ಆಫೀಸರ್ ಆಗಿ ಮಾಡುತ್ತೇವೆ. ಅವರು ರೈತರಿಗೆ ಎಷ್ಟು ಬಾಕಿ ಇದೆಯೋ ಅಷ್ಟನ್ನು ಮಾತ್ರ ಪಾವತಿ ಮಾಡಿಸುತ್ತಾರೆ. ಅವರ ಮಧ್ಯೆ ಯಾರೂ ಕೂಡ ಬರಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳುವಂತಹ ಹೇಳಿಕೆ, ಅದು ರೈತರಿಗೆ ಉಪಯೋಗವಾಗಿರಬೇಕು ಮತ್ತು ಅದು ನಡೆದಿರಬೇಕು. ಮಾನ್ಯ ಮಂತ್ರಿಗಳು

ದಯವಿಟ್ಟು ಅಂತಹ ಹೇಳಿಕೆ ಕೊಡಿ. ಅದನ್ನು ಬಿಟ್ಟು ಸುಮ್ಮನೆ ಅಲ್ಲಿಗೆ ಹೋಗಿ ಎಲ್ಲವನ್ನೂ ಮಾರಾಟ ಮಾಡಿಸಿ ನಾನು ಅವರಿಂದ ಹಣ ಪಾವತಿಯಾಗುವಂತೆ ಮಾಡುತ್ತೇನೆ ಎಂದು ಹೇಳಿದರೆ ಅದು ಸರಿಯಾದ ಮಾತಲ್ಲ. ಆ ಫ್ಯಾಕ್ಟರಿಗಳು ಉಳಿಯಬೇಕು, ಇಲ್ಲದಿದ್ದರೆ ರೈತರು ಉಳಿಯುವುದಿಲ್ಲ. ಆ ಕಾರಣದಿಂದ ನಾನು ಇವರಿಗೆ ಒಂದು ಸಲಹೆಯನ್ನು ಮಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕು. ರೈತರ ಬಾಕಿ ಪಾವತಿಯಾಗಬೇಕು ಮತ್ತು ಫ್ಯಾಕ್ಟರಿ ಕೂಡ ಉಳಿಯಬೇಕು, ಈ ದಿಸೆಯಲ್ಲಿ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಸುಮ್ಮನೆ ಮಾರಾಟ ಮಾಡಿಸಿ ಹಣ ಪಾವತಿಯಾಗುವಂತೆ ಮಾಡುತ್ತೇನೆ ಎಂದು ಹೇಳಿದರೆ, ಅದು ಸಾಧ್ಯವಿಲ್ಲದಂತಹ ಮಾತಾಗುತ್ತದೆ. ಪ್ರೈವೇಟ್ ಫ್ಯಾಕ್ಟರಿಗಳ ವಿಚಾರ ಬೇರೆಯದಾಗಿದೆ. ಸಹಕಾರಿ ಸಂಘದ ಕಾರ್ಖಾನೆಗಳ ಬಾಕಿಯನ್ನು ತೀರಿಸತಕ್ಕಂಥ ಜವಾಬ್ದಾರಿ ಸರ್ಕಾರದ್ದೇ ಆಗಿದೆ. ಅದಕ್ಕೇನು ಕಾರ್ಯಕ್ರಮಗಳನ್ನು ತಾವು ಹಾಕಿಕೊಂಡಿದ್ದೀರಿ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ರೈತರ ಬಾಕಿಯನ್ನು ಕೂಡಲೇ ಪಾವತಿ ಮಾಡಿಸಿದ್ದಕ್ಕೆ ನಮ್ಮನ್ನು appreciate ಮಾಡಬೇಕು. ನಾನು ಆಗಲೇ ಹೇಳಿದಂತೆ ಸುಮಾರು 889 ಕೋಟಿ ರೂಪಾಯಿಗಳನ್ನು ನಾವು ಕ್ಲಿಯರ್ ಮಾಡಿದ್ದೇವೆ. ಬಾಕಿಯನ್ನು 1155 ಕೋಟಿ ರೂಪಾಯಿಗಳಿಂದ 889 ಕೋಟಿ ರೂಪಾಯಿಗಳಿಗೆ ಇಳಿಸಿದ್ದೇವೆ. ನಾವು ಏನೂ ಕ್ರಮ ತೆಗೆದುಕೊಳ್ಳದಿದ್ದರೆ ಇದು ಹೇಗೆ ಸಾಧ್ಯವಾಗುತ್ತದೆ? ಸಕ್ಕರೆ ಕಾರ್ಖಾನೆಗಳನ್ನು ಅವು ಸಹಕಾರಿಯೇ ಆಗಿರಲಿ ಅಥವಾ ಖಾಸಗಿಯೇ ಆಗಿರಲಿ, ಅವುಗಳನ್ನು ಮುಚ್ಚಬೇಕೆನ್ನುವ ಉದ್ದೇಶ ನಮಗಿಲ್ಲ. ಆ ಫ್ಯಾಕ್ಟರಿಗಳೂ ಕೂಡ ಚೆನ್ನಾಗಿ ನಡೆಯಬೇಕು. ರೈತರಿಗೂ ಅನುಕೂಲವಾಗಬೇಕು, ಆ ಉದ್ದೇಶದಿಂದ via media policy ನಲ್ಲಿ ನಾವು ಮಾಡುತ್ತಿದ್ದೇವೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿದೆ, ಆ ಒಂದು ವಿಚಾರ ಬೇರೆ. ಈಗ ನಮ್ಮ ರಾಜ್ಯದ ಮಹಾರಾಷ್ಟ್ರ ಬಾರ್ಡರ್‌ನಲ್ಲಿ ಏನು ಸಕ್ಕರೆ ಕಾರ್ಖಾನೆಗಳಿವೆಯೋ ಅಲ್ಲಿ ಕಬ್ಬೇನು ನಾವು ಲಾವಣಿ ಮಾಡಿದ್ದೇವೋ ಅದಕ್ಕೆಲ್ಲಾ ಒಂದು ತರಹದ ರೋಗ ಬೀಳುತ್ತಿದೆ. ಆ ರೀತಿಯ ರೋಗಕ್ಕೆ ತುತ್ತಾಗುತ್ತಿರುವುದರಿಂದ ಹುಳ ಕಬ್ಬನ್ನೆಲ್ಲಾ ತಿಂದು ಹಾಳು ಮಾಡುತ್ತಿದೆ. ಇದರ ಬಗ್ಗೆ ನಮ್ಮ ಸಕ್ಕರೆ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೋ ಅದು ನಿಜ. ಕಿತ್ತೂರು ಭಾಗದಲ್ಲಿ ಕಬ್ಬಿಗೆ ಹುಳ ಬಿದ್ದಿವೆ. ಇವತ್ತು ಒಂದು ರೀತಿಯಿಂದ ರೈತರಿಗೆ ಪೇಮೆಂಟ್ ಇಲ್ಲ. ಮತ್ತೊಂದು ಕಡೆ ಮಾನ್ಯ ಇನಾಂದಾರ್‌ರವರ ತಾಲ್ಲೂಕಾದ ಕಿತ್ತೂರಿನಲ್ಲಿ ಏನೊಂದು ಕಬ್ಬನ್ನು ಬೆಳೆಸಿದ್ದಾರೋ, ಆ ಕಬ್ಬಿಗೆ ಹುಳ ಬಿದ್ದಿದೆ. ಆ ಕಬ್ಬಿನ ದಂಟನ್ನು ನಾನು ಇಲ್ಲಿಗೆ ತೆಗೆದುಕೊಂಡು ಬಂದಿದ್ದೇನೆ. ದಯವಿಟ್ಟು ಇದನ್ನು ಪರೀಕ್ಷೆ ಮಾಡಿ. ಇದು ಮುಂದೆ ಇಡೀ ತಾಲ್ಲೂಕಿಗೆ ಹಾಗೂ ಬೆಳಗಾಂ ಜಿಲ್ಲೆಗೇ spread ಆಗುತ್ತದೆ. ಹೀಗಾದರೆ ನಾಳೆ ಬೆಳೆದಂತಹ ಕಬ್ಬು ಸಹಾ ನಷ್ಟವಾಗುತ್ತದೆ. ಈಗಾಗಲೇ ಅದು ನಾಶವಾಗುತ್ತಿದೆ. ದಯವಿಟ್ಟು ನಿಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಇದರ ಬಗ್ಗೆ ಪರಿಶೀಲನೆ ಮಾಡಿ. ನಾನು ಇದನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಸರ್ಕಾರ ಇದಕ್ಕೆ ಔಷಧಿ ಕೊಡುವಂತಾದ್ದು, ರೈತರು ಅದನ್ನು ಸಿಂಪರಣೆ ಮಾಡುವಂತಾದ್ದು ಏನೂ ಇಲ್ಲಿ ಆಗುತ್ತಿಲ್ಲ. ನಿಮ್ಮ ಕೃಷಿ ಇಲಾಖೆಯ ಅಧಿಕಾರಿಗಳು ಏನೂ ಕೆಲಸ ಮಾಡುತ್ತಿಲ್ಲ.

ಶ್ರೀ ಎಂ. ಮಹದೇವ್ : ಆ ಭಾಗದ ತಜ್ಞರು ನಮ್ಮ ಇಲಾಖೆಯಲ್ಲಿ ಇಲ್ಲ. ಆ ಬಗ್ಗೆ ನಾವು Agriculture Departmentನವರನ್ನು request ಮಾಡಿಕೊಳ್ಳುತ್ತೇವೆ. ಅವರು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಅದಕ್ಕೆ ಮಾನ್ಯ ಮಂತ್ರಿಗಳು ಆಗಲೇ ಉತ್ತರ ಹೇಳಿದರಲ್ಲಾ. Agricultural Department ಆ ಬಗ್ಗೆ ತಿಳಿಸಿ ವಿಚಾರಣೆ ಮಾಡಿಸುತ್ತೇನೆ ಎಂದು ಮಾನ್ಯ ಸಚಿವರು ಹೇಳಿದ್ದಾರಲ್ಲಾ.

ಶ್ರೀ ಜಗದೀಶ್ ಶೆಟ್ಟರ್ : ಕಬ್ಬು ಬೆಳೆಗಾರರನ್ನು ಇವತ್ತು ಸರ್ಕಾರ ಸಂರಕ್ಷಣೆ ಮಾಡಬೇಕು.

ಅಧ್ಯಕ್ಷರು : ಸ್ವಾಮಿ, ಅವರು ಅದನ್ನೇ ಹೇಳುತ್ತಿದ್ದಾರಲ್ಲಾ.

ಶ್ರೀ ಎಂ. ಮಹದೇವ್ : ಕೃಷಿ ಇಲಾಖೆಯವರು ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಸಂಬಂಧಪಟ್ಟಂತಹ ಮಾನ್ಯ ಸಚಿವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಹಾರಾಷ್ಟ್ರದಲ್ಲಿ ಈಗೇನು ಸಹಾಯಧನ ಮುಂತಾದ concession ಗಳನ್ನು ಕೊಟ್ಟಿದ್ದಾರೋ, ಅದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಲೇ ಇಲ್ಲವಲ್ಲಾ?

ಅಧ್ಯಕ್ಷರು : ಇಲ್ಲ, ಆ ಬಗ್ಗೆ ನಾನು verify ಮಾಡುತ್ತೇನೆ ಎಂದು ಮಾನ್ಯ ಸಚಿವರು ಹೇಳಿದರು.

ಶ್ರೀ ಎಂ. ಮಹದೇವ್ : ಕ್ಯಾಬಿನೆಟ್ ಸಬ್ ಕಮಿಟಿಯನ್ನು ನಾವು ಮಾಡಿದ್ದೇವೆ. ಮಹಾರಾಷ್ಟ್ರದಲ್ಲಿ ಸಬ್ಸಿಡಿ ಕೊಡುವ ವಿಚಾರ ಮತ್ತು ಇತರ ವಿಷಯಗಳನ್ನೆಲ್ಲಾ ಕ್ಯಾಬಿನೆಟ್ ಸಬ್ ಕಮಿಟಿ ಪರಿಶೀಲನೆ ಮಾಡುತ್ತಿದೆ. ಕ್ಯಾಬಿನೆಟ್ ಸಬ್ ಕಮಿಟಿ ವರದಿ ಬಂದ ಕೂಡಲೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪ್ರಕಾಶ್ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಸ್ವಾಮಿ Agriculture Departmentಗೆ ಕಳುಹಿಸಿಕೊಟ್ಟು ಅದರ ಬಗ್ಗೆ verify ಮಾಡಿಸುತ್ತೇನೆ ಎಂದು ಮಾನ್ಯ ಸಚಿವರು ಹೇಳಿದರಲ್ಲಾ. ಮತ್ತೆ ಅದರಲ್ಲಿ ಮತ್ತೆ ಇನ್ನೇನಿದೆ?

ಶ್ರೀ ಹೆಚ್.ಡಿ. ಚೌಡಯ್ಯ : ಮಾನ್ಯ ಅಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆ ಬಾಬ್ತು ಕಳೆದ ವರ್ಷ 13 ಕೋಟಿ ರೂಪಾಯಿಗಳು ರೈತರದ್ದು ಬಾಕಿ ಇದೆ. ಅದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದೀರಿ?

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟಂತೆ ನಿನ್ನೆ ತಾನೇ ನಾನು ಅಧಿಕಾರಿಗಳ ಸಭೆಯೊಂದನ್ನು ಮಾಡಿ, ಅಲ್ಲೇನು ಬಾಕಿ ಇದೆಯೋ, ಅದನ್ನು ಕೂಡಲೇ ಪಾವತಿ ಮಾಡಲಿಕ್ಕೆ ಅವರಿಗೆ ಆದೇಶವನ್ನು ನಾವು ಕೊಟ್ಟಿದ್ದೇವೆ. ಸುಮಾರು ಒಂದು ತಿಂಗಳೊಳಗಾಗಿ ರೈತರ ಬಾಕಿಯನ್ನು ಪಾವತಿ ಮಾಡಬೇಕು, ಇಲ್ಲದಿದ್ದರೆ ನಾನು ಅದನ್ನು ರೆವಿನ್ಯೂ ರಿಕವರಿಯಾಗಿ ಮಾಡಿ ಆ ಬಾಕಿಯನ್ನು ಚುಕ್ತಾ ಮಾಡಬೇಕಾಗುತ್ತದೆ ಎನ್ನುವಂತಹ ಕಟ್ಟುನಿಟ್ಟಿನ ಆದೇಶವನ್ನು ನಿನ್ನೆ ತಾನೇ ಸಭೆ ಮಾಡಿ ನಾನು ಕೊಟ್ಟಿದ್ದೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಬಹಳ ಮುಖ್ಯವಾದಂತಹ ಪ್ರಶ್ನೆ ಏನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹೆಚ್ಚಿಗೆ ಸಹಕಾರ ರಂಗದಲ್ಲಿ ಸಕ್ಕರೆ ಕಾರ್ಖಾನೆಗಳು ಇವೆ. ಅವುಗಳು ಲಾಭದಾಯಕವಾಗಿ ನಡೆಯಬೇಕಾಗಿದೆ. ಏಕೆಂದರೆ ಅದರಲ್ಲಿ ರೈತರ ಶೇರ್ ಹಣ ಇದೆ. ಆ ರೈತರ ಹಣ ಅವರಿಗೆ ಮುಟ್ಟುವುದಷ್ಟೇ ಅಲ್ಲ ಅವರು ಬೆಳೆದಂತಹ ಬೆಳೆಗೆ ಏನು ಹಣ ಕೊಡಬೇಕಾಗಿದೆ ಅದನ್ನು ಕೊಡಬೇಕು. ಇವತ್ತು ನಮಗೆ ಉತ್ಪಾದನೆ ಆಗುವಂತಹ ಕಬ್ಬು ಈ ರಾಜ್ಯದಲ್ಲಿ ಏನಿದೆ ಅದರಲ್ಲಿ 50 ಪರ್ಸೆಂಟ್ ಸಹ ಸಕ್ಕರೆ ಕಾರ್ಖಾನೆಗಳು ಅರೆಯುತ್ತಾ ಇಲ್ಲ. ಇನ್ನು 50 ಪರ್ಸೆಂಟ್ ಕಬ್ಬು ಉಳಿಯುತ್ತದೆ. ಈಗ ರೈತರಿಗೆ ಬಾಕಿ ಏನು ಕೊಡಬೇಕಾಗಿದೆ ಅದನ್ನು ಜರೂರಾಗಿ ಕೊಡಬೇಕೆನ್ನುವುದು ಒಂದು ವಿಚಾರವಾದರೆ ನಮ್ಮ ಜಗದೀಶ್ ಶೆಟ್ಟರ್‌ರವರು ಹೇಳಿದ ಹಾಗೆ ವಿವರವಾಗಿ ಕೊಡಬೇಕು ಎನ್ನುವುದು ಒಂದು ಪ್ರಶ್ನೆ. ಈಗ ಕೋ-ಜನರೇಷನ್ ಮಾಡುವುದರಿಂದ ಅವರು ಬಹುಶಃ ಲಾಭದಾಯಕವಾಗಿ ನಡೆಸಬಹುದು. ಯಾವ್ಯಾವ ಸಕ್ಕರೆ ಕಾರ್ಖಾನೆಗಳು ಹಾನಿಯಲ್ಲಿವೆ ಅವುಗಳು ಕೋ-ಜನರೇಷನ್ ಅನ್ನು ಜರೂರಾಗಿ ತೆಗೆದುಕೊಂಡರೆ ಅವು ಆ ಭಾಗದಲ್ಲಿ ಲಾಭದಾಯಕವಾಗಿ ಅರೆಯುವುದಕ್ಕೆ ಮತ್ತು ರೈತರ ಹಣ ಕೊಡುವುದಕ್ಕೆ ಶಕ್ತಿ ಬರುತ್ತದೆ. ಅದರ ಜೊತೆಗೆ ಇನ್ನು ಹೆಚ್ಚು ಕಬ್ಬು ಅರೆಸುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು : ತಾವು ನನ್ನ ಕಷ್ಟ ತಿಳಿದುಕೊಳ್ಳಿ, 15 ನಿಮಿಷ ಒಂದು ಪ್ರಶ್ನೆಗೆ ಆದರೆ, ಮೂರು ಪ್ರಶ್ನೆ ಮಾತ್ರ ಮಾಡಿ ಎಲ್ಲವನ್ನು ಕೂಡ ಮುಂದಕ್ಕೆ ಹಾಕುತ್ತೇನೆ.

ಶ್ರೀ ಎಂ. ಮಹದೇವ್ : ಸನ್ಮಾನ್ಯ ಅಧ್ಯಕ್ಷರೆ, ಕಾರ್ಖಾನೆಗಳು ಇವತ್ತು ಸಕ್ಕರೆ ಉತ್ಪಾದನೆಯನ್ನು ಮಾಡಿ ಬಹಳ ಆರೋಗ್ಯಕರವಾಗಿ ಇರುತ್ತವೆ ಎನ್ನುವ ನಂಬಿಕೆ ಕಡಿಮೆಯಾಗಿದೆ. ಈಗ ಅದಕ್ಕಾಗಿ ನಾವು ಎಲ್ಲಾ ಖಾಸಗಿ ಮತ್ತು ಕೋ-ಅಪರೇಟೀವ್ ಶುಗರ್ ಫ್ಯಾಕ್ಟರಿಗಳವರನ್ನು ಕರೆದು ಸಭೆಗಳನ್ನು ಮಾಡಿ ನೀವು ಈ ಉದ್ಯಮದ ಮೇಲೆ ಪೂರ್ಣವಾಗಿ ಅವಲಂಬಿತರಾಗಬೇಡಿ. ಎಥನಾಲ್ ಡಿಸ್ಟಿಲರಿ ಮತ್ತು ಕೋ-ಜನರೇಷನ್ ಇಷ್ಟು ನೀವು ಹಾಕಿಕೊಂಡರೆ ನಿಮ್ಮ ಫ್ಯಾಕ್ಟರಿ ಆರ್ಥಿಕವಾಗಿ ಚೆನ್ನಾಗಿ ಇರುತ್ತದೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆಂದು ಆದೇಶವನ್ನು ನಾವು ಕೊಟ್ಟಿದ್ದೇವೆ.

ಪರಿಶಿಷ್ಟ ವರ್ಗ ಮತ್ತು ಪಂಗಡಗಳ ನಿಗಮದಿಂದ ಮಂಜೂರಾತಿಯಾದ ಯೋಜನೆಗಳು

538 (4909) : ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಉಡುಪಿ ಜಿಲ್ಲೆಗೆ 2000-01, 2001-02, 2002-03ರ ಸಾಲಿನಲ್ಲಿ ಮಂಜೂರಾದ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಹಣವೆಷ್ಟು; (ವಿಧಾನಸಭಾ ಕ್ಷೇತ್ರವಾರು ಫಲಾನುಭವಿಗಳ ಸಂಖ್ಯೆ ಮತ್ತು ಹಣದ ವಿವರ ನೀಡುವುದು)?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಉಡುಪಿ ಜಿಲ್ಲೆಗೆ 2000-01, 2001-02, ಮತ್ತು 2002-03ನೇ ಸಾಲಿನಲ್ಲಿ ಕ್ಷೇತ್ರವಾರು ವಿವಿಧ ಯೋಜನೆಗಳಲ್ಲಿ

ಸಾಧಿಸಿದ ಪ್ರಗತಿ ಮತ್ತು ವೆಚ್ಚದ ವಿವರಗಳನ್ನು ಅನುಬಂಧ (1) (2) ಮತ್ತು (3)ರಲ್ಲಿ ಲಗತ್ತಿಸಿದೆ ವರ್ಷವಾರು ಪ್ರಗತಿ ಈ ಕೆಳಕಂಡಂತೆ ಇದೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ ವರ್ಷವಾರು	ಫಲಾನುಭವಿಗಳ ಸಂಖ್ಯೆ		ಬಿಡುಗಡೆಯಾದ ಒಟ್ಟು ಹಣ (ಖರ್ಚು)	
	ಪ. ಜಾತಿ	ಪ. ವರ್ಗ	ಪ. ಜಾತಿ	ಪ. ವರ್ಗ
2000 2001	276	1062	52.93	190.63
2001 2002	169	182	44.29	55.13
2002 2003	124	59	16.68	12.25

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು

2000-2001ನೇ ಸಾಲಿನಲ್ಲಿ ನಿಗಮದ ವಿವಿಧ ಯೋಜನೆಗಳಡಿ ಉಡುಪಿ ಜಿಲ್ಲಾ ವಿಧಾನಸಭಾ ಕ್ಷೇತ್ರವಾರು ಸಾಧಿಸಿದ ಪ್ರಗತಿ ವಿವರ ಹಾಗೂ ಬಿಡುಗಡೆಯಾದ ಹಣದ ವಿವರ

ಅನುಬಂಧ - 1

ಕ್ರ.ಸಂ.	ಯೋಜನೆ	ಕ್ಷೇತ್ರದ ಹೆಸರು	ಫಲಾನುಭವಿಗಳ ಸಂಖ್ಯೆ		ಬಿಡುಗಡೆಯಾದ ಸಹಾಯಧನ		ಬಿಡುಗಡೆಯಾದ ಬೀಜಧನ		ಬಿಡುಗಡೆಯಾದ ಅವಧಿಸಾಲ		ಬಿಡುಗಡೆಯಾದ ಒಟ್ಟು ಹಣ	
			ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1.	ಸ್ವಯಂ ಯೋಜನೆ	ಉಡುಪಿ	134	13	653500	62500	0	0	0	0	653500	62500
		ಕಾಪು	8	0	40000	0	0	0	0	0	40000	0
		ಬ್ರಹ್ಮಾವರ	57	112	280000	516500	0	0	0	0	280000	516300
		ಕಾರ್ಕಳ	4	32	20000	160000	0	0	0	0	20000	60000
		ಕುಂದಾಪುರ	8	0	40000	0	0	0	0	0	40000	0
		ಬೈಂದೂರು	23	2	120500	10000	0	0	0	0	120500	10,000
		ಒಟ್ಟು	**234**	**159**	**1254000**	**749000**	**0**	**0**	**0**	**0**	**1154000**	**746000**
2.	ಐ.ಎಸ್.ಬಿ.	ಉಡುಪಿ	12	7	0	0	385000	136000	0	0	385000	36000
		ಕಾಪು	2	0	0	0	28000	0	0	0	28000	0
		ಬ್ರಹ್ಮಾವರ	0	3	0	0	0	74000	0	0	0	74000
		ಕಾರ್ಕಳ	4	5	0	0	56000	95000	0	0	56000	95000
		ಕುಂದಾಪುರ	2	0	0	0	28000	0	0	0	28000	0
		ಬೈಂದೂರು	5	0	0	0	107700	0	0	0	107700	0
		ಒಟ್ಟು	**25**	**17**	**0**	**0**	**604700**	**305000**	**0**	**0**	**604700**	**305000**

1	2	3	4	5	6	7	8	9	10	11	12	13
3.	ವೈಯಕ್ತಿಕ ಕೊಳವೆ ಬಾವಿ	ಉಡುಪಿ	0	1	0	65000	0	0	0	0	0	65000
		ಕಾಪು	0	0	0	0	0	0	0	0	0	
		ಬ್ರಹ್ಮಾವರ	4	7	260000	455000	0	0	0	0	260000	455000
		ಕಾರ್ಕಳ	3	5	195000	325000	0	0	0	0	195000	325000
		ಕುಂದಾಪುರ	1	0	65000	0	0	0	0	0	65000	0
		ಬೈಂದೂರು	1	0	65000	0	0	0	0	0	65000	0
		ಒಟ್ಟು	**9**	**13**	**585000**	**845000**	**0**	**0**			**585000**	**845000**
4.	ಕೊರಗ ಅಭಿವೃದ್ಧಿ	ಉಡುಪಿ	0	151	0	2070579	0	0	76000	0	0	2146579
		ಕಾಪು	0	113	0	1305019	0	0	0	0	0	1305019
		ಬ್ರಹ್ಮಾವರ	0	212	0	2147503	0	0	0	0	0	2147503
		ಕಾರ್ಕಳ	0	115	0	2261964	0	0	0	2666000	0	4927964
		ಕುಂದಾಪುರ	0	148	0	4026542	0	0	0	1125000	0	5151542
		ಒಟ್ಟು	0	869	0	13056804	0	0	0	3867000	0	16923804
5.	ನೇರಸಾಲ	ಉಡುಪಿ	2	3	0	0	136000	36000	624000	144000	760000	180000
		ಕಾಪು	1	0	0	0	840000	0	315000	0	1155000	0
		ಬ್ರಹ್ಮಾವರ	1	0	0	0	91000	0	333000	0	424000	0
		ಕಾರ್ಕಳ	1	1	0	0	92000	12000	354000	48000	446000	60000
		ಕುಂದಾಪುರ	3	0	0	0	34000	0	130700	0	164700	0
		ಒಟ್ಟು	**8**	**4**	**0**	**0**	**1193000**	**48000**	**1756700**	**192000**	**2949700**	**240000**
		ಒಟ್ಟು	**276**	**1062**	**1739000**	**14650804**	**1797700**	**353000**	**1756700**	**4059000**	**5293500**	**0062804**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು

2000-2001ನೇ ಸಾಲಿನಲ್ಲಿ ನಿಗಮದ ವಿವಿಧ ಯೋಜನೆಗಳಡಿ ಉಡುಪಿ ಜಿಲ್ಲಾ ವಿಧಾನಸಭಾ ಕ್ಷೇತ್ರವಾರು ಸಾಧಿಸಿದ ಪ್ರಗತಿ ವಿವರ ಹಾಗೂ ಬಿಡುಗಡೆಯಾದ ಹಣದ ವಿವರ

ಅನುಬಂಧ - 2

ಕ್ರ.ಸಂ.	ಯೋಜನೆ	ಕ್ಷೇತ್ರದ ಹೆಸರು	ಫಲಾನುಭವಿಗಳ ಸಂಖ್ಯೆ		ಬಿಡುಗಡೆಯಾದ ಸಹಾಯಧನ		ಬಿಡುಗಡೆಯಾದ ಬೀಜಧನ		ಬಿಡುಗಡೆಯಾದ ಅವಧಿಸಾಲ		ಬಿಡುಗಡೆಯಾದ ಒಟ್ಟು ಹಣ	
			ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1.	ಸ್ವಯಂ ಉದ್ಯೋಗ	ಉಡುಪಿ	61	–	30.000	6000	0	0	0	0	305000	5000
		ಕಾಪು	8	0	68000	0	0	0	0	0	95000	0
		ಬ್ರಹ್ಮಾವರ	39	57	210000	392500	0	0	0	0	215000	392500
		ಒಟ್ಟು	103	58	587000	397500	0	0	0	0	685000	397500
2.	ಐ.ಎಸ್.ಬಿ.	ಉಡುಪಿ	7	4	10000	15000	288000	97000	0	0	238000	112000
		ಕಾಪು	2	0	10000	0	28000	0	0	0	38000	0
		ಬ್ರಹ್ಮಾವರ	8	4	20000	25000	309000	56000	0	0	329000	81000
		ಒಟ್ಟು	**17**	**8**	**40000**	**40000**	**565000**	**153000**	**0**	**0**	**605000**	**193000**
3.	ವೈಯಕ್ತಿಕ ಕೊಳವೆ ಬಾವಿ	ಉಡುಪಿ	2	3	130000	195000	0	0	0	0	130000	195000
		ಕಾಪು	1	0	65000	0	0	0	0	0	65000	0
		ಬ್ರಹ್ಮಾವರ	9	17	585000	1105000	0	0	0	0	585000	1105000
		ಕಾರ್ಕಳ	2	13	130000	845000	0	0	0	0	130000	845000
		ಕುಂದಾಪುರ	0	1	0	65000	0	0	0	0	0	6500
		ಬೈಂದೂರು	2	10	130000	650000	0	0	0	0	130000	650000
		ಒಟ್ಟು	16	44	1040000	2860000	0	0	0	0	1040000	2860000

1	2	3	4	5	6	7	8	9	10	11	12	13
4.	ಗಂಗಾ ಕಲ್ಯಾಣ	ಕಾರ್ಕಳ	9	12	506000	506000	0	0	0	0	0506000	506000
		ಒಟ್ಟು	9	12	506000	0	0	0	0	0	506000	506000
5.	ಭೂ ಒಡೆತನ	ಬ್ರಹ್ಮಾವರ	0	7	0	174950	0	0	0	174950	0	349900
		ಕಾರ್ಕಳ	16	0	476550	0	0	0	476550	0	953100	0
		ಒಟ್ಟು	16	7	476550	174950	0	0	476550	174950	953100	349900
6.	ಕೊರಗ ಅಭಿವೃದ್ಧಿ	ಉಡುಪಿ	0	19	0	326685	0	0	0	0	0	325685
		ಕಾರ್ಕಳ	0	9	0	181610	0	0	0	0	0	181610
		ಕುಂದಾಪುರ	0	24	0	257500	0	0	0	0	0	257500
		ಬೈಂದೂರು	0	0	0	0	0	0	0	0	0	0
		ಒಟ್ಟು	0	52	0	764795	0	0	0	0	0	764795
7.	ನೇರಸಾಲ ಯೋಜನೆ	ಉಡುಪಿ	2	1	0	0	48000	91000	107000	350000	155000	441000
		ಬ್ರಹ್ಮಾವರ	1	0	0	0	100000	0	495000	0	585000	0
		ಒಟ್ಟು	**3**	**1**	**0**	**0**	**148000**	**91000**	**592000**	**350000**	**740000**	**441000**
		ಒಟ್ಟು	**169**	**182**	**2647550**	**4743245**	**713000**	**244000**	**1068550**	**524950**	**4429100**	**5512195**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು

2000-2001ನೇ ಸಾಲಿನಲ್ಲಿ ನಿಗಮದ ವಿವಿಧ ಯೋಜನೆಗಳಡಿ ಉಡುಪಿ ಜಿಲ್ಲಾ ವಿಧಾನಸಭಾ ಕ್ಷೇತ್ರವಾರು ಸಾಧಿಸಿದ ಪ್ರಗತಿ ವಿವರ ಹಾಗೂ ಬಿಡುಗಡೆಯಾದ ಹಣದ ವಿವರ

ಅನುಬಂಧ - 3

ಕ್ರ.ಸಂ.	ಯೋಜನೆ	ಕ್ಷೇತ್ರದ ಹೆಸರು	ಫಲಾನುಭವಿಗಳ ಸಂಖ್ಯೆ		ಬಿಡುಗಡೆಯಾದ ಸಹಾಯಧನ		ಬಿಡುಗಡೆಯಾದ ಬೀಜಧನ		ಬಿಡುಗಡೆಯಾದ ಅವಧಿಸಾಲ		ಬಿಡುಗಡೆಯಾದ ಒಟ್ಟು ಹಣ	
			ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ	ಪ.ಜಾತಿ	ಪ.ವರ್ಗ
1.	ಸ್ವಯಂ ಯೋಜನೆ	ಉಡುಪಿ	27	7	235000	65000	0	0	0	0	235000	65000
		ಕಾಪು	9	0	87500	0	0	0	0	0	87500	0
		ಬ್ರಹ್ಮಾವರ	15	12	125000	105000	0	0	0	0	125000	105000
		ಕಾರ್ಕಳ	11	3	70000	20000	0	0	0	0	70000	20000
		ಕುಂದಾಪುರ	15	7	145000	70000	0	0	0	0	145000	70000
		ಬೈಂದೂರು	27	3	267500	37500	0	0	0	0	267500	37500
		ಒಟ್ಟು	**104**	**38**	**930000**	**297500**	**0**	**0**	**0**	**0**	**930000**	**297500**
2.	ಐ.ಎಸ್.ಬಿ.	ಉಡುಪಿ	1	5	10000	50000	15000	70000	0	0	25000	120000
		ಕಾಪು	0	0	0	0	0	0	0	0	0	0
		ಬ್ರಹ್ಮಾವರ	2	0	10000	0	34000	0	0	0	44000	0
		ಕಾರ್ಕಳ	0	0	0	0	0	0	0	0	0	0
		ಕುಂದಾಪುರ	4	0	10000	0	239000	0	0	0	249000	0
		ಬೈಂದೂರು	3	0	[illegible]	0	50000	0	0	0	70000	0
		ಒಟ್ಟು	**10**	**5**	[illegible]	**50000**	**338000**	**70000**	**0**	**0**	**388000**	**120000**

1	2	3	4	5	6	7	8	9	10	11	12	13
7.	ನೇರಸಾಲ (ಹೈನುಗಾರಿಕೆ)	ಉಡುಪಿ	2	0	20000	0	14000	0	36000	0	70000	0
		ಕಾಪು	0	0	0	0	0	0	0	0	0	0
		ಬ್ರಹ್ಮಾವರ	1	3	10000	28800	7000	0	18000	76200	36000	105000
		ಕಾರ್ಕಳ	2	4	20000	38400	14000	0	36000	101600	70000	140000
		ಕುಂದಾಪುರ	5	1	50000	9600	35000	0	90000	25400	175000	35000
		ಬೈಂದೂರು	0	0	0	0	0	0	0	0	0	0
		ಒಟ್ಟು	10	8	100000	76800	70000		180000	203200	350000	280000
4.	ವೈಯಕ್ತಿಕ ಕೊಳವೆ ಬಾವಿ	ಬ್ರಹ್ಮಾವರ	0	0	0	0	0	0	0	0	0	0
		ಕಾರ್ಕಳ	0	1	0	15500	0	0	0	0	0	15500
		ಕುಂದಾಪುರ	0	1	0	65000	0	1509	0	0	0	66509
		ಬೈಂದೂರು	0	6	0	390000	0	55738	0	0	0	445738
		ಒಟ್ಟು	**0**	**8**	**0**	**470500**	**0**	**57247**	**0**	**0**	**0**	**527747**
		ಒಟ್ಟು	**124**	**59**	**1080000**	**894800**	**408000**	**127247**	**180000**	**203200**	**1668000**	**1225247**

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ನನ್ನ ಉಡುಪಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಹಣದ ವಿವರ ಮತ್ತು ಯೋಜನೆಗಳ ವಿವರಗಳನ್ನು ನಾನು ಕೇಳಿದ್ದೇನೆ. ಈ ಯೋಜನೆಗಳೆಲ್ಲಾ ಹಾಗೂ ಫಲಾನುಭವಿಗಳ ಆಯ್ಕೆಯೆಲ್ಲಾ ಇಡೀ ವರ್ಷದಲ್ಲಿ ಒಂದು ದಿವಸಕ್ಕೆ ಎಂದರೆ ಅಂಬೇಡ್ಕರ್ ಜಯಂತಿ ದಿವಸಕ್ಕೆ ಮಾತ್ರ ಸೀಮಿತವಾಗಿದೆಯಾ ಎನ್ನುವುದು ಒಂದು ಪ್ರಶ್ನೆ ಉದ್ಭವವಾಗಿದೆ. ಬಾಕಿ ದಿನಗಳಲ್ಲಿ ಹೋದರೆ ಅಲ್ಲಿ ಅರ್ಜಿಗಳನ್ನು ಕೊಡುವುದೇ ಇಲ್ಲ. ಅದರ ಜೊತೆಗೆ ಅರ್ಜಿ ಮಂಜೂರಾತಿ ಆಗಬೇಕಾದರೆ ಆರಾರು ತಿಂಗಳು ಒದ್ದಾಡಿಸುತ್ತಾರೆ. ಅಂಬೇಡ್ಕರ್ ಜಯಂತಿ ದಿವಸ ಯಾವತ್ತು ಬರುತ್ತದೆ ಆಗ ಅಲ್ಲಿಂದನೋ, ಇಲ್ಲಿಂದನೋ ಒಟ್ಟು ಮಾಡಿಕೊಂಡು ಒಂದು ದೊಡ್ಡ ಫಂಕ್ಷನ್ ಮಾಡಿದರು. ಅದನ್ನು ಅಲ್ಲಿಗೆ ಮುಗಿಸಿದರು. ಅದು ಈ ರೀತಿಯಾಗಬಾರದು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. 2002–2003ರಲ್ಲಿ ಕೊರಗ ಜನಾಂಗದ ಅಭಿವೃದ್ಧಿ ಬಗ್ಗೆ ಮಾಹಿತಿ ಇಲ್ಲ. ಅದಕ್ಕೆ ಕ್ರಿಯಾಯೋಜನೆ ರೂಪಿಸಲಾಗುತ್ತಿದೆಯೇ? ಎಂದು ಕೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ನಾವು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಮಾಡಿರುವಂತಹ ಕೋಷ್ಟಕಗಳ ಮೂರು ವರ್ಷಗಳ ವಿವರವನ್ನು ಕೊಟ್ಟಿದ್ದೇವೆ. ಅದರಲ್ಲಿ ಕೊರಗ ಜನಾಂಗದ್ದು ಕೂಡ ಇದೆ. ತಾವು ಅದರ ವಿವರಗಳನ್ನು ನೋಡಿದಾಗ ಈ ಒಂದು ಕೋಷ್ಟಕದಲ್ಲಿ ನಾವು ನಮೂದು ಮಾಡಿದ್ದೇವೆ. ತಾವು ಅಂಬೇಡ್ಕರ್ ಜಯಂತಿ ದಿವಸ ಬಂದಾಗ ಮಾತ್ರ ಬಾಗಿಲು ತೆರೆಯುತ್ತದೆ ಎಂದು ಹೇಳಿದಿರಿ. ಅದು ಹಾಗಲ್ಲ, ಆರ್ಥಿಕ ಸಂಪನ್ಮೂಲಗಳು ಮತ್ತು ಆಯವ್ಯಯದಲ್ಲಿ ಜಿಲ್ಲಾವಾರು ಅಲಾಟ್‌ಮೆಂಟ್ ಏನಿದೆ ಅದರ ಪ್ರಕಾರ ಮಾತ್ರ ಮಾಡುವುದಕ್ಕೆ ಆಗುತ್ತದೆ. ನಿಜ, ಡಿಮ್ಯಾಂಡ್ ಯಾವತ್ತಿಗೂ ಜಾಸ್ತಿ ಇರುತ್ತದೆ ಸಪ್ಲೈ ಕಡಿಮೆ ಇರುತ್ತದೆ. ಡಿಮ್ಯಾಂಡ್ಸ್ ವರ್ಸಸ್ ಸಪ್ಲೈ ನೋಡಿದಾಗ ಬಹಳ ಅಂತರ ಇದೆ. ಅದನ್ನು ತೂಗಿಸುವುದಕ್ಕೆ ನಾವು ಹಂತ ಹಂತವಾಗಿ ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ವೈಯಕ್ತಿಕ ಕೊಳವೆ ಬಾವಿಗಳ ಬಗ್ಗೆ ಸಾಕಷ್ಟು ಅರ್ಜಿಗಳು ನಮ್ಮಲ್ಲಿ ಇದೆ. ಆದರೆ ಅದು ಮಂಜೂರಾತಿ ಆಗುತ್ತಿಲ್ಲ. ಅದು ಏಕೆಂದು ಗೊತ್ತಾಗುತ್ತಿಲ್ಲ. ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಕೊಳವೆ ಬಾವಿಗಳ ವಿಚಾರದಲ್ಲಿ ಈ ಸದನದಲ್ಲಿ ಬಹಳ ಸಾರಿ ಚರ್ಚೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈ ಬಾರಿಯ ಆಯವ್ಯಯದಲ್ಲಿ ಐದು ಸಾವಿರ ಕೊಳವೆ ಬಾವಿಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಆದರೆ ಇವತ್ತು ಆರ್ಥಿಕ ಇಲಾಖೆ, ನಾವು ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸೇರಿ ಯುನಿಟ್ ಕಾಸ್ಟ್ ಬಗ್ಗೆ ಇತ್ಯರ್ಥ ಮಾಡಬೇಕಾಗಿದೆ. ಇವತ್ತು 65+10 ಅಂದರೆ 75 ಎಂದು ಏನು ಕೊಡುತ್ತಿದ್ದೇವೆ. ಈಗ ಬರಗಾಲ ಬಂದು ನೀರಿನ ಮಟ್ಟ ಬಹಳ ಕೆಳಗಡೆ ಹೋದಕಾರಣ ನಾವು ಕೊಡುವಂತಹ ಕಾಸ್ಟ್‌ನಲ್ಲಿ ಇನ್‌ಫ್ರಾಸ್ಟ್ರಕ್ಚರ್, ಪವರ್ ಸಪ್ಲೈ ತೆಗೆದುಕೊಂಡು ಅವರಿಗೆ ಅನುಕೂಲ ಮಾಡುವುದಕ್ಕೆ ಕಷ್ಟವಾಗುತ್ತದೆ. ಹಾಗಾಗಿ ಡ್ರಿಲ್ ಮಾಡುವವರು ನೋ ವಾಟರ್ ನೋ ಮನಿ ಸ್ಕೀಂ ನಲ್ಲಿ ಮಾಡುವುದಕ್ಕೆ ಬಹಳ ಜನ

ಹೆದರುತ್ತಾರೆ. ಅದಕ್ಕೆ ಇವತ್ತು ಸರ್ಕಾರ ಪರಿಹಾರ ಕೊಡಬೇಕಾಗಿದೆ. ಈ ಒಂದು ಬಜೆಟ್ ಅಧಿವೇಶನ ಮುಗಿದ ಮೇಲೆ ಅದಕ್ಕೆ ಪರಿಹಾರ ಸಿಗಬಹುದೆಂದು ನಾವೂ ಆಶಾದಾಯಕವಾಗಿದ್ದೇವೆ.

ಶ್ರೀ ಯು.ಆರ್. ಸಭಾಪತಿ : ನೇರ ಸಾಲ ಯೋಜನೆ ಏನಿದೆ ಅದಕ್ಕೆ ಮಂಜೂರಾತಿಗೆ ಎಷ್ಟು ಕಾಲಾವಕಾಶ ಬೇಕಾಗುತ್ತದೆನ್ನುವುದನ್ನು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾಮೂಲಿ ಕಾನೂನಿನಲ್ಲಿ ಏನು ಘೋಷಣೆ ಮಾಡಿದ್ದೇವೆ ಆ ಪ್ರಕಾರ ಆಗಬೇಕಾಗುತ್ತದೆ.

ಯಲ್ಲಾಪುರ ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣ

539 (4927) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈವರೆಗೆ ಎಷ್ಟು ಅಂಬೇಡ್ಕರ್ ಭವನಗಳನ್ನು ನಿರ್ಮಿಸಲಾಗಿದೆ; ಕಾಮಗಾರಿ ಪ್ರಗತಿಯಲ್ಲಿರುವುದು ಎಷ್ಟು?

ಆ) ಈವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?

ಇ) ಹೊಸ ಅಂಬೇಡ್ಕರ್ ಭವನವನ್ನು ಎಲ್ಲೆಲ್ಲಿ ನಿರ್ಮಾಣ ಮಾಡಲು ಸರ್ಕಾರ ಯೋಚಿಸಿದೆ?

ಈ) ಯಲ್ಲಾಪುರ ತಾಲ್ಲೂಕಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ನಿರ್ಮಾಣ ಮಾಡಲಾಗುವುದು

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ 127 ಮಿನಿ ಅಂಬೇಡ್ಕರ್ ಭವನ ಹಾಗೂ 3 ಬೃಹತ್ ಪ್ರಮಾಣದ ಭವನಗಳನ್ನು ನಿರ್ಮಿಸಲಾಗಿದೆ. 34 ಮಿನಿ ಅಂಬೇಡ್ಕರ್ ಭವನಗಳು ಹಾಗೂ 4 ಬೃಹತ್ ಪ್ರಮಾಣದ ಅಂಬೇಡ್ಕರ್ ಭವನಗಳ ಕಾಮಗಾರಿ ಪ್ರಗತಿಯಲ್ಲಿದೆ.

ಆ) ರೂ. 1718.11 ಲಕ್ಷಗಳನ್ನು ಖರ್ಚು ಮಾಡಲಾಗಿದೆ..

ಇ) ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಒಂದರಂತೆ ಮಿನಿ ಅಂಬೇಡ್ಕರ್ ಭವನವನ್ನು 2003-04ರಲ್ಲಿ ನಿರ್ಮಿಸಲು ಯೋಚಿಸಿದೆ.

ಈ) ಭಟ್ಕಳಕ್ಕೆ ಮಂಜೂರಾದ ಅಂಬೇಡ್ಕರ್ ಭವನವನ್ನು ಯಲ್ಲಾಪುರಕ್ಕೆ ಸ್ಥಳ ಬದಲಾವಣೆ ಮಾಡಿ ಸರ್ಕಾರಿ ಆದೇಶ ಸಂಖ್ಯೆ: ಸಕಇ 420 ಪಕವಿ 2002, ದಿ: 16.6.2003 ರಲ್ಲಿ ತಿದ್ದುಪಡಿ ಆದೇಶವನ್ನು ಇಗಾಗಲೇ ಹೊರಡಿಸಿರುವುದರಿಂದ ಯಲ್ಲಾಪುರದಲ್ಲಿ ಮತ್ತೊಂದು ಅಂಬೇಡ್ಕರ್ ಭವನವನ್ನು ನಿರ್ಮಿಸಲು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈಗಾಗಲೇ 127 ಮಿನಿ ಅಂಬೇಡ್ಕರ್ ಭವನಗಳನ್ನು ಹಾಗೂ 3 ಬೃಹತ್ ಅಂಬೇಡ್ಕರ್ ಭವನವನ್ನು ಪೂರ್ಣಗೊಳಿಸಿದ್ದೇವೆಂದು ಸರ್ಕಾರ ಹೇಳಿದೆ. ಇನ್ನು 34 ಅಂಬೇಡ್ಕರ್ ಭವನ ಬೇರೆ ಬೇರೆ ನಿರ್ಮಾಣದ ಹಂತದಲ್ಲಿದೆ. ಅದರ ಜೊತೆಗೆ 4 ಬೃಹತ್ ಅಂಬೇಡ್ಕರ್ ಭವನ ಕೂಡ ವಿವಿಧ ನಿರ್ಮಾಣದ ಹಂತದಲ್ಲಿದೆ ಎಂದು ಹೇಳಿದ್ದಾರೆ. ನನ್ನ ಮೊದಲನೆ ಉಪಪ್ರಶ್ನೆ ಏನೆಂದರೆ 34 ಮಿನಿ ಅಂಬೇಡ್ಕರ್ ಭವನ ಹಾಗೂ 4 ಬೃಹತ್ ಅಂಬೇಡ್ಕರ್ ಭವನವನ್ನು ಯಾವಾಗ ಕಂಪ್ಲೀಟ್ ಮಾಡುತ್ತೀರಿ? ಅದ್ಕೆ ಬೇಕಾಗಿರುವಂತಹ

ಹಣದ ಅಗತ್ಯತೆ ನಿಮ್ಮ ಆಯವ್ಯಯದಲ್ಲಿ ನಿಮ್ಮ ಹತ್ತಿರ ಹಣ ಲಭ್ಯತೆ ಇದೆಯಾ? ಎಷ್ಟು ಹಣದ ಅವಕಾಶ ಇದೆ? ಮತ್ತು ಯಾವಾಗ ಮುಗಿಸುತ್ತೀರಿ? ಇನ್ನು 2ನೆಯದಾಗಿ ಅಂಬೇಡ್ಕರ್ ಭವನವನ್ನು ಕಟ್ಟುವುದಕ್ಕೆ ಈ ವರ್ಷದ ಬಜೆಟ್‌ನಲ್ಲಿ ಹತ್ತು ಕೋಟಿ ರೂಪಾಯಿಯನ್ನು ಸರ್ಕಾರ ನಿಗದಿಪಡಿಸಿದೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಎರಡು ಅಂಬೇಡ್ಕರ್ ಭವನವನ್ನು ಐದು ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟುತ್ತೇವೆಂದು ಹೇಳಿದ್ದಾರೆ. ಅದನ್ನು ನೋಡಿದಾಗ ಈ ಅಂಬೇಡ್ಕರ್ ಭವನವನ್ನು ಕಟ್ಟುವುದಕ್ಕೆ ಈಗ ಐದು ಲಕ್ಷ ರೂಪಾಯಿ ಬಹಳ ಕಡಿಮೆಯಾಗುತ್ತದೆ. ದೊಡ್ಡ ಅಂಬೇಡ್ಕರ್ ಭವನವನ್ನು ಕಟ್ಟಬೇಕಾದಂತಹ ಅಗತ್ಯತೆ ಇದೆ. ಇದರಿಂದ ಸಾಮಾಜಿಕ ಚಟುವಟಿಕೆಯನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆ ಎನ್ನುವಂತಹ ಹಿನ್ನೆಲೆಯಲ್ಲಿ ಈ ಹಣಕಾಸಿನ ಲಭ್ಯತೆಯನ್ನು ಐದು ಲಕ್ಷ ರೂಪಾಯಿ ಈಗೇನು ಇದೆ ಅದನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಿದೆಯಾ? ಮತ್ತೆ ಇದಕ್ಕೆ ಟೈಪ್ ಡಿಸೈನ್ ಅನ್ನು ನೀವು ರಾಜ್ಯದಿಂದ ಕಳುಹಿಸುತ್ತೀರಿ ಎಂದು ಬಜೆಟ್‌ನಲ್ಲಿ ಹೇಳಿದ್ದೀರಿ. ಅದಕ್ಕೆ ಟೈಪ್ ಡಿಸೈನ್ ಅನ್ನು ನೀವು ಕಳುಹಿಸದೆ, ನಮ್ಮ ನಮ್ಮ ಕ್ಷೇತ್ರದಲ್ಲಿ ಅಲ್ಲಿಯ ಕ್ಲೈಮೇಟ್ ಕಂಡೀಷನ್ ನೋಡಿ ಅಲ್ಲಿನ ವಾತಾವರಣಕ್ಕೆ ತಕ್ಕಹಾಗೆ ಮಾಡಿದರೆ ಒಳ್ಳೆಯದು. ನಮ್ಮಲ್ಲಿ ಹೆಚ್ಚಿಗೆ ಎಂದರೆ 120 ಇಂಚು ಮಳೆಯಾಗುತ್ತದೆ. ನೀವು ಕಳುಹಿಸಿರುವಂತಹ ಟೈಪ್ ಡಿಸೈನ್ ಮಾಡಿದರೆ ಅಂಬೇಡ್ಕರ್ ಭವನದಲ್ಲಿ ನಾವು ಛತ್ರಿ ಹಿಡಿದುಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಹಿಂದೆ ಹಾಗೆ ಆಗಿದೆ. ಹಾಗಾಗಿ ಟೈಪ್ ಡಿಸೈನ್ ಅನ್ನು ತಾವು ಕಳುಹಿಸದೆ ನಮ್ಮ ನಮ್ಮ ಜಿಲ್ಲೆಯ ವಾತಾವರಣಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ಕಟ್ಟುವುದಕ್ಕೆ ಕೊಡುತ್ತೀರಾ?

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, 242 ಅಂಬೇಡ್ಕರ್ ಭವನದ ಪೈಕಿ 127 ಮುಗಿದಿದೆ, 34 ಅಂಡರ್ ಕನ್‌ಸ್ಟ್ರಕ್ಷನ್‌ನಲ್ಲಿ ಇದೆಯೆಂದು ತಿಳಿಸಿದ್ದೇವೆ. ಮಾನ್ಯ ಸದಸ್ಯರು ಇದರಲ್ಲಿ ಎರಡು ವಿಚಾರ ಕೇಳಿದ್ದಾರೆ. ಒಂದು ಸಮಯದ ಪ್ರಶ್ನೆ ಮತ್ತು ಆರ್ಥಿಕ ಸಂಪನ್ಮೂಲ ಇದೆಯಾ ಎಂದು ಕೇಳಿದ್ದಾರೆ ಈ ಅಂಬೇಡ್ಕರ್ ಭವನವನ್ನು ಕಟ್ಟುವುದಕ್ಕೆ ನಮಗೆ ಆರ್ಥಿಕ ಸಂಪನ್ಮೂಲದ ಕೊರತೆ ಇಲ್ಲ. ಹಣ ಇದೆ. ಇವುಗಳನ್ನು ಲ್ಯಾಂಡ್ ಆರ್ಮಿಗೆ ಕೊಟ್ಟಂತಹ ಕೆಲವು ಜಿಲ್ಲೆಗಳಲ್ಲಿ ಸಮಸ್ಯೆಯಾಗಿತ್ತೇ ವಿನಃ ಇಲ್ಲಿ ಹಣದ ಪ್ರಶ್ನೆ ಅಲ್ಲ. ಆದುದರಿಂದ 34 ಭವನ ಏನು ಬಾಕಿ ಇದೆ ಅದಕ್ಕೆ ಪೂರ್ಣವಾಗಿ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ. ಮತ್ತೊಂದು ಪ್ರಶ್ನೆ ಏನೆಂದರೆ ಒಂದು ಅಸೆಂಬ್ಲಿ ಕ್ಷೇತ್ರಕ್ಕೆ ಎರಡು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಪ್ರಿಂಟಿಂಗ್ ರಾಂಗ್ ಆಗಿದೆ. ಇಂಗ್ಲಿಷ್‌ನಲ್ಲಿ ಕೊಟ್ಟಿರುವ ಪ್ರಕಾರ ಎರಡು ಇದೆ. ಆದರೆ ಕನ್ನಡದಲ್ಲಿ ಒಂದು ಇದೆ. ಅದಕ್ಕೆ ನಾನು ಕ್ಲಾರಿಫಿಕೇಷನ್ ಕೊಡುತ್ತಿದ್ದೇನೆ. ಅಸೆಂಬ್ಲಿ ಕ್ಷೇತ್ರಕ್ಕೆ ಒಂದು ಮಾತ್ರ. ಇನ್ನು ಇದಕ್ಕೆ ಕೊಡುತ್ತಿರುವಂತಹ ಮೊಬಲಗು 5 ಲಕ್ಷರೂಪಾಯಿಗಿಂತ ಜಾಸ್ತಿ ಮಾಡುತ್ತೀರಾ ಎಂದು ಕೇಳಿದ್ದೀರಿ. ಈಗ ತಕ್ಷಣಕ್ಕೆ ಜಾಸ್ತಿ ಮಾಡುವಂತಹ ವಿಚಾರ ಸರ್ಕಾರದ ಮುಂದೆ ಇಲ್ಲ. ಮತ್ತೊಂದು ಉಪಪ್ರಶ್ನೆ ಟೈಪ್ ಡಿಸೈನ್ ಬಗ್ಗೆ ತಾವು ಹೇಳಿದಿರಿ, ಅದನ್ನು ಆಯಾಯ ಪ್ರದೇಶಕ್ಕೆ ಅನುಕೂಲವಾಗುವ ಹಾಗೆ ಮಾಡಿಕೊಳ್ಳಬಹುದು. ನಾವು ಹೇಳಿರುವ ಟೈಪ್ ಡಿಸೈನ್ ಇದು ಮ್ಯಾಂಡೇಟರಿ ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಸರ್ಕಾರ ಅಂಬೇಡ್ಕರ್ ಭವನವನ್ನು ಕಟ್ಟುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿರುವುದು ಸ್ವಾಗತಾರ್ಹ. ಆದರೆ ಈ ಅಂಬೇಡ್ಕರ್

ಭವನಗಳು ಬರೀ ಭವನಗಳು ಆಗಿ ಉಳಿಯುತ್ತಿವೆಯೇ ಹೊರತು ಅಲ್ಲಿ ಏನೂ ಚಟುವಟಿಕೆಗಳು ನಡೆಯುತ್ತಿಲ್ಲ. ನಾನು ಸರ್ಕಾರಕ್ಕೆ ಸಲಹೆ ಏನು ಮಾಡುತ್ತೇನೆ ಎಂದರೆ ಇದನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವೆ ಎನ್ನುವುದು ಒಂದು. ಇನ್ನು ಪ್ರತಿ ವರ್ಷವೂ ಕೂಡ ಅಂಬೇಡ್ಕರ್ ಭವನದಲ್ಲಿ ಪ್ರತಿ ತಿಂಗಳಿಗೆ ಅಲ್ಲಿರತಕ್ಕಂಥ ಸಂಘಟನೆಯೊಡನೆ ಸಂವಾದ ಎನ್ನುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಈ ರೀತಿಯಾಗಿ ನಿರಂತರವಾಗಿ ಆರ್ಥಿಕವಾಗಿ ಮುಂದೆ ತರತಕ್ಕಂಥ ಒಂದು ಯೋಜನೆ ಮಾಡತಕ್ಕಂಥಾದ್ದು ಒಂದು ವಿಚಾರ. ಇನ್ನೊಂದು ವಿಚಾರ ಏನೆಂದರೆ ಮಿನಿ ಅಂಬೇಡ್ಕರ್ ಭವನಗಳನ್ನು ನಾಲ್ಕೈದು ಲಕ್ಷ ರೂಪಾಯಿಯಲ್ಲಿ ಕಟ್ಟುವುದಕ್ಕೆ ಸೀಮಿತ ಮಾಡಿದ್ದೀರಿ, ಅದರಿಂದ ಯಾವುದೇ ಉಪಯೋಗವಾಗುವುದಿಲ್ಲ. ಅದರಲ್ಲಿ ಒಂದು ಸಣ್ಣ ಹಾಲ್, ಒಂದು ರೂಮು ಇರುತ್ತದೆ ಅದರಲ್ಲಿ ಒಂದು ಮದುವೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಒಂದು ಕೆಲಸವನ್ನು ಸಹ ಮಾಡುವುದಕ್ಕೆ ಆಗುವುದಿಲ್ಲ. ಕೊನೇಪಕ್ಷ 25 ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟುವ ಹಾಗೆ ಮಾಡಿದರೆ ಒಳ್ಳೆಯದು. ಅದನ್ನು ನೀವು ಹಂತ ಹಂತವಾಗಿ ಕಟ್ಟಿ. ಒಂದೇ ಬಾರಿ ಯಾವ ಸರ್ಕಾರವೂ ಕೂಡ ಮೂರು ಸಾವಿರ ಹಳ್ಳಿಗಳಲ್ಲಿ ಅಂಬೇಡ್ಕರ್ ಭವನವನ್ನು ಕಟ್ಟುವುದಕ್ಕೆ ಆಗುವುದಿಲ್ಲವೆನ್ನುವ ಪರಿಜ್ಞಾನ ಇದೆ. ಅದನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವೆ, ಈಗ ಒಂದು ಅಂಬೇಡ್ಕರ್ ಭವನ ನಾಲ್ಕು ಲಕ್ಷ ರೂಪಾಯಿ ಏನು ಕೊಡುತ್ತಿದ್ದೀರಿ ಅದನ್ನು 25 ಲಕ್ಷ ರೂಪಾಯಿ ಮಾಡುವುದಕ್ಕೆ ಸಾಧ್ಯವಿಲ್ಲವೆ?

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಿಂಧ್ಯಾರವರು ಬಹಳ ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರೂ ಕೂಡ ಸರ್ಕಾರದಲ್ಲಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಮೂರು ವರ್ಷಗಳ ಕಾಲ ಬರಗಾಲ ಬಂದಂತಹ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಅಂಬೇಡ್ಕರ್ ಭವನ ಕಟ್ಟುವುದಕ್ಕೆ ಐದು ಪಟ್ಟು ಜಾಸ್ತಿ ಮಾಡುವುದಕ್ಕೆ ಆರ್ಥಿಕ ಸಂಪನ್ಮೂಲ ಇದೆಯಾ ಅಥವಾ ಅದರ ಬಗ್ಗೆ ಸುಳ್ಳು ಭರವಸೆಯನ್ನು ಕೊಡುವುದಕ್ಕೆ ನಾನು ತಯಾರಿಲ್ಲ. ಆ ಪ್ರಶ್ನೆ ನಮ್ಮ ಮುಂದೆ ತಕ್ಷಣಕ್ಕೆ ಇಲ್ಲ.

3.40 ಪಿ.ಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸಚಿವರೆ, ನನ್ನ ಸಲಹೆಯನ್ನು ಕೇಳಿ, ನಾನು ಉಪ ಪ್ರಶ್ನೆಯಲ್ಲಿ ಇದನ್ನು ಸ್ವಾಗತ ಮಾಡಿದ್ದೇನೆ. ಈ ಕಾರ್ಯಕ್ರಮವನ್ನು ಒಳ್ಳೆಯದು ಎಂದು ಸಹ ಹೇಳಿದ್ದೇನೆ. ನಾನು ಸಲಹೆಗಳ ರೂಪದಲ್ಲಿ ಎರಡು ಉಪ ಪ್ರಶ್ನೆಯನ್ನು ಕೇಳಿದ್ದೇನೆ. ಈ ವಿಚಾರವಾಗಿ ನಾನು ಕೇಂದ್ರ ಸರ್ಕಾರದ ಕಾರ್ಯದರ್ಶಿಯವರ ಜೊತೆಯಲ್ಲಿ ಮಾತನಾಡಿದೆ, ಹರಿಜನ ಗಿರಿಜನರಿಗೆ ಎಂದು ಬರುವಂತಹ ಹಣಕಾಸಿನಲ್ಲಿ ಕರ್ನಾಟಕ ರಾಜ್ಯದಿಂದ ಎಷ್ಟು ಪ್ರಸ್ತಾವನೆಗಳು ಬಂದಿವೆ. ಇಂತಹ ಪ್ರಸ್ತಾವನೆಗಳಲ್ಲಿ ಬೇರೆ ರಾಜ್ಯಗಳಿಗೆ ಎಷ್ಟನ್ನು ಕೊಟ್ಟಿದ್ದಿರಾ? ನಮ್ಮ ರಾಜ್ಯದಿಂದ ಬರುವಂತಹ ಪ್ರಸ್ತಾವನೆಗಳಿಗೆ ಮಂಜೂರಾತಿ ಏಕೆ ಕೊಡುತ್ತಿಲ್ಲ? ಅಲ್ಲಿ ನಮ್ಮವರೇ ಗೋಪಾಲರೆಡ್ಡಿಯವರು ಇದ್ದರು. ಅವರು ಖಂಡಿತವಾಗಿಯೂ ಕರ್ನಾಟಕ ರಾಜ್ಯದಿಂದ ಬರುವಂತಹ ಎಲ್ಲಾ ಪ್ರಸ್ತಾವನೆಗಳಿಗೂ ಆದ್ಯತೆಯನ್ನು ಕೊಡುತ್ತೇನೆ. ಹಣವನ್ನು ಕೊಡುತ್ತೇವೆಂದು ಹೇಳಿದ್ದರು. ಈಗ ಅವರು ಇಲ್ಲ. ಈಗ ಅವರು ರಿಟೈರ್ಡ್ ಆಗಿದ್ದಾರೆ. ಐದು ಲಕ್ಷ ಇರುವುದನ್ನು ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಈಗ ರಾಜ್ಯದಲ್ಲಿ ಬರಗಾಲವಿದೆ. ಹಣಕಾಸಿನ ತೊಂದರೆಯ ಪರಿಸ್ಥಿತಿಯೂ ನಮಗೆಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಆದರೆ ಕೇಂದ್ರ ಸರ್ಕಾರದವರು ವಿಶೇಷವಾಗಿ

ಎಸ್.ಸಿ/ಎಸ್.ಟಿ ಯವರಿಗೆ ಕೊಡುವಂತಹ ಹಣ ಏನಿದೆ, ಅದು ಹೆಚ್ಚಿನ ಪ್ರಮಾಣದಲ್ಲಿ ಕೊಡುವುದಕ್ಕೆ ಅವರಲ್ಲಿ ಹಣವಿದೆ. ಆ ರೀತಿಯಲ್ಲಿ ಅದನ್ನು ಪಡೆದುಕೊಳ್ಳುವುದಕ್ಕೆ ತಾವು ಯೋಚನೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಕೊಟ್ಟಿರುವಂತಹ ಸಲಹೆ ಚೆನ್ನಾಗಿದೆ. ನಾವು ಸಹ ಮಾನ್ಯ ಗೋಪಾಲರೆಡ್ಡಿಯವರ ಹತ್ತಿರ, 10ನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಮಾತುಕತೆಗಳನ್ನು ಮಾಡುವಂತಹ ಸಂದರ್ಭದಲ್ಲಿ ಇಂತಹ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಇದುವರೆಗೂ ಈ ವಿಚಾರಗಳಿಗೆ ಏನು ಜವಾಬ್ ಬಂದಿಲ್ಲ. ಈಗ ಮತ್ತೊಮ್ಮೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವುದರಿಂದ, ನಾನು ಮತ್ತೊಮ್ಮೆ ಸರ್ಕಾರದೊಡನೆ ಮಾತುಕತೆ ಮಾಡಿ, ಅವಕಾಶಗಳು ಇದ್ದರೆ, ನಮ್ಮ ಸರ್ಕಾರ ಮುಂದಾಗುತ್ತದೆ. ಮತ್ತೆ ಮಾನ್ಯ ಸದಸ್ಯರು ಏನಾದರೂ ಆಕ್ಟಿವಿಟೀಸ್ ಮಾಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಇಲಾಖಾ ಮುಖ್ಯಸ್ಥರೊಡನೆ ಮಾತನಾಡಿ. ಏನಾದರೂ ಮಾಡುವುದಕ್ಕೆ ಸಾಧ್ಯವೇ, ಎಂಬುದನ್ನು ಖಂಡಿತವಾಗಿ ನೋಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗ ಏನು ಉತ್ತರವನ್ನು ಕೊಡುತ್ತಿದ್ದಾರೆ. ಅದೆಲ್ಲಿ ಎಷ್ಟೋ ಅಂಬೇಡ್ಕರ್ ಭವನಗಳು ಅರ್ಧಂಬರ್ಧವಾಗಿ ಮುರ್‍ನಾಕು ವರ್ಷಗಳಾಗಿವೆ. ಅದಕ್ಕೆ ಇನ್ನೂ ಹಣವನ್ನು ಕೊಡುವಂತಹ ಪ್ರಯತ್ನವನ್ನು ಮಾಡಿಲ್ಲ. ಮತ್ತೆ ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಪ್ರಸ್ತಾಪ ಮಾಡಿದಂತಹ ವಿನ್ಯಾಸದ ಬಗ್ಗೆ ಅಂದರೆ ನೂರು ಜನರಾದರೂ ಕುಳಿತುಕೊಂಡು ಡಾ: ಅಂಬೇಡ್ಕರ್‌ರವರ ಜೀವನ ಚರಿತ್ರೆಯ ಬಗ್ಗೆ, ಅವರ ಅಧ್ಯಯನದ ಬಗ್ಗೆ, ಅವರು ಮಾಡಿರುವಂತಹ ಸಾಧನೆಯ ಬಗ್ಗೆ, ಒಂದು ಸಣ್ಣ ಗ್ರಂಥಾಲಯವನ್ನು ಮಾಡಿದರೆ ಉಪಯೋಗವಾಗುತ್ತದೆ. ಇವತ್ತು ಈ ಅಂಬೇಡ್ಕರ್ ಭವನಗಳನ್ನು ನಾನು ಬೇರೆ ತಾಲ್ಲೂಕುಗಳಲ್ಲಿ ನೋಡಿದ್ದೇನೆ. ಅವು ಏನೂ ಉಪಯೋಗಕ್ಕೆ ಬರುತ್ತಿಲ್ಲ. ಅದಕ್ಕೆ ನಿಗದಿ ಮಾಡಿರುವಂತಹ ಹಣವನ್ನು ಇಟ್ಟಿದ್ದಾರೆ. ಅದನ್ನು ಹೆಚ್ಚು ಮಾಡಿ, ಅದರ ವಿನ್ಯಾಸವನ್ನು ಬದಲು ಮಾಡಬೇಕೆಂದು, ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಈ ಅಂಬೇಡ್ಕರ್ ಭನವನದ ಬಗ್ಗೆ ನನ್ನ ಸಲಹೆ ಏನೆಂದರೆ, ಈಗ ಸರ್ಕಾರ ಏನು ತಾಲ್ಲೂಕುವಾರು 5 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದನ್ನು ಜಿಲ್ಲಾವಾರು ಹೆಚ್ಚಿಸುವಂಥಾದ್ದು ಮಾಡಿದರೆ ಹೇಗೆ? ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಹೇಳಿದ ಹಾಗೆ ಅಲ್ಲಿ ಏನಾದರೂ ಆಕ್ಟಿವಿಟೀಸ್‌ಗಳನ್ನು ಮಾಡಿದರೆ ಅನುಕೂಲ. ಸುಮ್ಮನೆ ನಾವು ಏನೋ, ಒಂದು ಕೋಣೆಯನ್ನು ಕಟ್ಟಿಸಿಬಿಟ್ಟರೆ, ಆಗುವುದಿಲ್ಲ. ಮತ್ತೆ ಮಾನ್ಯ ಮಂತ್ರಿಯವರು ಬಹಳ ಉತ್ಸುಕತೆಯಿಂದ ಇದ್ದಾರೆ. ಅದುದರಿಂದ ಇದನ್ನು ಜಿಲ್ಲಾ ಮಟ್ಟದಲ್ಲಿ ಹೆಚ್ಚಿಸುವಂಥಾದ್ದು ಏನಾದರೂ ಮಾಡುತ್ತಾರೆಯೇ ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಬಯಸುತ್ತೇನೆ.

ಶ್ರೀ ರೇವುನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲೂ ಕಮಲಾಪುರದಲ್ಲಿ ಒಂದು ಡಾ: ಅಂಬೇಡ್ಕರ್ ಭವನವನ್ನು ಐದು ಲಕ್ಷ ರೂಪಾಯಿಗಳಲ್ಲಿ ಕಟ್ಟಿಸಿದ್ದೇವೆ. ಅದು ಅರ್ಧಕ್ಕೆ ನಿಂತಿದೆ. ಇದರ ಜೊತೆಯಲ್ಲಿ ವಿ.ಕೆ ಸಲಗರ್‌ಕ್ಕೊಂದು ಅಂಬೇಡ್ಕರ್ ಭವನಕ್ಕೆ ಐದು ಲಕ್ಷ ರೂಪಾಯಿಗಳು ಸ್ಯಾಂಕ್ಷನ್ ಆಗಿದೆ. ನಾವು ಇದರ ಬಗ್ಗೆ ಸಾಕಷ್ಟು ಒತ್ತಾಯವನ್ನು ಮಾಡಿದ್ದೇವೆ.

ಕಳೆದ ಮಾರ್ಚ್ ತಿಂಗಳಲ್ಲಿ ಇದನ್ನು ಮುಗಿಸುತ್ತೇವೆಂದು ಈ ಸಭೆಯಲ್ಲೇ ಉತ್ತರವನ್ನು ಕೊಟ್ಟಿದ್ದಾರೆ. ನಾವು ಈ ವಿಚಾರವಾಗಿ ನಾವು ಸಂಬಂಧಪಟ್ಟಂತಹ ಅಧಿಕಾರಿಗಳಿಗೆ, ಜೆ.ಇ.ಗಳು, ಮತ್ತೆ ಸಂಬಂಧಪಟ್ಟಂತಹ ಕಂಟ್ರಾಕ್ಟ್‌ದಾರರು ಯಾರಿದ್ದಾರೆ. ಅವರನ್ನು ಒತ್ತಾಯ ಮಾಡಿದರೂ ಇಲ್ಲಿಯವರೆಗೂ ಕೆಲಸವನ್ನು ಮುಗಿಸಿಲ್ಲ. ಅದನ್ನು ಲೂಟಿ ಮಾಡಿದ್ದಾರೆ. ಇದನ್ನು ಯಾವಾಗ ಮುಗಿಸುತ್ತಾರೆ?

ಶ್ರೀ ವಿ. **ಪಾಪಣ್ಣ** : ಮಾನ್ಯ ಸಭಾಧ್ಯಕ್ಷರೆ, ಈ ಅಂಬೇಡ್ಕರ್ ಭವನಕ್ಕೆ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿರುವಂಥಾದ್ದು ಸರಿ. ಆದರೆ ಇದನ್ನು ಈಗ ಲ್ಯಾಂಡ್ ಅರ್ಮಿಯವರಿಗೆ ಕೊಟ್ಟಿದ್ದಾರೆ. ಇದನ್ನು ಇವರಿಗೆ ಕೊಟ್ಟು ಒಂದು ವರ್ಷವಾಗಿದೆ. ಈಗ ಇವರು ಏನು ಹೇಳುತ್ತಿದ್ದಾರೆಂದರೆ, ಸುಮಾರು ಇವರು 20, 25 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿಕೊಂಡು, ಇವರು ನಮಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಮಾತ್ರ ನಾವು ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿ, ಈಗ ಸರ್ಕಾರ ಕೊಟ್ಟಿರುವಂತಹ ಐದು ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡು ಸುಮ್ಮನೆ ಇದ್ದಾರೆ ಅವರು ಏನು ಹೇಳುತ್ತಾರೆಂದರೆ, ಲೋಕಲ್ ಆಗಿ ಕಾಂಟ್ರಿಬ್ಯೂಶನ್ ಕಲೆಕ್ಟ್ ಮಾಡಿ ನಾವು ಕಟ್ಟಿಕೊಡುತ್ತೇವೆಂದು, ಹೇಳಿದರೂ ಕೂಡ ಲ್ಯಾಂಡ್ ಆರ್ಮಿಯವರು ಒಪ್ಪುತ್ತಾ ಇಲ್ಲ. ಆದುದರಿಂದ ಈ ಐದು ಲಕ್ಷ ರೂಪಾಯಿಗಳು ಏನಿದೆ. ಅದರಲ್ಲಿ ಕೆಲಸವನ್ನು ಪ್ರಾರಂಭ ಮಾಡಲಿ, ಸರ್ಕಾರದವರು ಏನು ಹೇಳುತ್ತಾರೆಂದರೆ, ಎಲ್ಲಾ ಕಡೆಗಳಲ್ಲಿ ಕೆಲಸಗಳು ಅರ್ಧಕ್ಕೆ ನಿಲ್ಲುತ್ತಿದೆ. ಅದಕ್ಕೋಸ್ಕರ ಈ 25 ಲಕ್ಷ ರೂಪಾಯಿಗಳು ಕೊಡುವ ತನಕ ಕೆಲಸವನ್ನು ಪ್ರಾರಂಭ ಮಾಡುವುದು ಬೇಡವೆಂದು ಸರ್ಕಾರದವರು ಸೂಚನೆಯನ್ನು ಕೊಟ್ಟಿದ್ದಾರೆ, ಅದುದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರವನ್ನು ನೀಡಬೇಕೆಂದು ಕೇಳುತ್ತೇನೆ.

ಶ್ರೀ ಎ. **ಕೃಷ್ಣಪ್ಪ** : ಮಾನ್ಯ ಅಧ್ಯಕ್ಷರೆ, ಈ ವಿಚಾರವಾಗಿ ಹತ್ತಾರು ಪ್ರಶ್ನೆಗಳು ಇಲ್ಲಿ ಬಂದಿವೆ. ಮಾನ್ಯ ಕೃಷ್ಣಮೂರ್ತಿಯವರು ಹೇಳಿರುವಂಥಾದ್ದಕ್ಕೆ ನಾವು 34 ಭವನಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಯಾವುದನ್ನೂ ಬಾಕಿ ಇಟ್ಟುಕೊಂಡಿಲ್ಲ. ಜಿಲ್ಲಾ ಮಟ್ಟದಲ್ಲಿ ದೊಡ್ಡದಾಗಿ ಕಟ್ಟುವಂಥದ್ದಕ್ಕೂ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ಮತ್ತೊಬ್ಬ ಮಾನ್ಯ ಸದಸ್ಯರು ಜಿಲ್ಲಾ ಮಟ್ಟದ ಬಗ್ಗೆ ಪ್ರಸ್ತಾಪ ಮಾಡಿದರು. ಅದಕ್ಕೂ ನಾವು 10 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈ ಹಣವನ್ನು ಕೊಡುತ್ತಿರುವಂಥಾದ್ದು it is an incentive. ಡಾ: ಅಂಬೇಡ್ಕರ್‌ರವರ ಆಚಾರ, ವಿಚಾರಗಳು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಇರಲಿ, ಎಂದು ಮಾಡಿರುವಂಥಾದ್ದು, ಹಾಗೆಂದ ಮಾತ್ರಕ್ಕೆ ಎಲ್ಲವನ್ನೂ ಸರ್ಕಾರ ಮಾಡುವುದಕ್ಕೆ ಸಾಧ್ಯತೆಗಳು ಇವೆಯೆಂದು, ಮಾನ್ಯ ಸದಸ್ಯರುಗಳು ಭಾವಿಸಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇಲ್ಲಿ ಎಂಎಲ್‌ಎ, ಎಂಪಿ ಗ್ರಾಂಟ್ಸ್, ಮತ್ತೆ ಲೋಕಲ್ ಫಂಡ್ಸ್ ಎಲ್ಲವನ್ನೂ ಕ್ರೋಢೀಕರಿಸಿ, ಇನ್ನಷ್ಟು ಅಲ್ಲಿ ಅಡಿಷನಲ್ ಫೆಸಿಲಿಟೀಸ್ ಮಾಡಬಹುದು. ನಾವು ಕೊಡುವಂತಹ ಹಣದ ವಿಚಾರ ಏನಿದೆ, ಅದನ್ನು ಹೆಚ್ಚು ಮಾಡುವಂತಹ ವಿಚಾರ ಸಧ್ಯಕ್ಕೆ ಸರ್ಕಾರದ ಮುಂದಿಲ್ಲ.

ಶ್ರೀ **ಕೆ.ಎಂ. ಕೃಷ್ಣಮೂರ್ತಿ** : ಮಾನ್ಯ ಅಧ್ಯಕ್ಷರೆ, ವಿಶೇಷ ಘಟಕ ಹಣದಲ್ಲಿಯಾದರೂ ಕೊಡುವಂತೆ ಮಾನ್ಯ ಮಂತ್ರಿಯವರು ಒಂದು ಸರ್ಕಾರೀ ಆದೇಶವನ್ನು ಮಾಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಕಮಲಾಪುರದ್ದು ಅರ್ಥವಾಗಿದೆ.

ಅಧ್ಯಕ್ಷರು : ಅವರು ಮಾಡುತ್ತಾರೆ, ಬಿಡಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಈಗ ಕಮಲಾಪುರದ್ದು ಇರಬಹುದು. ಮತ್ತೆ ಮಾನ್ಯ ಕೃಷ್ಣಮೂರ್ತಿಯವರು ಹೇಳಿದಂಥಾದ್ದು ಇರಬಹುದು. ಅದು ಏನು ಸ್ಪೆಸಿಫಿಕ್ ಇಷ್ಯೂ ಇದೆ. ಅದನ್ನು ನನಗೆ ಕೊಡಲಿ, ಇಮ್ಮೀಡಿಯಟ್ ಆಗಿ ನಾನು ಅಟೆಂಡ್ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ಮೊದಲನೆಯದಾಗಿ ಶಾಸಕರುಗಳಿಗೆ ಹೊಸ ಅಂಬೇಡ್ಕರ್ ಭವನಕ್ಕೆ ಆಯ್ಕೆ ಮಾಡುವಂತಹ ವಿಚಾರವನ್ನು ಬಜೆಟ್‌ನಲ್ಲಿ ತಿಳಿಸಿದ್ದೀರಿ, ದಯವಿಟ್ಟು ಇಲ್ಲಿ ಮಾನ್ಯ ಶಾಸಕರುಗಳು ಕೊಡುವಂತಹ ಶಿಫಾರಸ್ಸುಗಳ ಆಧಾರದ ಮೇಲೆ, ಆ ಸ್ಥಳವನ್ನೇ ಆಯ್ಕೆ ಮಾಡಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಈ ನಮ್ಮ ಮಲೆನಾಡು ಜಿಲ್ಲೆಗಳಲ್ಲಿ ತಾಲ್ಲೂಕುಗಳ ಸಂಖ್ಯೆ ಜಾಸ್ತಿ ಇದೆ. ನಮ್ಮ ಜಿಲ್ಲೆಯಲ್ಲಿ 11 ತಾಲ್ಲೂಕುಗಳು, 6 ವಿಧಾನ ಸಭಾ ಕ್ಷೇತ್ರ, ಈ ರೀತಿ ಇರುವುದರಿಂದ ತಾಲ್ಲೂಕುಗಳಿಗೆ ಒಂದು ಅಂಬೇಡ್ಕರ್ ಭವನವನ್ನು ಕೊಡಲೇಬೇಕು. ಆ ರೀತಿಯಲ್ಲಿ ಸರ್ಕಾರ ನಮ್ಮ ಈ ಮಲೆನಾಡು ಪ್ರದೇಶಗಳಿಗೆ ವಿಶೇಷವಾದ ಆದ್ಯತೆಯ ಮೇಲೆ ತಾಲ್ಲೂಕಿಗೆ ಒಂದು ಅಂಬೇಡ್ಕರ್ ಭವನವನ್ನು ಕೊಡುವಂತೆ ಯೋಚನೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎರಡು ವಿಚಾರಗಳನ್ನು ಹೇಳಿದ್ದಾರೆ. ಒಂದು ಭವನಕ್ಕೆ ಜಾಗವನ್ನು ಗುರುತು ಮಾಡುವಂತಹ ಅವಕಾಶ ಎಂಎಲ್‌ಎಗಳಿಗೆ ಇರಬೇಕೆಂದು ಹೇಳಿದ್ದಾರೆ. ಈಗ ಸಾಧಾರಣವಾಗಿ ಅದನ್ನೇ ಮಾಡಿಕೊಂಡು ಬಂದಿರುವಂಥಾದ್ದು. ಅವರಿಗೆ ಬೇಕಾದರೆ ಒಂದು ಸ್ಪೆಷಲ್ ಇನ್‌ಸ್ಟ್ರಕ್ಷನ್ ಇವರು ಹೇಳಿದಂತಹ ಜಾಗದಲ್ಲೇ ಮಾಡಿ, ಎಂದು ಆದೇಶವನ್ನು ನಾಳೆಯೇ ಅಧಿಕಾರಿಗಳಿಗೆ ಕೊಡೋಣ.

ಶ್ರೀ ಎಂ. ಚಂದ್ರಪ್ಪ : ಜನರಲ್ಲಾಗಿ ಹೇಳಿ,

ಶ್ರೀ ಎ. ಕೃಷ್ಣಪ್ಪ : ನಾನು ಜನರಲ್ಲಾಗಿ ಹೇಳಿರುವುದು.

ಅಧ್ಯಕ್ಷರು : ಎಲ್ಲರಿಗೂ ಅಪ್ಲೈ ಆಗುತ್ತದೆ ತಾವು ಕುಳಿತುಕೊಳ್ಳಿ.

ಶ್ರೀ ಎ. ಕೃಷ್ಣಪ್ಪ : ಎಲ್ಲರಿಗೂ ಜನರಲ್ಲಾಗಿ ಅದೇ ಇರುವುದು, ಮಾನ್ಯ ಸದಸ್ಯರು ಏನೋ ಅನುಮಾನದಲ್ಲಿ ಹೇಳುತ್ತಿದ್ದಾರೆ. ಅದಕ್ಕೆ ಹೇಳಿದೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿರುವಂತಹ ವಿಚಾರವನ್ನು ನಾನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟವರಿಗೆ ನಾನು ಸೂಚನೆಯನ್ನು ಕೊಡುತ್ತೇನೆ.

ತುರುವೇಕೆರೆ ತಾಲ್ಲೂಕು ಬ್ಯಾಲಹಳ್ಳಿ ಗೇಟ್ ಅಥವಾ ಗಿರನಹಳ್ಳಿಯಲ್ಲಿ ಪಶು ಚಿಕಿತ್ಸಾ ಕೇಂದ್ರಗಳ ಪ್ರಾರಂಭ

541 (4764) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ವಡವನಗಟ್ಟ ಪಂಚಾಯ್ತಿ ಅಥವಾ ಬ್ಯಾಲಹಳ್ಳಿ ಗೇಟ್ ಹಾಗೂ ಸಂಪಿಗೆ ಪಂಚಾಯ್ತಿಯ ಗಿರೆನಹಳ್ಳಿ ಗ್ರಾಮದಲ್ಲಿ ಪಶುಚಿಕಿತ್ಸಾ ಆಸ್ಪತ್ರೆಗಳನ್ನು ತೆರೆಯಲು ಜನರಿಂದ ಅರ್ಜಿಗಳು ಬಂದಿದೆಯೇ;

ಆ) ಅರ್ಜಿಗಳು ಬರದಿದ್ದರೂ ಇಲ್ಲಿ ಆಸ್ಪತ್ರೆ ತೆರೆಯಲು ತುಂಬಾ ಅವಶ್ಯಕತೆ ಇದ್ದು, ಜಾನುವಾರುಗಳಿಗೆ ತೊಂದರೆಯಾಗಿರುವುದು ಸರ್ಕಾರ ಗಮನಿಸಿಲ್ಲವೇ;

ಇ) ಹಾಗಿದ್ದಲ್ಲಿ, ಈ ವರ್ಷ ಈ ಎರಡು ಗ್ರಾಮಗಳಿಗೆ ಪಶುಆಸ್ಪತ್ರೆ ಮಂಜೂರು ಮಾಡಲಾಗುವುದೇ;

ಈ) ಯಾವಾಗ ಮಾಡಲಾಗುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಬಂದಿದೆ.

ಆ) 1997ರ ಜಾನುವಾರುಗಣತಿ ಪ್ರಕಾರ ತುರುವೇಕೆರೆ ತಾಲ್ಲೂಕಿನ ವಡವನಗಟ್ಟ ಪಂಚಾಯತ್ ಅಥವಾ ಬ್ಯಾಲಹಳ್ಳಿ ಗೇಟ್ ಮತ್ತು ಸಂಪಿಗೆ ಪಂಚಾಯತ್‌ನ ಗಿರೆನಹಳ್ಳಿಯಲ್ಲಿ ಕ್ರಮವಾಗಿ 467, 561 ಮತ್ತು 367 ಜಾನುವಾರು ಘಟಕಗಳು ಇರುತ್ತವೆ. ಆದ್ದರಿಂದ ಜಾನುವಾರುಗಳ ಸಂಖ್ಯೆ ಕಡಿಮೆ ಇರುವುದರಿಂದ ಪಶುವೈದ್ಯ ಸಂಸ್ಥೆ ತೆರೆಯಲು ಕ್ರಮ ಕೈಕೊಂಡಿರುವುದಿಲ್ಲ.

ಇ) ಹೊಸ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡುವ ಕಾರ್ಯಕ್ರಮವಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೆ ಮಾನ್ಯ ಮಂತ್ರಿಗಳು ಉತ್ತರ ಒದಗಿಸಿದ್ದಾರೆ. ಕಳೆದ 10–12 ವರ್ಷಗಳಿಂದಲೂ ಕೆಲವು ಹಳ್ಳಿಗಳಿಗೆ ಪಶು ಆಸ್ಪತ್ರೆಗಳನ್ನು ಕೊಡಬೇಕೆಂಬ ಮನವಿಯನ್ನು ನಾವು ಸದನದಲ್ಲಿ ಪ್ರಸ್ತಾಪ ಮಾಡುತ್ತಲೇ, ಇದ್ದೇವೆ. ಮಾನ್ಯ ಮಂತ್ರಿಯವರು ಇಲ್ಲ. ಅವಶ್ಯಕತೆ ಇರುವುದಿಲ್ಲ. ಮಾಡುವುದಕ್ಕೆ ಆಗುವುದಿಲ್ಲವೆನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಈ ವಿಚಾರವನ್ನು ನಾವು ಬರಗಾಲದ ಬಗ್ಗೆ ಮಾತನಾಡುವಾಗಲೂ ಹೇಳಿದ್ದೇವೆ. ಜಾನುವಾರುಗಳನ್ನು ಬೇರೆ ಕಡೆಗಳಿಗೆ ತೆಗೆದುಕೊಂಡು ಹೋಗಬೇಕಾದಂತಹ ವಿಚಾರವನ್ನು ನಾನು ಈಗಾಗಲೇ ಹೇಳಿದ್ದೇನೆ. ಈಗ ನಾನು ಯಾವ ಭಾಗಗಳಲ್ಲಿ ಅವಶ್ಯಕತೆ ಇದೆಯೆಂದು ಕೇಳಿದ್ದೇನೆ. ಅವು ವಡವನಗಟ್ಟ, ಬ್ಯಾಲಹಳ್ಳಿ ಹಾಗೂ ಸಂಪಿಗೆ ಪಂಚಾಯ್ತಿಯ ಗಿರೆನಹಳ್ಳಿಯಲ್ಲಿ ಕೇಳಿದ್ದೇನೆ. ಇವೂ ಅಲ್ಲದೇ ಕಣತೂರ್, ಗೋಣಿ ತುಮಕೂರು, ಇಲ್ಲಿ ಪ್ರಮುಖವಾಗಿ ಬೇಕಾಗಿರುವಂತಹ ಪಶು ಆಸ್ಪತ್ರೆಗಳು, ನಾನು ಮಾನ್ಯ ಮಂತ್ರಿಯವರಲ್ಲೂ ಸಹ ಪರ್ಸೋನಲ್ ಆಗಿ ಈ ವಿಚಾರವನ್ನು ಮಾತನಾಡಿದ್ದೇನೆ. ದಯಮಾಡಿ ಆಸ್ಪತ್ರೆಗಳನ್ನು ಕೂಡಲೇ ಬೇಕೆಂದು ಕೇಳಿದ್ದೇನೆ. ಅನೇಕ ಕಡೆಗಳಲ್ಲಿ ಬಹಳ ಹಿಂಸೆಯಾಗಿದೆ. 10–12 ಕಿ.ಲೋ ಮೀಟರ್ ಆ ಜಾನುವಾರುಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಅವುಗಳಿಗೆ ಚಿಕಿತ್ಸೆ ಮಾಡಲಿಕ್ಕೆ ಹಿಂಸೆಯಾಗುತ್ತದೆ. ಅದಕ್ಕೋಸ್ಕರವಾದರೂ ವಿಶೇಷವಾಗಿ ಈ ಹಳ್ಳಿಗಳಿಗೆ ಪಶು ಚಿಕಿತ್ಸಾ ಕೇಂದ್ರಗಳನ್ನು ಮಾಡಿಕೊಡಬೇಕೆಂದು ನಾನು ಆಗ್ರಹಪಡಿಸುತ್ತೇನೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಈಗ ಸದ್ಯದಲ್ಲಿ ಹೊಸ ಆಸ್ಪತ್ರೆಗಳನ್ನು ತೆಗೆಯುವಂತಹ ಉದ್ದೇಶ ಸರ್ಕಾರಕ್ಕೆ ಇಲ್ಲ. ಈಗಾಗಲೇ ಸಾಕಷ್ಟು ಸಂಸ್ಥೆಗಳು ಇವೆ. ಅದಕ್ಕೆ ಸಿಬ್ಬಂದಿಗಳ ಕೊರತೆ ಇದೆ. ಆದುದರಿಂದ ಹೊಸ ಆಸ್ಪತ್ರೆಗಳನ್ನು ತೆರೆಯುವಂತಹ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ ನಾವು ಈಗಾಗಲೇ ಸುಮಾರು 747 ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಿದ್ದೇವೆ ಈಗ ಮತ್ತೆ 200 ಚಿಕಿತ್ಸಾ ಕೇಂದ್ರಗಳನ್ನು ತಕ್ಷಣದಲ್ಲೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮತ್ತೆ 250 ಡಾಕ್ಟರ್‌ಗಳನ್ನು ನೇಮಕ ಮಾಡುವುದಕ್ಕೆ ಸರ್ಕಾರ ಆದೇಶವನ್ನು

ಕೊಡುತ್ತಿದೆ. ಇದನ್ನು ರೋಸ್ಟರ್ ಕಂ ಮೇರಿಟ್ ಆಧಾರದ ಮೇಲೆ ಅವರನ್ನು ಸೆಲೆಕ್ಷನ್ ಮಾಡುತ್ತೇವೆ. ಈಗ ಹೊಸ ಆಸ್ಪತ್ರೆಗಳನ್ನು ತೆಗೆಯುವಂತಹ ವಿಚಾರ ಸರ್ಕಾರದ ಮುಂದೆ ಇಲ್ಲ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಸುಮಾರು 747 ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಿರುವಂತಹ, ವಿಚಾರವನ್ನು ತಿಳಿಸಿದ್ದಾರೆ. ಈಗ ಇರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುತ್ತೀರಿ, ಆಸ್ಪತ್ರೆ ಇಲ್ಲದೆ ಇರುವಂತಹ ಗ್ರಾಮಗಳಿಗೆ ಹೊಸ ಆಸ್ಪತ್ರೆಯನ್ನು ಕೊಡಿ, ಇಲ್ಲದಿದ್ದರೆ ಒಂದು ಮೊಬೈಲ್ ಯೂನಿಟ್ ಅನ್ನು ಆದರೂ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಅಲ್ಲಿರುವ ಜಾನುವಾರುಗಳಿಗೆ ಏನು ಮಾಡಬೇಕು? ಇರತಕ್ಕ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುತ್ತೀರಿ, ಆದರೆ 10–12 ಕಿ.ಲೋ ಮೀಟರ್ ಜಾನುವಾರುಗಳು ಹೋಗಿ ಚಿಕಿತ್ಸೆ ಪಡೆಯುವುದಕ್ಕೆ ಕಷ್ಟವಾಗುತ್ತದೆ. ಅದು ಆಗಲಿಲ್ಲವೆಂದರೆ ಮೊಬೈಲ್ ಯೂನಿಟ್ ಆದರೂ ಕೊಟ್ಟು ಆ ಗ್ರಾಮಗಳಿಗೆ ಅನುಕೂಲ ಮಾಡಿಕೊಡಬೇಕು.

ಶ್ರೀ ಎಂ. ಮಹದೇವ್ : ಅವಶ್ಯಕತೆ ಇರುವ ಆಸ್ಪತ್ರೆಗಳಿಗೆ ನಾವು ಮೊಬೈಲ್ ಯುನಿಟ್‌ಗಳನ್ನು ಕೊಡುವುದಕ್ಕೆ ನಾನು ಆದೇಶವನ್ನು ಕೊಟ್ಟಿದ್ದೇನೆ.

ಹಿಂದುಳಿದ ಜಾತಿಗಳನ್ನು ಎಸ್‌ಸಿ/ಎಸ್‌ಟಿಗೆ ಸೇರಿಸುವುದು

542 (4917) : ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಕೆಲವು ಹಿಂದುಳಿದ ಜಾತಿ ಜನಾಂಗಗಳನ್ನು ಗುರುತಿಸಿ ಪ್ರವರ್ಗ 1 ಅಥವಾ ಎಸ್‌ಸಿ:ಎಸ್‌ಟಿ ಗೆ ಸೇರಿಸಲು ಸರ್ಕಾರ ಶಿಫಾರಸ್ಸು ಮಾಡಲು ಯೋಜಿಸಿದೆಯೇ; ಅವು ಯಾವುವು;

ಆ) ಇಂತಹ ಬೇಡಿಕೆಗಳು ಬಂದ ಜಾತಿಗಳು ಯಾವುವು;

ಇ) ಹಿಂದುಳಿಗ ಜಾತಿಗಳಲ್ಲಿಯ ಅತ್ಯಲ್ಪ ಪ್ರಮಾಣದಲ್ಲಿರುವ (ಕೇವಲ 5 ಲಕ್ಷಕ್ಕೂ ಕಡಿಮೆ ಜನಸಂಖ್ಯೆ ಹೊಂದಿರುವ ಉದಾ: ಮಡಿವಾಳ, ಕುಂಬಾರ, ಬೆಸ್ತರು, ಗಾಣಿಗ ಇನ್ನಿತರೆ ಜಾತಿಗಳವರನ್ನು ಗುರುತಿಸಿ ಪ್ರತ್ಯೇಕ ಗುಂಪಾಗಿ ಪರಿಗಣಿಸಿ ಪ್ರತ್ಯೇಕ ಗುಂಪಾಗಿ ಪರಿಗಣಿಸಿ ಪ್ರತ್ಯೇಕ ಗುಂಪಾಗಿ ಪರಿಗಣಿಸಿ ಪ್ರತ್ಯೇಕ ಮೀಸಲಾತಿ ನೀಡುವ ವಿಚಾರ ಸರ್ಕಾರದ ಮುಂದಿದೆಯೇ;

ಈ) ಈ ಹಿಂದೆ ಶಾಶ್ವತ ಆಯೋಗವು ಶಿಫಾರಸ್ಸು ಕೂಡ ಮಾಡಿದ್ದು ನಿಜವೇ; ಹಾಗಿದ್ದಲ್ಲಿ, ಏಕೆ ಸರ್ಕಾರ ಪರಿಗಣಿಸಲಿಲ್ಲ.

ಉ) ಮುಂದುವರೆದ ಜಾತಿಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕುರಿತು ಸರ್ಕಾರ ಯಾವ ಚಿಂತನೆ ನಡೆಸಿದೆ; (ವಿವರ ನೀಡುವುದು)

ಊ) ತುಂಬಾ ಕಡಿಮೆ ಸಂಖ್ಯೆಯಲ್ಲಿರುವ ಜನಾಂಗಗಳನ್ನು ಪ್ರತ್ಯೇಕಿಸಲು ಇರುವ ತೊಂದರೆಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಪ್ರೊ. ರವಿವರ್ಮಕುಮಾರ್ ರವರ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನನ್ವಯ ಸರ್ಕಾರವು ಈಗಾಗಲೇ 16 ಜಾತಿಗಳನ್ನು ಪ್ರವರ್ಗ–1ರಲ್ಲಿ ಸೇರಿಸಿ, ದಿನಾಂಕ: 30.3.2002ರಂದು ಆದೇಶ ಹೊರಡಿಸಿದೆ.

ಆ) 47 ಹಿಂದುಳಿದ ಜಾತಿಯ ಗುಂಪುಗಳಿಂದ ತಮ್ಮನ್ನು ಪ್ರವರ್ಗ-1ರಲ್ಲಿ ಸೇರಿಸಲು ಮತ್ತು 214 ಹಿಂದುಳಿದ ಜಾತಿಯ ಗುಂಪುಗಳಿಂದ ತಮ್ಮನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಸೇರಿಸಲು ಮನವಿಗಳು ಸಂಬಂಧಿಸಿದ ಆಯೋಗಗಳ ಮುಂದೆ ಬಾಕಿ ಇರುತ್ತವೆ. ಪಟ್ಟಿಯನ್ನು ಅನುಬಂಧ-1 ಮತ್ತು ಅನುಬಂಧ-2ರಲ್ಲಿ ಲಗತ್ತಿಸಿದೆ.

ಇ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಈ) ಇಲ್ಲ.

ಉ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಊ) ಸಂಬಂಧಿಸಿದ ಜಾತಿ/ವರ್ಗಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಾನಮಾನಗಳ ಬಗ್ಗೆ ವ್ಯಾಪಕವಾದ ಸಮೀಕ್ಷೆಯನ್ನು ನಡೆಸದೆ ನಿರ್ಣಯ ತೆಗೆದುಕೊಳ್ಳುವುದು ಕಷ್ಟಕರವಾಗಿರುತ್ತದೆ.

ಅನುಬಂಧ - 1

ಪ್ರವರ್ಗ-1ರಲ್ಲಿ ಸೇರಿಸಲು ಬಂದಿರುವ ಮನವಿಗಳು

ಕ್ರಮ ಸಂಖ್ಯೆ	ಜಾತಿಗಳು
1.	ಅರಸು
2.	ಅನ್ಸಾರಿ
3.	ಅರಬ್ ಚಾವೂಸ್
4.	ಬಾಗವಾನ್
5.	ಚಾರೋಡಿ ಮೇಸ್ತ
6.	ಬಿಲ್ಲವ
7.	ದೇವಾಂಗ
8.	ದರವೇಶ್
9.	ದಾಲ್ಜಿ (ಮುಸ್ಲಿಂ)
10.	ಧನಗರ್
11.	ದೈವಜ್ಞ ಬ್ರಾಹ್ಮಣ
12.	ಹಟಗಾರ
13.	ಹಂಡೆ ವಜೀರ್
14.	ಹೂಗಾರ : ಗುರವ : ಜೀರ : ಪೂಜಾರ
15.	ಹಳವ
16.	ಜೋಗಿ
17.	ಜಟ್ಟಿ
18.	ಕ್ಷತ್ರೀಯ ಮರಾಠ:ಮರಾಠ
19.	ಲಾಳಗೊಂಡ
20.	ಖಲೀಫಾ

21. ಕಮ್ಮಾರ
22. ಖಾಡಿಕ್:ಕಲಾಲ:ಕಲಾಲ ಖಾಟಿಕ್
23. ಲಿಂಗಾಯಿತ ಕುಂಬಾರ
24. ಮಡಿವಾಳ
25. ಮುಸ್ಲಿಂ
26. ಮೇದ:ಮೇದರ
27. ಮಾಳವಯಾನ್
28. ನಾಮದೇವ ಶಿಂಪಿ
29. ನಾಮಧಾರಿ
30. ಪರಿವಾರ ಬಂಟ್
31. ರಾಮ ಕ್ಷತ್ರೀಯ
32. ರಾಜಪೂತ
33. ಶಿವಸಿಂಪಿ
34. ಸಾದು ಶೆಟ್ಟಿ : 24 ಮನೆ ತೆಲುಗುಶೆಟ್ಟಿ
35. ತೆಲುಗು ಬಣಜಿಗ
36. ವಿಶ್ವಕರ್ಮ
37. ವಾಳ್ಯಾಳ:ಪಿಳ್ಳೆ
38. ವೈಶ್ಯವಾಣಿ
39. ವೀರಶೈವ ಹಡಪದ
40. ಯಾದವ:ಗೊಲ್ಲ
41. ಆದಿಬಣಜಿಗ
42. ಕರಕರಮುಂಡಿ
43. ಕನ್ನಡಗೌಡ
44. ಗಾಣಿಗ
45. ಕುಂಬಾರ
46. ಕುರುಬ:ಹಾಲುಮತ
47. ಮೂಲ್ಯ ರಯಾನಿ

ಅನುಬಂಧ - 2

ಪ್ರಶ್ನೆ ಸಂಖ್ಯೆ: 4917 ಕ್ಕೆ

ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗಗಳ ಜಾತಿ ಪಟ್ಟಿಗೆ ಸೇರಿಸಲು ಮನವಿ ಸಲ್ಲಿಸಿರುವ ಜಾತಿಗಳು

ಪರಿಶಿಷ್ಟ ಜಾತಿ:

ದೊಂಬಿ ದಾಸ, ಗೊಲ್ಲದಾಸ, ಹಾಡದಾಸ, ಬೇಡದಾಸ, ತಿರುಮಲದಾಸ, ಹಣ್ಣು ದಾಸ ಎರತಾರಿದ್ದಾಸ, ಕಾಶಿದಾಸ, ಕೋಲೋಬಸವ ದಾಸ.

ಆದಿದಾಶರು, ಲಾಡರ್ ಮೊಂಡ, ಮೊಂಡರು, ಮೊಂಡಿಗ, ಮೊಂಡಿ, ಸವಿತಾ (ನಾವಿಹ) ಲಿಂಗವಂತ ಹಡಪದ.

ಕ್ಷೌರಿಕ, ಗಾಲೆತ್ತಿ, ಕೆಂಬಟ್ಟಿ, ಮಕಾನದಾರ್ ಮತ್ತು ಫಕೀರ, ದೇವಳ್ಳಿ, ಬಾಂದಿ ಕಲಾವಂತ, ಮಲೆಯ, ಮಣ್ಣು ವಡ್ಡರ್, ಕಲ್ಲುವಡ್ಡರ್, ಗಿರಣಿ ವಡ್ಡರ್ ಗಾರಿವಡ್ಡರ್, ದರವೇಶ್ ರಾವತ್ ಜನಾಂಗ, ಕೊರಬೋ, ಬೇಡ ಜಂಗಾಲ, ಶಿಕ್ಕಲಗಾರ, ಜಂಗಮ, ಗೋಸಾವಿ, ಗೋಸರಗಿ ಬಾರೋಡಿ (ಮೇಸ್ತ್ರಾ) ಜಾತಿಗೇರ, ಮೊಗೇರ, ಉಪ್ಪಮ, ವಣ್ಣನೆ (ಬಣ್ಣ) ಆದಿವಾಸಿ, ಪಾರಥಿ(ಧೋಬಿ)

ಹಡಪದ ಕ್ಷೌರಿಕ, ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗ, ಶಿಳ್ಳೇಕ್ಯಾತ, ಕಿಳೇಕ್ಯಾತ, ಕಿಳ್ಳೇಕ್ಷೇತ್ರ ನಾಯಿಂದ.

ಪರಿಶಿಷ್ಟ ವರ್ಗ :

ಸಿದ್ದಿ, ಗೌಳಿ, ಧನಗರಗೌಳಿ, ಗುರುವ್ವ, ಹೂಗಾರ ಜೇರ ಮತ್ತು ಪೂಜಾರ, ಕಾಡುಕುರುಬ ಜೇನುಕುರುಬ, ಗೊಂಡ, ರಾಜಗೊಂಡ, ಹಾಲುಮತ ದನಗರ ಕುರುಬ.

ಸಿಗ್ಗ, ಕಾಡುಸಿದ್ಧರು, ಗೊರವಯ್ಯ, ಗುರಿಕಾಂ, ಓಲೆಕಾರ

ಬೆಡ್ಡಕುರುಬ, ಮಣಿಯರು, ಘಂಜರಿಯವರು, ಕೆಂಬಟ್ಟಿ, ಕುಟುಬು, ಕಟಿಬರ, ಕಮ್ಮಾರ, ರಜಪೂತ, ಪಿಂಜಾರ, ನಡಾಫ್, ಪರಿವಾರ ಬಂಟ್(ನಾಯ್ಕ) ಗಂಗಡಕಾರನಾಯ್ಕ, ಕುಂಚೆ ಗೊಲ್ಲರು, ಶೂದ್ರ, ಮರಾಠಿ ಬಿಲ್ ಕ್ಷತ್ರೀಯ, ಕುಡುಬಿ, ದೊಂಬಿದಾಸರು, ಶೂದ್ರ, ಜಟ್ಟಿ, ಸಂಚಾರಿ, ಕಾಡುಗೊಲ್ಲ, ಹಟ್ಟಿಗೊಲ್ಲ, ಕೋಯ, ರಾಜಭೋಯಿ, ಕೊಂಕಣಮರಾಠಿ, ಪಾರ್ಥಿ, ಹರಣಶಿಕಾರಿ, ಪಾರ್ಥಿ ಹೆಗ್ಗಡೆ, ಪಂಜರಬಾಟ, ಮುಸ್ಲಿಂ ಪಂಡರ, ಜಂಗಾಲು, ಲಾಳಗೊಂಡ, ಮಡಿವಾಳ, ಆದಿಬಾಜಿಗ, ತೆಲಗುಗೌಡ, ನಾಖುದಾ, ಮೀನುಗಾರ, ಚೆನ್ನದಾಸರ್, ಯಾದವ, ಬೆಸ್ತ, ಕುಂಬಾರ, ಕುಣುಬೆ, ಕಣಿಯನ್, ಕಣಿಯರ್, ನಾಥಪಂಥಿ ಜೋಗಿ, ತಳವಾರ ಭಾವಸಾರ ಕ್ಷತ್ರೀಯ, ಮರಾಠಿ, ಪರಿವಾರ ಮತ್ತು ತಳವಾರ ಮಲ್ಯಾರ, ಯಾನೆ ಖಲಾಲರ, ಕಾಟಿಕ್, ಖಾಟಿಕ್, ಸೂರ್ಯವಂಶ ಕ್ಷತ್ರೀಯ, ಸೂರ್ಯಕ್ಷತ್ರೀಯ, ಕಡುಗ, ಕಫಾಯಿ, ಹಿಂದುಕಲಾಲ್, ಲಾಡವಂಶಿ, ಕೊಂಕಣ, ಕೊಕ್ಕಿ, ಸಿದ್ಧಿ, ಕುರುಬ, ಗೋಂದಳಿ, ಕಟಿಕ, ಲಂಬಾಣಿ, ಬಂಜಾರ, ಪಾರಿಧಿ, ವಾನ್ಸೆ ನರಸಣ್ಣ, ಲಾಡರ್, ಮೇದಾ, ಮೇದಾರ, ಮೇದರಿ, ಗೌರಿಗೆ, ಬುರುಡ, ಬುಡ್ಡರ ಗಂಗ ಕಾಮತ, ಹೋಳಿ, ಟೋಕ್ರೆ, ಕೋಳಿ, ಕೋಳಿಡೋರ, ಕೋಯೆ, ತಳವಾರ, ಕಬ್ಬಲಿಗ, ಅಂಬಿಗ, ಸುಣಗಾರ, ಬೆಸ್ತ, ಕಬ್ಬೇರ್, ಬೆಸ್ತರು, ಗಂಗೆಕುಲ, ಗಂಗೆಮಕ್ಕಳು, ಬಾರಿಕೋರಬಾರ್ಕಿ, ಕುಸುಬಿ, ಹಾಲಕ್ಕಿ ವಕ್ಕಲು, ಕಚವಾಗಲಿ, ಹಾವಾಡಿಗ, ಹಾವಗಾರ ಹೂಗಾರ್, ಮಕನದಾರ, (ದರವೇಶ), ಪಕೀರ) ಹೆಳವರು.

ಒಕ್ಕಲಿಗರು, ಲಾಡರ, ಗೋಂದಳಿ, ವೀರಜಾತಿ, ಮೀನುಗಾರ, ಖಾರ್ವಿ, ಗಂಗಾಕುಲ, ಗೌರಿ ಮತ, ಅಂಬಿಗ, ಕಬ್ಬಲಿಗ, ಕಬ್ಬರ್, ಕಬ್ಬೇರ್, ಕಾರ್ವಿ, ಭೋಯಿ, ಭೋಯ್, ಬೋಯಿ, ತೊರೆಯ, ಗಬ್ಬಿಟ್, ಗೋಬಿಟ್, ದಾವತ್, ಗಂಗಮತ, ಗಂಗೆಮಕ್ಕಳು, ಅಂಬಿಗ್, ಬೆಸ್ತ, ಕೋಲಿ, ಹರಕಾಂತ್ರ, ಕಾಂತ್ರ, ಹರಿಕಾಂತ್ರ, ಮೀನುಗಾರ, ಖರಿಯ, ಸಿವಿಯರ್, ಪರಿವಾರ, ಬುಂಡಬೆಸ್ತರ್, ಮಹಾದೇವ ಕೋಲಿ, ತಳವಾರ, ಮಚಲಕಹಾರ್, ಮೊಗವೀರ, ಸುಣ್ಣಗಾರ್, ಬರ್ಕಿ, ಬೆಸ್ತರ್, ಸೂರ್ಯವಂಶಿಕೋಲಿ, ಜಲಗಾರ್, ಮಚೀಗಬಿತ್, ಗಪೀತ್, ದಾಲಿಜ, ಹಸಲರು, ಹಸ್ಲರು, ಆದಿವಾಸಿ, ಧೋಬಿ, ಕುಡುಬಿ.

ಶ್ರೀ ಎಸ್.ಎ. ರವೀಂದ್ರನಾಥ್ : ಸನ್ಮಾನ್ಯ ಅಧ್ಯಕ್ಷರೆ, ಎಸ್‌ಸಿ:ಎಸ್‌ಟಿ ಜನರಿಗಿಂತ ಕಷ್ಟದಲ್ಲಿರುವ ಜನರು ಹಳ್ಳಿಗಳಲ್ಲಿ ಮಡಿವಾಳರು, ಬೆಸ್ತರು, ಕುಂಬಾರರು, ಹೀಗೆ ಸಣ್ಣಸಣ್ಣ ಜನ ಬಹಳ ತುಳಿತಕ್ಕೆ ಒಳಪಟ್ಟಿದ್ದಾರೆ. ಅವರನ್ನು ಕೂಡ ಎಸ್‌ಸಿ:ಎಸ್‌ಟಿ ಪಟ್ಟಿಗೆ ಸೇರಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೆ, ಅವರ ಕೋರಿಕೆಯನ್ನು ಮನ್ನಿಸುವ ವಿಚಾರ ಬರವಣಿಗೆಯಲ್ಲಿ ಸಂಘಸಂಸ್ಥೆಗಳಿಂದ ಆ ಪ್ರದೇಶದ ಜನ ಹಾಗೂ ಜನಪ್ರತಿನಿಧಿಗಳಿಂದ ಬಂದಾಗ ಸಂಬಂಧಪಟ್ಟ ಆಯೋಗಕ್ಕೆ ಕಳುಹಿಸುತ್ತೇವೆ. ಅದು ಸರ್ವೆ ಮಾಡಿ ತನ್ನ ಆಗುಹೋಗುಗಳನ್ನು ಅದರಲ್ಲಿ ಅಳವಡಿಸಿ ಸರ್ಕಾರಕ್ಕೆ ಬರುತ್ತದೆ. ಸರ್ಕಾರ ಮಂತ್ರಿಮಂಡಲದಲ್ಲಿಟ್ಟು ತೀರ್ಮಾನ ಮಾಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಎಸ್‌ಸಿ:ಎಸ್‌ಟಿ ಪಟ್ಟಿಯಲ್ಲಿ ಯಾವ್ಯಾವ ಜನಾಂಗವನ್ನು ಸೇರಿಸಬೇಕೆನ್ನುವ ಪ್ರಸ್ತಾವನೆ ಈಗಾಗಲೇ ಬಂದಿದೆ ಎಂದು ತಾವು ಹೇಳಿದ್ದೀರಿ. ಅದರಲ್ಲಿ ಕ್ಷೌರಿಕ, ಮಡಿವಾಳ ಮೇದಾರ, ಕೋಳಿಸಮಾಜ, ಇವೆಲ್ಲಾ ಪಟ್ಟಿಯಲ್ಲಿ ಬಂದಿರುವುದನ್ನು ನೋಡಿದ್ದೇವೆ. ಇವತ್ತು ಮಡಿವಾಳ ಸಮಾಜದ ಬಗ್ಗೆ ಹೇಳಬೇಕಾದರೆ ಈಗಾಗಲೇ ರಾಜಸ್ಥಾನ್, ಗುಜರಾತ್, ಉತ್ತರಪ್ರದೇಶ ಈ ಮೂರು ರಾಜ್ಯಗಳಲ್ಲಿ ಎಸ್‌ಸಿ:ಎಸ್‌ಟಿ ಪಟ್ಟಿಯಲ್ಲಿ ಸೇರಿಸಿದ್ದಾರೆ. ಮೇದಾರ ಜನಾಂಗವನ್ನು ಸೇರಿಸಿದ್ದಾರೆ ಹೀಗಾಗಿ ಆದಷ್ಟು ಬೇಗ ನಿರ್ಣಯವನ್ನು ತೆಗೆದುಕೊಂಡರೆ, ಆ ಜನಾಂಗಕ್ಕೆ ಅನುಕೂಲವಾಗುತ್ತದೆ ಸೌಲಭ್ಯಗಳು ಸಿಗುವುದಕ್ಕೆ ಸಾಧ್ಯವಿದೆ ಇಂತಹದ್ದರಲ್ಲಿ ತೀವ್ರಗತಿಯಲ್ಲಿ ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕು. ನಿರ್ದಿಷ್ಟವಾಗಿ ಮಡಿವಾಳ ಸಮಾಜವಿರಬಹುದು. ಮೇದಾರ ಕೋಳಿ ಸಮಾಜದವರಿರಬಹುದು. ಕ್ಷೌರಿಕ ಸಮಾಜದವರಿರಬಹುದು. ಇನ್ನು ಬೇಕಾದಷ್ಟು ಇದ್ದಾವೆ. ಕೂಡಲೇ ಇವರನ್ನು ಪಟ್ಟಿಯಲ್ಲಿ ಸೇರಿಸುವ ಅವಶ್ಯಕತೆ ಇದೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು, ಈ ಕ್ಷೌರಿಕ, ಗಾಲತ್ತಿ, ಕೆಂಬಟ್ಟಿ, ಮುಗ್ದಾರ್ ಮತ್ತು ಪಕೀರ ಈ ಹಲವಾರು ಜಾತಿಗಳ ವಿಚಾರದಲ್ಲಿ ಏನು ಅನುಕಂಪದ ಮಾತುಗಳನ್ನು ಹೇಳಿದ್ದಾರೆ. ಅದು ಈಗಾಗಲೇ ಸರ್ಕಾರದ ಗಮನದಲ್ಲಿದೆ. ಎಸ್‌ಸಿ:ಎಸ್‌ಟಿ ಆಯೋಗಕ್ಕೆ ನಾಮಿನೇಟ್ ಮಾಡಿ ಕಾರ್ಯಾರಂಭ ಮಾಡುವುದಕ್ಕೆ ಸ್ವಲ್ಪ ತಡವಾಗಿತ್ತು. ಈಗ ಸದಸ್ಯರನ್ನು ನೇಮಕ ಮಾಡಿ ರೂಲ್ಸ್ ಫ್ರೇಂ ಮಾಡಿಕೊಟ್ಟಿದ್ದೇವೆ. ಜರೂರಾಗಿ ಮಾಡಲಿಕ್ಕೆ ತಮ್ಮ ಮಾತನ್ನು ಕಮಿಷನ್‌ಗೆ ನಾನು ಖಂಡಿತ ತಿಳಿಸುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಸಭಾಧ್ಯಕ್ಷರೆ, ವಿಶೇಷವಾಗಿ ಹಳೆ ಮೈಸೂರು ಪ್ರಾಂತ್ಯದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪರಿವಾರ ಮತ್ತು ತಳವಾರ ಜಾತಿಯ ಹೆಸರನ್ನು 20 ವರ್ಷಗಳ ಹಿಂದೆಯೇ ಸರ್ಕಾರ ಕಳುಹಿಸಿಕೊಟ್ಟಿತು. ತಾವು ಹೆಸರನ್ನು ಕಳುಹಿಸಿಕೊಟ್ಟಿರುವುದನ್ನು ನೋಡಿದೆವು. ಆದರೆ ಪ್ರಮುಖವಾಗಿ ಈ ಜನಾಂಗವನ್ನು ಏಕೆ ಪರಿಶಿಷ್ಟವರ್ಗಕ್ಕೆ ಸೇರಿಸಬೇಕೆಂದು ಮಾಹಿತಿ ಕೊಡುವ ಕೆಲಸ ರಾಜ್ಯ ಸರ್ಕಾರದಿಂದಾಗಲಿಲ್ಲ. ಇದಕ್ಕೆ ಬೇಕಾಗಿರುವ ಸಾಮಾಜಿಕ ಆರ್ಥಿಕ ಶಿಕ್ಷಣ ಆ ಹಿನ್ನೆಲೆ, ಹಾಗೂ ಸೆಂಟ್ರಲ್ ಅರ್ಕಿಯಾಲಜಿಯಲ್ಲಿ ಇದಕ್ಕೆ ಸಂಬಂಧಿಸಿದ ಮಾಹಿತಿಗಳೇನಿವೆ ಎನ್ನುವುದನ್ನು ಸಂಪೂರ್ಣವಾಗಿ ಕೊಟ್ಟಿಲ್ಲವೆಂದು ತಿರಸ್ಕರಿಸಿದ್ದಾರೆ. ವಿಶೇಷವಾಗಿ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿರುವ ನಾಯಕ ಸಮಾಜಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಕಳುಹಿಸುವುದಕ್ಕೆ

ಕೇಂದ್ರ ಸರ್ಕಾರ ಕೇಳಿದೆ ಅದನ್ನು ಕಳುಹಿಸಿಕೊಡುವಂತಹ ಕೆಲಸ ಏನು ಮಾಡುತ್ತಿದ್ದೀರೆನ್ನುವುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಬಗ್ಗೆ ಹೇಳಿದ್ದಾರೆ. ಕಡತಗಳನ್ನು ತರಿಸಿಕೊಂಡು ನಮ್ಮಲ್ಲೇನಾದರೂ ನ್ಯೂನ್ಯತೆಗಳಿದ್ದರೆ ಅದನ್ನು ಸರಿ ಮಾಡಿ ಜರೂರಾಗಿ ಕೇಂದ್ರ ಸರ್ಕಾರಕ್ಕೆ ರವಾನೆ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಸ್ಪಷ್ಟವಾಗಿದೆ. ಮಾನ್ಯ ಮಂತ್ರಿಗಳು ತಿಳಿಸಬೇಕು. ಎಸ್‌ಸಿ:ಎಸ್‌ಟಿಗಳನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಯಾವಾಗ ಪರವಾನಿಗೆಯನ್ನು ಕೊಟ್ಟಿದೆ? ಇದು ನಮಗೆ ಅರ್ಥವಾಗದಿರುವ ಪ್ರಶ್ನೆ. ಇವರಿಗೆ ಪರವಾನಗಿ ಅಧಿಕಾರವಿಲ್ಲ. ಎಸ್‌ಸಿ:ಎಸ್‌ಟಿ ಪಟ್ಟಿಯಲ್ಲಿ ಸೇರಿಸುವುದಕ್ಕೆ ಇವರು ಶಿಫಾರಸ್ಸು ಮಾಡಬಹುದು. ಇವರು ಸರಿಯಾದ ಉತ್ತರವನ್ನು ಕೊಟ್ಟಿಲ್ಲ, ಪ್ರವರ್ಗ 1ಕ್ಕೆ ಸೇರಿಸುವುದಕ್ಕೆ ನಿಮಗೆ ಹಕ್ಕಿದೆ ಮಾಡಿದ್ದೇನೆಂದು ಹೇಳಿದ್ದೀರಿ. ಸಂತೋಷದ ವಿಚಾರ; ಕೆಲವು ವರ್ಗಗಳಿಗೆ ಮಾಡಬೇಕು ಮಾಡಿ ಆದರೆ ಎಸ್‌ಸಿ:ಎಸ್‌ಟಿಗೆ ತಮ್ಮ ಉತ್ತರವಿಲ್ಲ. ಆದುದರಿಂದ ಕೇಂದ್ರ ಸರ್ಕಾರಕ್ಕೆ ಎಸ್‌ಸಿ:ಎಸ್‌ಟಿ ಪಟ್ಟಿಯಲ್ಲಿ ಸೇರಿಸುವುದಕ್ಕೆ ಯಾವುದಾದರೂ ಜಾತಿಗಳನ್ನು ಶಿಫಾರಸ್ಸು ಮಾಡಿದ್ದೀರಾ? ಎರಡನೆಯದಾಗಿ ಪ್ರಮುಖವಾಗಿ ಇರುವುದು, ಮಾನ್ಯ ಕಾಗೋಡು ತಿಮ್ಮಪ್ಪನವರು ಸಮಾಜ ಕಲ್ಯಾಣ ಮಂತ್ರಿಗಳಾಗಿದ್ದಾಗ, ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಬಂದ ಮೇಲೆ ಒಂದು ಸಮಿತಿಯನ್ನು ರಚನೆ ಮಾಡಿದ್ದೀರಿ. ಅದರಲ್ಲಿ ನಾಲ್ಕೈದು ಜನ ಶಾಸಕರಿದ್ದಾರೆ. ನಾನೂ ಕೂಡ ಒಬ್ಬ ಸದಸ್ಯನಾಗಿದ್ದೇನೆ. ಕಳೆದ ಎರಡು ವರ್ಷಗಳಿಂದ ಆ ಸಮಿತಿಯ ಸಭೆ ನಡೆದಿಲ್ಲ. ಏತಕ್ಕೆ ಆ ಸಭೆ ನಡೆಸಿಲ್ಲವೆನ್ನುವುದು ಅರ್ಥವಾಗುತ್ತಿಲ್ಲ. ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಕಮಿಷನ್‌ಗೆ ಅಧ್ಯಕ್ಷರಾಗಿದ್ದಾರೆಂದು ಕಾಣುತ್ತದೆ. ತಾವು ಮಂತ್ರಿಗಳಾದ ಮೇಲೆ ಒಂದು ಸಾರಿಯು ಆ ಸಭೆ ಕರೆದಂತೆ ಕಾಣುತ್ತಿಲ್ಲ. ದಯವಿಟ್ಟು ಸಭೆಯನ್ನು ಬೇಗ ಕರೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ಎಸ್‌ಸಿಗೆ ಶೇಕಡ 15 ಎಸ್‌ಟಿಗೆ ಶೇಕಡ 3 ರಷ್ಟು ಮೀಸಲಾತಿ ಇದೆ. 50 ವರ್ಷಗಳಲ್ಲಿ ಎಷ್ಟು ಮೀಸಲಾತಿ ಇಟ್ಟಿದ್ದರು ಈವಾಗಲೂ ಅದೇ ಇದೆ. ಶೇಕಡ 3 ರಷ್ಟು ಮೀಸಲಾತಿ ಇರುವ ಜನರೇನು ಗುಡ್ಡಗಾಡಿನಲ್ಲಿ ಗಿರಿಜನರು ವಾಸ ಮಾಡುತ್ತಿದ್ದರು. ಅವರು ಎಲ್ಲಿ ಹೋದರೋ ಗೊತ್ತಾಗುತ್ತಿಲ್ಲ. ಆ ಎಸ್‌ಟಿಯವರು ಹರಿಯುವ ನೀರು ಬಂದು ನಿಂತಿದ್ದನ್ನು ತಳ್ಳುತ್ತಿದ್ದಂತೆ ಯಾರ್‍ಯಾರೋ ಬಂದು ಸೇರಿ ಕೊಳ್ಳುತ್ತಿದ್ದಾರೆ. ನಿಜವಾದ ಎಸ್‌ಸಿ:ಎಸ್‌ಟಿಗಳಿಗೆ ಮೊದಲಿನಿಂದೇನು ಮೀಸಲಾತಿ ಇತ್ತು. ಹೊಸದಾಗಿ ಸೇರಿಸಬೇಕಾದರೆ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚು ಮಾಡುವ ಪ್ರಸ್ತಾವನೆಯನ್ನು ಏನಾದರೂ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೀರಾ ಅಥವಾ ಅಲ್ಲಿಗೆ ರಿಸ್ಟ್ರಿಕ್ಟ್ ಮಾಡುತ್ತೀರಾ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಸಿಂಧ್ಯಾರವರು ಎಸ್‌ಸಿ:ಎಸ್‌ಟಿ ಪಟ್ಟಿಗೆ ಸೇರಿಸುವುದರಲ್ಲಿ ನಾವು ರೆಕಮೆಂಡಿಮಗ್ ಅಥಾರಿಟಿ ಮೊಗೇರ ಮತ್ತು ಇನ್ನುಳಿದ ಎರಡು ಮೂರು ಜಾತಿಗಳದ್ದು ಕಳುಹಿಸಿದ್ದೇವೆ. ಇನ್ನು ಕಂಪ್ಲೀಟ್ ಆಗಿ ಬಂದಿಲ್ಲ. ಸಮಿತಿಯ ಸಭೆ ನಡೆದಿಲ್ಲವೆಂದು ಕೇಳಿದ್ದೀರಿ. ಖಂಡಿತಾ ಆ ಸಭೆಯನ್ನು ಬೇಗ ಕರೆಯುತ್ತೇವೆ. ಮತ್ತೆ ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಮೀಸಲಾತಿ 15:3 ಏನಿದೆ ಇದರಲ್ಲಿ ಶೇಕಡ 3ರ ಬಗ್ಗೆ ಅವರು ಅನುಕಂಪದ

ಮಾತುಗಳನ್ನು ಹೇಳಿದ್ದಾರೆ. ಎಸ್‌ಸಿ:ಎಸ್‌ಟಿ ಜಾತಿಗೆ ಹೊಸದಾಗಿ ಸೇರಿಸುವ ಕೆಲಸ ನಮ್ಮ ಕೈಯಲ್ಲಿಲ್ಲ. ಪುರಾವೆಗಳನ್ನು ಸರಿ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ. ಆದರೆ ಒಂದು ಮಾತನ್ನು ಹೇಳುವುದಾದರೆ, ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ. ಮೀಸಲಾತಿ ಪ್ರಮಾಣ ಅಷ್ಟೆ ಇದೆ ಜನಸಂಖ್ಯೆ ಮಾತ್ರ ಹೆಚ್ಚಿದೆ ಆ ಜನಾಂಗದ ಕ್ಷೇಮ ಎಷ್ಟರಮಟ್ಟಿಗಾಗುತ್ತದೆಂದು ಹೇಳಿದ್ದಾರೆ. ಇದು ನೀತಿಗೆ ಸಂಬಂಧಿಸಿದ ವಿಷಯ ಅದರ ಬಗ್ಗೆ ಮಾತನಾಡುವುದೇನಾದರೂ ಇದ್ದರೆ ಆದಷ್ಟು ಬೇಗ ಮಾತನಾಡಿ ನಾನು ನಮ್ಮ ಹಿರಿಯ ಸದಸ್ಯರಿಗೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ಅದರಲ್ಲಿ ನಾನು ಕೂಡ ಸದಸ್ಯನಿದ್ದೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದೆರಡು ಸಾರಿ ಸಭೆ ಕರೆಯಿಸಿದ್ದರು. ಈಗ ತಾವು ಮಂತ್ರಿಗಳಾದ ಮೇಲೆ ನಿಲ್ಲಿಸಿದ್ದೀರಿ ಅಲ್ಲಿ ಚರ್ಚೆ ಮಾಡಿ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು, ಈಗ ನಾನು ಕೇಳಿದೆ, ಯಾವುದೇ ವಿಷಯ ಚರ್ಚೆಯಾಗದೆ ಕೆಲವು ಹೊಸ ಹೊಸ ಜಾತಿಗಳನ್ನು ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರೆಂದು ಗೊತ್ತಾಗಿದೆ ಯಾವ ಆಧಾರದ ಮೇಲೆ ಕಳುಹಿಸಿದ್ದೀರಿ? ಇದರ ಪರಿಣಾಮ ಏನಾಗುತ್ತದೆಂದು ಯೋಚನೆ ಮಾಡಿದ್ದೀರಾ? ಕಾಗೋಡುತಿಮ್ಮಪ್ಪನವರು ಮಾಡಿದ್ದಕ್ಕೂ ನೀವು ಮಾಡುವುದಕ್ಕೂ ಬಹಳ ವ್ಯತ್ಯಾಸ ಕಾಣಿಸುತ್ತಿದೆಯಲ್ಲಾ?

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೇ, ಆದಷ್ಟು ಬೇಗ ಸಭೆಯನ್ನು ಕರೆಯಿರಿ.

ಶ್ರೀ ಆರಗಜ್ಞಾನೇಂದ್ರ : ಮಾನ್ಯ ಸಭಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಮರಾಠಿ ಎನ್ನುವ ಒಂದು ಜನಾಂಗವಿದೆ, ದಕ್ಷಿಣ ಕನ್ನಡದಲ್ಲಿ ಇದು ಎಸ್‌ಟಿ ಎಂದು ಇದೆ. ಅವರಿಗೆ ಎಲ್ಲಾ ಸೌಲಭ್ಯಗಳು ಸಿಗುತ್ತಿವೆ. ಅದೇ ಜನಾಂಗದವರು ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಯಲ್ಲಿ ವಾಸಮಾಡುತ್ತಿದ್ದಾರೆ. ನಮ್ಮದು ಬಾರ್ಡರ್ ಆಗಿರುವುದರಿಂದ ಅವರೆಲ್ಲಾ ಮೈಗ್ರೇಟ್ ಆಗಿದ್ದಾರೆ. ಇಲ್ಲಿ ಅವರನ್ನು ಎಸ್‌ಟಿ ಎಂದು ಪರಿಗಣಿಸುತ್ತಿಲ್ಲ. ಆ ಜನಾಂಗ ಅತ್ಯಂತ ಕಡುಬಡವರು ಮತ್ತು ದಲಿತರಾಗಿರುವುದರಿಂದ ಆ ಜನಾಂಗದವರೇ ಮನವಿಕೊಟ್ಟು ಸೇರಿಸಬೇಕೆಂದು ಹೇಳಿ ನಾಲ್ಕು ವರ್ಷಗಳಾದವು, ತಾವು ಸಭೆ ಮಾಡಲಿಲ್ಲವೋ ಹೇಗೆ? ಸೇರಿಸುವುದಕ್ಕೆ ಶಿಫಾರಸ್ಸು ಮಾಡಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಲಿಲ್ಲ. ಬಾಯಿ ಬಾರದ ಜನಾಂಗ ಅವರು ಪದೇ ಪದೇ ಬೆಂಗಳೂರಿಗೆ ಬರುವುದಕ್ಕಾಗುವುದಿಲ್ಲ. ಅವರನ್ನು ಎಸ್‌ಟಿಗೆ ಸೇರಿಸಿ ಇವರಿಗೆ ತಾವು ಸಹಾಯ ಮಾಡಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಹಿರಿಯ ಸದಸ್ಯರು ಹೇಳಿದಂತೆ, ಇರುವ ಮೀಸಲಾತಿ ಪ್ರಮಾಣವನ್ನು ಹೆಚ್ಚು ಮಾಡದೆ ಎನ್‌ಕ್ರೋಚ್‌ಮೆಂಟ್ಸ್ ಆಗಿ ಆ ಜನಾಂಗದ ಅಭಿವೃದ್ಧಿ ಬಹಳ ಆತಂಕವಾಗಿದೆ ಎಂದು ಹೇಳಿದ್ದಾರೆ: ಆ ಪ್ರಮಾಣವನ್ನು ಈಗ ಹೆಚ್ಚು ಮಾಡಬೇಕು. ಮಾನ್ಯ ಸದಸ್ಯರು ಜ್ಞಾನೇಂದ್ರರವರು ಮರಾಠಿ ಜಾತಿಯವರನ್ನು ಸೇರಿಸಬೇಕೆಂದು ಹೇಳಿದರು. ಪ್ರತಿ ಜಿಲ್ಲೆಯಲ್ಲೂ ಕೂಡ ಕೆಲವು ಜಾತಿಗಳಿಗೆ ಅವಕಾಶ ಕೊಟ್ಟಿದ್ದೇವೆ. ಕೆಲವು ಜಾತಿಗಳು ಅರ್ಹರಲ್ಲವೆಂದು ಹಿಂದೆ ತೀರ್ಮಾನವಾಗಿದೆ. ಆದರೆ ಇವತ್ತೇನು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೀರಿ ಕಡತವನ್ನು ನಾನು ಪ್ರತ್ಯೇಕವಾಗಿ ತರಿಸಿಕೊಂಡು ನನ್ನ ಕಡೆಯಿಂದ ಮಾಡುವ ಕೆಲಸವಿದ್ದರೆ ಜರೂರಾಗಿ ಮಾಡಲಿಕ್ಕೆ ಹೇಳುತ್ತೇನೆ. ಹಿಂದೆ ಪರ್ಮನೆಂಟ್ ಎಸ್‌ಸಿ:ಎಸ್‌ಟಿ ಕಮಿಷನ್ ವರ್ಕ್ ಮಾಡುತ್ತಿರಲಿಲ್ಲ. ಈಗಾಗಲೇ ನಾನು ಸದನಕ್ಕೆ ತಿಳಿಸಿದಂತೆ ಸದಸ್ಯರ ನೇಮಕವಾಗಿದೆ. ಬೇಕಾದ ರೂಲ್ಸ್ ಕೂಡ ಮಾಡಿ ಕೊಟ್ಟಿದ್ದೇವೆ. ಈಗ ಅದಕ್ಕೆ ಒಳ್ಳೆಯ ಚಾಲನೆ ಸಿಗುತ್ತದೆ. ನಿಮ್ಮ ಕೇಸ್‌ಗೂ ಕೂಡ ಚಾಲನೆ ಸಿಗುವಂತೆ ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಕುಡುಬಿ ಎನ್ನುವ ಒಂದು ಜನಾಂಗವಿದೆ. ಅವರು ಕಾಡು ಪ್ರದೇಶದಲ್ಲಿ ವಾಸ ಮಾಡಿ ಜೀವನ ನಡೆಸುವಂಥವರು. ಅವರ ಜೀವನ ಶೈಲಿಯ ಬಗ್ಗೆ ನಾನು ಒಂದು ಕ್ಯಾಸೆಟ್ಟನ್ನು ಮಾಡಿ, ಅದರ ಸಿ.ಡಿ. ಯನ್ನು ಕಾಗೋಡು ತಿಮ್ಮಪ್ಪನವರು ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿದ್ದಾಗ ಕೊಟ್ಟಿದ್ದೆ. ಈಗ ಅದಕ್ಕೆ ತಾವು ಅಧ್ಯಕ್ಷರಾಗಿದ್ದೀರಿ ಮತ್ತು ಅದರ ಇಬ್ಬರು ಸದಸ್ಯರು ಇಲ್ಲೇ ಇದ್ದಾರೆ. ಆ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂಥಾದ್ದು ಬಹಳ ಅಗತ್ಯವಾಗಿದೆ. ಆದ್ದರಿಂದ ನಾನು ತಮ್ಮ ಮುಖೇನ, ಅದರ ಅಧ್ಯಕ್ಷರು ಮತ್ತು ಸದಸ್ಯರನ್ನು ಕೇಳಿಕೊಳ್ಳುವುದೇನೆಂದರೆ, ಈ ಬಾರಿ ಪ್ರಥಮ ಸಭೆಯಲ್ಲಿ ಅವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಶಿಫಾರಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ತಾವು ಕೊಟ್ಟಿರುವ ಸಲಹೆಯನ್ನು ಪರಿಶೀಲಿಸುತ್ತೇವೆ.

ಮಂಡ್ಯ ಜಿಲ್ಲೆಯಲ್ಲಿನ ಮೀನುಗಾರಿಕೆ ಚಟುವಟಿಕೆ

544 (4755) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಮತ್ಸ್ಯೋದ್ಯಮಕ್ಕೆ ಬಳಸಿಕೊಳ್ಳುತ್ತಿರುವ ಕೆರೆಗಳ ಸಂಖ್ಯೆ ಎಷ್ಟು?

ಆ) ಈ ಕೆರೆಗಳಲ್ಲಿ ಎಷ್ಟು ಕೆರೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಲಾಗಿದೆ?

ಇ) ರಾಜ್ಯದಲ್ಲಿ ಮೀನುಗಾರಿಕೆ ಮಹಾಮಂಡಲದ ಸ್ವಾಮ್ಯದಲ್ಲಿ ಇರುವ ಕೆರೆಗಳೆಷ್ಟು?

ಈ) ಮೀನುಗಾರಿಕೆಯಿಂದ ಮಂಡ್ಯ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ದೊರೆಕುತ್ತಿರುವ ಸಂಪನ್ಮೂಲದ ವಿಚಾರಗಳೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಮಂಡ್ಯ ಜಿಲ್ಲೆಯಲ್ಲಿ ಮತ್ಸ್ಯೋದ್ಯಮಕ್ಕೆ 396 ಕೆರೆಗಳನ್ನು ಬಳಸಿಕೊಳ್ಳಲಾಗುತ್ತಿದೆ.

ಆ) ಇವುಗಳಲ್ಲಿ 36 ಕೆರೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ಗುತ್ತಿಗೆ ಮೇರೆಗೆ ವಹಿಸಿಕೊಡಲಾಗಿದೆ.

ಇ) ರಾಜ್ಯದಲ್ಲಿ 79 ಕೆರೆಗಳು ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿ, ಮೈಸೂರು ಇವರ ಸ್ವಾಮ್ಯದಲ್ಲಿರುತ್ತವೆ.

ಈ) ಜಲಸಂಪನ್ಮೂಲಗಳೊಂದಿಗೆ ಉತ್ತಮ ತಳಿ ಮೀನುಮರಿ ಜೊತೆಗೆ ತಾಂತ್ರಿಕತೆ ಮಾಹಿತಿಯನ್ನು ನೀಡಲಾಗುತ್ತಿದೆ. ಗ್ರಾಮ ಪಂಚಾಯಿತಿಗಳು ಗುತ್ತಿಗೆಗೆ ಪಡೆದ ಕೆರೆಗಳಲ್ಲಿ ಹುಲ್ಲುಗೆಂಡೆ ಮೀನುಮರಿಗಳನ್ನು ಬಿಡಲು ಇಲಾಖಾ ವತಿಯಿಂದ ಖರೀದಿಸಿದಲ್ಲಿ, ಅವುಗಳ ಮೌಲ್ಯದ ಮೇಲೆ ಶೇ. 50 ರಷ್ಟು ಸಹಾಯಧನ ನೀಡಲಾಗುತ್ತಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಮತ್ಸ್ಯೋದ್ಯಮಕ್ಕೆ ಬಳಸಿಕೊಳ್ಳುತ್ತಿರುವ 396 ಕೆರೆಗಳಿದ್ದು, ಅವುಗಳಲ್ಲಿ 36 ಕೆರೆಗಳನ್ನು ಮಾತ್ರ ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಡಲಾಗಿದೆ ಎಂದು ತಿಳಿಸಿದ್ದಾರೆ. ಉಳಿದ 330 ಕೆರೆಗಳ ಪರಿಸ್ಥಿತಿಯೇನು? ಗ್ರಾಮ ಪಂಚಾಯಿತಿಗಳಿಗೆ ಮೀನುಗಾರಿಕೆಯಿಂದ ದೊರಕುತ್ತಿರುವ ಸಂಪನ್ಮೂಲಗಳ ಬಗ್ಗೆ ನನಗೆ ಇಲ್ಲಿ

ವಿವರಗಳನ್ನು ಒದಗಿಸಿಲ್ಲ. ಹಾಲಿ ಇರತಕ್ಕಂಥ ಕೆರೆಗಳಿಂದ ಗ್ರಾಮ ಪಂಚಾಯಿತಿಗಳಿಗೆ ಎಷ್ಟು ಆದಾಯ ಬರುತ್ತದೆ ಎನ್ನುವುದನ್ನು ನಾನು ಕೇಳಲು ಬಯಸುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಇಲಾಖಾ ವತಿಯಿಂದ 166 ಕೆರೆಗಳನ್ನು ನಡೆಸುತ್ತಿದ್ದೇವೆ. ಮತ್ತು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ 177 ಕೆರೆಗಳಿವೆ ಮತ್ತು ಸಣ್ಣ ಕೆರೆಗಳು ಸುಮಾರು 503 ಇದ್ದು, ಒಟ್ಟು 846 ಕೆರೆಗಳು ಮಂಡ್ಯ ಜಿಲ್ಲೆಯಲ್ಲಿವೆ. 36 ಕೆರೆಗಳನ್ನು ಗ್ರಾಮ ಪಂಚಾಯಿತಿಗಳ ಬೇಡಿಕೆಯ ಮೇರೆಗೆ ಅವುಗಳನ್ನು ಗುತ್ತಿಗೆಗೆ ಕೊಟ್ಟಿದ್ದೇವೆ. ಈ ಕೆರೆಗಳಿಂದ 24 ಗ್ರಾಮಪಂಚಾಯಿತಿಗಳಿಗೆ 4,80,824 ರೂಪಾಯಿಗಳ ಆದಾಯ ಸಿಕ್ಕಿದೆ. 2002–03ನೇ ಸಾಲಿನಲ್ಲಿ 396 ಕೆರೆಗಳನ್ನು ಮೀನು ಕೃಷಿಗೆ ಕೊಟ್ಟಿದ್ದರಿಂದ ನಮ್ಮ ಇಲಾಖೆಗೆ ಸುಮಾರು 19,55,000 ರೂಪಾಯಿಗಳ ಆದಾಯ ಸಿಕ್ಕಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಈ ಕೆರೆಗಳನ್ನು ಗುತ್ತಿಗೆಗೆ ಕೊಡುವುದರಲ್ಲಿ ವೃತ್ತಿಪರ ಮೀನುಗಾರರಿಗೆ ಆದ್ಯತೆ ಸಿಗುತ್ತಿಲ್ಲ. ವೃತ್ತಿಪರ ಮೀನುಗಾರರಿಗೆ ಕೆರೆಗಳನ್ನು ಕೊಡಲು ಸರ್ಕಾರ ಏನು ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಕೇಳಲು ಬಯಸುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ನಮ್ಮ ಇಲಾಖೆಯ ವತಿಯಿಂದ, ಆಯಾ ಜಿಲ್ಲೆಗಳಲ್ಲಿರುವ ಮೀನುಗಾರಿಕಾ ಸಹಕಾರಿ ಸಂಘಗಳಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು, ಮೂರು ವರ್ಷಗಳ ಗುತ್ತಿಗೆಗೆ ಕೊಡುತ್ತೇವೆ. ಎರಡನೇ ವರ್ಷಕ್ಕೆ ಮೊದಲನೇ ವರ್ಷಕ್ಕಿಂತ ಶೇಕಡಾ ಹತ್ತರಷ್ಟು ಜಾಸ್ತಿ ಮಾಡಿ ಕೊಡುವ ನಾರ್ಮ್ಸ್ ಇದೆ. ಈ ರೀತಿ ಯಾವ ಮೀನುಗಾರಿಕಾ ಸಹಕಾರಿ ಸಂಘಗಳವರು, ನಮಗೆ ಕೆರೆಗಳನ್ನು ಗುತ್ತಿಗೆಗೆ ಕೊಡಬೇಕು ಎಂದು ಅರ್ಜಿ ಸಲ್ಲಿಸುತ್ತಾರೆ. ಅವರಿಗೆ ಕೊಡುತ್ತೇವೆ. ಒಂದಕ್ಕಿಂತ ಹೆಚ್ಚು ಅರ್ಜಿಗಳಿದ್ದರೆ ಮಾತ್ರ ನಾವು ಟೆಂಡರ್ ಮುಖೇನ ಹರಾಜು ಮಾಡುತ್ತೇವೆ. ಹೀಗಾಗಿ ಅಂಥ ಮೀನುಗಾರಿಕಾ ಸಹಕಾರಿ ಸಂಘಗಳಿಗೆ ನಾವು ಪ್ರಥಮ ಆದ್ಯತೆಯನ್ನು ಕೊಡುತ್ತೇವೆ.

ಶ್ರೀ ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಬರದಿಂದ ಮೀನುಗಾರರಿಗೆ ಬಹಳ ತೊಂದರೆಯಾಗಿದೆ. ಅದಕ್ಕಾಗಿ ನಾನು ಮಾನ್ಯ ಸಚಿವರಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ಮಳೆಯಿಲ್ಲದೆ, ಕೆರೆಯಲ್ಲಿ ನೀರಿಲ್ಲದಿದ್ದುದ್ದರಿಂದ ಮೀನುಗಳು ಸತ್ತುಹೋದವು. ಆದ್ದರಿಂದ, ರೈತರಿಗೆ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಿದ್ದೀರಿ, ಅದೇ ರೀತಿಯ ಸೌಲಭ್ಯಗಳನ್ನೇನಾದರೂ ಅಂದರೆ ಅವರಿಗೆ ಕನ್‌ಸೆಷನ್ ಕೊಡುವಿರಾ ಎಂದು ಕೇಳುತ್ತೇನೆ. ಒಂದು ವರ್ಷದ ಗುತ್ತಿಗೆಯ ಹಣವನ್ನೂ ಕಟ್ಟಲು ಅವರಿಗೆ ಆಗುತ್ತಿಲ್ಲ. ಒಂದು ವರ್ಷದ ಹಣವನ್ನು ಮನ್ನಾ ಮಾಡಿ, ಮುಂದಿನ ವರ್ಷದ ಅವಧಿಗೆ ಲೀಸಿಗೆ ಕೊಡುವಿರಾ ಎಂದು ಮಾನ್ಯ ಸಚಿವರನ್ನು ತಮ್ಮ ಮುಖೇನ ಕೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ನಮ್ಮ ಇಲಾಖೆಯು ಈಗಾಗಲೇ 24 ಜಿಲ್ಲೆಗಳಲ್ಲಿ ಸರ್ವೆ ಮಾಡಿದ್ದು, ಯಾವಯಾವ ಜಿಲ್ಲೆಗಳಲ್ಲಿ ಇಂಥ ತೊಂದರೆಗಳನ್ನು ಮೀನುಗಾರರು ಎದುರಿಸುತ್ತಿದ್ದಾರೆ, ಯಾವಯಾವ ಜಿಲ್ಲೆಗಳಲ್ಲಿ ಒಳನಾಡು ಮೀನುಗಾರಿಕೆಗೆ ತೊಂದರೆಯಾಗಿದೆ ಎನ್ನುವ ಬಗ್ಗೆ ಒಂದು ರಿಪೋರ್ಟನ್ನು ಸಂಗ್ರಹಿಸಿ, ಸರ್ಕಾರಕ್ಕೆ ಕಳುಹಿಸಿ ಮೂರು ವರ್ಷದ ಗುತ್ತಿಗೆಯನ್ನು ನಾಲ್ಕು ವರ್ಷಗಳಿಗೆ ಮಾಡಲು ಮತ್ತು ಶೇಕಡಾ ಹತ್ತರಷ್ಟು ಫ್ರೀ ಮಾಡಿ ಕೊಡುವಂಥ ಕಾರ್ಯಕ್ರಮವನ್ನು ಈಗಾಗಲೇ ಹಾಕಿ ಕೊಂಡಿದ್ದೇವೆ.

ಸಕ್ಕರೆ ಕಾರ್ಖಾನೆಗಳು ರೈತರಿಗೆ ಬಾಕಿ ಸಂದಾಯ ಮಾಡಬೇಕಾಗಿರುವುದು

543 (4919) : ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ್) ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಯಾವ ಯಾವ ಸಕ್ಕರೆ ಕಾರ್ಖಾನೆಗಳು ರೈತರಿಗೆ ಬಾಕಿ ಸಂದಾಯ ಮಾಡಬೇಕಾಗಿರುತ್ತದೆ (ವಿವರಗಳನ್ನು ನೀಡುವುದು).

ಆ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು. (ವಿವರ ನೀಡುವುದು)

ಶ್ರೀ. ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಕಾರ್ಖಾನೆಗಳು ಕಬ್ಬು ಪೂರೈಸಿದ ರೈತರಿಗೆ ನೀಡಬೇಕಾಗಿರುವ ಬಾಕಿ ಮೊತ್ತದ ವಿವರ ಈ ಕೆಳಕಂಡಂತೆ ಇವೆ. (30.06.2003ಕ್ಕೆ ಇದ್ದಂತೆ.)

(ಕೋಟಿ ರೂ.ಗಳಲ್ಲಿ)

ಕ್ಷೇತ್ರ	ಪಾವತಿಸ ಬೇಕಾಗಿದ್ದ ಮೊತ್ತ	ಪಾವತಿಸ ಲಾದ ಮೊತ್ತ	ಉಳಿಕೆ	ಹಿಂದಿನ ವರ್ಷಗಳ ಬಾಕಿ	ಒಟ್ಟು ಬಾಕಿ
ಸಹಕಾರ	406.06	340.58	65.48	41.05	106.53
ಸಾರ್ವಜನಿಕ/ ಜಂಟಿ ಖಾಸಗಿ	119.95	101.95	18.00	1.10	19.10
	629.44	437.24	192.20	4.37	196.57
ಒಟ್ಟು	**1155.45**	**879.77**	**275.68**	**46.52**	**322.20**

ದಿನಾಂಕ 30.06.2003ರ ಅಂತ್ಯಕ್ಕೆ ಒಟ್ಟು ರೂ. 322.20 ಕೋಟಿ ಬಾಕಿ ಇರುತ್ತದೆ (ಕಾರ್ಖಾನೆವಾರು ಪಟ್ಟಿಯನ್ನು ಲಗತ್ತಿಸಿದೆ (ಅನುಬಂಧ-1)

ಆ) ಇತ್ತೀಚಿನ ದಿನಗಳಲ್ಲಿ ಸಕ್ಕರೆ ಬೆಲೆಯಲ್ಲಿನ ಕುಸಿತದಿಂದಾಗಿ ಸಕ್ಕರೆ ಉದ್ಯಮವು ತೀವ್ರ ತರವಾದ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದೆ. ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು 12.60 ಲಕ್ಷ ಟನ್ ಸಕ್ಕರೆ ದಾಸ್ತಾನಿದ್ದು ಇದರ ಅಂದಾಜು ಮೌಲ್ಯ ರೂ. 1400 ಕೋಟಿ ಆಗುತ್ತದೆ. ಈ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕೊಡಬೇಕಾದ ಒಟ್ಟು ಕಬ್ಬು ಬಿಲ್ಲಿನ ಬಾಕಿ ರೂ. 322.20 ಕೋಟಿ, ಕಾರ್ಖಾನೆಗಳ ಗೋದಾಮಿನಲ್ಲಿರುವ ಸಕ್ಕರೆ ಮೌಲ್ಯಕ್ಕೆ ತುಲನೆ ಮಾಡಿದರೆ ರೈತರಿಗೆ ಕೊಡಬೇಕಾದ ಕಬ್ಬಿನ ಬಿಲ್ಲಿನ ಬಾಕಿ ಪ್ರತಿಶತ 23 ರಷ್ಟು ಆಗುತ್ತದೆ. ಕೇಂದ್ರ ಸರ್ಕಾರದ ಆದೇಶದಂತೆ ಸಕ್ಕರೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಆದುದ್ದರಿಂದ ರೈತರ ಕಬ್ಬಿನ ಬಿಲ್ಲಿನ ಬಾಕಿ ಪೂರ್ತಿಯಾಗಿ ತೀರಿಸಲು ಸಾಧ್ಯವಾಗಿರುವುದಿಲ್ಲ.

2002-03ನೇ ಸಾಲಿಗೆ ಒಟ್ಟು ರೂ.1155.45 ಕೋಟಿ ಬಾಕಿ ಪಾವತಿ ಮಾಡಬೇಕಾಗಿದ್ದು ಇದರ ಪೈಕಿ ರೂ. 879.72 ಕೋಟಿ ಪಾವತಿ ಮಾಡಲಾಗಿದ್ದು ರೂ. 275.68 ಕೋಟಿ ಪಾವತಿಯಾಗಬೇಕಾಗಿದೆ. ಹಿಂದಿನ ವರ್ಷಗಳ ಬಾಕಿ ರೂ. 46.52 ಕೋಟಿ ಬಾಕಿ ಇರುತ್ತದೆ. ಆದರೆ ಕೆಲವೊಂದು ವರ್ಷಗಳ ಬಾಕಿ ರೂ. 46.52 ಕೋಟಿ ಬಾಕಿ ಇರುತ್ತದೆ. ಆದರೆ ಕೆಲವೊಂದು ಕಾರ್ಖಾನೆಗಳು ತಮ್ಮದೇ ಆದ ಹಣಕಾಸಿನ ಅಶಿಸ್ತಿನಿಂದಾಗಿ ಬಾಕಿ ಉಳಿಸಿಕೊಂಡಿವೆ. ಅಂತಹ

ಕಾರ್ಖಾನೆಗಳ ವಿರುದ್ಧ ಕಬ್ಬು (ನಿಯಂತ್ರಣ) ಆದೇಶ 1966ರ ಅನ್ವಯ ಕ್ರಮ ಜರುಗಿಸಲಾಗುತ್ತಿದೆ. ಕಬ್ಬು ಬೆಲೆ ಬಾಕಿ ತೀರಿಸಲು ಸರ್ಕಾರವು ಕೂಡ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು ಈ ದಿಸೆಯಲ್ಲಿ ತೀರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ 6 ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ರೂ. 34.72 ಕೋಟಿಗಳಷ್ಟು ಮೃದು ಸಾಲವನ್ನು ಮಂಜೂರು ಮಾಡಿ ರೈತರ ಕಬ್ಬು ಬೆಲೆ ಬಾಕಿ ತೀರಿಸುವಲ್ಲಿ ಸಹಾಯ ಮಾಡಿದೆ. ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕಾರ್ಖಾನೆಯ ಹೆಸರು	ಯಾವ ಸಾಲಿನಲ್ಲಿ ಬಿಡುಗಡೆಯಾಗಿದೆ	ಮೊತ್ತ ಕೋಟಿ ರೂ.ಗಳಲ್ಲಿ
1.	ಪಾಂಡವಪುರ	2001–02	
		2002–03	02.30
2.	ಕರ್ನಾಟಕ	2001–02	4.00
3.	ಶ್ರೀ ಶ್ರೀರಾಮ	2001–02	6.00
4.	ವಾಣಿವಿಲಾಸ	2001–02	5.00
5.	ಆಳಂದ	2000–01	
6.	ದಕ್ಷಿಣ ಕನ್ನಡ	2003–04	1.92
		2002–03	5.50
	ಒಟ್ಟು		34.72

Cane Price Payment Position
Sugar Season 2002-03
(Sugar Season - 01.10.02 to 30.09.03)

As on 30.6.03

Sl. No.	Name of the Sugar Factory	Can Purchased (In MTS)	Payable	Paid	Balance	2001-02 Season	2000-01 & Earlier Season	Total
1	2	3	4	5	6	7	8	9
	Co-op.Sector:							
1.	Bhadra	208142	1822	1272	550	197	-	747
2.	Bhagyalakshmi	28574	210	208	2	1417	-	1419
3.	Bidar	446760	2680	1924	756	-	-	756
4.	Dakshina Kannada	56796	385	138	247	-	-	247
5.	Doodhganga Krishna	660313	4793	4450	343	-	-	343
6.	Ghataprabha	448933	3194	3194		-	-	
7.	Halasiddanatha	213246	1494	1025	469	-	-	469
8.	Hemavathy	252214	1771	1460	311	-	-	311
9.	Hiranyakeshi	914224	5485	5485	-	-	-	-
10.	Karnataka	100443	854	557	297	9	45	351
11.	Malaprabha	501368	3008	2234	774			774

1	2	3	4	5	6	7	8	9
12.	Nandi	588963	3740	3740	-	-	-	-
13.	Pandavapura	148013	1184	544	640	-	-	640
14.	Raibag	7260	-	-	-	-	1642	1642
15.	Raithara	503084	3932	2712	1220	-	-	1220
16.	Aland	68674	144		144	95	290	529
17.	Srirama	151010	1532	1312	220	-	-	220
18.	Vanivilasa	..Did	not	Work	...	410		410
19	.Krishna	312810	2002	1427	575	...	...	575
20.	Naranja	395822	2376	2376	..	..	..	..
	Total (Coop-Sector)	**6006648**	**40606**	**34058**	**6548**	**2128**	**1977**	**10653**
	Public Sector:							
21.	M.P.M. Sugars	418005	3761	3760	2		33	2
22.	Mysore Sugar Co.	915028	8233	6435	1798		33	1831
	Total (Public Sector)							
	Joint Sector:							
23.	Gangavathi							
	(Total (Joint Sector)	1333033	11995	10195	1800	77	33	1910
	Private Sector:							
24.	Bannari Amman	1141367	9877	8660	1217			1217

1	2	3	4	5	6	7	8	9
25.	Chamundeshwari	874507	6164	2361	3803			3803
26.	Davanagere	483203	4488	3351	1137			1137
27.	Gdodavari	1558644	10801	6862	3939			3939
28.	I.S.R	311481	2484	1204	1204	1280		1280
29.	I.C.L	446413	4991	3242	1749			1749
30.	Mahadeshwara							
31.	Prabhulingeshwara	725992	5082	3227	1855			1855
32.	Renuka	680120	..	..			423	423
33.	Siruguppa (G)		Not	Working				
34.	Siruguppa (D)		Not	Working				
35.	Sundari		Not	Working				
36.	Shamanur	476582	4170	3808	362			362
37.	Ugar	1467798	10258	8541	1717		14	1731
38.	Jamkhandi	390974						
39.	Nirani	45735	297	243	54			54
40.	Athani Farmers	445023	3115	1911	1204			1204
41.	Venkateshwara	214032						
42.	Gem	202738	1217	314	903			903
	Total: (Private Sector)	**9471609**	**62944**	**43724**	**19220**		**437**	**19657**
	Grand Total of all :	**16486240**	**115545**	**87977**	**27568**	**2205**	**2447**	**32220**

ಶ್ರೀ ಎ.ಬಿ. ಪಾಟೀಲ : ಉತ್ತರವನ್ನು ಒದಗಿಸಿದ್ದಾರೆ. ನಾನು ಹೋದ ವರ್ಷವೂ ಈ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಬಹಳಷ್ಟು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬಿನ ಬಿಲ್ಲುಗಳನ್ನು ಪಾವತಿ ಮಾಡಲು ಆಗಿಲ್ಲ. ಕಬ್ಬಿನ ಬೆಲೆಯನ್ನು ಕೊಡುವ ಸಲುವಾಗಿ ಮಹಾರಾಷ್ಟ್ರ ಸರ್ಕಾರದವರು ಅನುದಾನವನ್ನು ಕೊಡುತ್ತಿದ್ದಾರೆ. ತಾವು ಏನು ಮಾಡುತ್ತೀರಿ ಎಂದು ಕೇಳಿದ್ದೆ. ಅದನ್ನು ವಿಚಾರ ಮಾಡುತ್ತೇವೆ ಎಂದು ಹೇಳಿದ್ದಿರಿ. ಅದನ್ನು ತಾವು ಇವತ್ತು ಹೇಳಿಯೇ ಇಲ್ಲ. ರೈತರು ಇವತ್ತು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಅವರ ಯಾವುದೇ ಸಹಾಯಕ್ಕೆ ತಾವು ಬರುತ್ತಿಲ್ಲ. ಈ ಬಗ್ಗೆ ನೀವು ಏನು ಮಾಡುತ್ತೀರಿ ಎನ್ನುವ ಸ್ಪಷ್ಟವಾದ ಉತ್ತರವನ್ನು ಹೇಳಬೇಕು. ಅಲ್ಲದೆ, ಶುಗರ್‌ಕೇನ್ ಪರ್ಚೇಸ್ ಟ್ಯಾಕ್ಸನ್ನು ಮಾಫಿ ಮಾಡಬೇಕು ಎಂದು ಕಳೆದ ಸಲವೂ ಕೇಳಿದ್ದೆ. ಅದನ್ನು ತಾವು ಬಿಡಬೇಕು. ಸಕ್ಕರೆ ಕಾರ್ಖಾನೆಗಳಿಗೆ ದುಡ್ಡು ಕೊಡಲು ಅನುಕೂಲವಾಗುತ್ತದೆ. ಇದಕ್ಕೆ ಸರ್ಕಾರದಿಂದ ಕೇವಲ 15–20 ಕೋಟಿ ರೂಪಾಯಿಗಳನ್ನು ಕೊಟ್ಟರೆ ಆಗುವುದಿಲ್ಲ. ಏಕೆಂದರೆ ರೈತರಿಗೆ ಬರಬೇಕಾದಂಥ ಬಾಕಿ ನೂರಾರು ಕೋಟಿ ರೂಪಾಯಿಗಳಾಗಿದೆ. ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು, ಉದ್ದೇಶವೇನು, ಯಾವ ರೀತಿ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕು ಎಂದು ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ. ಮಹದೇವ್ : ಮಹಾರಾಷ್ಟ್ರ ಸರ್ಕಾರವು ಕಬ್ಬು ಬೆಳೆಗಾರರಿಗೆ ಯಾವ ಸಬ್ಸಿಡಿ ಮತ್ತು ಸಾಲವನ್ನು ಕೊಡುತ್ತಿದೆ. ಬೇರೆ ರಾಜ್ಯಗಳವರು ಯಾವ ರೀತಿ ಕೊಡುತ್ತಿದ್ದಾರೆ ಎನ್ನುವುದೆಲ್ಲವುಗಳನ್ನೂ ಅಧ್ಯಯನ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಲು ಕ್ಯಾಬಿನೆಟ್ ಉಪ ಸಮಿತಿಯನ್ನು ಸರ್ಕಾರ ರಚನೆ ಮಾಡಿದೆ. ಅದು ಶೀಘ್ರದಲ್ಲೇ ವರದಿಯನ್ನು ಕೊಡತಕ್ಕಂಥ ಸೂಚನೆಗಳಿವೆ. ಮಹಾರಾಷ್ಟ್ರದಲ್ಲಿ ಕೊಡುತ್ತಿರುವ ಸಬ್ಸಿಡಿ ಇತ್ಯಾದಿಗಳ ಬಗ್ಗೆ ನಾವು ಮಹಾರಾಷ್ಟ್ರದಿಂದ ವರದಿಯನ್ನು ತರಿಸಿಕೊಂಡಿದ್ದೇವೆ. ಯಾವಯಾವ ಸಕ್ಕರೆ ಕಾರ್ಖಾನೆಗಳು ಸಂಕಷ್ಟದಲ್ಲಿವೆ. ಅವುಗಳನ್ನು ಯಾವ ರೀತಿ ಪಾರು ಮಾಡಬೇಕು. ಅವುಗಳಿಗೆ ಸರ್ಕಾರ ಯಾವ ರೀತಿ ಸಹಾಯ ಮಾಡಬೇಕು. ಅವರಿಗೆ ಯಾವಯಾವ ರೀತಿ ರಿಯಾಯಿತಿಗಳನ್ನು ಕೊಡಬೇಕು ಮತ್ತು ರೈತರಿಗೆ ಯಾವ ರೀತಿ ಅನುಕೂಲ ಮಾಡಿಕೊಡಬೇಕು ಎನ್ನುವ ಬಗ್ಗೆ ಸಚಿವ ಸಂಪುಟದ ಉಪ ಸಮಿತಿಯ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು 25 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ಇದಕ್ಕೋಸ್ಕರ ಮಾಡಿದ್ದಾರೆ. ಅದಕ್ಕೆ ವಿಧಿವಿಧಾನಗಳನ್ನು ನಾವು ಶೀಘ್ರದಲ್ಲೇ ಮಾಡುತ್ತಿದ್ದೇವೆ. ಅದು ಬಂದ ಮೇಲೆ, ಅದರಿಂದಲೂ ಸಹಾಯ ಮಾಡುತ್ತೇವೆ.

ಶ್ರೀ ಎ.ಬಿ. ಪಾಟೀಲ್ : 25 ಕೋಟಿ ರೂಪಾಯಿಗಳ ಹಣ ಇದೆ ಎಂದು ಹೇಳಿದರು. ಅದನ್ನು ಬಿಡುಗಡೆ ಮಾಡಿರುವರೇನು?

ಶ್ರೀ ಎಂ. ಮಹದೇವ್ : ಅದಕ್ಕೆ ಕೆಲವು ನಿಯಮಗಳಿವೆ. ಆ ನಿಯಮಗಳನ್ನು ಅಳವಡಿಸಿ ಹಣವನ್ನು ಬಿಡುಗಡೆ ಮಾಡಲು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಎ.ಬಿ. ಪಾಟೀಲ್ : ಹೋದವರ್ಷದಿಂದ ಹೇಳುತ್ತಿದ್ದಾರೆ. ಮಹಾರಾಷ್ಟ್ರ ಸರ್ಕಾರದವರು ಕಬ್ಬು ಬೆಳೆಗಾರರಿಗೆ ಹಣವನ್ನು ಕೊಡುತ್ತಿದ್ದಾರೆ. ಇಲ್ಲಿ ಏಕೆ ಕೊಡುತ್ತಿಲ್ಲ? ಅದನ್ನು ಹೇಳಲು ನಿಮಗೆ ಎಷ್ಟು ದಿವಸ ಬೇಕು

ಶ್ರೀ ಎ. ಕೃಷ್ಣಪ್ಪ : ಮಹಾರಾಷ್ಟ್ರ ಸರ್ಕಾರದವರು ಕೆಲವು ಹೊಸ ನೀತಿಗಳನ್ನು ರೈತರ ಪರವಾಗಿ ಹಾಕಿ ಕೊಟ್ಟಿರಬಹುದು. ಆದರೆ ಕರ್ನಾಟಕ ಸರ್ಕಾರ ಅವರಿಗಿಂತ ಮೊದಲೇ ಕೊಟ್ಟಿದೆ.

ಪವರ್ ಪ್ರೊಡಕ್ಷನ್ ವಿಚಾರದಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಕಮರ್ಷಿಯಲ್ ಟ್ಯಾಕ್ಸ್ ವಿಚಾರದಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಎಕ್ಸ್‌ಪೋರ್ಟ್ ಆಫ್ ಶುಗರ್‌ಕೇನ್‌ನಲ್ಲಿ ನಾವು ಏನು ಕ್ವಾಂಟಿಟಿಯನ್ನು ಉಪಯೋಗ ಮಾಡುತ್ತೇವೆ. ಅದಕ್ಕೂ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಫರ್ದರ್ ಇಂಪ್ರೂವ್‌ಮೆಂಟ್ಸ್ ಇದೆ ಎಂದು ತಾವು ಹೇಳಿದ್ದೀರಿ. The sub-committee is going to take recommend further improvement and we are going to take needful decision. ಹಾಗಾಗಿ, ನೀವು ಏನೂ ಮಾಡಿಲ್ಲ ಎಂದು ಹೇಳಬೇಡಿ

ಶ್ರೀ ಎ.ಬಿ. ಪಾಟೀಲ್ : ನಾನು ಕೇಳಿದ ಪ್ರಶ್ನೆಯೇ ಬೇರೆ. ಸರ್ಕಾರದವರು ಪವರ್ ಕೋ-ಜನರೇಷನ್‌ಗೆ ರಿಯಾಯಿತಿ ನೀಡುವ ಪ್ರಶ್ನೆ ಇಲ್ಲ. ನಾನು ಹೇಳುತ್ತಿರುವುದೇನೆಂದರೆ, ರೈತರು ಇವತ್ತು ಕಷ್ಟಕಾಲದಲ್ಲಿದ್ದಾರೆ. ಅಂಥ ರೈತರಿಗೆ ಸರ್ಕಾರ ಯಾವ ರೀತಿ ಸಹಾಯ ಮಾಡುತ್ತದೆ ಎನ್ನುವ ಬಗ್ಗೆ ಸ್ಪಷ್ಟವಾಗಿ ಉತ್ತರ ನೀಡಬೇಕು. 25 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ಅದು ಬಂದಿದೆಯೋ, ಇಲ್ಲವೋ ಎಂಬುದನ್ನು ಹೇಳಬೇಕು.

ಶ್ರೀ ಎ. ಕೃಷ್ಣಪ್ಪ : 25 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು, it is only to save the interest of farmers. ಏಕೆಂದರೆ, ಇನ್ನೂ ಸಕ್ಕರೆ ಮಾರಾಟ ಮಾಡಿಲ್ಲ, ಅವರನ್ನು ಉದ್ಧಾರ ಮಾಡಲು ಆಗುವುದಿಲ್ಲ ಎಂದು ಪ್ರಪಂಚದಲ್ಲಿ ಎಲ್ಲರಿಗೂ ಗೊತ್ತಾಗಿ ಹೋಗಿದೆ.

ಶ್ರೀ ಎ.ಬಿ. ಪಾಟೀಲ್ : ಕಬ್ಬು ಅಭಿವೃದ್ಧಿ ನಿಗಮಕ್ಕೆ ಕೊಡಬೇಕಾದ ಹಣದ ಬಗ್ಗೆ ನಾನು ಹೇಳುತ್ತಿದ್ದೇನೆ. ನೀವು ಹೇಳುತ್ತಿರುವುದು ಬೇರೆ ಇನ್ಸೆಂಟಿವ್. ಇವತ್ತು ರೈತರು ಕಷ್ಟ ಕಾಲದಲ್ಲಿದ್ದಾರೆ, ಯಾವ ಸಕ್ಕರೆ ಕಾರ್ಖಾನೆಗಳವರೂ ಸಹ ರೈತರಿಗೆ ಹಣ ಕೊಡಲು ಆಗುತ್ತಿಲ್ಲ. ಸಕ್ಕರೆಯನ್ನು ಮಾರಾಟ ಮಾಡಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರ ಏನು ಪ್ರಯತ್ನ ಮಾಡುತ್ತದೆ ಎನ್ನುವುದನ್ನು ನೀವು ಹೇಳಬೇಕು. ಪರ್ಚೇಸ್ ಟ್ಯಾಕ್ಸನ್ನಾದರೂ ಮಾಫಿ ಮಾಡುತ್ತೇವೆ ಎನ್ನುವುದನ್ನಾದರೂ ನೀವು ಹೇಳಬೇಕು.

ಶ್ರೀ ಎಂ. ಮಹದೇವ್ : ಅದಕ್ಕೆ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿದ್ದೇವೆ.

ಶ್ರೀ ಎ.ಬಿ. ಪಾಟೀಲ್ : ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಒಂದು ವರ್ಷವಾಯಿತು. ಏನೂ ಮಾಡಿಲ್ಲ.

ಶ್ರೀ ಎಂ. ಮಹದೇವ್ : ಇಂಥ ಸಮಸ್ಯೆಗಳನ್ನು ಪರಿಹಾರ ಮಾಡುವ ಬಗ್ಗೆ ಶೀಘ್ರದಲ್ಲೇ ಸಬ್ ಕಮಿಟಿಯ ರಿಪೋರ್ಟ್ ಬರುತ್ತದೆ. ಬಂದ ಕೂಡಲೇ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಬಚ್ಚೇಗೌಡರೇ, ಈಗ ನೀವು ಕೇಳಿ.

4.10 ಪಿ.ಎಂ

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, 1500 ಕೋಟಿ ರೂಪಾಯಿಗಳಷ್ಟರ ಸಕ್ಕರೆ ದಾಸ್ತಾನು ಕೊಳೆಯುತ್ತಿದೆ ಎಂದು ಈಗಾಗಲೇ ಮಾನ್ಯ ಸಕ್ಕರೆ ಸಚಿವರು ಒಂದು ಹೇಳಿಕೆಯನ್ನು ಕೊಟ್ಟರು. ಹಾಗೆಯೇ 1300 ಕೋಟಿ ರೂಪಾಯಿಗಳಷ್ಟನ್ನು ರೈತರಿಗೆ ವಾಪಾಸ್ಸು ಕೊಡಬೇಕೆಂದು ಹೇಳಿದ್ದಾರೆ. ಮಂಡ್ಯಾ ಸಕ್ಕರೆ ಕಾರ್ಖಾನೆ ಇರಬಹುದು. ಪಾಂಡವಪುರ ಸಕ್ಕರೆ ಕಾರ್ಖಾನೆ ಇರಬಹುದು. ನಾನಾ ಕಾರ್ಖಾನೆಗಳಲ್ಲಿ ಕಬ್ಬು ಬೆಳೆಗಾರರಿಗೆ ಕೊಡಬೇಕಾದಂಥ ಬಾಕಿ ಸುಮಾರು 1300 ಕೋಟಿಯಷ್ಟು ಇದೆಯೆಂದು ಮಾನ್ಯ ಸಚಿವರು ಹೇಳಿದರು.

ಶ್ರೀ ಎಂ. ಮಹದೇವ್ : 900 ಕೋಟಿರೂಯಷ್ಟು ಬಾಕಿ ಇದ್ದುದ್ದನ್ನು ಕ್ಲಿಯರ್ ಮಾಡಿದ್ದೇವೆ.

ಶ್ರೀ ಬಿ.ಎಸ್. ಬಚ್ಚೇಗೌಡ : ಇದಾದ ಮೇಲೆ ಇವತ್ತು ಕಬ್ಬು ಉತ್ಪಾದನೆ ಕಾಸ್ಟ್ ಜಾಸ್ತಿಯಾಗುತ್ತಿದೆ. ಉತ್ಪಾದನೆ ಮಾಡುವಂಥ ಸಕ್ಕರೆಯ ಕಾಸ್ಟ್ ಜಾಸ್ತಿಯಾಗುತ್ತಿದೆ. ಆದರೆ ರೈತರಿಗೆ ಕೊಡುವಂಥ ಹಣ ಕಡಿಮೆಯಾಗುತ್ತಿದೆ, ಅದನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಉತ್ಪಾದನಾ ವೆಚ್ಚ ಜಾಸ್ತಿಯಾಗುತ್ತಿರುವುದರಿಂದ ರೈತರ ನೆರವಿಗೆ ಬರುವುದಕ್ಕೆ ಅವರಿಗೆ ಬಾಕಿ ಕೊಡುವುದಕ್ಕೆ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ ಎನ್ನುವುದು ಗೊತ್ತಾಗಬೇಕು.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದ್ದೇನೆ. ರೈತರಿಗೆ 1115 ಕೋಟಿ ರೂಪಾಯಿಗಳ ಬಾಕಿ ಎನಿತ್ತು ಅದರಲ್ಲಿ 921 ಕೋಟಿರೂಯನ್ನು ಫ್ಯಾಕ್ಟರಿಗಳಿಗೆ ಆದೇಶ ಕೊಟ್ಟು ರೈತರಿಗೆ ಕ್ಲಿಯರ್ ಮಾಡಿದೆ. ಇನ್ನು ಉಳಿದಿರತಕ್ಕಂಥ ಬಾಕಿ ಸಲುವಾಗಿ ಫ್ಯಾಕ್ಟರಿಗಳಿಂದ ರೆವಿನ್ಯೂ ರಿಕವರಿಗೆ ಆದೇಶವನ್ನು ಕೊಟ್ಟಿದ್ದೇವೆ. ಯಾವ ಯಾವ ಫ್ಯಾಕ್ಟರಿಗಳು ಮೂರ್ನಾಲ್ಕು ಕೋಟಿ, ಐದು ಕೋಟಿ ಮತ್ತು ಹತ್ತು ಕೋಟಿ ರೂಪಾಯಿಗಳ ಬಾಕಿ ಇಟ್ಟುಕೊಂಡಿದ್ದಾರೆ. ತಕ್ಷಣದಲ್ಲಿಯೇ ಜಿಲ್ಲಾಧಿಕಾರಿಗಳನ್ನು ನೇಮಿಸಿ ರೆವಿನ್ಯೂ ರಿಕವರಿ ಮಾಡಿ ಬಾಕಿ ಇರುವುದನ್ನು ಪಾವತಿ ಮಾಡುತ್ತೇವೆ. ಇನ್ನು ಬೇರೆ ಸಮಸ್ಯೆಗಳ ಬಗ್ಗೆ ಕ್ಯಾಬಿನೆಟ್ ಸಬ್‌ಕಮಿಟಿ ಅನ್ನು ಮಾಡಿದ್ದೇವೆ. ಅದರ ವರದಿ ಬಂದ ಕೂಡಲೇ ಆ ವರದಿಯಂತೆ ಮಾಡುತ್ತೇವೆ.

ಗೊಂದಲ

ಅಧ್ಯಕ್ಷರು : ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿದ್ದಾರೆಂದು ಹೇಳಿದ್ದಾರೆ. ಅದಕ್ಕೆ ನಾನು ಜವಾಬ್ದಾರನಲ್ಲ.

ಶ್ರೀ ಬಿ. ಸೋಮಶೇಖರ್ : ಸಬ್ ಕಮಿಟಿ ಮಾಡಿರುವುದು ಅದು ಸರ್ಕಾರದ ಇಂಟರ್ನಲ್ ಅರೇಂಜ್‌ಮೆಂಟ್ ರೈತರಿಗೆ ಬೇಕಾಗಿರತಕ್ಕಂಥದ್ದು ಪರಿಹಾರ. ಸಬ್‌ಕಮಿಟಿಯಿಂದ ವರದಿ ಬರುವುದಕ್ಕೆ ಎಷ್ಟು ದಿವಸದಿಂದ ಕಾಯುತ್ತಿದ್ದೀರಿ?

ಗೊಂದಲ

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಫ್ಯಾಕ್ಟರಿಗಳ ಹಿತದೃಷ್ಟಿ ಕರ್ನಾಟಕದ ರೈತರ ಹಿತದೃಷ್ಟಿಯಿಂದ, ಇವರು ಈ ಸದನದಲ್ಲಿ ಆ ಸದನದಲ್ಲಿ ಕೇಳುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಅಷ್ಟು ಸಬ್ಸಿಡಿ ರೈತರಿಗೆ ಸರ್ಕಾರ ಕೊಡುತ್ತಾ ಇದೆ. ನೀವು ರಾಜ್ಯದಲ್ಲಿ ಏನು ಮಾಡುತ್ತಿದ್ದೀರಿ ಎಂದೆಲ್ಲಾ ಪದೇ ಪದೇ ಪ್ರಶ್ನೆಗಳನ್ನು ಹಾಕುತ್ತಿದ್ದರು. ನಮ್ಮ ರಾಜ್ಯದ ರೈತರ ಹಿತರಕ್ಷಣೆಯನ್ನು ಮಾಡಲಿಕ್ಕೋಸ್ಕರ ಜೊತೆಗೆ ಫ್ಯಾಕ್ಟರಿಗಳವರು ಆರ್ಥಿಕವಾಗಿ ಯಾವುದೇ ತರಹದ ಸಂಕಷ್ಟದಲ್ಲಿ ಸಿಲುಕದ ಹಾಗೆ ಮಹಾರಾಷ್ಟ್ರದಲ್ಲಿ ಯಾವ ರೀತಿ ಕೊಡುತ್ತಿದ್ದಾರೆ. ತಮಿಳುನಾಡಿನಲ್ಲಿ ಯಾವ ರೀತಿ ಕೊಡುತ್ತಿದ್ದಾರೆ. ಆಂಧ್ರದಲ್ಲಿ ಯಾವ ರೀತಿ ಕೊಡುತ್ತಿದ್ದಾರೆ ಎನ್ನುವುದೆಲ್ಲವನ್ನು ಅಧ್ಯಯನ ಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ಕ್ಯಾಬಿನೆಟ್ ಸಬ್‌ಕಮಿಟಿಯನ್ನು ಮಾಡಿದ್ದಾರೆ. ಕ್ಯಾಬಿನೆಟ್ ಸಬ್ ಕಮಿಟಿ ಆಲ್ ಮೋಸ್ಟ್ ಆಲ್ ಎಲ್ಲಾ ಫೈನಲೈಸ್‌ಗೆ ಬಂದು ವರದಿಯನ್ನು ಕೊಡುತ್ತದೆ. ಆ ವರದಿ ಬಂದ ಕೂಡಲೇ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

ರಾಜ್ಯದಲ್ಲಿ ಮಳೆ ನೀರಿನ ಸಂಗ್ರಹಣೆ

545 (4606) : ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ದಿನೇ ದಿನೇ ಅಂತರ್ಜಲ ಮಟ್ಟ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅಂತರ್ಜಲ ಮಟ್ಟ ಕುಸಿಯುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸರ್ಕಾರ ಕೈಗೊಂಡ ಕ್ರಮಗಳ ಪರಿಣಾಮವಾಗಿ ಯಾವ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಏರಿಕೆಯಾಗಿದೆ; ವಿವರ ನೀಡುವುದು;

ಈ) ಮಳೆ ನೀರನ್ನು ಸಂಗ್ರಹಿಸಿ (ಮಳೆ ನೀರಿನ ಕೊಯ್ಲು) ಭೂಮಿಯಲ್ಲಿ ಇಂಗಿಸಲು ಶಾಲಾ-ಕಾಲೇಜು ಹಾಗೂ ಸಂಘ ಸಂಸ್ಥೆಗಳ ಮೂಲಕ ಜನಜಾಗೃತಿ ಮೂಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ;

ಉ) ಹಾಗಿದ್ದಲ್ಲಿ, ಈ ಕಾರ್ಯಕ್ರಮದ ರೂಪುರೇಷೆಗಳೇನು;

ಊ) ನಗರ-ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಕೊಳವೆ ಬಾವಿ ಕೊರೆಯುತ್ತಿದ್ದು, ಇದಕ್ಕೆ ನಿರ್ಬಂಧ ಹೇರುವ/ನಿಯಂತ್ರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಬಂದಿದೆ.

ಆ) ರಾಜ್ಯಾದ್ಯಂತ ಅಂತರ್ಜಲ ಮಟ್ಟ ಕುಸಿಯುತ್ತಿರುವುದನ್ನು ತಡೆಗಟ್ಟಲು, ಇಲಾಖೆಯು ಪ್ರಯೋಗಾತ್ಮಕವಾಗಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು 1995-96ನೇ ಸಾಲಿನಿಂದ ಅನುಷ್ಠಾನಗೊಳಿಸುತ್ತಿದೆ. ಅದರಂತೆ, ಇದುವರೆವಿಗೆ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟು 1091 ವಿವಿಧ ರಚನೆಗಳಾದ ಚೆಕ್ ಡ್ಯಾಂ, ಇಂಗು ತೋಡು ಬಾವಿ, ಇಂಗು ಕೊಳವೆ ಬಾವಿ, ಕೃತಕ ಡೈಕ್ ಇತ್ಯಾದಿ ಹಾಗೂ ಸಣ್ಣ ಸಣ್ಣ ಕೆರೆ ಗೋಕಟ್ಟೆ, ಕಲ್ಯಾಣಗಳಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿ ಹೂಳೆತ್ತುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಮಜ್ಜಿಗೆಹೊಸಹಳ್ಳಿ ಗ್ರಾಮ ವ್ಯಾಪ್ತಿ ಮತ್ತು ಬೆಂಗಳೂರು ನಗರ ಜಿಲ್ಲೆ ಆನೇಕಲ್ಲು ತಾಲ್ಲೂಕಿನ ಬಿದರಗುಪ್ಪೆ ಕಿರು ಜಲಾನಯನ ಪ್ರದೇಶದಲ್ಲಿ ನಿರ್ಮಾಣ ಮಾಡಲಾದ ರಚನೆಗಳ ಅಕ್ಕಪಕ್ಕದಲ್ಲಿರುವ ಹಳೆಯ ತೋಡು ಬಾವಿ/ಕೊಳವೆ ಬಾವಿಗಳಲ್ಲಿ ಜಲಮಟ್ಟವು ಏರಿಕೆಯಾಗಿರುವುದು ಕಂಡುಬಂದಿದೆ.

ಈ) ಹೌದು - ಹಮ್ಮಿಕೊಳ್ಳಲಾಗಿದೆ.

ಉ) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ದಕ್ಷಿಣ ವಲಯ (ಮೈಸೂರು) ಮತ್ತು ಉತ್ತರ ವಲಯ (ಬಳ್ಳಾರಿ) ಇವುಗಳ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ, ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಮಳೆಯ ನೀರನ್ನು ತಡೆದು, ಅದರ ನಿರ್ವಹಣೆಯನ್ನು ವ್ಯವಸ್ಥಿತವಾಗಿ ಉಪಯೋಗಿಸಿಕೊಳ್ಳುವ

ಮತ್ತು ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಿ, ನೀರನ್ನು ಭೂಮಿಯಲ್ಲಿ ಇಂಗುವಂತೆ ಮಾಡಿ, ಅಂತರ್ಜಲವನ್ನು ಸಾಧ್ಯವಾದ ಮಟ್ಟಿಗೆ ವೃದ್ಧಿಪಡಿಸಲು, ಜನಜಾಗೃತಿ ಮೂಡಿಸುವ ಸಲುವಾಗಿ 2003–04ನೇ ಸಾಲಿನಲ್ಲಿ 6 ಜನಜಾಗೃತಿ ಕಾರ್ಯಕ್ರಮಗಳನ್ನು ನಡೆಸಲು ಉದ್ದೇಶಿಸಲಾಗಿದೆ.

ಊ) ಇದೆ.

ಕರ್ನಾಟಕ ರಾಜ್ಯದಲ್ಲಿ 1995–96ರಿಂದ 2002–03ರ ಅಂತ್ಯದವರೆವಿಗೆ ತಾಲ್ಲೂಕುವಾರು ನಿರ್ಮಾಣ ಮಾಡಲಾದ ಅಂತರ್ಜಲ ಕೃತಕ ಮರುಪೂರೈಕೆ ರಚನೆ ವಿವರಗಳ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ/ತಾಲ್ಲೂಕು	ರಚನೆಗಳ ಸಂಖ್ಯೆ	ವೆಚ್ಚ
1	2	3	4
I	ಬೆಂಗಳೂರು ನಗರ		
	1. ಆನೇಕಲ್	58	73.48
	2. ಬೆಂಗಳೂರು ಉತ್ತರ	8	6.01
	3. ಬೆಂಗಳೂರು ದಕ್ಷಿಣ	8	5.31
	ಒಟ್ಟು	74	84.80
II	ಬೆಂಗಳೂರು ಗ್ರಾಮಾಂತರ		
	1. ದೇವನಹಳ್ಳಿ	15	28.55
	2. ಹೊಸಕೋಟೆ	8	13.90
	3. ದೊಡ್ಡಬಳ್ಳಾಪುರ	8	10.17
	4. ಮಾಗಡಿ	4	5.94
	5. ಚನ್ನಪಟ್ಟಣ	8	5.00
	6. ರಾಮನಗರ	5	3.99
	ಒಟ್ಟು	**48**	**67.55**
III	ಬೆಳಗಾಂ		
	1. ಅಥಣಿ	2	4.84
	2. ಚಿಕ್ಕೋಡಿ	2	2.95
	3. ಬೈಲಹೊಂಗಲ	19	23.04
	4. ಹುಕ್ಕೇರಿ	25	22.32
	5. ರಾಯಬಾಗ್	14	16.28
	ಒಟ್ಟು	**62**	**69.43**
IV	ಬಳ್ಳಾರಿ		
	1. ಕೂಡ್ಲಿಗಿ	63	5.57

1	2	3	4
	2. ಹಗರಿ ಬೊಮ್ಮನಹಳ್ಳಿ	71	11.66
	3. ಬಳ್ಳಾರಿ	3	3.59
	4. ಹಡಗಲಿ	42	16.00
	ಒಟ್ಟು	**179**	**36.83**
V	ಬೀದರ್		
	1. ಬೀದರ್	48	24.23
	2. ಭಾಲ್ಕಿ	4	4.27
	3. ಹುಮ್ನಾಬಾದ್	27	3.93
	4. ಬಸವಕಲ್ಯಾಣ	4	5.12
	5. ಔರಾದ್	1	0.44
	ಒಟ್ಟು	**84**	**3.00**
VI	ಬಿಜಾಪುರ		
	1. ಇಂಡಿ	4	3.00
	ಒಟ್ಟು	4	3.00
VII	ಚಾಮರಾಜನಗರ		
	1. ಗುಂಡ್ಲುಪೇಟೆ	7	8.26
	2. ಕೊಳ್ಳೆಗಾಲ	4	4.55
	3. ಚಾಮರಾಜನಗರ	29	7.40
	ಒಟ್ಟು	**40**	**20.21**
VII	ಚಿಕ್ಕಮಗಳೂರು		
	1. ಕಡೂರು	3	7.94
	ಒಟ್ಟು	**3**	**7.94**
IX	ಚಿತ್ರದುರ್ಗ		
	1. ಮೊಳಕಾಲ್ಮೂರು	3	1.61
	2. ಚಳ್ಳಕೆರೆ	57	36.47
	3. ಚಿತ್ರದುರ್ಗ	19	18.31
	ಒಟ್ಟು	**79**	**56.39**
X	ದಕ್ಷಿಣ ಕನ್ನಡ		
	1. ಮಂಗಳೂರು	1	0.99
	2. ಬಂಟ್ವಾಳ	2	2.95
	ಒಟ್ಟು	**3**	**3.94**

1	2	3	4
XI	ದಾವಣಗೆರೆ		
	1. ಹರಪನಹಳ್ಳಿ	3	2.22
	2. ಚನ್ನಗಿರಿ	3	5.09
	3. ಹೊನ್ನಾಳಿ	1	1.99
	ಒಟ್ಟು	7	9.30
XII	ಧಾರವಾಡ		
	1. ಧಾರವಾಡ	3	2.85
	ಒಟ್ಟು	3	2.85
XIII	ಗುಲ್ಬರ್ಗಾ	9	2.00
	ಒಟ್ಟು	9	2.00
XIV	ಹಾಸನ		
	1. ಚನ್ನರಾಯಪಟ್ಟಣ	11	8.02
	2. ಬೇಲೂರು	6	5.05
	3. ಹಾಸನ	1	0.99
	4. ಆಲೂರು	3	2.09
	5. ಅರಸೀಕೆರೆ	13	8.20
	ಒಟ್ಟು	34	29.35
XV	ಕೋಲಾರ		
	1. ಮಾಲೂರು	21	15.24
	2. ಚಿಕ್ಕಬಳ್ಳಾಪುರ	19	8.84
	3. ಕೋಲಾರ	25	9.09
	4. ಶಿಡ್ಲಘಟ್ಟ	77	51.85
	5. ಗೌರಿಬಿದನೂರು	18	12.72
	6. ಮುಳಬಾಗಿಲು	28	6.20
	7. ಶ್ರೀನಿವಾಸಪುರ	38	8.91
	8. ಚಿಂತಾಮಣಿ	36	6.25
	9. ಗುಡಿಬಂಡೆ	5	0.42
	10. ಬಂಗಾರಪೇಟೆ	11	1.41
	11. ಬಾಗೇಪಲ್ಲಿ	8	0.67
	ಒಟ್ಟು	284	121.60

1	2	3	4
XVI	ಕೊಪ್ಪಳ		
	1. ಕುಷ್ಟಗಿ	12	2.25
	2. ಕೊಪ್ಪಳ	3	2.10
	3. ಯಲ್ಬುರ್ಗ	20	4.00
	ಒಟ್ಟು	**45**	**8.35**
XVII	ಮಂಡ್ಯ		
	1. ನಾಗಮಂಗಲ	5	2.00
	2. ಶ್ರೀರಂಗಪಟ್ಟಣ	12	4.87
	ಒಟ್ಟು	**17**	**6.87**
XVIII	ಮೈಸೂರು		
	1. ಪಿರಿಯಾಪಟ್ಟಣ	10	4.92
	2. ಹುಣಸೂರು	8	6.80
	3. ನಂಜನಗೂಡು	10	7.99
	ಒಟ್ಟು	**19**	**19.71**
XIX	ರಾಯಚೂರು		
	1. ರಾಯಚೂರು	4	3.00
	2. ಕುಷ್ಟಗಿ	4	3.00
	3. ಮಾನ್ವಿ	6	3.50
	4. ದೇವದುರ್ಗ	5	3.09
	ಒಟ್ಟು	**19**	**12.59**
XX	ಶಿವಮೊಗ್ಗ		
	1. ಶಿವಮೊಗ್ಗ	3	5.67
	ಒಟ್ಟು	**3**	**5.67**
	ತುಮಕೂರು		
	1. ಚಿಕ್ಕನಾಯಕನಹಳ್ಳಿ	1	2.06
	2. ಗುಬ್ಬಿ	14	12.87
	3. ತುಮಕೂರು	6	7.75
	4. ಮಧುಗಿರಿ	10	4.64
	5. ಶಿರಾ	10	11.00
	6. ಕೊರಟಗೆರೆ	3	3.00

1	2	3	4
	7. ಕುಣಿಗಲ್	2	2.49
	8. ತುರುವೇಕೆರೆ	6	4.00
	9. ತಿಪಟೂರು	6	4.00
	10. ಪಾವಗಡ	6	7.04
	ಒಟ್ಟು	**64**	**58.85**
XX	**ಉತ್ತರ ಕನ್ನಡ**		
1.	ಕುಮಟಾ	2	2.00
	ಒಟ್ಟು	**2**	**2.00**
	ಒಟ್ಟು ಮೊತ್ತ	**1091**	**667.23**

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅಂತರ್‌ಜಲ ವಿಚಾರದಲ್ಲಿ ಬಹುಶಃ ಇವತ್ತು ಇಡೀ ವಿಶ್ವವನ್ನೇ ಇದು ಕಾಡುತ್ತಿರುವ ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಈ ದೃಷ್ಟಿಯಲ್ಲಿ ಸರ್ಕಾರ ಈ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದೆ ಮತ್ತು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂದು ಕೇಳಿದ್ದೆ. ಅದಕ್ಕೆ ಉತ್ತರವಾಗಿ ಎಲ್ಲಾ ಕಡೆ 1995–96ರಿಂದ ಪ್ರಾರಂಭವಾಗಿರತಕ್ಕಂಥ ಕಾರ್ಯಕ್ರಮ ಆಗಿದ್ದು ಹೆಚ್ಚು ಕಡಿಮೆ ಸುಮಾರು 6.75 ಕೋಟಿ ರೂ. ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಈ ಕಾರ್ಯಕ್ರಮ ಆಗಿರತಕ್ಕಂಥದ್ದರಲ್ಲಿ ಎಲ್ಲೆಲ್ಲಿ ಈ ಅಂತರ್‌ಜಲ ಮಟ್ಟ ಸುಧಾರಣೆ ಆಗಿದೆ, ಏರಿಕೆಯಾಗಿರತಕ್ಕಂಥ ಮಾಹಿತಿಯನ್ನು ಕೇಳಿದಾಗ ಅದಕ್ಕೆ ಸ್ವಲ್ಪ ಗಾಬರಿ ಆಗತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಏನೆಂದರೆ, ಕೇವಲ ಆನೇಕಲ್ ಮತ್ತು ದೇವನಹಳ್ಳಿ ಈ ಎರಡು ಕ್ಷೇತ್ರಗಳಲ್ಲಿ ಮಾತ್ರ ಅಂತರ್‌ಜಲ ಏರಿಕೆಯಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಅಂದರೆ ಇಡೀ ರಾಜ್ಯದಾದ್ಯಂತ ಇಷ್ಟೊಂದು ಹಣವನ್ನು ಖರ್ಚು ಮಾಡಿ ಕೇವಲ ಎರಡೇ ಎರಡು ಕಡೆ ಮಾತ್ರ ಸ್ವಲ್ಪ ಏರಿಕೆಯಾಗುತ್ತಿದೆ ಎಂದು ಉತ್ತರ ಕೊಟ್ಟಿರತಕ್ಕಂಥದ್ದು ಅಷ್ಟು ಸರಿಕಾಣದಿರುವುದರಿಂದ ಇದಕ್ಕೆ ಮಾನ್ಯ ಸಚಿವರು ಸ್ಪಷ್ಟ ಉತ್ತರವನ್ನು ಕೊಡಬೇಕು. ಹಾಗೆಯೇ ನೀರಿನ ಸಂಗ್ರಹಕ್ಕೆ ಜನಜಾಗೃತಿಗೊಳಿಸಿದ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಕೂಡ ನಿರ್ದಿಷ್ಟವಾಗಿ ಏನೂ ಹೇಳಿಲ್ಲ. ಮೈಸೂರು ವಿಭಾಗ ಮತ್ತು ಬಳ್ಳಾರಿ ವಿಭಾಗದಲ್ಲಿ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಇಡೀ ರಾಜ್ಯದಲ್ಲಿ ಏಕೆ ಮಾಡುತ್ತಿಲ್ಲ ಎನ್ನುವ ಪ್ರಶ್ನೆ ಇದೆ. ಮತ್ತು ಏನು ಕಾರ್ಯಕ್ರಮ ಎಂದು ಕೇಳಿದ್ದೆ. ಅದಕ್ಕೂ ಸ್ಪಷ್ಟವಾದ ಉತ್ತರ ಇಲ್ಲ. 6 ಜನಜಾಗೃತಿ ಕಾರ್ಯಕ್ರಮವನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆ 6 ಕಾರ್ಯಕ್ರಮಗಳು ಯಾವ ಯಾವುದು ಎನ್ನುವುದರ ಮಾಹಿತಿಯನ್ನು ಸಹ ನಮಗೆ ಕೊಡಬೇಕು.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಅಂತರ್‌ಜಲ ಕುಸಿಯುತ್ತಿರತಕ್ಕಂಥದ್ದು ನಮಗೆಲ್ಲಾ ಗೊತ್ತಿರತಕ್ಕಂಥ ವಿಚಾರವಾಗಿದೆ. ಕಳೆದ ಹತ್ತು ವರ್ಷಗಳಿಂದ ಸತತವಾಗಿ ಮಳೆ ಕಡಿಮೆಯಾಗುತ್ತಿದೆ– ಅದರಲ್ಲೂ ಕಳೆದ ಮೂರು ವರ್ಷಗಳಿಂದ ಬಹಳ ತೀವ್ರವಾದ ಬರಗಾಲವನ್ನು ನಾವು ಎದುರಿಸುತ್ತಿದ್ದೇವೆ. ಇಂಥ ಒಂದು ಸಂದರ್ಭದಲ್ಲಿ ಅಂತರ್‌ಜಲ ಸ್ವಾಭಾವಿಕವಾಗಿ ಕುಸಿಯುತ್ತಿದೆ.

ಮತ್ತು ಆ ಅಂತರ್‌ಜಲದ ಬಳಕೆಯೂ ಬಹಳಷ್ಟು ಜಾಸ್ತಿಯಾಗುತ್ತಿದೆ. ಓವರ್ ಎಕ್ಸ್‌ಪ್ಲಾಯ್ಟೇಷನ್ ಆಗುತ್ತಿದೆ. ಅದಕ್ಕೆ ಅಂತರ್‌ಜಲ ಅಭಿವೃದ್ಧಿಗೋಸ್ಕರವೇ ನಿರ್ದಿಷ್ಟವಾದಂಥ, ಪ್ರತ್ಯೇಕ ಹಣ ನಮಗೆ ಇಲ್ಲ. ನಾವು ಇತರೆ ಕೆರೆ ಅಭಿವೃದ್ಧಿ ಮಾಡಿಸತಕ್ಕಂಥದ್ದು, ಕೇಂದ್ರ ಸರ್ಕಾರದಿಂದ ಬರತಕ್ಕಂಥ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯಲ್ಲಿ (ಎಸ್‌ಜಿಆರ್‌ವೈ) ಕಡ್ಡಾಯವಾಗಿ 25 ಪರ್ಸೆಂಟ್ ಹಣವನ್ನು ತೆಗೆದುಕೊಳ್ಳಬೇಕೆಂದು ಕಳೆದ ವರ್ಷ ಈ ಅಂತರ್ ಜಲ ರೈನ್ ವಾಟರ್ ಹಾರ್ವೆಸ್ಟಿಂಗ್ ಪ್ರೋಗ್ರಾಂಗೇ ಖರ್ಚು ಮಾಡಬೇಕೆಂದು ಎಲ್ಲಾ ಜಿಲ್ಲಾ ಪಂಚಾಯತ್‌ಗೆ ನಾವು ಸೂಚನೆ ಕೊಟ್ಟಿದ್ದೇವೆ. ಜೊತೆಗೆ ನಮ್ಮ ಹತ್ತಿರ ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ಎಂದು ಪ್ರತೀ ವರ್ಷ ಸ್ವಲ್ಪ ಹಣ ಎಂದರೆ ಸುಮಾರು ಒಂದು ರಿಂದ ಒಂದೂವರೆ ಕೋಟಿ ರೂಪಾಯಿಗಳನ್ನು ನಮಗೆ ಕೊಡುತ್ತಾರೆ. ಆ ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ಇಲಾಖೆಯವರು ಮಾಡುವುದರ ಜೊತೆಯಲ್ಲಿ ಸ್ವಲ್ಪ ಉಳಿಕೆ ಹಣವನ್ನು ಸಾಂಕೇತಿಕವಾಗಿ ಪ್ರಯೋಗಾತ್ಮಕವಾಗಿ ನಮ್ಮ ಇಲಾಖೆಯಲ್ಲಿ 1995–96ರಿಂದ ಪ್ರಾರಂಭ ಮಾಡಿದ್ದೇವೆ. ಅದರಡಿಯಲ್ಲಿ ಎಲ್ಲೆಲ್ಲಿ ಬಹಳ ಸಮಸ್ಯೆ ಇದೆ ಅಂಥ ಕಡೆ ನಾವು ಸುಮಾರು 1091 ಚೆಕ್‌ಡ್ಯಾಮ್ಸ್ ಇನ್‌ಫಿಲ್ಟ್ರೇಶನ್ ವೆಲ್ಸ್ ಮತ್ತು ಬೇರೆ ಬೇರೆ ತರಹದ ನಾಲಾ ಡ್ಯಾಮ್ಸ್‌ನ್ನು ಹಾಕಿಕೊಂಡು ಪ್ರಯತ್ನ ಮಾಡಿದ್ದೇವೆ. ನಾನು ಉತ್ತರದಲ್ಲಿ ಉದಾಹರಣೆಗೆ ದೇವನಹಳ್ಳಿಯ ಹೆಸರನ್ನು ಕೊಟ್ಟಿದ್ದೇನೆ ಅಷ್ಟೆ. ಕೊಟ್ಟಿರತಕ್ಕಂಥ 1091 ಕಡೆಯೂ ಮಳೆ ಬಂದಾಗ ನೀರು ಸಂಗ್ರಹಣೆ ಆದರೆ ಅಂತರ್‌ಜಲ ಆ ಭಾಗದಲ್ಲಿ ವೃದ್ಧಿಯಾಗುತ್ತದೆ. ಅದಕ್ಕೆ ಯಾವುದೇ ಸಂಶಯವಿಲ್ಲ. ಆದರೆ ಆ ಎರಡು ಉದಾಹರಣೆ ಕೊಟ್ಟಿದ್ದೇನೆ ಅಷ್ಟೆ. ಇನ್ನು ಜನಜಾಗೃತಿ ಮಾಡತಕ್ಕಂಥದ್ದು ಬಹಳ ಪ್ರಮುಖವಾದಂಥ ವಿಚಾರವಾಗಿದೆ. ಈಗಾಗಲೇ ನಾವು ಜನಜಾಗೃತಿ ಮಾಡಬೇಕೆಂದು ಎಲ್ಲಾ ಕಡೆ ಈ ಅಂತರ್‌ಜಲವನ್ನು ವೃದ್ಧಿ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚಾಗಿ ತೆಗೆದುಕೊಂಡು, ಹೆಚ್ಚು ಹೆಚ್ಚಾಗಿ ಕೆರೆಗಳಲ್ಲಿ ಇರತಕ್ಕಂಥ ಹೂಳನ್ನು ತೆಗೆಯಬೇಕು ಮತ್ತು ಎಲ್ಲೆಲ್ಲಿ ಸಾಧ್ಯವಾದಷ್ಟು ಇನ್‌ಫಿಲ್ಟ್ರೇಷನ್ ವೆಲ್ಸ್ ಮತ್ತು ಚೆಕ್ ಡ್ಯಾಮ್ಸ್ ಕಟ್ಟತಕ್ಕಂಥ ಕಾರ್ಯಕ್ರಮ ಮಾಡಬೇಕು. ಎಲ್ಲಾ ಜಜೆಟೆಡ್ ಪ್ರೋಗ್ರಾಮ್ಸ್ ಏನೇನು ಬರುತ್ತದೆ ಅದನ್ನು ಕಡ್ಡಾಯವಾಗಿ ಈ ಮಳೆ ನೀರನ್ನು ಭೂಮಿಯಲ್ಲಿ ಇಂಗತಕ್ಕಂಥ ಕಾರ್ಯಕ್ಕೆ ವಿಶೇಷವಾದಂಥ ಆದ್ಯತೆಯನ್ನು ಕೊಡಬೇಕೆಂದು ಈ ಜನಜಾಗೃತಿ ಕಾರ್ಯಕ್ರಮದಲ್ಲಿ ಸೇರಿಸಿಕೊಂಡು ಈ ಅಂತರ್‌ಜಲ ಅಭಿವೃದ್ಧಿ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆ. ಇದಕ್ಕೂ ಮಿಗಿಲಾಗಿ ನಾವು ಸುಮಾರು 43 ತಾಲ್ಲೂಕು ಅನ್ನು ಈ ರಾಜ್ಯದಲ್ಲಿ ಕಪ್ಪು ಮತ್ತು ಬೂದು ಪ್ರದೇಶವೆಂದು ಮಾಡಿದ್ದೇವೆ. ಅಲ್ಲಿ 100ಕ್ಕೆ 85 ಭಾಗಕ್ಕಿಂತಲೂ ಮೇಲ್ಪಟ್ಟು ಅಂತರ್‌ಜಲ ಓವರ್ ಎಕ್ಸ್‌ಪ್ಲಾಯ್ಟೇಶನ್ ಆಗಿದೆ. ಅಂಥದ್ದಕ್ಕೆ ನಾವು ಈಗಾಗಲೇ ವರ್ಲ್ಡ್ ಬ್ಯಾಂಕ್‌ಗೆ ಕ್ರಿಯಾ ಯೋಜನೆಯನ್ನು ತಯಾರು ಮಾಡಿ ಪೂರ್ತಿ ಆ 42. 43 ತಾಲ್ಲೂಕುಗಳಿಗೂ ಸಮಗ್ರವಾಗಿ ಅಲ್ಲಿ ಬರತಕ್ಕಂಥ ಮಳೆಯ ನೀರನ್ನು 100ಕ್ಕೆ 100ರಷ್ಟು ಅನ್ನು ನಾವು ಉಪಯೋಗ ಮಾಡಿಕೊಳ್ಳತಕ್ಕಂಥದ್ದಕ್ಕೆ ಒಂದು ಕ್ರಿಯಾ ಯೋಜನೆಯನ್ನು ತಯಾರು ಮಾಡಿ ಕಳುಹಿಸಿಕೊಟ್ಟಿದ್ದೇವೆ. ಅವರು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಅದಕ್ಕೆ ಎರಡನೇ ಹಂತದಲ್ಲಿ ಮಂಜೂರಾತಿಯನ್ನು ಕೊಡುತ್ತೇವೆ ಎನ್ನುವ ಮಾತನ್ನೂ ಸಹ ಹೇಳಿದ್ದಾರೆ. ಬಹುಶಃ ಅದು ಬಂದ ಮೇಲೆ ಇದಕ್ಕೆ ಸಮಗ್ರವಾದಂಥ ಪರಿಹಾರವನ್ನು ಕಂಡುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ನಾನು ಉದಾಹರಣೆಗೆ ಕೇಳಿರಲಿಲ್ಲ. ಸಂಪೂರ್ಣ ವಿವರವನ್ನು ಕೇಳಿದ್ದೆ. ಆದರೆ ವಿವರವನ್ನು ಅವರು ಕೊಟ್ಟಿಲ್ಲ. ಉದಾಹರಣೆಯಾಗಿ

ಎರಡು ಕ್ಷೇತ್ರಗಳ ಹೆಸರನ್ನು ಕೊಟ್ಟಿದ್ದಾರೆ. ನಾನು ಸಂಪೂರ್ಣ ವಿವರವನ್ನು ಕೇಳುವ ಉದ್ದೇಶ ಏನೆಂದರೆ, ನಾವು ಏನು ಹಣ ಖರ್ಚು ಮಾಡುತ್ತಿದ್ದೇವೆ ಅದು ಸರಿಯಾದ ರೀತಿಯಲ್ಲಿ ಖರ್ಚು ಆಗುತ್ತಿದೆಯೇ? ಚೆಕ್ ಡ್ಯಾಮ್ ಆಗಿರಬಹುದು. ಅಥವಾ ಬಾವಿಗಳು ಆಗಿರಬಹುದು. ಹೀಗೆ ಏನೇ ಇರಹುದು. ಆದರೆ ಅದು ಸರಿಯಾದ ರೀತಿಯಲ್ಲಿ ಆಗುತ್ತಿದೆಯೇ ಎಂದು ನೋಡತಕ್ಕಂಥದ್ದು ನಮ್ಮ ಜವಾಬ್ದಾರಿಯಾಗಿದೆ. ಇಲ್ಲದಿದ್ದರೆ, ಇಷ್ಟೆಲ್ಲಾ ಹಣವನ್ನು ಖರ್ಚು ಮಾಡಿ ಆ ಅಂತರ್‌ಜಲ ಮಟ್ಟವನ್ನು ನಾವು ಮೇಲಕ್ಕೆ ತರುವುದಕ್ಕೆ ಆಗದಿದ್ದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಅದರಿಂದಾಗಿಯೇ ನಾನು ಸಮಪೂರ್ಣವಾದ ವಿವರವನ್ನು ಕೇಳಿದ್ದೆ. ಆದರೆ ಇಲ್ಲಿ ಉದಾಹರಣೆಗೆ ಎರಡು ಪ್ರದೇಶವನ್ನು ಮಾತ್ರ ಕೊಟ್ಟಿದ್ದಾರೆ.

ಅಧ್ಯಕ್ಷರು : ನೀವು ಉಪ ಪ್ರಶ್ನೆಗಳನ್ನು ಮಾತ್ರ ಕೇಳಿ. ಸುಮ್ಮನೆ ಭಾಷಣ ಮಾಡಬೇಡಿ.

ಶ್ರೀ ದಿನೇಶ್ ಗುಂಡೂರಾವ್ : ಜನಜಾಗೃತಿ ಕಾರ್ಯಕ್ರಮವನ್ನು ಏನು ಮಾಡಿಸುತ್ತಿದ್ದಾರೆ ಅದನ್ನು ಇಡೀ ರಾಜ್ಯದಲ್ಲಿ ಮಾಡಿಸಬೇಕು. ಕೇವಲ ಮೈಸೂರು ಮತ್ತು ಬಳ್ಳಾರಿ ಹೀಗೆ ಈ ಎರಡು ಡಿವಿಷನ್ಸ್ ಅನ್ನು ಮಾತ್ರ ತೆಗೆದುಕೊಂಡಿದ್ದಾರೆ. ಜನಜಾಗೃತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಮಾಡುತ್ತಾರೆಯೇ ಎಂದು ತಮ್ಮ ಮೂಲಕ ನಾನು ಕೇಳಬಯಸುತ್ತೇನೆ.

ಶ್ರೀ ಎ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಎಲ್ಲಿ ಇದರ ಫಲಿತಾಂಶವನ್ನು ಕಂಡಿದ್ದೇವೆ ಎನ್ನುವುದಕ್ಕೋಸ್ಕರ ಸಾಂಕೇತಿಕವಾಗಿ ಎರಡು ಪ್ರದೇಶದ ಹೆಸರನ್ನು ನಾನು ಕೊಟ್ಟಿರುವುದಾಗಿದೆ. ನಾವು 1091 ವಿವಿಧ ರಚನೆಗಳನ್ನು ಚೆಕ್ ಡ್ಯಾಂ, ಇಂಗುಬಾವಿ, ತೋಡುಬಾವಿ ಇವೆಲ್ಲವನ್ನು ಮಾಡಿರತಕ್ಕಂಥ ಕೃತಕ ಡೈಕ್ಸ್ ಏನು ಮಾಡಿದ್ದೇವೆ ಅದರ ಒಂದು ಪಟ್ಟಿಯನ್ನು ಅನುಬಂಧದಲ್ಲಿ ಕೊಟ್ಟಿದ್ದೇನೆ. ಜಿಲ್ಲಾವಾರು ತಾಲ್ಲೂಕುವಾರು ವಿವರವುಳ್ಳ ಅನುಬಂಧವನ್ನು ಕೊಟ್ಟಿದ್ದು ಅದನ್ನು ತಾವು ದಯವಿಟ್ಟು ನೋಡಬಹುದು. ಎಲ್ಲೆಲ್ಲಿ ತೀವ್ರತರವಾದಂಥ ಅಂತರ್‌ಜಲದ ಮಟ್ಟ ಗಂಭೀರವಾಗಿದೆ ಎಂದು 82 ತಾಲ್ಲೂಕುಗಳನ್ನು ಏನು ಗುರುತಿಸಿದ್ದೇವೆ. ಅಂಥ ಕಡೆ ಅವುಗಳನ್ನು ಎರಡು ವಲಯಗಳನ್ನಾಗಿ ಮಾಡಿಕೊಂಡು ಅದು ಮೈಸೂರು ವಲಯ ಮತ್ತು ಬಳ್ಳಾರಿ ವಲಯ ಎಂದು ಎರಡು ವಲಯಗಳನ್ನು ಮಾಡಿಕೊಂಡು ಆ ಎರಡು ವಲಯಗಳಲ್ಲಿ ಇದಕ್ಕೆ ಪ್ರಯಾರಿಟಿ ಕೊಟ್ಟುಕೊಂಡಿದ್ದೇವೆ.

ಶ್ರೀ ಶಿವಾನಂದ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅಂತರ್ಜಲ ಕುಸಿಯುವುದರಿಂದಲೇ ಬೇರೆ ಸಮಸ್ಯೆ ಕೂಡ ಉದ್ಭವವಾಗಿದೆ. ಉದಾಹರಣೆಗೆ ತಾವು ಯಾವುದನ್ನು ಕಪ್ಪು ಮತ್ತು ಬೂದು ಎಂದು ಐಡೆಂಟಿಫೈ ಮಾಡುತ್ತೀರಿ, ಒಂದು ಸಾರಿ ಕಪ್ಪು ಅಥವಾ ಬೂದು ಎಂದು ಬಂದ ಮೇಲೆ ಕೆಇಬಿಯವರು ಎಲಿಕ್ಟ್ರಿಫಿಕೇಷನ್ ಪರ್ಮಿಷನ್ ಕೊಡುವುದಿಲ್ಲ. ಇವತ್ತು ಅಲ್ಲಿ ಓಪನ್ ವೆಲ್ ಹೊಡೆದರೂ ಪರ್ಮಿಷನ್ ಕೊಡುವುದಿಲ್ಲ. ಬೋರ್‌ವೆಲ್ ಹೊಡೆದರೂ ಪರ್ಮಿಷನ್ ಸಿಗುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ನಮ್ಮಲ್ಲಿ ಇಂಡಿ ಮತ್ತು ಬಾಗೇವಾಡಿ ಎರಡು ತಾಲ್ಲೂಕುಗಳಲ್ಲಿ ಒಂದು ಕಪ್ಪು ಮತ್ತು ಒಂದು ಬೂದಿನಲ್ಲಿದೆ. ಆ ಇಂಡಿ ತಾಲ್ಲೂಕು ಇವತ್ತು ಯುಕೆಪಿ ಕ್ಯಾನಲ್ ಬಂದು 40 ಪರ್ಸೆಂಟ್ ಇರಿಗೇಷನ್ ಆಗಿದೆ. ಆದರೆ, ಅದು ಕಪ್ಪುಪಟ್ಟಿಗೆ 6 ವರ್ಷಗಳ ಹಿಂದೆ ಸೇರಿರುವುದರಿಂದ ಇವತ್ತು ಕೆಇಬಿ ಕನೆಕ್ಷನ್ ಕೊಡುತ್ತಿಲ್ಲ. ಇವತ್ತು ಯುಕೆಪಿ ನೀರು ಬಂದಿದೆ. ಆದರೂ ಈ ಪರಿಸ್ಥಿತಿ ಇದೆ. ಅದಕ್ಕೆ ಕಪ್ಪು ಮತ್ತು ಬೂದಕ್ಕೆ ಪ್ಯಾರಾಮೀಟರ್ಸ್ ಏನು

ಫಿಕ್ಸ್ ಮಾಡಿದರು. ಇದನ್ನು ತೆಗೆದು ಹಾಕಬೇಕಾದರೆ ಕೇಂದ್ರ ಸರ್ಕಾರಕ್ಕೆ ಅಧಿಕಾರವಿದೆ. ನಿಮಗಿಲ್ಲ. ಅದಕ್ಕೆ ನಾವು ಹಿಂದಿನ ಸಭೆಯಲ್ಲೂ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೆ. ಏಕೆಂದರೆ, ಎಲೆಕ್ಟ್ರಿಫಿಕೇಷನ್ ಪರ್ಮಿಷನ್ ಸಿಗದೆ ಎಲ್ಲರೂ ಇಲ್ಲೀಗಲ್ ಹೊಡೆದುಕೊಳ್ಳುತ್ತಾರೆ. ಅದರಿಂದ ನಿಮಗೂ ಲಾಸ್ ಇದೆ. ಏಕೆಂದರೆ, ಅಲ್ಲಿ ಕಪ್ಪು ಬಂದ ಮೇಲೆ ಕೆಇಬಿಯವರು ಪರ್ಮಿಷನ್ ಕೊಡುವುದಿಲ್ಲ. ಅದು ರೂಲೇ ಆಗಿಬಿಟ್ಟಿದೆ. ಅದಕ್ಕೆ ಎಲ್ಲಿ ಇರಿಗೇಷನ್ ಆಗಿದೆ ಅಂತಲ್ಲಿ ಕಪ್ಪು ಎಂದು ತೆಗೆದು ಹಾಕಲಿಕ್ಕೆ ಅಥವಾ ಹೋಬಳಿವೈಸ್ ಕಪ್ಪು ಅಥವಾ ಬೂದು ಎಂದು ಪ್ಯಾರಾಮೀಟರ್ಸ್ ಫಿಕ್ಸ್ ಮಾಡಿದರೆ ಆ ರೈತರು ಎಲ್ಲಿ ನೀರು ಬಂದಿದೆ ಅಲ್ಲಾದರೂ ಇರಿಗೇಷನ್ ಮಾಡಿಕೊಳ್ಳಲು ಅವಕಾಶವಿದೆ. ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ವಿ. ಮುನಿಯಪ್ಪ : ಕಪ್ಪು ಮತ್ತು ಬೂದನ್ನು ಘೋಷಣೆ ಮಾಡುವುದಕ್ಕೆ ಪ್ರತಿ 5 ವರ್ಷಗಳಿಗೊಮ್ಮೆ ನಮ್ಮ ಸ್ಟೇಟ್ ಗ್ರೌಂಡ್‌ವಾಟರ್‌ನವರು ನಾವು ಸರ್ವೆ ಮಾಡುತ್ತೇವೆ. ಸೆಂಟ್ರಲ್ ಗ್ರೌಂಡ್ ವಾಟರ್ ಬೋರ್ಡ್‌ನವರೂ ಸರ್ವೆ ಮಾಡುತ್ತಾರೆ. ಎರಡೂ ಸರ್ವೆ ರಿಪೋರ್ಟ್ಸ್ ಅನ್ನು ನಾವು ನಬಾರ್ಡ್‌ಗೆ ಕಳುಹಿಸಿಕೊಡುತ್ತೇವೆ. ನಬಾರ್ಡ್ ಕನ್ಸಾಲಿಡೇಟೆಡ್ ಮಾಡಿ ತಾಲ್ಲೂಕು ವೈಸ್ ಅನ್ನು ಗುರುತಿಸುವ ಕೆಲಸವನ್ನು ಇಲ್ಲಿಯವರೆಗೆ ಘೋಷಣೆ ಮಾಡುತ್ತಿದ್ದೆವು. ಈಗ ವಾಟರ್‌ಷೆಡ್‌ವೈಸ್ ಮಾಡಬೇಕೆಂದು ಹೇಳಿ ಹೊಸದಾಗಿ ನಾವು ತೆಗೆದುಕೊಂಡಿದ್ದೇವೆ. ತಾಲ್ಲೂಕುವಾರು ಇಲ್ಲ. ಜಲಾನಯನ ಪ್ರದೇಶವಾರು ಇದನ್ನು ಘೋಷಣೆ ಮಾಡಬೇಕೆಂದು ಅದರ ಪ್ರಕಾರ ಸರ್ವೆ ಮಾಡಿ ವರದಿ ಕೊಡಿಸಿದ್ದೇವೆ. ನಬಾರ್ಡ್‌ನವರು ಬಹುಶಃ ಕನ್‌ಸಾಲಿಡೇಟೆಡ್ ಮಾಡಿ ಶೀಘ್ರದಲ್ಲಿ ಕಳುಹಿಸಿಕೊಡುತ್ತಿದ್ದಾರೆ. ಅದರ ಪ್ರಕಾರ ಎಲ್ಲೆಲ್ಲಿ ಮರು ಅಂತರ್ಜಲ ಪೂರೈಕೆಯಾಗಿದೆ. ನೀವು ಹೇಳಿದ ಹಾಗೆ ಎಲ್ಲೆಲ್ಲಿ ನೀರು ಬಂದಿದೆ. ನದಿ ನಾಲೆಗೆ ನೀರು ಬಂದು ಪೂರೈಕೆಯಾಗಿದ್ದರೆ ಅದನ್ನು ನಾವು ಕಪ್ಪು ಮತ್ತು ಬೂದು ಪಟ್ಟಿಯಿಂದ ತೆಗೆಯುತ್ತೇವೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಬಹುಶಃ ಈ ವಿಷಯ ಇಲ್ಲಿರುವ 224 ಜನ ಸದಸ್ಯರು ಗಮನಿಸಬೇಕಾದ ವಿಷಯ. ನಾನು ಕಿರಿಯ ಮಿತ್ರರು ಈ ಪ್ರಶ್ನೆ ಕೇಳಿದ್ದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಅಂತರ್ಜಲ ಬತ್ತಿಹೋಗುತ್ತಿದೆ ಎನ್ನುವ ನಿರ್ವಿವಾದ ಬಹುಶಃ ಅಂತರ್ಜಲ ಬತ್ತಿಹೋಗಲು ಪ್ರಮುಖ ಕಾರಣಗಳೇನು? ಇಲ್ಲದಿರುವ ಅಂತರ್ಜಲವನ್ನು ವೃದ್ಧಿಪಡಿಸಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಜೊತೆಗೆ ಈಗಾಗಲೇ ಇರುವ ಅಂತರ್ಜಲ ಬತ್ತಿಹೋಗದಂತೆ ನೋಡಿಕೊಳ್ಳುವುದು ಕೂಡ ಒಂದು ಪ್ರಮುಖವಾದುದು. ಸನ್ಮಾನ್ಯ ಸಚಿವರು ನೀರು ಇಲ್ಲದಿರುವ ಕಡೆ ಜಲವನ್ನು ವೃದ್ಧಿಪಡಿಸಲು ಏನೇನು ಕಾರ್ಯಕ್ರಮ ಎನ್ನುವ ಬಗ್ಗೆ ಹೇಳಿದರು. ಇರುವ ಜಲವನ್ನು ಬತ್ತಿಹೋಗಲು ಪ್ರಕೃತಿಯಲ್ಲಿ ನಾವು ಮಾಡುತ್ತಿರುವ ಅತ್ಯಾಚಾರ ಇದೆಯೆಲ್ಲಾ ಅದನ್ನೂ ಕೂಡ ನಿಲ್ಲಿಸಲಿಕ್ಕೆ ಸ್ವಲ್ಪ ಗಮನಹರಿಸಬೇಕಾಗುತ್ತದೆ. ಏಕೆಂದರೆ, ನೀವು ಪ್ರಶ್ನೆ ಕೇಳಿ, ಭಾಷಣ ಮಾಡಬೇಡಿ ಎಂದು ಹೇಳುತ್ತಿರುವುದರಿಂದ, ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಪ್ರಶ್ನೆಯನ್ನು ನಿಯಮ 69ಕ್ಕೆ ಕನ್‌ವರ್ಟ್ ಮಾಡಿ ಸ್ವಲ್ಪ ಹೊತ್ತು ಈ ವಿಷಯದಲ್ಲಿ ಚರ್ಚೆ ಮಾಡಿ ಇದಕ್ಕೇನಾದರೂ ಪರಿಹಾರ ರೂಪಿಸಲಿಕ್ಕೆ ಸರ್ಕಾರದ ಗಮನಕ್ಕೆ ತರುವುದು ಉತ್ತಮ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಈ ಮಾನವ ಪ್ರಕೃತಿಯಲ್ಲಿ ಮಾಡುತ್ತಿರುವ ಅತ್ಯಾಚಾರದಿಂದ ಹೇಗೆ ಅಂತರ್ಜಲ ಬತ್ತಿ

ಹೋಗಲು ಕಾರಣ ಎನ್ನುವುದಕ್ಕೆ ಮದ್ದೂರು ಮತ್ತು ನನ್ನ ಕ್ಷೇತ್ರದ ಮಧ್ಯದಲ್ಲಿ ಶಿಂಷಾ ನದಿ ಹರಿಯುತ್ತದೆ. ಇವರು ಕೆಲವು ನಿಬಂಧನೆಗಳನ್ನು ಹಾಕಿ ಮರಳನ್ನು ಎತ್ತಲು ಅವಕಾಶ ಕೊಟ್ಟಿದ್ದಾರೆ ಅಲ್ಲಿ. ನನ್ನ ಪ್ರಕಾರ, ಮೊದಲನೆಯದಾಗಿ ಅದೊಂದು ದೊಡ್ಡ ಅಪರಾಧ. ಇವರು ಮರಳನ್ನು ತೆಗೆಯಲು ಪರ್ಮಿಷನ್ ಕೊಡಬಾರದಿತ್ತು. ಎಷ್ಟು ಕೋಟಿ ರೂಪಾಯಿ ಅದರಿಂದ ಇಲಾಖೆಗೆ ಆದಾಯ ಬರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಎಷ್ಟೇ ಕೋಟಿ ರೂಪಾಯಿ ಬಂದರೂ ಕೂಡ ನಾನು ಸರ್ಕಾರಕ್ಕೆ ಅನನ್ಯವಾಗಿ ಪ್ರಾರ್ಥಿಸುತ್ತೇನೆ. ಈ ಕಾರ್ಯಕ್ರಮವನ್ನು ನಿಲ್ಲಿಸಬೇಡಿ. ಎರಡನೆಯದಾಗಿ, ನಿಬಂಧನೆ ಪ್ರಕಾರ ಅಲ್ಲಿ ಮರಳು ಎತ್ತುವುದಕ್ಕೆ ಆದೇಶ ಮಾಡಿಲ್ಲ. ಅನೇಕ ಕಾರಣಕ್ಕಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಾರಿ ಆಸಕ್ತಿ ವಹಿಸಿ ನಿಲ್ಲಿಸಿದರು. ನಾನು ದಿನನಿತ್ಯ ಕೂಗಾಡುವುದಾಗಿದೆ. ಆದರೂ ಕೂಡ ಮರಳನ್ನು ಎತ್ತುವುದರಿಂದ ನೀರು ಹರಿಯುವಾಗ ಆಳಕ್ಕೆ ಹೋಗದೆ ಅಂತರ್ಜಲ ಬತ್ತಿ ಹೋಗುತ್ತಿರುವುದು ಅನೇಕ ಕಡೆ ಆಗುತ್ತಿದೆ. ದಯವಿಟ್ಟು ಅದನ್ನು ನಿಲ್ಲಿಸುತ್ತಾರಾ? ಮೊದಲು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನಿಲ್ಲಿಸುತ್ತಾರಾ? ಬೇರೆ ಕಡೆಯೂ ಕ್ರಮ ತೆಗೆದುಕೊಳ್ಳುತ್ತಾರಾ? ಇದರ ಬಗ್ಗೆ ಚರ್ಚೆ ಮಾಡಲು ಯಾವಾಗಾದರೂ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು : ನೀವು ರೂಲ್ 69ರ ಪ್ರಕಾರ ನೋಟೀಸ್ ಕೊಡಿ. ಐ.ವಿಲ್ ಅಡ್ಮಿಟ್ ಇಟ್.

ಶ್ರೀ ಬಿ. ಸೋಮಶೇಖರ್ : ಮಾನ್ಯ ರಾಮಯ್ಯನವರ ಮಾತಿಗೆ ನಾನು ಸಹ ಧ್ವನಿಗೂಡಿಸುತ್ತಿದ್ದೇನೆ. ಇದು ಬಹಳ ಸೂಕ್ಷ್ಮವಾದ ವಿಚಾರ. ಇದು ದೀರ್ಘವಾಗಿ ಚರ್ಚೆಯಾಗಬೇಕಾಗಿದೆ. ತಾವು ಅರ್ಧ ಗಂಟೆ ಚರ್ಚೆಗೆ ಹಾಕಿಕೊಂಡರೆ ನಾವು ಮಾತನಾಡಬಹುದು.

ಅಧ್ಯಕ್ಷರು : ಆಗಬಹುದು. ಈಟೀಸ್ ಅಗ್ರೀಡ್.

ಶ್ರೀ ವೈ.ಕೆ. ರಾಮಯ್ಯ : ನನ್ನ ಕ್ಷೇತ್ರದಲ್ಲಾದರೂ ನಿಲ್ಲಿಸುತ್ತಾರಾ ಎಂಬುದನ್ನು ಮಂತ್ರಿಗಳು ಹೇಳಲಿ. ಪ್ರತಿದಿನ ಕೂಗಾಡಿ ಸಾಕಾಗಿ ಹೋಗಿದೆ. ಮುಖ್ಯಮಂತ್ರಿಗಳು ಹೇಳಿದ ಮೇಲೆ ಮದ್ದೂರು ಕಡೆಗೆ ನಿಲ್ಲಿಸಿದ್ದಾರೆ. ನಮ್ಮ ಮಾತನ್ನು ಮಂತ್ರಿಗಳು ಕೇಳುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಮರಳು ತೆಗೆಯುವುದನ್ನು ನಿಲ್ಲಿಸುತ್ತಾರಾ, ಹೇಗೆ ಎಂದು ಅಪ್ಪಣೆ ಕೊಡಬೇಕು. ನಮ್ಮ ಕಡೆ ಮರಳನ್ನು ಶಿಂಷಾ ನದಿಯಿಂದ ತೆಗೆಯುವುದನ್ನು ನಿಲ್ಲಿಸುತ್ತೀರಾ ಆ ಬಗ್ಗೆ ನಾನು ತಮಗೆ ಕಾಗದ ಬರೆದಿದ್ದೇನೆ. ಆದರೂ ಏನೂ ಪ್ರಯೋಜನವಾಗಲಿಲ್ಲ.

ಶ್ರೀ ಪಿ. ಮುನಿಯಪ್ಪ : ಮರಳನ್ನು ತೆಗೆಯುವ ವಿಚಾರದ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅನುವು ಮಾಡಿಕೊಡುತ್ತೇನೆಂದು ಅಧ್ಯಕ್ಷರು ಹೇಳಿದ್ದೀರಿ. ಖಂಡಿತ ಆ ಸಂದರ್ಭದಲ್ಲಿ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡೋಣ.

ಪಶು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

546 (4926) : ಶ್ರೀ ಶಿವಶಂಕರ ರೆಡ್ಡಿ ಎಸ್.ಹೆಚ್. (ಗೌರಿಬಿದನೂರು) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಸುಮಾರು 600 ಕ್ಕೂ ಹೆಚ್ಚು ಪಶುವೈದ್ಯ ಶಾಲೆಗಳನ್ನು ಉನ್ನತೀಕರಿಸಿರುವುದು ನಿಜವಲ್ಲವೇ; ಹಾಗಿದ್ದಲ್ಲಿ, ಸುಮಾರು 1000 ಹುದ್ದೆಗಳು ಖಾಲಿ ಇರುವುದನ್ನು ಭರ್ತಿ ಮಾಡಲು ಕೈಗೊಳ್ಳುವ ಕ್ರಮವೇನು;

ಆ) ಈ ಕೊರತೆಯಿಂದ ಗ್ರಾಮಾಂತರ ಪ್ರದೇಶ ರೈತರಿಗೆ ಪಶುವೈದ್ಯಕೀಯ ಸೌಲಭ್ಯ ದೊರೆಯುವಲ್ಲಿ ಲೋಪವಾಗಿಲ್ಲವೇ;

ಇ) ಬರಗಾಲದ ಹಿನ್ನೆಲೆಯಲ್ಲಿ ಪಶುಗಳಿಗೆ ತಪಾಸಣಾ ಮಾಡುವ ವೆಚ್ಚವನ್ನು ಭರಿಸುವುದು ರೈತರಿಗೆ ಹೊರೆಯಾಗುವುದಿಲ್ಲವೇ; ಆದಕಾರಣ ಈ ಕ್ರಮವನ್ನು ಕೈಬಿಡಲಾಗುವುದೇ;

ಈ) ಹಳೆಯ ಪಶು ಚಿಕಿತ್ಸಾಲಯಗಳ ಕಟ್ಟಡಗಳ ದುರಸ್ತಿಗಾಗಿ ಪ್ರತ್ಯೇಕ ನಿಧಿಯನ್ನು ಸ್ಥಾಪಿಸಲಾಗುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) 600 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಕಳೆದ ಮೂರು ವರ್ಷದಲ್ಲಿ ರಾಜ್ಯಾದ್ಯಂತ ಮೇಲ್ದರ್ಜೆಗೇರಿಸಲಾಗಿದೆ. 250 ಪಶುವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

203 ಪಶುವೈದ್ಯಾಧಿಕಾರಿಗಳು ಮತ್ತು 311 ಪಶುವೈದ್ಯಕೀಯ ಸಹಾಯಕರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮ ಮಾಡಿಕೊಳ್ಳಲಾಗಿದೆ.

ಆ) ಲಭ್ಯವಿರುವ ಸಿಬ್ಬಂದಿಯಿಂದ ಪಶುವೈದ್ಯಕೀಯ ಸೇವೆಗಳನ್ನು ಒದಗಿಸಲಾಗುತ್ತಿದೆ.

ಇ) ವಿಧಿಸಲಾಗಿದ್ದ ಸೇವಾಶುಲ್ಕವನ್ನು ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 57 ಪಪಾಯೋ 2003 ದಿನಾಂಕ: 21.07.2003ರಲ್ಲಿ ಹಿಂದಕ್ಕೆ ಪಡೆಯಲಾಗಿದೆ.

ಈ) ಸದ್ಯಕ್ಕೆ ಇಲ್ಲ.

ಶ್ರೀ ಎಸ್.ಹೆಚ್. ಶಿವಶಂಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಸುಮಾರು 600 ಕ್ಕೂ ಮೇಲ್ಪಟ್ಟು ಪಶು ವೈದ್ಯಾಧಿಕಾರಿಗಳ ನೇಮಕಾತಿಯ ಪ್ರಕ್ರಿಯೆ ಈಗಾಗಲೇ ಚಾಲೂ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇದು ಬಹಳಷ್ಟು ಪಶು ವೈದ್ಯ ಶಾಲೆಗಳಲ್ಲಿ ಈ ವೈದ್ಯಾಧಿಕಾರಿಗಳಿಲ್ಲದೆ ತೊಂದರೆಯಾಗಿದೆ. ಈ ಪ್ರಕ್ರಿಯೆಯನ್ನು ಬೇಗ ಮುಗಿಸಿ ನೇಮಕಾತಿ ಆಗಬೇಕೆಂದು ಆಗ್ರಹ ಮಾಡುತ್ತಾ, ಅನೇಕ ಪಶು ವೈದ್ಯಕೀಯ ಕಟ್ಟಡಗಳು ಬಹಳ ಶಿಥಿಲವಾಗಿವೆ. ಯಾವುದೇ ಯೋಜನೆಯಡಿಯಲ್ಲಿ ಅವುಗಳ ರಿಪೇರಿ ಕೂಡ ಆಗುತ್ತಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವುದಾದರೊಂದು ಶೀರ್ಷಿಕೆಯಡಿಯಲ್ಲಿ ಹಳೇ ಕಟ್ಟಡಗಳನ್ನು ರಿಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ ಈಗಾಗಲೇ ನಾನು ತಿಳಿಸಿದ ಹಾಗೆ, 250 ಪಶು ವೈದ್ಯರುಗಳನ್ನು ಶೀಘ್ರದಲ್ಲಿ ನೇಮಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ. ರಾಜ್ಯದಲ್ಲಿ ಒಟ್ಟು 16,428 ಹುದ್ದೆಗಳಿವೆ. ಭರ್ತಿಯಾಗಿರುವುದು 11,820, 4548 ಖಾಲಿ ಹುದ್ದೆಗಳಿವೆ. ಇದನ್ನು ಭರ್ತಿ ಮಾಡಲು ಸಂಸ್ಥೆಗಳು ಜಾಸ್ತಿ ಇದ್ದು, ಡಾಕ್ಟರುಗಳು ಕಡಿಮೆ ಇರುವುದರಿಂದ ಅದಕ್ಕೋಸ್ಕರ ಹಂತ ಹಂತವಾಗಿ ಮೇಲ್ದರ್ಜೆಗೇರಿಸುವುದು ಮತ್ತು 250 ಡಾಕ್ಟರುಗಳನ್ನು ನೇಮಿಸುವ ಕ್ರಮವನ್ನು ನಾವು ಕೈಗೊಂಡಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ : ಈ ಇಲಾಖೆಯಲ್ಲಿ ಸುಮಾರು 3ನೇ ಒಂದು ಭಾಗದಷ್ಟು ಹುದ್ದೆಗಳು ಖಾಲಿ ಇವೆ. ಸುಮಾರು 60–70 ಅಸಿಸ್ಟೆಂಟ್ ಡೈರೆಕ್ಟರ್ಸ್ ಹುದ್ದೆಗಳು ಪ್ರಮೋಷನ್ಸ್ ಕೊಡದೇ ಖಾಲಿ ಇವೆ. ವೆಟರ್‌ನರಿ ಗ್ರಾಜ್ಯುಯೇಟ್ಸ್ ಬಹಳಷ್ಟಿದ್ದು, ಅವರನ್ನು ತುಂಬುವ ಕಾರ್ಯ ಮಾಡಿಲ್ಲ. ತಾವು ಹೇಳಿದ ಹಾಗೆ 500–600 ವೆಟರ್‌ನರಿ ಆಫೀಸರ್ಸ್ ಹುದ್ದೆ ಖಾಲಿ ಇವೆ. ವೆಟರ್‌ನರಿ

ಅಸಿಸ್ಟೆಂಟ್ಸ್ ಮತ್ತು ಕಾಂಪೌಂಡರ್, ಇತರೆ ಸ್ಟಾಫ್ ತಾವು ಹೇಳಿದ ಹಾಗೆ, ಸುಮಾರು 16 ಸಾವಿರ ಹುದ್ದೆಗಳಲ್ಲಿ 5 ಸಾವಿರ ಹುದ್ದೆ ಇಲ್ಲವೆಂದರೆ ಆಸ್ಪತ್ರೆಗಳನ್ನು ಹೇಗೆ ನಡೆಸುವುದು? ಕಳೆದ ಬಾರಿ ಕೇಳಿದಾಗಲೂ ಇದೇ ಹೇಳಿದಿರಿ. ನಾವು ರಿಕ್ರೂಟ್‌ಮೆಂಟ್ ಮಾಡುತ್ತೇವೆ, ಪ್ರಮೋಷನ್ಸ್ ಕೊಡುತ್ತೇವೆ ಎಂದು ಹೇಳಿದಿರಿ. ಆಸ್ಪತ್ರೆಗಳನ್ನು ಜಾಸ್ತಿ ಕೊಡುವುದು, ಅಲ್ಲಿ ಸ್ಟಾಫ್ ಇರುವುದಿಲ್ಲ. ಹಾಗೆ ತಮ್ಮ ಇಲಾಖೆಯಲ್ಲಿ ಒಟ್ಟಾರೆ 5 ಸಾವಿರ ಹುದ್ದೆಗಳು ಖಾಲಿ ಇದ್ದರೆ, ಅಲ್ಲಿ ಹಳ್ಳಿಯಲ್ಲಿ ಔಷಧಿ ಇಲ್ಲ, ಡಾಕ್ಟರ್ಸ್ ಇಲ್ಲ. ಆಸ್ಪತ್ರೆ ಇದೆ ಎಂದು ನಾವು ಶಾಸಕರು ಸಂತೋಷ ಪಡಬೇಕು. ನಮ್ಮಲ್ಲೊಂದು ವೆಟರ್‌ನರಿ ಆಸ್ಪತ್ರೆ ಇದೆ ಸಂತೋಷಪಡಬೇಕು. ಅನೇಕ ಆಸ್ಪತ್ರೆಗಳಲ್ಲಿ ಯಾವುದೇ ಸ್ಟಾಫ್ ಇಲ್ಲ. ಏನು ಕಷ್ಟವಿದೆ ಎಂಬುದು ನಮಗೆ ಗೊತ್ತಿಲ್ಲ. ಆದಷ್ಟು ಬೇಗ ತುಂಬುವ ಕಾರ್ಯ ಮಾಡಬೇಕು.

ಶ್ರೀ ಎಂ. ಮಹದೇವ್ : ಯಾವ ಆಸ್ಪತ್ರೆಗಳಲ್ಲಿ ಮೆಡಿಸಿನ್ಸ್ ಇಲ್ಲವೆಂದು ಹೇಳುವ ಹಾಗಿಲ್ಲ. ಎಲ್ಲಾ ಆಸ್ಪತ್ರೆಗಳಲ್ಲೂ ಸಾಕಷ್ಟು ಮೆಡಿಸಿನ್‌ಗಳನ್ನು ಕೊಟ್ಟಿದ್ದೇವೆ. ಸಾಧ್ಯವಾದಷ್ಟು ಡಾಕ್ಟರುಗಳನ್ನು ನೇಮಿಸಿದ್ದೇವೆ. ಪಕ್ಕದ ಆಸ್ಪತ್ರೆಗಳಲ್ಲಿ ಯಾರು ವೈದ್ಯರಿಲ್ಲವೋ ಅಂಥ ಕಡೆ ನಾವು ಮೊಬೈಲ್ ಯೂನಿಟ್‌ಗಳನ್ನು ವ್ಯವಸ್ಥೆ ಮಾಡಿದ್ದೇವೆ. ಆರ್ಥಿಕ ಇಲಾಖೆಯ ಅನುಮತಿಯೂ ಇದಕ್ಕೆ ಬೇಕಾಗುತ್ತದೆ. ಮಿತವ್ಯಯವನ್ನೂ ನಾವು ಅನುಸರಿಸುತ್ತಿರುವುದರಿಂದ ಹಂತ ಹಂತವಾಗಿ ನೇಮಕವನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನಿಸುತ್ತದೆ.

ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸಾಲ ಮತ್ತು ಸಹಾಯಧನ

547 (4778) : ಶ್ರೀ ಗೋಪಾಲ ಭಂಡಾರಿ (ಕಾರ್ಕಳ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸಾಲ ಮತ್ತು ಸಹಾಯಧನಗಳನ್ನು ಮಂಜೂರು ಮಾಡುವ ಅಧಿಕಾರಯಾರಿಗಿದೆ; ವಿವರ ಒದಗಿಸುವುದು.

ಆ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನರಿಗೆ ಯಾವ ಯಾವ ಉದ್ದೇಶಕ್ಕೆ ಸಾಲ ಮತ್ತು ಸಹಾಯಧನ ವಿತರಿಸಲಾಗಿದೆ, ತಾಲ್ಲೂಕು ಹೆಸರುಗಳೊಂದಿಗೆ ವಿವರ ನೀಡುವುದು?

ಇ) ಉಡುಪಿ ಜಿಲ್ಲೆಯಲ್ಲಿ ಎಷ್ಟು ಅರ್ಜಿಗಳು ಮಂಜೂರಾತಿಗಾಗಿ ಬಾಕಿ ಇವೆ; ಸಾಲ ಸಹಾಯಧನ ಎಷ್ಟು ಸಮಯದಲ್ಲಿ ಮಂಜೂರಾಗುತ್ತದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಾಲ ಪಡೆಯಲು ಇಚ್ಛಿಸುವ ಅರ್ಜಿದಾರರು ಅರ್ಜಿಗಳನ್ನು ಜಿಲ್ಲಾ ಪಂಚಾಯತ್ತಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಸಮಿತಿಗೆ ಸಲ್ಲಿಸಬೇಕಾಗುತ್ತದೆ. ಸಮಿತಿಯು ಅರ್ಜಿಯನ್ನು ಅರ್ಜಿದಾರರ ಸೇವಾ ವಲಯದಲ್ಲಿ ಬರುವ ಬ್ಯಾಂಕ್ ಶಾಖೆಗೆ ಶಿಫಾರಸ್ಸು ಮಾಡಿದ ಅರ್ಜಿದಾರರ ಯೋಜನೆಗಳು ಆರ್ಥಿಕ ಸಮಂಜಸತೆ ಹಾಗೂ ಲಾಭದಾಯಕತೆಯನ್ನು ಪರಿಶೀಲಿಸಿ ಸಾಲ ಮಂಜೂರಾತಿಗೆ ಒಪ್ಪಿಗೆ ಸೂಚಿಸಿ ಜಿಲ್ಲಾ ಸಮಿತಿಯ ಅನುಮೋದನೆಗಾಗಿ

ಕಳುಹಿಸುವುದು. ಜಿಲ್ಲಾ ಸಮಿತಿ ಅನುಮೋದಿಸಿದ್ದ ಅರ್ಜಿಗಳಿಗೆ ನಿಗಮದ ಕೇಂದ್ರ ಕಛೇರಿಯಿಂದ ಹಣ ಬಿಡುಗಡೆ ಮಾಡಿ ಸಂಬಂಧಿಸಿದ ಬ್ಯಾಂಕ್ ಶಾಖೆಗಳಿಗೆ ಕಳುಹಿಸಲಾಗುವುದು.

ಆ) ವಿವರವನ್ನು ಅನುಬಂಧ-1 ಮತ್ತು 2ರಲ್ಲಿ ಒದಗಿಸಲಾಗಿದೆ.

ಇ) ಉಡುಪಿ ಜಿಲ್ಲೆಯಲ್ಲಿ ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಿದ 47 ಅರ್ಜಿಗಳು ಮಂಜೂರಾತಿಗೆ ಬಾಕಿ ಇರುತ್ತದೆ. ಬ್ಯಾಂಕಿನಲ್ಲಿ ಈ ಸಾಲಿನಲ್ಲಿ ಮಂಜೂರಾತಿ ಪಡೆದ 24 ಪ್ರಸ್ತಾವನೆಗಳನ್ನು ಜಿಲ್ಲಾ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ಬ್ಯಾಂಕ್‌ಗಳಿಂದ ಮಂಜೂರಾತಿ ಪಡೆದ ಪ್ರಸ್ತಾವನೆಗಳಿಗೆ ಸಾಧ್ಯವಾದಷ್ಟು ಬೇಗನೆ ಮಾರ್ಜಿನ್ ಹಣ/ಸಹಾಯಧನ ಬಿಡುಗಡೆ ಮಾಡಲಾಗುತ್ತದೆ.

ಅನುಬಂಧ – 1

ಕಳೆದ ಮೂರು ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಸಾಲ ಮತ್ತು ಸಹಾಯಧನ ಮಂಜೂರು ಮಾಡಿದ ವಿವರಗಳ ತಃಖ್ತೆ

1. ಚೈತನ್ಯ ಸಾಲ ಯೋಜನೆ

ತಾಲ್ಲೂಕು : ಉಡುಪಿ (ಲಕ್ಷ ರೂ.ಗಳಲ್ಲಿ)

	ಕೃಷಿ ವಲಯ				ಸೇವಾ ವಲಯ				ಕೈಗಾರಿಕಾ ವಲಯ				ವ್ಯಾಪಾರ ವಲಯ			
ವರ್ಷ	ಫಲಾನುಭವಿಗಳ ಸಂಖ್ಯೆ	ಸಹಾಯ ಧನ	ಮಾರ್ಜಿನ್ ಹಣ	ಬ್ಯಾಂಕ್ ಪಾಲಿನ ಹಣ	ಫಲಾನುಭವಿಗಳ ಸಂಖ್ಯೆ	ಸಹಾಯ ಧನ	ಮಾರ್ಜಿನ್ ಹಣ	ಬ್ಯಾಂಕ್ ಪಾಲಿನ ಹಣ	ಫಲಾನುಭವಿಗಳ ಸಂಖ್ಯೆ	ಸಹಾಯ ಧನ	ಮಾರ್ಜಿನ್ ಹಣ	ಬ್ಯಾಂಕ್ ಪಾಲಿನ ಹಣ	ಫಲಾನುಭವಿಗಳ ಸಂಖ್ಯೆ	ಸಹಾಯ ಧನ	ಮಾರ್ಜಿನ್ ಹಣ	ಬ್ಯಾಂಕ್ ಪಾಲಿನ ಹಣ
1	2	3	4	5	6	7	8	9	10	11	12	13	14	15	16	17
2000–01	15	0.65	0.32	2.43	29	1.45	3.87	13.26	10	1.00	1.60	5.34	23	1.10	1.38	5.72
2001–02	26	0.35	1.04	4.07	39	1.75	4.82	18.35	05	1.25	0.65	2.45	114	1.25	3.45	14.55
2002–03	05	0.25	0.49	1.91	26	1.20	4.06	14.47	09	0.45	1.54	6.10	32	1.25	2.19	8.85
	46	1.25	1.85	8.41	94	4.40	12.36	46.08	24	2.70	3.79	13.89	169	3.36	7.02	29.12
ತಾಲ್ಲೂಕು : ಕುಂದಾಪುರ																
2000–01	–	–	–	–	32	0.16	3.49	12.95	16	6.80	1.51	5.63	48	1.95	0.87	7.54
2001–02	13	0.55	0.99	3.51	24	1.20	2.78	10.81	20	1.00	2.68	9.90	69	3.45	1.98	10.65
2002–03	12	0.50	1.40	5.58	25	0.95	2.89	11.84	15	0.70	1.74	16.60	83	3.75	3.48	17.59
	25	1.05	2.39	9.09	81	2.31	9.16	35.60	51	2.50	5.93	32.13	200	9.15	6.33	35.88
ತಾಲ್ಲೂಕು : ಕಾರ್ಕಳ																
2000–01	01	0.05	0.20	0.75	02	0.01	0.02	0.89	01	0.05	0.01	0.35	05	0.25	0.46	1.59
2001–02	38	0.40	1.96	6.84	16	0.35	1.49	3.43	03	–	0.06	0.24	10	0.1	0.75	2.29
2002–03	01	0.05	–	0.20	–	–	–	–	–	–	–	–	12	0.3	0.5	2.4
	40	0.50	2.16	6.79	18	0.36	1.51	4.32	04	0.05	0.07	0.59	27	0.65	1.71	6.28

2. ನೇರ ಸಾಲ ಯೋಜನೆ

ತಾಲ್ಲೂಕು : ಉಡುಪಿ

(ಲಕ್ಷ ರೂ.ಗಳಲ್ಲಿ)

ವರ್ಷ	ಸ್ವರ್ಣಿಮಾ		ಆಟೋರಿಕ್ಷಾ		ಸಣ್ಣ ವ್ಯಾಪಾರ		ಕೈಮಗಾರಿಕೆ		ಅರಿವು ಸಾಲ		ಅಂಗವಿಕಲರ ಸಾಲ	
	ಫಲಾನುಭವಿಗಳ ಸಂಖ್ಯೆ	ಸಾಲದ ಮೊತ್ತ	ಫಲಾನುಭವಿಗಳ ಸಂಖ್ಯೆ	ಸಾಲದ ಮೊತ್ತ	ಫಲಾನುಭವಿಗಳ ಸಂಖ್ಯೆ	ಸಾಲದ ಮೊತ್ತ	ಫಲಾನುಭವಿಗಳ ಸಂಖ್ಯೆ	ಸಾಲದ ಮೊತ್ತ	ಫಲಾನುಭವಿ ಸಂಖ್ಯೆ	ಸಾಲದ ಮೊತ್ತ	ಫಲಾನುಭವಿಗಳ ಸಂಖ್ಯೆ	ಸಾಲದ ಮೊತ್ತ
1	2	3	4	5	6	7	8	9	10	11	12	13
2000–01	195	9.75	02	1.33	02	0.57	15	3.42	18	1.80	–	–
2001–02	412	41.20	05	3.33	03	0.998	03	0.684	19	1.90	–	–
2001–03	205	24.10	–	–	–	–	–	–	19	1.90	01	0.35
	812	**75.05**	**07**	**4.66**	**05**	**1.568**	**18**	**4.104**	**56**	**5.60**	**01**	**0.35**
ಅ. ಕುಂದಾಪುರ ತಾಲ್ಲೂಕು												
2000–01	–	–	03	1.92	02	0.57	12	2.736	08	0.80	–	–
2001–02	95	9.5	05	3.33	07	2.328	–	–	08	0.80	–	–
2002–03	230	29.25	–	–	01	0.19	–	–	05	0.50	14	4.15
	325	**38.75**	**08**	**5.25**	**10**	**3.088**	**12**	**2.736**	**21**	**2.10**	**14**	**4.15**
ಇ. ಕಾರ್ಕಳ ತಾಲ್ಲೂಕು												
2000–01	–	–	03	1.92	–	–	08	1.824	–	–	–	–
2001–02	–	–	02	1.33			–	–	–		–	–
2002–03	13	1.95	–	–	–	–	–	–	–	–	01	0.35
	13	**1.95**	**05**	**3.25**	–	–	**08**	**1.824**	–	–	**01**	**0.35**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4778ಕ್ಕೆ ನೀಡಿರುವ ಉತ್ತರಕ್ಕೆ ಅನುಬಂಧ-2

ಸ್ವಾವಲಂಬನಾ ಸಾಲ ಯೋಜನೆ

ಉಡುಪಿ ತಾಲ್ಲೂಕು

ಕಳೆದ ಮೂರು ವರ್ಷಗಳಲ್ಲಿ ಉಡುಪಿ ಜಿಲ್ಲೆಯಲ್ಲಿ ಸಾಲ ಮತ್ತು ಸಹಾಯಧನ ಮಂಜೂರು ಮಾಡಿದ ವಿವರಗಳ ತಃಖ್ತೆ

(ಲಕ್ಷ ರೂ.ಗಳಲ್ಲಿ)

1. ಚೈತನ್ಯ ಸಾಲ ಯೋಜನೆ

ತಾಲ್ಲೂಕು : ಉಡುಪಿ

	ಕೃಷಿ ವಲಯ				ಸೇವಾ ವಲಯ				ಕೈಗಾರಿಕಾ ವಲಯ				ವ್ಯಾಪಾರ ವಲಯ			
ವರ್ಷ	ಫಲಾನು ಭವಿಗಳ ಸಂಖ್ಯೆ	ಸಹಾಯ ಧನ	ಮಾರ್ಜಿನ್ ಹಣ	ಬ್ಯಾಂಕ್ ಪಾಲಿನ ಹಣ	ಫಲಾನು ಭವಿಗಳ ಸಂಖ್ಯೆ	ಸಹಾಯ ಧನ	ಮಾರ್ಜಿನ್ ಹಣ	ಬ್ಯಾಂಕ್ ಪಾಲಿನ ಹಣ	ಫಲಾನು ಭವಿಗಳ ಸಂಖ್ಯೆ	ಸಹಾಯ ಧನ	ಮಾರ್ಜಿನ್ ಹಣ	ಬ್ಯಾಂಕ್ ಪಾಲಿನ ಹಣ	ಫಲಾನು ಭವಿಗಳ	ಸಹಾಯ ಧನ	ಮಾರ್ಜಿನ್ ಹಣ	ಬ್ಯಾಂಕ್ ಪಾಲಿನ ಹಣ
1	2	3	4	5	6	7	8	9	10	11	12	13	14	15	16	17
2000–01	06	0.30	0.18	1.14	19	0.95	2.40	7.25	05	0.25	0.19	1.46	18	0.90	1.27	6.04
2001–02	04	0.20	0.23	0.97	19	0.95	2.45	9.55	06	0.30	0.58	1.95	23	1.15	1.89	7.85
2002–03	02	0.20	6.16	0.64	17	0.85	1.64	6.13	01	0.05	–	0.20	36	1.80	2.50	8.67
ಕಾರ್ಕಳ ತಾಲ್ಲೂಕು																
2000–01	–	–	–	–	03	0.15	0.44	1.53	–	–	–	–	01	0.05	0.20	0.75
2001–02	02	0.10	0.24	0.87	04	0.20	0.40	1.30	–	–	–	–	04	0.20	0.63	2.34
2002–03	01	0.05	0.17	0.63	03	0.15	0.45	1.72	–	–	–	–	02	0.10	0.32	1.18
ಕುಂದಾಪುರ ತಾಲ್ಲೂಕು																
2000–01	03	0.15	0.30	1.30	04	0.20	0.54	2.21	–	–	–	–	07	0.35	0.80	3.10
2001–02	16	0.80	0.54	2.43	10	0.50	1.76	6.05	10	0.50	1.20	3.40	05	0.25	0.59	2.46
2002–03	10	0.50	–	0.56	07	0.35	0.58	2.43	02	0.10	0.36	1.34	15	1.15	0.14	1.91

ಶ್ರೀ ಹೆಚ್. ಗೋಪಾಲ ಭಂಡಾರಿ : ನಾನು ಕೇಳಿದ (ಅ) ಪ್ರಶ್ನೆಗೆ ಅವರು ಅರ್ಜಿಗಳನ್ನು ಜಿಲ್ಲಾಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯ ಕಮಿಟಿಯ ಮೂಲಕ ತೆಗೆದುಕೊಂಡು ಅದರ ನಂತರ ಅದನ್ನು ಸಮಿತಿಯ ಸಭೆಯಲ್ಲಿ ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಕಳುಹಿಸಿ ಅಲ್ಲಿಂದ ಬ್ಯಾಂಕ್‌ನವರು ಮಂಜೂರು ಮಾಡುತ್ತೇವೆ ಎಂಬ ಶಿಫಾರಸುಪತ್ರ ಬಂದ ನಂತರ ನಾವು ಅದನ್ನು ಕೇಂದ್ರ ಸಮಿತಿಗೆ ಕಳುಹಿಸುತ್ತೇವೆಂದು ಹೇಳಿದ್ದಾರೆ. ಇಲ್ಲಿ ಬಹಳ ವಿಳಂಬವಾಗುತ್ತದೆ. ವರ್ಷಾನುಗಟ್ಟಲೆ ಸಾಲ ಮಂಜೂರಾತಿಗೆ, ಸಹಾಯಧನ ಬಿಡುಗಡೆಗೆ ವಿಳಂಬವಾಗುತ್ತದೆ. ಬ್ಯಾಂಕ್‌ನವರು ಆ ಭಾಗದ ಎಲ್ಲಾ ಶಾಖೆಗಳಿಂದ ನೋ ಡ್ಯೂ ಸರ್ಟಿಫಿಕೇಟ್‌ಗಳನ್ನು ತರಿಸುವ ಕೆಲಸ ಮಾಡಿ ಸಾಕಷ್ಟು ವಿಳಂಬ ಮಾಡುತ್ತಿದ್ದಾರೆ. ಒಟ್ಟಾರೆ ಅರ್ಜಿ ವಿಲೇವಾರಿ ಆಗಬೇಕಾದರೆ ಅವರಿಗೆ ಸಾಲ ಮತ್ತು ಸಹಾಯಧನ ಬಿಡುಗಡೆಯಾಗಬೇಕಾದರೆ ಕನಿಷ್ಠ ಒಂದು ವರ್ಷವಾದರೂ ಹಿಡಿಯುತ್ತದೆ. ವಿಳಂಬವನ್ನು ಕಡಿಮೆ ಮಾಡಲು ಯಾವುದಾದರೊಂದು ರೀತಿಯಲ್ಲಿ ಕ್ರಮ ಕೈಗೊಳ್ಳಲು ಸಾಧ್ಯವಾಗುವುದಿಲ್ಲವೇ? ಎಂದು ಪ್ರಶ್ನೆ ಇದೆ. ಇನ್ನೂ ಇದಕ್ಕೆ ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗದಿಪಡಿಸಬೇಕಾಗುತ್ತದೆ. ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಸಾಲ ಮತ್ತು ಸಹಾಯಧನ ಬಿಡುಗಡೆಯಾಗುವಾಗ ಸಾಕಷ್ಟು ಅಸಮಾನತೆಗಳನ್ನು ಕಾಣಲಿಕ್ಕೆ ಸಾಧ್ಯವಿದೆ. ಅದನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲವೇ ಹೇಗೆ ಎಂದು ಕೇಳುತ್ತೇನೆ.

ಅಧ್ಯಕ್ಷರು : ಸಪ್ಲಿಮೆಂಟರಿ ಬ್ರೀಫ್ ಆಗಿರಲಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸದಸ್ಯರು ಎರಡು ವಿಷಯವನ್ನೂ ಪ್ರಸ್ತಾಪ ಮಾಡಿದ್ದಾರೆ. ಒಂದು ಸಮಯವನ್ನು ನಾವು ಒಂದು ವರ್ಷ ಕಾಲ ಅವಕಾಶ ಮಾಡಿಕೊಡಬಾರದು ಎಂದು ಸ್ಟ್ರೀಮ್-ಲೈನ್ ಮಾಡಬೇಕೆಂದರು, ಖಂಡಿತವಾಗಿ ನಾವು ಸ್ಟ್ರೀಮ್-ಲೈನ್ ಮಾಡುತ್ತೇವೆ. ಫಿಜಿಕಲ್ ಟಾರ್ಗೆಟ್ ಅಂಡ್ ಫೈನಾನ್ಸ್ ಟಾರ್ಗೆಟ್ ಬಗ್ಗೆ ಹೇಳಿದ್ದಾರೆ ಫಿಜಿಕಲ್ ಟಾರ್ಗೆಟ್ ಹಾಗೂ ಫೈನಾನ್ಸಿಯಲ್ ಟಾರ್ಗೆಟ್ ಈಗಾಗಲೇ ಪ್ರತಿ ಜಿಲ್ಲೆಗೂ ಇದೆ. ಅದೇನು ಹೊಸದಾಗಿ ಮಾಡಬೇಕಾಗಿಲ್ಲ. ಆದರೆ ಅವರ ಪ್ರಶ್ನೆಯಲ್ಲಿ ನಾನಂದುಕೊಂಡಂತೆ ಸಾಲದು ಎಂದು ಇದೆ. ಫೈನಾನ್ಸಿಯಲ್ ಮೊಬಲೈಸೇಷನ್ ಕೇಪಬಿಲಿಟೀಸ್ ನೋಡಿಕೊಂಡು ಅದನ್ನು ಹೆಚ್ಚು ಮಾಡುವುದಿದ್ದರೆ ಖಂಡಿತ ಮಾಡುತ್ತೇನೆ.

ಶ್ರೀ ಹೆಚ್. ಗೋಪಾಲ ಭಂಡಾರಿ : ನಾನು ಕೇಳಿದ್ದು ಏನೆಂದರೆ, ಬ್ಯಾಂಕ್‌ನವರನ್ನು ಮತ್ತು ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳನ್ನು ಒಂದು ಕಡೆ ಸೇರಿಸಿ ಸಾಲ ಹಾಗೂ ಸಹಾಯ ಧನವನ್ನು ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆ ಜಿಲ್ಲಾ ಮಟ್ಟದಲ್ಲಿ ಆಗುವುದಿಲ್ಲವೆ?

ಶ್ರೀ ಎ. ಕೃಷ್ಣಪ್ಪ : ನೋಡೆಲ್ ಆಫೀಸರ್ ಇದ್ದಾರೆ ಅದು ನಡೆಯುತ್ತಿದೆ, ಅವರ ಜಿಲ್ಲೆಯಲ್ಲಿ ಯಾವುದಾದರೂ ಸ್ಪೆಸಿಫಿಕ್ ಪ್ರಾಬ್ಲಂ ಇದ್ದರೆ ದಯಮಾಡಿ ನನಗೆ ಹೇಳಲಿ ಅದನ್ನು ಸರಿ ಮಾಡುವುದಕ್ಕೆ ನಾನು ಸಹಕಾರ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಎ.ಎಸ್. ಗುರುಸ್ವಾಮಿ ಅವರು ಗೈರುಹಾಜರಿದ್ದಾರೆ ಮಾನ್ಯ ಶಿವಾನಂದ ಪಾಟೀಲ್‌ರು ತಾವು ಪ್ರಶ್ನೆ ಕೇಳಿ.

ಬಿಜಾಪುರದಲ್ಲಿ ಡಿ. ದೇವರಾಜ್ ಅರಸುರವರ ಭವನ ನಿರ್ಮಾಣ

549 (4774) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಿ: ಶ್ರೀ ಡಿ. ದೇವರಾಜ್ ಅರಸುರವರ ನೆನಪಿಗಾಗಿ ವಿಜಾಪುರ ಜಿಲ್ಲಾ ಕೇಂದ್ರ ಸ್ಥಳದಲ್ಲಿ ಅರಸು ಭವನ ನಿರ್ಮಿಸಲು ಉದ್ದೇಶಿಸಲಾಗಿದೆಯೇ:

ಆ) ಹಾಗಿದ್ದರೆ, ನಿರ್ಮಾಣ ಕೆಲಸಕ್ಕಾಗಿ ನಗರದ ಯಾವ ಸ್ಥಳವನ್ನು ಆಯ್ಕೆ ಮಾಡಲಾಗಿದೆ.

ಇ) ಅರಸು ಭವನ ನಿರ್ಮಿಸಲು ನಿಗದಿಪಡಿಸಿದ ಅನುದಾನ ಎಷ್ಟು;

ಈ) ಯಾವ ಕಾಲಮಿತಿ ಒಳಗಾಗಿ ನಿರ್ಮಾಣ ಕಾರ್ಯ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು;

ಉ) ಸರ್ಕಾರಕ್ಕೆ ಅರಸು ಭವನ ನಿರ್ಮಿಸಲು ಉದ್ದೇಶವಿರದಿದ್ದರೆ ಮಾನ್ಯ ಮುಖ್ಯಮಂತ್ರಿಗಳು 2003–04ರ ಆಯವ್ಯಯ ಭಾಷಣದಲ್ಲಿ ಪ್ರತಿ ಜಿಲ್ಲೆಗೆ ಅರಸು ಭವನ ನಿರ್ಮಿಸುವುದಾಗಿ ತಿಳಿಸಿದ್ದು, ನಿಜವಲ್ಲವೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 2003–04ನೇ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರಕಟಿಸಿರುವಂತೆ ಪ್ರತಿ ಜಿಲ್ಲೆಯ ಕೇಂದ್ರವು ಒಂದೊಂದು ದೇವರಾಜ ಅರಸು ಭವನವನ್ನು ಹೊಂದುವುದು ಬಿಜಾಪುರ ಜಿಲ್ಲೆಗೂ ಸಹ ಒಂದು ದೇವರಾಜಅರಸು ಭವನವನ್ನು ಒದಗಿಸಲಾಗುತ್ತದೆ.

ಆ) ಬಿಜಾಪುರ ಜಿಲ್ಲಾ ಕೇಂದ್ರ ಸ್ಥಾನದ ನಗರ ವ್ಯಾಪ್ತಿಯಲ್ಲಿ ನಿವೇಶನವನ್ನು ಪಡೆಯಲು ಕ್ರಮವಹಿಸಲಾಗುತ್ತಿದೆ.

ಇ) ಭವನವನ್ನು ರೂ. 10.00 ಲಕ್ಷಗಳ ಅಂದಾಜಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.

ಈ) ಸದರಿ ಭವನದ ನಿರ್ಮಾಣ ಕಾರ್ಯವನ್ನು ನಿರ್ಮಾಣ ಏಜೆನ್ಸಿ ವಹಿಸಿದ ದಿನಾಂಕ ದಿಂದ 12 ತಿಂಗಳೊಳಗೆ ಪೂರ್ಣಗೊಳಿಸಬೇಕೆಂದು ಉದ್ದೇಶಿಸಲಾಗಿದೆ.

ಉ) ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿರತಕ್ಕಂಥ ಯೋಜನೆ ಇದಾಗಿದ್ದು ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ದೇವರಾಜ್ ಅರಸು ಭವನ ಆಗಬೇಕೆಂದು ಹೇಳಿದ್ದಾರೆ. ಅದಕ್ಕೆ ತಾವು ಗೈಡ್‌ಲೈನ್ಸ್ ಇನ್ನೂ ಫಿಕ್ಸ್ ಮಾಡಿಲ್ಲ. ಆದರೆ ಬಜೆಟ್ ಭಾಷಣದಲ್ಲಿ ಘೋಷಣೆ ಮಾಡಿರತಕ್ಕಂಥದ್ದು, ಜೊತೆಗೆ ಪ್ರತಿಯೊಂದು ಜಿಲ್ಲೆಯಲ್ಲಿ ತಾವು ಮಾಡಬೇಕಾದರೂ ಕನಿಷ್ಠ 27 ಜಿಲ್ಲೆಗಳು ಇವೆ. ತಾವು ಬಜೆಟ್ ಭಾಷಣದಲ್ಲಿ ಈ ವರ್ಷ ಇದಕ್ಕೆ ಎರಡು ಕೋಟಿ ರೂ. ಮಾತ್ರ ಮೀಸಲಾಗಿಟ್ಟಿದ್ದೇವೆಂದು ಹೇಳಿದಿರಿ. ಇದಕ್ಕೆ ತಾವು ಮಾನ್ಯ ಶಾಸಕರ, ಸಂಸದರ ನಿಧಿಯಿಂದ ಹಣವನ್ನು ನಾವು ತೆಗೆದುಕೊಂಡು ಮಾಡುತ್ತೇವೆಂದು ಹೇಳಬಹುದು. ಅದಕ್ಕೆ ನಾನು ತಮ್ಮಲ್ಲಿ ಏನು ಕೇಳುತ್ತೇನೆಂದರೆ, ಪ್ರಥಮ ಆದ್ಯತೆಯ ಮೇರೆಗೆ ಎಷ್ಟು ಜಿಲ್ಲೆಗಳಲ್ಲಿ ತೆಗೆದುಕೊಳ್ಳುತ್ತೀರಿ ಮತ್ತು ಅದಕ್ಕೆ ಯಾವ್ಯಾವ ಜಿಲ್ಲಾ ಶಾಸಕರು ಹಾಗೂ ಸಂಸದರು ಒಪ್ಪಿದ್ದಾರೆ? ಮತ್ತು ಎಷ್ಟು ಜಿಲ್ಲೆಗಳನ್ನು ಗುರ್ತಿಸಿದ್ದೀರಿ? ಏಕೆಂದರೆ, ಈಗಾಗಲೇ ತಾವು ಏಜೆನ್ಸಿಗೆ ವಹಿಸಲಾಗಿದೆ ಎಂದು ಹೇಳಿದಿರಿ, ಅದು ಯಾವ ಏಜೆನ್ಸಿ?

Sri A. Krishnappa : Financial constrains ದೇವರಾಜು ಅರಸುರವರ ಭವನ ಕಟ್ಟಲಿಕ್ಕೆ ಸಮಸ್ಯೆಯಿಲ್ಲ. ಪ್ರಾಥಮಿಕವಾಗಿ ಬಜೆಟ್‌ನಲ್ಲಿ ತೋರಿಸಬೇಕು ಅದಕ್ಕೆ quantitites ಅನ್ನು ತೋರಿಸಿದ್ದೇವೆ. ಮತ್ತೆ ಗೈಡ್‌ಲೈನ್ಸ್ ಇನ್ನೂ ಫೈನ್‌ಲೈಸ್ ಆಗಿಲ್ಲ. ಇವತ್ತೇನು ತಾರೀಖು 31 ಆಗುತ್ತಿದೆ ಇನ್ನು ಮೇಲೆ ಗೈಡ್‌ಲೈನ್ಸ್ ಸೃಷ್ಟಿ ಆಗುತ್ತವೆ. ಅದನ್ನು ಕಟ್ಟಲಿಕ್ಕೆ ಯಾವ ಸಮಸ್ಯೆಯೂ ಇಲ್ಲ. ಯಾವತ್ತೂ ಕೂಡ ಎಂಎಲ್ಎ, ಎಂಪಿ, ಗ್ರಾಂಟ್ಸ್ ಉಪಯೋಗಿಸಿಕೊಂಡು ಈ ಭವನವನ್ನು ಕಟ್ಟಬೇಕು ಎನ್ನುವ ಮಾತನ್ನು ನಾವು ಎಂದಿಗೂ ಆಡಿಲ್ಲ. ಇದು ಸರ್ಕಾರ ನೇರವಾಗಿ ಘೋಷಣೆ ಮಾಡಿದಂಥ ಮುಖ್ಯಮಂತ್ರಿಗಳ ಕಾರ್ಯಕ್ರಮವಾಗಿದೆ. ಆದ್ದರಿಂದ ಅದನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ನಮ್ಮದು. ಈ ವರ್ಷದಲ್ಲಿ ಏನು ಟಾರ್ಗೆಟ್ ಇದೆ 27 ಜಿಲ್ಲೆಗಳಲ್ಲಿ ಅದು ಮುಗಿಸುವಂಥ ಕೆಲಸಕ್ಕೆ ಸರ್ಕಾರ ಆಧ್ಯತೆ ನೀಡುತ್ತದೆ ಎಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : 10 ಲಕ್ಷ ರೂಪಾಯಿಯಲ್ಲಿ ದೇವರಾಜ ಅರಸುರವರ ಭವನ ಜಿಲ್ಲಾ ಕೇಂದ್ರದಲ್ಲಿ ಆಗುತ್ತದಾ ಎಂದು ನಾನು ಕೇಳುತ್ತೇನೆ. ಏಕೆಂದರೆ, ನಾವೇ ಒಂದು ಅಂಬೇಡ್ಕರ್ ಭವನವನ್ನು ಬಿಜಾಪುರದಲ್ಲಿ ಮಾಡಿದೆವು. ಕನಿಷ್ಠ ಎರಡು ಕೋಟಿ ರೂಪಾಯಿ ನಾವು ಖರ್ಚು ಮಾಡಿದ್ದೇವೆ. ಒಂದು ಸಮುದಾಯ ಭವನ ನೀವು ಇವತ್ತು ಮಾಡಬೇಕಾದರೆ ಕನಿಷ್ಠ 5 ಲಕ್ಷ ರೂ. ಆಗುತ್ತದೆ. ನೀವು ದೇವರಾಜ್ ಅರಸು ರವರ ಹೆಸರಿಗೆ 10 ಲಕ್ಷ ರೂಪಾಯಿ ಇಟ್ಟು ಜಿಲ್ಲಾ ಕೇಂದ್ರದಲ್ಲಿ ಭವನ ಮಾಡುತ್ತೇವೆಂದು ಹೇಳತಕ್ಕಂಥದ್ದು ಶಾಶ್ವತವಾಗಿ ಆಗುತ್ತದೆ. ಎಂದು ನನಗೆ ಅನ್ನಿಸುವುದಿಲ್ಲ. ಏಕೆಂದರೆ ವಿಧಾನಸೌಧದ ಮುಂದಿರುವ ದೇವರಾಜ್ ಅರಸು ರವರ ಮೂರ್ತಿಯನ್ನೇ ಬದಲಾವಣೆ ಮಾಡಲಿಕ್ಕೆ ನಾಲ್ಕು ವರ್ಷವಾಯಿತು. ಇನ್ನು ಬದಲಾಯಿಸಿಲ್ಲ. ಅದನ್ನು ಏನಾದರೂ ಮೊದಲು ಮಾಡಿ ಇದಕ್ಕೆ ಒಂದು ಹೊಸ ಸ್ವರೂಪ ಕೊಡತಕ್ಕಂಥ ಪ್ರಯತ್ನ ಮಾಡಿದರೆ ಒಳ್ಳೆಯದಾಗಬಹುದು.

ಶ್ರೀ ಎ. ಕೃಷ್ಣಪ್ಪ : ಹಿಂದಿನ ಸಂದರ್ಭದಲ್ಲೂ ಕೂಡ ಮಾನ್ಯ ಅರಸುರವರ ಮೂರ್ತಿಯನ್ನು ಬದಲಾವಣೆ ಮಾಡಬೇಕು ಎಂದು ಮಾನ್ಯ ಸದಸ್ಯರು ಏನು ಹೇಳಿದ್ದರು ಅದರ ಬಗ್ಗೆ ಕ್ರಮ ತೆಗೆದುಕೊಂಡು ದೇವರಾಜು ಅರಸುರವರ ಇಬ್ಬರು ಸುಪುತ್ರಿಯರನ್ನು ಬಾಂಬೆಗೆ ಕರೆದುಕೊಂಡು ಹೋಗಿ ವಾಕ್ ಕಂಪನಿಗೆ ಆರ್ಡರನ್ನು ಪ್ಲೇಸ್ ಮಾಡಿ, ಅದನ್ನು ಇತ್ಯರ್ಥ ಮಾಡಿದ್ದೇವೆ. ಅದಕ್ಕೆ ಸಮಯವನ್ನೂ ಕೂಡ ಫಿಕ್ಸ್ ಮಾಡಿ ಬಂದಿದ್ದೇವೆ. ಮೂರ್ತಿ ಬದಲಾವಣೆಯಾಗುತ್ತದೆ. ಆ ವಿಚಾರ ಸರ್ಕಾರದ ಗಮನದಲ್ಲಿದೆ. 10 ಲಕ್ಷ ರೂಪಾಯಿಗಳಲ್ಲಿ ಮಾನ್ಯ ದೇವರಾಜು ಅರಸುರವರ ಭವನ ಕಟ್ಟುವುದಕ್ಕೆ ಸಾಧ್ಯವೇ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದರು. ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶ ಏನೆಂದರೆ, ಮಾನ್ಯ ಸದಸ್ಯರು ದಯಮಾಡಿ ಇಲ್ಲಿ ಕೇಳಬೇಕು. It is an encouragement. ಅವರ ಹೆಸರು ಉಳಿಯಲಿ ಅವರ ನೀತಿಗಳು, ಅವರ ಸೇವೆ ಜನರ ಮನಸ್ಸಿನಲ್ಲಿ ಉಳಿಯಲಿ ಎಂದು ಹತ್ತು ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಲೋಕಲ್ ಆಗಿ ತಾವು ಕಾಂಟ್ರಿಬ್ಯೂಟ್ ಮಾಡಿಕೊಂಡು ಹತ್ತು ಕೋಟಿ ರೂ. ಖರ್ಚು ಮಾಡಿದರೆ ಅದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಶಿವಾನಂದ ಎಸ್ ಪಾಟೀಲ್ : ನೀವೇ ಹೇಳಿದ ಹಾಗೆ ನಿಮ್ಮ ಗೈಡ್‌ಲೈನ್‌ನಲ್ಲಿ ಎಂಪಿ ಫಂಡ್ಸ್ ಇಲ್ಲ. ಶಾಸಕರ ಅನುದಾನ ತೆಗೆದುಕೊಳ್ಳುವುದಿಲ್ಲ 10 ಲಕ್ಷ ರೂಪಾಯಿಗಳಲ್ಲಿ ಸಮುದಾಯ ಭವನ ಆಗುವುದಿಲ್ಲ....

ಶ್ರೀ ಎ. ಕೃಷ್ಣಪ್ಪ : ಹಣ ಹಾಕಿಕೊಂಡು ಮಾಡಬೇಡಿಯೆಂದು ನಾವು ಹೇಳಿಲ್ಲ. ಮಾಡಿ ಮಾಡುವುದಕ್ಕೆ ಅಡ್ಡಿಯಿಲ್ಲ.

ಅಧ್ಯಕ್ಷರು : ಮಾಡುವುದಕ್ಕೆ ಅಡ್ಡಿಯಿಲ್ಲವೆಂದು ಮಂತ್ರಿಗಳು ಹೇಳುತ್ತಾರಲ್ಲ ಮಾಡಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಈಗ ತಾನೇ ಇನ್‌ಸೆಂಟೀವ್ ಎಂದು ತಾವು ಹೇಳುತ್ತೀರಿ, ಈ ದ್ವಂದಮಯ ಹೇಳಿಕೆಯಿಂದ ಗೊಂದಲವಾಗುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅದು ಅರಸುರವರ ಹೆಸರಿನಲ್ಲಿ 10 ಲಕ್ಷ ರೂಪಾಯಿನಲ್ಲಿ ಒಂದು ಸಮುದಾಯ ಭವನ ಆಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೇ, ಅವರು ಕೇಳುವುದು ಎಂಪಿ, ಎಂಎಲ್‌ಎ, ಫಂಡ್ಸ್‌ಗಳಿಂದ ಹಾಕಿಕೊಂಡು ಮಾಡಬಹುದಾ ಎಂದು ಕೇಳುತ್ತಿದ್ದಾರೆ.

ಶ್ರೀ ಎ. ಕೃಷ್ಣಪ್ಪ : ಮಾಡಬಹುದು ಅದಕ್ಕೆ ನಮ್ಮ ತಕರಾರು ಏನಿಲ್ಲ. ಆದರೆ ಇದನ್ನು ಉಪಯೋಗಿಸಿಕೊಂಡು ಮಾತ್ರ ಮಾಡಿ ಎಂದು ಸೂಚನೆ ಕೊಟ್ಟಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ಈಗ ತಾನೇ ಇಲ್ಲವೆಂದು ಉತ್ತರ ಕೊಟ್ಟರು. ಈಗ ಹೇಳುತ್ತಾರೆ ತಕರಾರು ಇಲ್ಲವೆಂದು ಹೀಗಾದರೆ ಹೇಗೆ?

ಅಧ್ಯಕ್ಷರು : ಅವರಿಗೆ ಸರಿಯಾದ ಉತ್ತರ ಹೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : 10–12 ಮಾಡುವ ಬದಲು ಅವರೇ 5 ಮಾಡಲಿ.

ಶ್ರೀ ಎ. ಕೃಷ್ಣಪ್ಪ : ಮಾಡಬಾರದು ಎಂದೂ ನಾವು ಹೇಳಿಲ್ಲ. ಅದನ್ನು ನಾನು ನಿಮಗೆ ತಿಳುವಳಿಕೆ ಹೇಳಿದ್ದು.

ಶ್ರೀ ಶಿವಾನಂದ ಎಸ್. ಪಾಟೀಲ್ : ಹಾಗಾದರೆ ಯಾವುದಾದರೊಂದು ನಿರ್ಧಿಷ್ಟವಾಗಿ ಹೇಳಿ.

ಶ್ರೀ ಎ. ಕೃಷ್ಣಪ್ಪ : ಮಿಕ್ಸ್ ಮಾಡಿ ಮಾಡಬಹುದು.

ಪಿರಿಯಾಪಟ್ಟಣ ತಾಲ್ಲೂಕಿನ ಆಶ್ರಮ ಶಾಲೆ ಕಟ್ಟಡ

550 (4784) : ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕು ಅಬ್ಬಳತಿ ಆಶ್ರಮಶಾಲೆ ಕಟ್ಟಡಕ್ಕೆ ಮಂಜೂರಾದ ಹಣ ಎಷ್ಟು ಮತ್ತು ಯಾವಾಗ ಪ್ರಾರಂಭಿಸಲಾಯಿತು.

ಆ) ಇದುವರೆವಿಗೂ ಎಷ್ಟು ಕೆಲಸ ಆಗಿದೆ; ಕಟ್ಟಡದ ಕೆಲಸ ಸ್ಥಗಿತವಾಗಿರುವ ಕಾರಣವೇನು? ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಕಟ್ಟಡದ ಕೆಲಸ ಮುಗಿಯಲಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಕಟ್ಟಡದ ಒಟ್ಟು ಅಂದಾಜು ವೆಚ್ಚವು ರೂ. 45.32 ಲಕ್ಷಗಳು ಇದರಲ್ಲಿ ರೂ. 15.00 ಲಕ್ಷಗಳು ದಿನಾಂಕ: 29.03.2002ರಲ್ಲಿ ಸರ್ಕಾರವು ಬಿಡುಗಡೆ ಮಾಡಿರುತ್ತದೆ. ನಿರ್ಮಾಣದ ಕೆಲಸವು ಆಗಸ್ಟ್ 2002ರಲ್ಲಿ ಪ್ರಾರಂಭಿಸಲಾಗಿದೆ.

ಆ) ಶಾಲಾ ಕಟ್ಟಡದ ತಳಪಾಯದ ಕೆಲಸ ಮುಗಿದಿದೆ. ವಸತಿ ನಿಲಯದ ಕಟ್ಟಡದ ಕಾಮಗಾರಿ ಮೇಲ್ಛಾವಣಿಯವರೆಗೆ ಆಗಿರುತ್ತದೆ. ಭೂಸೇನಾ ನಿಗಮವು ಜೂನ್ 2003ರ ಅಂತ್ಯಕ್ಕೆ ರೂ. 17.00

ಲಕ್ಷಗಳನ್ನು ವೆಚ್ಚ ಮಾಡಿರುತ್ತದೆ. ರೂ. 30.00 ಲಕ್ಷಗಳ ಬಿಡುಗಡೆಗೆ ಸರ್ಕಾರವು ಪ್ರಸ್ತಾವನೆಯನ್ನು ದಿನಾಂಕ: 6.6.2003ರಂದು ಸ್ವೀಕರಿಸಿದೆ. ಹಣ ಬಿಡುಗಡೆಯಾದ ಕೂಡಲೇ ಕೆಲಸವು ಪ್ರಾರಂಭವಾಗುತ್ತದೆ.

ಶ್ರೀ ಹೆಚ್.ಸಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ದಿನಾಂಕ 29.3.2002ರಲ್ಲಿ ಸರ್ಕಾರ 15 ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಿ 45 ಲಕ್ಷ ರೂಪಾಯಿ ಕಟ್ಟಡವನ್ನು ಕಟ್ಟಿಸಲಿಕ್ಕೆ ಪ್ರಾರಂಭಿಸಿದೆ. ಈ ಕಟ್ಟಡವನ್ನು ಲ್ಯಾಂಡ್ ಆರ್ಮಿಯವರಿಗೆ ಗುತ್ತಿಗೆ ನೀಡಲಾಗಿದೆ. ಒಂದು ವರ್ಷ ಮೂರು ತಿಂಗಳಾದರೂ ಈ ಕೆಲಸ ಮುಗಿದಿಲ್ಲ. 15 ಲಕ್ಷ ರೂ ಹಣ ಬಿಡುಗಡೆಯಾಗಿ 15 ಲಕ್ಷ ರೂ ಕೆಲಸ ಮಾಡಿ ಆರು ತಿಂಗಳಾಗಿವೆ. ಆರು ತಿಂಗಳಿನಿಂದ ಕೆಲಸ ಸ್ಥಗಿತವಾಗಿದೆ. ಈ ಪ್ರಶ್ನೆಗೆ ಉತ್ತರಿಸುತ್ತಾ ದಿನಾಂಕ : 6.6.2003ರಲ್ಲಿ ಹಣಕ್ಕೋಸ್ಕರ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ ಎಂದು ತಿಳಿಸಿದ್ದಾರೆ. ಹಾಗಾದರೆ ಜಿಲ್ಲಾಡಳಿತ ಇದರ ಬಗ್ಗೆ ಕಾಳಜಿ ವಹಿಸಿಲ್ಲವೆ? ಕೆಲಸ ಆರು ತಿಂಗಳಿನಿಂದ ನಿಲ್ಲುವುದಕ್ಕೆ ಕಾರಣ ಏನು? ಇದನ್ನು ಲ್ಯಾಂಡ್ ಆರ್ಮಿಗೆ ಕೊಡಲಿಕ್ಕೆ ಕಾರಣ ಏನು? ಇದನ್ನು ಟೆಂಡರ್ ಕರೆದಿದ್ದರೆ ಯಾವುದೇ ಗುತ್ತಿಗೆದಾರರು 45 ಲಕ್ಷ ರೂ. ಅಂದಾಜಿನ ಕೆಲಸವನ್ನು ಒಂದು ವರ್ಷದೊಳಗೆ ಮುಗಿಸತಕ್ಕಂಥ ಕೆಲಸ ಆಗುತ್ತಿತ್ತು. ಈ ಲ್ಯಾಂಡ್ ಆರ್ಮಿಯವರಿಗೆ ಕೊಟ್ಟಿದ್ದರಿಂದ, ಅವರು ಹಣ ಕೊಟ್ಟಷ್ಟು ಕೆಲಸ ಮಾಡಿದಷ್ಟು, ಕೆಲಸ ಮುಗಿದಿಲ್ಲ. ಫೌಂಡೇಷನ್ ಹಾಕಿ ಕಟ್ಟಡ ಕಟ್ಟಿ 6 ತಿಂಗಳಿನಿಂದ ಬಿಸಿಲಿನಲ್ಲಿ ಒಣಗಿ ಮಳೆಯಲ್ಲಿ ನೆನೆದು ಕಟ್ಟಡ ಕಳಪೆಯಾಗುತ್ತಿದೆ ಇದಕ್ಕೆ ಯಾರು ಕಾರಣ? ದಯಮಾಡಿ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಅದು ಒಂದು ಸರ್ಕಾರಿ ಸಂಸ್ಥೆ ಎಂದು ಹೇಳಿ ಕೆಲವು ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಕೊಟ್ಟಿದ್ದೇವೆ. ಈಗ ಆದಂಥ ಕೆಟ್ಟ ಅನುಭವದ ಆಧಾರದ ಮೇಲೆ ಅದರ ಮೇಲೆ ಕರೆಕ್ಟೀವ್ ಆಕ್ಷನ್‌ಅನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಹಾಗಾಗಿ ತಡವಾಗಿರುವುದನ್ನು ಬೇಗ ಮಾಡಬೇಕು ಎಂದು ಕ್ರಮ ಜರುಗಿಸುತ್ತೇವೆ. ಆದಷ್ಟು ಬೇಗ ಅದನ್ನು ಮುಕ್ತಾಯಗೊಳಿಸಲಿಕ್ಕೆ ಸಂಬಂಧಪಟ್ಟವರಿಗೆ ಸೂಚನೆ ಕೊಡಲಾಗುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ನನ್ನಲ್ಲೂ ಕೂಡ ಒಂದು ಆಶ್ರಮ ಶಾಲೆಯಿದೆ.

ಅಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಯವರೇ ಪಿರಿಯಾಪಟ್ಟಣದ್ದು ಮಾತ್ರ ಕೇಳಿ. Mr. Krishnappaji don't answer that question. ಬೇರೆಯದು ಕೇಳಕೂಡದು.

ಶ್ರೀ ಹೆಚ್.ಸಿ. ಬಸವರಾಜ್ : ಗಿರಿಜನ ವಿದ್ಯಾರ್ಥಿಗಳು ಇದರಿಂದ ಬಹಳಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಕಟ್ಟಡವನ್ನು ಎಷ್ಟು ದಿವಸದೊಳಗೆ ಮುಗಿಸಲಿಕ್ಕೆ ಆಗುತ್ತದೆ? ಹಣ ಯಾವಾಗ ಬಿಡುಗಡೆ ಮಾಡಿಕೊಡುತ್ತಾರೆ ಮತ್ತು ಯಾವಾಗ ಮುಗಿಸುತ್ತಾರೆಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎ. ಕೃಷ್ಣಪ್ಪ : ಆರು ತಿಂಗಳೊಳಗೆ ಅದನ್ನು ಮುಗಿಸಿ ಮಕ್ಕಳ ಉಪಯೋಗಕ್ಕೆ ಹ್ಯಾಂಡ್ ಓವರ್ ಮಾಡುತ್ತೇವೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಯೋಗೀಶ್ ಭಟ್, ಸದಸ್ಯರು ಗೈರು ಹಾಜರಿದ್ದಾರೆ ಈಗ ತಡೆಹಿಡಿಯಲಾದ ಪ್ರಶ್ನೆಗಳು ಮಾನ್ಯ ಎಸ್.ಎಸ್. ಪಾಟೀಲ್‌ರೇ ತಾವು ಹೇಳಿ.

ಆ) ತಡೆಹಿಡಿಯಲಾದ ಪ್ರಶ್ನೆಗಳು

ಪಶುಸಂಗೋಪನಾ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು

391 (3453) : ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಕೊರತೆ ಇರುವ ಹುದ್ದೆಗಳೆಷ್ಟು;

ಆ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಕೊರತೆ ಇರುವ ಹುದ್ದೆಗಳೆಷ್ಟು; ಅವುಗಳ ವಿವರ ನೀಡುವುದು;

ಇ) ಅವುಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಒಟ್ಟು 4548 ಹುದ್ದೆಗಳು.

ಆ) ಒಟ್ಟು 27 ಖಾಲಿ ಹುದ್ದೆಗಳು ಈ ಕೆಳಕಂಡಂತಿದೆ.

ಸಹಾಯಕ ನಿರ್ದೇಶಕರು	1
ಪಶುವೈದ್ಯಾಧಿಕಾರಿ	7
ಪಶುವೈದ್ಯ ಮೇಲ್ವಿಚಾರಕರು	1
ಹಿರಿಯ ಪಶುವೈದ್ಯ ಪರೀಕ್ಷಕರು	2
ಪಶುವೈದ್ಯ ಪರೀಕ್ಷಕರು	1
ಪಶುವೈದ್ಯ ಸಹಾಯಕರು	12
ವಾಹನ ಚಾಲಕರು	1
ಡಿ ದರ್ಜೆ ನೌಕರರು	2
ಒಟ್ಟು	**27**

ಇ) 250 ಪಶುವೈದ್ಯಾಧಿಕಾರಿ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರ ಪ್ರಾರಂಭಿಸಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ಹಿಂದಿನ ಸಚಿವರು ಇದನ್ನೇ ಹೇಳಿದ್ದಾರೆ. ಇವರು ಮೂರೂವರೆ ವರ್ಷಗಳಿಂದ ಇದೇ ಉತ್ತರ ಕೊಡುತ್ತಾರೆ. ಒಂದು ನಿಮಿಷದಲ್ಲಿ ತಮಗೆ ಹೇಳಿಬಿಡುತ್ತೇನೆ. ಸಹಾಯಕ ನಿರ್ದೇಶಕರು ಒಂದು ಹುದ್ದೆ ಖಾಲಿಯಿದೆ. ಅಂದರೆ ಸಹಾಯಕ ನಿರ್ದೇಶಕರ ಹುದ್ದೆ ಎಷ್ಟು ಇರುತ್ತವೆ ಒಂದೇ ಇರುವುದು. ಅದು ಖಾಲಿ, ಪಶುವೈದ್ಯಾಧಿಕಾರಿ ಖಾಲಿ 7, 8 ಅಥವಾ 9 ದವಾಖಾನೆಗಳು ಇದ್ದರೆ ಅದರಲ್ಲಿ 7 ಹುದ್ದೆಗಳು ಖಾಲಿ. ಪಶುವೈದ್ಯ ಮೇಲ್ವಿಚಾರಕರು–1 ಅದು ಖಾಲಿ. ಹಿರಿಯ ಪಶುವೈದ್ಯ ಪರೀಕ್ಷಕರು ಖಾಲಿ ಪಶುವೈದ್ಯ ಸಹಾಯಕರು–ಖಾಲಿ ಅಂದರೆ ಇಡೀ ಒಂದು ಮತದಾರರ ಕ್ಷೇತ್ರದಲ್ಲಿ ಎಲ್ಲವನ್ನೂ ಖಾಲಿ ಇಟ್ಟರೆ ಆ ಇಲಾಖೆ ಏಕೆ ಇರಬೇಕು? ಏಕೆ ಇರಬೇಕು ಹೇಳಿ? ಇದೇ ನಮಗೆ ನೋವಿನ ಸಂಗತಿ. ಎಲ್ಲಾ ಖಾಲಿ ಇವೆ. ಅಲ್ಲಿಯ ದವಾಖಾನೆಗೆ ಹೋದರೆ ಯಾರ್ಯಾರು ಇರುವುದಿಲ್ಲ ಎಲ್ಲಾ

ಕೀಲಿ ಹಾಕಿ ಬಿಟ್ಟಿರುತ್ತಾರೆ. ಇದು ಮೂರೂವರೆ–ನಾಲ್ಕು ವರ್ಷಗಳಿಂದ ಇದನ್ನೇ ಹೇಳುತ್ತಾರೆ. ಅವರು ಇದನ್ನೇ ಹೇಳಿದರು. ಇವರು ಇದನ್ನೇ ಹೇಳಿದರು. ಹಾಗಾದರೆ ಎಷ್ಟು ದಿವಸ ನಾವು ಸುಮ್ಮನಿರಬೇಕು ತಾವೇ ಹೇಳಿಬಿಡಿ. ತಾವೇ ಅವರಿಗೆ ಹೇಳಿಬಿಡಿ. ಯಾವಾಗ ಖಾಲಿ ಹುದ್ದೆಗಳನ್ನು ತುಂಬುತ್ತೀರಿ ಅದನ್ನು ಹೇಳಬೇಕು. ನಿರ್ದಿಷ್ಟವಾಗಿ ತಾವು ಹೇಳಬೇಕು ಈ ಖಾಲಿ ಹುದ್ದೆಗಳನ್ನು ಎಂದು ತುಂಬುತ್ತೀರಿ? ಡ್ರೈವರ್ ಹುದ್ದೆ ಖಾಲಿ ಇದು ಅದು ಹೋಗಲಿ ಬಿಟ್ಟು ಬಿಡಿ, ಅದು ಬೇಕಾಗಿಲ್ಲ ನಮಗೆ, ಅವಶ್ಯಕತೆಯಿರುವ ಹುದ್ದೆಗಳನ್ನು ತುಂಬ ಬೇಕಲ್ಲವೆ? ಅಲ್ಲೊಂದು ಸಂಚಾರಿ ವಾಹನ ಎಂದು ಇಟ್ಟಿರುತ್ತಾರೆ ಆದರೆ ಅಲ್ಲಿ ಡ್ರೈವರ್ ಇರುವುದಿಲ್ಲ. ಬರೇ ಇದೇ ಆಯಿತು ಮಂತ್ರಿಗಳು ಇಲಾಖೆ ಏಕೆ ಬೇಕು?

ಶ್ರೀ ಆರಗ ಜ್ಞಾನೇಂದ್ರ : ಅದರಲ್ಲಿ ಭರ್ತಿ ಇರುವುದು ಮಂತ್ರಿ ಸ್ಥಾನ ಒಂದೇ ಎಲ್ಲಾ ಪೂರ್ತಿ ಖಾಲಿ!

ಶ್ರೀ ಎಸ್.ಎಸ್. ಪಾಟೀಲ್ : ಎಂದು ತುಂಬುತ್ತೀರಿ ದಯಮಾಡಿ ಹೇಳಬೇಕು. ಈಗ ತಾನೇ ಸಕ್ಕರೆದು ಉತ್ತರ ಹೇಳಿದಿರಲ್ಲಾ ಹಾಗೆ ಹೇಳಿದರೆ ನಾನು ಕೇಳುವುದಿಲ್ಲ.

ಶ್ರೀ ಎಂ. ಮಹದೇವ್ : ಪಶು ಇಲಾಖೆಯ ಬಗ್ಗೆ ನಾನು ಇದ್ದರೂ ಒಂದೇ ಅವರು ಇದ್ದರೂ ಒಂದೇ ನಾವು ಅದನ್ನೇ ಹೇಳಬೇಕಾಗುತ್ತದೆ. ಬೇರೆ ಏನಾದರೂ ಹೇಳಲಿಕ್ಕೆ ಆಗುತ್ತದೆಯೇ? ಆಗುವುದಿಲ್ಲ. ಆದರೆ 56 ಹುದ್ದೆಗಳನ್ನು ನಾವು ನಿಮಗೆ ಅಲ್ಲಿ ಭರ್ತಿ ಮಾಡಿ ಕೊಟ್ಟಿದ್ದೇವೆ. ಸುಮಾರು 27 ಹುದ್ದೆಗಳು ಖಾಲಿ ಇವೆ. ಅವುಗಳನ್ನು ಮೇಲ್ದರ್ಜೆಗೇರಿಸುವಂಥ ಸಂದರ್ಭದಲ್ಲಿ ಮತ್ತೆ ಹೊಸದಾಗಿ 250 ವೈದ್ಯರನ್ನೂ ನೇಮಕಾತಿ ಮಾಡುವ ಸಂದರ್ಭದಲ್ಲಿ ಅದನ್ನು ಭರ್ತಿ ಮಾಡಲಿಕ್ಕೆ ನಾವು ಸಾಧ್ಯವಾದಷ್ಟು ಕ್ರಮವನ್ನು ಕೈಗೊಳ್ಳುತ್ತೇವೆ.

4.40 ಪಿ.ಎಂ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರತಕ್ಕಂಥ ಹುದ್ದೆಗಳನ್ನು ಯಾವಾಗ ತುಂಬುತ್ತಾರೆ ಎನ್ನತಕ್ಕಂಥದ್ದು ಹೇಳಬೇಕು. ಕಳೆದ ಮೂರುವರೆ ವರ್ಷಗಳಿಂದಲೂ ಕೂಡ 250 ಪೋಸ್ಟ್‌ಗಳನ್ನು ತುಂಬಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತಾ ಬರುತ್ತಿದ್ದಾರೆ. ಮಾನ್ಯ ಅಧ್ಯಕ್ಷರಿಗೂ ಕೂಡ ಇದು ಗೊತ್ತಿದೆ. ಏಕೆಂದರೆ, ಅವರ ಕ್ಷೇತ್ರದಲ್ಲೂ ಕೂಡ ಇದೇ ಪರಿಸ್ಥಿತಿ ಇದೆ.

ಶ್ರೀ ಎ. ಕೃಷ್ಣಪ್ಪ : ಈಗಾಗಲೇ ಸಾಕಷ್ಟು ಹುದ್ದೆಗಳನ್ನು ತುಂಬಲಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಕೃಷ್ಣಪ್ಪನವರು ಇದಕ್ಕೆ ಉತ್ತರ ಕೊಡುತ್ತಿದ್ದಾರೆ. ಆದ್ದರಿಂದ ಪಶುಸಂಗೋಪನೆ ಇಲಾಖೆಯ ಸಚಿವರು ಮಾನ್ಯ ಕೃಷ್ಣಪ್ಪನವರೋ ಅಥವಾ ಮಾನ್ಯ ಮಹದೇವರವರೋ ಎನ್ನತಕ್ಕಂಥದ್ದು ಗೊತ್ತಾಗಬೇಕು.

ಶ್ರೀ ಎಸ್.ಎಸ್. ಪಾಟೀಲ್ : ತಾವು ಉತ್ತರ ಹೇಳುವುದು ಬೇಡ. ಆದ್ದರಿಂದ ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎ. ಕೃಷ್ಣಪ್ಪ : ಈಗಾಗಲೇ ಸುಮಾರು 2000 ಪೋಸ್ಟ್‌ಗಳನ್ನು ತುಂಬಿದ್ದೇವೆ. ಯಾವುದೂ ಕೂಡ ತುಂಬಿಲ್ಲವೆಂದು ಅವರು ಹೇಳುತ್ತಿದ್ದಾರೆ. ಆದರೆ, ಕೆಲವು ಕಡೆ ಇನ್ನು ಶಾರ್ಟೇಜ್ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ಇನ್ನು ಒಂದು ಅಥವಾ ಎರಡು ತಿಂಗಳಲ್ಲಿ ಇವುಗಳನ್ನು ತುಂಬಲಾಗುತ್ತದೆಯೇ ಎನ್ನತಕ್ಕಂಥದ್ದನ್ನು ತಾವು ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಇವತ್ತಿನದಿವಸ ರಾಜ್ಯದಲ್ಲಿ ಬರಗಾಲ ಬಂದಿರುವುದರಿಂದ ಎಲ್ಲಾ ಕಡೆ ದನಕರುಗಳು ಹೆಚ್ಚಾಗಿ ಸಾಯುತ್ತಿವೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಯಾವ ಜಾನುವಾರುಗಳಿಗೂ ತೊಂದರೆ ಆಗದ ರೀತಿಯಲ್ಲಿ ನಾವು ನೋಡಿಕೊಂಡಿದ್ದೇವೆ. ಹಾಗೆಯೇ ಆಸ್ಪತ್ರೆ ಇಲ್ಲದ ಕಡೆ ಪಕ್ಕದ ಆಸ್ಪತ್ರೆಯಿಂದ ಮತ್ತು ಮೊಬೈಲ್ ಯುನಿಟ್‌ಗಳ ಮೂಲಕ ಟ್ರೀಟ್‌ಮೆಂಟ್ ಕೊಡತಕ್ಕಂಥ ವ್ಯವಸ್ಥೆ ಕೂಡ ಮಾಡಿದ್ದೇವೆ. ಜಾನುವಾರುಗಳಿಗೆ ಇದುವರೆಗೂ ಯಾವುದೇ ರೀತಿಯ ತೊಂದರೆಯಾಗಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ. ಮತ್ತೆ ಎಲ್ಲಾ ಕಡೆಗೂ ಕೂಡ ಔಷಧಿಯನ್ನು ಸರಬರಾಜು ಮಾಡುತ್ತಿದ್ದೇವೆ. ಹಾಗೆಯೇ ಚಿಕಿತ್ಸೆ ಕೂಡ ಕೊಡಲಾಗುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ : ನಮ್ಮ ಕಡೆ ತೊಂದರೆಯಾಗಿದೆ. ಅಲ್ಲಿ ಆಗಿರತಕ್ಕಂಥ ತೊಂದರೆಯನ್ನು ನಾವೇ ನಿಮ್ಮ ಗಮನಕ್ಕೆ ಈಗ ತಂದಿದ್ದೇವೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ನಿಮ್ಮ ಮತಕ್ಷೇತ್ರ ಒಂದೇ ಅಲ್ಲದೆ ಯಾವ್ಯಾವ ಕ್ಷೇತ್ರದಲ್ಲಿ ಜಾನುವಾರುಗಳ ಚಿಕಿತ್ಸೆಗೆ ತೊಂದರೆಯಾಗಿದೆ. ಅಂಥ ಕಡೆ ನಾವು ಎಚ್ಚರಿಕೆ ತೆಗೆದುಕೊಂಡು ಮೊಬೈಲ್ ಯುನಿಟ್‌ಗಳ ಮೂಲಕ ಚಿಕಿತ್ಸೆ ಕೊಡಿಸುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಹೆಚ್ಚಿಗೆ ವಿಷಯಗಳನ್ನು ಮಾನ್ಯ ಮಂತ್ರಿಯವರಲ್ಲಿ ಕೇಳುವುದಿಲ್ಲ. ಈಗ ನಾನು ಕೇಳತಕ್ಕಂಥ ಒಂದೇ ಒಂದು ಪ್ರಶ್ನೆಗೆ ಅವರು ಉತ್ತರ ಕೊಡಲಿ. ಅದೇನೆಂದರೆ, ಸಹಾಯಕ ನಿರ್ದೇಶಕರ ಒಂದು ಪೋಸ್ಟ್ ಎಷ್ಟು ವರ್ಷಗಳಿಂದ ಅಲ್ಲಿ ಖಾಲಿ ಇದೆ ಎನ್ನತಕ್ಕಂಥದ್ದನ್ನು ಹೇಳಿ? ಏಕೆಂದರೆ ಸಹಾಯಕ ನಿರ್ದೇಶಕರ ಪೋಸ್ಟ್ ಎರಡು–ಮೂರು ಇರುವುದಿಲ್ಲ. ಇರತಕ್ಕಂಥ ಒಂದು ಪೋಸ್ಟ್ ಎಷ್ಟು ವರ್ಷಗಳಿಂದ ಖಾಲಿ ಇದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳಿ?

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ 234 ಪಶು ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದೇವೆ....

ಶ್ರೀ ಎಸ್.ಎಸ್. ಪಾಟೀಲ್ : ನಾನು ಕೇಳತಕ್ಕಂಥ ಪ್ರಶ್ನೆಗೆ ಅವರು ಉತ್ತರ ಹೇಳುತ್ತಿಲ್ಲ. ಸಹಾಯಕ ನಿರ್ದೇಶಕರ ಹುದ್ದೆ ಇರಬೇಕೋ ಅಥವಾ ಬೇಡವೋ ಎನ್ನತಕ್ಕಂಥದ್ದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಂ. ಮಹದೇವ್ : ಖಾಲಿ ಇರತಕ್ಕಂಥ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕ್ರಮತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾತ್ರ ಉತ್ತರ ಕೊಡಿ. ಬೇರೆಯದು ಭರ್ತಿ ಮಾಡುತ್ತೀರೋ ಅಥವಾ ಬಿಡುತ್ತೀರೋ ಅದು ನನಗೆ ಬೇಕಾಗಿಲ್ಲ. ಖಾಲಿ ಇರತಕ್ಕಂಥ ಒಂದು ಸಹಾಯಕ ನಿರ್ದೇಶಕರ ಪೋಸ್ಟ್ ಎಷ್ಟು ವರ್ಷಗಳಿಂದ ಅಲ್ಲಿ ಖಾಲಿ ಇದೆ ಎನ್ನತಕ್ಕಂಥದ್ದನ್ನು ಮಾತ್ರ ಹೇಳಿ?

ಶ್ರೀ ಎಂ. ಮಹದೇವ್ : ಈಗ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಮೇಲೆ ನಾವು ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮತ್ತೆ ಹಾರಿಕೆ ಉತ್ತರ ಕೊಡುತ್ತಿದ್ದಾರೆ. ಇದಕ್ಕೆ ನಾವೇನು ಮಾಡಬೇಕೆಂದು ತಾವೇ ಹೇಳಬೇಕು. ನಾನು ಕೇಳಿರತಕ್ಕಂಥ ಪ್ರಶ್ನೆಗೆ ಎಲ್ಲಾ ಕಡೆ ಹುದ್ದೆಗಳು ಖಾಲಿ ಇವೆ ಎಂದು ಉತ್ತರ ಕೊಟ್ಟಿದ್ದಾರೆ. ಈ ರೀತಿಯಾದರೆ ನಾವೇನು ಮಾಡಬೇಕು?

Mr. Speaker : I cannot compel the Minister to answer like this or that.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಾವು ಛೀಮಾರಿ ಹಾಕಬೇಕಾಗುತ್ತದೆ.

ಅಧ್ಯಕ್ಷರು : ನಾನು ಕಂಪೆಲ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಈ ಸರ್ಕಾರಕ್ಕೆ ನೀವು ಬೈಯ್ಯದೆ ಇದ್ದರೆ ಏನೂ ಕೆಲಸವಾಗುವುದಿಲ್ಲ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈಗ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವರ ಕಷ್ಟವನ್ನು ಸರ್ಕಾರದ ಮುಂದೆ ಹೇಳಿದ್ದಾರೆ. ಆದ್ದರಿಂದ, ಇದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಅದನ್ನು ಮುಂದಿನ ಅಧಿವೇಶನ ಸೇರುವುದರೊಳಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಹೇಳತಕ್ಕಂಥದ್ದನ್ನು ದಯವಿಟ್ಟು ಕೇಳಬೇಕು. ಇವತ್ತಿನದಿವಸ ಒಂದೊಂದು ತಾಲ್ಲೂಕಿನಲ್ಲಿ ಎಲ್ಲಾ ಪೋಸ್ಟ್‌ಗಳನ್ನು ತುಂಬಿದ್ದಾರೆ. ಆದರೆ, ಒಂದೊಂದು ತಾಲ್ಲೂಕಿನಲ್ಲಿ ಪೂರ್ತಿ ಖಾಲಿ ಇವೆ. ಕೊನೇ ಪಕ್ಷ ಇರತಕ್ಕಂಥವರಲ್ಲಿಯೇ ಅಡ್ಜಸ್ಟ್ ಮಾಡಿ. ತಕ್ಷಣವೇ ಎಲ್ಲವನ್ನೂ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ನಾವೂ ಕೂಡ ಒಪ್ಪಿಕೊಳ್ಳುತ್ತೇವೆ. ಎಲ್ಲಿ ಎಲ್ಲಾ ಹುದ್ದೆಗಳು ಖಾಲಿ ಇರುತ್ತವೆಯೋ ಅಂಥ ಕಡೆಯಾದರೂ ಇರತಕ್ಕಂಥವರನ್ನೇ ಅಡ್ಜಸ್ಟ್ ಮಾಡಿ ಅಲ್ಲಿಗೆ ಕಳುಹಿಸುವಂಥ ಕೆಲಸ ಮಾಡಬೇಕು. ಕನಿಷ್ಟಪಕ್ಷ ಒಬ್ಬ ಸಹಾಯಕ ನಿರ್ದೇಶಕರಾದರು ಇರಬೇಕಲ್ಲವೆ? ನಮ್ಮಲ್ಲಿರತಕ್ಕಂಥ ಒಂದೇ ಒಂದು ಪೋಸ್ಟನ್ನು ಕಳೆದ ನಾಲ್ಕು ವರ್ಷಗಳಿಂದ ಯಾರನ್ನು ತುಂಬದೇ ಖಾಲಿ ಇಟ್ಟಿದ್ದೀರಿ. ನಾನು ಆಗಿನಿಂದಲೂ ಈ ಪ್ರಶ್ನೆಯನ್ನು ಕೇಳುತ್ತಾ ಬರುತ್ತಿದ್ದೇನೆ. ಆದರೆ, ಈ ಪ್ರಶ್ನೆ ಯಾವಾಗಲೂ ಕೂಡ ಅನ್ ಸ್ಟಾರ್ಡ್ ಆಗಿ ಬರುತ್ತಿತ್ತು. ಆದರೆ, ಸುದೈವದಿಂದ ಈ ಸಾರಿ ಸ್ಟಾರ್ಡ್ ಪ್ರಶ್ನೆಯಾಗಿದೆ. ನನ್ನೆದಿವಸ ಬೇಡಿಕೆಯ ಮೇಲೆ ಮಾತನಾಡುವಾಗ ಇವರ ಇಲಾಖೆಯ ಬಗ್ಗೆ ಮಾತನಾಡಬೇಕೆಂದು ನಾನು ಎಲ್ಲವನ್ನೂ ತಯಾರು ಮಾಡಿಕೊಂಡಿದ್ದೆ. ಆದರೆ ನನಗೆ ಹೆಚ್ಚಿನ ಸಮಯ ಸಿಗಲಿಲ್ಲ. ಆದರೂ ಕೂಡ ಇವರ ಇಲಾಖೆಯ ಮೇಲೆ ತರಾಟೆಗೆ ತೆಗೆದುಕೊಂಡಿದ್ದೆ. ಇವರು ಕೇವಲ 5 ಅಥವಾ 10 ಪೈಸೆ ಕೊಡುತ್ತಿದ್ದಾರೆ.

ಶ್ರೀ ಎಂ. ಮಹದೇವ್ : ಮಾನ್ಯ ಅಧ್ಯಕ್ಷರೆ, ಭರ್ತಿ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಆದರೂ ಕೂಡ ಮಾನ್ಯ ಸದಸ್ಯರು ಮತ್ತೆ ಮತ್ತೆ ಕೇಳುತ್ತಿದ್ದಾರೆ.

ಸರ್ಕಾರ ಬಂಡವಾಳ ಹೂಡಿದ ಕಾರ್ಖಾನೆಗಳು

393 (3469) : ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಎಷ್ಟು ಕಾರ್ಖಾನೆಗಳಿಗೆ ಬಂಡವಾಳವನ್ನು ಹೂಡಿದೆ;

ಆ) ಬಂಡವಾಳ ಹೂಡಿದ ಕಾರ್ಖಾನೆಗಳ ವಿವರವನ್ನು ತಿಳಿಸುವುದು;

ಇ) ನಷ್ಟ ಹೊಂದಿದ ಕಾರ್ಖಾನೆಗಳಿಗೆ ಪುನಶ್ಚೇತನಕ್ಕಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ರಾಜ್ಯ ಸರ್ಕಾರವು 29 ಕಾರ್ಖಾನೆಗಳಿಗೆ ಬಂಡವಾಳವನ್ನು ಹೂಡಿರುತ್ತದೆ.

ಆ) ಬಂಡವಾಳ ಹೂಡಿದ ಕಾರ್ಖಾನೆಗಳ ವಿವರ ಈ ಕೆಳಗಿನಂತಿದೆ:

1. ಮೈಸೂರು ಸಕ್ಕರೆ ಕಾರ್ಖಾನೆ ನಿ.,
2. ಮೈಸೂರು ಕಾಗದ ಕಾರ್ಖಾನೆ ನಿ.,
3. ಮೈಸೂರು ದೀಪದ ಕಾರ್ಖಾನೆ ನಿ.,
4. ಮೈಸೂರು ಬಣ್ಣ ಮತ್ತು ಅರಗು ನಿ.,
5. ಮೈಸೂರು ಮ್ಯಾಚ್ ಕಂಪನಿ ನಿ.,
6. ಮೈಸೂರು ಕ್ರೋಮ್ ಟ್ಯಾನಿಂಗ್ ಕಂ.ನಿ.
7. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತ
8. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ನಿ.,
9. ಎನ್.ಜಿ.ಇ.ಎಫ್. ನಿಯಮಿತ
10. ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ನಿಯಮಿತ,
11. ಮೈಸೂರು ಮಿನರಲ್ಸ್ ನಿಯಮಿತ.
12. ಮೈಸೂರು ಕಾಸ್ಮೆಟಿಕ್ಸ್ ನಿ.,
13. ಚಾಮುಂಡಿ ಮಿಷನ್ ಟೂಲ್ಸ್ ನಿ.,
14. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿ.,
15. ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್ ನಿ.,
16. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ,
17. ಕರ್ನಾಟಕ ಸ್ಟೇಟ್ ಟೆಕ್ಸ್ ಟೈಲ್ಸ್ ನಿ.,
18. ಕರ್ನಾಟಕ ಟೆಲಿಕಾಂ ನಿ.,
19. ಕರ್ನಾಟಕ ಟಂಗಸ್ಟನ್ ಮೋಲಿ ನಿ.,
20. ಎನ್.ಜಿ.ಇ.ಎಫ್. (ಹುಬ್ಬಳ್ಳಿ) ನಿ.,
21. ಕರ್ನಾಟಕ ಸ್ಟೇಟ್ ಪವರ್ ಲೂಮ್ ಡೆವಲಪ್ ಮೆಂಟ್ ಕಾರ್ಪೋರೇಷನ್
22. ವಿಜಯನಗರ ಸ್ಟೀಲ್ ಲಿ.,
23. ಮೈಸೂರು ತಂಬಾಕು ಕಂಪನಿ ನಿ.,
24. ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್‌ಪ್ರೊಡಕ್ಟ ನಿ.,
25. ಕರ್ನಾಟಕ ಸ್ಟೇಟ್ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೋರೇಷನ್ ನಿ.,

26. ಕರ್ನಾಟಕ ಸ್ಟೇಟ್ ವಿನೀರ್ಸ್ ನಿ.,
27. ಕರ್ನಾಟಕ ಆಗ್ರೋ ಪ್ರೋಟೀನ್ಸ್ ನಿ.,
28. ಕರ್ನಾಟಕ ಪಲ್ಪ ವುಡ್ ನಿ.,
29. ಕರ್ನಾಟಕ ಇಂಪ್ಲಿಮೆಂಟ್ಸ್ ಅಂಡ್ ಮಿಷನರೀಸ್ ಕಂಪನಿ ನಿ.,

ಇ) ನಷ್ಟ ಹೊಂದಿರುವ ಕಾರ್ಖಾನೆಗಳ ಪುನಶ್ಚೇತನಕ್ಕಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುತ್ತಿದೆ :-

1. ನಷ್ಟ ಹೊಂದಲಾದ ಕಾರ್ಖಾನೆಗಳಿಗೆ ಬ್ಯಾಂಕುಗಳಿಂದ/ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಸರ್ಕಾರವು ಖಾತರಿಯನ್ನು ಕೊಡಲಾಗಿದೆ.
2. ಮಾರಾಟ ತೆರಿಗೆ ಬಾಕಿ ಪಾವತಿಯನ್ನು ಮುಂದೂಡಲಾಗಿದೆ.
3. ಕಂಪನಿಯ ಸಾಲಗಳನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಲಾಗಿದೆ.
4. ಸಂಸ್ಥೆಯ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಅಳವಡಿಸಲು ಅನುಮತಿ ನೀಡಲಾಗಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ನಷ್ಟದಲ್ಲಿರುವ ಕಾರ್ಖಾನೆಗಳಿಗೆ ಹಣವನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ, ಯಾವ್ಯಾವ ಕಾರ್ಖಾನೆಗಳಿಗೆ ಎಷ್ಟೆಷ್ಟು ಹಣವನ್ನು ಒದಗಿಸಲಾಗಿದೆ ಎನ್ನುವುದರ ಬಗ್ಗೆ ನಿಖರವಾದ ಉತ್ತರ ಕೊಟ್ಟಿಲ್ಲ. ಹಾಗೆಯೇ ಮಾರಾಟ ತೆರಿಗೆಯ ಬಾಕಿಯನ್ನು ಮುಂದೂಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಎಷ್ಟೆಷ್ಟು ಮಾರಾಟ ತೆರಿಗೆಯನ್ನು ಮುಂದೂಡಲಾಗಿದೆ ಎನ್ನತಕ್ಕಂಥದ್ದನ್ನು ಹೇಳಿಲ್ಲ. ಮತ್ತೆ ಕಂಪನಿಗಳ ಸಾಲಗಳನ್ನು ಈಕ್ವಿಟಿಯನ್ನಾಗಿ ಪರಿವರ್ತಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಯಾವ್ಯಾವ ಕಂಪನಿಗಳಿಗೆ ಈ ರೀತಿ ಮಾಡಿದ್ದಾರೆ ಎನ್ನತಕ್ಕಂಥ ನಿಖರವಾದ ಉತ್ತರವನ್ನು ಕೊಟ್ಟಿಲ್ಲ. ಹಾಗೆಯೇ ಸಂಸ್ಥೆಯ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಅಳವಡಿಸಲು ಅನುಮತಿ ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ, ಸ್ವಯಂ ನಿವೃತ್ತಿಯನ್ನು ಎಷ್ಟೆಷ್ಟು ವರ್ಷದಿಂದ ಯಾರ್ಯಾರಿಗೆ ನೀಡುತ್ತಿದ್ದಾರೆ ಎಂಬುವ ಮಾಹಿತಿಯನ್ನು ಕೊಟ್ಟಿಲ್ಲ. ಆದ್ದರಿಂದ ಸಂಪೂರ್ಣವಾದ ಉತ್ತರವನ್ನು ದಯಮಾಡಿ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ವೇಳೆ ಈಗ ಪೂರ್ಣವಾದ ಉತ್ತರವನ್ನು ಒದಗಿಸುವುದಕ್ಕೆ ಆಗದೇ ಇದ್ದರೆ, ಮುಂದಿನ ಸ್ಸಾರಿಯಾದರೂ ಪೂರ್ಣವಾದ ಉತ್ತರವನ್ನು ಕೊಡುತ್ತೇನೆ ಎಂದಾದರೂ ಹೇಳಬೇಕು. ಏಕೆಂದರೆ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಯಾವುದೇ ನಿಖರವಾದ ಉತ್ತರ ಸಿಗದೇ ಇರುವುದರಿಂದ ಈ ಕಾರ್ಖಾನೆಗಳಿಗೆ ಕಷ್ಟವಾಗುತ್ತದೆ. ಹೆಚ್ಚು ಬಂಡವಾಳ ಹಾಕಿರತಕ್ಕಂಥ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಈ ರೀತಿಯಾದ ಉತ್ತರ ಕೊಡತಕ್ಕಂಥದ್ದು ಸಮಂಜಸವಲ್ಲ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ನಿಖರವಾದ ಉತ್ತರವನ್ನು ಯಾವಾಗ ಕೊಡುತ್ತಾರೆಂದು ಅಥವಾ ಈ ಸದನ ಮುಗಿಯುವದರೊಳಗೆ-ಕೊಡುತ್ತಾರೆಯೋ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಸೇರಿ ಒಟ್ಟು ಮೂರು ಸಾರಿ ಸದರಿ ಪ್ರಶ್ನೆಯನ್ನು ಮುಂದೂಡಲಾಗಿದೆ. ಆದ್ದರಿಂದ, ಈಗಲಾದರೂ ಸ್ಪಷ್ಟವಾದ ನಿಖರವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಸಂಬಂಧಪಟ್ಟಂತೆ ನಾವು ಉತ್ತರವನ್ನು ಒದಗಿಸಿಕೊಟ್ಟಿದ್ದೇವೆ. ಆದರೆ, ಯಾವ್ಯಾವ ಕೈಗಾರಿಕೆಗೆ

ಸರ್ಕಾರ ಎಷ್ಟು ಸಾಲಕೊಟ್ಟಿದೆ ಎನ್ನತಕ್ಕಂಥದ್ದನ್ನು ಮತ್ತು ಎಷ್ಟು ಈಕ್ವಿಟಿ ಕೊಟ್ಟಿದೆ ಎಂಬುದನ್ನು ಹಾಗೂ ಎಷ್ಟು ಗ್ಯಾರಂಟಿ ಕೊಟ್ಟಿದೆ ಎನ್ನತಕ್ಕಂಥ ಮಾಹಿತಿ ಬೇಕಾದರೆ ನಾನು ಖಂಡಿತ ಒದಗಿಸಿಕೊಡುತ್ತೇನೆ. ಎಲ್ಲಾ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಈ ಎಲ್ಲಾ ಮಾಹಿತಿ ಬೇಕಾದರೆ ಕಳುಹಿಸಿಕೊಡುತ್ತೇನೆ. ಅಥವಾ ಪರ್ಟಿಕ್ಯುಲರ್ ಆಗಿ ಅವರು ಯಾವುದು ಕೇಳುತ್ತಾರೆಯೋ ಅದಕ್ಕೆ ಸಂಬಂಧಪಟ್ಟಂಥ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆಯನ್ನು ಮಾನ್ಯ ನಾರಾಯಣಸ್ವಾಮಿವರು ಕೇಳಿ. ಮಾನ್ಯ ಸದಸ್ಯರು ಬಂದಿಲ್ಲ.

ಅರಣ್ಯ ಭೂಮಿಯಲ್ಲಿ ಗಣಿಗಾರಿಕೆಯ ಗುತ್ತಿಗೆ

398 (3436) : ಶ್ರೀ ಶಿವಶಂಕರ ರೆಡ್ಡಿ ಎ.ಹೆಚ್. (ಗೌರಿಬಿದನೂರು) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅರಣ್ಯ ಭೂಮಿಯಲ್ಲಿ ಗಣಿ ಗುತ್ತಿಗೆ ಸರ್ಕಾರ ನೀಡಿದಂತೆ ಅರಣ್ಯ ಇಲಾಖೆ ಅನುಮೋದನೆಯನ್ನು ನೀಡಲು ಹೆಚ್ಚು ಖರ್ಚು ಮತ್ತು ವಿಳಂಬ ಹಾಗೂ ಕಷ್ಟಕರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ವಿಳಂಬದಿಂದ ಗುತ್ತಿಗೆದಾರರಿಗೆ ತೊಂದರೆ ಮತ್ತು ಗಣಿಗಾರಿಕೆಯ ಅಭಿವೃದ್ಧಿಗೆ ಅಡಚಣೆಗಳು ಆಗುವುದರ ಬಗ್ಗೆ ಸರ್ಕಾರದ ಕ್ರಮವೇನು;

ಇ) ಗುತ್ತಿಗೆಗೆ ಅರ್ಜಿ ಸಲ್ಲಿಸಿ ವರ್ಷಗಳಾದರೂ ಗುತ್ತಿಗೆ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ವಿಳಂಬ ನೀತಿಯಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯ ಕುಂಠಿತವಾಗಿಲ್ಲವೇ; ಇದಕ್ಕೆ ಸರ್ಕಾರದ ಕ್ರಮವೇನು;

ಉ) ಇತ್ತೀಚೆಗೆ ರಾಜ್ಯಾದ್ಯಂತ ಗಣಿ ಗುತ್ತಿಗೆ ಗೆಜೆಟ್ ನೋಟಿಫಿಕೇಷನ್ ಮಾಡಿದ್ದು ನೂರಾರು ಅರ್ಜಿಗಳು ಬಂದಿದ್ದು, ಯಾವಾಗ ಇತ್ಯರ್ಥಪಡಿಸಲಾಗುತ್ತದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಬಂದಿದೆ.

ಆ) ಅಂತಹ ಅಡಚಣೆ ತಪ್ಪಿಸಲು ಗಣಿ ಗುತ್ತಿಗೆ ನೀಡುವ ಮೊದಲು ಅರಣ್ಯ, ಪರಿಸರ ಇಲಾಖೆಗಳ ಸಹಮತಿ ಪಡೆಯಲಾಗುತ್ತದೆ.

ಇ) ಬಂದಿದೆ.

ಈ) ಹೌದು, ಗಣಿ ಗುತ್ತಿಗೆ ನೀಡುವ ಮೊದಲು ಕಂದಾಯ ಇಲಾಖೆ, ಅರಣ್ಯ ಇಲಾಖೆ, ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಮತ್ತು ಪರಿಸರ ಇಲಾಖೆಗಳ ಅನುಮತಿಗಳನ್ನು ಪಡೆಯಬೇಕಾಗಿದೆ. ಆ ಸಂಬಂಧ ವಿಳಂಬ ತಪ್ಪಿಸುವ ಉದ್ದೇಶದಿಂದ ಇಲಾಖೆಗಳು ಸಹಮತಿ ನೀಡುವ ಕುರಿತಂತೆ ಕಾಲಮಿತಿ ನಿಗದಿಪಡಿಸಲಾಗಿದೆ.

ಉ) ಈ ಗೆಜೆಟ್ ನೋಟಿಫಿಕೇಷನ್ ಕುರಿತಂತೆ ಬಹಳಷ್ಟು ಅರ್ಜಿಗಳು ಬಂದಿದ್ದು, ಅವುಗಳನ್ನು ಎಂ.ಎಂ.ಡಿ.ಆರ್. ಕಾಯ್ದೆ, 1957 ಮತ್ತು ಎಂ.ಸಿ.ಆರ್., 1960ರ ನಿಯಮದ ಪ್ರಕಾರ ಪರಿಶೀಲಿಸಿ ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಇತ್ಯರ್ಥ ಪಡಿಸಲಾಗುವುದು.

ಶ್ರೀ ಎ.ಹೆಚ್. ಶಿವಶಂಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅರಣ್ಯ ಭೂಮಿಯಲ್ಲಿ ಗಣಿ ಗುತ್ತಿಗೆ ನೀಡುವುದಕ್ಕೆ ಬಹಳಷ್ಟು ನಿಧಾನ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮತ್ತೆ ಅರಣ್ಯ ಮತ್ತು ಪರಿಸರ ಇಲಾಖೆ ಒಪ್ಪಿಗೆ ಪಡೆಯುವುದಕ್ಕೆ ತಡವಾಗುತ್ತಿದೆ ಎನ್ನತಕ್ಕಂಥದ್ದನ್ನು ಸಹ ತಿಳಿಸಿದ್ದಾರೆ. ಇದಕ್ಕೆ ನಿರ್ದಿಷ್ಟವಾದ ಕಾಲಮಿತಿ ಏನಾದರೂ ಕೊಡುವುದಕ್ಕೆ ಆಗುತ್ತದೆಯೋ ಎಂಬುದನ್ನು ಸ್ಪಷ್ಟೀಕರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಪಶ್ಚಿಮಘಟ್ಟ ಪ್ರದೇಶದಲ್ಲಿ ಗಣಿಗಾರಿಕೆ ಮಾಡುವುದಕ್ಕೆ ಯಾರಿಗೂ ಕೂಡ ಪರವಾನಿಗೆಯನ್ನು ನೀಡುವುದಿಲ್ಲವೆಂದು ಮೇಲ್ಮನೆಯಲ್ಲಿ ಈಗಾಗಲೇ ಹೇಳಿದ್ದಾರೆ. ಆದ್ದರಿಂದ, ಇದರ ಬಗ್ಗೆಯೂ ಕೂಡ ಏನು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಮುನಿಯಪ್ಪ : ಮಾನ್ಯ ಸಭಾಧ್ಯಕ್ಷರೆ, ಅರಣ್ಯ ಇಲಾಖೆಯ ಅರಣ್ಯ ಕಾಯಿದೆ 1989 ಸೆಕ್ಷನ್ 2ರ ಪ್ರಕಾರ ದೃಢೀಕರಣ ಪತ್ರ ನಮಗೆ ಕಡ್ಡಾಯವಾಗಿ ಬೇಕಾಗುತ್ತದೆ. ಇದು ಬರದೇ ಅರಣ್ಯ ಪ್ರದೇಶದಲ್ಲಿ ಯಾವುದೇ ಗಣಿಗಾರಿಕೆಗೆ ಅನುಮತಿ ಕೊಡುವುದಕ್ಕೆ ಸಾಧ್ಯವಿಲ್ಲ. ಮತ್ತೆ 6 ತಿಂಗಳೊಳಗಾಗಿ ನಿಮ್ಮ ಎನ್.ಓ.ಸಿ.ಯನ್ನು ಕೊಡಲೇ ಬೇಕೆಂದು ನಮ್ಮ ಗಣಿ ಪಾಲಿಸಿಯಲ್ಲಿ ನಿಗದಿ ಮಾಡಿಕೊಂಡಿದ್ದೇವೆ. ಹೀಗಿದ್ದರೂ ಕೂಡ ಹಲವಾರು ಸಂದರ್ಭದಲ್ಲಿ ಅವರು ಕೊಡುವುದಿಲ್ಲ. ಆದರೆ ಅವರು ಇದನ್ನು ಕೊಡದೇ ಇದ್ದರೆ ನಾವೂ ಕೂಡ ಕೊಡುವುದಕ್ಕೆ ಸಾಧ್ಯವಿಲ್ಲ. ಈ ರೀತಿಯಾದ ಕಟ್ಟುನಿಟ್ಟಿನ ಕಾಯಿದೆ ಇದೆ. ಆದರೂ ಕೂಡ ನಿಮ್ಮ ಒಪೀನಿಯನ್ ಕಳುಹಿಸಿಕೊಡಿ ಎಂದು ನಾವು ಮತ್ತೆ ಮತ್ತೆ ರಿಮೈಂಡರ್ ಲೆಟರ್ ಬರೆದು ಆಗಾಗ್ಗೆ ಅವರಿಗೆ ಕಳುಹಿಸುತ್ತಿರುತ್ತೇವೆ. ಅಂತಿಮವಾಗಿ ಅವರಿಂದ ಒಪ್ಪಿಗೆ ಬಂದ ಮೇಲೆಯೇ ಗಣಿಗಾರಿಕೆ ಗುತ್ತಿಗೆಯನ್ನು ಕೊಡುವುದಕ್ಕೆ ಅವಕಾಶ ಇದೆ. ಮತ್ತೆ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಗಣಿಗಾರಿಕೆಗೆ ಅನುಮತಿ ಕೊಡುವುದಿಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಪಶ್ಚಿಮಘಟ್ಟದ ಅರಣ್ಯ ಪ್ರದೇಶಗಳಲ್ಲಿ ಯಾವುದೇ ಸಂದರ್ಭದಲ್ಲಿ ಕೂಡ ಗಣಿಗಾರಿಕೆಗೆ ಪರವಾನಗಿ ಕೊಡುವುದಿಲ್ಲ ಎಂದು ಸರ್ಕಾರ ಈಗಾಗಲೇ ಘೋಷಣೆ ಮಾಡಿದೆ. ಈಗ ಅಲ್ಲಿರತಕ್ಕಂಥ ಕುದುರೆ ಮುಖ ಗಣಿಗಾರಿಕೆಯ ಅವಧಿ ಸುಪ್ರೀಂ ಕೋರ್ಟ್ ಡೈರೆಕ್ಷನ್ ಪ್ರಕಾರ ಮುಗಿದ ನಂತರ ಅಲ್ಲಿ ಹೊಸ ಗಣಿಗಾರಿಕೆ ಕೊಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು : ಮುಂದಿನ ಪ್ರಶ್ನೆಗಳು ಮಾನ್ಯ ಜೆ.ಡಿ. ನಾಯ್ಕರವರು ಹಾಗೂ ಮಾನ್ಯ ಎ.ಎಸ್. ಗುರುಸ್ವಾಮಿಯವರು ಸದಸ್ಯರುಗಳು ಗೈರು ಹಾಜರಿದ್ದಾರೆ.

ಕೆ.ಹೆಚ್.ಡಿ.ಸಿಯಲ್ಲಿ ನೇಕಾರರಿಗೆ ವರ್ಷಪೂರ್ತಿ ಉದ್ಯೋಗಾವಕಾಶ ನೀಡುವುದು

401 (3586) : ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಈಗ ಎಷ್ಟು ನೇಕಾರರು ಕೆಲಸ ಮಾಡುತ್ತಿದ್ದಾರೆ, ಯೋಜನಾ ಕೇಂದ್ರವಾರು ವಿವರ ನೀಡುವುದು?

ಆ) ಕೆ.ಹೆಚ್.ಡಿ.ಸಿಯಲ್ಲಿ ಅತ್ಯಧಿಕ ನೇಕಾರರು ಯಾವ ವರ್ಷ ಕೆಲಸ ನಿರ್ವಹಿಸುತ್ತಿದ್ದರು?

ಇ) ಈಗ ಕೆ.ಹೆಚ್.ಡಿ.ಸಿ. ನೇಕಾರರ ಸಂಖ್ಯೆ ಗಣನೀಯವಾಗಿ ಇಳಿಯಲು ಕಾರಣಗಳೇನು, ಈ ಇಳಿಕೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಕೆ.ಹೆಚ್.ಡಿ.ಸಿ.ಯಲ್ಲಿ ಈಗ ಕೆಲಸ ಮಾಡುವ ನೇಕಾರರಿಗೆ ಅನಿರ್ಭಂದಿತವಾಗಿ ವರ್ಷ ಪೂರ್ಣ ಉದ್ಯೋಗ ನೀಡಲು ಇರುವ ತೊಂದರೆಗಳೇನು; ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) 13458 ಕೈಮಗ್ಗ ನೇಕಾರರು ಕೆಲಸ ಮಾಡುತ್ತಿದ್ದಾರೆ. ಯೋಜನಾ ಕೇಂದ್ರವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 1993-94ನೇ ಸಾಲಿನಲ್ಲಿ ಅತ್ಯಧಿಕ ನೇಕಾರರು ಕೆಲಸ ನಿರ್ವಹಿಸುತ್ತಿದ್ದರು.

ಇ) ಕಾರಣಗಳು ಈ ಕೆಳಗಿನಂತಿವೆ.

1. ಹೆಚ್ಚಿದ ದಾಸ್ತಾನು ಮಟ್ಟ, ಆರ್ಥಿಕಮುಗ್ಗಟ್ಟಿನಿಂದ ಮಿಲ್ಲುಗಳಿಗೆ ಸಕಾಲದಲ್ಲಿ ಹಣ ಪಾವತಿಸಲಾಗದೆ, ನೂಲು ಖರೀದಿಸುವಲ್ಲಿ ತೊಂದರೆಯುಂಟಾಗಿ ನೇಕಾರರು ಇತರೆ ಪ್ರದೇಶಗಳಿಗೆ ವಲಸೆ ಹೋಗಿರುವುದು.
2. ನೇಕಾರರು ಕೈಮಗ್ಗ ನೇಯ್ಗೆ ಬಿಟ್ಟು ವಿದ್ಯುತ್ ಚಾಲಿತ ಮಗ್ಗಗಳಲ್ಲಿ ಖಾದಿ ಕೇಂದ್ರಗಳಲ್ಲಿ ನೇಯ್ಗೆ ಮಾಡುವುದು.
3. ಖಾಸಗಿ ನೇಕಾರರು ಆಕರ್ಷಕ ಮುಂಗಡ ಹಣ ನೀಡಿ ವಿದ್ಯುತ್ ಚಾಲಿತ ಮಗ್ಗ ಹಾಗೂ ಕೈಮಗ್ಗಗಳ ಮೇಲೆ ರೇಷ್ಮೆ ಬಟ್ಟೆ ನೇಯ್ಗೆ ಮಾಡಲು ಆಕರ್ಷಿಸುತ್ತಿರುವುದು.
4. ಕೆಲವು ಕೇಂದ್ರಗಳಲ್ಲಿ ನೇಕಾರರು ಕೈಮಗ್ಗ ನೇಯ್ಗೆ ವೃತ್ತಿಯನ್ನು ಬಿಟ್ಟು ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿರುವುದು.
5. ನಿಗಮವು ನಿಗದಿಪಡಿಸಿದ ಗುಣಮಟ್ಟ ಸೂಚನೆಗಳಿಗೆ ತಕ್ಕಂತೆ ನೇಯ್ಗೆ ಮಾಡಲು ಅಸಮರ್ಥರಾದ ನೇಕಾರರು ನೇಯ್ಗೆ ಕೆಲಸವನ್ನು ಸ್ಥಗಿತಗೊಳಿಸಿರುವುದು.

ಈ ಇಳಿಕೆ ತಡೆಗಟ್ಟಲು ಈ ಕೆಳಗಿನ ಕ್ರಮ ಕೈಗೊಳ್ಳಲಾಗುತ್ತಿದೆ.

1. ನೇಕಾರರಿಗೆ ಸಕಾಲದಲ್ಲಿ ನಿಯಮಿತವಾಗಿ ನೂಲು ಪೂರೈಸುವುದು.
2. ನಿಗಮದ ಉತ್ಪನ್ನಗಳ ದಾಸ್ತಾನು ಶೇಖರಣೆಯಾಗದಂತೆ ನಿಗಾವಹಿಸುವುದು.
3. ನಿಗಮದ ಸಿಬ್ಬಂದಿಗೆ ವಿ.ಆರ್.ಎಸ್. ಅಳವಡಿಸಿ ಸಿಬ್ಬಂದಿ ಸಂಖ್ಯೆ ಕಡಿಮೆ ಮಾಡುವುದು.
4. ವ್ಯಾಪಾರ ವಹಿವಾಟು ಕಡಿಮೆ ಇರುವ ಮಾರಾಟ ಮಳಿಗೆಗಳನ್ನು ಮುಚ್ಚುವುದು.

ಈ) ಈ ಸಂಬಂಧದಲ್ಲಿ ಈ ಕೆಳಗಿನ ತೊಂದರೆಗಳಿವೆ.

1. ಹೆಚ್ಚಿದ ಸಿಬ್ಬಂದಿ ವೆಚ್ಚಗಳಿಂದಾಗಿ ಉತ್ಪನ್ನಗಳ ಮೇಲಿನ ಮಾರಾಟ ಬೆಲೆ ಹೆಚ್ಚಿರುವುದು.
2. ಬೇಡಿಕೆಗನುಗುಣವಾಗಿ ಬಟ್ಟೆಗಳನ್ನು ತಯಾರಿಸದೇ ಇರುವುದು.
3. ವರ್ಷ ಪೂರ್ತಿ ಸಮಾನಾಂತರವಾಗಿ ಬೇಡಿಕೆ ಬಾರದೇ ಇರುವುದು.
4. ವಿದ್ಯುತ್ ಮಗ್ಗಗಳಲ್ಲಿ ಉತ್ಪಾದಿಸಿದ ಬಟ್ಟೆಗಳ ಜೊತೆಗೆ ಪೈಪೋಟಿ ಮಾಡಬೇಕಾಗಿರುವುದು.
5. ನೆರೆ ರಾಜ್ಯಗಳ ಕೈಮಗ್ಗಗಳ ಹಾಗೂ ವಿದ್ಯುತ್ ಮಗ್ಗಗಳ ತಯಾರಿಸಿರುವ ಬಟ್ಟೆಗಳಿಗೆ ಹೋಲಿಸಿದಲ್ಲಿ ನಿಗಮವು ಉತ್ಪಾದಿಸಿದ ಬಟ್ಟೆಗಳಿಗೆ ಬೆಲೆ ಹೆಚ್ಚಾಗಿರುವುದು.

ಈ ತೊಂದರೆಗಳನ್ನು ನಿವಾರಿಸಲು ಈ ಕೆಳಕಂಡ ಕ್ರಮ ಕೈಗೊಳ್ಳಲು ಪರಿಶೀಲಿಸಲಾಗುತ್ತದೆ:

1. ನಿಗಮದಲ್ಲಿ ಕಂಪ್ಯೂಟರೀಕೃತ CAD/CAM ವ್ಯವಸ್ಥೆಯಡಿ ಹೊಸವಿನ್ಯಾಸ ರಚನೆಗೆ ಅವಕಾಶ ಕಲ್ಪಿಸಿ ಮಾರುಕಟ್ಟೆ ಸಮೀಕ್ಷೆ ನಡೆಸಿ ಬೇಡಿಕೆಗನುಗುಣವಾದ ಉತ್ಪನ್ನಗಳನ್ನು ತಯಾರಿಸಲು ಅನುವು ಮಾಡುವುದು.
2. ಸ್ವಯಂ ನಿವೃತ್ತಿ ಯೋಜನೆಯನ್ನು ಅಳವಡಿಸಿ, ನಿಗಮದಲ್ಲಿನ ಹೆಚ್ಚುವರಿ ಸಿಬ್ಬಂದಿಯನ್ನು ತೆಗೆದು ಆಡಳಿತ ವೆಚ್ಚವನ್ನು ಕಡಿಮೆಗೊಳಿಸಿ ಅದರಿಂದ ಉತ್ಪಾದನೆ ಮೇಲೆ ಬೀಳುವ ಹೊರೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡುವುದು.
3. ಲಾಭದಾಯಕವಾಗಿ ನಡೆಯದ ಮಾರಾಟ ಮಳಿಗೆಗಳನ್ನು ಮುಚ್ಚುವುದು ಮತ್ತು ಕೆಲವು ಮಾರಾಟ ಮಳಿಗೆಗಳನ್ನು ನವೀಕರಣಗೊಳಿಸಿ, ನಿಗಮದ ಉತ್ಪನ್ನಗಳ ಚಿಲ್ಲರೆ ಮಾರಾಟ ಹೆಚ್ಚುವಂತೆ ಕ್ರಮ ಕೈಗೊಳ್ಳುವುದು.

ಅನುಬಂಧ

ಕರ್ನಾಟಕ ಕೈಮಗ್ಗ ನಿಗಮ ನಿಯಮಿತದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಮಗ್ಗ ನೇಕಾರರ ಯೋಜನಾ ಕೇಂದ್ರವಾರು ವಿವರಗಳು

ಕ್ರ.ಸ.	ಯೋಜನಾ ಕೇಂದ್ರಗಳು	ಕಾರ್ಯನಿರ್ವಹಿಸುತ್ತಿರುವ ನೇಕಾರರ ಸಂಖ್ಯೆ
1	2	3
1.	ಸಂಪಂಗಿರಾಮನಗರ, ಬೆಂಗಳೂರು	39
2.	ಚಿಂತಾಮಣಿ	34
3.	ಕಲ್ಲೂರು	223
4.	ಆನೇಕಲ್	125
5.	ತಿಪಟೂರು	80
6.	ಮೊಳಕಾಲ್ಮೂರು	82
7.	ಕೊಳ್ಳೇಗಾಲ	207
8.	ಕೋಲಾರ (ರೇಷ್ಮೆ)	12
9.	ಬನಹಟ್ಟಿ	2150
10.	ರಬಕವಿ	1388
11.	ರಾಮದುರ್ಗ	1198
12.	ಇಳಕಲ್	1600
13.	ರಾಣಿಬೆನ್ನೂರು	1651
14.	ಗುಲ್ಬರ್ಗ	1439
15.	ಬಸವಕಲ್ಯಾಣ	600
16.	ಗದಗ್ ಬೇಟಗೇರಿ	1579

ಕ್ರ.ಸ.	ಯೋಜನಾ ಕೇಂದ್ರಗಳು	ಕಾರ್ಯನಿರ್ವಹಿಸುತ್ತಿರುವ ನೇಕಾರರ ಸಂಖ್ಯೆ
17.	ಭಾಗ್ಯನಗರ	977
18.	ಮಂಗಳೂರು	32
19.	ಕೋಲಾರ (ಹತ್ತಿ)	10
20.	ಕೇರಳಾಪುರ	32
	ಒಟ್ಟು	13458

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈಗ ಸುಮಾರು 13,458 ಕೈಮಗ್ಗ ನೇಕಾರರು ಕೆಲಸ ಮಾಡುತ್ತಿದ್ದಾರೆ. ಒಂದು ಸಮಯದಲ್ಲಿ ಸುಮಾರು 40 ಸಾವಿರ ಜನ ನೇಕಾರರು ಕೆಲಸ ಮಾಡುತ್ತಿದ್ದರು. ಆದರೆ, ಇವತ್ತಿಗೆ ಕೇವಲ 13 ಸಾವಿರಕ್ಕೆ ಬಂದಿದ್ದಾರೆ. ಈಗ ಇರತಕ್ಕಂಥ 13 ಸಾವಿರ ನೇಕಾರರಿಗೂ ಕೂಡ ನಿರಂತರವಾಗಿ ಕೆಲಸ ಕೊಡತಕ್ಕಂಥ ಕಾರ್ಯ ಕೆ.ಹೆಚ್.ಡಿ.ಸಿ. ಯಿಂದ ಆಗುತ್ತಿಲ್ಲ. ಇಲಾಖೆಯವರು ನಮ್ಮ ಕಡೆಯಿಂದ ಐಟಂಗಳನ್ನು ಖರೀದಿ ಮಾಡುತ್ತಿಲ್ಲ. ಆದ್ದರಿಂದ ನಮಗೆ ಮಾರಾಟಕ್ಕೆ ತೊಂದರೆಯಾಗಿದೆ ಎಂದು ಕೆ.ಹೆಚ್.ಡಿ.ಸಿ.ಯ ಅಧಿಕಾರಿಗಳು ಹೇಳುತ್ತಾರೆ. ಸರ್ಕಾರದ ಇಲಾಖೆಗಳು ಇಲ್ಲಿಂದಲೇ ಖರೀದಿ ಮಾಡುವುದಕ್ಕೆ ತೊಂದರೆ ಏನು? ತಮಗೆ ಗೊತ್ತಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಅದು ಏನೆಂದರೆ, 1970ನೇ ಇಸವಿಯಲ್ಲಿ ಮಾನ್ಯ ದೇವರಾಜ ಅರಸುರವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಈಗಿನ ನಮ್ಮ ಮುಖ್ಯಮಂತ್ರಿಯವರು ಕೈಗಾರಿಕೆ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಕೆ.ಹೆಚ್.ಡಿ.ಸಿ.ಯನ್ನು ಪ್ರಾರಂಭ ಮಾಡಿದ್ದರು. ಮಾಸ್ಟರ್ ವೀವರ್ಸ್‌ನಿಂದ ನೇಕಾರರು ಬಿಡುಗಡೆಯಾಗಿ ಅವರೇ ಸ್ವಾಭಿಮಾನದಿಂದ ದುಡಿಯತಕ್ಕಂಥ ಒಂದು ವ್ಯವಸ್ಥೆ ರೂಪಿಸಬೇಕೆಂದು ಕೆ.ಹೆಚ್.ಡಿ.ಸಿ.ಯನ್ನು ಸ್ಥಾಪನೆ ಮಾಡಲಾಗಿತ್ತು. ಇವತ್ತಿನದಿವಸ ಇವರೇ ಮುಖ್ಯಮಂತ್ರಿಯಾಗಿರುವುದರಿಂದ ಈಗ ಆಗಿರತಕ್ಕಂಥ ತೊಂದರೆಯನ್ನು ದಯವಿಟ್ಟು ನಿವಾರಿಸಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇದೇನು ಬಹಳ ದೊಡ್ಡ ಕೆಲಸವಲ್ಲ. ಇಲಾಖೆಯವರು ಕೆ.ಹೆಚ್.ಡಿ.ಸಿ ಮೂಲಕ ಖರೀದಿ ಮಾಡಿದರೆ ನೇಕಾರರಿಗೆ ನಿರಂತರವಾಗಿ ಉದ್ಯೋಗ ಕೊಡುವುದಕ್ಕೆ ಆಗುತ್ತದೆ. ಮತ್ತೆ ಅದರ ಉದ್ದೇಶ ಕೂಡ ಈಡೇರುತ್ತದೆ. ಆದ್ದರಿಂದ, ಇದನ್ನು ಮಾಡುವುದಕ್ಕೆ ನಿಮಗೆ ಏನು ತೊಂದರೆ ಎನ್ನತಕ್ಕಂಥದ್ದನ್ನು ತಾವು ಹೇಳಬೇಕು.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿದ ಹಾಗೆ ಕೈಮಗ್ಗ ಅಭಿವೃದ್ಧಿ ನಿಗಮವು 20 ಅಂಶದ ಕಾರ್ಯಕ್ರಮದ ಅಡಿಯಲ್ಲಿ ಬಡ ನೇಕಾರರಿಗೆ ಸಹಾಯವಾಗಬೇಕೆಂಬ ದೃಷ್ಟಿಯಿಂದ ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಈಗಿನ ಮುಖ್ಯಮಂತ್ರಿಯಾಗಿರತಕ್ಕಂಥ ಸನ್ಮಾನ್ಯ ಎಸ್.ಎಂ.ಕೃಷ್ಣ ರವರ ನೇತೃತ್ವದಲ್ಲಿ ಕೆ.ಹೆಚ್.ಡಿ.ಸಿ ಆರಂಭವಾಯಿತು. ಆದರೆ ಇಂದು ಅಲ್ಲಿರತಕ್ಕಂಥ ಹೆಚ್ಚಿನ ನೌಕರರು ಅಲ್ಲಿ ಹೆಚ್ಚು ದಾಸ್ತಾನು ಶೇಖರಣೆಯಾಗಿರತಕ್ಕಂಥದ್ದು ಈ ರೀತಿಯಾದ ನಾನಾ ತೊಂದರೆಗಳಿಂದ ಇವತ್ತು ಅದು ಕಷ್ಟದ ಪರಿಸ್ಥಿತಿಯಲ್ಲಿದೆ. ಆದರೆ ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿದ ರೀತಿಯಲ್ಲಿ

ಎಲ್ಲಾ ಸರ್ಕಾರಿ ಸ್ವಾಮ್ಯದ ಇಲಾಖೆಗಳು ನಮ್ಮ ಕೆಹೆಚ್‌ಡಿಸಿಯ ಮುಖಾಂತರ ವ್ಯವಹಾರ ನಡೆಸಿದರೆ ಎಲ್ಲಾ ಒಳ್ಳೆಯದಾಗುತ್ತದೆ ಎನ್ನುವುದು ಇದೆ. ಅದಕ್ಕೆ ನಾವು ಸುತ್ತೋಲೆಗಳನ್ನು ಹೊರಡಿಸಿದ್ದೇವೆ. ಆದರೆ ಸುತ್ತೋಲೆಗಳಿಂದ ಫಲಪ್ರದವಾಗಿಲ್ಲ. ಆದ್ದರಿಂದ ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಬೇರೆ ರಾಜ್ಯಗಳಲ್ಲಿ ನಡೆಸುತ್ತಿರುವ ರೀತಿಯಲ್ಲಿ ಆಂಧ್ರಪ್ರದೇಶ, ತಮಿಳುನಾಡಿನಲ್ಲಿ ಹೇಗೆ ಸರ್ಕಾರಿ ಸ್ವಾಮ್ಯದ ಕಾರ್ಯಕ್ರಮಗಳನ್ನು ಕೆಹೆಚ್‌ಡಿಸಿಗೆ ಕೊಡುವ ಮೂಲಕ ನೊದಲೇ ಹಣವನ್ನು ಕೂಡ ಅದರಲ್ಲಿ ಕೊಡತಕ್ಕಂಥದ್ದು, ಮತ್ತು ಅಗ್ರಿಮೆಂಟ್ ಎಂಓಯು ಕೂಡ ಮಾರು ವರ್ಷಕ್ಕೆ ವಾಡಿಕೊಳ್ಳಬೇಕೆಂದು ಏನಿದೆ. ಆ ದೃಷ್ಟಿಯಲ್ಲಿ ನಾವೂ ಕೂಡ ಆ ದಾರಿಯಲ್ಲಿ ಹೋಗಬೇಕೆಂದು ಚಿಂತನೆಯಲ್ಲಿ ಇದ್ದೇವೆ. ಅದನ್ನು ತಕ್ಷಣ ಮಾಡುವುದಕ್ಕೆ ನಾವು ಪಯತ್ನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್‌ರು ಕೇಳಿರುವ ಪ್ರಶ್ನೆಗೆ ಲಾಸ್ಟ್‌ಟೈಮ್ ಒಂದು ಉಪ ಪ್ರಶ್ನೆ ಬಂದಾಗ, ಇದರ ಬಗ್ಗೆ ಹೆಚ್ಚು ವಿವರಣೆಯನ್ನು ಕೊಡುತ್ತೇನೆಂದು ತಾವು ಹೇಳಿದ್ದೀರಿ. ಇಲ್ಲಿ ಏನಾಗಿದೆ ಎಂದರೆ, ಇವತ್ತು ಕೆಹೆಚ್‌ಡಿಸಿ ಮುಳುಗಿ ಹೋಗುವಂಥ ಹಡಗಾಗುತ್ತಿದೆ ಆ ಪರಿಸ್ಥಿತಿಯಲ್ಲಿದೆ. ಅದು ಇವತ್ತು ನೇಕಾರರಿಗೆ ಒಂದು ಜೀವನಾಡಿಯಾಗಬೇಕಾಗಿತ್ತು. ಇವತ್ತು ಸರಿಯಾದ ಸಮಯಕ್ಕೆ ಕಚ್ಚಾನೂಲು ಕೊಡುವಂಥದ್ದು ಆಗುತ್ತಿಲ್ಲ. ಆಮೇಲೆ ಅವರಿಗೆ ಮೂರು–ನಾಲ್ಕು ತಿಂಗಳವರೆಗೆ ಕೂಲಿ ಕೊಡುವಂಥ ಪರಿಸ್ಥಿತಿಯಲ್ಲಿಲ್ಲ. ಹೀಗಾಗಿ ನೇಕಾರರಿಗೆ ಕೂಲಿ ಬಾಕಿ, ಸರಿಯಾದ ಸಮಯದಲ್ಲಿ ನೂಲನ್ನು ಕೊಡುತ್ತಿಲ್ಲ. ನಮ್ಮ ರಾಜ್ಯದಲ್ಲಿ 35 ಸಾವಿರಕ್ಕಿಂತ ಹೆಚ್ಚು ಕೈಮಗ್ಗ ನೇಕಾರರು ಇದ್ದಂಥವರು ಇವತ್ತು ಅದು 12000 ಕೈಮಗ್ಗ ನೇಕಾರರಿದ್ದಾರೆ. ಕೆಲಸವಿಲ್ಲ ಆದರೆ ಆ ಸಿಬ್ಬಂದಿ ಮಾತ್ರ ಅಷ್ಟೇ ಇದೆ. ಹಾಗಾಗಿ ಇದೊಂದು ಬಿಳಿ ಆನೆಯಾಗಿದೆ. ಅದಕ್ಕಾಗಿ ಅದರ ಪುನರುಜ್ಜೀವನದ ಬಗ್ಗೆ ವಿಚಾರ ಮಾಡಬೇಕಾಗಿರುವಂಥದ್ದು ಮತ್ತು ನಮ್ಮ ನೇಕಾರರಿಗೆ ಸರಿಯಾದ ಸಮಯಕ್ಕೆ ನೂಲು ಕೊಡುವಂಥದ್ದಾಗಬೇಕು. ಅವರಿಗೆ ತಕ್ಷಣ ಕೂಲಿ ಹಣ ಬಿಡುಗಡೆಯಾಗುವಂಥದ್ದು, ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಕೆಹೆಚ್‌ಡಿಸಿಯ ಎಂಡಿ ಶ್ರೀ ಮದನಗೋಪಾಲ್‌ರವರು ಹೇಳಿಕೆ ಮೊನ್ನೆ ಪತ್ರಿಕೆಯಲ್ಲಿ ಬಂದಿತ್ತು. ಅವರು ಸರ್ಕಾರಕ್ಕೆ ಒಂದು ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ನ್ನು ಕಳುಹಿಸಿದ್ದಾರೆ. ಆದು ಏಷಿಯನ್ ಏಜ್ ಪತ್ರಿಕೆಯಲ್ಲಿ ಬಂದಿದೆ. ಇವತ್ತು 29 ಕೋಟಿ ರೂಪಾಯಿಗಳ ಲಾಸ್‌ನಲ್ಲಿ ಕೆಹೆಚ್‌ಡಿಸಿ ಇದೆ. ಟೋಟಲ್ ಎಲ್ಲಾ ಲಯಾಬಿಲಿಟಿ 46 ಕೋಟಿ ರೂಪಾಯಿಗಳು ಇದೆ. ಹೀಗಾಗಿ ಇದನ್ನು ಮೂರು ತಿಂಗಳೊಳಗಾಗಿ ಸರ್ಕಾರ ಇದರ ಪುನರುಜ್ಜೀವನ ಸಲುವಾಗಿ ಏನಾದರೂ ಮಾಡದಿದ್ದರೆ ಇದನ್ನು ನಾವು ಲಿಕ್ವಿಡೇಟ್ ಮಾಡಬೇಕಾಗುತ್ತದೆ ಎನ್ನುವ ಅವರ ಹೇಳಿಕೆ ಪತ್ರಿಕೆಯಲ್ಲಿ ಬಂದಿದೆ. ಇದನ್ನೂ ನೀವು ಗಂಭೀರವಾಗಿ ತೆಗೆದುಕೊಂಡು, ಕೆಹೆಚ್‌ಡಿಸಿ ಯನ್ನು ಉಳಿಸುವುದು ಒಂದು, ಆಮೇಲೆ ನೇಕಾರರನ್ನು ಉಳಿಸುವುದು ಒಂದು, ಇದರ ಬಗ್ಗೆ ಏನಾದರೊಂದು ಸ್ಪಷ್ಟವಾದಂಥ ನೀತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, ಇವತ್ತು ನೀವೆಲ್ಲಾ ಮನಸ್ಸು ಮಾಡಿ ಕೆಹೆಚ್‌ಡಿಸಿ ಯನ್ನು ಉಳಿಸಿದರೆ, ನೇಕಾರರನ್ನು ಉಳಿಸಿದರೆ ಇವತ್ತು ಲಕ್ಷಾಂತರ ನೇಕಾರರ ಕುಟುಂಬಗಳು ಇದರ ಮೇಲೆ ಅವಲಂಬಿತರಾಗಿದ್ದಾರೆ. ಅದಕ್ಕಾಗಿ ಸರ್ಕಾರ

ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಕೆಹೆಚ್‌ಡಿಸಿ ಯನ್ನು ಉಳಿಸುವುದರ ಸಲುವಾಗಿ ತಾವು ಏನಾದರೂ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒಂದೇ ಸಲಕ್ಕೆ ಉತ್ತರವನ್ನು ಕೊಡಲಿ. ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ನೇಕಾರರು ಬಹಳಷ್ಟು ಜನರಿದ್ದಾರೆ. ಮೊನ್ನೆ ಇಡೀ ರಾಜ್ಯಾದ್ಯಂತ ಚಳುವಳಿಯನ್ನು ಮಾಡಿದರು. ಕಚ್ಚಾನೂಲು ಇವತ್ತು ಪೂರೈಕೆಯಾಗುತ್ತಿಲ್ಲ. ಅವರು ಕೆಲಸ ಮಾಡಿರುವುದಕ್ಕೆ ಪೇಮೆಂಟ್ ಆಗುತ್ತಿಲ್ಲ. ಆ ಕಾರಣಕ್ಕಾಗಿ ಇವತ್ತು ದುಡಿಯುವ ಕೈಗೆ ಶಕ್ತಿಯನ್ನು ಕೊಡತಕ್ಕಂಥದ್ದು ಸರ್ಕಾರದ ಕೆಲಸವಾಗಬೇಕಾಗಿದೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಯವರು ಸುಮಾರು 14 ಸಾವಿರ ಜನ ನೇಕಾರರು ಇದನ್ನು ಅವಲಂಬಿಸಿದ್ದಾರೆ ಅವರಿಗೆ ಪರ್ಮನೆಂಟ್ ಆಗಿ ಸಹಾಯ ಮಾಡತಕ್ಕಂಥದ್ದರ ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿರುತ್ತಾರೆ. ಆ ಮಾಸ್ಟರ್ ವೀವರ್ಸ್ ಕಡೆಯಿಂದ ಎಲ್ಲರೂ ಬಿಟ್ಟು ಈ ಕೆಹೆಚ್‌ಡಿಸಿಯಿಂದ ನೂಲನ್ನು ಪಡೆದು ತಮ್ಮ ಮಜೂರಿಯನ್ನು ಪಡೆದು ಸಾಕಷ್ಟು ಉನ್ನತ ಸ್ಥಿತಿಗೆ ಅವರು ಆರ್ಥಿಕವಾಗಿ ಸಬಲರಾಗಿರುವ ಪರಿಸ್ಥಿತಿಗೆ ಬಂದಿದ್ದಾರೆ. ದುರ್ದೈವದಿಂದ ಆ ಸಂಸ್ಥೆ ಮತ್ತು ಆ ವ್ಯವಸ್ಥೆ ಮುರಿದು ಬಿದ್ದಿರುವುದರಿಂದ ಆ ನೇಕಾರರು ಆ ಕಡೆಯೂ ಹೋಗುವುದಕ್ಕೆ ಸಾಧ್ಯವಿಲ್ಲ. ಅವರನ್ನು ಕರೆದುಕೊಳ್ಳುವುದಿಲ್ಲ. ಅವರು ಇವರನ್ನು ಮತ್ತಷ್ಟು ಶೋಷಣೆ ಮಾಡುತ್ತಾರೆ. ಇನ್ನೊಂದು ಕಡೆ ಇವರು ಬೇರೆ ಕೂಲಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಲಕ್ಷಾಂತರ ಕುಟುಂಬಗಳು ಕಷ್ಟದಲ್ಲಿದ್ದಾವೆ. ಈ ಬಗ್ಗೆ ನಾವೆಲ್ಲಾ ನಿಯೋಗ ಹೋಗಿ ಮಾನ್ಯ ಮುಖ್ಯಮಂತ್ರಿಗಳವರಿಗೆ ಹೇಳಿರುತ್ತೇವೆ. ಅದನ್ನು ಪುನರುಜ್ಜೀವನ ಮಾಡುವುದರ ಮೂಲಕ, ಸಿಬ್ಬಂದಿ ಕಡಿಮೆ ಮಾಡಿ, ಅವರಿಗೆ ಕೆಲಸವನ್ನು ನೀಡುವುದುರ ಮೂಲಕ ಏನಾದರೊಂದು ದೊಡ್ಡ ಪ್ರಯತ್ನವನ್ನು ಮಾನ್ಯ ಸಚಿವರು ಮಾಡಲೇಬೇಕೆಂದು ನಾನು ತಮ್ಮ ಮೂಲಕ ಆಗ್ರಹವನ್ನು ಮಾಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಡಿಮ್ಯಾಂಡ್ ಮೇಲೆ ಮಾತನಾಡಬೇಕೆಂದಿದ್ದೆ, ಆಮೇಲೆ ಅವರು ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದರು. ಮೊದಲು ನಿಮ್ಮ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ಆರ್ಡರ್ಸ್ ಕೆಹೆಚ್‌ಡಿಸಿಗೆ ಬರುತ್ತಿತ್ತು. ಅವರು ಇಬ್ಬರೂ ಸಚಿವರು ಇದ್ದರೆ ನಾನು ಹೇಳಬೇಕೆಂದು ಇದ್ದೆ. ಮೊನ್ನೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 5 ಕೋಟಿ ರೂಪಾಯಿಗಳ ಆರ್ಡರ್‌ನ್ನು ಒಬ್ಬ ಬ್ಲಾಕ್‌ಲಿಸ್ಟ್ ಆದವನಿಗೆ ಕೊಟ್ಟಿದ್ದಾರೆ. ಅವನಿಗೆ ಇರುವ 14 ಹ್ಯಾಂಡ್‌ಲೂಮ್ಸ್‌ಗಳು ಹದಿನಾಲ್ಕು ನೂರು ಸಾವಿರ ನೇಕಾರರು ನೆಯ್ಯುವಂತಹ ಆರ್ಡರ್‌ನ್ನು ಒಬ್ಬ ಬ್ಲಾಕ್‌ಲಿಸ್ಟ್‌ನವನಿಗೆ ಕೊಟ್ಟರೆ ಕೆಹೆಚ್‌ಡಿಸಿಯ ಹಣೆಬರಹ ಏನಾಗುತ್ತದೆ ಎನ್ನುವುದನ್ನು ನೀವೇ ಹೇಳಿ? ಅದಕ್ಕೆ ಬೇಕಾದ ರೆಕಾರ್ಡ್ಸ್‌ನ್ನು ಹಾಗೂ ಆರ್ಡರ್ ಕಾಪಿಯನ್ನು ಕೊಡುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಕೇಳಿದಂತಹ ಪ್ರಶ್ನೆಗೆ ಉತ್ತರ ಹೇಳುತ್ತೇನೆ. ಕೈಮಗ್ಗ ನಿಗಮದ ಅಡಿಯಲ್ಲಿ

ಇವತ್ತು ನೇಕಾರರು ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ 365 ದಿವಸ ಕೆಲಸವನ್ನು ಕೊಡುವುದರ ಜೊತೆಗೆ ಅವರಿಗೆ ನೂಲನ್ನು ಕೊಡುವುದು ಹಾಗೂ ಮಜೂರಿಯನ್ನು ಕೊಡತಕ್ಕಂಥ ಕೆಲಸವನ್ನು ನಾವು ಆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈವರೆಗೆ ಕನ್‌ವರ್ಶನ್ ಚಾರ್ಜಸ್ ಮತ್ತು ಪೆಂಡಿಂಗ್ ಇರುವಂಥದ್ದನ್ನು ಜೂನ್‌ವರೆಗೆ 228.38 ಲಕ್ಷ ರೂಪಾಯಿಗಳನ್ನು ನಾವು ಈಗಾಗಲೇ ಕೊಟ್ಟಿದ್ದೇವೆ. ಇವತ್ತಿನ ಪರಿಸ್ಥಿತಿಯಲ್ಲಿ ಆ ನಿಗಮದಲ್ಲಿ 29 ಕೋಟಿ ರೂಪಾಯಿಗಳು ಲಾಸ್ ಆಗಿರುವಂಥದ್ದು ನಿಜ. ತಮ್ಮ ಅನಿಸಿಕೆ ಪ್ರಕಾರ 24,000 ನೇಕಾರರು ಇದ್ದಂಥ ಸಂದರ್ಭದಲ್ಲಿ ಆ ನೌಕರರಿಗೆ ವಿಆರ್‌ಎಸ್ ಕೊಡುವುದಕ್ಕೂ ಕೂಡ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದನ್ನು ಪುನರ್‌ಸಂಘಟನೆ ಮಾಡುವುದಕ್ಕೆ ಕ್ಯಾಬಿನೆಟ್ ಮುಂದೆ ಬರುತ್ತಿದೆ. ವಿಆರ್‌ಎಸ್ ಕೊಡುವುದು, ಕೆಲವೊಂದು ಔಟ್‌ಲೆಟ್ಸ್ ಏನಿವೆ, ಅವುಗಳು ಎಲ್ಲಿ ಲಾಭದಾಯಕವಾಗಿಲ್ಲ ಅವುಗಳನ್ನು ಮುಚ್ಚಿ ನಮ್ಮ ವೆಚ್ಚವನ್ನು ಕಡಿತಗೊಳಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಸರ್ಕಾರಿ ಸ್ವಾಮ್ಯದ ಕೆಲವು ಇಲಾಖೆಗಳು ಏನಿವೆ ಅದರ ಮೂಲಕವಾಗಿ ನಾವು ಆರ್ಡರ್‌ನ್ನು ತೆಗೆದುಕೊಳ್ಳುವುದಕ್ಕೆ ಇದರಲ್ಲಿ ಟ್ರಾನ್ಸ್‌ಫರೆನ್ಸಿ ಆಕ್ಟ್ ಒಂದು ಅಡ್ಡ ಬರುತ್ತಿದೆ. ಅದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆಯನ್ನು ಮಾಡಿ ಅದನ್ನು ಇದರಿಂದ ಹೊರತು ಪಡಿಸಬೇಕೆಂದು ಎಕ್ಸಮ್‌ಷನ್ ಕೇಳಿರುತ್ತೇನೆ. ಇದರ ಜೊತೆಗೆ ಈ ರಾಜ್ಯದ ನೇಕಾರರ ನಾಯಕರುಗಳು ಎಲ್ಲರೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆಯನ್ನು ಮಾಡಿದ್ದೇವೆ. ಅವರು ಸಹಾನುಭೂತಿಯನ್ನು ತೋರಿಸಿದ್ದಾರೆ. ಇದನ್ನು ಪುನಶ್ಚೇತನ ಮಾಡುವುದಕ್ಕೆ ಮುಂದಿನ ಕ್ಯಾಬಿನೆಟ್‌ಗೆ ಬರುವ ಹಂತದಲ್ಲಿದೆ. ಇದನ್ನು ನಾವು ಸರಿಪಡಿಸುವಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ :- ಸರ್ಕಾರಿ ಇಲಾಖೆಗಳಿಂದ ಪರ್ಚೇಸ್ ವಾಗುವಂಥದ್ದಾಗಬೇಕಾಗಿದೆ. ಕಚ್ಚಾನೂಲು ಕೊಡುವಂಥದ್ದು ಯಾವಾಗಲೂ ತಪ್ಪಬಾರದು. ಅದನ್ನು ಟೈಮಲಿ ಕೊಡಬೇಕಾಗಿದೆ.

ಶ್ರೀ ಹೆಚ್.ಎಂ. ರೇವಣ್ಣ : ಅದಕ್ಕೆ ನಾವು ಬದ್ಧರಾಗಿದ್ದೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅವರು ಇನ್ನು ನನ್ನ ಪ್ರಶ್ನೆಗೆ ಉತ್ತರವನ್ನು ಹೇಳಿರುವುದಿಲ್ಲ. ತಾವು ಬೆಲ್ ಹೊಡೆಯುತ್ತಿದ್ದಿರಲ್ಲಾ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆ ವತಿಯಿಂದ ಮುಖ್ಯವಾಗಿ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಸಮರ್ಪಕವಾಗಿ ಬಟ್ಟೆಗಳನ್ನು ರಾಜ್ಯಾದ್ಯಾಂತ ಒದಗಿಸುತ್ತಿದ್ದೇವೆ. ಅದಕ್ಕೆ ಮೊನ್ನೆ ತಾನೇ ಐಸೆಕ್‌ನಿಂದ ವರದಿ ಕೂಡ ಬಂದಿದೆ. ಅಲ್ಲಿಯ ಮಕ್ಕಳನ್ನು ಸರ್ವೆ ಮಾಡಿದ್ದಾರೆ. ರಾಜ್ಯದಲ್ಲಿ ಸಮರ್ಪಕವಾಗಿ ಬಟ್ಟೆ ಹಂಚಿಕೆಯಾಗುತ್ತದೆಂದು ಬಂದಿರುತ್ತದೆ. ಆದರೆ ಈ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಿಗೆ ಕೊಡಬೇಕಾದಂಥ ಸಂದರ್ಭದಲ್ಲಿ 27 ಜಿಲ್ಲೆಗಳ ಸುಮಾರು 110 ತಾಲ್ಲೂಕುಗಳಲ್ಲಿ ವಿವಿಧ ರೀತಿಯ ಬಟ್ಟೆಗಳನ್ನು ಕೊಡಬೇಕಾದದ್ದು ಬಂದಿತ್ತು. ಮೊದಲು ನಾವು ಬಟ್ಟೆಯನ್ನು ಮಾತ್ರ ಕೊಡುತ್ತಿದ್ದೆವು, ಕಳೆದ ವರ್ಷದಲ್ಲಿ ಬಟ್ಟೆಯನ್ನು ಹೊಲೆದು ಕೊಡುವಂಥ ಸಂದರ್ಭದಲ್ಲಿ ವ್ಯತ್ಯಾಸವಾಯಿತು. ಇದು ನಮಗೂ ಹಾಗೂ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಆದಂತಹ ಸ್ವಲ್ಪ ವ್ಯತ್ಯಾಸದಿಂದ ತೊಂದರೆಯಾಗಿದೆ. ಅದನ್ನು

ಸರಿಪಡಿಸಿಕೊಳ್ಳುವುದರಲ್ಲಿ ನಾವು ಮಾತನಾಡುತ್ತಿದ್ದೇವೆ. ಅದರ ಬಗ್ಗೆ ನಾವು ಮಾನ್ಯ ಸಚಿವರ ಜೊತೆಯಲ್ಲಿ ಚರ್ಚೆಯನ್ನು ಮಾಡಿ ಇತ್ಯರ್ಥ ಮಾಡುವುದಕ್ಕೆ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ವಿದ್ಯಾವಿಕಾಸ ಯೋಜನೆಯಲ್ಲಿ ತಾವು ಕೆಹೆಚ್‌ಡಿಸಿಗೆ ಕೊಟ್ಟಿದ್ದೀರಿ. ಅವರು ತಮಗೆ ಸಪ್ಲೈ ಕೂಡ ಮಾಡಿದ್ದಾರೆ. ಅದಕ್ಕೆ ನೀವು ಪೂರ್ತಿಯಾಗಿ ಪೇಮೆಂಟ್ ಮಾಡಿದರೆ ನಿರಂತರವಾಗಿ ಉದ್ಯೋಗವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನೀವು ಪೇಮೆಂಟ್ ಮಾಡುವುದಿಲ್ಲವೆಂದರೆ, ಅವರು ಏನು ಮಾಡಬೇಕು? ಬರಗಾಲ ಇರುವುದರಿಂದ ಪರಿಸ್ಥಿತಿ ಎಷ್ಟು ಗಂಭೀರವಿದೆ ಎನ್ನುವುದು ತಮಗೆ ಗೊತ್ತಿದೆ. ಅವರಿಗೆ ನೇಕಾರಿಕೆ ಒಂದು ಬಿಟ್ಟು ಬೇರೆ ಉದ್ಯೋಗವನ್ನು ಯಾವ ಕಾರ್ಯಕ್ರಮವನ್ನು ಅವರಿಂದ ಮಾಡುವುದಕ್ಕಾಗುವುದಿಲ್ಲ. ಮತ್ತೆ ಅವರು ಮಾಸ್ಟರ್ ವೀವರ್ಸ್ ಹತ್ತಿರ ತಮ್ಮ ಎಲ್ಲಾ ಮರ್ಯಾದೆಯನ್ನು ಮುಚ್ಚಿಟ್ಟು ಹೋಗಬೇಕು. ಅವರಿಗೆ ಹಾಗೆ ಮಾಡು ಎಂದು ಹೇಳುತ್ತೀರಾ? ಅವರಿಂದ ಅವರು ತಪ್ಪಿಸಿಕೊಂಡು ಬಂದಿದ್ದಾರೆ. ನೀವು ಮತ್ತೆ ಅವರ ಹತ್ತಿರ ಕಳುಹಿಸಿದರೆ ಪರಿಸ್ಥಿತಿ ಎಲ್ಲಿಗೆ ಬರುತ್ತದೆ? ನೀವು ದಯವಿಟ್ಟು ಬಾಕಿ ಇರುವ ವಿದ್ಯಾವಿಕಾಸದ್ದು ನಾಳೆ ಪೇಮೆಂಟ್ ಆಗುವ ಹಾಗೆ ಮಾಡಿಸಿ, ಅಂದರೆ ಅವರಿಗೆ ನಿರಂತರವಾಗಿ ನೂಲು ಸಿಗುತ್ತದೆ ಅವರ ಉದ್ಯೋಗ ಪ್ರಾರಂಭವಾಗುತ್ತದೆ. ಮುಂದೆ ಇದರ ರೀಹ್ಯಾಬಿಲಿಟೇಶನ್, ಆ ಮೇಲೆ ಕೇಂದ್ರ ಸರ್ಕಾರದ ಯೋಜನೆಯೊಳಗೆ ಪುನರುಜ್ಜೀವನಗೊಳಿಸುವುದು ವಿಆರ್‌ಎಸ್ ಇವೆಲ್ಲಾ ನೀವು ಮಾಡಬಹುದು. ಇದನ್ನು ನಾಳೆಯೇ ಮಾಡುವಂಥ ಕೆಲಸ ಇದು ಏಕೆಂದರೆ ನಾವು ಊರಿಗೆ ಹೋದಮೇಲೆ ಅವರು ಬಂದು ನಮ್ಮನ್ನು ಕೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆ ಚಳುವಳಿಯನ್ನು ನೇಕಾರರು ಮಾಡುವುದರ ಜೊತೆಗೆ 3–4 ಜನ ನೇಕಾರರು ಆತ್ಮಹತ್ಯೆಯನ್ನೂ ಕೂಡ ಮಾಡಿಕೊಂಡಿದ್ದಾರೆ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ರಬಕವಿ–ಬನಹಟ್ಟಿಗೆ ಎಲ್ಲಾ ಕಡೆ ಹೋಗಿ ಬಂದಿದ್ದೇನೆ. ನಾನು ರಾಜ್ಯದಲ್ಲಿ ಪ್ರವಾಸವನ್ನು ಮಾಡಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನೀವು ಯುದ್ಧೋಪಾದಿಯಲ್ಲಿ ಕೆಲಸವನ್ನು ತೆಗೆದುಕೊಳ್ಳಬೇಕಾಗುತ್ತದೆ. ನೇಕಾರರು ಬಹಳಷ್ಟು ಕಷ್ಟದಲ್ಲಿದ್ದಾರೆ. ಇನ್ನೂ 3–4 ತಿಂಗಳದ್ದು ಕೂಲಿ ಬಾಕಿ ಉಳಿದಿರುತ್ತದೆ. ನೀವು ನೂಲನ್ನು ಕೊಡುತ್ತಿಲ್ಲ. ನೀವು ಸರಿಯಾದ ಸಮಯಕ್ಕೆ ನೂಲನ್ನು ಕೊಡಿ, ನೀವು ಜಮಖಂಡಿ ರಬಕವಿ ಬಿಜಾಪುರ, ಬೆಳಗಾಂ, ಬನಹಟ್ಟಿ, ಕೊಪ್ಪಳ ಈ ಕಡೆ ಎಲ್ಲಾ ಪ್ರವಾಸವನ್ನು ಮಾಡಿ. ಆ ನೇಕಾರರ ಸಮಸ್ಯೆಯನ್ನು ತಿಳಿದುಕೊಳ್ಳಿ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ವರೇ ನಾನು ಎಲ್ಲಾ ಕಡೆ ಹೋಗಿ ಬಂದಿದ್ದೇನೆ. ಜಮಖಂಡಿ, ರಬಕವಿ ಬನಹಟ್ಟಿ ಎಲ್ಲಾ ಕಡೆ ಹೋಗಿ ಬಂದಿರುತ್ತೇನೆ. ನಾವು ಇಲ್ಲಿಯವರೆಗೆ ಕೂಲಿಯನ್ನು ಕೊಟ್ಟಿದ್ದೇವೆ. ಒಂದು ಕಂತು ಮಾತ್ರ ಬಾಕಿ ಇದೆ. ಅದನ್ನು ನಾವು ತಕ್ಷಣ ರಿಲೀಸ್ ಮಾಡುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಇ) ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 31.7.2003ರ 37ನೇ ಪಟ್ಟಿಯ 71 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪೈಕಿ 64 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ-1)

ಅಧ್ಯಕ್ಷರು : ಮಂಡಿಸಲಾಯಿತು.

2. ಚುನಾವಣಾ ಪ್ರಸ್ತಾಪ

ವಿಷಯ : ವಿಧಾನ ಸಭೆಯ ಸದಸ್ಯರನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಸೆನೆಟ್‌ಗೆ ಸದಸ್ಯರುಗಳನ್ನು ನೇಮಿಸುವುದರ ಬಗ್ಗೆ ಪ್ರಸ್ತಾವನೆ ಮಂಡನೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 15ನೇ ಜುಲೈ 2003 ಕರ್ನಾಟಕ ವಿಧಾನ ಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಸೆನೆಟ್ ಚುನಾವಣೆಯ ಪ್ರಸ್ತಾಪವನ್ನು ಮಂಡಿಸಿದ್ದು ಚುನಾವಣೆಯ ಕಾರ್ಯಕ್ರಮದ ವೇಳಾಪಟ್ಟಿಯನ್ನು ಪ್ರಕಟಿಸಲಾಗುತ್ತಿದೆ. ಈ ಬಗ್ಗೆ ಕುರಿತು ವಿವಿಧ ಪಕ್ಷಗಳ ಸಚೇತಕರು ನೀಡಿರುವ ಒಡಂಬಡಿಕೆಯ ರಿತ್ಯ ಮಾನ್ಯ ವಿಧಾನಸಭೆಯ ಸದಸ್ಯರನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಸೆನೆಟ್‌ಗೆ ಮಾನ್ಯ ಸದಸ್ಯರುಗಳನ್ನು ನೇಮಿಸಲು ಮಾನ್ಯ ವಿಧಾನಸಭೆಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡಬೇಕೆಂದು ಕೋರುತ್ತೇನೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾವ

ವಿಷಯ : ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಕಾವೇರಿ ರಿವರ್ ಅಥಾರಿಟಿ ಮಾನಿಟರಿಂಗ್ ಕಮಿಟಿ ಮೀಟಿಂಗನ್ನು ಕರೆಯುತ್ತೇವೆಂದು ಹೇಳಿರುವುದರ ಬಗ್ಗೆ

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆಯನ್ನು ಕೇಳುವುದು ಇದೆ ಸ್ವಾಮಿ, ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ. ನಿನ್ನೆ ದಿವಸ ಕೇಂದ್ರ ಸರ್ಕಾರದವರು ಲೋಕಸಭೆಯಲ್ಲಿ ಕಾವೇರಿ ರಿವರ್ ಅಥಾರಿಟಿ ಮಾನಿಟರಿಂಗ್ ಕಮಿಟಿ ಮೀಟಿಂಗ್‌ನ್ನು ಕರೆಯುತ್ತೇವೆಂದು ಹೇಳಿರುತ್ತಾರೆ. ಮಾನ್ಯ ಚಂದ್ರೇಗೌಡರೆ, ತಾವು ತಮ್ಮ ಗಮನವನ್ನು ಈ ಕಡೆ ಸ್ವಲ್ಪ ಹರಿಸಬೇಕು. ನಿಮಗೆ ಗೊತ್ತಿರುವಂತೆ ಕಾವೇರಿಯಲ್ಲಿ ನಮ್ಮ ಕನ್ನಂಬಾಡಿ ಕಟ್ಟೆಯಲ್ಲಿರಬಹುದು. ಅಥವಾ ಕಬನಿಯಲ್ಲಿರಬಹುದು ಸಾಕಷ್ಟು ನೀರು ಇಲ್ಲದೇ ಇರತಕ್ಕಂಥದ್ದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ವಿಶೇಷವಾಗಿ ಮಂಡ್ಯ ರೈತರು ಈ ದೃಷ್ಟಿಯಲ್ಲಿ ಬಹಳ ದೊಡ್ಡ ಹೋರಾಟವನ್ನು ಮಾಡುತ್ತಿದ್ದಾರೆ. ನಮ್ಮ ರಾಜ್ಯ ಸಭಾ ಸದಸ್ಯರೊಬ್ಬರು ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಪ್ರತಿದಿವಸ ನಾವು ಕಾವೇರಿಯಿಂದ ತಮಿಳುನಾಡಿಗೆ ನೀರನ್ನು ಬಿಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಪ್ರತಿದಿವಸ 5000 ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ರೆಕಾರ್ಡ್ ಸ್ಟ್ರೇಟ್ ಆಗಿ ಇರಬೇಕಾಗುತ್ತದೆ. ರೈತರು ಈಗ ಬೆಳೆಗಳನ್ನು

ಹಾಕಬಹುದಾ? ಆ ನೀರನ್ನು ಕುಡಿಯುವುದಕ್ಕೆ ಉಪಯೋಗಿಸಿಕೊಳ್ಳುತ್ತೀರಾ ಅಥವಾ ಬೆಳೆಗಳಿಗೆ ಉಪಯೋಗಿಸಿಕೊಳ್ಳುತ್ತೀರಾ? ನೀರು ಬಂದಿದೆಯಾ, ನೀರಿನ ಪೊಸಿಷನ್ ಏನು? ಒಂದು ಕಡೆ ಅವರು ನೀರು ಬಿಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅವರು ತಕ್ಷಣದಲ್ಲಿ ಮಾನಿಟರಿಂಗ್ ಕಮಿಟಿ ಮಿಟಿಂಗ್‌ನ್ನು ಕರೆಯುತ್ತೇವೆಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರದ ನಿಲುವು ಏನು ಎನ್ನುವುದು ನಮಗೆ ಗೊತ್ತಾಗಬೇಕು. ಏಕೆಂದರೆ ಕನ್ನಂಬಾಡಿಕಟ್ಟೆಯಲ್ಲಿ ಎಷ್ಟು ನೀರು ಇದೆ. ನಮ್ಮ ರೈತರಿಗೆ ಈಗ ಬೆಳೆಗಳನ್ನು ಹಾಕಬಾರದೆಂದು ಸೂಚನೆಯನ್ನು ಕೊಟ್ಟಿದ್ದರು. ಅದಕ್ಕೆ ನಮ್ಮ ರೈತರು ಬದ್ಧರಾಗಿದ್ದಾರೆ ಪಾಪ, ಅನೇಕ ಕಡೆಗಳಲ್ಲಿ ಹಾಕಿರುವುದಿಲ್ಲ. ಆದರೂ ಸಹಿತ ಇವತ್ತು ಪರಿಸ್ಥಿತಿ ಬಹಳ ಗಂಭೀರವಾಗಿದೆ. ಆದರೆ ನಮ್ಮ ರಾಜ್ಯಸಭಾ ಸದಸ್ಯರಿಗೆ ಮಾಹಿತಿಯನ್ನು ಕೊಟ್ಟವರು ಯಾರು? ಅವರು ಮಂತ್ರಿಗಳು ಉತ್ತರವನ್ನು ಕೊಟ್ಟ ಹಾಗೆ ಕೊಟ್ಟಿದ್ದಾರೆ. ನಾವು ಪ್ರತಿದಿವಸ 5000 ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನೂ ಸಹ ಹೇಳಿದ್ದಾರೆ. ತಮಿಳುನಾಡಿನವರು ನಾವು ತಪ್ಪಿತಸ್ಥಸ್ಥಾನದಲ್ಲಿದ್ದೇವೆ ತೋರಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಂತಹ ಸನ್ನಿವೇಶದಲ್ಲಿ ಸರ್ಕಾರದ ನಿಲುವು ಏನು ಈ ವಿಚಾರದಲ್ಲಿ, ನೀರು ಎಷ್ಟು ಬಂದಿದೆ. ಸಂಕಷ್ಟದ ಪರಿಸ್ಥಿತಿಯಲ್ಲಿ ನಾವಿರುವಾಗ ಆ ಮೀಟಿಂಗ್‌ನ್ನು ಕರೆದಿರತಕ್ಕಂಥ ಉದ್ದೇಶ ಏನು? ಇದರ ಬಗ್ಗೆ ತಾವೊಂದು ಸರ್ವಪಕ್ಷ ಸಭೆಯನ್ನು ಕರೆದು, ಇಂತಹ ಎಲ್ಲಾ ಸಂದರ್ಭದಲ್ಲಿ ನೀವು ಕರೆದಿರುತ್ತೀರಿ. ನಮ್ಮ ಗಮನಕ್ಕೂ ಇಂತಹ ವಿಚಾರ ತರುವುದಕ್ಕೆ ಸಾಧ್ಯವೆ? ಇದರ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದಂಥ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಇದನ್ನು ಮಾನ್ಯ ನೀರಾವರಿ ಸಚಿವರ ಗಮನಕ್ಕೆ ತಂದು ಇದರ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಏನು ಎನ್ನುವುದರ ಬಗ್ಗೆ ನಾಳೆ ದಿವಸ ಉತ್ತರವನ್ನು ಕೊಡಿಸುತ್ತೇನೆ.

ಆ) ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ನಡೆದ ಅಪಘಾತದಲ್ಲಿ ಸುಮಾರು 7 ಜನ ಕಾರ್ಮಿಕರು ಸಾವಿಗೀಡಾಗಿದ್ದು ಏಳೆಂಟು ಜನ ಆಸ್ಪತ್ರೆಗೆ ದಾಖಲಾಗಿರುವ ಬಗ್ಗೆ

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಕಳೆದ ರಾತ್ರಿ ಮೂರುವರೆ ಗಂಟೆಗೆ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಬಹಳ ದೊಡ್ಡ ಅವಘಡ ನಡೆದು ಸುಮಾರು 7 ಜನ ಕಾರ್ಮಿಕರು ಸುಟ್ಟು ಕರಕಲಾಗಿ ಹೋಗಿದ್ದಾರೆ. ಸುಮಾರು 8–10 ಜನ ಕಾರ್ಮಿಕರು ಈಗಾಗಲೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಾ ಸಾವು ಬದುಕಿನ ನಡುವೆ ಹೋರಾಟವನ್ನು ಮಾಡುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇದೊಂದು ಬಹಳ ದೊಡ್ಡ ಅವಘಡ, ನಮ್ಮ ಕಾರ್ಮಿಕರ ವರ್ಗ ಅದೊಂದು ಅನ್ನದ ಕ್ಷೇತ್ರವೆಂದು ಭಾವನೆಮಾಡಿಕೊಂಡು ಅಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಅಲ್ಲಿರುವಂಥವರ ಅಜಾಗರೂಕತೆಯಿಂದಾಗಿ ಕಾರ್ಮಿಕರ ಪಾಲಿಗೆ ಸಾವಿನ ಮನೆಯಾಗಿದೆ. ದ್ರವರೂಪದಲ್ಲಿ ಬರತಕ್ಕಂಥ ಕಾದ ಕಬ್ಬಿಣವನ್ನು ಬೇರೊಂದು ಸ್ಥಾವರಕ್ಕೆ ಸುರಿಯುವ ಸಮಯದಲ್ಲಿ ಭದ್ರಾವತಿಯಲ್ಲಿ ಇದೊಂದು ಅವಘಡ ನಿರ್ಮಾಣವಾಗಿದೆ. ಬಹಳ ದೊಡ್ಡ ಸ್ಫೋಟ ಉಂಟಾಗಿ ಸುಮಾರು 7 ಜನ ಕಾರ್ಮಿಕರು ಸುಟ್ಟು ಕರಕಲಾಗಿದ್ದಾರೆ. ಸತ್ತು

ಬೂದಿಯಾಗಿರುವುದರಿಂದ ಅವರ ಶವ ಕೂಡ ತೆಗೆಯಲಿಕ್ಕೆ ಬರುವುದಿಲ್ಲ ಎನ್ನತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವಂಥ ಸುದ್ದಿ ಬಂದಿದೆ. ಇದಕ್ಕೆ ಕಾರಣವೇನು? ನಮ್ಮ ಲೇಬರ್‌ವಿಂಗ್ ಇದೆ. ಕಾರ್ಮಿಕ ಇಲಾಖೆ ಮತ್ತು ಇಂಡಸ್ಟ್ರಿ ಡಿಪಾರ್ಟ್‌ಮೆಂಟ್ ಇದೆ. ಅವಘಡ ಆಗತಕ್ಕಂಥಹ ಇಂತಹ ಆಯಕಟ್ಟಿನ ಸ್ಥಳದಲ್ಲಿ ಮುಂಜಾಗ್ರತೆಯ ಕ್ರಮವನ್ನು ಏನು ಅವರು ಅನುಸರಿಸಿದ್ದರು? ಇಂತಹ ಒಂದು ಪರಿಸ್ಥಿತಿಯಲ್ಲಿ ಆ ಕಾರ್ಮಿಕರು ಬದುಕು ಸಾವಿನ ನಡುವೆ ಹೋರಾಟವನ್ನು ಮಾಡಿಕೊಂಡು ಕೆಲಸವನ್ನು ಮಾಡುತ್ತಿರುತ್ತಾರೆ. ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಇದಕ್ಕೆ ಕೈಗೊಳ್ಳಬೇಕಾಗುತ್ತದೆ. ಯಾರು ಈ ಅವಘಡಕ್ಕೆ ಕಾರಣರಾಗಿದ್ದಾರೆ ಎನ್ನುವುದರ ಬಗ್ಗೆ ವಿಚಾರಣೆಯಾಗಬೇಕಾಗುತ್ತದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸತ್ತು ಹೋಗಿರತಕ್ಕಂಥ ಮತ್ತು ಗಾಯಗೊಂಡಿರತಕ್ಕಂಥ ಕಾರ್ಮಿಕರಿಗೆ ಸೂಕ್ತವಾಗಿರತಕ್ಕಂಥ ಪರಿಹಾರನ್ನು ದೊಡ್ಡ ಮೊತ್ತದಲ್ಲಿ ಕೊಡಿಸಿಕೊಡಬೇಕು ಎನ್ನುವುದನ್ನು ನಾನು ನಿವೇದನೆ ಮಾಡಿಕೊಳ್ಳುತ್ತೇನೆ. ಯಾರು ಗಾಯಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ. ಆ ಕಾರ್ಮಿಕ ವರ್ಗಕ್ಕೆ ಸರಿಯಾದಂಥ ಚಿಕಿತ್ಸೆ, ಯಾವುದೇ ಆಸ್ಪತ್ರೆಯಾಗಿರಬಹುದು. ಅವರನ್ನು ಬದುಕಿಸುವಂತಹ ಪ್ರಯತ್ನ ಇವತ್ತು ಆಗಬೇಕು. ಸಾವಿರಾರು ಜನ ಕಾರ್ಮಿಕರು ಇವತ್ತು ಭದ್ರಾವತಿಯಲ್ಲಿ ಕ್ಷೋಭೆಗೊಳಗಾಗಿದ್ದಾರೆ. ಒಂದು ಕಳವಳಕ್ಕೆ ಈಡಾಗಿದ್ದಾರೆ. ದಯಮಾಡಿ ಇದರ ಬಗ್ಗೆ ಸರ್ಕಾರ ಗಮನವನ್ನು ಹರಿಸಬೇಕು. ಸರ್ಕಾರದ ಒಂದು ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತಿದ್ದೇನೆ. ಸಾವಿರಾರು ಜನ ನಮ್ಮ ಕಾರ್ಮಿಕ ವರ್ಗ ಭದ್ರಾವತಿಯಲ್ಲಿ ದುಡಿಯುತ್ತಿದ್ದಾರೆ ಅವರಿಗೆ ಸಾಂತ್ವನ ಹೇಳುವ ಕೆಲಸವನ್ನು ಈ ಸರ್ಕಾರ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಸ್ವಾಮ್ಯತ್ವದಲ್ಲಿರುವ ವಿಶ್ವೇಶ್ವರ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯಲ್ಲಿ ಇವತ್ತು ಬೆಳಗಿನ ಜಾವ ಅಂದಾಜು 1 ಗಂಟೆ 55 ನಿಮಿಷಕ್ಕೆ ಕಬ್ಬಿಣ ಮತ್ತು ಉಕ್ಕು ತಯಾರಿಸುವ ಈ ಕಾರ್ಖಾನೆಯಲ್ಲಿ ದುರಂತವಾಯಿತು. ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿದ ಹಾಗೆ 7 ಜನರು ಸತ್ತಿದ್ದಾರೆ. ಎಸ್.ಆರ್. ಶ್ರೀಧರಮೂರ್ತಿ ಸೀನಿಯರ್ ಮ್ಯಾನೇಜರ್ ಶ್ರೀ ಚಂದ್ರಶೇಖರ, ಅಸಿಸ್ಟೆಂಟ್ ಮ್ಯಾನೇಜರ್, ಶ್ರೀ ಹುಚ್ಚಯ್ಯ, ಲಕ್ಷಣ, ಶಿವಶಂಕರ್ ವೆಂಕಟೇಶ್, ಅಂಥೋಣಿ ಇವರು ನೌಕರರು, ಇವರು ಸ್ಫೋಟದಲ್ಲಿ ಸತ್ತಿದ್ದಾರೆ. ಇನ್ನುಳಿದ 6 ಜನ ನೌಕರರು, ಪಿಂಟೋ, ಜಿ. ಮೂರ್ತಿ, ದತ್ತಾತ್ರೇಯ ಜಾಫರ್ ಮತ್ತು ವೆಂಕಟೇಶ್ ಇವರುಗಳಿಗೆ ಗಾಯಗಳಾಗಿವೆ. ಈಗಾಗಲೇ ಅವರಿಗೆ ಕೆಎಂಸಿ ಮಣಿಪಾಲ್ ಇಲ್ಲಿ ಚಿಕಿತ್ಸೆ ನಡೆಯುತ್ತಿದೆ. ಪೊಲೀಸ್ ಇನ್‌ವೆಸ್ಟಿಗೇಶನ್ ಕೂಡ ಪ್ರಾರಂಭ ಮಾಡಿದ್ದಾರೆ. ಕ್ರೈಂ ನಂ:42:2003 ನ್ಯೂಟೌನ್ ಪೊಲೀಸ್ ಸ್ಟೇಶನ್ ರಿಜಿಸ್ಟ್ರೇಶನ್ ಆಗಿ ಇನ್‌ವೆಸ್ಟಿಗೇಶನ್ ನಡೆಯುತ್ತಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಒಂದು ವೇಳೆ ನೆಗ್ಲಿಜೆನ್ಸಿಯಿಂದ ಸ್ಫೋಟವಾಗಿದ್ದರೆ ಖಂಡಿತವಾಗಿ ಕಾಯಿದೆ ಕಾನೂನಿನ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತಿದ್ದೇನೆ. ಅಷ್ಟೇ ಅಲ್ಲದೆ ನಮಗೆ ಬಂದಿರುವ ವರದಿ ಪ್ರಕಾರ ಕಾರ್ಮಿಕರು ಮತ್ತು ಮ್ಯಾನೇಜ್‌ಮೆಂಟ್ ಕೂಡಿಕೊಂಡು ಇವತ್ತು ಕೆಲಸವನ್ನು ಮಾಡುತ್ತಿದ್ದಾರೆ ಅಲ್ಲಿ ಪೀಸ್ ಮೈನ್‌ಟೇನ್ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಪರಿಹಾರದ ಬಗ್ಗೆ ಹೇಳಿದರು, ಪರಿಹಾರವನ್ನು

ಕಾಯಿದೆಯಂತೆ ಏನು ಕೊಡಬೇಕು ಕೇಂದ್ರ ಸರ್ಕಾರ ಅಥವಾ ನಾವು ಕೊಡಬೇಕೋ ಎನ್ನುವುದನ್ನು ವಿಚಾರ ಮಾಡಿ ಅದರ ಬಗ್ಗೆ ಸೂಕ್ತಕ್ರಮವನ್ನು ತೆಗೆದುಕೊಳ್ಳಲಾಗುವುದು.

Mr. Speaker : No Question of conversation. ಅವರು ಉತ್ತರವನ್ನು ಹೇಳಿರುವುದೇ ಹೆಚ್ಚು.

ಇ) ಕುಷ್ಟಗಿ ತಾಲ್ಲೂಕಿನ ಮುಕ್ತಾರಾಂಪುರ ಗ್ರಾಮದ ಒಬ್ಬ ಬಡ ರೈತನ ಕುಟುಂಬದಲ್ಲಿ 6 ಜನ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿರುವುದು.

ಶ್ರೀ ಹಸನಸಾಭ್ ನಭಿಸಾಬ್ ಧೋತಿಹಾಳ (ಕುಷ್ಟಗಿ) : ಮಾನ್ಯ ಅಧ್ಯಕ್ಷರೆ, ಕುಷ್ಟಗಿ ತಾಲ್ಲೂಕಿನ ಮುಕ್ತಾರಾಂಪುರ ಗ್ರಾಮದ ಒಬ್ಬ ಬಡ ರೈತನ ಕುಟುಂಬದಲ್ಲಿ 6 ಜನರು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

5.10 ಪಿಎಂ

ತಂದೆ ತಾಯಿ ಮತ್ತು ಒಬ್ಬ ಮಗ ಮಾತ್ರ ಆ ಕುಟುಂಬದಲ್ಲಿ ಉಳಿದಿದ್ದಾರೆ. ಆ 8 ಜನ ಮಕ್ಕಳ ಪೈಕಿ ಹಿರಿಯ ಮಗ ಬಸವರಾಜ್ ಎನ್ನುವವರು ಕುಟುಂಬದ ಬಡತನದ ತೊಂದರೆಯಿಂದ ವಿಷ ಸೇವಿಸಿದ್ದಾನೆ. 6 ಎಕರೆ ಜಮೀನು ಮಾತ್ರ ಅವರಿಗೆ ಇರುವುದು ಬಹಳ ಬಡತನದ ತೊಂದರೆಯಿಂದಾಗಿ 4 ಜನ ಸಹೋದರಿಯರು ಮತ್ತು ಮೂರು ಜನ ಸೋದರರು ಸೇರಿ ವಿಷವನ್ನು ಸೇವಿಸಿ ಇವತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಮ್ಮ ಮುಖಾಂತರ ಈ ಕ್ಷೇತ್ರದ ಶಾಸಕನಾಗಿ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆ ಕುಟುಂಬದಲ್ಲಿ ಈಗ ಉಳಿದಿರುವ ವೃದ್ಧ ತಂದೆ ತಾಯಿ ಒಬ್ಬ ಮಗ ಅಷ್ಟೇ ಉಳಿದಿದ್ದಾರೆ. ಅವರಿಗೆ ಬಹಳಷ್ಟು ಸಾಲ ಮತ್ತು ಬಡತನ ಇರುವ ಕಾರಣ ಹೀಗಾಗಿದೆ. ಇನ್ನು ಮುಂದೆ ಇಂತಹ ಅನಾಹುತ ಆಗದಂತೆ ಅವರಿಗೆ ಸರ್ಕಾರದಿಂದ ಏನಾದರೂ ಪರಿಹಾರವನ್ನು ಘೋಷಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಶಾಸಕರಾದ ಶ್ರೀ ಹಸನ್‌ಸಾಭ್ ನಭಿಸಾಬ್ ಧೋತಿಹಾಳ್‌ರವರು ಎತ್ತಿದ ಪ್ರಶ್ನೆಗೆ ಪೂರಕವಾಗಿ, ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ಎಂ. ರಾಮಪುರ ಎನ್ನುವ ಗ್ರಾಮದಲ್ಲಿ ಸುಮಾರು 7 ಜನ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಾಮೂಹಿಕ ಆತ್ಮಹತ್ಯೆಯ ವಿವರಣೆಯನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಅವರು ಬಡತನ ಮತ್ತು ಬರಗಾಲದಿಂದ ತತ್ತರಿಸಿ ಹೀಗೆ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾನ್ಯ ಶ್ರೀ ಎಸ್.ಎಸ್. ಪಾಟೀಲ್ ಮತ್ತು ನಾನು ಮೊನ್ನೆ ಬರಗಾಲದ ವಿಷಯವನ್ನು ಚರ್ಚೆ ಮಾಡುವ ಸಮಯದಲ್ಲಿ ಕನಿಷ್ಠ ಪಕ್ಷ ಆ ಜನರಿಗೆ ದುಡಿಮೆಗಾಗಿ ಉದ್ಯೋಗ ಕೊಡತಕ್ಕಂತಹ ಕೆಲಸ ಮಾಡಲಿಕ್ಕೆ ಸರ್ಕಾರ ಮುಂದೆ ಬರಬೇಕೆಂದು ಒತ್ತಾಯಿಸಿದ್ದೇವೆ. ಹಾಗೆ ನೊಂದ ಕುಟುಂಬದವರ ಆತ್ಮಕ್ಕೆ ಶಾಂತಿಯನ್ನು ನಾನು ಕೋರುತ್ತೇನೆ. ಈಗ ಉಳಿದಿರುವ ವೃದ್ಧ ತಂದೆ ತಾಯಿ ಮತ್ತು ಮಗ ಇವರಿಗೆ ಏನಾದರೂ ಪರಿಹಾರ ಕೊಡಲಿಕ್ಕೆ ಸರ್ಕಾರ ಮುಂದೆ ಬರುತ್ತದೆಯೇ ಎಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಅನೇಕ ಜಿಲ್ಲೆಗಳಲ್ಲಿ ಜನರಿಗೆ ನಿರಂತರವಾಗಿ ಉದ್ಯೋಗವನ್ನು ಕೊಡಲಿಕ್ಕೆ ಸರ್ಕಾರ ಮುಂದೆ ಬರಬೇಕು ಇಲ್ಲದಿದ್ದರೆ, ಇಂತಹ ಸಾಮೂಹಿಕ ಆತ್ಮಹತ್ಯೆಗಳು ಪ್ರತಿ ಗ್ರಾಮದಲ್ಲಿಯೂ ನಡೆಯುವಂತಹ ಸಂದರ್ಭ ಒದಗಿ ಬರುತ್ತದೆ. ಇದಕ್ಕೆ ಪರ್ಯಾಯವಾಗಿ ಸರ್ಕಾರ ಏನು ಆಲೋಚನೆ ಮಾಡುತ್ತದೆಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) : ಮಾನ್ಯ ಹಸನ್‌ಸಾಬ್ ನಬಿಸಾಬ್ ಧೋತಿಹಾಳ್ ಮತ್ತು ಕರಡಿ ಸಂಗಣ್ಣನವರು ಏನು ವಿಷಯವನ್ನು ಎತ್ತಿದ್ದಾರೆ ಆ ಸಂಬಂಧವಾಗಿ ಇವತ್ತು ಕುಷ್ಟಗಿ ತಾಲ್ಲೂಕಿನ ಎಂ. ರಾಮಪುರ ಗ್ರಾಮದಲ್ಲಿ ಬೆಳಗಿನ 4.30 ಗಂಟೆಗೆ ಸುಮಾರು 8 ಜನರ ಕುಟುಂಬದಲ್ಲಿ ಶ್ರೀಮತಿ ವೀರಬಸಮ್ಮ, 35 ವರ್ಷ ವಯಸ್ಸಿನ ಮಹಿಳೆ 20 ವರ್ಷಗಳಿಂದ ಅಸ್ತಮಾ ರೋಗದಿಂದ ಬಳಲುತ್ತಿದ್ದು, ಸಾಕಷ್ಟು ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದರೂ ಗುಣಮುಖರಾಗದೆ ಜೀವನದಲ್ಲಿ ಜಿಗುಪ್ಸೆ ಆಗಿ ಇಂದು ಬೆಳಿಗ್ಗೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡು ಮರಣ ಹೊಂದಿದರು. ಆ ಘಟನೆಯಿಂದಾಗಿ ಅವರು ಮೂವರು ತಮ್ಮಂದಿರು, ಮೂವರು ತಂಗಿಯರು ಸಹ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದು ನಿಜ. ಈಗಾಗಲೇ ಆ ಕುಟುಂಬದಲ್ಲಿ ಒಬ್ಬ ಮಗ, ತಂದೆ, ತಾಯಿ ಮಾತ್ರ ಉಳಿದಿದ್ದಾರೆ. ಇವರು ಚಿಕ್ಕ ವ್ಯಾಪಾರಿಗಳು ಅಂದರೆ ಸಣ್ಣ ಕಿರಾಣಿ ವ್ಯಾಪಾರವನ್ನು ಮಾಡುತ್ತಿದ್ದಾರೆ. ಇವರಿಗೆ ನಾಲ್ಕೂವರೆ ಎಕರೆ ಜಮೀನು ಇದೆಯೆಂದು ನಮಗೆ ಮಾಹಿತಿ ಬಂದಿದೆ. ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ಅಧಿಕಾರಿಗಳು ಹೋಗಿ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಸರ್ಕಾರ ಅವರಿಗೆ ಏನಾದರೂ ಸಹಾಯ ಮಾಡಲಿಕ್ಕೆ ಪ್ರಯತ್ನಿಸುತ್ತಿದೆ ಎಂದು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಸದನದ ಮೂಲಕ ನಾನು ಜನರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಎಲ್ಲಿಯೂ ಇಂತಹ ಅಹಿತಕರ ಘಟನೆಗಳೂ ನಡೆಯಬಾರದೆಂಬುದು ನಮ್ಮ ಉದ್ದೇಶವಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನೂ ಸಹ ಬರೆದು ಕಳುಹಿಸಿದ್ದೇನೆ. ಮಾನ್ಯ ಸಚಿವರು ಸತ್ಯಾಂಶವನ್ನು ಮುಚ್ಚಿ ಹಾಕಲಿಕ್ಕೆ ಪ್ರಯತ್ನಿಸುತ್ತಿದ್ದಾರೆ. ನಿಜವಾಗಿಯೂ ನೋವು ಅನಿಸುತ್ತಿದೆ. ಅವರು ಅನ್ನ ಇಲ್ಲದೆ ಉಪವಾಸವಿದ್ದು ಸತ್ತಿದ್ದಾರೆ. ಅದನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ಏನೋ ಜಡ್ ಹತ್ತಿ ಆ ಹೆಂಗಸು ಸತ್ತಿರಬಹುದು. ಇಡೀ ಕುಟುಂಬ ಸತ್ತಿದೆಯೆಂದು ಪ್ರಚಾರ ಮಾಡುತ್ತಿದ್ದಾರೆ. ಅಲ್ಲಿನ ಜನರಿಗೆ ಕೂಳು ಇಲ್ಲ. ಉಪವಾಸದಿಂದ ಸತ್ತಿದ್ದಾರೆ. ಬದುಕಲಾರದೆ ಸತ್ತಿದ್ದಾರೆ. ದಯವಿಟ್ಟು ಮುಚ್ಚಿ ಹಾಕುವಂತಹ ಪ್ರಯತ್ನ ಮಾಡಬೇಡಿ. ಇದು ವಿಚಾರಣೆಯಾಗಬೇಕು. ಇದು ನ್ಯಾಯಾಂಗ ತನಿಖೆ ಆಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ : ಯಾವುದೇ ಕಾರಣಕ್ಕೂ ಇದನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿಲ್ಲ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಎತ್ತುವ ಪ್ರಸ್ತಾಪಗಳಿಗೆ ಚರ್ಚೆ ಮಾಡಲು ಅವಕಾಶವಿಲ್ಲ. ನೋ ಡಿಸ್ಕಷನ್.

ವಿಷಯ : ಈ) ಹುಬ್ಬಳ್ಳಿಯಲ್ಲಿರುವ ಕೆರೆ ದಂಡೆಯ ಮೇಲಿದ್ದ 108 ಎಕರೆ ಜಮೀನನ್ನು ಖಾಸಗಿ ಹೋಟೆಲ್ ಮಾಲೀಕರು ಕೆ.ಐ.ಎ.ಡಿ.ಬಿ. ಮುಖಾಂತರ ಸ್ವಾಧೀನಪಡಿಸಿಕೊಂಡು ಅದನ್ನು ಗಾಲ್ಫ್ ಗ್ರೌಂಡ್ ಆಗಿ ಪರಿವರ್ತಿಸುತ್ತಿರುವ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಹುಬ್ಬಳ್ಳಿಯಲ್ಲಿ ಇರುವ ಉಣಕಲ್ ಕೆರೆ ಬಹಳ ಹಳೆಯದಾದ ಕೆರೆ, ಆದರೆ ಇತ್ತೀಚಿನ ವರ್ಷಗಳಲ್ಲಿ ಆ ಕೆರೆ ಬತ್ತಿ ಹೋಗುವಂತಹ ಪರಿಸ್ಥಿತಿಯಲ್ಲಿದೆ. ಒಂದು ಕಾಲದಲ್ಲಿ ಇಡೀ ಹುಬ್ಬಳ್ಳಿ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯನ್ನು

ಈ ಕೆರೆಯಿಂದ ಮಾಡಲಾಗುತ್ತಿತ್ತು. ಈಗ ಸುತ್ತಮುತ್ತ ಬಡಾವಣೆಗಳು ಬಂದಿವೆ. ಕ್ಯಾಚ್‌ಮೆಂಟ್ ಏರಿಯಾ ಎಲ್ಲಾ ಮಾಯ ಆಗುತ್ತಿದೆ. ಇವತ್ತು ನೀರು ಬರಲಾರದ ಸ್ಥಿತಿ ಈ ಉಣಕಲ್ ಕೆರೆಗೆ ಇದೆ. ಇದರ ಜೊತೆಗೆ ಅಲ್ಲಿ ಉಣಕಲ್ ಕೆರೆಯ ದಂಡೆಯ ಮೇಲಿದ್ದಂತಹ ಖಾಸಗಿ ಹೋಟೆಲ್ ಮಾಲೀಕರು 108 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ ಮುಖಾಂತರ ಸ್ವಾಧೀನ ಪಡಿಸಿಕೊಂಡು ಅದನ್ನು ಗಾಲ್ಫ್ ಗ್ರೌಂಡ್ ಮಾಡುವ ಸಲುವಾಗಿ ಅಕ್ವಿಜಿಶನ್ ಪ್ರೊಸೀಡಿಂಗ್ಸ್ ಆಗುತ್ತಿದೆ. ಈ ರೀತಿ ಗಾಲ್ಫ್ ಗ್ರೌಂಡ್‌ಗೆ ಅಕ್ವಿಜಿಷನ್ ಮಾಡಿ ಅವರಿಗೆ ಕೊಟ್ಟರೆ ಬಹುಶಃ ಆ ಕ್ಯಾಚ್‌ಮೆಂಟ್‌ಏರಿಯಾ ಪೂರ್ತಿ ಮುಳುಗಿ ಹೋಗಿ ನಾಳೆ ಪೂರ್ಣವಾಗಿ ಈ ಹುಣಕಲ್ ಕೆರೆ ಮುಚ್ಚಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದೆ. ಎನ್ನುವಂತಹದ್ದು ಇದೆ. ಆ ಬಗ್ಗೆ ಒಂದು ಸರ್ವೆಗೆ ತಾವು ಆದೇಶ ಮಾಡಿದ್ದೀರಿ ಎಂದು ನನಗೆ ತಿಳಿದುಬಂದಿದೆ. ಆ ಸರ್ವೆ ಮಾಡಿದ್ದು ಏನಾಯಿತು? ಅದರ ಬಗ್ಗೆ ಎನ್‌ಕ್ರೋಚ್‌ಮೆಂಟ್ ಆಗಿರುವುದು ನಿಜವೇ ಹೇಗೆ? ಇದರ ಬಗ್ಗೆ ವಿವರಣೆ ಕೊಡಬೇಕು ಮತ್ತು ಈ ರೀತಿಯಾಗಿ ಆ ಉಣಕಲ್ ಕೆರೆಯ ಸಂರಕ್ಷಣೆ ಮಾಡುವಂತಹ ಸರ್ಕಾರ ಅದನ್ನು ಮುಚ್ಚಲಿಕ್ಕೆ ಅವಕಾಶ ಕೊಡದೆ ಕೆ.ಐ.ಎ.ಡಿ.ಬಿ ಯಿಂದ ನೀವು ಅಕ್ವಿಜಿಷನ್ ಮಾಡುತ್ತಿದ್ದರೆ ಆ ಪ್ರೊಸೀಡಿಂಗ್ಸ್ ಕೈಬಿಡಬೇಕು ಅಂತ ನಾನು ಒತ್ತಾಯಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ 1997ನೇ ಇಸವಿಯಲ್ಲಿ ಮೂಲತಃ 1994ನೇ ಇಸವಿಯಲ್ಲಿ ಇದರ ಅಕ್ವಿಜಿಷನ್ ಶುರುವಾಗಿದೆ. 108 ಎಕರೆ ಜಮೀನಿನಲ್ಲಿ ಗಾಲ್ಫ್ ಎಂದರೆ, it is recognised as a tourism project. ಅದನ್ನು ಮಾಡಬೇಕೆಂದು ಅಕ್ವಿಜಿಷನ್ ಆಗಿ ಲ್ಯಾಂಡ್ ಅಕ್ವೈರ್ ಆಗಿಹೋಗಿದೆ. ಅದರಲ್ಲಿ 5 ಜನ ಹೈಕೋರ್ಟ್‌ಗೆ ಹೋಗಿದ್ದರು. ಹೈಕೋರ್ಟ್‌ನಲ್ಲಿ 5 ಜನರ ರಿಟ್ ಡಿಸ್‌ಮಿಸ್ ಆಗಿದೆ. 3 ಜನ ರಿಟ್ ಅಪೀಲ್ ಹೋಗಿದ್ದಾರೆ ಅದು ಪೆಂಡಿಂಗ್ ಇದೆ. ನನಗೆ ಬಂದ ಮಾಹಿತಿಯ ಪ್ರಕಾರ ಕಳೆದ 30–40 ವರ್ಷಗಳಲ್ಲಿ ಅಲ್ಲಿ ಯಾವ ಲ್ಯಾಂಡ್, ಟ್ಯಾಂಕ್ ಬೆಡ್ ಲ್ಯಾಂಡ್ ಎನ್‌ಕ್ರೋಚ್ ಆಗಿರುವುದು ಇರುವುದಿಲ್ಲ. ನನಗೆ ಬಂದಿರುವ ಮಾಹಿತಿಯ ಪ್ರಕಾರ ಅಲ್ಲಿ ಗಾಲ್ಫ್ ಕ್ಲಬ್‌ನಿಂದ ಕ್ಯಾಚ್‌ಮೆಂಟ್ ಏರಿಯಾ ಮೇಲೆ ಏನೂ ಪರಿಣಾಮವಾಗುವುದಿಲ್ಲ. ಆದರೂ ಸಹ ಮಾನ್ಯ ವಿರೋಧಪಕ್ಷದ ನಾಯಕರು ವಿಚಾರವನ್ನು ಪ್ರಾಸ್ತಾಪಿಸಿರುವುದರಿಂದ ಪುನಃ ಈ ಬಗ್ಗೆ ವಿಚಾರಣೆ ಮಾಡಿ ಸೂಕ್ತ ಪ್ರಯತ್ನವನ್ನು ಮಾಡುತ್ತೇನೆ.

ಅಧ್ಯಕ್ಷರು : ಶೂನ್ಯ ವೇಳೆ ಮುಗಿಯಿತು. ಇದು 7ನೇ ಶೂನ್ಯವೇಳೆಯಾಗಿದೆ. ಇನ್ನೂ 25 ಶೂನ್ಯವೇಳೆಯಲ್ಲಿ ಚರ್ಚೆ ಮಾಡುವ ವಿಷಯಗಳಿವೆ. ಒಂದೇ ಸಾರಿ ಎಲ್ಲವನ್ನು ಶೂನ್ಯವೇಳೆಯಲ್ಲಿ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇವತ್ತು ಶೂನ್ಯವೇಳೆ ಮುಗಿಯಿತು. ನಮಗೆ ಯಾವಾಗ ಅವಕಾಶ ಕೊಡುತ್ತೀರಿ ಎಂಬುದನ್ನು ತಿಳಿಸಿ.

ಅಧ್ಯಕ್ಷರು : ನಾಳೆ ನಿಮಗೆ ಆದ್ಯತೆ ನೀಡುತ್ತೇನೆ. ಬೇರೆಯದು ತೆಗೆದುಕೊಳ್ಳುವುದಿಲ್ಲ. ಕೃಷ್ಣಮೂರ್ತಿಯವರೇ ನಾನು ಎದ್ದ ಮೇಲೆ ತಾವು ಕೂಡಬೇಕು. ದಯವಿಟ್ಟು ಕುಳಿತುಕೊಳ್ಳಿ. ಇವತ್ತು ಶೂನ್ಯ ವೇಳೆ ಮುಗಿಯಿತು. ಒಂದೇ ದಿವಸ 20–30 ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ವಿಷಯಗಳನ್ನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ನಾಳೆ ನಿಮಗೆ ಪ್ರಿಯಾರಿಟಿ ಎಂದು ಹೇಳಿದೆನಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಕೃಷ್ಣಮೂರ್ತಿಯವರು ಎತ್ತಿರುವುದು ಶೂನ್ಯವೇಳೆ ಪ್ರಶ್ನೆ ಅಲ್ಲ. ಅವರು ಈವೊಂದು ವಿಚಾರದಲ್ಲಿ ಒಬ್ಬ ಶಾಸಕರಿಗೆ ನೋಟೀಸ್ ಕೊಟ್ಟು ಆ ವಿಚಾರದ ಬಗ್ಗೆ ಪ್ರಸ್ತಾಪವಾಗಬೇಕೆಂದು ಹೇಳಿದ್ದಾರೆ. ತಾವು ನಮ್ಮ ಮಾತನ್ನು ಕೇಳಿ ಆ ಮೇಲೆ ತಮ್ಮ ತೀರ್ಪು ನೀಡಬೇಕು. ಅವರು ಹೇಳುತ್ತಿರುವುದೇನೆಂದರೆ ಹೊಸದಾಗಿ ಪ್ರಸ್ತಾಪ ಮಾಡುವುದೇನಿಲ್ಲ. ಇವತ್ತೇ ಸಮಯ ಕೊಡಬೇಕೆಂದು ಸಹ ಏನೂ ಇಲ್ಲ. ಕಾನೂನು ಪ್ರಕಾರ ಅವರು ನೋಟೀಸನ್ನು ಕಳುಹಿಸಿದ್ದಾರೆ. ಅದರ ಪ್ರಕಾರ ನೀವು ಒಂದು ಸಮಯವನ್ನು ನಾಳೆ ಅಥವಾ ನಾಡಿದ್ದು ನಿಗದಿ ಮಾಡಿ.

ಅಧ್ಯಕ್ಷರು : ನೋಡೋಣ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಪಂಚಾಯ ಸಚಿವರು) : ಮಾನ್ಯ ಸಿಂಧ್ಯಾರವರು ಹೇಳಿದ್ದು ಸರಿ. ಅವರು ಕೇಳಬೇಕಾದರೆ ಮುಖ ಕೆಂಪು ಮಾಡಿಕೊಂಡು ಕೇಳುತ್ತಾರೆ. ಕೇಳುವುದನ್ನು ನಗುಮುಖದಿಂದ ಕೇಳಬೇಕು.

ಅಧ್ಯಕ್ಷರು : ಸಂಬಂಧಪಟ್ಟ ಶಾಸಕರು ನನ್ನ ಚೇಂಬರ್‌ಗೆ ಬಂದಿದ್ದರು. ಅಂದು ಅವರನ್ನು ಕೇಳಲಿಕ್ಕೆ ಆಗಲಿಲ್ಲ. ಇನ್ನೊಂದು ದಿವಸ ಕೇಳಿ ತಮಗೆ ಉತ್ತರ ಕೊಡಿಸಲು ಅವಕಾಶ ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಒಂದು ದಿವಸವನ್ನು ನಿಗದಿ ಮಾಡಿ.

ಅಧ್ಯಕ್ಷರು : ಸೋಮವಾರ ಅಥವಾ ಮಂಗಳವಾರ ಅವಕಾಶ ನೀಡುತ್ತೇನೆ ಇವತ್ತು ಸಾಧ್ಯವಿಲ್ಲ. ಸೋಮವಾರ ಅಥವಾ ಮಂಗಳವಾರ ತೆಗೆದುಕೊಳ್ಳೋಣ. ಈಗ ಕೆಲವು ವಿಧೇಯಕಗಳನ್ನು ಮಂಡಿಸುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಗಮನ ಸೆಳೆಯುವ ಸೂಚನೆ ಇದೆ.

ಅಧ್ಯಕ್ಷರು : ಮಾನ್ಯ ಸಹಕಾರ ಮಂತ್ರಿಗಳು ನಾಳೆ ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ. ನಾಳೆಯ ಅಜೆಂಡಾದಲ್ಲಿ ಅದು ಇರುತ್ತದೆ. ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ಮಂತ್ರಿಗಳು ಹಾಗೆ ಹೇಳಿದ್ದಾರೆ.

4. ಸಂವಿಧಾನ ತಿದ್ದುಪಡಿ ಸ್ಥಿರೀಕರಣ ನಿರ್ಣಯ

"ಸಂಸತ್ತಿನ ಎರಡೂ ಸದನಗಳ ಮೂಲಕ ಅಂಗೀಕರಿಸಲಾದಂತೆ ಸಂವಿಧಾನ (ತೊಂಭತ್ತೈದನೇ ತಿದ್ದುಪಡಿ) ವಿಧೇಯಕ 2003ರಲ್ಲಿ ಮಾಡಲು ಉದ್ದೇಶಿಸಿರುವ ಭಾರತ ಸಂವಿಧಾನದ 368ನೇ ಅನುಚ್ಛೇದ 22ನೇ ಖಂಡದ ಪರಂತುಕದ (ಸಿ) ಖಂಡದ ವ್ಯಾಪ್ತಿಯೊಳಗೆ ಬರುವ ತಿದ್ದುಪಡಿಗಳನ್ನು ಈ ಸದನವು ಅಂಗೀಕರಿಸುತ್ತದೆ."

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸಂಸತ್ತಿನ ಎರಡೂ ಸದನಗಳ ಮೂಲಕ ಅಂಗೀಕರಿಸಲಾದಂತೆ ಸಂವಿಧಾನ (ತೊಂಭತ್ತೈದನೇ ತಿದ್ದುಪಡಿ) ವಿಧೇಯಕ, 2003ರಲ್ಲಿ ಮಾಡಲು ಉದ್ದೇಶಿಸಿರುವ, ಭಾರತ ಸಂವಿಧಾನದ 368ನೇ ಅನುಚ್ಛೇದ (2)ನೇ ಖಂಡದ ಪರಂತುಕದ (ಸಿ) ಖಂಡದ ವ್ಯಾಪ್ತಿಯೊಳಗೆ ಬರುವ ತಿದ್ದುಪಡಿಗಳನ್ನು ಈ ಸದನವು ಅಂಗೀಕರಿಸಬೇಕೆಂದು ನಾನು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಅದರ ಬಗ್ಗೆ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ......

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ನಿನ್ನೆ ಸಾಯಂಕಾಲ ಇದನ್ನು ನಮಗೆ ಕಳುಹಿಸಿದ್ದಾರೆ. ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ನಡೆದ ಡಿಬೇಟ್‌ನ್ನು ನಿನ್ನೆ ಸಾಯಂಕಾಲ ಕಳುಹಿಸಿದ್ದು ನಾವು ಅದನ್ನು ಓದಿ ನಮ್ಮ ಅನಿಸಿಕೆಗಳನ್ನು ಹೇಳುವುದಕ್ಕೆ ಅವಕಾಶ ಬೇಕು. ಅಲ್ಲಿ ಮಾಡಿದ್ದಾರೆ ಎಂದು ನಾವು ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಒಪ್ಪಿಗೆ ಕೊಡಬೇಕಾದರೆ ಇದು ಏನೂಂತ ನಾವು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುವುದಕ್ಕಾದರೂ ನೀವು ಬಿಡಬೇಕಲ್ಲಾ?

ಅಧ್ಯಕ್ಷರು : ಈಗ ಅವರು ಹೇಳುತ್ತಾರೆ. ಮೊದಲು ಮಂತ್ರಿಗಳು ಹೇಳಲಿ. ಆಮೇಲೆ ಬೇಕಾದರೆ ಮುಂದಕ್ಕೆ ಹಾಕಬಹುದು.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೆ, ಅಲ್ಲ, ಅವರು ಕಳುಹಿಸಿದ್ದಾರೆ. ಆದರೆ ಇಂಗ್ಲೀಷಿನಲ್ಲಿರುವುದನ್ನು ಕಳುಹಿಸಿದ್ದಾರೆ. ಇದನ್ನು ಕನ್ನಡದಲ್ಲಿ ಭಾಷಾಂತರ ಮಾಡಿ ಕಳುಹಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಹೌದು, ಪಾರ್ಲಿಮೆಂಟಿಗೆ ಬರೆಯೋಣ. ಅವರಿಗೆ ಹೇಳಿ ಕಳಿಸಿಕೊಡಿ ಎಂದು ಹೇಳುತ್ತೇನೆ.

ಗೊಂದಲ

ಶ್ರೀ ಎಸ್.ಎಸ್. ಪಾಟೀಲ್ : ಕನ್ನಡದಲ್ಲಿ ಭಾಷಾಂತರ ಮಾಡಿ ಕಳುಹಿಸಿಕೊಡಿ.

ಅಧ್ಯಕ್ಷರು : ಪಾಟೀಲರೆ, ಇದೆಲ್ಲಾ ಹೆಚ್ಚುಕಡಿಮೆ 150 ಪುಟ ಇದೆ. ಇದನ್ನು ಭಾಷಾಂತರ ಮಾಡಿ ಮುದ್ರಣ ಮಾಡುವುದಕ್ಕೆ ಸಮಯ ತೆಗೆದುಕೊಳ್ಳುತ್ತದೆ. ಇದು ಕೂಡಲೇ ಆಗುವುದಿಲ್ಲ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಭಾಷಾಂತರ ಮಾಡಿಸಿ ಕೊಡಿ. ಇದಕ್ಕೆ ಭಾಷಾಂತರ ಇಲಾಖೆ ಇದೆ. ಅದು ಮಾಡುವುದನ್ನು ಬಿಟ್ಟು ಹೀಗೆ ಇಂಗ್ಲೀಷಿನಲ್ಲಿ ಕೊಟ್ಟರೆ ಹೇಗೆ?

ಗೊಂದಲ

ಅಧ್ಯಕ್ಷರು : ಪ್ರಿಂಟ್ ಮಾಡಿಸುವುದಿಲ್ಲ ಎಂದು ಅವರು ಹೇಳಿಲ್ಲ. ಸಮಯ ಇಲ್ಲ ಎಂದು ಹೇಳುತ್ತಿದ್ದಾರೆ. ಇದು 150 ಪುಟಗಳಷ್ಟು ವಿಷಯ ಇದೆ. ಭಾಷಾಂತರ ಮಾಡಕೂಡದು ಅಂತ ಏನಿಲ್ಲ. ಆದರೆ ಸಮಯ ಇಲ್ಲವೆಂದು ಹೇಳುತ್ತಿದ್ದಾರೆ......

Sri D.B. Chandre Gowda : Loksabha and Rajyasabha debates connot be translated. ಯಥಾವತ್ತಾಗಿ ಭಾಷಾಂತರ ಮಾಡುವುದಕ್ಕೆ ಆಗುವುದಿಲ್ಲ. We have to take the permission of the Loksabha.

ಶ್ರೀ ಎಸ್.ಎಸ್. ಪಾಟೀಲ್ : ಟ್ರಾನ್ಸಲೇಟ್ ಮಾಡಿ ಕೊಡಿ.

ಗೊಂದಲ

ಅಧ್ಯಕ್ಷರು : ಸಮಯಾವಕಾಶ ಇಲ್ಲವೆಂದು ಮಂತ್ರಿಗಳು ಹೇಳುತ್ತಿದ್ದಾರೆ. ನೀವೂ ಸ್ವಲ್ಪ ಕೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಇಲ್ಲಿ ನಡೆಯುವಂತಹ ಚರ್ಚೆಯಲ್ಲಿ ಇಂಗ್ಲಿಷ್ ಬಾರದಂಥವರು ಭಾಗವಹಿಸಬಾರದು ಎಂದು ಒಂದು ಆದೇಶವನ್ನು ಮಾಡಿಬಿಡಿ.

ಅಧ್ಯಕ್ಷರು : ಭಾಷಾಂತರ ಮಾಡುವುದಕ್ಕೆ ನಮಗೆ ಅವಕಾಶ ಇಲ್ಲವೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಭಾಷಾಂತರ ಮಾಡಿ ಕೊಟ್ಟರೆ ಏನೂ ಅನಾಹುತ ಆಗುವುದಿಲ್ಲ. ಬೇಕಾದರೆ ಇದನ್ನು ಸೋಮವಾರ ದಿವಸ ತೆಗೆದುಕೊಳ್ಳಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಎಸ್.ಎಸ್. ಪಾಟೀಲ್‌ರಿಗೆ ಎಷ್ಟು ಕನ್ನಡ ಪ್ರೇಮ ಇದೆಯೋ ಅದಕ್ಕಿಂತ ಒಂದು ಗುಲಗಂಜಿ ತೂಕವಾದರೂ ನನಗೆ ಜಾಸ್ತಿ ಇದೆ. ಆದರೆ ನೀವು ಏನು ಮಾಡುತ್ತೀರಿ ಎಂದರೆ ಯಾವುದನ್ನು ಕನ್ನಡದಲ್ಲಿ ಕೇಳಬೇಕು. ಯಾವುದನ್ನು ಬಿಡಬೇಕು ಎಂದು ಯೋಚನೆ ಮಾಡುವುದಿಲ್ಲ. ಎಲ್ಲವೂ ಕನ್ನಡದಲ್ಲೇ ಆಗಬೇಕು ಅಂತ ಹೇಳಿದರೆ ಪಾರ್ಲಿಮೆಂಟ್‌ನಲ್ಲಿ ನಡೆದಿರತಕ್ಕಂಥ ಡಿಬೇಟ್ಸ್‌ನ್ನೂ ಕನ್ನಡದಲ್ಲೇ ಮಾಡಿಕೊಡಿ ಎಂದರೆ ಅದು ಹೇಗೆ ಆಗುತ್ತದೆ.

ಗೊಂದಲ

ಶ್ರೀ ಎಸ್.ಎಸ್. ಪಾಟೀಲ್ : ಇಲ್ಲಿ ನೋಡಿ, ಒಂದು ಪ್ರಶ್ನೆಗೆ ಉತ್ತರ ಇಂಗ್ಲೀಷ್‌ನಲ್ಲಿ ಇದೆ.

ಗೊಂದಲ

ಅಧ್ಯಕ್ಷರು : ಅದು ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಯಲ್ಲೂ ಇರುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಇಲ್ಲ, ಇಂಗ್ಲೀಷ್‌ನಲ್ಲೇ ಇದೆ. ಹಾಗಿರುವಾಗ ಈ ಬಿಲ್‌ನ್ನು ತಂದರೆ ಅದು ಎಲ್ಲರಿಗೂ ಅರ್ಥವಾಗುವಂತಿರಬೇಕು. ಈಗ ಕಂಪ್ಯೂಟರ್ ವ್ಯವಸ್ಥೆ ಇದೆ. ಬೇಗನೆ ಭಾಷಾಂತರ ಮಾಡಿಸಬಹುದು. ನಮಗೆ ಕನ್ನಡದಲ್ಲಿ ಭಾಷಾಂತರ ಮಾಡಿಸಿಕೊಡಿ.

ಅಧ್ಯಕ್ಷರು : ಪಾಟೀಲರೇ, ಸ್ವಲ್ಪ ತಾಳಿ, ಕಂಪ್ಯೂಟರ್ ಬಂದಮೇಲೂ ಕೂಡ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಸ್ವಲ್ಪ ಸ್ಥೈರಣೆ ಇರಲಿ. ಕಂಪ್ಯೂಟರ್‌ನಲ್ಲಿ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಇದು ಕಂಪ್ಯೂಟರ್ ಯುಗ.

ಶ್ರೀ ಎಸ್.ಎಸ್. ಪಾಟೀಲ್ : ಹಾಗಲ್ಲ ಅಧ್ಯಕ್ಷರೇ, ಇದಕ್ಕೆ ಉತ್ತರ ಕೂಡ ಇಂಗ್ಲಿಷ್‌ನಲ್ಲೇ ಇದೆ. ಬೇಕಾದರೆ ನೋಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಯಾವುದೇ ಮಸೂದೆಯನ್ನು ಮಂಡಿಸಿದರೂ ಕೂಡ ಅದು ಸದನದ ಸದಸ್ಯರುಗಳಿಗೆ ಅರ್ಥವಾಗುವಂತಿರಬೇಕು. ಇಂಗ್ಲೀಷ್‌ನಲ್ಲಿ ಇದ್ದರೆ ಅರ್ಥವಾಗುವುದಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಅವರು ಹೇಳಿದ್ದು ಸರಿಯಿದೆ.

ಅಧ್ಯಕ್ಷರು : ಉತ್ತರಗಳನ್ನು ಕನ್ನಡಲ್ಲೇ ಅಚ್ಚುಹಾಕಿಸುವುದಕ್ಕೆ ನಾನು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಯಾವುದೋ ಸಂದರ್ಭದಲ್ಲಿ ಉತ್ತರ ಕೊಟ್ಟಿದ್ದನ್ನು ಈಗ ಇಲ್ಲಿ ತೋರಿಸಿದರೆ ಹೇಗೆ? ಏನಾದರೂ ಇದ್ದರೆ ನಿರ್ದಿಷ್ಟವಾಗಿ ಹೇಳಬೇಕು. ಮೊದಲು ತಮಗೆ ಬರೆಯಬೇಕು ಮತ್ತು ನಂತರ ತಾವು ಆದೇಶ ಕೊಡಬೇಕು.

ಅಧ್ಯಕ್ಷರು : ಪಾಟೀಲರೇ, ನೀವು ಬರೆದು ಕಳುಹಿಸಿ ನಾನು ಅವರಿಗೆ ಕಳುಹಿಸುತ್ತೇನೆ.

ಗೊಂದಲ

ಅಧ್ಯಕ್ಷರು : ಸರ್ಕಾರದವರು ಸಾಧ್ಯವಾದಷ್ಟು ಕನ್ನಡದಲ್ಲೇ ಉತ್ತರ ಕೊಡುತ್ತಿದ್ದಾರೆ. ಇದು ಕಂಪ್ಯೂಟರ್ ಯುಗ. ಅವರಿಗೆ ಸ್ವಲ್ಪ ಸಮಯ ಕೊಡಿ.

ಶ್ರೀ ಎಸ್.ಎಸ್. ಪಾಟೀಲ್ : ಇಲ್ಲದಿದ್ದರೆ ಈ ರಾಜ್ಯದಲ್ಲಿ ಕನ್ನಡ ಬರಲಿಕ್ಕೆ ಸಾಧ್ಯವೇ ಇಲ್ಲ. ತಾವು ಕೂಡ ಹೀಗೆ ಹೇಳಿಬಿಟ್ಟರೆ ಅವರು ಕನ್ನಡವನ್ನು ಎಂದಿಗೂ ಜಾರಿಗೆ ತರುವುದಿಲ್ಲ.

ಅಧ್ಯಕ್ಷರು : ನಾನೇನೂ ಕನ್ನಡ ಬೇಡ ಎಂದು ಹೇಳುತ್ತಿಲ್ಲ. ಅವರಿಗೆ ಸಮಯ ಕೊಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡುತ್ತೇವೆ ಎಂದು ಅವರೇ ಹೇಳಿದ್ದಾರೆ ಮತ್ತು ಯಾರು ನೌಕರರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಕೂಡ ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆಡಳಿತ ಭಾಷೆ, ವ್ಯಾವಹಾರಿಕ ಭಾಷೆ ಏನಿದೆ......

ಗೊಂದಲ

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಎಸ್.ಎಸ್. ಪಾಟೀಲ್ : ಅಂದರೆ ಭಾಷಾಂತರ ಮಾಡುವುದು ಬೇಡ ಎಂದು ಆ ನಿರ್ಣಯ ಆಗಿಬಿಟ್ಟಿದೆಯಾ?

ಅಧ್ಯಕ್ಷರು : ಸ್ವಾಮಿ, ಅವರು ಪರ್ಮಿಶನ್ ಇಲ್ಲವೆಂದು ಹೇಳುತ್ತಿದ್ದಾರೆ. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಆಗಿರುವುದನ್ನು ಟ್ರಾನ್ಸಲೇಟ್ ಮಾಡುವುದಕ್ಕೆ ಆಗುವುದಿಲ್ಲ. ಹಾಗೆ ಮಾಡುವುದಕ್ಕೆ ನಮಗೆ ಪರ್ಮಿಶನ್ ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ಮಾಡುವುದಕ್ಕೆ ತಾವು ಸರ್ಕಾರಕ್ಕೆ ಹೇಳಬಹುದು. ತಾವು ಒಂದು ಆದೇಶ ಮಾಡಬೇಕು.

ಅಧ್ಯಕ್ಷರು : ಆಯಿತು. ಇದರ ಬಗ್ಗೆ ನಾನು ನಾಳೆ ಹೇಳುತ್ತೇನೆ. ಸುಮ್ಮನೆ ಏಕೆ ಮಾತನಾಡುತ್ತೀರಿ? ಐದು–ಹತ್ತು ನಿಮಿಷದಲ್ಲಿ ಇದು ಆಗಿ ಹೋಗಿಬಿಡುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಏನು ಅಧ್ಯಕ್ಷರೆ, ತಾವೇ ಹೀಗೆ ಹೇಳಿದರೆ ಹೇಗೆ? ಈ ಮಂತ್ರಿಗಳಿಗೆ ಕನ್ನಡದ ಬಗ್ಗೆ ಅಭಿಮಾನ ಇಲ್ಲ. ಎಲ್ಲಾ ಇಂಗ್ಲೀಷಿನಲ್ಲೇ ಓದಿಬಿಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹೊಸದಾಗಿ ನಾನು ಪಾಟೀಲರಿಂದ ಕನ್ನಡ ಅಭಿಮಾನವನ್ನು ಹೇಳಿಸಿಕೊಳ್ಳುವುದು ಬೇಕಾಗಿಲ್ಲ. ನಾನು ಅವರಿಗಿಂತ ಒಂದು ಗುಲಗಂಜಿ ತೂಕ ಹೆಚ್ಚು ಕನ್ನಡದಲ್ಲಿ ಮಾತನಾಡಬಲ್ಲೆ ಎಂದು ಅವರಿಗೆ ಹೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ನೋಡಿ, ನಾನು ಇಂಗ್ಲೀಷ್ ಬೇಡ ಎಂದು ಹೇಳುವುದಿಲ್ಲ. ರೂಢಿ ಭಾಷೆ ಇಂಗ್ಲೀಷ್ ಏನಿದೆ ಅದು ಬೇಡ ಎಂದು ನಾನು ಹೇಳಿಲ್ಲ.......

ಗೊಂದಲ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಚಂದ್ರೇಗೌಡರ ಕನ್ನಡಾಭಿಮಾನವನ್ನು ಪ್ರಶ್ನೆ ಮಾಡುವ ಸ್ಥಿತಿಯಲ್ಲಿ ನಾವು ಯಾರೂ ಇಲ್ಲ. ಅದನ್ನು ನಾನು ಒಪ್ಪುತ್ತೇನೆ. ಆದರೆ ಅವರು ಹೇಳಿರತಕ್ಕಂಥ ಒಂದು ವಿಚಾರವನ್ನು ನಾವು ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಅದು ಏನೆಂದರೆ ಪಾರ್ಲಿಮೆಂಟ್‌ನಲ್ಲಿ ಆಗಿರತಕ್ಕಂಥ ಡಿಬೇಟ್ಸ್ ಏನಿದೆ. ಈಗ ನನಗೆ ಇಂಗ್ಲಿಷ್ ಬರುತ್ತದೆ. ಹಿಂದಿ ಅರ್ಥವಾಗುತ್ತದೆ. ಅದು ಬೇರೆ ವಿಚಾರ. ಆದರೆ ಇಲ್ಲಿ 224 ಜನ ಸದಸ್ಯರುಗಳಲ್ಲಿ ಎಷ್ಟು ಜನರಿಗೆ ಇಂಗ್ಲಿಷ್ ಅರ್ಥವಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕು. ಇನ್ನೊಂದು ಬಹಳ ಮಹತ್ತರವಾದಂಥ ವಿಷಯ ಎಂದರೆ,

ನನಗೆ ಈ ಡಿಬೇಟ್ಸ್‌ನ್ನು ಓದುವುದಕ್ಕೆ ಆಗಿಲ್ಲ. ಅನೇಕ ಗೌರವಾನ್ವಿತ ಅನುಭವಿ ಲೋಕಸಭಾ ಸದಸ್ಯರುಗಳು ಮಾಡಿರತಕ್ಕಂಥ ಭಾಷಣಗಳು ಇದರಲ್ಲಿ ಇವೆ. ಇದು ಸರ್ವೀಸ್ ಟ್ಯಾಕ್ಸ್‌ನ್ನು ಇಂಟ್ರಡ್ಯೂಸ್ ಮಾಡತಕ್ಕಂಥಾದ್ದು. ಈಗ ಏನಾಗುತ್ತದೆ ಎಂದರೆ ಡೀಲಿಮಿಟೇಶನ್ ವಿಚಾರದಲ್ಲಿ ನಾವು ಕಣ್ಣುಮುಚ್ಚಿಕೊಂಡು ಇಲ್ಲಿ "ಪಾಸ್" ಅಂತ ಹೇಳಿಬಿಟ್ಟು ಅವರು ಅಮೆಂಡ್‌ಮೆಂಟ್ ಮಾಡಿದ್ದು ಅಂತ ನಾವು ಮಾಡಿಬಿಟ್ಟೆವು. ಆದರೆ ಅದನ್ನು ಮಾಡಿದ ತಕ್ಷಣ ಎಷ್ಟು ಸಂಕಷ್ಟ ಸ್ಥಿತಿಗೆ ತಗುಲಿಹಾಕಿಕೊಂಡೆವು ಎಂಬುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಆದ್ದರಿಂದ ಕೊನೆಯಪಕ್ಷ ಕರ್ನಾಟಕದ ಒಂದು ವ್ಯೂ ಏನಿದೆ ಎಂದು ಅದು ಪತ್ರಿಕೆಗಳಲ್ಲಿ ಬರುತ್ತದೆ. ನಮ್ಮ ಪತ್ರಿಕೆಯವರು ಬಹಳ ಎಫಿಸಿಯೆಂಟ್ ಇದ್ದಾರೆ. ಇದು ಒಂದು ಆಲ್ ಇಂಡಿಯಾ ನ್ಯೂಸ್ ಆಗುತ್ತದೆ. ಅಲ್ಲಿ ಅಧಿಕಾರದಲ್ಲಿ ಕುಳಿತುಕೊಂಡಿರತಕ್ಕಂಥವರು ಇದರ ಬಗ್ಗೆ ವಿಚಾರವನ್ನಾದರೂ ಮಾಡುತ್ತಾರೆ. ಆದ್ದರಿಂದ ಇದಕ್ಕೆ ಕಾಂಪ್ಲಿಮೆಂಟರಿ ಆಗಿ ಡಿಬೇಟ್ ಆಗಬೇಕೆಂದು ಹೇಳಿದಾಗ ಅದು ಕನ್ನಡದಲ್ಲಿ ಆಗಬೇಕಾಗುತ್ತದೆ. ನೀವು ಆ ಕಶ್ಯಪ್ ಅಂತ ಪಾರ್ಲಿಮೆಂಟ್ ಕಾರ್ಯದರ್ಶಿಯವರು ಇದ್ದಾರಲ್ಲಾ. ಅವರೊಡನೆ ನೀವು ದೂರವಾಣಿ ಮೂಲಕ ಮಾತನಾಡಿ ಅವರ ಅನುಮತಿಯನ್ನು ತೆಗೆದುಕೊಂಡು ಮಾಡಿ. ಇದರಲ್ಲಿ ತಪ್ಪೇನಿದೆ? ಬೇಕಾದರೆ ಇದು ಒಂದೆರಡು ದಿವಸ ತಡವಾಗಿ ಬರಲಿ, ಬಿಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಸಂವಿಧಾನ ತಿದ್ದುಪಡಿಯಂತಹ ಮಹತ್ವದ ವಿಷಯದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅಂಗೀಕಾರ ಆಗಿರತಕ್ಕಂಥ ಮಸೂದೆಗಳು ಈ ದೇಶದ ಶೇಕಡಾ ಐವತ್ತಕ್ಕೂ ಹೆಚ್ಚು ರಾಜ್ಯಗಳು ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಲೋಕಸಭೆಯಲ್ಲಿ ಮಸೂದೆಗಳ ಮೇಲೆ ಆಗಿರತಕ್ಕಂಥ ಚರ್ಚೆ ಏನಿದೆ, ಅದನ್ನು ಲೋಕಸಭೆ ಮತ್ತು ರಾಜ್ಯಸಭೆಯ ಅನುಮತಿ ಇಲ್ಲದೆ, ಇದು ನನಗೆ ತಿಳಿದಿರುವ ಹಾಗೆ, ನಾನು ತಪ್ಪು ತಿಳಿದಿರಲೂ ಬಹುದು. ನಾವು ಅದನ್ನು ತರ್ಜುಮೆ ಮಾಡುವುದು ಕಷ್ಟಕರವಾದ ವಿಷಯ ಮತ್ತು ಇದಕ್ಕೆ ಅವರ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಸೂದೆ ಏನು ಎಂದು ವಿವರಣೆ ಕೊಡುವುದಕ್ಕೆ ಮುಂಚೆಯೇ ಈಗ ಇದ ಇಂಗ್ಲಿಷ್ ಭಾಷೆಯಲ್ಲಿ ಇದೆ. ಎಂದರೆ ಸಂವಿಧಾನ ಇಂಗ್ಲೀಷ್‌ನಲ್ಲೇ ಇದೆ. ಏನು ಮಾಡೋಣ? ಆದ್ದರಿಂದ ಇಲ್ಲಿ ನಾವು......

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಸಂವಿಧಾನದ್ದು ಕನ್ನಡ ಭಾಷಾಂತರ ಇದೆ.

ಗೊಂದಲ

ಶ್ರೀ ಬಿ. ಸೋಮಶೇಖರ್ : ನಮ್ಮಲ್ಲಿ ಕನ್ನಡದಲ್ಲಿ ಸಂವಿಧಾನದ ಪುಸ್ತಕ ಇಲ್ಲವೇನು?

ಅಧ್ಯಕ್ಷರು : ಮಾನ್ಯ ಸೋಮಶೇಖರ್, ಒಂದು ಕೆಲಸ ಮಾಡೋಣ. ಇದರ ಉದ್ದೇಶ ಏನು ಎಂದು ಮಂತ್ರಿಗಳು ಹೇಳಲಿ. ಆಮೇಲೆ ನೋಡಿಕೊಳ್ಳೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ಪಾಟೀಲರು ಮಾತನಾಡಿದರು. ಚಂದ್ರೇಗೌಡರು ಮಾತನಾಡಿದರು ಎಂದರೆ ಅದು ಕನ್ನಡದಲ್ಲಿ ಬರುತ್ತದೆ. ಬೇರೆ ಎಲ್ಲರೂ ಕನ್ನಡದಲ್ಲೇ ಮಾತನಾಡಿ ಎಂದು ಸಂಸತ್ತಿನಲ್ಲಿ ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಉದ್ದೇಶ ಏನು ಇದೆ ಎಂದು ಅವರು ಹೇಳಲಿ.

ಶ್ರೀ ಬಿ. ಸೋಮಶೇಖರ್ : ನೆರೆ ರಾಜ್ಯಗಳಾದ ತಮಿಳುನಾಡು, ಕೇರಳ ಮತ್ತು ಆಂಧ್ರ ಇರಬಹುದು. ಅಲ್ಲಿ ಏನು ವ್ಯವಸ್ಥೆ ಮಾಡುತ್ತಿದ್ದಾರೆ ಎಂದು ತರಿಸಿಕೊಳ್ಳಿ. ಏಕೆಂದರೆ ಈ ಬಿಲ್

ಬಂದಮೇಲೆ ಅರ್ಥವಾಡಿಕೊಳ್ಳಬೇಕಾಗುತ್ತದೆ. ಕೆಲವರು ಇದರಲ್ಲಿ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ. ಆವಾಗ ತಾವು ತಮ್ಮ ವಾದವನ್ನು ಮಂಡಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ : ಇದನ್ನೇ ವಿತ್ತಂಡವಾದ ಎನ್ನುವುದು.

ಶ್ರೀ ಬಿ. ಸೋಮಶೇಖರ್ : ಇದು ವಿತ್ತಂಡ ವಾದವೇನು? ಹಾಗಾದರೆ ನಾವು ಇದನ್ನು ಅರ್ಥಮಾಡಿಕೊಳ್ಳುವುದು ಬೇಡವೇನು?

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅವರಿಗೆ ಅರ್ಥವಾಗಬಹುದು. ನಮಗೆ ಅರ್ಥವಾಗುವುದು ಬೇಡವೆ?

ಅಧ್ಯಕ್ಷರು : ಅವರು ಹೇಳಿದರೆ ಅರ್ಥವಾಗುತ್ತದೆ. ಮಾನ್ಯ ಹೆಗಡೆಯವರೇ, ಅವರು ಮೊದಲು ವಿವರಣೆಯನ್ನು ಕೊಡಲಿ. Let him explain first, afterwards you van ask.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ ನಾನು ಏನು ಹೇಳುತ್ತೇನೆ ಅಂದರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸ್ಟ್ರಿಕ್ಟ್‌ಲಿ ಹೀಗೆ ಆಗಬೇಕೆಂದರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಸಂವಿಧಾನ ತಿದ್ದುಪಡಿ ಸಂಸತ್‌ನಲ್ಲಿ ಮಂಡನೆಯಾಗಿ ಮಂಜೂರಾಗಿರತಕ್ಕಂಥ ಶಾಸನಗಳನ್ನು ನೀವು ಕನ್ನಡದಲ್ಲಿ ತರ್ಜುಮೆ ಮಾಡಿ ಎಂದರೆ ಹೇಗೆ? ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಮಗೆ ತಿಳಿಯಬೇಕು. ನಾವು ನಮ್ಮ ಮಾತೃಭಾಷೆಯಲ್ಲಿ ಮಾಡಿದರೆ ನಮಗೆ ತಿಳಿಯುತ್ತದೆ ಎನ್ನುವ ದೃಷ್ಟಿ ಅಷ್ಟೇ ತಾನೇ? ಅದಕ್ಕೆ ನಾನು ತಮಗೆ ತಿಳಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದೆ. ಬೇಡಪ್ಪ ನೀವೇನು ಹೇಳುವುದು ಅಂದರೆ ತರ್ಜುಮೆ ಮಾಡುವುದಕ್ಕೆ ಸಾಧ್ಯವಿದ್ದರೆ ಸಂಸತ್ ಸಚಿವಾಲಯದಿಂದ ನಾವು ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ತಾವು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಸ್ವಾಮಿ, ಇದು ಸಂವಿಧಾನದ ತಿದ್ದುಪಡಿ. ಈ ಶಾಸನ ಸಭೆಯಲ್ಲಿ ಇದಕ್ಕೆ ತಿದ್ದುಪಡಿಯನ್ನು ತರುವ ಅಧಿಕಾರವೂ ನಮಗೆ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ ಎಷ್ಟು ಕನ್ನಡ ಅಭಿಮಾನ ಇದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಅವರಿಗೆ ಕನ್ನಡದ ಬಗ್ಗೆ ಅಭಿಮಾನ ಇಲ್ಲ ಎನ್ನುವುದು ತೀರ್ಮಾನವಾಗಲಿ ಹೇಳಿ.

ಅಧ್ಯಕ್ಷರು : ತಾವೂ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಆ ತೀರ್ಮಾನ ಕೊಡುವವರು ನೀವಲ್ಲ. ನನ್ನ ಜನ ತೀರ್ಮಾನ ಕೊಡುತ್ತಾರೆ. ನಾನು 60 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿದ್ದೇನೆ. ನನ್ನ ಜನ ತೀರ್ಮಾನ ಕೊಡುತ್ತಾರೆ.

ಅಧ್ಯಕ್ಷರು : ಮಾನ್ಯ ಚಂದ್ರೇಗೌಡರೇ ತಾವು ವಿವರಣೆ ಕೊಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ ಸಂವಿಧಾನದಲ್ಲಿ ಕೆಲವು....

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಮಂತ್ರಿಗಳೇಕೆ ಇಷ್ಟು ತಬ್ಬಿಬ್ಬಾಗುತ್ತಾರೆ?

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ತಬ್ಬಿಬ್ಬಾಗುವುದಿಲ್ಲ. ನಾನು ನಿಮಗಿಂತ ದೊಡ್ಡ ಗೌಡ. ನಾನೆಲ್ಲಿ ತಬ್ಬಿಬ್ಬಾಗುತ್ತೇನೆ? ನಾನು ತಬ್ಬಿಬ್ಬಾಗುವ ಪ್ರಶ್ನೆಯೇ ಇಲ್ಲ. ಪ್ರಶ್ನೆ ಇಷ್ಟೇ ಇದು. ರಾಜ್ಯಾಂಗದ

368ನೇ ವಿಧಿಯಲ್ಲಿ ಸಂವಿಧಾನದ ತಿದ್ದುಪಡಿ ಮಾಡುವುದಕ್ಕೆ ಸಂಸತ್‌ಗೆ ಇರತಕ್ಕಂಥ ಅಧಿಕಾರವನ್ನು ಬಳಕೆ ಮಾಡಿ. ಈ ತಿದ್ದುಪಡಿಯನ್ನು ತಂದಿದ್ದಾರೆ. ಏಕೆ ತಂದಿದ್ದಾರೆಂದರೆ ಸೇವಾ ಶುಲ್ಕ, ಸರ್ವೀಸ್ ಟ್ಯಾಕ್ಸ್, ಯಾವುದೇ ಒಂದು ತೆರಿಗೆಯನ್ನು ಹಾಕುವುದಕ್ಕೆ ರಾಜ್ಯ ಸರ್ಕಾರಕ್ಕಾಗಲೀ ಕೇಂದ್ರ ಸರ್ಕಾರಕ್ಕಾಗಲೀ ಸಂವಿಧಾನದಲ್ಲಿ ಅವಕಾಶ ಇರಬೇಕು. ಸಂವಿಧಾನಕ್ಕೆ ಅವಕಾಶ ಕೊಡತಕ್ಕಂಥಾದ್ದು ನಮಗೆ ಯೂನಿಯನ್ ಲಿಸ್ಟ್ ಮತ್ತು ಸ್ಟೇಟ್ ಲಿಸ್ಟ್ ಎಂದು ಎರಡು ಲಿಸ್ಟ್‌ಗಳು ಇವೆ. ಆ ಲಿಸ್ಟ್‌ನಲ್ಲಿ ಎನ್ಯುಮರೇಟ್ ಮಾಡಿದ್ದಾರೆ. ರಾಜ್ಯಗಳ ಅಧಿಕಾರ ವ್ಯಾಪಿ ಎಷ್ಟು? ಕೇಂದ್ರದ ಅಧಿಕಾರ ವ್ಯಾಪ್ತಿ ಎಷ್ಟು ಅಂತ. ಈ ವ್ಯಾಪ್ತಿಲ್ಲಿ ಇಲ್ಲದೇ ಇರತಕ್ಕಂಥ ಸಂದರ್ಭ ಬಂದರೆ ಏನು ಮಾಡಬೇಕು. ಈ ತಿದ್ದುಪಡಿ ಆಗಿರುವುದರಿಂದ ಏನಾಯಿತು. ಈ ಸೇವಾ ಶುಲ್ಕವನ್ನು ಹಾಕುವಾಗ ರಾಜ್ಯ ಸರ್ಕಾರಕ್ಕೆ ಅಧಿಕಾರ ಇಲ್ಲದೇ ಇರುವುಬರಿಂದ ಕೇಂದ್ರ ಸರ್ಕಾರದ ಎಂಟ್ರಿಲಿಸ್ಟ್ 1 ಮತ್ತು 2ರಲ್ಲಿ ಇಲ್ಲದೇ ಇರುವುದರಿಂದ ಯೂನಿಯನ್ ಲಿಸ್ಟ್‌ನ 98ರಲ್ಲಿ ಸಂಸತ್‌ಗೆ ಅಧಿಕಾರ ಇದೆ. ಆ ಅಧಿಕಾರವನ್ನು ಬಳಕೆ ಮಾಡಿಕೊಂಡು ಅವರು Any other matter not enumerated in the List-2. List-3 including any tax not mentioned in either of these lists. ಅಂದರೆ ಯೂನಿಯನ್ ಲಿಸ್ಟ್‌ನಲ್ಲಿ ಇಲ್ಲದೇ ಇರುವುದು. ಸ್ಟೇಟ್ ಲಿಸ್ಟ್‌ನಲ್ಲೂ ಇಲ್ಲದೇ ಇರುವುದು ಎಂಟ್ರಿಲಿಸ್ಟ್ 1 ಮತ್ತು 2ರಲ್ಲಿ ಇಲ್ಲದೇ ಇರತಕ್ಕಂಥಾದ್ದನ್ನು ಶಾಸನ ತರಬೇಕಾದಂತಹ ಪ್ರಸಂಗ ಬಂದಾಗ ರಾಜ್ಯಾಂಗದ 368ನೇ ವಿಧಿಯಲ್ಲಿ ತಿದ್ದುಪಡಿ ಮಾಡುತ್ತಾರೆ. ಹಾಗೆ ತಿದ್ದುಪಡಿ ಮಾಡುವ ಅಗತ್ಯವೇನು? ಇದುವರೆಗೂ ಸೇವಾ ಶುಲ್ಕವನ್ನು ಕೇಂದ್ರ ಸರ್ಕಾರದವರು ಹಾಕಿ ವಸೂಲಿ ಮಾಡುತ್ತಿದ್ದರು. ಸೇವಾ ಶುಲ್ಕ ಅಂದರೆ ನಾನು ತಮಗೆ ಒಂದೆರಡು ಉದಾಹರಣೆಯನ್ನು ಕೊಡುತ್ತೇನೆ. ಈಗ ಟೆಲಿಫೋನ್‌ನಲ್ಲಿ ಬರತಕ್ಕಂಥ ಆದಾಯ ಅಥವಾ ನಾವು ಇನ್‌ಶೂರೆನ್ಸ್ ಮಾಡತಕ್ಕಂಥ ಸಂದರ್ಭದಲ್ಲಿ-ಬರತಕ್ಕಂಥ ಆದಾಯ, ಈ ಆದಾಯ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಬಂಡವಾಳಕ್ಕೆ ಹೋಗುತ್ತವೆ. ಅವರ ಖಜಾನೆಗೆ ಹೋಗುತ್ತದೆ. ನಮಗೆ ಅದರಲ್ಲಿ ಪಾಲು ಬರುವುದಿಲ್ಲ. ಪಾಲು ಕೇಳುವ ಅಧಿಕಾರ ನಮಗೆ ಇಲ್ಲ. ಏಕೆಂದರೆ ಆ ಅಧಿಕಾರ ಎಂಟ್ರಿ ಲಿಸ್ಟ್‌ನಲ್ಲಿ ಇಲ್ಲದೇ ಇರುವುದರಿಂದ ನಮಗೆ ಆ ಅಧಿಕಾರ ಬರುವುದಿಲ್ಲ. ಆ ಅಧಿಕಾರ ತೆಗೆದುಕೊಂಡು ವಸೂಲಿ ಮಾಡತಕ್ಕಂಥಾದ್ದು ಒಂದು. ಲೆವಿ ಮಾಡತಕ್ಕಂಥಾದ್ದು ಎರಡು, ಹಂಚಿಕೆ ಮಾಡತಕ್ಕಂಥ ಈ ಮೂರು ಅಧಿಕಾರವನ್ನು ಈ ಸಂವಿಧಾನ ಎಲ್ಲಾ ರಾಜ್ಯಗಳಿಗೆ ಕೊಡುತ್ತದೆ. ರಾಜ್ಯಗಳು ಕೇಂದ್ರ ಸರ್ಕಾರದಲ್ಲಿ ನಮ್ಮ ಪಾಲು ನಮಗೆ ಕೊಡಿ ಎಂದು ಕೇಳುವುದಕ್ಕೆ ಒಂದು ಅವಕಾಶವಾಗುತ್ತದೆ. ಇದುವರೆಗೂ ನಡೆದುಕೊಂಡು ಬಂದ ಪದ್ಧತಿಯಂತೆ ಸೇವಾ ಶುಲ್ಕದ ಮೇಲೆ ಹಾಕಿದಂತಹ ತೆರಿಗೆಯಿಂದ ಬರತಕ್ಕಂಥ ಹಣವನ್ನು ಕೇಳತಕ್ಕಂಥ ಅಧಿಕಾರ ರಾಜ್ಯ ಸರ್ಕಾರಕ್ಕೆ ಇರಲಿಲ್ಲ. ಈ ಸಂವಿಧಾನದ ತಿದ್ದುಪಡಿಯಿಂದ ಆ ಅಧಿಕಾರ ರಾಜ್ಯ ಸರ್ಕಾರಗಳಿಗೆ ಬರುತ್ತದೆ. ಆದ್ದರಿಂದ ಇದು ರಾಜ್ಯಕ್ಕೆ ಆಗತಕ್ಕಂಥ ಲಾಭ: ಆ ಲಾಭವನ್ನು ಗಣನೆಗೆ ತೆಗೆದುಕೊಂಡು ಈ ಮಸೂದೆಯನ್ನು ಮಂಜೂರು ಮಾಡಿಕೊಡಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ತಮಗೆ ಇದಕ್ಕಿಂತ ಹೆಚ್ಚು ವಿವರಣೆ ಬೇಡ ಎಂದು ಕಾಣುತ್ತದೆ. ಬೇಕಾದರೆ ತಾವು ಚರ್ಚೆ ಮಾಡಿ ಆದ ಮೇಲೆ ನಾನು ಹೆಚ್ಚಿನ ಮಾಹಿತಿಯನ್ನು ಕೊಡಬಹುದು. ಇದು ಬರುವುದರಿಂದ ರಾಜ್ಯದ ಆದಾಯ ಮೂಲಗಳು ಹೆಚ್ಚಾಗುತ್ತವೆ. ಕೇಂದ್ರ ಸರ್ಕಾರದಿಂದ ಡಿವಲ್ಯೂಶನ್ ಏನು ಆಗುತ್ತದೆ ಆ ಡಿವಲ್ಯೂಶನ್ ಇದುವರೆಗೂ ಇರಲಿಲ್ಲ. ಅದು ಈಗ ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಪ್ರಶ್ನೆ ಬಂದಿದ್ದು ಕೂಡ ಮೌಲ್ಯ ವರ್ಧಿತ ತೆರಿಗೆಯನ್ನು ಹಾಕಬೇಕೆಂದು ಕೇಂದ್ರ ಸರ್ಕಾರ ಯೋಚನೆ ಮಾಡಿದಂತಹ ಸಂದರ್ಭದಲ್ಲಿ ರಾಜ್ಯಗಳಿಗೆ ನಷ್ಟವಾಗುತ್ತದೆ. ನಮ್ಮ ರಾಜ್ಯಕ್ಕೆ ಸುಮರು 750 ಕೋಟಿ ರೂಪಾಯಿ ನಷ್ಟವಾಗುತ್ತದೆ. ಈ ನಷ್ಟ ತುಂಬಿಕೊಡುವುದು ಹೇಗೆ? ಒಂದೊಂದು ವಿಧವಾಗಿ ಇದನ್ನು ತುಂಬತಕ್ಕಂಥ ಪ್ರಯತ್ನಗಳಲ್ಲಿ ಇದೊಂದು ವಿಧ. ಕೇಂದ್ರ ಸರ್ಕಾರ ವಸೂಲಿ ಮಾಡತಕ್ಕಂಥ ಸೇವಾ ಶುಲ್ಕದಲ್ಲಿ ಒಂದು ಭಾಗವನ್ನು ರಾಜ್ಯ ಸರ್ಕಾರಕ್ಕೆ ಕೊಡತಕ್ಕಂಥಾದ್ದು ಅದಕ್ಕೆ ಪಾರ್ಲಿಮೆಂಟ್‌ನಲ್ಲಿ ಅಧಿಕಾರ ತೆಗೆದುಕೊಂಡಿದ್ದಾರೆ ಅಷ್ಟೆ. ಆ ಅಧಿಕಾರ ತೆಗೆದುಕೊಂಡಿರತಕ್ಕಂಥಾದ್ದನ್ನು ರ್ಯಾಟಿಫೈ ಮಾಡಬೇಕಾಗುತ್ತದೆ. ಏಕೆಂದರೆ ಎಲ್ಲಾ ರಾಜ್ಯಗಳಿಗೂ ಈ ಸಂವಿಧಾನ ತಿದ್ದುಪಡಿ ಅನ್ವಯವಾಗುವುದರಿಂದ ಶೇಕಡ 50ಕ್ಕಿಂತ ಹೆಚ್ಚು ರಾಜ್ಯಗಳು ಈ ಸಂವಿಧಾನದ ತಿದ್ದುಪಡಿಯನ್ನು ಪಾರ್ಲಿಮೆಂಟ್ ಏನು ಮಾಡಿದೆ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ರ್ಯಾಟಿಫಿಕೇಶನ್‌ಗೋಸ್ಕರ ರಾಜ್ಯಗಳಿಗೆ ಕಳುಹಿಸಿಕೊಡುತ್ತಾರೆ. ಅದಕ್ಕೆ ತಾವು ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ ನಾವು ಹೆಚ್ಚು ಚರ್ಚೆ ಮಾಡುವುದರಿಂದ ನಮಗೆ ಬಹಳ ದೊಡ್ಡ ಉಪಯೋಗವಾಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಆದರೆ ಇದು ನನಗೆ ಗೊತ್ತಿರುವ ಹಾಗೆ ಕಾಂಪ್ಲಿಮೆಂಟರ್ ಟು ವ್ಯಾಟ್ ಸಿಸ್ಟಂ ಆಫ್ ಟ್ಯಾಕ್ಸೇಷನ್ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಮಾಡಿರತಕ್ಕಂಥ ಕಾನೂನು ಏನು ಇದೆ ಇದು ಕಾಂಪ್ಲಿಮೆಂಟರಿ. ತಾವು ಬೇಕಾದರೆ ಮೊದಲನೇ ಪುಟದಲ್ಲಿ ಓದಿ. ಯಾರೋ ಒಬ್ಬ ಮಾನ್ಯ ಸದಸ್ಯರು ಭಾಷಣ ಮಾಡಿದ್ದಾರೆ. ಇದು ಕಾಂಪ್ಲಿಮೆಂಟರಿ. ಮತ್ತು ಇದು ಮೇ ತಿಂಗಳಲ್ಲಿ ಮಾಡಿರತಕ್ಕಂಥಾದ್ದು ಈಗ ವ್ಯಾಟ್ ಸಿಸ್ಟಂ ಇನ್ನೂ ಜಾರಿಗೆ ತಂದಿಲ್ಲ. ವ್ಯಾಟ್ ಸಿಸ್ಟಂ ಈಗ ಡೆಫರ್ ಮಾಡಿದ್ದಾರೆ. ಚುನಾವಣಾ ವರ್ಷ ಆಗಿರುವುದರಿಂದ ಬಹುಶಃ ಇನ್ನು ಎರಡು ವರ್ಷದಲ್ಲಿ ನಮ್ಮ ದೇಶದಲ್ಲಿ ವ್ಯಾಟ್ ಸಿಸ್ಟಂ ಬರುತ್ತದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಅದೇ ಬೇಸಿಕ್ ಆಗಿ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಇದು ಎಷ್ಟರ ಮಟ್ಟಿಗೆ ಕಾರ್ಯಗತವಾಗುತ್ತದೆ ಎನ್ನತಕ್ಕಂಥ ಒಂದು ಪ್ರಶ್ನೆ ಬರುತ್ತದೆ. ಇದು ಉಪಯೋಗವಾಗುತ್ತದೆಯೇ ಎನ್ನತಕ್ಕಂಥಾದ್ದನ್ನೂ ಸಹ ನಾವು ತಿಳಿದುಕೊಳ್ಳಬೇಕಾಗುತ್ತದೆ. ಇವತ್ತು ಕೇಂದ್ರ ಸರ್ಕಾರದ ಕಾನೂನು ಇಲಾಖೆ ಇದನ್ನು ಬಯಸಿದೆಯೋ ಎನ್ನುವುದನ್ನೂ ಸಹ ಕೇಳಬೇಕಾಗುತ್ತದೆ. ಏಕೆಂದರೆ ಯಥಾವತ್ತಾಗಿ ವ್ಯಾಟ್ ಸಿಸ್ಟಂ ಜುಲೈ ಒಂದನೆಯ ತಾರೀಖಿನಿಂದ ಜಾರಿಗೆ ಬರುತ್ತದೆ ಎನ್ನುವ ಒಂದು ದೃಷ್ಟಿಯಿಂದಾಗಿ ಮುಂಚಿತವಾಗಿ ಬೇಕಾಗಿರತಕ್ಕಂಥ ತಯಾರಿ ಮಾಡಿಕೊಳ್ಳುವುದಕ್ಕೆ ಸಂವಿಧಾನದಲ್ಲಿ ಬದಲಾವಣೆ ಮಾಡಿರತಕ್ಕಂಥ ಒಂದು ಅಂಶ ಇದು. ಮತ್ತೆ ಪುನಃ ಇದು ಯಾರ ಮೇಲೆ ತೆರಿಗೆ ಬೀಳುತ್ತದೆ? ಪುನಃ ತೆರಿಗೆ ಬೀಳತಕ್ಕಂಥಾದ್ದು ತೆರಿಗೆದಾರರ ಮೇಲೆ. ಈ ತೆರಿಗೆದಾರರಲ್ಲೂ ಸಹ ವಂಚನೆ ಮಾಡತಕ್ಕಂಥವರು ಇದ್ದಾರೆ. ಲಾಭ ಮಾಡಿಕೊಳ್ಳತಕ್ಕಂಥವರು ಇದ್ದಾರೆ. ಅದೆಲ್ಲಾ ಬೇರೆ ವಿಚಾರ ಆಯಿತು. ಆದರೆ ಪುನಃ ಜನಸಾಮಾನ್ಯರು ತೊಂದರೆ ಪಡುವಂತಾಗುತ್ತದೆ ಆದ್ದರಿಂದ ಅದು ಇಲ್ಲದೇ ಇರತಕ್ಕಂಥ ಸನ್ನಿವೇಶದಲ್ಲಿ ಇದರ ಅವಶ್ಯಕತೆ ಇದೆಯೇ ಎನ್ನತಕ್ಕಂಥದ್ದನ್ನು ತಾವು ಕೇಂದ್ರ ಸರ್ಕಾರದಿಂದ ತಿಳಿದುಕೊಂಡಿದ್ದೀರಾ? ಇದು ಒಂದನೆಯದು. ಎರಡನೆಯದಾಗಿ ಮಾನ್ಯ ಅಧ್ಯಕ್ಷರೆ ನಾನು ಮತ್ತೊಮ್ಮೆ ಮಾನ್ಯ ಚಂದ್ರೇಗೌಡರಲ್ಲಿ

ಕೇಳಿಕೊಳ್ಳತಕ್ಕಂಥಾದ್ದು ಅದರಲ್ಲೂ ವಿಶೇಷವಾಗಿ ಸಂವಿಧಾನದ ಬದಲಾವಣೆಗಳು. ಸಂವಿಧಾನದಲ್ಲಿ ಸಂಶೋಧನೆಯನ್ನು ಮಾಡತಕ್ಕಂಥ ಸನ್ನಿವೇಶದಲ್ಲಿ ಅದು ಯಥಾವತ್ತಾಗಿ ಕೇಂದ್ರ ಸರ್ಕಾರದವರು ಏನು ಕಳುಹಿಸುತ್ತಾರೆ ಅದನ್ನು ಕನ್ನಡದಲ್ಲಿ ತರ್ಜುಮೆ ಮಾಡಿಯೇ ಇಲ್ಲಿ ತರಬೇಕಾಗುತ್ತೆ. ತರ್ಜುಮೆ ಮಾಡುವುದಕ್ಕೆ ಅವಕಾಶ ಇಲ್ಲದೇ ಹೋದರೆ ತಾವು ದೂರವಾಣಿ ಮೂಲಕ ಮಾತನಾಡಿ ಅಥವಾ ಫ್ಯಾಕ್ಸ್ ಕಳುಹಿಸಿ ಅವರ ಒಪ್ಪಿಗೆಯನ್ನು ತೆಗೆದುಕೊಂಡು ತರ್ಜುಮೆ ಮಾಡಿ ನಮ್ಮ ಮುಂದೆ ಇಡಿ. ನಾವು ತಿಳಿದುಕೊಳ್ಳಬೇಕಾಗುತ್ತದೆ. ಏನಾಗುತ್ತದೆ ಮಾನ್ಯ ಅಧ್ಯಕ್ಷರೆ, ಸಾರ್ವಜನಿಕರು ಬಹಳ ಲಘುವಾಗಿ ಶಾಸಕರ ಬಗ್ಗೆ ಮಾತನಾಡುವಂತಹ ಸನ್ನಿವೇಶ ಬರುತ್ತದೆ. ಇವರಿಗೆ ವ್ಯಾಟ್ ಸಿಸ್ಟಂ ಅಂದರೆ ಏನೂ ಗೊತ್ತಿಲ್ಲ. ನಾವು ತಿಳಿದುಕೊಂಡಿದ್ದೇವೆ. ನಾನೇ ಒಂದು ಸಭೆಗೆ ಹೋಗಿದ್ದೆ. ಯಾವುದೋ ಒಂದು ಜಿಲ್ಲೆಯಲ್ಲಿ ವ್ಯಾಟ್ ಬಗ್ಗೆ ಮಾತನಾಡತಕ್ಕಂಥ ಸನ್ನಿವೇಶದಲ್ಲಿ ಅಲ್ಲಿ ಕೆಲವು ಸಂಘದವರು ವಾಣಿಜ್ಯೋದ್ಯಮಿ ಸಂಘದವರು ಶಾಸಕರ ಬಗ್ಗೆ ಬಹಳ ಲಘುವಾಗಿ ಮಾತನಾಡಿದರು. ಆಗ ನಾನು ವಿಷಯಗಳನ್ನು ತಿಳಿದುಕೊಂಡಿದ್ದೇನೆ ಎನ್ನುವ ದೃಷ್ಟಿಯಿಂದ ಕೌಂಟರ್ ಮಾಡಿದ ಮೇಲೆ ಅವರು ಸ್ವಲ್ಪ ನಮಗೂ ಗೊತ್ತಿದೆ ಎಂದು ಆದ ಮೇಲೆ ಸ್ವಲ್ಪ ಬಾಯಿ ಮುಚ್ಚಿಕೊಂಡರು. ಹೀಗೆ ಶಾಸಕರುಗಳ ಬಗ್ಗೆ ಲಘುವಾಗಿ ಮಾತನಾಡತಕ್ಕಂಥಾದ್ದು ಆಗಬಾರದು. ಆದ್ದರಿಂದ ಎಲ್ಲರೂ ಓದುವುದಕ್ಕೆ ಆಗದೇ ಇರಬಹುದು. ಓದಿದ್ದವರೆಲ್ಲರೂ ಇಲ್ಲಿ ಮಾತನಾಡುವುದಕ್ಕೆ ಆಗದೇ ಇರಬಹುದು. ಈಗ ಆಡಳಿತ ಪಕ್ಷದವರು ಮಾತನಾಡುವುದಿಲ್ಲವೆಂದು ಹೇಳಿ ಅವರು ದಡ್ಡರು ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಅವರಿಗೂ ಸಮಯದ ಅಭಾವದಿಂದಾಗಿ ಮತ್ತೊಂದು ಕಾರಣದಿಂದ ಅವರು ಮಾತನಾಡುವುದಕ್ಕೆ ಆಗದೇ ಇರಬಹುದು. ಆದ್ದರಿಂದ ತಾವು ದಯವಿಟ್ಟು ಇದನ್ನು ಕನ್ನಡೀಕರಣ ಮಾಡಬೇಕು ಆಗ ನಾವು ಸ್ವಲ್ಪ ಓದುತ್ತೇವೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದಂತೆ ಅದು ಬಹಳ ರೆಲೆವೆಂಟ್ ಆಗಿರತಕ್ಕಂಥಾದ್ದು. ತಾವು ನಿನ್ನೆ ರಾತ್ರಿ ಕಳುಹಿಸಿದ್ದೀರಿ. ನಾವೆಲ್ಲಾ ಓದುವುದಕ್ಕೆ ಆಗಿಲ್ಲ. ನಾವು ಓದುತ್ತೇವೆ. ಆದು ಆದ ಮೇಲೆ ಈ ಮಸೂದೆಯನ್ನು ಪಾಸ್ ಮಾಡಿ ಕೊಡೋಣ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ರಾಜ್ಯಾಂಗದ 95ನೇ ತಿದ್ದುಪಡಿ ಮಸೂದೆಯನ್ನು ಈ ಸದನದಲ್ಲಿ ತಂದಿರತಕ್ಕಂಥಾದ್ದು ರ್‍ಯಾಟಿಫಿಕೇಷನ್‌ಗೋಸ್ಕರ. ಇದು ಬೇರೆ ಬೇರೆ ರಾಜ್ಯಗಳಿಂದ ರ್‍ಯಾಟಿಫಿಕೇಷನ್ ಆಗಬೇಕು. ಆ ದೃಷ್ಟಿಯಿಂದ ತಂದಿರತಕ್ಕಂಥಾದ್ದು ಈಗ ಏನು ಮಾನ್ಯ ಸಚಿವರು ತಿಳಿಸಿದರು ಗೂಡ್ಸ್ ಅಂಡ್ ಸರ್ವೀಸಸ್ ಈ ಹಿಂದೆ ಗೂಡ್ಸ್‌ಗೆ ಮಾತ್ರ ಇದರ ವ್ಯಾಪ್ತಿಗೆ ಬರುತ್ತಿತ್ತು. ತೆರಿಗೆ ವ್ಯಾಪ್ತಿಯಲ್ಲಿ, ಈಗ ಸರ್ವೀಸಸ್ ಸಹ ತರುವುದರಿಂದ ಸುಮಾರು 48 ಪರ್ಸೆಂಟ್ ಕವರ್ ಆಗುತ್ತದೆ. ಆ ಸರ್ವೀಸ್ ಟ್ಯಾಕ್ಸ್ ಏನು ಬರುತ್ತದೆ ಅದರಲ್ಲಿ ಡೆವಲ್ಯೂಷನ್ ನಮ್ಮ ರಾಜ್ಯಕ್ಕೆ ಬರುವಂತಾದ್ದು ಏನು ಎನ್ನುವಂತಾದ್ದು. ಅದನ್ನು ತಾವು ಕ್ಲಾರಿಫೈ ಮಾಡಬೇಕಾಗುತ್ತದೆ. ಅದರ ಜೊತೆಯಲ್ಲಿಯೇ ರಾಜ್ಯ ಸರ್ಕಾರ ಆ ರೀತಿ ಸರ್ವೀಸ್ ಟ್ಯಾಕ್ಸನ್ನು ಹಾಕುವುದಕ್ಕೆ ನಮ್ಮ ವ್ಯಾಪ್ತಿಯಲ್ಲಿ ಬರುತ್ತದೆಯೇ, ನಮ್ಮ ತೆರಿಗೆ ವ್ಯಾಪ್ತಿಯಲ್ಲಿ ಅದು ಬರುತ್ತದೆಯೋ ಇಲ್ಲವೋ ಎನ್ನುವಂತಾದ್ದು, ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು, ಕೇಂದ್ರ ಸರ್ಕಾರದ ತೆರಿಗೆ ವ್ಯಾಪ್ತಿಯಲ್ಲಿ ಬರುವಂತಾದ್ದು ಮತ್ತು ಸರ್ವೀಸ್ ಟ್ಯಾಕ್ಸ್ ಹಾಕುವಂತಾದ್ದು, ಆದರೆ ರಾಜ್ಯ ಸರ್ಕಾರದ ದೃಷ್ಟಿಯಲ್ಲಿ ನಮಗೂ ಅದರ ಅಧಿಕಾರದ ಅವಕಾಶ ಇದೆಯೇ ಎನ್ನುವುದನ್ನು ತಾವು ಕ್ಲಾರಿಫೈ ಮಾಡಿಲ್ಲ ತಾವು ಈ ಸದನಕ್ಕೆ ವಿವರಣೆಯನ್ನು ಕೊಡುವಾಗ ನಮ್ಮ ರಾಜ್ಯದ ವ್ಯಾಪ್ತಿ

ಏನು ಇದರಲ್ಲಿ ಮತ್ತು ಇದರಿಂದ ನಮಗೆ ಬರತಕ್ಕಂಥ ಒಟ್ಟು ಡೆವಲ್ಯೂಶನ್ ಏನು ಎನ್ನುವಂತಾದ್ದು, ನಮಗೆ ಬರುವಂತಾದ್ದು ಈಗ ತಾವೇನು ಇವತ್ತು ಇದನ್ನು ತೆಗೆದುಕೊಂಡು ಬಂದಿದ್ದೀರಿ ಈ ತಿದ್ದುಪಡಿ ಇದರಲ್ಲಿ ನಮ್ಮ ಭಾಗ ಏನು ಎನ್ನುವುದು ಮುಂದಿನ ದೃಷ್ಟಿಯಲ್ಲಿ ಈಗ ಮಾನ್ಯ ಸದಸ್ಯರಾದ ಸಿಂಧ್ಯಾರವರು ಹೇಳಿದರು.

5.40 ಪಿಎಂ

ವ್ಯಾಟ್ ವ್ಯಾಪ್ತಿಯಲ್ಲಿ ಬರುವಂಥಾದ್ದು, ಈಗ ವ್ಯಾಟ್ ಮುಂದಕ್ಕೆ ಹಾಕಿರುವ ದೃಷ್ಟಿಯಿಂದ, ಹಾಲಿ ತೆರಿಗೆ ಪದ್ಧತಿಯಲ್ಲಿ ಇದನ್ನು ಅಳವಡಿಸುವಂಥಾದ್ದು ಆದಾಗ, ಯಾವರೀತಿ ನಮ್ಮ ರಾಜ್ಯಕ್ಕೆ ಇದು ಪೂರಕವಾಗಿ ಸಹಾಯವಾಗುತ್ತದೆ ಎನ್ನುವುದರ ಬಗ್ಗೆ ತಾವು ಮಾಹಿತಿ ಕೊಡಬೇಕು.

ಶ್ರೀ ಸೋಮಶೇಖರ್ (ಮಳವಳ್ಳಿ) : ಮಾನ್ಯ ಸಭಾಧ್ಯಕ್ಷರೆ, ಈ ಉದ್ದೇಶ ಏನೋ ಒಳ್ಳೆಯದು. ಏಕೆಂದರೆ, ರಾಜ್ಯಸರ್ಕಾರಗಳಿಗೆ ಇದುವರೆಗೆ ಸರ್ವೀಸ್ ಟ್ಯಾಕ್ಸನ ಭಾಗ ಏನು ಬರುತ್ತಾ ಇರಲಿಲ್ಲ. ಅದು ಬರತಕ್ಕಂಥ ರೀತಿಯಲ್ಲಿ, ಸಂವಿಧಾನದ ತಿದ್ದುಪಡಿಯನ್ನು ತಂದಿದ್ದಾರೆ. ತಾವು ಆರ್ಥಿಕ ಇಲಾಖೆಯಿಂದ ಮಾಹಿತಿಯನ್ನು ತೆಗೆದುಕೊಳ್ಳಬೇಕು. ಈ ಸರ್ವೀಸ್ ಟ್ಯಾಕ್ಸ್ ಹಂಡ್ರಡ್ ಪರ್ಸೆಂಟ್ ಗವರ್ನಮೆಂಟ್ ಆಫ್ ಇಂಡಿಯಾಕ್ಕೆ ಹೋಗುತ್ತಾ ಇತ್ತು. At present they are levying the service tax. ಅದರಲ್ಲಿ ಎಷ್ಟು ಸರ್ವೀಸ್ ಟ್ಯಾಕ್ಸ್ ಸೆಂಟ್ರಲ್ ಗವರ್ನಮೆಂಟ್‌ಗೆ ಹೋಗುತ್ತಾ ಇತ್ತು. ಎಷ್ಟು ಭಾಗ ನಮಗೆ ಬರುತ್ತಾ ಇದೆ ಎನ್ನುವುದನ್ನು ನಿಯಮಾವಳಿಗಳಲ್ಲಿ ಏನಾದರೂ ರಚನೆ ಮಾಡಿದ್ದಾರಾ? ಇದು ಎಷ್ಟು ಬರುತ್ತಾ ಇದೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ಇನ್ನೊಂದು ಈ ಸರ್ವೀಸ್ ಟ್ಯಾಕ್ಸ್ ಮಾಡುವಾಗ ಒಂದೇ ಒಂದು ಐಟಮ್ಸ್‌ನ್ನು ಎಷ್ಟು ಸಾರಿ ಕಲೆಕ್ಟ್ ಮಾಡಬಹುದು? ಅದನ್ನು ಒಂದೇ ಸಾರಿಯೇ ಅಥವಾ ಎರಡು ಮೂರುಸಾರಿ ಕಲೆಕ್ಟ್ ಮಾಡಬಹುದೇ, ಎಷ್ಟು ಹಂತಗಳಲ್ಲಿ ಎಂಬುದನ್ನೂ ಸ್ವಲ್ಪ ಹೇಳಬೇಕಾಗುತ್ತದೆ. ಅದಕ್ಕೆ ತಾವು ಮಾಹಿತಿಯನ್ನು ತರಿಸಿಕೊಳ್ಳಬೇಕು. ಇದನ್ನು ನಾವು ಯಾರೂ ಓದಿಲ್ಲ. ಪಾರ್ಲಿಮೆಂಟನಲ್ಲಿ ಏನೇನು ಮಾತನಾಡಿದ್ದಾರೆ ಎಂಬುದನ್ನು ಓದಿಲ್ಲ. ಇದನ್ನು ಓದಿ, ನಾವೂ ಸ್ವಲ್ಪ ಎಜುಕೇಟ್ ಆಗಬೇಕಾಗುತ್ತದೆ. ಇದನ್ನು ತಿಳಿದುಕೊಂಡರೆ ನಮಗೆ ಸ್ವಲ್ಪ ಸುಲಭವಾಗಬಹುದು. ಈ ಉದ್ದೇಶ ಏನೋ ಒಳ್ಳೆಯದು. ಆದರೆ ನಾಳೆಯೇ ಹೋಗಬೇಕೆಂಬ ಅರ್ಜೆಂಟ್ ಏನೂ ಇಲ್ಲ. ಒಂದೆರಡು ದಿನ ಟೈಮ್ ಕೊಟ್ಟು, ಮಾಹಿತಿಯನ್ನೂ ತರಿಸಿಕೊಂಡರೆ ಅನುಕೂಲವಾಗಬಹುದೆಂದು ನಾನು ಹೇಳುತ್ತೇನೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಬ್ರಹ್ಮಾವರ) : ಅಧ್ಯಕ್ಷರೆ, ನಾವು ಇದನ್ನು ನೋಡುವಾಗ ಅಲ್ಲಿ ಒಂದು ಸಮಸ್ಯೆ ಬರುತ್ತದೆ. ಸರ್ವೀಸ್ ಟ್ಯಾಕ್ಸ್ ಕನ್‌ಕರೆಂಟ್ ಲಿಸ್ಟ್‌ನಲ್ಲಿ ಬರಬೇಕೇ ಅಥವಾ ಸ್ಟೇಟ್ ಲಿಸ್ಟ್‌ನಲ್ಲಿ ಇರಬೇಕೇ? ಏಕೆಂದರೆ, ಕನ್‌ಕರೆಂಟ್ ಲಿಸ್ಟ್‌ನಲ್ಲಿ ಬಂದರೆ 50 ಪರ್ಸೆಂಟ್ ಮಾತ್ರ ಸ್ಟೇಟ್ ಷೇರ್ ಸಿಕ್ಕುತ್ತದೆ. ಇದು ಹಂಡ್ರಡ್ ಪರ್ಸೆಂಟ್ ಸಿಗಬೇಕು ಎನ್ನುವಂಥಾದ್ದು. ಈಗ ಕಂಪ್ಲೀಟ್ ಅದರ ಅಡ್ವಾಂಟೇಜ್ ಸ್ಟೇಟ್‌ಗೆ ಬೇಕೋ ಅಥವಾ ಫಿಫ್ಟಿ ಪರ್ಸೆಂಟ್ ಸಿಕ್ಕಿದರೆ ಸಾಕೇ ಎಂಬುದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ ಅದಕ್ಕೋಸ್ಕರ, ಸಂಪೂರ್ಣ ವಿಷಯಗಳನ್ನು ತಿಳಿದುಕೊಂಡು ತನ್ನಿ ನಾಳೆ ಸದನದಲ್ಲಿ ಏನು ತೀರ್ಮಾನವಾಗುತ್ತದೋ ಆಗಲಿ. ಒಂದುವೇಳೆ ನಮಗೆ ಸಮಾಧಾನವಾದರೆ,

ನೇರವಾಗಿ ಒಪ್ಪಿಗೆ ಕೊಟ್ಟುಬಿಡುತ್ತೇವೆ. ವಿಷಯ ತಿಳಿದುಕೊಳ್ಳದೇ ಒಪ್ಪಿಗೆ ಕೊಡುವುದು ಸರಿಯಲ್ಲವೆಂಬುದು ನನ್ನ ಅಭಿಪ್ರಾಯ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಅಧ್ಯಕ್ಷರೆ, ಪ್ರಾಯಶಃ ಸಚಿವರು ಹೇಳುವಾಗ ಇಲ್ಲಿ ಒಂದು ಕ್ಲಾರಿಟಿ ಬಂದಿಲ್ಲ. ಏನೆಂದರೆ, this is not the actual Bill. ಆ ಬಿಲ್ ತರಲಿಕ್ಕೆ ಏನು ಅಗತ್ಯವಿತ್ತು? ಆ ತಿದ್ದುಪಡಿ ತರಲಿಕ್ಕೆ ಈ ಬಿಲ್ ಮುಖಾಂತರ ಒಂದು ನಿರ್ಣಯ ಮಾಡಿದ್ದಾರೆ. So this Bill. ಆ ಕ್ಲಾರಿಫಿಕೇಷನ್ ಇಲ್ಲ.

Sri D.B. Chandre Gowda : The Parliament will introduce a Bill to make it an Act.

Sri S. Suresh Kumar :- We are not actually discussing on the Bill. ಎರಡನೆಯದು, ಇದು ನಮಗೆ ಬಂದಿರುವುದು ರ್ಯಾಟಿಫಿಕೇಷನ್‌ಗೋಸ್ಕರ ಅಷ್ಟೆ. ಬಹಳಷ್ಟು ಜನ ಸದಸ್ಯರು ಹೇಳಿದಹಾಗೆ ರ್ಯಾಟಿಫಿಕೇಷನ್ ಮಾಡುವಾಗ ನಾವೇನು ರ್ಯಾಟಿಫೈ ಮಾಡುತ್ತೇವೆಂಬುದು ನಮಗೆ ಗೊತ್ತಿರಬೇಕು. ಬಹಳ ಸಲ ನಮಗೆ ಗೊತ್ತಿಲ್ಲದೇ ಶಿಕ್ಷೆ ಅನುಭವಿಸುವುದಕ್ಕೂ ರ್ಯಾಟಿಫೈ ಮಾಡುವುದಕ್ಕೆ ಹೋಗಬಾರದು. ಇವತ್ತೇನು ಸರ್ವೀಸ್ ಟ್ಯಾಕ್ಸ್ ಬಗ್ಗೆ ಒಂದು ಅಮೆಂಡ್‌ಮೆಂಟ್ ಇದೆ. ಜಸ್ವಂತ್‌ಸಿಂಗ್‌ರವರ ಇಂಟ್ರಡಕ್ಷನ್ ಮೇಲೆ ನಮಗೆ ಕ್ಲಾರಿಟಿ ಸಿಗುತ್ತದೆ. ಏನೆಂದರೆ, ಎಲ್ಲವನ್ನೂ ಕೂಡ ಸೆಂಟರೇ ಟ್ಯಾಕ್ಸ್ ಹಾಕಿ ವಸೂಲ್ಮಾಡುವುದಕ್ಕಾಗುವುದಿಲ್ಲ. ಕೆಲವು ಸರ್ವೀಸಸ್ ಇದೆ. ಅದನ್ನು ಸ್ಟೇಟೇ ಟ್ಯಾಕ್ಸ್ ಮಾಡಿ, ಅದು ಸ್ಟೇಟ್‌ಗೇ ಹೋಗಬೇಕು. ಸ್ಟೇಟ್ ರೆವಿನ್ಯೂ ಕೂಡ ಜಾಸ್ತಿ ಮಾಡುವುದಕ್ಕೆ ಇದು ಅಗತ್ಯವಿದೆ ಎಂಬ ಒಂದು ಪಾಯಿಂಟ್ ಬಹಳ ಮುಖ್ಯ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದಹಾಗೆ ಯಾವ ಲಿಸ್ಟ್‌ನಲ್ಲಿ ಬರಬೇಕೆಂಬುದು ಕೂಡ ಆ ಬಿಲ್‌ನಲ್ಲಿ ಬರುತ್ತದೆ. ಯಾವ ಬಿಲ್ ಈ ತಿದ್ದುಪಡಿ ನಂತರ ಬರುತ್ತದೋ ಆ ಬಿಲ್‌ನಲ್ಲಿ ಬರುತ್ತದೆ. ಆದ್ದರಿಂದ, ಬಹಳಷ್ಟು ಜನ ನಮ್ಮ ಸದಸ್ಯರು ಹೇಳಿದಹಾಗೆ ಒಂದು ದಿವಸ ನಮಗೆ ಟೈಮ್ ಕೊಡಬೇಕು. ಇದೊಂದು ಅವಕಾಶ. ಆ ಡಿಬೇಟ್‌ನ್ನು ಕೂಡ ಪೂರ್ತಿ ಓದಲಿಕ್ಕೆ ಒಂದು ಅವಕಾಶ. ಫೈನಾನ್ಸ್ ಬಿಲ್ ಮೇಲೆ, ಈ ತಿದ್ದುಪಡಿ ಮೇಲೆ ಯಾರ್ಯಾರು ಏನೇನು ಮಾತನಾಡಿದ್ದಾರೆ ಎಂಬುದನ್ನು ಪೂರ್ಣ ಓದಿದ ಮೇಲೆ ಇದರ ಬಗ್ಗೆ ರ್ಯಾಟಿಫೈ ಮಾಡುವಾಗ, ನಾವೇನು ರ್ಯಾಟಿಫೈ ಮಾಡಬೇಕೆಂದು ತಿಳಿದುಕೊಂಡು ರ್ಯಾಟಿಫೈ ಮಾಡುವುದು ಒಳ್ಳೆಯದು. ಆಚೆ ಯಾರಾದರೂ ಏನು ರ್ಯಾಟಿಫೈ ಮಾಡಿದಿರಿ ಎಂದರೆ, ಇದಕ್ಕೆ ರ್ಯಾಟಿಫೈ ಮಾಡಿದ್ದೇವೆಂದು ಹೇಳುವುದಕ್ಕೂ ಕೂಡ ಒಂದು ಆಧಾರ ಸಿಗುತ್ತದೆ. ಅದಕ್ಕೋಸ್ಕರ ಇದನ್ನು ಬೇರೆ ದಿವಸ ಇಟ್ಟುಕೊಂಡರೆ ಒಳ್ಳೆಯದೆಂದು ನನಗನ್ನಿಸುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಪಾರ್ಲಿಮೆಂಟಿನಲ್ಲಿ ಏನು ಚರ್ಚೆಯಾಗಿದೆ. ಆ ಚರ್ಚೆಯನ್ನು ಯಥಾವತ್ತಾಗಿ ಕನ್ನಡದಲ್ಲಿ ತರ್ಜುಮೆ ಮಾಡುವುದಕ್ಕೆ ಅವರ ಒಪ್ಪಿಗೆ ಬೇಕೆನ್ನುವಂಥಾದ್ದು ಹೇಳಿದಿರಿ. ನಿಮಗೂ ಅದರ ಬಗ್ಗೆ ಹಂಡ್ರೆಡ್ ಪರ್ಸೆಂಟ್ ನಂಬಿಕೆ ಇಲ್ಲ. You are not confident. ಅದಕ್ಕೆ ನಾನು ಹೇಳುವಂಥಾದ್ದು, ಅದನ್ನೂ ಸ್ವಲ್ಪ ವಿಚಾರ ಮಾಡಿ. ಅದು ಬಂದರೆ, ಸಂಪೂರ್ಣವಾಗಿ ಕನ್ನಡದಲ್ಲಿ ತರ್ಜುಮೆ ಮಾಡುವಂಥಾದ್ದು ಆಗಬೇಕು. ಇದರ ಬಗ್ಗೆ ಒಂದು ಟಿಪ್ಪಣಿಯನ್ನಾದರೂ ತಾವು ಮಾಡಬಹುದಲ್ಲಾ. ಅಲ್ಲೇನು ಚರ್ಚೆಯಾಗಿದೆ ಎಂಬ ಬಗ್ಗೆ ಸಂಕ್ಷಿಪ್ತವಾದ ಒಂದು ಟಿಪ್ಪಣಿಯನ್ನಾದರೂ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೆ, ನಾಳೆ ತೆಗೆದುಕೊಳ್ಳುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ, ಬಹಳ ಮುಖ್ಯವಾಗಿ ಅನೇಕ ವಿಚಾರಗಳಿಗೆ ಪ್ರಶ್ನೆ ಕೇಳಿದವರೇ ಉತ್ತರವನ್ನೂ ಹೇಳಿದ್ದಾರೆ. ವಿಶೇಷವಾಗಿ ಸುರೇಶ್‌ಕುಮಾರ್‌ರವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. Though it is only a resoultion which the constitution has been amended by the Parliament, the state to ratify. ಆಮೇಲೆ ಮುಂದೆ, ಅದರ ಮೇಲೆ ಬರತಕ್ಕಂಥ ಶಾಸನ ಅಥವಾ ಮಸೂದೆ ಏನು ಮಂಡನೆ ಮಾಡುತ್ತಾರೆ. ಅದರಲ್ಲಿ ಈ ಎಲ್ಲಾ ವಿವರಗಳನ್ನು ಹಾಕುತ್ತಾರೆ. ಸ್ಟೇಟ್ ಷೇರ್ ಎಷ್ಟು? ಸೆಂಟ್ರಲ್ ಷೇರ್ ಎಷ್ಟು ಕನ್‌ಕರೆನ್ಟ್ ಯೂನಿಯನ್ ಲಿಸ್ಟ್‌ನಲ್ಲಿ ಬರಬೇಕೇ, ಸೆಂಟ್ರಲ್ ಲಿಸ್ಟ್‌ನಲ್ಲಿ ಬರಬೇಕೇ ಎಂಬುದೆಲ್ಲಾ ಅದರಲ್ಲಿ ಇರುತ್ತದೆ. ಆದರೆ, ಇಲ್ಲೇನಾಗುತ್ತದೆ. ಅಧಿಕಾರವೇ ಇಲ್ಲದೇ ಬಿಲ್ ಯಾವರೀತಿ ತರುವುದು? ಯಾವುದು ಮೊದಲು ಅಂತ.

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರೇ, ಅವರಿಗೆ ಅಧಿಕಾರಿ ಕೊಡುವುದಕ್ಕಷ್ಟೇ ಈ ನಿರ್ಣಯ. ಇದನ್ನು ನೀವು ಮಾಡಿ ಎಂದು ಅವರಿಗೆ ಹೇಳುವುದಷ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಮತ್ತು ಪಾರ್ಲಿಮೆಂಟಿಗೆ ಅಧಿಕಾರ ಇಲ್ಲ. ಅದಕ್ಕಾಗಿ ಇದನ್ನು ತೆಗೆದುಕೊಂಡಿದ್ದಾರೆ. ಆ ಪಾರ್ಲಿಮೆಂಟ್ ಅಷ್ಟೇ ಅಧಿಕಾರ ತೆಗೆದುಕೊಂಡರೆ ಸಾಲದು, ಇದಕ್ಕೆ ರಾಜ್ಯಗಳಿಂದ ಒಪ್ಪಿಗೆ ಬೇಕು. ಆದ್ದರಿಂದ, ನಾವು ಒಪ್ಪಿಗೆಯನ್ನು ಕೊಡುವುದಕ್ಕೆ ಕೇಳಿದ್ದಾರೆ. ಇದರ ಮೇಲೆ ವಿವರವಾಗಿ ಚರ್ಚೆಯಾಗಬೇಕೆಂದರೆ, ಬಿಲ್ ಬಂದಾಗ ಚರ್ಚೆಯಾಗಬೇಕು. ಈಗೇನೂ ಚರ್ಚೆ ಮಾಡುವುದಕ್ಕಾಗುವುದಿಲ್ಲ. We only ratify the Constitutional amendment Bill. Constitutional mandate. ಇದು ಆದ್ದರಿಂದ, ನೀವು ಇದನ್ನು ಮಾಡಿದರೂ ಆಗುತ್ತದೆ. ಮಾಡದೇ ಇದ್ದರೂ ಆಗುತ್ತದೆ. ಒಂದು ರಾಜ್ಯ ಸಂಸತ್ ಮಾಡಿರತಕ್ಕ ಶಾಸನದ ಮೇಲೆ ಅಥವಾ ಸಂವಿಧಾನದ ತಿದ್ದುಪಡಿಯ ಮೇಲೆ ಶಾಸನ ಮಾಡಿದರೆ According to Article 226, the Parliament's Law will have the power as against the State laws.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಸರ್ವೀಸ್ ಟ್ಯಾಕ್ಸನ್ನು ಇಂಟ್ರಡ್ಯೂಸ್ ಮಾಡಲಿಕ್ಕೆ ಕೇಂದ್ರಸರ್ಕಾರಕ್ಕೆ ಪ್ರಾವಿಷನ್ ಇಲ್ಲ. ಆ ಪ್ರಾವಿಷನ್ ತೆಗೆದುಕೊಳ್ಳುವುದಕ್ಕೆ ಸಂವಿಧಾನದಲ್ಲಿ ಅಧಿಕಾರವನ್ನು ತೆಗೆದುಕೊಳ್ಳತಕ್ಕಂಥ ಇನ್‌ಸ್ಟ್ರುಮೆಂಟ್ ಇದು. ಪ್ರಶ್ನೆ ಏನೆಂದರೆ, ಇದನ್ನು ರಾಜ್ಯಗಳು ರ್‍ಯಾಟಿಫೈ ಮಾಡಬೇಕು. A party like ADMK which is rule in Tamilnad, that is saying; "No, we Are totally oppose for this concept; They have opposed it tooth and nail. When that is the case. ಸೆಂಟ್ರಲ್ ಮತ್ತು ಸ್ಟೇಟ್ ರಿಲೇಷನ್‌ಷಿಪ್ ಬಗ್ಗೆ ಮಾತನಾಡತಕ್ಕಂಥವರು, ಫೆಡರಲ್ ಸ್ಟ್ರಕ್ಚರ್ ಬಗ್ಗೆ ನಮ್ಮದೇ ಆದ ರಿಸರ್ವೇಷನ್ ಇರತಕ್ಕಂಥವರು, ಸರ್ಕಾರಿಯಾ ಕಮೀಷನ್ ಶಿಫಾರಸ್ಸುಗಳನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಹೇಳತಕ್ಕಂಥವರು, ನಮ್ಮ ಅಧಿಕಾರ ಎಲ್ಲವನ್ನೂ ನಿಮಗೆ ಕೊಟ್ಟು ಬಿಡುತ್ತೇವೆಂದು ಹೇಳಿದರೆ, ನಾಳೆ ದಿನ ನಮ್ಮ ಸ್ಟೇಟ್ ಪ್ಲಾನ್ ಸೈಜನ್ನು ಜಾಸ್ತಿ ಮಾಡಿಕೊಳ್ಳಬೇಕೆಂದರೆ, ನಮ್ಮ ಟ್ಯಾಕ್ಸ್ ಸ್ಟ್ರಕ್ಚರನ್ನು ಜಾಸ್ತಿ ಮಾಡಕೊಳ್ಳಬೇಕಾಗುತ್ತದೆ. ಬೇಸನ್ನು ಜಾಸ್ತಿ ಮಾಡಿಕೊಳ್ಳಬೇಕಾಗುತ್ತದೆ. ಅದನ್ನೆಲ್ಲಾ ಮಾಡಿಕೊಳ್ಳಬೇಕೆಂದರೆ, ನಾವು ಚರ್ಚೆಯನ್ನೂ ಮಾಡದೇ ಬಿಟ್ಟು ನಿಮ್ಮ ಕೈಗೆ ಕೊಟ್ಟುಬಿಡುತ್ತೇವೆ. ನೀವು ಏನು ಬೇಕಾದರೂ ಮಾಡಿ ಎಂದರೆ

ಹೇಗೆ? ನೀವು ನೀರಲ್ಲಿ ಬೇಕಾದರೂ ಮುಳುಗಿಸಿ, ಪಾಯಸದಲ್ಲಿ ಬೇಕಾದರೂ ಹಾಕಿ ಎಂದು ಹೇಳಿದರೆ ಹೇಗೆ? ಅದರಿಂದ, ನಾವು ಇದರ ಬಗ್ಗೆ ಚರ್ಚೆ ಮಾಡೋಣ. We will debate it tommorrow.

ಅಧ್ಯಕ್ಷರು : ಆಯಿತು.

5. ಶಾಸನ ರಚನೆ

ಅ. ವಿಧೇಯಕಗಳನ್ನು ಮಂಡಿಸುವುದು

ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 2003

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ "2003ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2003ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

(i) ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ, "2003ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ (ಅನುಬಂಧ-I)

(ii) ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2003

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ 2003ರ ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"2003ರ ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ, "2003ರ ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ-II)

(iii) ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2003
ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ 2003ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

"2003ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ 2003ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಲಾಗಿದೆ. (ಅನುಬಂಧ–III)

(iv) ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2003
ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ "2003ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ:

"2003ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ 2003ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಲಾಗಿದೆ. (ಅನುಬಂಧ–IV)

(v) ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 2003
ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಬ್ಕಾರಿ ಸಚಿವರ ಪರವಾಗಿ "2003ರ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ: 2003ರ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಬ್ಕಾರಿ ಸಚಿವರ ಪರವಾಗಿ 2003ರ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ (ಅನುಬಂಧ–V)

ಅಧ್ಯಕ್ಷರು : ಇನ್ನು ಮುಂದೆ ಮಾನ್ಯ ಶಿವಣ್ಣನವರ ವಿಧೇಯಕವನ್ನು ಪರ್ಯಾಲೋಚಿಸಲು ತೆಗೆದುಕೊಳ್ಳೋಣ. ಏನಾಗಿದೆ ಅಂದರೆ 3 ಗಂಟೆಗೆ ಪ್ರಾರಂಭ ಮಾಡಿ 6 ಗಂಟೆವರೆಗೂ ನಿಮ್ಮ ಕಾರ್ಯಕ್ರಮವಾಯಿತು. ಸರ್ಕಾರದ ಕಾರ್ಯಕ್ರಮ ಯಾವಾಗ ಮಾಡುವುದು?

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) : ಮಾನ್ಯ ಅಧ್ಯಕ್ಷರೆ, ನನಗೆ ಮಧ್ಯಾಹ್ನ ಒಂದು explanation ಕೇಳಲು ಕೊಡಲಿಲ್ಲ. ಇತ್ತೀಚೆಗೆ ನೀವು ಏನೋ ಧರ್ಮರಾಯ ಆಗು ಅಂದರೆ ಧೃತರಾಷ್ಟ್ರ ಆಗುತ್ತಾ ಇದ್ದೀರಿ.

ಅಧ್ಯಕ್ಷರು : ಮೂರುಕಾಲು ಗಂಟೆಯಿಂದ ಬರೀ ತಮ್ಮ ಕಾರ್ಯಕ್ರಮವೇ ಆಗಿದೆ. ಸರ್ಕಾರಿ ಕಾರ್ಯಕ್ರಮವೂ ಏನಾದರು ಮಾಡಬೇಕಲ್ಲಾ.

ಆ) ವಿಧೇಯಕವನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2003.

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ "2003ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ ಹಾಲಿ ನಮಗೆ ಇರತಕ್ಕಂಥಹ ಕಾಯಿದೆ ರೀತ್ಯಾ ಸರ್ಕಾರದ ತೋಟಗಾರಿಕೆ ಇಲಾಖೆಯಲ್ಲಿ ಇರತಕ್ಕಂತಹ ಉದ್ಯಾನವನಗಳ ಸಂರಕ್ಷಣೆಗಾಗಿ ಇರುವಂತಹದು. ಈಗ ಬೆಂಗಳೂರಿನ ಹೃದಯಭಾಗದಲ್ಲಿರುವಂತಹ ಸೆಂಟ್ರಲ್ ಜೈಲ್ ಯಾವಾಗ ಸ್ಥಳಾಂತರವಾಯಿತೋ ಈ ಖಾಲಿ ಸ್ಥಳವನ್ನು ತೋಟಗಾರಿಕಾ ಇಲಾಖೆ ವ್ಯಾಪ್ತಿಗೆ ತೆಗೆದುಕೊಂಡು ಯಾವುದೇ ಉದ್ದೇಶದಿಂದ ಇದು encroach ಆಗಬಾರದು ಬೇರೆಯವರ ಕೈಗೆ ಹೋಗಬಾರದು ಎಂಬ ಉದ್ದೇಶದಿಂದ ತೋಟಗಾರಿಕಾ ಇಲಾಖೆಗೆ ಹಸ್ತಾಂತರ ಮಾಡಿಕೊಂಡು ಅದನ್ನು ಸಂರಕ್ಷಣೆ ಮಾಡಬೇಕು ಎಂಬ ಉದ್ದೇಶದಿಂದ ಈ ತಿದ್ದುಪಡಿ ತರುತ್ತಾ ಇದ್ದೇವೆ. ಅಂದರೆ ಖಾಲಿ ಜಾಗಗಳನ್ನು ಈಗಿರುವ ಕಾಯಿದೆ ರೀತ್ಯಾ ನಾವು ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯತೆ ಇಲ್ಲ. ಈ ಖಾಲಿ ಇರುವ ಈ 15 ಎಕರೆ ಪ್ರದೇಶ ಏನಿದೆ ಇದನ್ನು ನಾವು ಇಲಾಖಾ ವ್ಯಾಪ್ತಿಗೆ ತೆಗೆದುಕೊಂಡು ಅಭಿವೃದ್ಧಿಪಡಿಸಬೇಕಾಗಿದೆ. ಮುಂದೆ ಯಾವುದೇ ರೀತಿ ಇದು encroach ಆಗಬಾರದು ಬೇರೆ ಉದ್ದೇಶಗಳಿಗೆ ಹೋಗಬಾರದು ಎಂಬ ಉದ್ದೇಶದಿಂದ ಈ ಸ್ಥಳವನ್ನು ಸಂರಕ್ಷಣೆ ಮಾಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಅದಕ್ಕೋಸ್ಕರ ನಾವು ಉದ್ಯಾನವನಗಳ ವ್ಯಾಪ್ತಿಗೆ ಇದನ್ನು ಈಗ ತರುತ್ತಾ ಇದ್ದೇವೆ. ಹಾಗಾಗಿ ಇದಕ್ಕೆ ಸದನ ಅನುಮತಿ ಕೊಡಬೇಕು ಅಂತ ವಿನಂತಿ ಮಾಡುತ್ತೇನೆ.

+ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಬಹಳ ಒಂದು ಒಳ್ಳೆಯ ಉದ್ದೇಶದಿಂದ ಈ ಬಿಲ್ಲನ್ನು ಈ ಸಭೆಯಲ್ಲಿ ತಾವು ತಂದಿದ್ದೀರಿ ಆದರೆ ಸರ್ಕಾರದ ಒಂದು ಪರಿಸ್ಥಿತಿ ಏನು ಅಂದರೆ ಒಂದು ಇಲಾಖೆ ಮಾಡುವುದು ಇನ್ನೊಂದು ಇಲಾಖೆಗೆ ಗೊತ್ತಾಗುವುದಿಲ್ಲ. ತಾವು ಸೆಂಟ್ರಲ್ ಜೈಲ್ ಜಾಗವನ್ನು ಪಾರ್ಕ್ ಮಾಡುವುದಕ್ಕೆ ಹೊರಟಿದ್ದೀರಿ. ಇವತ್ತು Bangalore City Police Commissioner ಅವರು ಒಂದು ಉದ್ದೇಶ ಹೇಳಿದ್ದಾರೆ. ಏನೆಂದರೆ ಬೆಂಗಳೂರು ನಗರದಲ್ಲಿ ಯಾವುದೇ ಪ್ರತಿಭಟನೆ ಮಾಡಲಿಕ್ಕೆ ಸರ್ಕಾರದ ಯಾವುದೇ ಧೋರಣೆ ವಿರುದ್ಧ ತಮ್ಮ ಪ್ರತಿಭಟನಾ ಧ್ವನಿ ಹೇಳಲಿಕ್ಕೆ ಇವತ್ತು ಜಾಗ ಇಲ್ಲ. ಮುಂಚೆ ನಾವೆಲ್ಲಾ ಬಂದು ಅಲ್ಲಿ ಕಬ್ಬನ್‌ಪಾರ್ಕಿನಲ್ಲಿ ಮಾಡುತ್ತಿದ್ದೆವು. ಇವತ್ತು ಉಚ್ಚ ನ್ಯಾಯಾಲಯದ ಒಂದು ಆದೇಶದ ಮೇರೆಗೆ ಇವತ್ತು ಕಬ್ಬನ್ ಪಾರ್ಕಿನಲ್ಲಿ ಅದಕ್ಕೆ ಅವಕಾಶ ಇಲ್ಲ. K.R. Circle ನಲ್ಲಿ ಬಹಳ ತೊಂದರೆಯಾಗುತ್ತದೆ. ಇದೆಲ್ಲಾ ಉದ್ದೇಶದಿಂದ ಬೆಂಗಳೂರು ನಗರದ ಪೋಲೀಸ್ ಆಯುಕ್ತರು ಇವತ್ತು ಒಂದು ರೀತಿ ಸೂಚನೆಯನ್ನು ಕೊಟ್ಟಿದ್ದಾರೆ. ಸೆಂಟ್ರಲ್ ಜೈಲಿನ ಜಾಗ ಏನಿದೆ ಪರಪ್ಪನ ಅಗ್ರಹಾರಕ್ಕೆ ಜೈಲ್ Shift ಆಗಿರುವುದರಿಂದ ಆ ಜಾಗ ಏನಿದೆ. ಆ ಜಾಗವನ್ನು ಒಂದು ರೀತಿ ಲಂಡನಿನ ಹೈಡ್ ಪಾರ್ಕ್ ತರಹ ಮಾಡುತ್ತೇವೆ. ಅಲ್ಲಿ ಬಂದು ಎಲ್ಲರೂ ಕೂಡ ತಮ್ಮ ತಮ್ಮ ಪ್ರತಿಭಟನೆ ಮಾಡಬಹುದು. ಅಲ್ಲಿಗೆ ಯಾರಾದರೂ ಸರ್ಕಾರದ ಕಡೆಯಿಂದ ಹೋಗಿ ಅವರಿಂದ ನಿವೇದನೆ ತೆಗೆದುಕೊಳ್ಳುವುದು ಅವರ memorandum ಪಡೆಯುವುದು -- ಇದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ ಎಂದು ಬೆಂಗಳೂರು ನಗರದ ಪೋಲೀಸ್ ಆಯುಕ್ತರು, ಯಾರು ಬೆಂಗಳೂರು ನಗರದ law and order maintain ಮಾಡಬೇಕು ಅವರು ಈ ಮಾತು ಹೇಳಿದ್ದಾರೆ. ಜೊತೆಗೆ ಬೆಂಗಳೂರು ಮಹಾನಗರಪಾಲಿಕೆ ಕೆಲವೇ ತಿಂಗಳ ಹಿಂದೆ ಹೇಳಿತು. ಕೆಂಪೇಗೌಡ ಸರ್ಕಲ್ ಸುತ್ತಮುತ್ತಲೂ ಇವತ್ತು ವೆಹಿಕಲ್ ಪಾರ್ಕಿಂಗ್‌ಗೆ ಎಷ್ಟೊಂದು ದೊಡ್ಡ ತೊಂದರೆಯಾಗಿಬಿಟ್ಟಿದೆ ಯಾವುದೇ ರಸ್ತೆಯಲ್ಲಿ ನಾವು ಕಾರ್ ಪಾರ್ಕಿಂಗ್ ಮಾಡುವುದಕ್ಕಾಗುವುದಿಲ್ಲ ವೆಹಿಕಲ್ ಪಾರ್ಕ್ ಮಾಡುವುದಕ್ಕೆ ಆಗುವುದಿಲ್ಲ. ಆದಕ್ಕೆ ಸೆಂಟ್ರಲ್ ಜೈಲ್ ಇದ್ದ ಜಾಗವನ್ನು ನಾವು ಪಾರ್ಕಿಂಗ್ ಜಾಗವನ್ನಾಗಿ ಮಾಡುತ್ತೇವೆ. ಅಗತ್ಯ ಬಿದ್ದರೆ multy storyed parking ಮಾಡುತ್ತೇವೆ ಎಂದು ಬೆಂಗಳೂರು ಮಹಾನಗರಪಾಲಿಕೆಯವರು ಹೇಳಿದ್ದಾರೆ. ಈ ಎರಡೂ ಉದ್ದೇಶಗಳು ಜನರ ಮನಸಿನಲ್ಲಿ ಇವತ್ತು ದ್ವಂದ್ವ ನಡೆಯುತ್ತಿರುವಾಗ ಶ್ರೀ ಮರಿಸ್ವಾಮಿಯವರ ಹೇಳಿಕೆ ಅವರ ಉದ್ದೇಶದ ಪ್ರಕಟಣೆ ಹೀಗಿರುವಾಗ ತಾವು ಇವತ್ತು ಇದನ್ನು ತಂದಿದ್ದೀರಿ, ನನಗೆ ಯಾಕೆ ಅಂದರೆ ಮಾನ್ಯ ಚಂದ್ರೇಗೌಡರು ಇನ್ನೊಂದು ವಿಧೇಯಕವನ್ನು ಓದಲಿಲ್ಲ. ಅದೇನೆಂದರೆ ವಿಧೇಯಕವನ್ನು ಹಿಂತೆಗೆದುಕೊಳ್ಳುವುದು, ಕೃಷ್ಣಪ್ಪನವರದ್ದು. ಅದೇ ರೀತಿ ಇನ್ನು ಸ್ವಲ್ಪ ದಿವಸವಾದ ಮೇಲೆ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನೂ ಹಿಂತೆಗೆದುಕೊಳ್ಳುವುದು ಎಂದು ಎಲ್ಲಿ ಬಂದುಬಿಡುತ್ತದೋ ಎನ್ನುವ ಭಯ. ಇವತ್ತು ಮಂಡಿಸುವುದು, ಪರ್ಯಾಲೋಚಿಸುವುದು, ಅನುಮೋದನೆ ಆಗುವುದು. ಇನ್ನೆರಡ್ಮೂರು ತಿಂಗಳಾದ ಮೇಲೆ ವಿಧೇಯಕ ಹಿಂತೆಗೆದುಕೊಳ್ಳುವುದು ಎಂದು ಆಗಬಾರದು. ಅದಕ್ಕೋಸ್ಕರ ಜನರ ಮನಸ್ಸಿನಲ್ಲಿರುವ ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನೀವು ಮಾಡುವುದು ಒಳ್ಳೆಯ ಉದ್ದೇಶವೇ ಸರಿ. ಆದರೆ You should be having a very clear idea about this. ಸಚಿವರು ಒಂದು ಮಾತನ್ನು ಹೇಳಿದರು.

ನಾವು ಖಾಲಿ ಜಾಗವನ್ನು ಪಾರ್ಕ್ ಆಗಿ ಮಾಡುವುದಕ್ಕಾಗುವುದಿಲ್ಲ. ಪಾರ್ಕ್ ಎಂದು ಘೋಷಣೆ ಮಾಡುವುದಕ್ಕಾಗುವುದಿಲ್ಲ ಎಂದರು. ಪಾಪ ಸಚಿವರಿಗೆ ಗೊತ್ತಿಲ್ಲ. ಮಾನ್ಯ ರೋಷನ್‌ಬೇಗ್‌ರವರಿಗೆ ಬಹಳ ಚೆನ್ನಾಗಿ ಗೊತ್ತು. ಬೆಂಗಳೂರು ಮಹಾ ನಗರದಲ್ಲಿ ಪ್ಲೇ ಗ್ರೌಂಡ್ಸ್ ಎಲ್ಲಾ ಪಾರ್ಕ್ ಆಗುತ್ತಿದೆ. ಯಾವ್ಯಾವುದು ಪ್ಲೇ ಗ್ರೌಂಡ್ ಎಂದು ಈಯರ್‌ಮಾರ್ಕ್ ಮಾಡಿದ್ದೇವೋ ಅವೆಲ್ಲಾ ಇವೊತ್ತು ಉದ್ಯಾನವನ ಆಗಿಬಿಡುತ್ತಿದೆ. ಟೆನ್ನಿಸ್‌ಕೋರ್ಟ್‌ದ್ದು ಇನ್ನೊಂದು ಭಾಗ. ಏಕೆಂದರೆ ಪ್ಲೇ ಗ್ರೌಂಡ್‌ನ್ನು ಪಾರ್ಕ್ ಮಾಡುವುದರಲ್ಲಿ ಲಾಭ ಇದೆ. ಆ ಲಾಭ ಇರುವುದರಿಂದ ಅನ್ಯಾಯವಾಗಿ ಇವೊತ್ತು ಪ್ಲೇ ಗ್ರೌಂಡ್‌ಗಳನ್ನೆಲ್ಲಾ ಪಾರ್ಕ್ ಮಾಡುತ್ತಿದ್ದಾರೆ. ಅದನ್ನು ನಾನು ಇನ್ಸಿಡೆಂಟಲಿ ಮೆನ್‌ಶನ್ ಮಾಡುತ್ತಿರುವುದು. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು, ಸಚಿವರನ್ನು ಕೇಳಿಕೊಳ್ಳುವುದೇನೆಂದರೆ ನಿಮಗೆ ನಿಜವಾಗಲೂ ಕೂಡ ಸೆಂಟ್ರಲ್ ಜೈಲ್ ಇದ್ದಂಥ ಜಾಗವನ್ನು ಪಾರ್ಕ್‌ನ್ನಾಗಿ ಮಾಡುವ ಉದ್ದೇಶ ಇದೆಯೆ? ಆ ಒಂದು ರಾಜಕೀಯ ಇಚ್ಛೆ ನಿಮಗಿದೆಯೆ ಅಥವಾ ಸ್ಪೀಕರ್‌ರವರು ಹೇಳಿದ ಹಾಗೆ ಪಾರ್ಕ್ ಮತ್ತು ಜೈಲ್ ಎರಡೂ ಒಂದೇ ಎಂದು ಹೇಳಿದ ಹಾಗೆ ತಾವೂ ಕೂಡ ಏನಾದರೂ ನಿರ್ಧಾರ ತೆಗೆದುಕೊಳ್ಳುತ್ತೀರಾ ಎಂದು ನನಗೆ ದಯವಿಟ್ಟು ತಿಳಿಸಿ.

+ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ ಮಾನ್ಯ ತೋಟಗಾರಿಕಾ ಸಚಿವರು ಸೆಂಟ್ರಲ್ ಜೈಲ್ ಇದ್ದಂಥ ಜಾಗವನ್ನು ಪಾರ್ಕ್‌ನ್ನಾಗಿ ಮಾಡುವಂಥದ್ದರ ಬಗ್ಗೆ ಹೇಳಿದ್ದಾರೆ. ಈಗಾಗಲೇ ಮಾನ್ಯ ಸುರೇಶ್‌ಕುಮಾರ್‌ರವರು ತಿಳಿಸಿದ ಹಾಗೆ ಇದೊಂದು ಒಳ್ಳೆಯ ಉದ್ದೇಶವೇ ಸರಿ. ಮಾನ್ಯ ಸಚಿವರಾದ ಚಂದ್ರೇಗೌಡರೂ ಕೂಡ ಈಗ ಇಲ್ಲಿಯೇ ಇದ್ದಾರೆ. ಆದರೆ ಮೊದಲು ಆ ಜಾಗ ಏನಿದೆ ಅದು ಮೊದಲು ಪೋಲೀಸ್ ಇಲಾಖೆಯಿಂದ ತೋಟಗಾರಿಕೆ ಇಲಾಖೆಗೆ ಬರಬೇಕಾಗಿದೆ. ಈ ರೀತಿ ಸರ್ಕಾರದಲ್ಲಿ ಗೊಂದಲಗಳೇ ಇವೆ. ಇದು ಮೊದಲು ಪೋಲೀಸ್ ಇಲಾಖೆಯಲ್ಲಿ ಇದ್ದಂಥ ಆಸ್ತಿ. ಅಂದರೆ ಅವರು ನೋಡಿಕೊಂಡು ನಿರ್ವಹಣೆಯನ್ನು ಮಾಡುವಂಥದ್ದು. ಅದಾದನಂತರ ಈಗ ತಾವು ತಮ್ಮ ಸ್ವಾಮ್ಯಕ್ಕೆ ತೆಗೆದುಕೊಳ್ಳುವಂಥದ್ದು. ಈ ದೃಷ್ಟಿಯಿಂದ ಆ ಬಗ್ಗೆ ನೀವು ನಮಗೆ ಏನನ್ನೂ ತಿಳಿಸಿಲ್ಲ. ಒಟ್ಟು 15 ಎಕರೆ ಟೋಟಲ್ ಎಕ್ಸ್‌ಟೆಂಟ್ ಇರುವುದು. ಬಹಳ ಬೆಲೆ ಬಾಳುವಂಥ ಆಸ್ತಿ ಇದು. ಹಾರ್ಟ್ ಆಫ್ ದಿ ಸಿಟಿಯಲ್ಲಿ ಇರುವಂಥದ್ದು. ನಮ್ಮಲ್ಲಿ ಹಿಂದೆ ಇದ್ದಂಥ ಉದ್ದೇಶಗಳು ಏನೆಂದರೆ ರೇಸ್‌ಕೋರ್ಸ್‌ನ್ನು ಬೇರೆ ಕಡೆಗೆ ಬದಲಾಯಿಸಿ ಅಲ್ಲಿ ಒಂದು ಡಿಸ್ನಿಲ್ಯಾಂಡ್ ಅಥವಾ ಬೇರೆ ಬೇರೆ ಕಾನ್‌ಸೆಪ್ಟ್‌ನಲ್ಲಿ ಮಕ್ಕಳಿಗೆ ಉದ್ಯಾನವನ ಬೇರೆ ಬೇರೆ ರೀತಿಯಲ್ಲಿ ಮಾಡುವಂಥದ್ದು, ಮತ್ತೊಂದು ನಮಗೆ ಜಾಗ ಇರುವಂಥದ್ದು ಅರಮನೆ ಮೈದಾನದ ಜಾಗ. ಯಾವುದಾದರೂ ಕಾರ್ಯಕ್ರಮಗಳಿಗೆ ನಗರದಲ್ಲಿ ಮಾಡುವಂಥ ಉದ್ದೇಶ ಇಟ್ಟುಕೊಂಡರೆ; ಅದಾದನಂತರ ಈ 15 ಎಕರೆಯಲ್ಲಿ ಪಾರ್ಕ್ ಮಾಡುವಂಥದ್ದು. ಮಾನ್ಯ ಸುರೇಶ್‌ಕುಮಾರ್‌ರವರು ಅವರ ಅಭಿಪ್ರಾಯಗಳನ್ನು ಕೊಟ್ಟರು. ಅದನ್ನು ಯಾವ ಉದ್ದೇಶಕ್ಕೆ ಬಳಸಬಹುದು ಎಂಬುದರ ಬಗ್ಗೆ ಹೇಳಿದ್ದಾರೆ. ಅವರು ಹೇಳಿದ ಹಾಗೆ ನೀವು ಇವೊತ್ತು ವಿಧೇಯಕ ಮಂಡಿಸುವುದು ಮತ್ತೆ ಇದನ್ನು ವಾಪಸ್ಸು ಪಾರ್ಕ್ ಎಂದು ಬರೀಪ್ಲೈನ್ ಆಗಿ ಸ್ವಲ್ಪ ಮಾತ್ರ ತಾವು ತಂದಿದ್ದೀರಿ, ಪಾರ್ಕ್ ಎನ್ನುವ ಉದ್ದೇಶಕ್ಕೆ ತೆಗೆದುಕೊಳ್ಳುವಂಥದ್ದು ಎಂದು ಹೇಳಿ ಉದ್ಯಾನವನವನ್ನು ಮಾಡುವ ಉದ್ದೇಶದಿಂದ 15 ಎಕರೆ, ತಾವು ಪದೇ ಪದೇ ಹೇಳಿದ್ದೀರಿ ಅದು ಅತಿಕ್ರಮಣ ಆಗುತ್ತದೆ ಅಥವಾ ಬೇರೆಯವರ ವಶಕ್ಕೆ ಹೋಗಿಬಿಡುತ್ತದೆ. ಏನು ಅನ್ನುವುದರ ಬಗ್ಗೆ ತಾವು ತಿಳಿಸಿದ್ದೀರಿ. ಆದ್ದರಿಂದ ಪಾರ್ಕ್ ಮಾಡುವ

ಅವಶ್ಯಕತೆ ಜರೂರಾಗಿ ಇದೆ. ಆ ಭಾಗದಲ್ಲಿ ಕಬ್ಬನ್ ಪಾರ್ಕ್ ಇರುವಂಥದ್ದು, ಸಿಟಿಯಲ್ಲಿ ಆ ಕಡೆ ಲಾಲ್‌ಬಾಗ್ ಇರುವಂಥದ್ದು, ಈ ಭಾಗದಲ್ಲಿ ಪ್ಯಾಲೇಸ್ ಅರಮನೆ ಮತ್ತು ನಮ್ಮ ರೇಸ್‌ಕೋರ್ಸ್ ಇರುವಂಥ ಜಾಗವನ್ನು ಬೇರೆ ಕಡೆ ಶಿಫ್ಟ್ ಮಾಡುವುದು ನಮ್ಮ ಮುಂದೆ ಇದ್ದಂಥ ವಿಚಾರ. ಆದ್ದರಿಂದ ಈ ರೀತಿಯ ಗೊಂದಲಗಳಿರುವುದನ್ನು ಮಂಡಿಸಿ ಮತ್ತೆ ಇದು ಯಾರಿಗೆ ಸೇರಬೇಕು. ಏನಾಗಿದೆ ಇದು, ಕ್ಯಾಬಿನೆಟ್ ತೀರ್ಮಾನವಾಗಿದೆಯೇ, ಸರ್ಕಾರ ಏನಾದರೂ ಈ ರೀತಿ ತೀರ್ಮಾನ ಮಾಡಿದೆಯೇ, ಆ ರೀತಿ ಏನಾದರೂ ನೋಟಿಫಿಕೇಶನ್ ಆಗಿದೆಯೇ, ಇವೆಲ್ಲದರ ಬಗ್ಗೆ ಏನಾಗಿದೆ ಎಂಬ ಬಗ್ಗೆ ಮಾನ್ಯ ಸಚಿವರು ಸದನಕ್ಕೆ ತಿಳಿಸಿಲ್ಲ. ಇವೊತ್ತು ಪಾರ್ಕ್ ಮಾಡುವ ಉದ್ದೇಶವೇನಿದೆ ಅದು ಒಳ್ಳೆಯದು. ಸರ್ಕಾರದ ಆಸ್ತಿಯಾದ 15 ಎಕರೆ ಜಾಗದಲ್ಲಿ ಪಾರ್ಕ್ ಮಾಡುವಂಥ ಉದ್ದೇಶವೇನಿದೆ ಅದು ಸರಿಯಾಗಿದೆ. ಅದು ಪಾರ್ಕ್ ಎಂದು ಆದಮೇಲೆ ಮುಂದೆ ಏನು ಮಾಡುವುದು ಎಂಬ ಬಗ್ಗೆ ತಮ್ಮ ಮುಂದೆ ಬಿಟ್ಟಿರುವಂಥದ್ದು. ಈ ದೃಷ್ಟಿಯಿಂದ ನೀವು ನಮಗೆ ಸರಿಯಾದಂಥ ಮಾಹಿತಿಯನ್ನು ಕೊಡಬೇಕು. ಇದರಲ್ಲಿ ಗೊಂದಲಗಳೇನಿವೆ. ಇದರ ಆಸ್ತಿ ಒಡೆಯ ಯಾರು, ಯಾರಿಗೆ ಇದು ಬಂದಿದೆ. ಏನಾಗಿದೆ. ಮುಂದೆ ಏನಾಗಬೇಕು ಎಂಬ ಬಗ್ಗೆ ದಯಮಾಡಿ ಸದನಕ್ಕೆ ಸರಿಯಾದ ಮಾಹಿತಿಯನ್ನು ಕೊಡಬೇಕು.

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) : ಮಾನ್ಯ ಅಧ್ಯಕ್ಷರೆ, ಈ ಪರಿಸರ ಮಾಲಿನ್ಯದ ದಟ್ಟವಾದಂಥ ಪರಿಣಾಮ ಇಡೀ ಜನತೆಯ ಮೇಲೆ ಬೀರುತ್ತಿದೆ. ಇದೇ ರೀತಿ ಮುಂದುವರಿದರೆ ಪರಿಸರ ಕಲುಷಿತಗೊಂಡು ಬೆಂಗಳೂರಿನಲ್ಲಿ ಇನ್ನು ಕೆಲವೇ ದಿವಸಗಳಲ್ಲಿ ಆಕ್ಸಿಜನ್ನು ಕೊಂಡುಕೊಂಡು ಅದನ್ನು ಮೂಗಿಗೆ ಕಟ್ಟಿಕೊಂಡು ನಾವು ಓಡಾಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಬಹುದು. ಆ ದೃಷ್ಟಿಯಿಂದ ಯಾವುದೇ ಕಾರಣಕ್ಕೂ ಈ ಕಾಯಿದೆಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಈ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆ ಎಂದು ಹೇಳಬಾರದು ಎಂದು ಈಗಾಗಲೇ ನನ್ನ ಸ್ನೇಹಿತರಾದ ಮಾನ್ಯ ಸುರೇಶ್‌ಕುಮಾರ್‌ರವರು ಏನು ಹೇಳಿದ್ದಾರೋ ಅದಕ್ಕೆ ನಾನೂ ಕೂಡ ಒತ್ತನ್ನು ಕೊಡುತ್ತೇನೆ. ಎಂಥದೇ ಒತ್ತಡ ಬರಲಿ, ಯಾರೋ ಅಧಿಕಾರಿಗಳು ಹೇಳಿಕೆ ಕೊಡುತ್ತಾರೆ. ಅಧಿಕಾರಿಗಳು ಹೇಳಿಕೆ ಕೊಟ್ಟಿದ್ದೆಲ್ಲಾ ಈ ದೇಶದಲ್ಲಿ ಕಾನೂನು ಆಗುವುದಿಲ್ಲ. ಕಾರ್ಯರೂಪಕ್ಕೆ ಬರುವುದಿಲ್ಲವೆನ್ನುವುದು ನಮಗೆ ಚೆನ್ನಾಗಿಯೇ ಗೊತ್ತಿದೆ. ಆದುದರಿಂದ ಆ ಬಗ್ಗೆ ಸುರೇಶ್‌ಕುಮಾರ್‌ರವರಾಗಲೀ, ನಾವಾಗಲೀ ತಲೆ ಕೆಡಿಸಿಕೊಳ್ಳುವುದು ಬೇಡ. ನನ್ನ ಪ್ರಾರ್ಥನೆ ಇಷ್ಟೆ. ಇದನ್ನೂ ಪಾರ್ಕನ್ನಾಗಿ ಮಾಡಬೇಕು. ರೇಸ್‌ಕೋರ್ಸ್ ಏನಾದರೂ ಶಿಫ್ಟ್ ಆದರೆ ಸಾಧ್ಯವಾದರೆ ಆ ಜಾಗದಲ್ಲೂ ಪಾರ್ಕನ್ನು ಮಾಡಿ. ಪ್ರತಿಭಟನೆ ಮಾಡುವುದಕ್ಕೆ ಬೇರೆ ಕಡೆ ವ್ಯವಸ್ಥೆ ಮಾಡೋಣ. ಇನ್ನು ಕಾರ್ ನಿಲ್ಲಿಸುವುದಕ್ಕೆ ಎಂದರೆ, ಇನ್ನು ಮುಂದೆ ಆದಷ್ಟು ಕಾರ್ ಕಡಿಮೆಯಾಗಲಿ, ಏಕೆಂದರೆ ಕಡಿಮೆಯಾದಷ್ಟು ಒಳ್ಳೆಯದೇ. ಇದರಿಂದ ಮಾಲಿನ್ಯ ಕಡಿಮೆಯಾಗುತ್ತದೆ. ಪ್ರತಿಭಟನೆ ಮಾಡುವುದಕ್ಕೆ ಇನ್ನೆಲ್ಲಾದರೂ ಒಂದು ಜಾಗ ಹುಡುಕೋಣ. ಪ್ರತಿಭಟನಾ ಕಾರ್ಯಕ್ರಮ ಮಾಡುವುದಕ್ಕೇ ಎಂದು ಒಂದು ಜಾಗವನ್ನು ಐಡೆಂಟಿಫೈ ಮಾಡೋಣ. ಅದು ಯಾವುದು ಏನಾದರೂ ಆಗಿಕೊಂಡು ಹೋಗಲಿ ನಾನು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ನನ್ನ ಸ್ನೇಹಿತರಾದ ಸುರೇಶ್‌ಕುಮಾರ್‌ರವರು ಏನು ಹೇಳಿದ್ದಾರೋ ಮತ್ತೊಮ್ಮೆ ಈ ವಿಧೇಯಕವನ್ನು

ಹಿಂತೆಗೆದುಕೊಂಡಿದ್ದೇವೆ ಎನ್ನುವುದು ಸದನದಲ್ಲಿ ಬರಬಾರದು ಎಂದು ಏನು ಹೇಳಿದ್ದಾರೋ ಅದಕ್ಕೆ ನಾನೂ ಕೂಡ ಧ್ವನಿಗೂಡಿಸುತ್ತೇನೆ. ಬಹುಶಃ ಬಹುತೇಕ ಸದಸ್ಯರ ಧ್ವನಿಯೂ ಕೂಡ ಅದೇ ಆಗಿದ್ದು ಈ ಜಾಗವನ್ನು ಉತ್ತಮವಾದಂಥ ಪಾರ್ಕ್‌ನ್ನಾಗಿ ಮಾಡಿ ವಾಯು ವಿಹಾರಕ್ಕೆ ಒದಗಿಸಿಕೊಡಬೇಕೆಂದು ಸರ್ಕಾರಕ್ಕೆ ನಾನು ಪ್ರಾರ್ಥನೆ ಮಾಡುತ್ತೇನೆ. ಈ ಕಾರ್ಯಕ್ರಮವನ್ನು ಹಮ್ಮಿಕೊಂಡದ್ದಕ್ಕಾಗಿ ಅಭಿನಂದಿಸುತ್ತೇನೆ.

(ಈ ಹಂತದಲ್ಲಿ ಶ್ರೀ ಯು.ಆರ್. ಸಭಾಪತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

+ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಎಂಥ ಗಾಳಿ ಬರುತ್ತಿದೆ ಎಂಬುದು ಈಗಾಗಲೇ ನಮ್ಮ ಅನುಭವಕ್ಕೆ ಬಂದಿದೆ. ಆ ದೃಷ್ಟಿಯಿಂದ ಪಾರ್ಕ್ ಮಾಡುವಂಥ ಉದ್ದೇಶ ಸ್ವಾಗತಾರ್ಹವೇ. ಆದರೆ ನನ್ನ ಜೊತೆಯಲ್ಲಿ ಮಾತನಾಡಿರತಕ್ಕಂಥ ಅನೇಕ ಗಣ್ಯರು ಹೇಳಿದ ಅಭಿಪ್ರಾಯ ಮತ್ತು ನನ್ನ ವೈಯಕ್ತಿಕ ಅಭಿಪ್ರಾಯವನ್ನು ನಾನು ಈ ಸಂದರ್ಭದಲ್ಲಿ ಈ ಸದನದ ಮುಂದೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಈಗ ನಮ್ಮ ಸಚಿವರುಗಳ ಮನಗಳೆಲ್ಲವೂ ಇಡೀ ಬೆಂಗಳೂರು ನಗರದಾದ್ಯಂತ ಹರಡಿ ಹಂಚಿಹೋಗಿವೆ. ಇವರ ನಿವಾಸಗಳಿಗೆ ಕೊಡುವ ಬಾಡಿಗೆ ಏನಿದೆ ಅದು ನಮ್ಮ ರಾಜ್ಯದ ಬಡ ಬೋರೇಗೌಡನಿಗೆ ಬಹಳ ದೊಡ್ಡ ಭಾರವಾಗಿದೆ. ಏಕೆಂದರೆ ಎಷ್ಟೆಷ್ಟು ಯಾರ್ಯಾರು ಮನೆಗೆ ಬಾಡಿಗೆ ಎಂದು ಹೇಳಿ ಅವರವರೇ ಯಾರ್ಯಾರೋ ಫಿಕ್ಸ್ ಮಾಡಿರುತ್ತಾರೆ. ಏನೇನೋ ಕಥೆ ಇವೆಲ್ಲಾ. ಆದ್ದರಿಂದಾಗಿ ಅನೇಕ ಗಣ್ಯರ ಜೊತೆ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ, ಜೈಲ್ ಶಿಫ್ಟ್ ಆದಂಥ ಸಂದರ್ಭದಲ್ಲಿ ಎಲ್ಲಾ ಸಚಿವರ ಮನೆಗಳನ್ನು ಇಲ್ಲಿ ಒಂದೇ ಕಡೆ ಮಾಡಿದರೆ ಸೆಕ್ಯೂರಿಟಿ ದೃಷ್ಟಿಯಿಂದಲೂ ಕೂಡ ಒಳ್ಳೆಯದು ಆಗುತ್ತದೆ. ಜೈಲಿನ ಗೋಡೆ ತೆಗೆಯುವುದು ಬೇಡ. ಒಳಗಡೆ ಒಳ್ಳೊಳ್ಳೆ ಬಂಗಲೆಗಳನ್ನು ಕಟ್ಟಿ ನಮ್ಮೆಲ್ಲಾ ಮಾನ್ಯ ಸಚಿವರುಗಳೂ ಕೂಡ ಒಂದೇ ಕಡೆ ಇರಬೇಕು. ಯಾವುದೇ ಸರ್ಕಾರವಿರಲಿ, ಆ ಸರ್ಕಾರದ ಎಲ್ಲಾ ಸಚಿವರುಗಳು ಒಂದೇ ಕಡೆ ಇರುವ ಹಾಗೆ ಮಾಡಿದರೆ ಸ್ವಲ್ಪ ವಿಧಾನಸೌಧಕ್ಕೂ ಅವರಿಗೆ ಹತ್ತಿರವಾಗುತ್ತದೆ ಹಾಗೂ ಅವರ ಪ್ರವಾಸಕ್ಕೂ ಹತ್ತಿರವಾಗುತ್ತದೆ. ಸಾಮಾನ್ಯ ಜನರಿಗೆ ಈ ಪ್ರಜಾ ತಂತ್ರದಲ್ಲಿ ಸಚಿವರ ಮನೆಗೆ ಹೋದರೆ ಕೆಲಸ ಆಗುತ್ತದೋ, ಬಿಡುತ್ತದೋ, ಅದು ಬೇರೆ ವಿಚಾರ. ಆದರೆ ಸಾಮಾನ್ಯ ಜನರಿಗೆ ಮಂತ್ರಿಗಳ ಮನೆಗೆ ಹೋಗುವುದು ಈಗ ಒಂದು ಸಂಪ್ರದಾಯವಾಗಿಬಿಟ್ಟಿದೆ. ಹೋಗಿ ಸಚಿವರನ್ನು ಕಂಡುಬಂದೆವು, ಹಾರ ಹಾಕಿಬಂದೆವು ಎನ್ನುವುದೇ ಅವರಿಗೆ ಒಂದು ದೊಡ್ಡ ಸಂಗತಿ. ಸಡಗರವಾಗಿದೆ. ಹೀಗಾಗಿ ಮಂತ್ರಿಗಳನ್ನು ನೋಡುವುದಕ್ಕಾದರೂ ಜನರಿಗೆ ಹತ್ತಿರದಲ್ಲಿಯೇ ಮಂತ್ರಿಗಳು ಸಿಗುತ್ತಾರೆ. ಎನ್ನುವುದು ಬಹಳಷ್ಟು ಜನರ ಇರಾದೆಯಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮನುಷ್ಯರು ಜೈಲಿನ ಆ ಭಾಗದಲ್ಲಿ ವಾಸ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಅಲ್ಲಿ ಸಾಕಷ್ಟು ನೇಣು ಹಾಕಿದ್ದಾರೆ. ನೇಣು ಶಿಕ್ಷೆಯನ್ನು ಕೊಟ್ಟು ನೇಣು ಹಾಕಿ ಸಾಕಷ್ಟು ತೊಂದರೆಗಳು ಅಲ್ಲಿ ಇದೆ. ಮನುಷ್ಯರು ಅಲ್ಲಿ ವಾಸ ಮಾಡುವುದಕ್ಕಾಗುವುದಿಲ್ಲ. ಸ್ಮಶಾನ ಇದ್ದಹಾಗೆ ಅದು. ಅದು ಪಾರ್ಕ್ ಆಗಿಯೇ ಆಗಲಿ.

ಶ್ರೀ ಆರಗ ಜ್ಞಾನೇಂದ್ರ : ಅದು ಎಷ್ಟೇ ನೇಣು ಹಾಕಿರಲಿ, ಅದು ಏನೇ ಸುಡುಗಾಡಾಗಿರಲಿ, ಅಲ್ಲಿ ಏನೆ ಪಿಶಾಚಿ, ದೆವ್ವಗಳಿದ್ದರೂ ಕೂಡ ನಮಗಿಂತ ಅವು ದೊಡ್ಡವೇನಲ್ಲ. ಅವು ನಮ್ಮನ್ನು

ನೋಡಿ ಹೆದರಿ ಓಡಬೇಕೇ ಹೊರತು ನಾವು ಅವಕ್ಕೆ ಹೆದರಿ ಓಡುವಂಥ ಪರಿಸ್ಥಿತಿ ಇವೊತ್ತಿನ ರಾಜಕಾರಣದಲ್ಲಿ ಇಲ್ಲ ಎಂದು ನನಗನ್ನಿಸುತ್ತದೆ. ನಮ್ಮ ಜನರು, ಗಣ್ಯರು, ಅನೇಕರು ಇಲ್ಲಿ ಸಚಿವರ ಮನೆಗಳನ್ನು ಕಟ್ಟಬೇಕು ಎನ್ನುವ ಅಭಿಪ್ರಾಯವನ್ನು ಪಡುತ್ತಿದ್ದಾರೆ. ಒಳ್ಳೆಯ ಬಂಗಲೆಯನ್ನು ವಾಸ್ತು ರೀತಿಯಲ್ಲಿಯೇ ಕಟ್ಟಲಿ. ಸರಿಯಾದಂಥ ಮರಗಿಡಗಳನ್ನು ಅಲ್ಲಿ ಬೆಳಸಿ, ಚೆನ್ನಾಗಿ ಅಲಂಕಾರಿಕವಾದಂಥ ಪ್ರದೇಶವನ್ನಾಗಿ ಮಾಡಿ ನಮ್ಮೆಲ್ಲಾ ಸಚಿವರೂ ಕೂಡ ಒಂದೇ ಕಡೆ ವಾಸ ಮಾಡುವ ಹಾಗಾದರೆ ನಮ್ಮ ಸಾಮಾನ್ಯ ಜನರಿಗೆ ಸಚಿವರ ಮನೆಯ ಬಾಡಿಗೆಯ ಹೊರಲಾರದ ಭಾರ ಕಡಿಮೆಯಾಗುತ್ತದೆ ಹಾಗೂ ಸಾಮಾನ್ಯ ಜನರು ಸಚಿವರನ್ನು ವಿಧಾನಸೌಧದ ಹತ್ತಿರದಲ್ಲಿಯೇ ಭೇಟಿ ಮಾಡಲು ಅನುಕೂಲವಾಗುತ್ತದೆ. ಏಕೆಂದರೆ ಹಾಲಿ ಸಚಿವರುಗಳೆಲ್ಲಾ ಯಾವ್ಯಾವುದೋ ಲೇಔಟ್‌ಗಳಲ್ಲಿ ಇದ್ದಾರೆ. ಅವರಿಗೆ ಸಿಗುವಂಥ ಒಳ್ಳೆಯ ಮನೆಗಳನ್ನು ನೋಡಿಕೊಂಡು ಅಲ್ಲಿ ವಾಸವಾಗಿದ್ದಾರೆ. ಅವರು ಅಲ್ಲಿ ಇರಬಾರದು. ಇಲ್ಲಿ ಇರಬಾರದು ಎಂದು ನಾವ್ಯಾರು ಹೇಳುವುದಕ್ಕೆ ಬರುವುದಿಲ್ಲ. ವಿಧಾನ ಸೌಧದ ಹತ್ತಿರ ಮನೆಗಳು ಸಿಗದಿದ್ದಾಗ ಅವರು ಅಲ್ಲಿ ಇರಬೇಕಾಗುತ್ತದೆ. ತಪ್ಪೇನೂ ಅಲ್ಲ. ಆದರೆ ಬಹಳ ಹತ್ತಿರದಲ್ಲಿಯೇ ಸರ್ಕಾರದವರೇ ಮನೆಗಳನ್ನು ಕಟ್ಟಿ ಸಚಿವರಿಗೆ ಕೊಡುವುದಾದರೆ ತುಂಬಾ ಒಳ್ಳೆಯದು ಎನ್ನುವ ಅಭಿಪ್ರಾಯ ಬಹಳಷ್ಟು ಸಾರ್ವಜನಿಕರ ಹಾಗೂ ಗಣ್ಯರ ಅಭಿಪ್ರಾಯವಾಗಿದೆ. ದಯವಿಟ್ಟು ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಇದನ್ನೂ ಕೂಡ ಪರಿಗಣಿಸಬೇಕು ಎಂದು ಹೇಳುತ್ತೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಅನೇಕ ಬಡಾವಣೆಗಳು ಸ್ಮಶಾನದಲ್ಲಿಯೇ ಇಂದು ಬಂದಿವೆ.

ಶ್ರೀ ಆರಗ ಜ್ಞಾನೇಂದ್ರ : ಹೌದು. ಅನೇಕ ಬಡಾವಣೆಗಳು ಇವೊತ್ತು ಸ್ಮಶಾನದಲ್ಲಿಯೇ ಎದ್ದಿರುವುದರಿಂದ ದೆವ್ವ, ಪಿಶಾಚಿಗಳಿಗೆ ಹೆದರಬೇಕಾದ್ದೇನೂ ಇಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಆದುದರಿಂದ ನನ್ನ ಸಲಹೆಯನ್ನೂ ಕೂಡ ತಿದ್ದುಪಡಿ ಮಾಡುವಾಗ ಕನ್ಸಿಡರ್ ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

6.10 ಪಿ.ಎಂ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಛೇರ್ಮನ್‌ರೆ, 2003ನೇ ಸಾಲಿನ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಈ ಸಂದರ್ಭಗಳಲ್ಲಿ ಹೇಳಬಯಸುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳನ್ನು ಕಳೆದಿದ್ದು, ಉಳಿದಿರುವುದು 8–10 ತಿಂಗಳು ಅಥವಾ ಒಂದು ವರ್ಷವೆಂದು ಇಟ್ಟುಕೊಳ್ಳಬಹುದಾಗಿದೆ. ನನ್ನ ಅಭಿಪ್ರಾಯದಲ್ಲಿ ಈ ಸರ್ಕಾರ ಮಾಡಿರುವ ಸಾಧನೆಗಳು ಬೆರಳೆಣಿಸುವಷ್ಟು ಬಹಳ ಕಡಿಮೆ. ಆ ಬೆರಳೆಣಿಸುವಷ್ಟು ಸಾಧನೆಗಳಲ್ಲಿ ಬೆಂಗಳೂರಿನಲ್ಲಿ ಪಾರ್ಕ್ ಮಾಡುವ ವಿಚಾರದಲ್ಲಿ ಈ ಸರ್ಕಾರ ಉತ್ತಮ ಕೆಲಸ ಮಾಡಿದೆಯೆಂದು ಹೇಳಲಿಚ್ಛಿಸುತ್ತೇನೆ. ಹಲವಾರು ಪಾರ್ಕುಗಳನ್ನು ಉತ್ತಮಪಡಿಸಿರುವುದರ ಬಗ್ಗೆ ಬೆಂಗಳೂರಿನ ಒಬ್ಬ ನಿವಾಸಿಯಾಗಿ ನಾನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಬೆಂಗಳೂರಿನಲ್ಲಿರುವ ಪಾರ್ಕುಗಳನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲಿ ಕೃಷ್ಣರವರು ಆಸಕ್ತಿ ವಹಿಸಿ ಕೆಲಸ ಮಾಡಿಸಿದ್ದಾರೆ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯವರೂ ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳದೆ ಹೋದರೆ ಬಹುಶಃ ನನ್ನ ಮಾತಿಗೆ ಬೆಲೆ ಕಡಿಮೆಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಅದೇ ದೃಷ್ಟಿಯಲ್ಲಿ ಬಹಳ

ಪ್ರಮುಖವಾಗಿರುವ ಕೇಂದ್ರ ಕಾರಾಗೃಹದ ಜಮೀನನ್ನು ಪರಪ್ಪನ ಅಗ್ರಹಾರಕ್ಕೆ ವರ್ಗಾಯಿಸುವ ವಿಚಾರದಲ್ಲಿ ರೋಷನ್‌ಬೇಗ್‌ರವರು ಹಿಂದೆ ಗೃಹಮಂತ್ರಿಯಾದಾಗಿನಿಂದ ಈ ಕುರಿತಾದ ಪ್ರಯತ್ನ ಸಾಗುತ್ತಿತ್ತು. ಕುಡಿಯುವ ನೀರಿನ ತೊಂದರೆಯಿಂದಾಗಿ ಅದನ್ನು ಟ್ರಾನ್ಸ್‌ಫರ್ ಮಾಡುವುದಕ್ಕಾಗಲಿಲ್ಲ. Ultimately, total ಆಗಿ ಶಿಫ್ಟ್ ಆಗಿರುವುದು ಒಳ್ಳೆಯ ಕೆಲಸ It is a good thing which has been done. ಈ ಜಾಗದ ಕುರಿತು ನನಗನ್ನಿಸುತ್ತದೆ: ಈ ಕುರಿತು ವಿಧೇಯಕ ತರುವ ಅವಶ್ಯಕತೆ ಇರಲಿಲ್ಲ. ಏಕೆಂದರೆ, ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರೊಂದಿಗೆ ಈಗತಾನೇ ನಾನು ಮಾತನಾಡುತ್ತಾ, ಇದಕ್ಕೆ ಕಾನೂನಿನ ಅವಶ್ಯಕತೆ ಏನಿದೆ ಎಂಬ ಬಗ್ಗೆ ಸಮಾಲೋಚಿಸಿದೆ. ಇದು after all, prisons Departmentನಿಂದ ಅಂದರೆ, How Department ನಿಂದ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿಗೆ ಲ್ಯಾಂಡ್ ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ. ಇದು 5-10 ಸಾವಿರ ಎಕರೆಗಳಷ್ಟು ಭೂಮಿ ಏನಲ್ಲ. This is only transferring land. ಉದಾಹರಣೆಗೆ, ನಿಮಗೆ ಗೊತ್ತಿರುವಂತೆ ಅನೇಕ ಸಂದರ್ಭಗಳಲ್ಲಿ ನೀವು ಎಜುಕೇಶನ್ ಡಿಪಾರ್ಟ್‌ಮೆಂಟ್‌ನಿಂದ ಅರ್ಬನ್ ಡೆವಲಪ್‌ಮೆಂಟ್‌ಗೆ ಟ್ರಾನ್ಸ್‌ಫರ್ ಮಾಡಿರುವುದೂ ಇದೆ. ಅದಕ್ಕೋಸ್ಕರ, ನನಗನ್ನಿಸುತ್ತದೆ: ನಿಮ್ಮ ಸರ್ಕಾರದ ಹೆಗ್ಗಳಿಕೆಯ, ವೈಭವೀಕರಣಕ್ಕೋಸ್ಕರ ಈ ಕಾನೂನನ್ನು ತಂದಿದ್ದೀರೇನೋ! ನನಗಂತೂ ಅರ್ಥವಾಗುತ್ತಿಲ್ಲ. ದಯಮಾಡಿ ನೀವೇ ಹೇಳಬೇಕು. ಅಥವಾ ಮುಂದೆ ಯಾರಾದರೂ ಬಂದು ಇನ್ನೊಂದು ಸರ್ಕಾರಿ ಆಜ್ಞೆ ಮಾಡಿ ಇದನ್ನು ಬೇರೆ ಇಲಾಖೆಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡು ಕಮರ್ಷಿಯಲ್ ಆಗಿ ಮಾಡಿಕೊಳ್ಳುತ್ತಾರೆಂಬ ಸದುದ್ದೇಶವಿಟ್ಟುಕೊಂಡು ಮಾಡಿದರೆ ಬಹಳ ಸಂತೋಷ. ಆ ದೃಷ್ಟಿಯಿಂದ ಮಾಡಿದ್ದರೆ ನಿಜವಾಗಿಯೂ ನೀವು ಅಭಿನಂದನೀಯರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ, ವಿರೋಧ ಪಕ್ಷದಲ್ಲಿರುವ ನಾವೆಲ್ಲರೂ ಇಕ್ಕಳಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ನಿಮಗೆ ನಾವು ಸಾರಾಸಗಟಾಗಿ ಲೈಸೆನ್ಸ್ ಕೊಡುವುದಕ್ಕಾಗುವುದಿಲ್ಲ. ಮಾತನಾಡುವಾಗ ನಮ್ಮ ಹಿಡಿತ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಮುಂದೆ ಏನೇನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ಬೆಂಗಳೂರು ನಗರದ ಬಗ್ಗೆ ನಿಜವಾಗಿಯೂ ಅತ್ಯಂತ ಕಾಳಜಿ ಇಟ್ಟುಕೊಂಡಿರುವ ಶಾಸಕರಾಗಿದ್ದು, ಅವರು ಒಂದು ಮಾತು ಹೇಳಿದರು. ಏನೆಂದರೆ, ಚೆಂಡು, ಗೋಲಿ ಆಡುತ್ತಿದ್ದ ಮೈದಾನವನ್ನು ಈಗ ಟೆನ್ನಿಸ್ ಕೋರ್ಟ್ ಮಾಡುತ್ತಿದ್ದಾರೆಂದು. ಇದನ್ನು ಹೇಗೆ ಅಪ್ರೀಷಿಯೇಟ್ ಮಾಡುವುದು? ಅಲ್ಲಿ ಯಾರಾದರೂ ಟೆನ್ನಿಸ್ ಆಟ ಆಡುವುದಕ್ಕಾಗುತ್ತದೆಯೇ? ಐಟಿ, ಬಿಟಿಯಲ್ಲಿರುವವರ ಮಕ್ಕಳು ಮಾತ್ರ ಟೆನ್ನಿಸ್ ಆಟ ಆಡುವುದಕ್ಕಾಗುವುದು. ಕೂಲಿ ಮಾಡುವವರ, ಬಡವರ ಮಕ್ಕಳು, ಬಾಟಲ್, ನ್ಯೂಸ್ ಪೇಪರ್, ಜಲ್ಲಿ ಆಯುವವರು ಇಂತಹ ಹುಡುಗರಿಗೆ ಆಟವಾಡಲು ಮೈದಾನ ಇದ್ದುದ್ದು. ಅದನ್ನು ಇವರು ಟೆನ್ನಿಸ್ ಕೋರ್ಟ್ ಮಾಡಿದರು. ಆ ರೀತಿಯ ಉದ್ದೇಶ ಇದರಲ್ಲೇನಾದರೂ ಇದೆಯೇ? ಏಕೆಂದರೆ, ಕಳೆದ ನಾಲ್ಕು ವರ್ಷಗಳಲ್ಲಿ ನಿಮ್ಮ ಸರ್ಕಾರದ ಪಾರದರ್ಶಕತೆಯನ್ನು ನೋಡಿದ್ದು, ಅನೇಕ ಸಂದರ್ಭಗಳಲ್ಲಿ ದುರುದ್ದೇಶಗಳು ಕಂಡಿರುವುದಿದೆ. ಅದರಿಂದಾಗಿ ನಾನು ಇದನ್ನು With that fond that this will not be some time back, some time later on it will not be withdrawn ಎಂದು ನಾವು ಇದನ್ನು ಬೆಂಬಲಿಸುತ್ತಿದ್ದೇವೆ.

+ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಛೇರ್ಮನ್‌ರವರೆ, ಬಹುಶಃ ಕರ್ನಾಟಕದಲ್ಲಿ ಅದರಲ್ಲೂ ಕೂಡ ಬೆಂಗಳೂರು ಮಹಾನಗರದಲ್ಲಿ ಅತ್ಯಂತ ಬೆಲೆ ಬಾಳುವ ಒಂದು ಜಾಗವನ್ನು ಸಾರ್ವಜನಿಕರ ಉಪಯೋಗಕ್ಕೆ ಅಂದರೆ, ಅದನ್ನೊಂದು ಪಾರ್ಕ್ ಆಗಿ ಪ್ರಿಸರ್ವ್ ಮಾಡುವ ನಿರ್ಧಾರವನ್ನು ಇವೊತ್ತು ಸರ್ಕಾರ ಏನು ತೆಗೆದುಕೊಂಡಿದೆ. ಇದರ ಬಗ್ಗೆ ಸರ್ಕಾರಕ್ಕೆ ಸಾರ್ವಜನಿಕರ ಬಗೆಗಿರುವ ಕಾಳಜಿ ಮತ್ತು ಇಚ್ಛಾಶಕ್ತಿಯನ್ನು ಎತ್ತಿ ತೋರಿಸುತ್ತದೆಂದು ನಾನು ಭಾವಿಸುತ್ತೇನೆ. ಅತ್ಯಂತ ಬೆಲೆ ಬಾಳುವ ಪ್ರದೇಶ ಇದಾಗಿದೆ. ಬೆಂಗಳೂರಿನ ಹೃದಯ ಭಾಗದಲ್ಲಿರುವ ಈ ಪ್ರದೇಶವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ, ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಇವೊತ್ತು ಪಾರ್ಕ್ ಆಗಿ ಡೆವಲಪ್ ಮಾಡುವ ಉದ್ದೇಶದಿಂದ ಕಾನೂನಿಗೆ ತಿದ್ದುಪಡಿ ತಂದಿರುವುದು ಅತ್ಯಂತ ಸ್ವಾಗತಾರ್ಹವಾದ ಕ್ರಮವಾಗಿದೆ. ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರು ಒಂದು ವಿಷಯ ಪ್ರಸ್ತಾಪ ಮಾಡಿದರು. ಇದಕ್ಕೆ ತಿದ್ದುಪಡಿ ಬೇಕಾಗಿತ್ತೇ? ಸರ್ಕಾರಿ ಆದೇಶ ತಂದು ಮಾಡಬಹುದಿತಲ್ಲಾ ಎನ್ನುವ ಅವರ ಅಭಿಪ್ರಾಯಕ್ಕೆ ನಾನು ನನ್ನ ಭಿನ್ನಾಭಿಪ್ರಾಯ ವ್ಯಕ್ತಪಡಿಸುತ್ತಾ ಪ್ರಮುಖವಾಗಿ ಸೆಕ್ಷನ್ 2ಕ್ಕೆ ಅಮೆಂಡ್‌ಮೆಂಟ್ ತರುವುದರ ಮೂಲಕ ಸರ್ಕಾರ ಇಲ್ಲಿ ಒಂದು ಘೋಷಣೆ ಮಾಡುತ್ತದೆ. Any land with or without building earmarked by the State Government for development and preservation as parks. This land is exclusively preserved and meant for developing parks. That is the sole purpose. ಬಹುಶಃ ನೀವು ಹೇಳುವ ರೀತಿಯಲ್ಲಿ ಒಂದು ಸರ್ಕಾರಿ ಆದೇಶ ಹೊರಡಿಸುವ ಮೂಲಕ ಹಸ್ತಾಂತರಗೊಳಿಸಿದರೆ, ಇದು ಸರ್ಕಾರದ ಪ್ರಾಪರ್ಟಿಯಾಗಿರುವುದರಿಂದ ಬೇರೆ ಇಲಾಖೆಗೆ ಅಥವಾ ಹಾರ್ಟಿಕಲ್ಚರ್ ಇಲಾಖೆಗೆ ಬೇರೆ ಸರ್ಕಾರಿ ಆದೇಶದ ಮುಖಾಂತರ ನೀವು ಹಸ್ತಾಂತರಿಸಿದರೆ, ಇದನ್ನು ತಿದ್ದುಪಡಿ ಕಾನೂನಿನಲ್ಲಿ ಪಾರ್ಕ್ ಆಗಿ ಪ್ರಿಸರ್ವ್ ಮಾಡುತ್ತೇವೆಂಬ ಸರ್ಕಾರದ ಉದ್ದೇಶವೇನಿದೆ, ಅದು ಈಡೇರುವುದಿಲ್ಲ. ಮತ್ತು ನಾಳೆ ಅದನ್ನು ಯಾವ ಉದ್ದೇಶಕ್ಕಾದರೂ ಬದಲಾಯಿಸಿಕೊಳ್ಳಬಹುದು. But here, by Government committing itself and by declaring that this property is excludively preserved for the purpose of development of the part, thereby the Government has committed itself. ಮುಂದೆ ಯಾವತ್ತಾದರೂ ಕೂಡ ಇದರ ಸ್ವರೂಪ ಬದಲಾಯಿಸಲು ಯಾರೇ ಪ್ರಯತ್ನಿಸಿದರೂ ಕೂಡ, ಅಡ್ಡಿಪಡಿಸಿದರೂ ಕಾನೂನಿನಡಿ ಯಾವುದೇ ಸಾರ್ವಜನಿಕರು ಬೇಕಾದರೂ ಚಾಲೆಂಜ್ ಮಾಡಬಹುದು. ಯಾವ ಉದ್ದೇಶಕ್ಕೋಸ್ಕರ ಈ ಜಾಗವನ್ನು ಮುಡಿಪಾಗಿಡಬೇಕಿತ್ತೋ ಆ ಉದ್ದೇಶವನ್ನು ಬದಲಾಯಿಸುವ ಪ್ರಯತ್ನ ಸರ್ಕಾರದಿಂದ ನಡೆಯುತ್ತಿದೆಯೆಂದು any citizen of this country or Bangalore city can question it. You can get any change of idea to this state. ಅದು ಒಂದು ಎರಡನೆಯದಾಗಿ, ಮತ್ತೊಬ್ಬ ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ಪ್ರಸ್ತಾಪಿಸಿರುವುದಕ್ಕೆ ಹೇಳುವುದಾದರೆ, ಇವೊತ್ತು ತಿದ್ದುಪಡಿ ಮಸೂದೆ ಮೇಲೆ ಚರ್ಚೆ ನಡೆಯುತ್ತಿದೆ. ಇದನ್ನು ಪುನಃ ಬೇರೆ ಉದ್ದೇಶಕ್ಕೋಸ್ಕರ, ಮಂತ್ರಿಗಳಿಗೆ ಕಟ್ಟಡ ಕಟ್ಟುವುದಕ್ಕೋಸ್ಕರ ಪ್ರಿಸರ್ವ್ ಮಾಡಬೇಕೆಂಬ ಉದ್ದೇಶ ಇದರಲ್ಲಿ ಪ್ರಸ್ತಾಪವಾಗುವುದು ಒಳ್ಳೆಯದಲ್ಲ. ಮೂರನೆಯದಾಗಿ, ಇವೊತ್ತು ಪರಿಸರ ಮಾಲಿನ್ಯ ಕಾಪಾಡಬೇಕೆಂಬ ದೃಷ್ಟಿಯಿಂದ ಇಂತಹ ಬೆಲೆ ಬಾಳುವ ಆಸ್ತಿಯನ್ನು ಒಂದು

ಪಾರ್ಕ್ ಆಗಿ ಪ್ರಿಸರ್ವ್ ಮಾಡಬೇಕೆನ್ನುವ ಸರ್ಕಾರದ ಸದುದ್ದೇಶಕ್ಕೆ ಪುನಃ ಮಂತ್ರಿಗಳು ಕಟ್ಟಡ ಕಟ್ಟಿ ಪರಿಸರ ಮಾಲಿನ್ಯ ಮಾಡತಕ್ಕಂತ ಆದೇಶ.....ಏಕೆಂದರೆ, ಮಂತ್ರಿಗಳ ಮನೆಗಳು ಬಂತೆಂದರೆ ಅಲ್ಲಿ ಪರಿಸರ ಮಾಲಿನ್ಯವಾಗುತ್ತದೆ. ಆದುದಿರಂದ, ಸರ್ಕಾರದ ಸದುದ್ದೇಶವೇನಿದೆ......

ಶ್ರೀ ಆರಗ ಜ್ಞಾನೇಂದ್ರ : ಅಲ್ಲಿ ಮಂತ್ರಿಗಳ ಮನೆಗಳು ಬರುವುದರಿಂದ ಮಾಲಿನ್ಯವುಂಟಾಗುತ್ತದೆಂದು ನೀವು ಒಪ್ಪಿಕೊಂಡರೆ ಅದರ ಬಗ್ಗೆ ನನ್ನದೇನೂ ತಕರಾರಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ನಿಮ್ಮ ನಿಮ್ಮ ಭಾವನೆಗಳ ರೀತಿಯಲ್ಲಿ ಹಾಗನಿಸುತ್ತದೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ಸಾರ್ವಜನಿಕವಾಗಿ ಬಹಳ ಅತ್ಯುತ್ತಮವಾದ, ಇಂತಹ ಒಂದು ಬೆಲೆ ಬಾಳುವಂಥ ಆಸ್ತಿಯನ್ನು ಒಂದು ಪಾರ್ಕ್ ಆಗಿ ಮಾಡುವ ಸರ್ಕಾರದ ಸದುದ್ದೇಶವೇನಿದೆ, ನಿರ್ಧಾರವೇನಿದೆ, ನಿಜವಾಗಿಯೂ ಸಾರ್ವಜನಿಕ ಹಿತದೃಷ್ಟಿಯಿಂದ ಕೈಗೊಂಡಿರುವ ನಿರ್ಧಾರವಾಗಿರುವುದರಿಂದ ಇದನ್ನು ನಾವೆಲ್ಲರೂ ಸ್ವಾಗತಿಸಬೇಕಾಗಿದೆ. ತಿದ್ದುಪಡಿಗೆ ನಾನು ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಛೇರ್ಮನ್‌ರೆ, ಉದ್ದೇಶ ಬಹಳ ಒಳ್ಳೆಯದಿದೆ. ನಾವೆಲ್ಲರೂ ಸ್ವಾಗತಿಸುತ್ತೇವೆ. ಆದರೆ, ಇದರಲ್ಲಿ ತಾಂತ್ರಿಕ ಸಮಸ್ಯೆ ಇದೆಯೆಂದು ನಾನು ಅಂದುಕೊಂಡಿದ್ದೇನೆ. At present this land belongs to the Home Department. Unless it is transferred to Horticulture Department, the Horticulture department cannot notify this land. First, it has to be transferred to Hortticulture Department, then Horticulture department has to notify it as a park. At present, it is still with the Home Department. ಅದರ ಮೇಲೆ ಇವೊತ್ತು ಕಮೀಷನರ್‌ರವರು ಹೇಳಿದ್ದಾರೆ. ಇಲ್ಲದಿದ್ದರೆ, ಹಾರ್ಟಿಕಲ್ಚರ್‌ಗೆ ಸಂಬಂಧಿಸಿದ ಲ್ಯಾಂಡ್‌ಗೆ ಅವರು ಹೇಳುವ ಅವಶ್ಯಕತೆ ಇರಲಿಲ್ಲ. ಆದುದರಿಂದ, ಮೊದಲು ತಾವು ತಮ್ಮ department to department ವರ್ಗಾವಣೆ ಮಾಡಿಕೊಂಡ ನಂತರ ಇದನ್ನು ಪಾರ್ಕ್ ಆಗಿ ನೀವು ಆ್ಯಕ್ಟ್ ಮುಖಾಂತರ ತರುವುದು ಬಹಳ ಒಳ್ಳೆಯದು. ಇದರ ಬಗ್ಗೆ ತಾವು ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ (ತಿಕೋಟಾ) : ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಹೇಳಿರುವಂತೆ ನನ್ನ ಪಾಯಿಂಟ್ ಸಹ ಅದೇ ಆಗಿದೆ. ಏಕೆಂದರೆ, ನಮ್ಮಲ್ಲಿ ಒಂದು ಸಲು ಸಮಸ್ಯೆ ಬಂದಿತ್ತು. ಬಿಜಾಪುರ ಕೇಂದ್ರ ಕಾರಾಗೃಹದಲ್ಲಿ ಒಂದು ಫೈರಿಂಗ್ ಪಿಚ್ ಇತ್ತು ಅದು ಊರಿನ ಮಧ್ಯಕ್ಕೆ ಬಂತೆಂದು ನಾವು ಊರಿನ ಹೊರಗಡೆ ಶಿಫ್ಟ್ ಮಾಡಿದೆವು. ಆ ಜಾಗವನ್ನು ಯೂತ್ ಸರ್ವಿಸಸ್ ಅಂಡ್ ಸ್ಪೋರ್ಟ್ಸ್ ಡಿಪಾರ್ಟ್‌ಮೆಂಟಿಗೆ ಒಂದು ವಲೋಡ್ರಮ್ ಮಾಡುವುದಕ್ಕೆ ಕೊಡಿ ಎಂಧು ಹೇಳಿದ್ದರೂ ಸುಮಾರು ಐದು ವರ್ಷಗಳಿಂದಲೂ ಸಂಬಂಧಪಟ್ಟ ಫೈಲ್ ಅಲ್ಲಿಂದಿಲ್ಲಿಗೆ ಓಡಾಡುತ್ತಿದೆ. ಇದುವರೆವಿಗೂ ಆ ಜಾಗವನ್ನು ಹೋಮ್ ಡಿಪಾರ್ಟ್‌ನವರು ಬಿಟ್ಟುಕೊಟ್ಟಿಲ್ಲ. It is a Home Department property. ನಾವು ಕೊಡುವುದಕ್ಕಾಗುವುದಿಲ್ಲ. It has to go to Cabinet ಎಂದು ನಮಗೇ ರಿಮಾರ್ಕ್ಸ್ ಬರೆದಿದ್ದಾರೆ. ಅದಕ್ಕೋಸ್ಕರ, ನಿಮ್ಮಲ್ಲೂ ಕೂಡ ಈ ಪ್ರಶ್ನೆ ಏಕೆ ಉದ್ಭವವಾಗುವುದಿಲ್ಲ? ನೀವೇನಾದರೂ ಆ ತರಹ ಮಾಡಿದರೆ ನನ್ನದೊಂದು

ವಿನಂತಿ ಇದೆ. ನಿನ್ನೆ ಕ್ರೀಡಾ ನೀತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಘೋಷಣೆಗಳನ್ನು ಪ್ರಕಟಿಸಿದ್ದಾರೆ. Suppose, ಈ ಬಿಲ್ ಬರುವುದರಿಂದ ನಮಗೂ ಉಪಯೋಗವಾಗುತ್ತದೆ. ಏಕೆಂದರೆ, ಯೂತ್ ಸರ್ವೀಸಸ್ ಅಂಡ್ ಸ್ಪೋರ್ಟ್ಸ್ ಡಿಪಾರ್ಟ್‌ಮೆಂಟ್‌ನವರು ಬಿಜಾಪುರದಲ್ಲಿ ವೆಲೋಡ್ರಮ್‌ಗೆ ಒಂದು ಸೈಟ್ ಬೇಕೆಂದು ಮಾನ್ಯ ಮಂತ್ರಿಗಳನ್ನು ಕಳೆದ ಮೂರು ವರ್ಷಗಳಿಂದಲೂ ಸತತವಾಗಿ ಕೇಳುತ್ತಿದ್ದರೂ "ಮಾಡುತ್ತೇವೆ, ಮಾಡುತ್ತೇವೆ" ಎಂದು ಹೇಳುತ್ತಲೇ ಬರುತ್ತಿದ್ದಾರೆ. ಆದರೆ, ಇದುವರೆವಿಗೂ ಟ್ರಾನ್ಸ್‌ಫರ್ ಆಗುತ್ತಿಲ್ಲ. ದಯಮಾಡಿ ಈ ಬಿಲ್ ಬರುವುದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಆ ರೀತಿ ಏನಾದರೂ ಮಾನ್ಯ ಸೋಮಶೇಖರ್‌ರವರು ಹೇಳಿದಂತೆ ಟೆಕ್ನಿಕಲ್ ಪಾಯಿಂಟ್ ಬಗ್ಗೆ ಏನಾದ್ರೂ ತೊಂದರೆ ಇದ್ದರೆ, ದಯಮಾಡಿ ಕ್ಲಾರಿಫೈ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಛೇರ್‌ಮನ್‌ರವರೆ, ನಾನು ಅದನ್ನೇ ಯೋಚನೆ ಮಾಡಿದ್ದೆ. ಇದು Cart before the Horse or Horse before the cart ಸಮಸ್ಯೆಯಾಗಿದೆ. ವರ್ಗಾವಣೆ ಮೊದಲು ಆಗಿ ಅನಂತರ ಕಾನೂನು ಬರಬೇಕಾಗಿತ್ತೋ ಅಥವಾ ಕಾನೂನನ್ನು ತಂದು ವರ್ಗಾವಣೆ ಮಾಡಿದ್ದರೆ ಸಾಕಾಗುತ್ತಿತ್ತೋ ಏನೋ ಅದರ ಬಗ್ಗೆ ಮಾನ್ಯ ಕಾನೂನು ಸಚಿವರು ಹೇಳಬೇಕಾಗುತ್ತದೆ. ಪ್ರಾಯಶಃ ಕಾನೂನನ್ನು ಮಾಡಿದಮೇಲೆ ವರ್ಗಾವಣೆ ಮಾಡಿದರೆ ಸಾಕಾಗುತ್ತದೆ. ಆದರೆ, ಮಾನ್ಯ ಮುದ್ದಹನುಮೇಗೌಡರು ಇದನ್ನು ಸಮರ್ಥನೆ ಮಾಡಿಕೊಳ್ಳುವಾಗ, he differed with Mr. Scindia. I beg to differ with him. ಕಾರಣ ಹೇಳುತ್ತೇನೆ. Government orderನ್ನು ಮಾಡಿ ವರ್ಗಾವಣೆ ಮಾಡಿಕೊಂಡರೆ, ಅದನ್ನು ಬದಲಾವಣೆ ಮಾಡಲು ಆಗುವುದಾದರೆ.... ಇವತ್ತು ನೀವು ಕಾನೂನನ್ನು ಮಾಡುತ್ತೀರಿ, ನಾಳೆ ದಿವಸ ಪುನಃ ಇನ್ನೊಂದು ತಿದ್ದುಪಡಿಯನ್ನು ತಂದು ಪುನಃ ವರ್ಗಾವಣೆಯನ್ನು ಮಾಡಲು ಸಾಧ್ಯವಿದೆ. ಇಲ್ಲದಿದ್ದರೆ ವಿಥ್‌ಡ್ರಾನೂ ಮಾಡಬಹುದು. ಆದ್ದರಿಂದ, that is not the question. ಸರ್ಕಾರ ಒಳ್ಳೆಯ ಉದ್ದೇಶದಿಂದ ತೋಟಗಾರಿಕಾ ಇಲಾಖೆಗೆ ಅದನ್ನು ತೆಗೆದುಕೊಂಡು ಉದ್ಯಾನವನವನ್ನಾಗಿ ಮಾಡಿ... ಆದರೆ ಇನ್ನೊಂದು ಸಮಸ್ಯೆ ಇದೆ, ಲಾಲ್‌ಬಾಗ್ ರೀತಿ ಬೇರೆ ಒಂದು ಇಲಾಖೆಗೆ ವರ್ಗಾವಣೆಯನ್ನು ಮಾಡುತ್ತಾರೆ, ಅದು ಆಗಬೇಕಾಗುತ್ತದೆ. ಅವರಿಗೇ ಮೆನ್‌ಟೇನ್ ಮಾಡಲು ಆಗುತ್ತದೋ ಅಥವಾ ಪುನಃ ಅದನ್ನು ಬೇರೆ ಸಂಸ್ಥೆಗೆ, ಇಲಾಖೆಗೆ ವರ್ಗಾವಣೆ ಮಾಡುತ್ತಾರೋ ಎನ್ನುವುದನ್ನು ಮಾನ್ಯ ಸಚಿವರಿಂದ ಕೇಳಬಯಸುತ್ತೇನೆ. ಏಕೆಂದರೆ, ಈಗಾಗಲೇ ಒಂದನ್ನು BDAಗೆ ಕೊಟ್ಟಿದ್ದನ್ನು ನೋಡಿದಾಗ ನಿಮ್ಮ ಇಲಾಖೆಯಲ್ಲಿ ಒಂದು ಗಾರ್ಡನ್ ಅನ್ನು ಮೆನ್‌ಟೇನ್ ಮಾಡಲು ಶಕ್ತಿ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದೀರಿ. ಇಲ್ಲದಿದ್ದರೆ ನಿಮ್ಮ ಇಲಾಖೆಯಲ್ಲೇ ಲಾಲ್‌ಬಾಗ್‌ನ್ನು ಇಟ್ಟು ಕೊಳ್ಳುತ್ತಿದ್ದಿರಿ. BDAಗೆ ವರ್ಗಾವಣೆಯನ್ನು ಮಾಡುತ್ತಿರಲಿಲ್ಲ. ಒಂದು ವೇಳೆ ನಿಮಗೆ ಮಾಡಲು ಆಗದಿದ್ದರೆ ಈಗಲೇ ಯಾವ ಇಲಾಖೆಗೆ ಕೊಟ್ಟು ಮಾಡಿಸುತ್ತೀರಿ? BDA ಅಥವಾ ಇನ್ಯಾವ ಇಲಾಖೆಗೆ ಕೊಟ್ಟು ಮಾಡಿಸುತ್ತೀರಿ ಎಂಬ ಬಗ್ಗೆ ಈಗಲೇ ಒಂದು ತೀರ್ಮಾನವನ್ನು ತೆಗೆದುಕೊಂಡು ತಿದ್ದುಪಡಿಯಲ್ಲೇ ಅದನ್ನು ತಂದುಬಿಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಛೇರ್‌ಮನ್‌ರವರೆ, ಇಲಾಖೆಯಿಂದ ಇಲಾಖೆಗೆ ವರ್ಗಾವಣೆ ಮಾಡುವುದಕ್ಕೆ ಕಾನೂನು ಏಕೆ ಬೇಕಾಗಿತ್ತು ಎಂದು ಕೆಲವರು ಶಾಸಕ ಸ್ನೇಹಿತರುಗಳು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರದ ಸ್ಪಷ್ಟತೆ ಇದೆ. ಕ್ಯಾಬಿನೆಟ್‌ಗೆ

ಮಾತ್ರ ಬಂದು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವರ್ಗಾವಣೆ ಮಾಡಲು ಸರ್ಕಾರಕ್ಕೆ ಅಧಿಕಾರ ಇದ್ದರೂ ಸಹ ಇದನ್ನು ತಾರತಮ್ಯ ಮಾಡದೆ ಉದ್ಯಾನವನವನ್ನು ಬೇರೆಯದಕ್ಕೆ ಉಪಯೋಗಿಸಬಾರದು ಎಂದು ಸಂಕಲ್ಪವೇನು ಸರ್ಕಾರದ್ದು ಇದೆ ಅದನ್ನು ಈ ಕಾನೂನಿನ ಮೂಲಕ, ಬಿಲ್ಲಿನ ಮೂಲಕ ಸರ್ಕಾರ ವ್ಯಕ್ತಪಡಿಸಿದೆ. ಮಾನ್ಯ ಸ್ನೇಹಿತರಾದಂಥ ಜಯಪ್ರಕಾಶ್‌ಹೆಗ್ಡೆಯವರು ಅಲ್ಲೇ ಮಾಡಬಹುದಿತ್ತು. ಕಾನೂನು ತಂದರೂ ಬದಲಾವಣೆ ಮಾಡಿಕೊಳ್ಳಬಹುದೆಂದು ಹೇಳಿದರು. ಕಾನೂನು ಆದ ನಂತರ ಕ್ಯಾಬಿನೆಟ್‌ನಲ್ಲಿ ಬೇರೆ ಇಲಾಖೆಗೆ ಇದನ್ನು ಹಸ್ತಾಂತರ ಮಾಡಲು ಬೇರೆ ಉದ್ದೇಶಕ್ಕೆ ಉಪಯೋಗಿಸಲು ಬರಲಾರದು. ಪುನಃ ಅದು ಆ ರೀತಿ ಆಗಬೇಕಾದರೆ ಸದನದ ಮುಂದೆ ಬರಬೇಕು. ಮತ್ತೆ ಕಾನೂನಿಗೆ ತಿದ್ದುಪಡಿಯಾಗಬೇಕಾಗುತ್ತದೆ. ಸದನದ ಎಲ್ಲಾ ಸದಸ್ಯರ ಅಭಿಪ್ರಾಯದೊಂದಿಗೆ ಕಾನೂನಿನ ಬದಲಾವಣೆಯಾಗಬೇಕು. ಮಂತ್ರಿಮಂಡಲಕ್ಕೆ ಇದರ ಬದಲಾವಣೆ ಮಾಡಲು ಅಧಿಕಾರವಿಲ್ಲ. ಆ ರೀತಿ ಒಳ್ಳೆಯ ಸದುದ್ದೇಶದಿಂದ ಈ ಬಿಲ್ಲನ್ನು ತಂದಿದ್ದಾರೆ. ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಛೇರ್‌ಮನ್‌ರವರೆ, ಬಹುಶಃ ಬಹಳ ಉತ್ತಮವಾದ ಉದ್ದೇಶದಿಂದ ತಂದಂಥ ಬಿಲ್ಲು. ಇದರ ಮೇಲೆ ಬಹಳ ಚರ್ಚೆ ನಡೆಯಿತು. ಬೆಂಗಳೂರಿನ ಪರಿಸ್ಥಿತಿಯನ್ನು ನೋಡಿದರೆ, ಇದು ಈಗಲೂ ಉದ್ಯಾನನಗರ ಎಂದು ಅನ್ನಿಸಿಕೊಂಡಿದೆ. ದುರ್ದೈವದಿಂದ ಕೆಲವು ಉದ್ಯಾನಗಳು ಹಾಳಾಗಿರುವುದು ಗೊತ್ತಿದೆ. ಕೆಲವು ಕಡೆ ಕಟ್ಟಡಗಳನ್ನು ಮಾಡಲು ಪ್ರಾರಂಭ ಮಾಡಿದ್ದಾರೆ. ಈಗಾಗಲೇ ಬೆಂಗಳೂರಿನಲ್ಲಿ ನಾವು ತಿಳಿದಂತೆ ಕೆಲವು ಚಿಕ್ಕ ಮಕ್ಕಳಿಗೆ, ಹತ್ತು ಹನ್ನೆರಡು ವರ್ಷದ ಮಕ್ಕಳಿಗೆ ಅಸ್ತಮಾ ರೋಗ ಬರುತ್ತದೆಂದು ಸರ್ವೆ ಮಾಡಿದಾಗ ಮಾಹಿತಿ ಬಂದಿದೆ. ಅಂಥ ಕೆಟ್ಟ ಪರಿಸ್ಥಿತಿ ಸಣ್ಣ ಮಕ್ಕಳಿಗೆ ಅಸ್ತಮಾ ಬರುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಈ ಬಿಲ್ಲನ್ನು ತಂದದ್ದು ಯೋಗ್ಯವಾಗಿದೆ. ಆದರೆ ಇದರ ಬಗ್ಗೆ ಇಲ್ಲಿ ಬಹಳ ಚರ್ಚೆ ನಡೆಯಿತು. ಮಾನ್ಯ ಸುರೇಶ್‌ಕುಮಾರ್‌ರವರು, ಅದನ್ನು ಪೋಲಿಸ್‌ಕಮಿಷನರ್‌ರವರು ಸತ್ಯಾಗ್ರಹ ಮಾಡುವ ಜಾಗ ಮಾಡಬೇಕೆಂದು ಹೇಳಿದ್ದಾರೆಂದು ಹೇಳಿದರು. ಅಂದರೆ ಸರ್ಕಾರವೇ ಸತ್ಯಾಗ್ರಹ ಮಾಡಿಬನ್ನಿ ಎಂದು ಹೇಳುವುದು. ಸತ್ಯಾಗ್ರಹ ಮಾಡುವುದಕ್ಕೇ ಒಂದು ಜಾಗ ಮಾಡಿಬಿಟ್ಟರೆ, ನೀವೆಲ್ಲಾ ಇಲ್ಲಿಗೆ ಬಂದೇ ಸತ್ಯಾಗ್ರಹ ಮಾಡಿಯೇ ಕೆಲಸ ಮಾಡಿಕೊಂಡು ಹೋಗಿ ಎಂದು ಹೇಳಿದಂತಾಗುತ್ತದೆ. ಅದಕ್ಕಂತೂ ಎಂದೂ ಒಪ್ಪಬಾರದು. ಬಹುಶಃ ಸತ್ಯಾಗ್ರಹವೇ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಜನರ ಬೇಡಿಕೆಗಳು ಏನಿರುತ್ತವೆ ಅದರ ಬಗ್ಗೆ ವಿಚಾರ ಮಾಡಿಕೊಂಡು ಹೋದರೆ ಸತ್ಯಾಗ್ರಹಗಳು ಕಡಿಮೆಯಾಗುತ್ತದೆ. ಅನಿವಾರ್ಯ ಬಂದಾಗ ಊರಿನ ಹೊರಗೆ ನಿಲ್ಲಿಸಿ ಮಾಡಿಕಳುಹಿಸುವುದರಲ್ಲಿ ತಪ್ಪೇನಾಗುವುದಿಲ್ಲ. ಇದನ್ನು ನಾನು ಈಗಾಗಲೇ ನೋಡಿದೆ. ನಮ್ಮ ಕಾನೂನು ಇಲಾಖೆಯವರದ್ದು ಒಂದು, ಏನೆಂದರೆ, ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ಆರ್ಥಿಕ ವೆಚ್ಚ ತಗಲುವುದಿಲ್ಲ. ಅಂದರೆ ಏನು ಇದಕ್ಕೆ ವೆಚ್ಚವೇ ಬರುವುದಿಲ್ಲವೇ? ಈ ಉದ್ಯಾನವನ ನಿಮ್ಮ ಕೈಯಲ್ಲಿ ಬಂತು ಎಂದರೆ, ಮುಂದೆ ಇದಕ್ಕೆ ವೆಚ್ಚ ಬರುತ್ತದೆ. ಸರ್ಕಾರ ಇದಕ್ಕೆ ಪ್ರಾವಿಜನ್ ಮಾಡಬೇಕಾಗುತ್ತದೆ. ಸಹಜವಾಗಿ ಬರೆಯುವುದನ್ನು ಎಲ್ಲದಕ್ಕೂ ಬರೆಯುತ್ತಾರೆ. ಇದಕ್ಕೆ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಬೇಕಾಗುತ್ತದೆ. ಹಣವನ್ನು ಇಡಬೇಕಾಗುತ್ತದೆ. ಸುಮ್ಮನೆ ಇದನ್ನು ತೆಗೆದುಕೊಂಡು ಇಟ್ಟುಕೊಂಡರೆ ಮತ್ತೆ ಯಾವುದೇ ಅರ್ಥ ಬರುವುದಿಲ್ಲ. ನಿಮ್ಮ ಇಲಾಖೆಯನ್ನು

ನಾವು ನೋಡಿದ್ದೇವೆ. ಈ ಇಲಾಖೆಯಲ್ಲೇ ಹೆಚ್ಚು ದುಡ್ಡು ಇಲ್ಲ. ನಮ್ಮಲ್ಲೊಂದು ಈ ಇಲಾಖೆಯವರ ತೋಟ ಇದೆ. ಆ ತೋಟದಲ್ಲಿ ಸುಮಾರು ಲಕ್ಷಾನುಗಟ್ಟಲೆ ಹಣವನ್ನು ಖರ್ಚುಮಾಡಿದ್ದಾರೆ. ಹತ್ತಿಪ್ಪತ್ತು ಸಾವಿರ ಹಣವನ್ನು ಖರ್ಚು ಮಾಡಿದರೆ ಹೊಳೆಯಿಂದ ನೀರು ಬರುತ್ತದೆ. ಆದರೆ, ಆ ತೋಟವೇ ಒಣಗಿಹೋಯಿತು. ಜಿಲ್ಲಾಪಂಚಾಯಿತಿಯಲ್ಲಿ ಅಷ್ಟೂ ಹಣ ಇಲ್ಲ. ಮೊನ್ನೆ ಇವರು ಜಿಲ್ಲಾಪಂಚಾಯಿತಿಯವರು ಯಾವಾಗ ಹಣವನ್ನು ಕೊಡುತ್ತಾರೆ ಆಗ ನೀರನ್ನು ಕೊಡುತ್ತೇವೆಂದು ಉತ್ತರ ಕೊಟ್ಟರು. ಸುಮ್ಮನೆ ಇದನ್ನು ಆ ಇಲಾಖೆಗೆ ಕೊಟ್ಟು ಕೆಲಸವನ್ನು ಮಾಡದಂತೆ ಮಾಡಿ ಇಡುವುದಕ್ಕಿಂತ ಇದಕ್ಕೆ ಹಣವನ್ನು ಎಷ್ಟು ಇಟ್ಟಿದ್ದೀರೆಂದು ಉತ್ತರದಲ್ಲಿ ಹೇಳಬೇಕಾಗುತ್ತದೆ. ಎಷ್ಟು ವರ್ಷದಲ್ಲಿ ಇದನ್ನು ಅಭಿವೃದ್ಧಿ ಮಾಡುತ್ತೀರಿ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಒಂದು ಉದ್ಯಾನವನವನ್ನು ಮಾಡಬೇಕಾದರೆ, ಕಬ್ಬನ್‌ಪಾರ್ಕ್‌ನ್ನು ನೂರು, ಐವತ್ತು ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ. ಇವತ್ತು ನೀವು ಮಾಡಿದರೆ ಇನ್ನೂ ಐವತ್ತು ವರ್ಷಗಳಾದ ಮೇಲೆ ಉದ್ಯಾನವನವಾಗುತ್ತದೆ ಸುಮ್ಮನೆ ಇದಕ್ಕೆ ದುಡ್ಡನ್ನು ಇಡದೆಯೇ ಇದಕ್ಕೆ ತಿದ್ದುಪಡಿಯನ್ನು ತಂದು ತಾವೇ ಇಟ್ಟುಕೊಂಡು ಕುಳಿತು, ನೀವೂ ಮಾಡುವಂತೆ ಇಲ್ಲ. ಜನರು ಮಾಡುವಂತೆ ಇಲ್ಲ ಎಂಬ ಲೆಕ್ಕಕ್ಕೆ ಬರಬಾರದು ಎಂಬುದು ನನ್ನ ಉದ್ದೇಶ. ಇದನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ಬನ್ನಿಕೋಡ್‌ರವರು ಮತ್ತು ಮುದ್ದಹನುಮೇಗೌಡರು ಇದನ್ನು ಬಹಳ ಸಮರ್ಥನೆ ಮಾಡಿ ಹೇಳಿದರು. ಸರ್ಕಾರ ಏನೂ ಮಾಡುವುದಿಲ್ಲ. ಎಲ್ಲವನ್ನೂ ವಿಧಾನಸಭೆಗೆ ತರಬೇಕೆಂದು ಹೇಳುತ್ತೀರಿ. ಕ್ಯಾಬಿನೆಟ್‌ಗೆ ಇಲ್ಲವೇ ಇಲ್ಲ. ವಿಧಾನಸಭೆ ಮುಗಿದ ಕೂಡಲೇ ಸುಗ್ರೀವಾಜ್ಞೆಯನ್ನು ಹೊರಡಿಸುತ್ತಾರೆ. ಆಗ ಇಲ್ಲಿ ಕೈಎತ್ತುವ ನೀವು ಇದ್ದೇ ಇರುತ್ತೀರಿ. ಪಾಸ್ ಆಗಿ ಹೋಗುತ್ತದೆ. ಅದಕ್ಕೆ ವಿಧಾನಸಭೆ ಏಕೆ ಬೇಕು? ಕ್ಯಾಬಿನೆಟ್‌ಗೆ ಸುಗ್ರೀವಾಜ್ಞೆ ಹೊರಡಿಸಲು ಅಧಿಕಾರ ಇದೆ ತಾನೇ? ಅದನ್ನು ಮಾಡಲು ಬರುತ್ತದೆ. ಒಳ್ಳೆಯ ಉದ್ದೇಶಕ್ಕೆ ತಂದಿದ್ದಾರೆ. ಇದರಲ್ಲಿ ಒಳ್ಳೆಯ ಉದ್ದೇಶವಿದೆ. ಈ ಉದ್ದೇಶ ಈಡೇರಬೇಕು. ಅದಕ್ಕೆ ಎಷ್ಟು ದುಡ್ಡನ್ನು ಇಡುತ್ತೀರಿ? ಇದನ್ನು ಎಷ್ಟು ದೊಡ್ಡದಾಗಿ ಅಭಿವೃದ್ಧಿ ಚಾಲನೆ ಮಾಡುತ್ತೀರಿ ಎಂಬುದನ್ನೂ ಇಲ್ಲಿ ಹೇಳಬೇಕಾಗುತ್ತದೆ. ಒಟ್ಟಿನಲ್ಲಿ ಇದನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರು ಹೇಳಿದ್ದು ಸರಿ. ಇದರಲ್ಲಿ ಖರ್ಚಿನ ಹಣದ ಬಗ್ಗೆಯೂ ಮೆನ್‌ಷನ್ ಮಾಡಬೇಕಾಗುತ್ತದೆ. ಹೈಡ್ ಪಾರ್ಕ್ ಬಗ್ಗೆ ಚರ್ಚೆಯಾಯಿತು. ತಾವು ಲಂಡನ್‌ಗೆ ಹೋಗಿದ್ದೀರೋ ಇಲ್ಲವೋ ಗೊತ್ತಿಲ್ಲ. ಲಂಡನ್‌ನಲ್ಲಿರುವ ಹೈಡ್ ಪಾರ್ಕ್‌ನ್ನು ಏನು ಮಾಡಿದ್ದಾರೆಂದರೆ.. ಇಲ್ಲಿ ಊರಲ್ಲೆಲ್ಲಾ ಹೈಡ್ ಪಾರ್ಕ್ ಇದೆ. ಅಲ್ಲಿ ಹೈಡ್ ಪಾರ್ಕ್ ಎಂದರೆ ಒಂದು ಮೈಕನ್ನು ಇಟ್ಟಿರುತ್ತಾರೆ. ಯಾರಿಗೆ ಪುರುಸೊತ್ತು ಇದ್ದಾಗ ಯಾರಿಗೆ ಬೇಕಾದರೂ ಹೋಗಿ ಬೈಯಬಹುದು. ಅದೇ ರೀತಿ ಇಲ್ಲಿ ಒಂದು ಹೈಡ್ ಪಾರ್ಕ್ ಮಾಡಿದರೆ!

ಶ್ರೀ ಬಿ.ಆರ್. ಯಾವಗಲ್ : ನಾವು ಅಲ್ಲಿಗೆ ಹೋಗಿದ್ದಾಗ ಅಂತಹದ್ದೇನು ಕಾಣಲಿಲ್ಲ!

ಶ್ರೀ ಎಂ. ಶಿವಣ್ಣ (ತೋಟಗಾರಿಕಾ ಸಚಿವರು) : ಮಾನ್ಯ ಛೇರ್‌ಮೆನ್‌ರವರೇ ಮೂಲವಾಗಿ ಮಾನ್ಯ ಎಲ್ಲಾ ಸದಸ್ಯರು ಸಹ ಈ ವಿಧೇಯಕವನ್ನು ತಂದಿರುವುದನ್ನು ಸ್ವಾಗತ ಮಾಡಿದ್ದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಮಾನ್ಯ ಸುರೇಶ್‌ಕುಮಾರ್‌ರವರು ಪ್ರಾರಂಭದಲ್ಲಿ ಮಾತನಾಡುತ್ತಾ, ಬೆಂಗಳೂರು ನಗರದಲ್ಲಿರತಕ್ಕಂಥ ಅನೇಕ ಉದ್ಯಾನವನಗಳಲ್ಲಿ ಕೆಲವು ಆಟದ ಮೈದಾನಗಳನ್ನು ಸೇರಿಸಿಕೊಂಡು ಮಾಡುತ್ತಿದ್ದೀರಿ ಎಂದು ಹೇಳಿದರು. ಒಂದನ್ನು ಸ್ಪಷ್ಟವಾಗಿ ತಮಗೆ

ಹೇಳಬಯಸುತ್ತಿದ್ದೇನೆ. ಬೆಂಗಳೂರು ನಗರದ ಹೃದಯ ಭಾಗದಲ್ಲಿರತಕ್ಕಂಥ ಈ 15 ಎಕರೆ ಪ್ರದೇಶವೇನಿದೆ ಅದನ್ನು ತೋಟಗಾರಿಕಾ ಇಲಾಖೆಗೆ ತೆಗೆದುಕೊಂಡು ಅಭಿವೃದ್ಧಿಪಡಿಸಲಾಗುತ್ತದೆ. ಮಾನ್ಯ ಬಚ್ಚೇಗೌಡರು ಇದು ಹಸ್ತಾಂತರ ಆಗಿದೆಯೇ ಎಂದು ಪ್ರಸ್ತಾಪ ಮಾಡಿದರು. ಇದು ದಿನಾಂಕ: 7.03.2002ರಂದೇ ಸರ್ಕಾರದ ಆದೇಶದ ಪ್ರಕಾರವಾಗಿ ತೋಟಗಾರಿಕಾ ಇಲಾಖೆಗೆ ಹಸ್ತಾಂತರವಾಗಿರತಕ್ಕದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಹಾಗೆಯೇ ಮಾನ್ಯ ವೈ.ಕೆ. ರಾಮಯ್ಯನವರು ಮಾತನಾಡುತ್ತಾ ಇವತ್ತು ಬೆಂಗಳೂರು ನಗರದ ಪರಿಸರ ದೃಷ್ಟಿಯಿಂದ ಉದ್ಯಾನವನವನ್ನು ಮಾಡತಕ್ಕದ್ದು ಅತ್ಯಂತ ಅವಶ್ಯಕವಾಗಿದೆ ಎಂದು ಹೇಳಿದರು ಬೆಂಗಳೂರು ನಗರದ ಜನಸಂಖ್ಯೆ ಮತ್ತು ಒತ್ತಡಕ್ಕೆ ಹೋಲಿಕೆ ಮಾಡಿದರೆ ಇವತ್ತು ಉದ್ಯನವನಗಳು ಇಷ್ಟು ಮಾತ್ರವಲ್ಲ ಇನ್ನೂ ಹೆಚ್ಚಾಗಿ ಅತ್ಯಂತ ಅವಶ್ಯಕತೆಯಾಗಿ ಬೇಕಾಗಿರುವುದನ್ನು ಕಾಣುತ್ತೇವೆ. ಮಾನ್ಯ ಆರಗಜ್ಞಾನೇಂದ್ರರವರು ಇಲ್ಲಿ ಸಚಿವರ ವಸತಿ ಗೃಹಗಳನ್ನೇಕೆ ಮಾಡಬಾರದು ಎಂದು ಪ್ರಸ್ತಾಪ ಮಾಡಿದರು. ಇವತ್ತು ಸಚಿವರ ವಸತಿ ಗೃಹಗಳನ್ನು ಯಾವುದೇ ಬಡಾವಣೆಯಲ್ಲಿ ಮಾಡಿದರೂ ನಡೆಯುತ್ತದೆ. ಆದರೆ, ಇವತ್ತು ಉದ್ಯಾನವನಗಳನ್ನು ಮಾಡತಕ್ಕಂಥ ಸರ್ಕಾರದ ಮಹತ್ತರವಾದ ಉದ್ದೇಶವೇನಿದೆ, ಇವತ್ತು ಬೆಂಗಳೂರು ನಗರವನ್ನು ಪರಿಸರ ದೃಷ್ಟಿಯಿಂದ ಕಾಪಾಡಬೇಕಾಗಿದೆ. ಉದ್ಯಾನವನಗಳ ನಿರ್ವಹಣೆ ಜಾಸ್ತಿಯಾಗಬೇಕಾಗಿದೆ ಎಂಬ ಉದ್ದೇಶದಿಂದ ಸರ್ಕಾರ ಈ ವಿಧೇಯಕವನ್ನು ತರುತ್ತಿರತಕ್ಕದ್ದು. ಮಾನ್ಯ ಸಿಂಧ್ಯಾರವರು ಮಾತನಾಡುತ್ತಾ ಇವತ್ತು ಬೆಂಗಳೂರು ಮಹಾ ನಗರದಲ್ಲಿ ಅನೇಕ ಉದ್ಯಾನಗಳು ಉತ್ತಮವಾಗಿದೆ. ಅದಕ್ಕೋಸ್ಕರ ಇಲ್ಲಿ ಈ ಸರ್ಕಾರಕ್ಕೆ ವಂದನೆಗಳನ್ನು ಸಲ್ಲಿಸುತ್ತೇನೆ ಎನ್ನತಕ್ಕ ಮಾತನ್ನು ಪ್ರಸ್ತಾಪ ಮಾಡಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಮುದ್ದಹನುಮೇಗೌಡರು ಮಾತನಾಡುವಾಗ ಇದು ಅತ್ಯಂತ ಅವಶ್ಯಕತೆ ಇದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದರೆ, ಮಾನ್ಯ ಸೋಮಶೇಖರ್‌ರವರು ಪ್ರಸ್ತಾಪ ಮಾಡಿದ ರೀತಿಯಲ್ಲಿ ಇವತ್ತು ಇಲ್ಲಿ ತಾಂತ್ರಿಕವಾಗಿ ಯಾವುದೇ ತೊಂದರೆ ಇಲ್ಲ. ಇವತ್ತು ಮಾನ್ಯ ಎಸ್.ಎಸ್. ಪಾಟೀಲ್‌ರವರು ಈ ಉದ್ಯಾನವನಕ್ಕಾಗಿ ಹಣವನ್ನೇನಾದರೂ ನಿಗದಿ ಮಾಡಿದ್ದೀರಾ ಎಂದು ಕೇಳಿದರು. ಹಾಗೆಯೇ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮತ್ತು ಬನ್ನಿಕೋಡ್‌ರವರೂ ಸಹ ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಇಲ್ಲಿ ಮಹತ್ತರವಾದಂತಹ ಉದ್ದೇಶವೇನು ಎಂದರೆ, ಅಲ್ಲಿ ಉದ್ಯಾನವನವನ್ನು ಅಭಿವೃದ್ಧಿ ಪಡಿಸಬೇಕು. ಅದನ್ನು ಅಭಿವೃದ್ಧಿ ಪಡಿಸತಕ್ಕಂಥ ನಿಟ್ಟಿನಲ್ಲಿ ಇಲಾಖೆಯಲ್ಲಿ ಸಂಪನ್ಮೂಲಗಳು ಅಷ್ಟಾಗಿ ಇಲ್ಲದಿರುವುದರಿಂದ ಇದನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಸುಮಾರು 25 ವರ್ಷಗಳ ಅವಧಿಗೆ ಲೀಸ್ ಮೇಲೆ ಇದನ್ನು ನಾವು ಕೊಟ್ಟಿದ್ದೇವೆ. ಅವರು ಈಗಾಗಲೇ 5 ಕೋಟಿ ರೂಪಾಯಿಗಳನ್ನು ಈ ಉದ್ಯಾನವನಕ್ಕಾಗಿಯೇ ಮೀಸಲಾಗಿಟ್ಟುಕೊಂಡಿದ್ದಾರೆ. ಆ ಹಣವನ್ನು ವೆಚ್ಚ ಮಾಡಿ ಉದ್ಯಾನವನವನ್ನು ಅಭಿವೃದ್ಧಿ ಪಡಿಸಿದಲ್ಲಿ ಇದೊಂದು ಅತ್ಯಂತ ಉತ್ತಮ ಉದ್ಯಾನವನವಾಗುವ ಎಲ್ಲಾ ಸಾಧ್ಯತೆಗಳೂ ಇವೆ. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದ ಹಾಗೆ ಇದನ್ನು ಅದು ಮಾಡಬೇಕು. ಇದು ಮಾಡಬೇಕು ಎಂದು ಕೆಲವು ಬೇರೆ ಬೇರೆ ಯೋಜನೆಗಳನ್ನು ಮಾಡಿರಬಹುದು. ಅದು ಕೇವಲ lond thinking ಇರಬಹುದು ಅಷ್ಟೇ. ಆದರೆ ಅದಕ್ಕೆ ಸರ್ಕಾರದ ಸ್ಪಷ್ಟತೆ ಇದೆ. ಬದ್ಧತೆ ಇದೆ. ಯಾವುದೇ ಕಾರಣಕ್ಕೂ ಕೂಡ ಅದನ್ನು ಬೇರೆಯವರಿಗೆ ಕೊಡತಕ್ಕಂಥ ಉದ್ದೇಶ ಇಲ್ಲ. ಮಾನ್ಯ ಸಿಂಧ್ಯಾರವರು ಅಲ್ಲಿ ಮುಂದಿನ ದಿನಗಳಲ್ಲಿ ಏನಾದರೂ ಕೂಡ ಆಗಬಹುದು ಎನ್ನತಕ್ಕಂಥ

ಮಾತನ್ನು ಹೇಳಿದರು. ನಾವು ಏಕೆ ಈ ವಿಧೇಯಕವನ್ನು ತಂದಿದ್ದೇವೆ ಎಂದರೆ, ಇವತ್ತು ನಮಗೆ ಇರತಕ್ಕಂಥ ಕಾಯಿದೆಯಲ್ಲಿ ಇರತಕ್ಕಂಥ ಉದ್ಯಾನವನಗಳನ್ನು ಸಂರಕ್ಷಣೆ ಮಾಡುವುದಕ್ಕಷ್ಟೇ ಅವಕಾಶ ಇದೆ. ಇದನ್ನೇ ಏತಕ್ಕೆ ತರುತ್ತಿದ್ದೇವೆ ಎಂದರೆ, ಅಲ್ಲಿ ಈಗ ಇರತಕ್ಕಂಥದ್ದು ಖಾಲಿ ಪ್ರದೇಶ. ಆ ಖಾಲಿ ಪ್ರದೇಶ ಯಾವುದೇ ಕಾರಣಕ್ಕೂ ಕೂಡ ಮುಂದೆ ಒಂದು ದಿನ ಬೇರೆಯವರ ವಶಕ್ಕೆ ಹೋಗಬಾರದು ಅನ್ನತಕ್ಕಂಥ ಉದ್ದೇಶದಿಂದ ಅದನ್ನು ಈ Parks and Preservation Act ಯೊಳಗೆ ತಂದು, ಸಂರಕ್ಷಣೆ ಮಾಡತಕ್ಕಂಥ ಒಂದೇ ಒಂದು ಉದ್ದೇಶದಿಂದ ಇದನ್ನು ತರುತ್ತಿದ್ದೇವೆ. ಇದು ಬೇರೆಯವರಿಗೆ ವರ್ಗಾವಣೆಯಾಗಬಾರದು, ಅಲ್ಲಿ ಬೇರೆ ಏನೂ ಆಗಬಾರದು ಅನ್ನತಕ್ಕಂಥ ಉದ್ದೇಶ ಸರ್ಕಾರಕ್ಕೆ ಇರುವುದರಿಂದ ಇವತ್ತು ಈ ಆ್ಯಕ್ಟ್ ಅನ್ನು ನಾವು ತರುತ್ತಿದ್ದೇವೆ. ನಾನು ಪ್ರಾರಂಭದಲ್ಲಿ, ಬಹುಶಃ ತಾವೆಲ್ಲಾ ಭಾರಿ ಸಂತೋಷವಾಗಿ ಈ ವಿಧೇಯಕಕ್ಕೆ ಅನುಮತಿ ಕೊಡುತ್ತೀರಿ ಎಂದು ನಾನು ಹೆಚ್ಚಿಗೆ ವಿವರಣೆಗಳನ್ನು ನೀಡುವುದಕ್ಕೆ ಹೋಗಲಿಲ್ಲ. ಈ ವಿಧೇಯಕವನ್ನು ತಂದಿರುವುದು ನಿಮಗೆಲ್ಲರಿಗೂ ಸಂತೋಷವನ್ನು ತಂದಿದೆ. ಬೆಂಗಳೂರು ನಗರಕ್ಕೆ ಅತ್ಯಂತ ಅವಶ್ಯಕವಾಗಿ ಬೇಕಾಗಿರತಕ್ಕಂಥ ಈ ಉದ್ಯಾನವನದ ನಿರ್ಮಾಣ ಕುರಿತು ಬಹುಶಃ ನೀವೆಲ್ಲರೂ ಉತ್ತಮವಾದಂತಹ ಸಲಹೆಗಳನ್ನು ಮತ್ತು ಅಭಿಪ್ರಾಯಗಳನ್ನೂ ಕೂಡ ಕೊಟ್ಟಿದ್ದೀರಿ. ಅವೆಲ್ಲವನ್ನೂ ಕೂಡ ಗಮನದಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯತೆಯಾಗುತ್ತದೆ ಎಂದು ಭಾವಿಸುತ್ತಾ ಈ ವಿಧೇಯಕಕ್ಕೆ ಅನುಮತಿಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಛೇರ್ಮನ್ : ಪ್ರಸ್ತಾವ ಏನೆಂದರೆ,

"2003ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಛೇರ್ಮನ್ : ಪ್ರಸ್ತಾವ ಏನೆಂದರೆ,

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಛೇರ್ಮನ್ : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಹೆಸರು ಮತ್ತು ಅಪತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅಪತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) : ಮಾನ್ಯ ಛೇರ್ಮನ್‌ರವರೆ, "2003ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಛೇರ್ಮನ್ : ಪ್ರಸ್ತಾವ ಏನೆಂದರೆ,

"2003ರ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

6. ನಿಯಮ 69ರ ಮೇರೆಗೆ

ಅಕ್ಷರ ದಾಸೋಹ ಯೋಜನೆಯಿಂದ ಸಹಸ್ರಾರು ಶಾಲೆಯ ಮಕ್ಕಳು ಅಸ್ವಸ್ಥರಾಗಿರುವ ಬಗ್ಗೆ

+ **ಶ್ರೀ ಬಿ. ಸೋಮಶೇಖರ್ (ಮಳವಳ್ಳಿ)** : ಮಾನ್ಯ ಛೇರ್ಮನ್‌ರವರೆ, ಈಗಾಗಲೇ ನಿಯಮ 69ರ ಮೇರೆಗೆ ಅಕ್ಷರ ದಾಸೋಹ ಯೋಜನೆಯಲ್ಲಿ ಸಹಸ್ರಾರು ಶಾಲೆಯ ಮಕ್ಕಳು ಅಸ್ವಸ್ತರಾಗಿರುವ ಬಗ್ಗೆ ಮತ್ತು ಯೋಜನೆಯ ವಿಫಲತೆ ಬಗ್ಗೆ ವಿರೋಧ ಪಕ್ಷದವರು ಕೊಟ್ಟಿರುವ ಒಂದು ನೋಟೀಸ್ ಮೇರೆಗೆ ಈ ಚರ್ಚೆ ನಡೆದಿದ್ದು, ಇದರ ಬಗ್ಗೆ ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಅವರ ಒಂದು ವಾದವನ್ನು ಮಂಡಿಸಿದ್ದಾರೆ. ಈಗಾಗಲೇ ಬಿಸಿ ಊಟದ ಕಾರ್ಯಕ್ರಮ ಪ್ರಾರಂಭವಾಗಿ ಸುಮಾರು ಒಂದು ತಿಂಗಳ ಹತ್ತಿರ ಆಗಿದೆ. ಜುಲೈ 1ನೇ ತಾರೀಖು ಸುಮಾರು 20 ಜಿಲ್ಲೆಗಳಲ್ಲಿ ಗಡಿಬಿಡಿಯಲ್ಲಿ ಪ್ರಾರಂಭ ಮಾಡಿರತಕ್ಕಂಥ ಈ ಯೋಜನೆ ಇಡೀ ರಾಜ್ಯದಲ್ಲಿ ಒಂದು ಭಯದ ವಾತಾವರಣ ಮತ್ತು ಪ್ರತಿಯೊಂದು ಮನೆಯಲ್ಲೂ ಸಹ ಆತಂಕದ ಛಾಯೆ ಮೂಡಿಸಿದೆ. ಸುಮಾರು ಪ್ರತಿಯೊಂದು ಜಿಲ್ಲೆಯಲ್ಲೂ ಪ್ರತಿಯೊಂದು ಶಾಲೆಗಳಲ್ಲೂ, ಬಹುತೇಕ ನೂರಕ್ಕೆ ತೊಂಭತ್ತು ಶಾಲೆಗಳಲ್ಲಿ ಮಕ್ಕಳು ಈ ಆಹಾರವನ್ನು ಸೇವಿಸಿ ಅಸ್ವಸ್ಥರಾಗಿ ಗೊಂದಲವಾದ ವಾತಾವರಣ ಸೃಷ್ಟಿಯಾಗಿತ್ತು. ಬಹುಶಃ ಆ ಸಂದರ್ಭದಲ್ಲಿ ಶಿಕ್ಷಣ ಮಂತ್ರಿಗಳು ಬಹಳ ಗಾಬರಿಯಾಗಿದ್ದರು ಎಂದು ನಾನು ಅಂದುಕೊಂಡಿದ್ದೇನೆ. ಅದೇ ಸಂದರ್ಭದಲ್ಲಿ ನಾವು ಕೆಲವು ಮುಖಂಡರುಗಳು ನರಗುಂದ ಮತ್ತು ನವಲಗುಂದಗಳ ಭಾಗದಲ್ಲಿ ಪ್ರವಾಸ ಕೈಗೊಂಡಿದ್ದೆವು. ಮಾನ್ಯ ಯಾವಗಲ್‌ರವರೂ ಸಹ ಅಲ್ಲಿ ನಮಗೆ ಸಿಕ್ಕಿದ್ದರು. ಆ ಶಾಲೆಗೂ ಭೇಟಿ ಕೊಟ್ಟಿದ್ದೆವು. ಅಲ್ಲಿನ ಸಾರ್ವಜನಿಕರನ್ನೂ ಕೂಡ ನಾವು ವಿಚಾರಿಸಿಕೊಂಡು ಬಂದೆವು. ಅಲ್ಲಿ ಗೊಂದಲವಾಗಿ ಅಸ್ವಸ್ಥರು ಆಸ್ಪತ್ರೆಗೆ ಸೇರಿದ್ದಾಗ ಈ ಒಂದು ಯೋಜನೆ ವಿಫಲತೆ ಬಗ್ಗೆ ಮನವರಿಕೆಯಾಗಿತ್ತು. ಈಗ ಈ ಸರ್ಕಾರ ಈ ಯೋಜನೆಯ ಬಗ್ಗೆ ಬಹಳ ದೊಡ್ಡ ಪ್ರಚಾರವನ್ನು ಮಾಡುತ್ತಿದೆ. ಸುಮಾರು 50 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ನಾವು ಕೊಡುತ್ತಿದ್ದೇವೆ. ಅದರಿಂದ ಶಾಲೆ ಬಿಟ್ಟು ಹೋಗತಕ್ಕಂಥ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಇದೊಂದು ಉತ್ತೇಜನಕಾರಿಯಾದಂತಹ ಯೋಜನೆ, ಇಂತಹ ಒಂದು ಯೋಜನೆ ಇಡೀ ಕರ್ನಾಟಕದ ಇತಿಹಾಸದಲ್ಲೇ ಇರಲಿಲ್ಲ ಎಂದು ಹೇಳಿಕೊಂಡು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವಂತಹ ಒಂದು ಪ್ರಯತ್ನವನ್ನು ಸರ್ಕಾರದವರು ಮಾಡಿದ್ದಾರೆ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಮಧ್ಯಾಹ್ನದ ಉಪಹಾರ ಯೋಜನೆ ಕೇವಲ ಜುಲೈ 1 ರಿಂದ ಪ್ರಾರಂಭವಾದಂತಹ ಯೋಜನೆ ಅಲ್ಲ. 30 ವರ್ಷಗಳ ಹಿಂದೆ 1971–72ರಲ್ಲಿ "Mid-day Meals" ಎಂಬ ಯೋಜನೆ ಪ್ರಾರಂಭವಾಯಿತು. ಅದರಲ್ಲಿ ಅಮೆರಿಕಾದಿಂದ ಒಂದು ರೀತಿಯ ಗೋಧಿ ಮತ್ತು ಎಣ್ಣೆ ತರಿಸಿಕೊಂಡು, ಅದರಲ್ಲಿ ಉಪ್ಪಿಟ್ಟು ಮಾಡಿ ಅದನ್ನು ಹಂಚತಕ್ಕಂಥ ಒಂದು ಪದ್ಧತಿ ಇತ್ತು. ಅದು ಸ್ವಲ್ಪ ದಿನಗಳ ಕಾಲ ನಡೆಯಿತು. ಅದಾದ ಮೇಲೆ ಸ್ವಲ್ಪ ದಿನಗಳ ನಂತರ ಈ ಒಂದು ಪೌಷ್ಟಿಕ ಆಹಾರಾಂಶವಾಗಿ ಬಿಸ್ಕಿಟ್ ಅನ್ನು ತಯಾರು ಮಾಡಿ, ವಿತರಣೆ ಮಾಡತಕ್ಕಂಥ ಕಾರ್ಯಕ್ರಮ

ಜಾರಿಗೆ ಬಂದಿತು. ಅದು ಸ್ವಲ್ಪ ದಿನಗಳ ಕಾಲ ನಡೆಯಿತು. ಅದಾದ ಮೇಲೆ ಮತ್ತೊಂದು ಯೋಜನೆ ಜಾರಿಗೆ ಬಂದಿತು. ಒಂದೊಂದು ಮಕ್ಕಳಿಗೆ ಒಂದು ರೂಪಾಯಿಯ ದುಡ್ಡನ್ನು ಕೊಡಬೇಕು. ಅದರಿಂದ ಅವರು ಆಕರ್ಷಣೆಯಾಗಿ ಅವರು ಶಾಲೆಗೆ ಬರುತ್ತಾರೆ ಎಂಬ ಉದ್ದೇಶದಿಂದ ಆ ಕಾರ್ಯಕ್ರಮ ಜಾರಿಗೊಳಿಸಲಾಯಿತು. ಅದೊಂದು ಸ್ವಲ್ಪ ದಿನಗಳ ಕಾಲ ನಡೆಯಿತು. ಅದಾದ ಮೇಲೆ ಅಕ್ಕಿಯನ್ನು ಆ ಶಾಲಾ ಮಕ್ಕಳಿಗೇ ಕೊಡತಕ್ಕಂಥ ಕಾರ್ಯಕ್ರಮವೊಂದನ್ನು ಜಾರಿಗೆ ತರಲಾಯಿತು. ಇದು ಬಹುಶಃ 6ನೇ ಯೋಜನೆ ಇರಬಹುದು. ಇದೂ ಸೇರಿದಂತೆ ಈ 4–5 ಯೋಜನೆಗಳೂ ಸಹ ಏಕೆ ಮಧ್ಯೆದಲ್ಲೇ ನಿಂತು ಹೋದವು? ಒಂದಲ್ಲ ಒಂದು ಕಾರಣದಿಂದ ಅದು ವಿಫಲವಾಗಿರಬಹುದು ಅಥವಾ ಅಮೆರಿಕಾದಿಂದ ಕೊಡತಕ್ಕಂಥ ಆಹಾರ ಪದಾರ್ಥಗಳು ನಿಲ್ಲಿಸಿ ಈ ಒಂದು ಕಾರ್ಯಕ್ರಮ ನಿಂತಿರಬಹುದು ಮತ್ತು ಬೇರೆ ಬೇರೆ ಕಾರಣಗಳಿಂದ ಸಹ ಅವುಗಳು ನಿಂತಿರಬಹುದು. ಅದನ್ನು ನಾನು ವಿಫಲತೆ ಎಂದು ಹೇಳುವುದಿಲ್ಲ. ಆದರೆ ತಾವೇನು ಈ ಮಧ್ಯಾಹ್ನದ ಉಪಹಾರದ ಯೋಜನೆಯನ್ನು ಜಾರಿಗೆ ತಂದಿದ್ದೀರೋ, ಅದರ ಬಗ್ಗೆ ನನಗನ್ನಿಸುತ್ತಿದೆ; ಈ ಯೋಜನೆ ತಕ್ಷಣ ಏಕೆ ಜಾರಿಗೆ ಬಂತು ಅಂದರೆ ಸರ್ಕಾರವೇನು on-line lottery ಯನ್ನು ಜಾರಿಗೆ ತಂದಿತ್ತೋ, ಆ on-line lotteryಯಿಂದ ನಮ್ಮ ರಾಜ್ಯದ ಸಾಮಾಜಿಕ ವ್ಯವಸ್ಥೆ ಮತ್ತು ಶಾಂತಿ ಹದಗೆಟ್ಟಿರುವುದರಿಂದ ಸಾರ್ವಜನಿಕವಾಗಿ ಬಹಳ ಟೀಕೆ ಬಂತು.

6.40 ಪಿಎಂ

ಇದು ಜೂಜಾಡತಕ್ಕಂತಹ ಒಂದು ರಾಜ್ಯವಾಗಿದೆ. ಇದರಿಂದ ನೂರಾರು ಜನ ಹುಚ್ಚರಾಗುತ್ತಿದ್ದಾರೆ. ಈ ಒಂದು ಯೋಜನೆಯಿಂದ ನಮ್ಮ ಸಮಾಜದ ಆರೋಗ್ಯವೇ ಕೆಡುತ್ತಿದೆ ಎನ್ನುವ ಟೀಕೆ ಬಂದಾಗ, ನನಗನ್ನಿಸುವುದು ಸರ್ಕಾರ ತಕ್ಷಣ ಇದನ್ನು ಮುಚ್ಚಿಕೊಳ್ಳುವ ದೃಷ್ಟಿಯಿಂದ ಕೇಂದ್ರ ಸರ್ಕಾರದಿಂದ ಏನು ಅಕ್ಕಿಯನ್ನು ಕೊಡುತ್ತಿದ್ದರು, ಈಗ ಅಕ್ಕಿಬಫರ್ ಸ್ಟಾಕ್ ಇದೆ. ಸುಮಾರು 69 ದಶ ಲಕ್ಷ ಟನ್ ಅಕ್ಕಿ ಕೇಂದ್ರದ ಗೋಡನ್‌ನಲ್ಲಿದೆ. ಆ ಒಂದು ಬಫರ್ ಸ್ಟಾಕನ್ನು ವಿತರಣೆ ಮಾಡುವ ದೃಷ್ಟಿಯಲ್ಲಿ ಒಂದು ಕಾರ್ಯಕ್ರಮವನ್ನು ಮಾಡಿಯೆಂದು ಕೇಂದ್ರ ಸರ್ಕಾರದವರು ಅಕ್ಕಿಯನ್ನು ಮುಫತ್ತಾಗಿ ಕೊಡುತ್ತಿದ್ದೇವೆ. ಅದನ್ನು ತಾವು ಶಾಲಾ ಮಕ್ಕಳಿಗೆ ಉಪಯೋಗಿಸಿಕೊಳ್ಳಬಹುದು ಎಂದು ಹೇಳಿದ್ದಕ್ಕೂ, ಈ ಒಂದು ಆನ್ ಲೈನ್ ಲಾಟರಿಯಲ್ಲಿ ಬರತಕ್ಕಂತಹ ಟೀಕೆಯನ್ನು ಮುಚ್ಚಿಕೊಳ್ಳತಕ್ಕಂಥದ್ದಕ್ಕೆ ತಾವು ಏನು ಮಾಡಿದಿರಿ, ಇದರಿಂದ ಬರತಕ್ಕಂತಹ ಸುಮಾರು 200 ರಿಂದ 201 ಕೋಟಿ ರೂಪಾಯಿಗಳನ್ನು ಅಕ್ಷರ ದಾಸೋಹ ಪದ್ಧತಿಗೆ ನಾವು ಉಪಯೋಗಿಸಿಕೊಳ್ಳುತ್ತಿದ್ದೇವೆ ಎಂದು ಸಾರ್ವಜನಿಕರಿಗೆ ಮರೆ ಮಾಚುವ ಕಾರ್ಯಕ್ರಮವನ್ನು ಮಾಡಿದ್ದೀರಿ. ಈ ಯೋಜನೆಯಿಂದ ಉತ್ತಮವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ಹೇಳುವ ಕಾರ್ಯಕ್ರಮವನ್ನು ತಾವು ಹೇಳಿದ್ದೀರಿ. ಅದರಲ್ಲಿ ಬೇರೆ ಏನೂ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ. ಆ ಹಣಕ್ಕೆ ಪ್ರತ್ಯೇಕವಾದ ಹೆಡ್ ಆಫ್ ಅಕೌಂಟ್ ಇಲ್ಲ. ಬೇರೆ ಯಾವುದೇ ಕಾರ್ಯಕ್ರಮಗಳಿಗೆ ನೀವು ಆರ್ಥಿಕ ಇಲಾಖೆಯಿಂದ ಹಣವನ್ನು ತೆಗೆದುಕೊಳ್ಳುತ್ತೀರೋ, ಅದು ಪೂಲ್ಡ್ ಫಂಡ್ಸ್‌ನಿಂದ ಅದೇ ರೀತಿ ಇದಕ್ಕೂ ಸಹ ನೀವು ಸುಮಾರು 200 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳಬಹುದು. ಅದು ಬಿಟ್ಟರೆ ಪ್ರತ್ಯೇಕವಾಗಿ ಇದಕ್ಕೆ ಒಂದು ಹೆಡ್ ಆಫ್ ಅಕೌಂಟ್ ಸೃಷ್ಟಿ ಮಾಡಿಲ್ಲ. ಆ ಹಣ ನೇರವಾಗಿ ಇದಕ್ಕೇ ಹೋಗಬೇಕೆನ್ನತಕ್ಕಂತಹ ವ್ಯವಸ್ಥೆ ಮಾಡಿಲ್ಲ. ಆರ್ಥಿಕ ಇಲಾಖೆಗೆ ಬೇರೆ ಬೇರೆ ಇಲಾಖೆಗಳವರು ತಮ್ಮ ಯೋಜನೆಗಳಿಗೆ

ಪ್ರಸ್ತಾವನೆಗಳನ್ನು ಸಲ್ಲಿಸುತ್ತಾರೆ. ಹಣ ಮಂಜೂರಾತಿ ಮಾಡುತ್ತಾರೆ. ಹಣ ಕೊಡುತ್ತೇವೆ. ಆದರೆ ಇದಕ್ಕೆ ಎಕ್ಸ್‌ಕ್ಲೂಸೀವ್ ಆಗಿ ನೀವು ಹೆಡ್ ಆಫ್ ಅಕೌಂಟ್ ಮಾಡಿಲ್ಲ. ಆದ್ದರಿಂದ ಇದು ಸಾರ್ವಜನಿಕರ ಕಣ್ಣಿಗೆ ಮಣ್ಣೆರಚತಕ್ಕಂತಹ ಒಂದು ಘೋಷಣೆ ಎಂದು ನಾನು ಪ್ರಥಮ ಬಾರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಯೋಜನೆಯಲ್ಲಿ ಸುಮಾರು 50 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡುತ್ತೇವೆಂದು ಹೇಳಿದ್ದೀರಿ. ಅದರಲ್ಲಿ ಸುಮಾರು 39,000 40,000 ಕೇಂದ್ರಗಳನ್ನು ತಾವು ತೆಗೆದಿದ್ದೀರಿ. ಒಂದರಿಂದ ಐದನೇ ತರಗತಿಯವರೆಗಿನ ಮಕ್ಕಳಿಗೆ ಒಂದು ಮಗುವಿಗೆ 100 ಗ್ರಾಂ ಅಕ್ಕಿ 25 ದಿನಗಳ ಕಾಲ ಕೊಡುತ್ತೀರಿ, ಅಂದರೆ, 220 ದಿನಗಳಲ್ಲಿ ಈ ಕಾರ್ಯಕ್ರಮವನ್ನು ಹಾಕಿದ್ದೀರಿ. ಕೇಂದ್ರ ಸರ್ಕಾರ ಮೂರು ಕೇಜಿ ಅಕ್ಕಿ ಕೊಡುತ್ತಿದೆ. ಒಂದು ತಿಂಗಳಿಗೆ, ಒಂದು ಮಗುವಿಗೆ ಮೂರು ಕೇಜಿ ಅಕ್ಕಿ ಕೊಡುತ್ತಿದೆ. ಆದರೆ ತಾವು ವಿತರಣೆ ಮಾಡುವಂಥದ್ದು ಎರಡೂವರೆ ಕೇಜಿ. ಅದರಲ್ಲಿಯೂ ಅರ್ಧ ಕೇಜಿ ಉಳಿಕೆ ಆಗುತ್ತಿದೆ. ತಾವು ಸುಮಾರು 201 ಕೋಟಿ ರೂಪಾಯಿ ಹಣವನ್ನು ಅಕ್ಕಿ ಹೊರತುಪಡಿಸಿ ತಾವು ಏನು ಖರ್ಚು ಮಾಡುತ್ತಿದ್ದೀರಿ. ಅದರಲ್ಲಿ ಒಂದು ಮಗುವಿಗೆ ಒಂದು ರೂಪಾಯಿ ಒಂದು ದಿನಕ್ಕೆ ಕೊಡುತ್ತಿದ್ದೀರಿ. ಅದರಲ್ಲಿ ಬೇಳೆ, ಉಪ್ಪು, ಎಣ್ಣೆ, ಮತ್ತು ಸಾರಿಗೆ ವೆಚ್ಚ, ಇದು ಎಲ್ಲಾ ಸೇರಿ ಒಂದು ರೂಪಾಯಿ ಆಗುತ್ತದೆ. ಗ್ಯಾಸ್ ಕೂಡ ಇದರಲ್ಲಿ ಸೇರಿದೆ. ಬೇಳೆ ಮತ್ತು ಉಪ್ಪಿಗೆ 50 ಪೈಸೆ, ಎಣ್ಣೆ ಮತ್ತು ಸಾರಿಗೆ ವ್ಯವಸ್ಥೆಗೆ ಸುಮಾರು 10 ಪೈಸೆ, ಅದರಲ್ಲಿ 40 ಪೈಸೆ ತರಕಾರಿ, ಗ್ಯಾಸು ಮತ್ತು ಬೇರೆ ಬೇರೆ ಸಾಂಬಾರು ಪದಾರ್ಥಗಳನ್ನು ತಯಾರು ಮಾಡುವುದಕ್ಕೆ ಉಪಯೋಗಿಸುತ್ತಿದ್ದೇವೆ. ಅಂದರೆ, ಒಂದು ರೂಪಾಯಿಯಲ್ಲಿ ತಾವು ಒಂದು ದಿನಕ್ಕೆ ಒಂದು ಮಗುವಿಗೆ ಊಟ ಕೊಡುತ್ತಿದ್ದೀರಿ. ಅಂದರೆ, ಒಂದು ರೂಪಾಯಿ ಸಾಮಗ್ರಿ ಒಂದು ಮಗುವಿಗೆ ಸಂಪೂರ್ಣವಾಗಿ ವಿತರಣೆ ಆಗುತ್ತಿದೆಯೇ, ಈ ಯೋಜನೆ ವಿಫಲವಾಗುವುದಕ್ಕೆ ಸಾರ್ವಜನಿಕರಿಂದ ಟೀಕೆ ಬರುವುದಕ್ಕೆ ಕಾರಣ ಏನು ಎಂದು ನಾನು ಒಂದೊಂದಾಗಿ ಹೇಳುತ್ತಾ ಹೋದರೆ, ಈ ನಮ್ಮ ಕಾರ್ಯಕ್ರಮದ ಬಗ್ಗೆ ತಾವು ಬಹಳ ಬೊಬ್ಬೆ ಹೊಡೆದು ಇದರಿಂದ ನಮ್ಮ ಸರ್ಕಾರಕ್ಕೆ ದೊಡ್ಡ ಹೆಸರು ಬರುತ್ತದೆ. ಬಹಳ ಉತ್ತಮವಾದ ಕಾರ್ಯಕ್ರಮ ಶಾಲೆ ಬಿಟ್ಟು ಹೋಗತಕ್ಕಂತಹ ಮಕ್ಕಳನ್ನು ಅಲ್ಲಿಯೇ ಉಳಿಸತಕ್ಕಂತಹ ಕಾರ್ಯಕ್ರಮ. ಎಂದು ಬೊಬ್ಬೆ ಹೊಡೆಯುತ್ತೀರಿ, ನಾನು ಹೇಳುತ್ತೇನೆ. ಇದು ಒಂದು ವೈಜ್ಞಾನಿಕವಾದ ಮತ್ತು ಸಾಮಾಜಿಕ ಪರಿವರ್ತನೆ ಮಾಡುವಂತಹ ಕಾರ್ಯಕ್ರಮ ಅಲ್ಲ. ನಮ್ಮ ಸರ್ಕಾರ ಇದ್ದಾಗ ನಾವು ಅಟೆಂಡೆನ್ಸ್ ಹೆಚ್ಚು ಮಾಡುವುದಕ್ಕಾಗಿ ಅನೇಕ ಕಾರ್ಯ ಕ್ರಮಗಳನ್ನು ಹಾಕಿಕೊಂಡೆವು ತಮಗೆ ಗೊತ್ತಿರುವ ಹಾಗೆ 1985ರಲ್ಲಿ ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಫ್ರೀ ಯೂನಿಫಾರಂ, ಫ್ರೀ ಟೆಕ್ಸ್ಟ್‌ಬುಕ್ಸ್ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವು ಐದನೇ-ತರಗತಿಯವರೆಗೆ ಎಲ್ಲಾ ಮಕ್ಕಳಿಗೂ ಫ್ರೀ ಬುಕ್ಸ್ ಮತ್ತು ಯೂನಿಫಾರಂ, ಮತ್ತು ಏಳನೇ ತರಗತಿಯವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳಿಗೆ ಫ್ರೀ ಬುಕ್ಸ್ ಮತ್ತು ಯೂನಿಫಾರಂ ಕೊಡಬೇಕೆಂದು ನಾವು ಪ್ರಾರಂಭ ಮಾಡಿದೆವು. ಅದರಿಂದಲೂ ಅಟೆಂಡೆನ್ಸ್ ಬಹಳ ಅಭಿವೃದ್ಧಿ ಆಯಿತು. ಶಾಲೆ ಬಿಟ್ಟು ಹೋಗತಕ್ಕಂತಹ ಮಕ್ಕಳ ಸಂಖ್ಯೆ ಕಡಿಮೆ ಆಯಿತು. ಅದರಿಂದ ಆ ಶಾಲಾ ಮಕ್ಕಳಲ್ಲಿ ಒಂದು ರಾಷ್ಟ್ರೀಯ ಭಾವನೆ, ಸಮಾನತೆಯ ಭಾವನೆ ಆ ಕಾರ್ಯಕ್ರಮದಿಂದ ಬಂದಿತು. ಮತ್ತು ಸಮವಸ್ತ್ರ ಮತ್ತು ಪುಸ್ತಕಗಳಿಗೆ ಕೊಡತಕ್ಕಂಥ ಹಣ ನೇರವಾಗಿ ವಿದ್ಯಾರ್ಥಿಗಳಿಗೆ ತಲುಪುತ್ತಿತ್ತು. ಇದರಲ್ಲಿ ಯಾರೇ ಮಧ್ಯವರ್ತಿಗಳು ಒಂದು ಪೈಸೆ ತಿನ್ನತಕ್ಕಂತಹ ಅವಕಾಶ ಇರಲಿಲ್ಲ. ಯೂನಿಫಾರಂ

ಇರಬಹುದು, ಪುಸ್ತಕ ಇರಬಹುದು ಅದನ್ನು ನೇರವಾಗಿ ಮಕ್ಕಳಿಗೆ ಹಂಚತಕ್ಕಂತಹ ಕಾರ್ಯಕ್ರಮ. ಅದು ಬಹಳ ಯಶಸ್ವಿಯಾಗಿ ನಡೆಯಿತು. ಆದರೆ ತಾವು ಈ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಇದರಿಂದ ಈ ಕಾರ್ಯಕ್ರಮ ಏಕೆ ವಿಫಲವಾಯಿತು ಎನ್ನುವುದರ ಬಗ್ಗೆ ಅನೇಕ ಕಾರಣಗಳನ್ನು ನಾವು ಹೇಳಬಹುದು. ಸಮಾಜ ಕಲ್ಯಾಣ ಇಲಾಖೆ ನಡೆಸತಕ್ಕಂತಹ ಹಾಸ್ಟೆಲ್‌ಗಳ ವ್ಯವಸ್ಥೆ ಬಗ್ಗೆ ತಮಗೆಲ್ಲಾ ಗೊತ್ತಿದೆ. ಸಮಾಜ ಕಲ್ಯಾಣ ಇಲಾಖೆ ಇರಬಹುದು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವತಿಯಿಂದ ನಡೆಸುತ್ತಿರತಕ್ಕಂತಹ ವಿದ್ಯಾರ್ಥಿ ನಿಲಯಗಳಲ್ಲಿ ಏನು ಪರಿಸ್ಥಿತಿ ಇದೆ. ಅಲ್ಲಿ ನೀರಿನ ವ್ಯವಸ್ಥೆ ಇದೆ. ಕೊಠಡಿಗಳ ವ್ಯವಸ್ಥೆ ಇದೆ. ಅಡಿಗೆ ಮನೆಗಳ ವ್ಯವಸ್ಥೆ ಇದೆ. ಮತ್ತು ಅಲ್ಲಿ ಅಡಿಗೆ ಮಾಡತಕ್ಕಂತಹವರು ಪ್ರತ್ಯೇಕವಾಗಿದ್ದಾರೆ. ಬೇರೆ ಎಲ್ಲಾ ವ್ಯವಸ್ಥೆ ಇದೆ. ಕುಡಿಯುವುದಕ್ಕೆ ನೀರು ಅಡಿಗೆ ಮಾಡುವುದಕ್ಕೆ ಗ್ಯಾಸ್ ಇರಬಹುದು. ಬೇರೆ ಎಲ್ಲಾ ವ್ಯವಸ್ಥೆ ಇದೆ. ಅಂತಹ ಕಡೆಗಳಲ್ಲಿ ಮಕ್ಕಳು ಅಸ್ವಸ್ಥರಾಗತಕ್ಕಂಥದ್ದನ್ನು ನೋಡಿದ್ದೇವೆ. ಆರೋಗ್ಯಕರವಾದ ಊಟವನ್ನು ಬೇಯಿಸುತ್ತಿಲ್ಲ ಎನ್ನುವ ದೂರುಗಳು ಬರುತ್ತಿವೆ. ಇಂತಹ ಸಂದರ್ಭದಲ್ಲಿ ತಾವು ಎಲ್ಲಿ ಕೊಠಡಿ ಇಲ್ಲ, ಸರಿಯಾದ ಪಾತ್ರೆಗಳು ಇಲ್ಲ, ನೀರಿನ ವ್ಯವಸ್ಥೆ ಇಲ್ಲ, ಮತ್ತು ಅದೆಲ್ಲಕ್ಕಿಂತ ಹೆಚ್ಚಾಗಿ ಸ್ವಚ್ಛತೆ ಇಲ್ಲದೆ ಇರುವಂತಹ ಪ್ರದೇಶಗಳಲ್ಲಿ,

ಛೇರ್ಮನ್ : ಮಾನ್ಯ ಸೋಮಶೇಖರ್‌ರವರೇ ಒಂದು ನಿಮಿಷ ನಾವು ಇವತ್ತು ಮೂರುವರೆ ಗಂಟೆಗೆ ಸದನ ಪ್ರಾರಂಭ ಮಾಡಿದ್ದೇವೆ. ಏಳೂವರೆ ಗಂಟೆ ತನಕ ಸದಸ್ಯರು ದಯವಿಟ್ಟು ಹಾಜರಿರಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ತಾವು ವಿನಂತಿ ಮಾಡಿಕೊಳ್ಳಬಾರದು. ತಾವು ಆದೇಶ ಮಾಡಬೇಕು. ವಿನಂತಿ ಮಾಡಿಕೊಳ್ಳುತ್ತೇನೆ ಅಂದಿರಿ, ಅದು ಆದೇಶ ಅಲ್ಲ.

ಛೇರ್ಮನ್ : ನಾವು ವಿನಂತಿ ಎಂದು ಹೇಳಿದರೂ ಕೂಡ ನೀವು ಆದೇಶ ಎನ್ನುತ್ತೀರಿ.

Sri Appaji S. Nada Gowda : Boss's request is an order.

Mr. Chairman : it is a request.

ಶ್ರೀ ಬಿ. ಸೋಮಶೇಖರ್ : ಈ ಕಾರ್ಯಕ್ರಮ ಹೇಗೆ ನಡೆಯುತ್ತಿದೆ ಎಂದು ಕೆಲವು ಶಾಲೆಗಳಿಗೆ ನಾವು ಹೋದಾಗ ಗಡಿಬಿಡಿಯಿಂದ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಲೇಬೇಕೆಂಬ ಆದೇಶವನ್ನು ನಿಮ್ಮ ಸರ್ಕಾರ ಕೊಟ್ಟ ಮೇಲೆ ಯಾವುದೋ ಕಲ್ಯಾಣ ಮಂಟಪದಿಂದ ತಂದಂತಹ ಪಾತ್ರೆಗಳು, ಸರಿಯಾಗಿ ತೊಳೆದಿಲ್ಲ, ಪಾತ್ರೆಯಲ್ಲಿ ಎಣ್ಣೆ ಜಿಡ್ಡು ಎಲ್ಲಾ ಹಾಗೆಯೇ ಇತ್ತು. ನಮ್ಮ ಸರ್ಕಾರಿ ಸಂಸ್ಥೆಯಾದ ಕೆಓಎಫ್ ಎಂದು ಒಂದು ಸಂಸ್ಥೆ ಇದೆ. ಅಲ್ಲಿ ನಮ್ಮದೇ ಆದ ಒಂದು ಸಹಕಾರಿ ಸಂಸ್ಥೆ ಇದೆ. ಅಲ್ಲಿ ಶುದ್ಧವಾದ ಎಣ್ಣೆ ಸಿಗುತ್ತಿದೆ. ಅದನ್ನು ಬಿಟ್ಟು ಯಾವುದೋ ಖಾಸಗಿ ಕಂಪನಿಯಿಂದ ಎಣ್ಣೆ ತಂದಿದ್ದಾರೆ. ಅದು ಎಷ್ಟು ಬೆಲೆ ಇದೆಯೋ ಎಲ್ಲಿಂದ ತಂದಿದ್ದಾರೋ, ಗೊತ್ತಿಲ್ಲ. ಆದರೆ, ಆ ಒಂದು ಸ್ಯಾಂಪಲ್ ನಾವು ನೋಡಿದೆವು ಅದರ ಗುಣಮಟ್ಟ ಏನಿದೆಯೋ ಗೊತ್ತಿಲ್ಲ. ಅದನ್ನು ಉಪಯೋಗಿಸುತ್ತಿದ್ದಾರೆ. ಕೆಲವು ಕಡೆ ಬಂದಿರುವಂತಹ ಅಕ್ಕಿ ಎಷ್ಟು ಕಳಪೆ ಅಕ್ಕಿ ಎಂದರೆ, ನಾಲ್ಕೈದು ವರ್ಷಗಳ ಹಳೆಯ ಅಕ್ಕಿ. ಮುಗ್ಗಲಕ್ಕಿಯನ್ನು ತಂದು ನೀರಿಗೆ ಹಾಕಿದರೆ ಪೂರ್ತಿ ಮುದ್ದೆಯಾಗತಕ್ಕಂತಹ ಅಕ್ಕಿ. ಎರಡು ಸಾರಿ ನೀರು ಹಾಕಿ ತೊಳೆದರೆ ಸಂಪೂರ್ಣವಾಗಿ ಕರಗಿ ಹೋಗತಕ್ಕಂತಹ ಅಕ್ಕಿಯನ್ನು ಉಪಯೋಗಿಸಿದಂತಹ ದೂರುಗಳು ಬಂದಿವೆ. ನಮಗೆ ಗೊತ್ತಿರುವ

ಹಾಗೆ ಕುಡಿಯುವುದಕ್ಕೆ ನೀರಿಲ್ಲದೆ ಇರತಕ್ಕಂತಹ ಶಾಲೆಗಳಲ್ಲಿ ಪಾತ್ರೆಗಳನ್ನು ಬೇರೆ ಕಡೆಯಿಂದ ತಂದು, ತಾವು ಗ್ಯಾಸ್ ತಂದು ಅದರಲ್ಲಿ ಬೇಯಿಸಬೇಕೆಂದು ಹೇಳಿದ್ದೀರಿ. ಯಾವ ಕಡೆಯೂ ಗ್ಯಾಸ್ ಸಂಪೂರ್ಣವಾಗಿ ಸರಬರಾಜಾಗಿಲ್ಲ. ಕೇವಲ ಕೆಲವು ಶಾಲೆಗಳಲ್ಲಿ ಯಾರದೋ ಮನೆಯಿಂದ ತಂದು, ಛೇರ್ಮನ್‌ರ ಮನೆಯಿಂದಲೋ ಅಥವಾ ಯಾವುದೋ ಶಾಲಾ ಶಿಕ್ಷಕರ ಮನೆಯಿಂದ ತಂದು ಪ್ರಾರಂಭ ಮಾಡಿದಂತಹ ವ್ಯವಸ್ಥೆಯಾಗಿದೆ. ಇನ್ನು ಅಡಿಗೆಯವರನ್ನು ನೇಮಕ ಮಾಡಿರತಕ್ಕಂಥ ಪದ್ಧತಿ ಏನಿದೆ, ಆ ನೇಮಕ ಮಾಡುವಾಗ ಮೊದಲು ಹಿಂದುಳಿದ ವರ್ಗದವರು, ನಂತರ ಪರಿಶಿಷ್ಟ ಜಾತಿಯವರು, ನಂತರ ಬೇರೆ ಸಾಮಾನ್ಯ ವರ್ಗದವರು, ಹಿಂದುಳಿದವರು ಎಂದು ತಾವೇನು ನೇಮಕ ಮಾಡಿದ್ದೀರಿ. ಆ ಆದೇಶವನ್ನು ತಾವೇನು ಕಳುಹಿಸಿದ್ದೀರೋ ಅದರ ಪ್ರಕಾರ ಬಹುತೇಕ ಶಾಲೆಗಳಲ್ಲಿ ಆಗಿಲ್ಲ. ತಾವೇನು ನಿರ್ದೇಶನ ಕಳುಹಿಸಿದ್ದೀರೋ ಅದರ ಪ್ರಕಾರ ಎಲ್ಲೂ ನೇಮಕವಾಗಿಲ್ಲ. ಒಂದು ವೇಳೆ ನೇಮಕ ಆಗಿದ್ದರೂ ಕೂಡ ನಮಗೆಲ್ಲ ಗೊತ್ತಿರುವ ಹಾಗೆ ಎಲ್ಲಾ ಶಾಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಅಡಿಗೆಯವರ ಕೈಯಲ್ಲಿ ಯಾರೂ ಅಡುಗೆಯನ್ನು ಮಾಡಿಸಿಲ್ಲ. ಇದರಿಂದ ಬಹಳ ನೋವಾಗಿದೆ. ಈ ಒಂದು ಯೋಜನೆಯಿಂದ ಸಮಾಜದಲ್ಲಿ ಎಂಥ ಕೆಟ್ಟ ಬೆಳವಣಿಗೆಯಾಗಿದೆ ಎಂದರೆ ಜಾತಿ ವ್ಯವಸ್ಥೆ ಇನ್ನೂ ಬಹಳ ಹೆಚ್ಚಾದಂತೆ ತೋರಿಸುತ್ತಿದೆ. ಜಾತಿ ವ್ಯವಸ್ಥೆ ಇವೊತ್ತು ಮುಚ್ಚಿಕೊಂಡಿತ್ತು. ಸಂಪೂರ್ಣವಾಗಿ ಇದು ನಿರ್ಮೂಲನೆ ಆಗಿದೆ ಎಂದು ನಾನು ಹೇಳುವುದಿಲ್ಲ. ಆದರೆ ಅದು ಬಯಲಿಗೆ ಬಂದಿರಲಿಲ್ಲ. ನಮ್ಮ ಸರ್ಕಾರವಿದ್ದಾಗ ನಾವು ಫ್ರೀ ಯೂನಿಫಾರ್ಮ್ ಮತ್ತು ಟೆಕ್ಸ್ಟ್ ಬುಕ್ಸ್ ಕೊಡುತ್ತಿದ್ದೆವು. ಇದರ ಉದ್ದೇಶ ಏನು? ಫ್ರೀ ಯೂನಿಫಾರ್ಮ್ ಕೊಡತಕ್ಕಂಥ ಉದ್ದೇಶವನ್ನು ಮಾನ್ಯ ಚಂದ್ರಶೇಖರ್‌ರವರು ಕೇಳಬೇಕು. ಫ್ರೀಯೂನಿಫಾರ್ಮ್ ಕೊಡುವ ಕಾನ್‌ಸೆಪ್ಟ್ ಏನಿತ್ತು ಎಂದರೆ ಯಾವುದೇ ಮಕ್ಕಳು, ಅವರು ಐಶ್ವರ್ಯವಂತರ ಮಕ್ಕಳಿರಬಹುದು. ಪರಿಶಿಷ್ಟ ಜಾತಿಯವರ ಮಕ್ಕಳಿರಬಹುದು. ಬೇರೆ ಯಾರದೇ ಮಕ್ಕಳಿರಬಹುದು. ಆ ಶಾಲೆಯಲ್ಲಿ ಎಲ್ಲರನ್ನೂ ಸಮನಾಗಿ ಕಾಣಬೇಕು. ಆ ಮಕ್ಕಳ ಚಿಕ್ಕ ಮನಸ್ಸಿನಲ್ಲಿ ಯಾವುದೇ ಒಂದು ಭೇದಭಾವದ ಮನಸ್ಸು ಬರಬಾರದು. ಅಭಿಪ್ರಾಯಗಳು ಬರಬಾರದು. ನಾವೆಲ್ಲರೂ ಸಮ ಎನ್ನುವ ಭಾವನೆ ಮಕ್ಕಳಲ್ಲಿ ಇರಬೇಕು ಎಂದೇ ನಾವು ಫ್ರೀ ಯೂನಿಫಾರ್ಮ್ ಕೊಡುವ ಕಾನ್‌ಸೆಪ್ಟ್ ಇಟ್ಟುಕೊಂಡು ಜಾರಿಗೆ ತಂದದ್ದು. ಅದರಿಂದ ಒಬ್ಬರಿಗೊಬ್ಬರು ಮಕ್ಕಳುಗಳಲ್ಲಿ, ಈ ಮಗು ಕಾರ್‌ನಲ್ಲಿ ಬಂದದ್ದು, ಇವನ ತಂದೆ ದೊಡ್ಡ ಅಧಿಕಾರಿ, ಐಶ್ವರ್ಯವಂತರು, ಹೀಗೆ ಈ ರೀತಿಯ ಭಾವನೆ ಬರುತ್ತಿರಲಿಲ್ಲ. ಏಕೆಂದರೆ ಎಲ್ಲರೂ ಒಂದೇ ರೀತಿಯ ಯೂನಿಫಾರ್ಮ್‌ನಲ್ಲಿರುತ್ತಿದ್ದರು. ಅದು ಎಷ್ಟು ಯಶಸ್ವಿಯಾಗಿ ನಡೆಯುತ್ತಾ ಇತ್ತು. ಆದರೆ ತಾವು ತಂದಂಥ ಸ್ಕೀಂನಲ್ಲಿ ಏನು ಮಾಡಿದಿರೆಂದರೆ ಎಲ್ಲಾ ಚಿಕ್ಕ ವಯಸ್ಸಿನ ಮಕ್ಕಳ ಯಂಗ್ ಮೈಂಡ್‌ನಲ್ಲಿ ನಾನು ಈ ಜಾತಿ, ನನ್ನನ್ನು ಬೇರೆ ಕಡೆ ಕೂರಿಸಿ ಬೇರೆ ಮಾಡಿದ್ದಾರೆ. ತಾವು ನೋಡಿ ಕೆಲವು ಕಡೆಗಳಲ್ಲಿ ಪ್ರತ್ಯೇಕವಾದಂಥ ಸಾಲಿನಲ್ಲಿ ಮಕ್ಕಳನ್ನು ಕೂರಿಸಿದ್ದಾರೆ. ಇದರಿಂದಾಗಿ ಚಿಕ್ಕ ವಯಸ್ಸಿನ ಮಕ್ಕಳ ಮನಸ್ಸಿನಲ್ಲಿ ಏನು ಪರಿಣಾಮ ಬೀರಿರಬಹುದು? ಇನ್ನು ಅಕಸ್ಮಾತ್ ಪರಿಶಿಷ್ಟ ಜಾತಿಯವರು ಏನಾದರೂ ಅಡುಗೆ ಮಾಡಿದ್ದರೆ ಏನಾಗಿದೆ ಎಂಬ ಬಗ್ಗೆ ತಾವೆಲ್ಲರೂ ಪೇಪರ್‌ನಲ್ಲಿ ನೋಡಿದ್ದೀರಿ, ಸಗಣಿಯಲ್ಲಿ ಸ್ನಾನ ಮಾಡಿಸಿರತಕ್ಕಂಥದ್ದು. ಸಗಣಿ ನೀರು ಚೆಲ್ಲಿರತಕ್ಕಂಥದ್ದು, ಸ್ನಾನ ಮಾಡಿಸಿ ಅವಮಾನ ಮಾಡಿರತಕ್ಕಂಥದ್ದು, ಮತ್ತೆ ನೀವ್ಯಾರು ಪರಿಶಿಷ್ಟ ಜಾತಿಯವರನ್ನು ಅಡುಗೆ ಮಾಡಲು ನೇಮಕ ಮಾಡಿಕೊಂಡಿದ್ದೀರೋ ಅವರು ಯಾರನ್ನೂ ಒಳಗಡೆ

ಬಿಟ್ಟಿಲ್ಲ. ಸೌದೆ ತರುವುದಕ್ಕೆ, ಸೌದೆ ಕಟ್ ಮಾಡುವುದಕ್ಕೂ ಅವರನ್ನು ಉಪಯೋಗಿಸಿಕೊಂಡಿರತಕ್ಕಂಥ ಸಂದರ್ಭಗಳು ನಡೆದಿವೆ. ಒಂದು ವೇಳೆ ಬಲವಂತವಾಗಿ ನೇಮಕ ಮಾಡಿಕೊಂಡಿದ್ದರೆ ಅವರನ್ನು ಹೊರಗೆ ಕೂರಿಸಿ ಬೇರೆಯವರ ಕೈಯಲ್ಲಿ ಅಡುಗೆ ಮಾಡಿಸಿದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ ಇಂಥ ಒಂದು ಯೋಜನೆಯನ್ನು ತಂದು ಬೊಬ್ಬೆ ಹೊಡೆದುಕೊಳ್ಳತಕ್ಕಂಥ ಪರಿಸ್ಥಿತಿ ಏನಿದೆ? ಇದನ್ನು ಯಾವ ಪುರುಷಾರ್ಥಕಕ್ಕಾಗಿ ತಾವು ಮಾಡಿದ್ದೀರಿ? ಈ ಯೋಜನೆ ಪ್ರಾರಂಭ ಮಾಡುವುದಕ್ಕೆ ಅಡುಗೆ ಮಾಡಲು ಪ್ರತ್ಯೇಕವಾದಂಥ ಕೊಠಡಿ ಎಲ್ಲಿದೆ? ನೀರಿನ ವ್ಯವಸ್ಥೆ ಎಲ್ಲಿದೆ? ಶುದ್ಧವಾದಂಥ ಅಕ್ಕಿಯನ್ನು ತಾವೆಲ್ಲಿ ತಂದಿದ್ದೀರಿ? ಯಾವ ಎಣ್ಣೆಯನ್ನು ಉಪಯೋಗಿಸಿಕೊಳ್ಳುತ್ತಿದ್ದೀರಿ? ಅಡುಗೆಯವರು ಯಾರಿದ್ದಾರೆ? ಈ ಯಾವೊಂದು ವ್ಯವಸ್ಥೆಯನ್ನು ತಾವು ಮಾಡದೆಯೇ ಮತ್ತು ಇವೊತ್ತು ಜಾತಿ ವ್ಯವಸ್ಥೆ ಸಂಪೂರ್ಣವಾಗಿ ನಿರ್ಮೂಲನಾ ಆಗದೇ ಇರತಕ್ಕಂಥ ವ್ಯವಸ್ಥೆಯೊಳಗಡೆ ಜಾತಿಯನ್ನು ನೀವು ಇನ್ನೂ ಉಲ್ಬಣ ಮಾಡಿರತಕ್ಕಂಥದ್ದು ಆಗಿದೆ. ನಾನು ಹೇಳುತ್ತೇನೆ. ನಮ್ಮ ಸರ್ಕಾರ ಫ್ರೀಯೂನಿಫಾರ್ಮ್ ಕೊಡುವ ಮೂಲಕ ಜಾತಿ ನಿರ್ಮೂಲನಾ ಮಾಡತಕ್ಕಂಥ ಕಾರ್ಯಕ್ರಮ ಮಾಡಿ ಮಕ್ಕಳು ಸಮನಾಗಿರಬೇಕು ಎಂದು ಮಾಡಿದೆವು. ಆದರೆ ತಾವು ಈ ಯೋಜನೆಯನ್ನು ತಂದು ಜಾತಿ ವ್ಯವಸ್ಥೆಯನ್ನು ಇನ್ನು ಹೆಚ್ಚು ಮಾಡುವುದಕ್ಕೆ ಹೊರಟಿದ್ದೀರಿ. ಇವೊತ್ತು ಆ ಮಕ್ಕಳ ಮನಸ್ಸಿನ ಮೇಲೆ ಏನು ಪರಿಣಾಮ ಬೀರಿದೆ ಗೊತ್ತೇ? ಅವರನ್ನು ಪ್ರತ್ಯೇಕವಾಗಿ ಕೂರಿಸಿದ್ದರೆ, ಅಥವಾ ಸಗಣಿ ನೀರು ಚೆಲ್ಲಿ ಸ್ನಾನ ಮಾಡಿಸಿದ್ದರೆ ಎಂಥ ಭಾವನೆ ಆ ಸಣ್ಣ ಮಕ್ಕಳಲ್ಲಿ ಬಂದಿರಬಹುದು ಗೊತ್ತೇ? ಅಂಥವರು ಇನ್ನು ಮುಂದೆ ಬೆಳೆಯುತ್ತಾ, ಬೆಳೆಯುತ್ತಾ ಯಾವ ಒಂದು ಮಟ್ಟದಲ್ಲಿ ಬೆಳೆಯುತ್ತಾರೆ. ಈವೊಂದು ಕಾರ್ಯಕ್ರಮದಿಂದ ಒಂದು ಜಾತಿಯ ಸೋಂಕು ಜಾಸ್ತಿಯಾಗಿದೆಯೆಂದು ನಾನು ಹೇಳುತ್ತೇನೆ. ಮಕ್ಕಳಿಗೆ ಅವಮಾನಕರವಾಗುವ ರೀತಿಯಲ್ಲಿ ಯೋಜನೆಯನ್ನು ನೀವು ಜಾರಿಯಲ್ಲಿ ತಂದಿದ್ದೀರಿ.

ಛೇರ್ಮನ್ : ಮಾನ್ಯ ಸೋಮಶೇಖರ್‌ರವರೆ, ಮಕ್ಕಳನ್ನು ಪ್ರತ್ಯೇಕವಾಗಿ ಕೂರಿಸಿದ್ದರು ಎಂದು ತಾವು ಹೇಳಿದಿರಿ. ಸರ್ಕಾರದಿಂದ ಏನು ಕ್ರಮವಾಗಿದೆ ಇದಕ್ಕೆ?

ಶ್ರೀ ಬಿ. ಸೋಮಶೇಖರ್ : ಎಷ್ಟೋ ಕಡೆ ಆಗಿದೆ. ಪ್ರತ್ಯೇಕವಾಗಿ ಕೂರಿಸಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಯಾರು ಅಡುಗೆಯನ್ನು ಮಾಡಿದ್ದಾರೋ ಅವರನ್ನು ಹೊರಗಡೆ ಇಟ್ಟಿದ್ದಾರೆ.

ಛೇರ್ಮನ್ : ಮಕ್ಕಳನ್ನು ಪ್ರತ್ಯೇಕವಾಗಿ ಕೂರಿಸಿದ್ದಾರೆಯೇ?

ಶ್ರೀ ಬಿ. ಸೋಮಶೇಖರ್ : ಕೂರಿಸಿದ್ದಾರೆ ಬೇಕಾದಷ್ಟು ಕಡೆ. ನಾವು ನೋಡಿದ್ದೇವೆ. ಗೋಮೂತ್ರ ಕುಡಿಸಿದ್ದಾರೆ. ಇಂತ ಅಮಾಯಕ ಕೃತ್ಯವನ್ನು ಈ ಯೋಜನೆ ಜಾರಿಯಲ್ಲಿ ತಂದು ಸರ್ಕಾರ ಮಾಡಿಸಿದೆ. ಆ ಮಕ್ಕಳ ಮನಸ್ಸಿನಲ್ಲಿ ಏನು ಪರಿಣಾಮ ಬೀರುತ್ತದೆ ಗೊತ್ತೇ. ಅದು ಅವರಿಗೆ ಗೊತ್ತಿಲ್ಲ. ನಾವು ಸಮಾನತೆಯನ್ನು ತರಲು ಪ್ರಯತ್ನ ಮಾಡಿದ್ದೀವಿ. ನೀವು ಅಸಮಾನತೆಯನ್ನು ಎತ್ತಿತೋರಿಸುತ್ತಿದ್ದೀರಿ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಸೋಮಶೇಖರ್‌ರವರೆ, ತಾವು ಹೇಳುವಂಥದ್ದು ಒಂದು ಭಾಗ. ಆಕಸ್ಮಿಕವಾಗಿ ಅದನ್ನು ಮಾಡದೇ ಇದ್ದಿದ್ದರೆ ಅದು ಹೇಗೆ ಸರಿಹೋಗುತ್ತಿತ್ತು ಎನ್ನುವುದರ ಬಗ್ಗೆ ಸ್ವಲ್ಪ ತಾವು ಹೇಳಬೇಕಲ್ಲವೇ? ಈ ಕಾರ್ಯಕ್ರಮ ಜಾರಿಗೆ ಬರದಿದ್ದರೆ ಆ ವ್ಯವಸ್ಥೆ ಹೇಗೆ ತಾನೇ ತಾನಾಗಿ ಸರಿಯಾಗಿರುತ್ತಿತ್ತು ಎನ್ನುವುದರ ಬಗ್ಗೆ ಹೇಳಬಹುದಲ್ಲಾ.

ಶ್ರೀ ಬಿ. ಸೋಮಶೇಖರ್ : ಆ ಬಗ್ಗೆ ನಾನು ಮುಂದೆ ಮಾತನಾಡುತ್ತೇನೆ.

ಡಾ: ಜಿ. ಪರಮೇಶ್ವರ್ : ಗೋಮೂತ್ರ ಕುಡಿಸಿದರು ಎಂದು ತಾವು ಹೇಳಿದಿರಿ. ಎಲ್ಲಾದರೂ ಸ್ಪೆಸಿಫಿಕ್ ಕೇಸಸ್‌ಗಳಿದ್ದರೆ, ಇಂಥ ಶಾಲೆಯಲ್ಲಿ ಕುಡಿಸಿದ್ದಾರೆ, ಇಂಥ ಟೀಚರ್ಸ್ ಎಂದು ಸ್ಪೆಸಿಫಿಕ್ ಆಗಿ ತಾವು ಏನಾದರೂ ಹೇಳಿದರೆ ಇಲ್ಲಿಯೇ ಸಂಬಂಧಪಟ್ಟ ಸಚಿವರು ಇದ್ದಾರೆ. ಅಂಥ ಶಾಲೆಯ ಶಿಕ್ಷಕರ ಮೇಲೆ ಕ್ರಮ ತೆಗೆದುಕೊಳ್ಳುವುದೋ ಅಥವಾ ಮತ್ತೇನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಪರಿಶೀಲಿಸುತ್ತಾರೆ. ಆದ್ದರಿಂದ ಆ ಬಗ್ಗೆ ಡಿಟೈಲ್ಸ್ ಕೊಡಿ.

ಶ್ರೀ ಎಸ್.ಎಸ್. ಪಾಟೀಲ್ : ಟಿ.ವಿ. ಯಲ್ಲಿಯೇ ಸಂದರ್ಶನ ತೋರಿಸಿದರು. ಬಹುತೇಕ ತಮ್ಮ ಜಿಲ್ಲೆಯೊಳಗೊ ಅಥವಾ ಉತ್ತರ ಕನ್ನಡ ಜಿಲ್ಲೆಯೊಳಗೋ ನನಗೆ ಗೊತ್ತಿಲ್ಲ. ಅಲ್ಲಿ ಹೆಡ್ ಮಾಸ್ಟರ್ ಟಿ.ವಿ. ಸಂದರ್ಶನದಲ್ಲಿ ಏನು ಹೇಳಿದ್ದಾರೆಂದರೆ ಇಂಥವರು ಅಡುಗೆ ಮಾಡುತ್ತಾರೆ ಆದ ಕಾರಣ ಇಲ್ಲಿಗೆ ಬ್ರಾಹ್ಮಣರು ತಮ್ಮ ಹುಡುಗರನ್ನು ಕಳುಹಿಸುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಮುಂದೆ ಸರಿ ಹೋಗುತ್ತದೆ. ಎಂದು ಹೇಳಿದ್ದಾರೆ.

ಡಾ: ಜಿ. ಪರಮೇಶ್ವರ್ : ನಮ್ಮ ಜಿಲ್ಲೆಯಲ್ಲಂತೂ ಅಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಟಿ.ವಿ. ಸಂದರ್ಶನದಲ್ಲಿಯೇ ಶಾಲೆಯ ಹೆಡ್ ಮಾಸ್ತರರೇ ಹೇಳಿದ್ದಾರೆ. ಇವೆಲ್ಲ ಓಪನ್ ಸೀಕ್ರೇಟ್. ನೀವೇನು ಪ್ರಶ್ನೆ ಮಾಡುವ ಹಾಗೆ ಇಲ್ಲವೇ ಇಲ್ಲ. ಮತ್ತೆ ಜಾತೀಯತೆ ಹೆಚ್ಚಾಯಿತು.

ಶ್ರೀ ಡಿ.ಆರ್. ಪಾಟೀಲ್ : ಬ್ರಾಹ್ಮಣರ ಹುಡುಗರನ್ನು ಶಾಲೆಗೆ ಕಳುಹಿಸುವುದು ಬೇರೆ ವಿಚಾರ. ಆದರೆ ಸೋಮಶೇಖರ್‌ರವರು ಶಾಲೆಯಲ್ಲಿಯೇ ಬೇರೆ ವ್ಯವಸ್ಥೆ ಮಾಡುತ್ತಿದ್ದಾರೆ ಎಂದು ಹೇಳಿದರಲ್ಲಾ, ಅದು ನಡೆದಿಲ್ಲ. ನಮ್ಮ ಕಡೆಯಂತೂ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನಮ್ಮ ಕಡೆಯೂ ಇಲ್ಲ. ಲಿಂಗಾಯತರು, ಗೌಡರು ಬ್ರಾಹ್ಮಣರು ಎಲ್ಲರೂ ಇರುತ್ತಾರೆ. ಆದರೆ ಕೆಲವು ಭಾಗಗಳಲ್ಲಿ ಇದೆ. ಸಾರಾಸಗಟಾಗಿ ಎಲ್ಲಾ ಕಡೆ ಈ ರೀತಿ ಪ್ರತ್ಯೇಕವಾಗಿ ಕೂರಿಸುತ್ತಾರೆ. ಎಂದು ಹೇಳುತ್ತಿಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಛೇರ್ಮನ್‌ರವರೆ, ಈ ಪದ್ಧತಿ ಎಲ್ಲೂ ಇಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನೀವು ಬೇಕಾದರೆ ಉತ್ತರ ಕರ್ನಾಟಕದಲ್ಲಿ ಬಂದು ನೋಡಿ. ಅಲ್ಲೇನಾದರೂ ಈ ಪರಿಸ್ಥಿತಿ ಇದ್ದರೆ ತೋರಿಸಿರಿ. ಬೆಳಗಾಂ ಜಿಲ್ಲೆಯಲ್ಲಿ ತೋರಿಸಿರಿ. ಬಿಜಾಪುರದಲ್ಲಿ ತೋರಿಸಿರಿ. ಅಲ್ಲಿ ಎಲ್ಲಿಯೂ ಕೂಡ ಈ ಪದ್ಧತಿ ಇಲ್ಲ. ಹೀಗಿರುವಾಗ ನೀವು ಸುಮ್ಮನೆ ಈ ರೀತಿ ಆರೋಪ ಮಾಡುವುದು ನಮಗೇನೋ ಅಷ್ಟು ಸರಿ ಎನಿಸುತ್ತಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ದಯಿವಿಟ್ಟು ನಾನು ಮಾನ್ಯ ಸೋಮಶೇಖರ್‌ರವರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ ಒಂದು ವೇಳೆ ಎಲ್ಲಾದರೂ ಈ ರೀತಿ ಪ್ರತ್ಯೇಕವಾಗಿ ಕೂರಿಸಿದ ಘಟನೆ ನಡೆದಿದ್ದರೆ ಆ ಬಗ್ಗೆ ಚರ್ಚೆಯಲ್ಲಿ ಮಾತನಾಡದೇ ನೀವು ಮತ್ತು ಚಂದ್ರಶೇಖರ್‌ರವರೂ ಇಬ್ಬರೂ ಕುಳಿತು ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಹುದು. ಆ ರೀತಿ ಮಾಡದೇ ಇದ್ದರೆ ಈ ರೀತಿಯಲ್ಲಿ ವಿಚಾರ ಮಾಡಬೇಕು ಎಂದು ಹೇಳಿ ಇಲ್ಲದಿದ್ದರೆ ನಾವೇ ಹುಟ್ಟುಹಾಕುತ್ತೇವೇನೋ ಎನ್ನುವ ಹಾಗೆ ಆಗುತ್ತದೆ ನಾಳೆ ದಿನ ಪತ್ರಿಕೆಯಲ್ಲಿ ಇದು ಬಂತು ಎಂದರೆ, ಆದ್ದರಿಂದ ಈಗಲೇ

ನಾನು ನನ್ನ ಪತ್ರಿಕಾ ಸ್ನೇಹಿತರಿಗೆ ರಿಕ್ವೆಸ್ಟ್ ಮಾಡಿಕೊಳ್ಳುವುದೇನೆಂದರೆ ದಯವಿಟ್ಟು ಈ ರೀತಿ ಅದು ಪತ್ರಿಕೆಯೊಳಗೆ ಬರದಂತೆ ನೋಡಿಕೊಳ್ಳಬೇಕು.

ಶ್ರೀ ಬಿ. ಸೋಮಶೇಖರ್ : ಇದನ್ನು ನಾನು ಹುಟ್ಟಿಸಿಕೊಂಡು ಹೇಳುತ್ತಿಲ್ಲ.

ಪ್ರೊ ಬಿ.ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಸೋಮಶೇಖರ್‌ರವರೆ, ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಬೇಕು.

ಛೇರ್ಮನ್ : ಈಗ ಸಚಿವರು ಮಾತನಾಡುತ್ತಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಗೊಂದಲ

ಛೇರ್ಮನ್ : ಯಾವುದನ್ನು ರೆಕಾರ್ಡ್‌ಮಾಡಬೇಡಿ. ಯಾವುದೂ ರೆಕಾರ್ಡ್ ಆಗುವುದಿಲ್ಲ ಎಲ್ಲರೂ ಕುಳಿತುಕೊಳ್ಳಿ, ಸಚಿವರು ಮಾತನಾಡುತ್ತಾರೆ ದಯವಿಟ್ಟು ಕುಳಿತುಕೊಳ್ಳಿ.

ಪ್ರೊ ಬಿ.ಕೆ. ಚಂದ್ರಶೇಖರ್ : ಮಾನ್ಯ ಛೇರ್ಮನ್‌ರವರೆ, ನನ್ನದೊಂದೇ ಪ್ರಾರ್ಥನೆ ಮಾನ್ಯ ಸೋಮಶೇಖರ್‌ರವರು ಬಹಳ ಅನುಭವಿ ಶಾಸಕರು, ಮಂತ್ರಿಯಾಗಿದ್ದವರು, ಬೇರೆ ಬೇರೆ ಇಲಾಖೆಗಳಲ್ಲಿ ಮಂತ್ರಿಯಾಗಿ ಕೆಲಸ ಮಾಡಿದವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಸಚಿವರಾಗಿಯೂ ಕೆಲಸ ಮಾಡಿದವರು. ಅವರಲ್ಲಿ ನನ್ನದಿಷ್ಟೆ ಪ್ರಾರ್ಥನೆ ಬಾಕಿಯದು ಅವರ ಜಡ್ಜ್‌ಮೆಂಟ್‌ಗೆ ಬಿಡುತ್ತೇನೆ. ನಾವು ಸರ್ವೇ ಸಾಮಾನ್ಯವಾಗಿ ಮಾತನಾಡಿ ಎಲ್ಲೋ ಎರಡೋ, ಮೂರೋ, ನಾಲ್ಕೋ, ಹತ್ತೋ ಕಡೆ ಹೋಗಿ ಇಡೀ ರಾಜ್ಯದಲ್ಲಿ ಹೀಗಿದೆ ಎನ್ನುವ ಮಾತನ್ನು ನಾವು ಹೇಳಿದಾಗ, ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿದಂತೆ ಆ ದೊಡ್ಡ ಅಪಾಯ ಇದೆ. ನಾಳೆ ಜವಾಬ್ದಾರಿ ನಮ್ಮೆಲ್ಲರ ತಲೆಯ ಮೇಲೆ ಬೀಳುತ್ತದೆ. ಪತ್ರಿಕೆಯಲ್ಲೂ ಹಾಗೆಯೇ ವರದಿ ಮಾಡುತ್ತಾರೆ. ಆದ್ದರಿಂದ ಆ ಆತಂಕ ನಿಜವಾಗಿಯೂ ಇದೆ. ಆದ್ದರಿಂದ ಬಹಳ ಗೌರವದಿಂದ, ವಿನಮ್ರತೆಯಿಂದ ನಿಮ್ಮನ್ನು ಕೇಳಿಕೊಳ್ಳುತ್ತೇನೆ. ದಯವಿಟ್ಟು ನೀವು ಜನರಲೈಸ್ ಮಾಡಬೇಡಿ. ನೀವು ನ್ಯೂನ್ಯತೆಗಳಿರುವುದನ್ನು ಟೀಕೆ ಮಾಡಿ. ಮಾನ್ಯ ಜಗದೀಶ್ ಶೆಟ್ಟರ್‌ರವರೂ ಕೂಡ ಮೊನ್ನೆ ಹೇಳಿದ್ದಾರೆ. ಮೇಲ್ಮನೆಯಲ್ಲೂ ಕೂಡ ಅದು ಬಂದಿದೆ. ಇಷ್ಟು ನಕಾರಾತ್ಮಕವಾಗಿ ಒಂದು ರೀತಿಯಲ್ಲಿ ವ್ಯಂಗ್ಯವಾಗಿ ಅಪಹಾಸ್ಯದಿಂದ ನಾವು ಮಾತನಾಡಿಬಿಟ್ಟರೆ ಸರಿಯಲ್ಲ. ಖಂಡಿತವಾಗಿ ಇಲ್ಲಿ ಏನೂ ಆಗಿಲ್ಲ. ಆದ್ದರಿಂದ ಆ ರೀತಿ ಮಾತನಾಡಿದರೆ ಅಪಾಯವಿದೆಯೇ ಹೊರತು ಒಳ್ಳೆಯದಲ್ಲ ಎಂದು ಹೇಳುತ್ತೇನೆ. ಕಡೆಗೆ ಒಂದು ರಿಕ್ವೆಸ್ಟ್ ಮಾಡಿಕೊಳ್ಳಬೇಕಾಗುತ್ತದೆ. ಈ ಯೋಜನೆ ಸೋಮಶೇಖರ್‌ರವರ ಕ್ಷೇತ್ರದಲ್ಲಿ ಬೇಕೋ, ಬೇಡವೋ ಎಂದು ಅವರು ಹೇಳಲಿಯೆಂದು ನಾನು ಅವರನ್ನು ಕೇಳಿಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಛೇರ್ಮನ್‌ರವರೆ ನಾನು ಉದ್ದೇಶ ಪೂರ್ವಕವಾಗಿ ಇದನ್ನು ನಾನೇ ಸ್ವತಃ ಹುಟ್ಟಿಹಾಕಿಕೊಂಡು ಹೇಳುತ್ತಿಲ್ಲ. ನಾನು ಹುಟ್ಟಿ ಹಾಕಿದ ವಿಚಾರವೇನಲ್ಲ. ಬಹಳ ನೋವಿನಿಂದ, ಈ ಒಂದು ಯೋಜನೆಯಿಂದ ಆ ಸಣ್ಣ ಮಕ್ಕಳ ಮನಸ್ಸಿನಲ್ಲಿ ಏನು ಪರಿಣಾಮ ಬೀರುತ್ತಿದೆ ಎಂಬುದನ್ನು ಹೇಳಿದ್ದೇನೆ. ಆ ಕೆಲಸಕ್ಕೆ ಏನು ನೇಮಕ ಮಾಡಿಕೊಂಡಿರುತ್ತೀರಿ, ಇದಕ್ಕೆ ಉದಾಹರಣೆಗೆ ಹೇಳುತ್ತೇನೆ. ದಿನಾಂಕ 4.07.2003ರಲ್ಲಿ ಒಂದು ಪತ್ರಿಕೆಯಲ್ಲಿ ಬಂತು. 'ಜಾತಿ ಸೋಂಕು' 'ಅಕ್ಷರ ದಾಸೋಹ ನಿರ್ವಹಣೆ ಸ್ತ್ರೀಶಕ್ತಿ ಗುಂಪುಗಳಿಗೆ ತಾವು ಏನು ಹೇಳಿದಿರಿ ಸರ್ಕಾರ ಆರಂಭಿಸಿರುವ ಮಹಾತ್ವಾಕಾಂಕ್ಷೆಯ ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ಅಡಿಗೆಯವರ ಮತ್ತು ಅಡಿಗೆ ಸಹಾಯಕರ ನೇಮಕಾತಿ ವಿಚಾರದಲ್ಲಿ ರಾಜ್ಯದಲ್ಲಿ ವ್ಯಾಪಕ ಪ್ರಮಾಣದಲ್ಲಿ ಜಾತಿ ಸೋಂಕು ತಟ್ಟಿರುವ ಹಿನ್ನೆಲೆಯಲ್ಲಿ

ಅಡಿಗೆಯ ಜವಾಬ್ದಾರಿಯನ್ನು ಸ್ತ್ರೀಶಕ್ತಿ ಗುಂಪುಗಳಿಗೆ ವಹಿಸಲು ಸರ್ಕಾರ ನಿರ್ಧರಿಸಿದೆ. ಜುಲೈ ಒಂದರಿಂದ ರಾಜ್ಯವಿಡೀ ಸಾಂಕೇತಿಕವಾಗಿ ಆರಂಭವಾಗಿರುವ ಮತ್ತು 16 ರಿಂದ ಪೂರ್ಣ ಪ್ರಮಾಣದಲ್ಲಿ ಆರಂಭವಾಗಲಿರುವ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ ಮಾಡಿ ಬಡಿಸುವ ಹೊಣೆಗಾರಿಕೆ ವಿಚಾರದಲ್ಲಿ ರಾಜ್ಯವಿಡೀ ಜಾತಿ ಸೋಂಕು ತಗಲಿದೆ. ಇದೇ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಗೊಲ್ಲರಹಟ್ಟಿಯಲ್ಲಿ ಜುಲೈ ಒಂದರಿಂದ ಎರಡು ಗುಂಪುಗಳ ಮಧ್ಯೆ ಮಾರಾಮರಿ ನಡೆದು ಒಬ್ಬ ವ್ಯಕ್ತಿ ಸಾವಿಗೀಡಾಗಿದ್ದಾನೆ. ಇದನ್ನು ನಾನು ಹೊಸದಾಗಿ ಹೇಳಿದ್ದೇನಾ? ಇದು ಪತ್ರಿಕೆಯಲ್ಲೂ ಬಂದಿದೆ.

ಪ್ರೊ: ಬಿ.ಕೆ. ಚಂದ್ರಶೇಖರ್ : ತಾವು ಆ ಒಂದು ಪತ್ರಿಕೆಯಲ್ಲಿ ಓದಿದ್ದು ವೇದವಾಕ್ಯ ಅಲ್ಲ. ತಾವು ಏನು ಹೇಳಿದಿರಿ ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಗೊಲ್ಲರಹಟ್ಟಿಯಲ್ಲಿ ಏನಾಯಿತು ಅದಕ್ಕೆ ನಾನು ಉತ್ತರ ಕೊಡುತ್ತೇನೆ. ತಾವು ಹೇಳಿ.

ಶ್ರೀ ಬಿ. ಸೋಮಶೇಖರ್ : ಎಲ್ಲರೂ ಇದನ್ನು ಓದಿರುತ್ತಾರೆ. ನಾನು ಹೇಳಿದ್ದಲ್ಲ. ನಾನು ಹೇಳತಕ್ಕಂಥಾದ್ದು ಪತ್ರಿಕೆಯಲ್ಲಿ ಪ್ರಕಟಣೆಯಾಗಿರುವುದನಲ್ಲ ಇದು ದಿನಾಂಕ: 4.07.03ರಂದು ಎಂದರೆ, ಇದು ಕಾರ್ಯಕ್ರಮ ಪ್ರಾರಂಭವಾದ ಮೂರು ದಿನಕ್ಕೆ ಇದು ಪತ್ರಿಕೆಯಲ್ಲಿ ಬಂದಿರುವುದು. ಇದಕ್ಕೆ ಉತ್ತರ ಕೊಡಿ. ಅದಲ್ಲದೆ ಮತ್ತೆ ಗೋಮೂತ್ರವನ್ನು ಕೂಡ ಕುಡಿಸಿರುವುದು ಇದು ಸಹ ಪೇಪರ್‌ನಲ್ಲಿ ಬಂದಿದೆ. ನಾನು ಹೇಳುವುದಲ್ಲ. ನಾನು ಕೆಲವು ಕಡೆ ಈ ಯೋಜನೆ ಪರಿಣಾಮ, ಅದರ ಬಗ್ಗೆ ಮನಸ್ಸಿನಲ್ಲಿ ಏನು ಹುಟ್ಟಿದೆ ಎನ್ನುವ ವಿಚಾರವನ್ನು ತಿಳಿದುಕೊಂಡು ನಾನು ಮಾತನಾಡುತ್ತಿದ್ದೇನೆ. ಅದಕ್ಕೆ ಪರ್ಯಾಯವಾಗಿ ಹೇಳುತ್ತೇನೆ. ನಾವು 1985ರಲ್ಲಿ ಪ್ರಥಮ ಬಾರಿಗೆ ಫ್ರೀ ಯೂನಿಫಾರಂ ಹಾಗೂ ಟೆಕ್ಸ್ಟ್‌ಬುಕ್‌ಗಳನ್ನು ಕೊಡತಕ್ಕಂಥ ಯೋಜನೆಯನ್ನು ನಮ್ಮ ಸರ್ಕಾರದಲ್ಲಿ ತರುವುದಕ್ಕೆ ಆಗುತ್ತಿರಲಿಲ್ಲ.

ಶ್ರೀ ಬಿ.ಆರ್. ಯಾವಗಲ್ : ಪರಿಶಿಷ್ಟ ಜಾತಿಯವರ ಬಗ್ಗೆ ಹೇಳಿ.

ಶ್ರೀ ಬಿ. ಸೋಮಶೇಖರ್ : ಅದಕ್ಕೆ ಬರುತ್ತಿದ್ದೇನೆ ನಾನು ಹೇಳುತ್ತೇನೆ. ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ.

ಚೇರ್‌ಮನ್ : ಮಾನ್ಯ ಯಾವಗಲ್‌ರವರೇ ನೆಕ್ಸ್ಟ್ ಮಾತನಾಡುವುದು ನೀವೇ ಆಗ ತಾವು ಮಾತನಾಡಿ.

ಶ್ರೀ ಬಿ. ಸೋಮಶೇಖರ್ : ನೀವು ಇದ್ದಿರಿ ನಮ್ಮ ಜೊತೆ ಆಗ.

ಶ್ರೀ ಬಿ.ಆರ್. ಯಾವಗಲ್ : ನಾವು ಇದ್ವಿ, ನೀವು ಇದ್ರಿ, ಆದರೆ ನೀವು ಹೇಳುವಂತಹ ಮಾತು ಇದೆಲ್ಲಾ ಆಗಿದ್ದು ಈ ಕಾರಣಕ್ಕೆ ಎಂದಲ್ಲ. ನೀವು ವಿರೋಧ ಪಕ್ಷದವರು ಹೇಳುವಂತಹ ಕಾರಣ ಅಲ್ಲವೇ ಅಲ್ಲ. ತಾವು ಒಂದು ವಿರೋಧ ಪಕ್ಷದ ನಾಯಕರು, ಆ ಕಾರಣ ಅಲ್ಲವೇ ಅಲ್ಲ. ಅದು ಬೇರೆ ಕಾರಣ.

ಶ್ರೀ ಬಿ. ಸೋಮಶೇಖರ್ : ನಾನು ಮೊದಲೇ ಹೇಳಿದೆ, ಯಾವುದೋ ಒಂದು ಸಮಾಜಘಾತುಕ ಕಾರ್ಯಕ್ರಮವನ್ನು ಮುಚ್ಚುವಂತಹ ಒಂದು ದೃಷ್ಟಿಯಿಂದ ಆ ಒಂದು ಹಿನ್ನೆಲೆಯನ್ನು ಇಟ್ಟುಕೊಂಡು ಯಾವುದರಲ್ಲೋ ಮುಚ್ಚಿಕೊಳ್ಳಬೇಕು ಕವರ್ ಮಾಡಿಕೊಳ್ಳಬೇಕು ಎನ್ನುವ ಕಾರಣಕ್ಕೆ ಹೊರಟಿದ್ದೀರಿ ಹೊರತು, ಇದು ಬಹಳ ಒಳ್ಳೆಯ ಉದ್ದೇಶಕ್ಕೆ ಮಾಡಿದ್ದೀರಿ? There are so

many other way to help these poor people. ಅನ್ನುವುದು ಬರುತ್ತದೆ. ನೀವು ಎಲ್ಲರಿಗೂ ಮೋಸ ಮಾಡುವುದಕ್ಕೆ ಆಗುವುದಿಲ್ಲ. ನಮಗೆ ಎಲ್ಲಾ ಗೊತ್ತಾಗುತ್ತದೆ. ನಾವು ಒಳ್ಳೆಯ ಕಾರ್ಯಕ್ರಮವನ್ನು ಮೆಚ್ಚಿದ್ದೇವೆ ಸ್ವಾಗತ ಮಾಡಿದ್ದೇವೆ. ಈಗ ಸುಮಾರು 200 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಹೇಳಿದ್ದೀರಿ. ಮತ್ತೆ ಇನ್ನೊಂದು ಕಾರ್ಯಕ್ರಮ ಏನು ಹೇಳಿದ್ದೀರಿ, ಹೊಸದಾಗಿ ಪ್ರತ್ಯೇಕವಾಗಿ ಕೊಠಡಿಗಳನ್ನು ಕಟ್ಟಿಸಬೇಕು ಎನ್ನುವ ಒಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ. ಆ ಕೊಠಡಿಗಳು ಎಷ್ಟು ಡೈಮೆನ್‌ಷನ್ ಇರಬಹುದು? ಒಂದು ಸಣ್ಣದಾಗಿ ಅಡಿಗೆ ಮಾಡತಕ್ಕಂಥ ಒಂದು ಕಟ್ಟಡ ಕಟ್ಟಬಹುದು. ಎಂದರೆ 15x10 ಅಳತೆಯಲ್ಲಿ 50 ಸಾವಿರಕ್ಕೊ, 75 ಸಾವಿರಕ್ಕೊ ಅಥವಾ ಒಂದು ಲಕ್ಷ ರೂಪಾಯಿಯೊಳಗೆ ಕಟ್ಟಬಹುದು ಅಥವಾ ಅಷ್ಟು ಆಗದೇ ಇರಬಹುದು. ಅದನ್ನು ಪ್ರಾರಂಭ-ಮಾಡುತ್ತೀರಿ. ಈಗ ಈ ಯೋಜನೆ ಏನು ಮಾಡುತ್ತಿದ್ದೀರಿ, ಇದಕ್ಕೆ ಕೇಂದ್ರ ಸರ್ಕಾರದಲ್ಲಿ ಸ್ಟಾಕ್ ಇರುವುದರಿಂದ ಅವರು ಕೊಡುತ್ತಿದ್ದಾರೆ. ಒಂದು ವೇಳೆ ಈ ಅಕ್ಕಿ ಕೊಡುವುದನ್ನು ನಿಲ್ಲಿಸಿಬಿಡುತ್ತಾರೆ ಎಂದು ತಿಳಿದುಕೊಳ್ಳಿ. ನೀವು ಈ ಯೋಜನೆಗೆ 200 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೀರಿ. 50 ಲಕ್ಷ ಮಕ್ಕಳಿಗೆ ಕೊಡುತ್ತಿರುವಂತಹ ಅಕ್ಕಿ ಅವರು ನಿಲ್ಲಿಸಿಬಿಟ್ಟರೆ 700 ರಿಂದ 800 ಕೋಟಿ ರೂಪಾಯಿ ಬೇಕಾಗುತ್ತದೆ. ಅದಕ್ಕೆ ಸರ್ಕಾರದವರು ಏನು ಸಿದ್ಧತೆ ಮಾಡಿಕೊಂಡಿದ್ದೀರಿ? ಕೇಂದ್ರ ಸರ್ಕಾರದವರು ಒಂದು ವೇಳೆ ಅಕ್ಕಿ ಕೊಡುವುದನ್ನು ನಿಲ್ಲಿಸಿಬಿಟ್ಟರು ಎಂದು ತಿಳಿದುಕೊಳ್ಳಿ, ತಾವು ಏನು ಈ ಯೋಜನೆಗೆ 200 ಕೋಟಿ ರೂಪಾಯಿ ಕೊಡುತ್ತಿದ್ದೀರಿ, ಅದರ ಜೊತೆಗೆ ಇನ್ನೂ 500 ರಿಂದ 600 ಕೋಟಿ ರೂಪಾಯಿ ಕೊಡಬೇಕಾದಂತಹ ಪರಿಸ್ಥಿತಿ ಬರಬಹುದು. ಆಗ ನಿಮ್ಮ ಸಿದ್ಧತೆ ಏನು? ಒಂದು ವೇಳೆ ನಿಲ್ಲಿಸಿದರೆ ಆ ಕೊಠಡಿಗಳಲ್ಲಿ ಶಾಲೆಗಳನ್ನು ನಡೆಸುವುದಕ್ಕೆ ಆಗುವುದಿಲ್ಲ. ಅಲ್ಲಿ ಪಾತ್ರೆ ಒಲೆ ಎಲ್ಲಾ ಹಾಕಿರುತ್ತೀರಿ, ಅದನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ ಎಂದರೆ ಯಾವುದಕ್ಕೆ ಆ ಕೊಠಡಿ ಉಪಯೋಗಿಸಬೇಕು. ಮತ್ತೆ ಸ್ತ್ರೀಶಕ್ತಿ ಗುಂಪುಗಳಿಗೆ ಈ ಯೋಜನೆಯಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿದ್ದೀರಿ. ಒಂದು ಊರಿನಲ್ಲಿ ಒಂದು ಸ್ತ್ರೀಶಕ್ತಿ ಗುಂಪು ಇದೆಯಾ? ನಮಗೆ ಗೊತ್ತಿರುವ ಹಾಗೆ ಏಳೆಂಟು ಜನರನ್ನೊಳಗೊಂಡ 2 ಅಥವಾ 3 ಗುಂಪು ಇದೆ. ಯಾವ ಗುಂಪಿಗೆ ನೀವು ಕೊಡುತ್ತೀರಿ? ಒಂದೊಂದು ಜಾತಿಗೆ ಒಂದೊಂದು ಗುಂಪು ಕಟ್ಟಿರುತ್ತಾರೆ. ಅದರಲ್ಲಿ ಮತ್ತೆ ಕ್ಲಾಷ್ ಆಗುವುದಿಲ್ಲವೇ? ಅದನ್ನು ಯೋಚನೆ ಮಾಡಿ. ಈಗಾಗಲೇ ಒಂದು ಆದೇಶವನ್ನು ಹೊರಡಿಸಿದ್ದೀರಿ. ಈ ನಿರ್ವಹಣೆ ವಿಚಾರದಲ್ಲಿ ನಿನ್ನೆ ಬಂದಂತಹ ಒಂದು ಪ್ರಶ್ನೆ. ಅಕ್ಷರ ದಾಸೋಹ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜಿಲ್ಲಾಮಟ್ಟದ ಅನುಷ್ಠಾನ ಸಮಿತಿಗಳನ್ನು ರಚಿಸಲಾಗಿದೆ. ಎಂದರೆ ಜಿಲ್ಲಾಮಟ್ಟದಲ್ಲಿ ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ರಚನೆಯಾಗಿದೆ. ಮತ್ತು ಮುಖ್ಯ ಕಾರ್ಯದರ್ಶಿಗಳು ಹಾಗೂ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳು ಇವರುಗಳಿಂದ ಅಕ್ಷರ ದಾಸೋಹ ಯೋಜನೆಗೆ ಸಂಬಂಧಪಟ್ಟ ಹಲವಾರು ವಿಷಯಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಗ್ಯಾಸ್ ಮತ್ತು ಸಿಲೆಂಡರ್ ಬಳಕೆ ಮತ್ತು ಶುಚಿತ್ವದ ಬಗ್ಗೆ ಅಡಿಗೆ ಮಾಡುವುದು ಮತ್ತು ಬಡಿಸುವುದು ಅಡಿಗೆ ಬಗ್ಗೆ ತರಬೇತಿ ಕೊಡುವುದು ಇದು ಜಿಲ್ಲಾಧಿಕಾರಿಗಳ ಕೆಲಸ. ಎಂದರೆ ಚೀಫ್ ಸೆಕ್ರೆಟರಿಯಿಂದ ಹೋಗತಕ್ಕಂಥ ಒಂದು ನಿರ್ದೇಶನ. ಶಿಕ್ಷಣ ಇಲಾಖೆ ಸೆಕ್ರೆಟರಿಯವರಿಂದ ಒಂದು ನಿರ್ದೇಶನ ಅವರೇ ಬೇರೆ ಸೆಕ್ರೆಟರಿ, ಇವರೇ ಬೇರೆ ಸೆಕ್ರೆಟರಿ. ನಾನು ಹೇಳುತ್ತೇನೆ: ಸರ್ಕಾರದ ಕಾರ್ಯದರ್ಶಿಗಳು

ಎಂದರೆ ಮುಖ್ಯ ಕಾರ್ಯದರ್ಶಿನೂ ಕಾರ್ಯದರ್ಶಿಯಾಗುತ್ತಾರೆ. ಶಿಕ್ಷಣ ಕಾರ್ಯದರ್ಶಿಗಳು ಕಾರ್ಯದರ್ಶಿಗಳಾಗುತ್ತಾರೆ. Chief Secretary is the first among the Secretaries. He looks after the DPAR, General Administration Departments. ಮತ್ತು ಇದಕ್ಕೆ ಪ್ರತ್ಯೇಕವಾದಂತಹ ಕಾರ್ಯದರ್ಶಿ ಎಂದರೆ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳು ಇರುತ್ತಾರೆ. ಅವರು ಒಂದು ನಿರ್ದೇಶನ ಕೊಡುವುದು, ಮುಖ್ಯ ಕಾರ್ಯದರ್ಶಿಗಳು ಇವರು ಸೆಕ್ರೆಟರಿ ಟು ಕ್ಯಾಬಿನೆಟ್, ಇವರು ಜಿಲ್ಲಾಧಿಕಾರಿಗಳಿಗೆ ಏನು ನಿರ್ದೇಶನ ಕೊಟ್ಟಿದ್ದಾರೆ ಎಂದರೆ ಯಾವರೀತಿ ಅಡಿಗೆ ಮಾಡುತ್ತಿದ್ದಾರೆ ಹಾಗೂ ಬಡಿಸುತ್ತಿದ್ದಾರೆ ಎಂದು ಸೂಪರ್‌ವೈಸ್ ಮಾಡಬೇಕು. ಆ ರೀತಿ ನೀವು ಒಂದು ನಿರ್ದೇಶನ ಕೊಟ್ಟಿದ್ದೀರಿ. ಮತ್ತೆ ಇನ್ನೊಂದು ತಾವೇನು ಹೊಸದಾಗಿ ಕೊಟ್ಟಿದ್ದೀರಿ, ಅದು ಇನ್ನೊಂದು ಗಿಮಿಕ್, ಎಂದು ನಾನು ಹೇಳಬಹುದು. ಅಕ್ಷರ ದಾಸೋಹ ಯೋಜನೆಗೆ ತಗಲತಕ್ಕಂಥ ಹಣವನ್ನು ಆನ್‌ಲೈನ್ ಲಾಟರಿಯಿಂದ ತೆಗೆದುಕೊಳ್ಳುತ್ತೇವೆಂದು ಹೇಳಿ ಕಣ್ಣಿಗೆ ಮಣ್ಣೆರಚತಕ್ಕ ಆ ಕೆಲಸವನ್ನು ಮಾಡಿದ್ದೀರಿ. ಅದಕ್ಕೆ ಇನ್ನೊಬ್ಬ ರಿಟೈರ್ಡ್ ಐಪಿಎಸ್ ಆಫೀಸರ್ಸ್ ಅನ್ನು ನೇಮಕ ಮಾಡಿ, ಅವರಿಗೆ ರಾಜ್ಯ ಸಚಿವ ಮಟ್ಟದ ಸ್ಥಾನವನ್ನು ಕೊಟ್ಟು ನೇಮಕ ಮಾಡಿರತಕ್ಕಂಥಾದ್ದು ಇನ್ನೊಂದು ಗಿಮಿಕ್. ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಕ್ಯಾಬಿನೆಟ್ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸೂಪರ್‌ವಿಷನ್ ಕಮಿಟಿ ಮಾಡಿದಮೇಲೆ, ಇಲ್ಲಿ ಅವರಿಗೆ ರಾಜ್ಯ ಸಚಿವರ ಒಂದು ಜ್ಯೂರಿಸ್‌ಡಿಕ್ಷನ್ ಕೊಡುವುದು. ಕ್ಯಾಬಿನೇಟ್ ಮಿನಿಸ್ಟರಿಗೆ ಡಿಸ್ಟಿಕ್ಟ್ ಜೂರಿಸ್‌ಡಿಕ್ಷನ್. ಸ್ಟೇಟ್ ಮಿನಿಸ್ಟರ್ ಸ್ಥಾನ ಕೊಟ್ಟಿರತಕ್ಕಂಥ ಒಬ್ಬ ರಿಟೈರ್ಡ್ ಐಪಿಎಸ್ ಅಧಿಕಾರಿಗಳಿಗೆ ರಾಜ್ಯಮಟ್ಟದ ಜೂರಿಸ್‌ಡಿಕ್ಷನ್, ಇದು ಯಾವ ಪುರುಷಾರ್ಥಕ್ಕೆ ಮಾಡಿದ್ದೀರಿ. ಇದರಲ್ಲಿ ಏನೋ ಒಂದು ಗಿಮಿಕ್ ಇದೆ, ಯಾವುದೋ ಒಂದು ಜನಾಂಗವನ್ನು ಎಳೆದುಕೊಳ್ಳಬೇಕೆಂದು ಮಾಡಿರುವ ವಿಚಾರ. ನಿಜವಾಗಲೂ ಈ ಬಡ ಮಕ್ಕಳಿಗೆ ಶಿಕ್ಷಣದ ಅಭಿವೃದ್ಧಿ ಮಾಡಬೇಕು ಮತ್ತು ಅವರಿಗೆ ಸಹಾಯ ಮಾಡಬೇಕು ಎನ್ನುವ ವಿಚಾರ ಇಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಮತ್ತೆ ನಾನು ಇದನ್ನು ಬೇಡ ಎಂದು ಹೇಳುವುದಿಲ್ಲ. ಇದನ್ನು ತಾತ್ವಿಕವಾಗಿ ನಾನು ಒಪ್ಪುತ್ತೇನೆ. ಎಲ್ಲರೂ ಒಪ್ಪುತ್ತಾರೆ. ನಾವೂ ಕೂಡ ನಮ್ಮ ಸರ್ಕಾರ ಇದ್ದಾಗ ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಒಂದನೇ ತರಗತಿಯಿಂದ ಏಳನೇ ತರಗತಿಗೆ ಮಕ್ಕಳು ಬರುವಾಗ ಸುಮಾರು 50 ರಿಂದ 60 ಪರ್ಸೆಂಟ್ ಮಕ್ಕಳು ಶಾಲೆ ಬಿಟ್ಟು ಹೋಗುತ್ತಾರೆ. ಡ್ರಾಪೌಟ್ಸ್ ಆಗುತ್ತಾರೆ. ಮತ್ತು 7ನೇ ತರಗತಿಯಿಂದ 10ನೇ ತರಗತಿಗೆ ಬರುವಾಗಲೂ ಕೂಡ ಅದರಲ್ಲಿ 25 ರಿಂದ 30 ಪರ್ಸೆಂಟ್ ಡ್ರಾಪೌಟ್ಸ್ ಆಗುತ್ತಾರೆ. ಕೊನೆಗೆ ಉನ್ನತ ಶಿಕ್ಷಣ ಮಟ್ಟಕ್ಕೆ ಹೋಗಬೇಕಾದರೆ 6 ರಿಂದ 10 ಪರ್ಸೆಂಟ್ ಮಕ್ಕಳು ಮಾತ್ರ ಉನ್ನತ ಶಿಕ್ಷಣಕ್ಕೆ ಹೋಗುತ್ತಾರೆ. ಅದರಲ್ಲೂ ಕೂಡ ಕೆಲವರು ಬಿಟ್ಟು ಹೋಗುತ್ತಾರೆ. ಅದರಲ್ಲೂ ವಿಶೇಷವಾಗಿ ಬಡವರು, ಪರಿಶಿಷ್ಟ ಜಾತಿ ಮತ್ತು ವರ್ಗದ ಮಕ್ಕಳು ಶಾಲೆ ಬಿಟ್ಟು ಹೋಗುತ್ತಾರೆ. ಅದನ್ನು ತಡೆಗಟ್ಟುವ ಅವಶ್ಯಕತೆ ಇದೆ. ಅದನ್ನು ತಾತ್ವಿಕವಾಗಿ ನಾನು ಒಪ್ಪುತ್ತೇನೆ. ಆದರೆ ಇಂತಹ ಒಂದು ಊಟ ಬಡಿಸುವ ಯೋಜನೆ ಬಗ್ಗೆ ಹೇಳುವುದಾದರೆ ನನಗೆ ಒಬ್ಬರು ಶಿಕ್ಷಕರು ಬಂದು ಸರ್, ಅಕ್ಷರ ದಾಸೋಹಕ್ಕೆ ನನ್ನನ್ನು ಡೆಪ್ಯುಟೇಷನ್ ಮಾಡಿಸುವುದಕ್ಕೆ ಹೇಳಿ ಎಂದು ಕೇಳಿದರು. ಆಗ ನಾನು ಬಯ್ದು ಕಳುಹಿಸಿದೆ. ಏನ್ರಿ ನೀವು ಪಾಠ ಮಾಡುವುದಕ್ಕೆ ಹೋಗುತ್ತೀರೋ ಅಲ್ಲಿ ಅಡಿಗೆ ಮಾಡುವುದಕ್ಕೆ ಹೋಗುತ್ತೀರೋ ಎಂದು, ಅವರಿಗೆ ಗೊತ್ತಾಯಿತು ನಾನು ಯಾವರೀತಿ ಹೇಳುತ್ತೇನೆಂದು, ಅವರು ಹೆದರಿಕೊಂಡು ಹೊರಟು ಹೋದರು. ಏನಾಗಿದೆ ಎಂದರೆ ಈ ಶಿಕ್ಷಕರ

ಒಂದು ಓಡಾಟ ಜಾಸ್ತಿಯಾಗಿ ಹೋಗಿದೆ. ಕೆಲವರು ಏನೂ ಕೆಲಸ ಮಾಡದೆ ಓಡಾಡಿಕೊಂಡು ಇರುವಂತಹ ಶಿಕ್ಷಕರು ಇದ್ದಾರೆ. ನಮಗೆಲ್ಲಾ ಗೊತ್ತಿದೆ, ಶಿಕ್ಷಕರು ಬಹಳ ಜನ ಪಾಠ ಮಾಡುವುದಿಲ್ಲ. ಅಟೆಂಡೆನ್ಸ್ ಒಂದು ತಿಂಗಳಿಗೆ ಒಂದೇ ಸಾರಿ ಅವರ ಮನೆಗೆ ಹೋಗಿ ಹಾಕಿಸಿಕೊಳ್ಳುವ ಪದ್ಧತಿಯೂ ಇದೆ. ಅವರು ಯಾರಿಗೋ ಸಬ್‌ಲೀಸ್ ಕೊಟ್ಟು, ತಿಂಗಳಿಗೆ ಇಷ್ಟು ಎಂದು ಕೊಟ್ಟು ಅವರ ಕೈಯಲ್ಲಿ ಪಾಠ ಮಾಡಿಸುವಂತಹ ವ್ಯವಸ್ಥೆ ಇದೆ. ಮಾನ್ಯ ಸಗೀರ್ ಅಹಮದ್ ಅವರು ಕೇಳಬೇಕು. ಒಂದು ಉರ್ದುವಿನಲ್ಲಿ ಹೇಳುತ್ತಾರೆ. ಏನು ಹೇಳುತ್ತಾರೆಂದರೆ ಬೇಗಾನಿ ಶಾದಿ ಮೇ ಅಬ್ದುಲಾ ದಿವಾನ ಎಂದು.

7.10 ಪಿಎಂ

ಅಂದರೆ ಕೆಲವು ಟೀಚರ್‌ಗಳೆಲ್ಲಾ ಅಬ್ದುಲ್ಲ ದಿವಾನರು, ಇವರಲ್ಲಿ ಲವಲವಿಕೆ ಜಾಸ್ತಿಯಾಗಿದೆ ಇದು ನನಗೆ ಯಾವಾಗ ಅರ್ಥವಾಯಿತೆಂದರೆ ಮೂರು ಜನ ಟೀಚರ್‌ಗಳು ಬಂದು ನನಗೆ ಡೆಪ್ಯುಟೇಷನ್ ಮಾಡಿಸಿ ಕೊಡಿ ಎಂದು ಕೇಳಿದರು. ಇದನ್ನು ಯಾವ ಉದ್ದೇಶಕ್ಕಾಗಿ ಕೇಳುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಛೇರ್ಮನ್‌ರವರೇ, ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಕ್ಕೆ ನಾನು ಹೇಳಿದೆ, ಯಾವ ಸರ್ಕಾರಗಳು ಅಸ್ತಿತ್ವದಲ್ಲಿದ್ದಾಗಲೂ, ಈ "ಬೇಗಾನಿ ಶಾದಿ ಮೇ ಅಬ್ದುಲ್ ದಿವಾನಿ" ವ್ಯವಸ್ಥೆಯನ್ನು ನಿಲ್ಲಿಸುವಂತಹ ವ್ಯವಸ್ಥೆಯ ಬಗ್ಗೆ ಏನು ಕಾರ್ಯಕ್ರಮವನ್ನು ಹಾಕಿದೆ, ನಿಮ್ಮ ಸರ್ಕಾರವಿದ್ದಾಗಲೂ ಆಗಿಲ್ಲ, ನಮ್ಮ ಕಾಲದಲ್ಲೂ ಆಗಿಲ್ಲ, ಮುಂದಿನ ಕಾಲದಲ್ಲೂ ಆಗುತ್ತದೆಯೋ, ಇಲ್ಲವೋ, ಗೊತ್ತಿಲ್ಲ.

ಶ್ರೀ ಬಿ. ಸೋಮಶೇಖರ್ : ನಾನು ಹೇಳುವಂಥಾದ್ದು, ಈ ಕಾರ್ಯಕ್ರಮಗಳನ್ನು ಮಾಡಿ, ನೀವು ಅವರಿಗೆ ಉತ್ತೇಜನವನ್ನು ಕೊಡುತ್ತಿದ್ದೀರಿ, ಎಂದು ಹೇಳುತ್ತಿದ್ದೇನೆ. ಇದರಿಂದ ಅವರಿಗೆ ಹೆಚ್ಚು ಹೆಚ್ಚು ಎನ್‌ಕರೇಜ್ ಸಿಕ್ಕಿದ ಹಾಗೆ ಆಗಿದೆ. ಅಷ್ಟೆ. ಅವರಲ್ಲಿ ಶಿಸ್ತನ್ನು ತರುವಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕು. ಇವತ್ತು ನಾನು ಇನ್ನೊಂದು ವಿಚಾರವನ್ನು ಹೇಳುತ್ತೇನೆ. ಮಕ್ಕಳಿಗೆ ಊಟವನ್ನು ಬಡಿಸುವ ಮೊದಲು ಶಿಕ್ಷಕರುಗಳು, ಮತ್ತೆ ಅಲ್ಲಿನ ಗ್ರಾಮ ಪಂಚಾಯತ್‌ನ ಅಧ್ಯಕ್ಷರುಗಳು, ಊಟದ ರುಚಿಯನ್ನು ನೋಡಬೇಕೆಂದು ನೀವು ಸರ್ಕ್ಯೂಲರ್ ಕೊಟ್ಟಿದ್ದೀರಿ, ಇಲ್ಲಿ ಇಷ್ಟೊಂದು ಮಕ್ಕಳು ಅಸ್ವಸ್ಥರಾಗಿದ್ದಾರಲ್ಲಾ, ಎಷ್ಟು ಶಿಕ್ಷಕರು ಅಸ್ವಸ್ಥರಾಗಿ ಆಸ್ಪತ್ರೆಯನ್ನು ಸೇರಿದ್ದಾರೆಂಬುದನ್ನು ಹೇಳಿ, ಈ ವಿಷಯವನ್ನು ನಾನಂತೂ ಯಾವ ಪತ್ರಿಕೆಗಳಲ್ಲೂ ಓದಿಲ್ಲ. ಇಲ್ಲಿ ಯಾವುದೇ ಶಿಕ್ಷಕರುಗಳು ಮಾಡಿದ ಅಡಿಗೆಯನ್ನು ತಿಂದು ಆಸ್ಪತ್ರೆ ಸೇರಿದ್ದಾರೆಂದು ನಾನು ಓದಿಲ್ಲ ಗ್ರಾಮ ಪಂಚಾಯತ್ ಅಧ್ಯಕ್ಷರುಗಳು ಈ ಊಟದ ರುಚಿಯನ್ನು ನೋಡಿ ಅಸ್ವಸ್ಥರಾಗಿ ಆಸ್ಪತ್ರೆಗೆ ಸೇರಿದಂತಹ ವಿಚಾರವನ್ನು ನೋಡಿಲ್ಲ. ಅಂದ ಮೇಲೆ ನಿಜವಾಗಿಯೂ ಇವರು ಅನುಷ್ಠಾನಕ್ಕೆ ತರುತ್ತಿದ್ದಾರೆಯೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇದಕ್ಕೆ ಕಾರಣ ಒಂದೊಂದು ಯೋಜನೆಗಳಲ್ಲೂ ಬೆಂಕಿಯಲ್ಲಿ ಉರಿಯುತಕ್ಕಂಥ ಮನೆಯ ಹಂಚು ಕಿತ್ತುಕೊಂಡು ಹೋದರಂತೆ ಆ ರೀತಿಯ ಮನೋಭಾವ ಇರುವಂಥವರೇ, ಜಾಸ್ತಿ ಇದ್ದಾರೆ. ಈಗ ಒಂದು ರೂಪಾಯಿಯನ್ನು ಒಂದು ಮಗುವಿಗೆ ಒಂದು ದಿನಕ್ಕೆ ಖರ್ಚು ಮಾಡುತ್ತಿರುವಾಗ ನಾನು ಈಗಾಗಲೇ ಹೇಳಿದ ಹಾಗೆ 10 ಪೈಸೆ ಎಣ್ಣೆ, 40 ಪೈಸೆ ಗ್ಯಾಸ್‌ಗೆ ಎಂದು ಖರ್ಚು ಮಾಡುತ್ತಿರುವಾಗ, ಇಲ್ಲಿ ಶಿಕ್ಷಕರು ಡೆಪ್ಯುಟೇಷನ್ ಮಾಡಿ, ಎಂದು ಬಂದರೆ ಏನು ಉದ್ದೇಶವಿರಬಹುದು. ಒಳ್ಳೆಯ ಅಕ್ಕಿಯನ್ನು ಕೊಡುತ್ತಾರಾ. ಅದರಲ್ಲೂ ! ರೂಪಾಯಿಯಲ್ಲಿ ಎಷ್ಟು

ಕಳುವು ಮಾಡಬೇಕೆಂದು ಪ್ರಯತ್ನ ನಡೆಯುತ್ತದೆ? ಇದು ನಿಜವಾಗಿಯೂ ಇಷ್ಟು ಹಣದಲ್ಲಿ ಒಳ್ಳೆಯ ಆಹಾರ ಸಿಗುತ್ತದೆಯೇ? ಈ ಒಂದು ರೂಪಾಯಿ ಸಾಕಾಗುತ್ತದೆಯೇ? ಇದನ್ನು ತಾವು ಯೋಚನೆ ಮಾಡಬೇಕು. ರಿಕರಿಂಗ್ ಎಕ್ಸ್‌ಪೆಂಡಿಚರ್ ಎಷ್ಟು ಆಗುತ್ತದೆ? ನೀವು ಸುಮಾರು 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಅಡಿಗೆ ಮನೆಗಳನ್ನು ಕಟ್ಟಿಸಿಕೊಡಬಹುದು. ಗ್ಯಾಸ್ ಕನೆಕ್ಷನ್ ಅನ್ನು ಕೊಡಿಸಬಹುದು. ನೀರಿನ ವ್ಯವಸ್ಥೆಗೆ ಆರು ಸಾವಿರ ರೂಪಾಯಿಗಳನ್ನು ಮಾಡಿದ್ದೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಛೇರ್ಮನ್‌ರವರೇ ಈಗ ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಗಾದೆಗಳು ಕೆಲವು ಚೆನ್ನಾಗಿ ಇವೆ. ಈಗ ಮಾನ್ಯ ಸದಸ್ಯರು ಹೇಳಿದರು. ಅಕ್ಕಿ ಕೊಟ್ಟರೆ ಹೀಗೆ ಆಗಲ್ಲವೇ, ಹಾಗೆ ಆಗಲ್ಲವೇ, ಎಂದು ಹೇಳಿದ್ದಾರೆ ಈಗ ನಾವು ಮಾಡುತ್ತಿರುವಂಥ ಯೋಜನೆ ಪ್ರಾರಂಭವಾಗಿರುವಂಥಾದ್ದು ಈಗ ಈ ಗಾದೆಗಳು ಏನಿವೆ, ಎಂದರೆ" ಊರಿಗೆ ಬಂದವಳು ನೀರಿಗೆ ಬರುವುದಿಲ್ಲವೆ, ಅಂತ ಎಷ್ಟು ದಿವಸ ಎಂದು ಮನೆಯಲ್ಲಿ ಕುಳಿತುಕೊಳ್ಳುವುದಕ್ಕೆ ಆಗುತ್ತದೆ ಬಾವಿ ಹತ್ತಿರ ನೀರಿಗೆ ಬರಲೇ ಬೇಕಲ್ಲಾ. ಈಗ ನಡೆಯುತ್ತಿರುವಂತಹ ಕಾರ್ಯಕ್ರಮ ಯಶಸ್ವಿಯಾಗುತ್ತಿಲ್ಲವೆಂದು ಹೇಳುತ್ತಿದ್ದೀರಿ. ಇಲ್ಲಿ ನ್ಯೂನ್ಯತೆಗಳು ಇವೆಯೆಂದು ಹೇಳುತ್ತಿದ್ದೀರಿ, ಇದು ಕಾರ್ಯಕ್ಕೆ ಬರಬೇಕಲ್ಲಾ, ಏಳು ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದನಂತರ, ಇಲ್ಲಿಯವರೆಗೂ ಯಾರೂ ಚಕಾರವನ್ನು ಎತ್ತಲಿಲ್ಲ. ಇದು ಒಂದೆರಡು ವರ್ಷಗಳಿಂದ ಈ ಕಾರ್ಯಕ್ರಮ ನಡೆಯುತ್ತಿದೆ. ಯಾವ ವಿಚಾರದಲ್ಲೂ, ಎಲ್ಲೂ ಮಕ್ಕಳು ಅಸ್ವಸ್ಥರಾದಂಥದ್ದು, ಮತ್ತೆ ಮಾನ್ಯ ಸದಸ್ಯರು ಹೇಳಿದಂತೆ ಅಡಿಗೆಯಲ್ಲಿ ವ್ಯತ್ಯಾಸಗಳನ್ನು ಮಾಡಿರುವಂಥಾದ್ದು, ಅಥವಾ ಬೇರೆ ಬೇರೆ ವಸ್ತುಗಳನ್ನು ಸರಬರಾಜು ಮಾಡುವಂಥಾದ್ದು, ಇದರಲ್ಲಿ ಯಾವುದೇ ನ್ಯೂನ್ಯತೆಗಳು ಪತ್ರಿಕೆಗಳಲ್ಲಿ ಬಂದರೆ ಹೇಳಬಹುದು. ನಾವು ಇಡೀ ರಾಜ್ಯದಲ್ಲಿ ಮಾಡುತ್ತೇವೆಂದು ಹೇಳುವ ಹೊತ್ತಿಗೆ ಇಷ್ಟು ವಿಚಾರಗಳು ಅಂದರೆ, ಪ್ರಾರಂಭ ಹಂತದಲ್ಲಿ ಈ ನ್ಯೂನ್ಯತೆಗಳು ಇರಬಹುದು. ನಾವು ಇದನ್ನು ಸರಿಪಡಿಸುವಂಥಾದ್ದು ಇದೆ.

ಶ್ರೀ ಬಿ.ಆರ್. ಯಾವಗಲ್ : ಇವರಿಗೆ ಹೆದರಿಕೆ ಬಂದಿದೆಯಾ ಅಥವಾ ಭಯಗೊಂಡಿದ್ದಾರೋ ಅದನ್ನು ಹೇಳಿ ಮೊದಲು.

ಶ್ರೀ ಹಂಪನಗೌಡ ಬಾದರ್ಲಿ : ಒಂದು ವರ್ಷದ ಅನುಭವವಿದೆ. ಈ ಯೋಜನೆಯನ್ನು ಹೋದ ವರ್ಷ ಏಳು ಜಿಲ್ಲೆಗಳಲ್ಲಿ ಪ್ರಾರಂಭ ಮಾಡಿದ್ದೀರಿ. ಅಲ್ಲಿ ಏನೇನು ನ್ಯೂನ್ಯತೆಗಳು ಆಗಿವೆ. ಅದನ್ನು ಸರಿಪಡಿಸಿಕೊಂಡು, ಈ ಭಾಗದಲ್ಲಿ ಆ ಯೋಜನೆಯನ್ನು ಮಾಡಬೇಕಾಗಿತ್ತು. ಆ ಕೆಲಸವನ್ನು ನೀವು ಮಾಡಿಲ್ಲ. ಆ ಕಾರಣದಿಂದಲೇ ಇವತ್ತು ಮಕ್ಕಳು ಅಸ್ವಸ್ಥರಾಗಿ ಆಸ್ಪತ್ರೆಗಳಿಗೆ ಹೋಗುವಂತಹ ಪರಿಸ್ಥಿತಿ ಉದ್ಭವವಾಗಿದ್ದು, ಅಲ್ಲಿ ಎಷ್ಟು ನ್ಯೂನ್ಯತೆಗಳಾಗಿವೆ. ಎಂಬ ವಿಚಾರ ನಿಮ್ಮ ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಇವತ್ತಿಗೂ ನನ್ನ ಕ್ಷೇತ್ರದಲ್ಲಿ ಕೆಲವು ಕಡೆಗಳಲ್ಲಿ ಈ ಯೋಜನೆ ನಡೆಯುತ್ತಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಛೇರ್ಮನ್‌ರವರೇ, ಇದುವರೆಗೂ ನಾಲ್ಕು ಬಾರಿ ಈ ಸದನ ಸೇರಿದೆ. ಆಗ ಈ ವಿಚಾರವನ್ನು ಹಿಂದೆ ಪ್ರಸ್ತಾಪ ಮಾಡಿದ್ದಿರಾ? ತಾವು ಶಾಸಕರಾಗಿ, ನಿಮ್ಮ ಜಿಲ್ಲೆಯಲ್ಲಿ, ನಿಮ್ಮ ತಾಲ್ಲೂಕಿನಲ್ಲಿ ಆಗಿರುವಂತಹ ನ್ಯೂನ್ಯತೆಗಳ ಬಗ್ಗೆ ಈ ಸದನದ ಗಮನಕ್ಕೆ ತಂದಿದ್ದಿರೋ, ಆ ವಿಚಾರವನ್ನು ಹೇಳಿ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಬರೆಯುವುದಾಗಲೀ ಪ್ರಾಥಮಿಕ ಶಿಕ್ಷಣ ಮಂತ್ರಿಯವರಿಗಾಗಲೀ ಬರೆಯುವುದು, ಚರ್ಚೆ ಮಾಡುವುದು, ಮಾಡಿದ್ದಿರಾ? ನೀವು ಕಾರ್ಯಕ್ರಮ ಚೆನ್ನಾಗಿ ನಡೆಯುತ್ತಿದೆ. ಎಂದು ಒಪ್ಪಿಕೊಂಡಿರಿ.

ಛೇರ್ಮನ್ : ಮಾನ್ಯ ಸೋಮಶೇಖರ್‌ರವರೇ, ತಾವು ದಯವಿಟ್ಟು ಮುಂದುವರಿಸಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಛೇರ್ಮನ್‌ರವರೇ, ಈಗ ಮಾನ್ಯ ಸೋಮಶೇಖರ್‌ರವರು ಒಳ್ಳೆಯ ವಸ್ತುಗಳನ್ನು ಖರೀದಿ ಮಾಡಿ, ಒಳ್ಳೆಯ ತೊಗರಿ ಬೇಳೆಯನ್ನು ಖರೀದಿ ಮಾಡಿಯೆಂದು ಇಂಥಾದ್ದನ್ನು ಸಲಹೆ ಕೊಡಬಾರದಾ?

ಛೇರ್ಮನ್ : ಮಾನ್ಯ ಕರಡಿ ಸಂಗಣ್ಣನವರು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಛೇರ್ಮನ್‌ರವರೇ, ಮಾನ್ಯ ಬಿ. ಸೋಮಶೇಖರ್‌ರವರು ಸೀನಿಯರ್ ಸದಸ್ಯರು, ಅವರ ಬಗ್ಗೆ ನಿಮಗೆಷ್ಟು ಗೌರವವಿದೆಯೋ, ಅಷ್ಟೇ ಗೌರವ ನಮಗೂ ಇದೆ. ಇಲ್ಲಿ ಸಲಹೆ ಕೊಡುತ್ತಿರುವಂಥಾದ್ದು ಸರಿಯಿಲ್ಲವೆಂದು ನಾನು ಹೇಳಿದ್ದೇನೆಯೆ? ಹೇಳಿಲ್ಲ. ಕೆಲವು ನ್ಯೂನ್ಯತೆಗಳಿವೆ. ನಾವು ಈ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಕೆಲವೊಂದು ಶಾಲೆಗಳಲ್ಲಿ ಪಾತ್ರೆಗಳನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ. ಆ ಜಿಲ್ಲಾ ಪಂಚಾಯತ್, ಆಯಾ ಜಿಲ್ಲಾಧಿಕಾರಿಗಳಿಗೆ ಒದಗಿಸಿಕೊಡುವಂತಹ ಅಧಿಕಾರವನ್ನು ನೀಡಿದ್ದೇವೆ ಒಂದೇ ಸಾರಿ ಒಂದು ಜಿಲ್ಲೆಗೆ 1500 ಗ್ಯಾಸ್ ಸಿಲಿಂಡರ್ ಒದಗಿಸಿಕೊಡಬೇಕೆಂದು ಹೇಳಿದರೆ, ಯಾರಿಗೆ ಸರಬರಾಜು ಮಾಡಲು ಸಾಧ್ಯವಿದೆ? ಇನ್ನು ಪಾತ್ರೆಗಳು ಒಂದೇ ಸಾರಿ, ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಅಲ್ಲಿನ 1500 ಶಾಲೆಗಳಿಗೆ ಪಾತ್ರೆಗಳನ್ನು ಸರಬರಾಜು ಮಾಡಿ ಎಂದರೆ ಒಂದೇ ಸಾರಿ ಸರಬರಾಜು ಮಾಡುವುದಕ್ಕೆ ಆಗುತ್ತದೆಯೇ? ಅದು ನಿಧಾನವಾಗಿರಬಹುದು. ಅದನ್ನು ಸರಿಪಡಿಸುತ್ತೇವೆ. ಅದಕ್ಕೆ ಬೇಕಾದಂತಹ ಹಣವನ್ನು ಕ್ರೋಢೀಕರಿಸಿಕೊಂಡಿದ್ದೇವೆ. ಇನ್ನು ಮುಂದೆ ನಡೆಯುವಂತಹ ಈ ಅಕ್ಷರ ದಾಸೋಹ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವ ಬಗ್ಗೆ, ಅವರು ಕೊಟ್ಟಿರುವಂತಹ ಸಲಹೆಗಳು ಏನು ಇವೆ, ಅವು ಸೂಕ್ತವಾಗಿದೆ. ಎಂಬ ಮಾತನ್ನು ಒಪ್ಪುತ್ತೇನೆ ಸರ್ಕಾರವೂ ಒಪ್ಪುತ್ತದೆ. ಆದರೆ ಮಾಡುತ್ತಿರುವಂಥಾದ್ದೆ ತಪ್ಪು. ಕೇವಲ ನಿಮ್ಮ ಪ್ರಚಾರಕ್ಕಾಗಿ ಮಾಡುತ್ತಿದ್ದೀರಿ. ಇದರಿಂದ ಲಾಭ ಪಡೆಯುವುದಕ್ಕಾಗಿ ಮಾಡುತ್ತಿದ್ದೀರಿ ಯಾರನ್ನೋ ತಮ್ಮ ಕಡೆಗೆ ಆಕರ್ಷಣೆ ಮಾಡಿಕೊಳ್ಳುವುದಕ್ಕೆ ಮಾಡುತ್ತಿದ್ದೀರಿ, ಅಂದರೆ ಹೇಗೆ?

ಗೊಂದಲ

ಛೇರ್ಮನ್ : ಯಾರಾದರೂ ಒಬ್ಬರು ಮಾತನಾಡಿ, ಇಲ್ಲದಿದ್ದರೆ ರೆಕಾರ್ಡ್ ಮಾಡುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಛೇರ್ಮನ್‌ರವರೇ, ಇಲ್ಲಿ ಟ್ಯಾಕ್ಸ್ ಕೊಟ್ಟಿರುವಂತಹ ಹಣದಲ್ಲಿ ಮಕ್ಕಳಿಗೆ ಊಟವನ್ನು ಕೊಡುವಂಥಾದ್ದು, ಅದನ್ನು ನಾವೇ ಕೊಟ್ಟೆವು ಎಂದು ನಿಮ್ಮ ಪಕ್ಷದ ಅಧ್ಯಕ್ಷರು ಹೇಳುತ್ತಾರಲ್ಲಾ, ಆ ರೀತಿ ನಾವೇ ಕೊಟ್ಟೆವು ಎಂದು ನೀವು ಹೇಳುತ್ತಿದ್ದೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸೋಮಶೇಖರ್‌ರವರು, ನಮ್ಮ ಸರ್ಕಾರ ಇದ್ದಾಗ ಮಕ್ಕಳಿಗೆ ಸಮವಸ್ತ್ರವನ್ನು ಒದಗಿಸಿಕೊಟ್ಟಿದ್ದೇವೆಂದು ಹೇಳಿದರು. ಆ ರೀತಿ ಹೇಳುವಾಗ, ನಾವು ಹೇಳಿಕೊಳ್ಳುವುದರಲ್ಲಿ ಏನು ತಪ್ಪು ಇದೆ?

ಗೊಂದಲ

ಛೇರ್ಮನ್ : ಮಾನ್ಯ ಸೋಮಶೇಖರ್‌ರವರೇ, ಮಾತನಾಡಿ, ಈಲ್ಡ್ ಆಗಬೇಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಛೇರ್ಮನ್‌ರವರೇ, ದಾವಣಗೆರೆಯಲ್ಲಿ ಒಂದು ಆರ್ಟಿಕಲ್ ಬಂದಿದೆ. "ತೊಳೆದರೆ ಹಿಟ್ಟಾಗುವ, ಬೇಯಿಸಿದರೆ ಮುದ್ದೆಯಾಗುವ ಅಕ್ಕಿ ಎಂದು

ಬಂದಿದೆ. ಅಂದರೆ ಕೆಲವು ಸಾರಿ ಒಳ್ಳೆಯ ಅಕ್ಕಿ ಇದ್ದರೆ, ಅದನ್ನು ಕಾಳಸಂತೆಗೆ ತಂದು ಮಾರಿ, ಹಳೆಯ ಮುಗ್ಗಲು ಅಕ್ಕಿಯನ್ನು ತಂದು ಅನ್ನ ಮಾಡುವಂತಹ ವ್ಯವಸ್ಥೆಯೂ ಇದೆ. ಇದರಲ್ಲಿ ಕಡಿತ ಮಾಡಿ, ಅದರಲ್ಲು ತಿನ್ನುವಂತಹ ಜನರು ಇದ್ದಾರೆ. ನೀವು ಇಲ್ಲಿ ನೇರವಾಗಿ ಕೊಡುವಂತಹ ಒಂದು ರೂಪಾಯಿ, ಮೊತ್ತ ನೇರವಾಗಿ ವಿದ್ಯಾರ್ಥಿಗಳಿಗೆ ಒಳ್ಳೆಯ ಅಕ್ಕಿಯನ್ನು ತಂದು, ಒಳ್ಳೆಯ ತರಕಾರಿಯನ್ನು, ಒಳ್ಳೆಯ ಎಣ್ಣೆಯನ್ನು, ಉಪಯೋಗ ಮಾಡಿ, ಮಾಡುವುದಕ್ಕೆ ಎಲ್ಲಿ ಆಗುತ್ತದೆ? ಇದೆಲ್ಲಾ ಸುಮ್ಮನೆ ಗಿಮಿಕ್ ಆಗಿದೆ.

ಶ್ರೀ ಬಿ.ಎಸ್. ಬಚ್ಚೇಗೌಡ : ಒಂದು ರೂಪಾಯಿಗೆ ಎಲ್ಲಿ ತರುವುದಕ್ಕೆ ಆಗುತ್ತದೆ?

ಗೊಂದಲ

ಛೇರ್ಮನ್ : ಮಾನ್ಯ ಸೋಮಶೇಖರ್‌ರವರೇ, ದಯವಿಟ್ಟು ಮಾತನಾಡಿ, ಇಬ್ಬಿಬ್ಬರು ಮಾತನಾಡಿದರೆ ಯಾವುದು ರೆಕಾರ್ಡ್ ಆಗುವುದಿಲ. ರೆಕಾರ್ಡ್ ಮಾಡಬೇಡಿ.

ಗೊಂದಲ

11.	ಎನ್.ಎ. ಶಂಕರನಾರಾಯಣ ಪಟೇಲ್	354	15–3–01	0–20	ಸುಳೇಬೈಲು
12.	ಕೆ. ಸುಬ್ರಮಣಿ	356	24–4–01	0–20	ಗೆಜ್ಜೇನಹಳ್ಳಿ
13.	ಶ್ರೀಮತಿ: ಶಾರದ ಎಸ್ ಪೂರ್‍ಯನಾಯ್ಕ	366	23–5–2000	0–20	ಮತ್ತೋಡು
14.	ಜೆ.ಎಂ. ಮಾರ್ತಾಂಡಪ್ಪ (ನವೀಕರಣ)	370	13–12–2000	1–00	ಸುಳೇಬೈಲು
15.	ಶ್ರೀಮತಿ: ಗೌರಮ್ಮ (ನವೀಕರಣ)	381	13–3–2001	0–20	ಮತ್ತೂರು
16.	– ಅದೇ – (ನವೀಕರಣ)	382	2–7–2001	0–20	– ಅದೇ –
17.	ಡಿ. ರಾಜಶೇಖರಪ್ಪ (ನವೀಕರಣ)	385	28–9–01	3–20	ಸುಳೇಬೈಲು
18.	ಮೈಸೂರು ಕನ್‌ಸ್ಟ್ರಕ್ಷನ್ ಕಂ.	389	16–10–01	0–20	ಕಲ್ಲೂರು
19.	ಶಬ್ಬೀರ್ ಸಾಬ್ (ನವೀಕರಣ)	390	9–10–2000	0–20	ಊರಗಡೂರು
20.	ಎಂ. ಅಶ್ವಂತ್ ಕುಮಾರ್	392	30–11–01	0–30	ಸುಳೇಬೈಲು
21.	ಹೆಚ್.ಎಸ್. ಶಂಕರ್	396	26–12–01	0–20	ಮತ್ತೂರು
22.	ಹೆಚ್.ಡಿ. ನಾಗರಾಜ್ (ನವೀಕರಣ)	397	21–1–01	3–00	ಬಸವನ ಗಂಗೂರು

1	2	3	4	5	6
23.	ಎಂ. ಸುಬ್ರಮಣಿ	405	13–2–02	0–20	ಗೆಜ್ಜೇಹಳ್ಳಿ
24.	ಮುಹೀಬ್ (ನವೀಕರಣ)	409	16–3–02	0–20	ಸುಳೇಬೈಲು
25.	ಎನ್.ಹೆಚ್. ಚಿದಂಬರ್ (ನವೀಕರಣ)	410	5–4–02	1–00	ಸುಳೇಬೈಲು
26.	ಕರೀಂ ಖಾನ್ (ನವೀಕರಣ)	413	10–6–01	0–30	ಸುಳೇಬೈಲು
27.	ಜಿ.ಎಂ. ಮಾರ್ತಾಂಡಪ್ಪ	419	3–7–02	0–20	ಸುಳೇಬೈಲು
28.	ಶಿವಶಂಕರ್ (ನವೀಕರಣ)	423	4–3–1999	0–10	ಮತ್ತೂರು
29.	ಶ್ರೀಮತಿ: ಡಿ ಸುಶೀಲ (ನವೀಕರಣ)	426	12–7–01	0–20	ಸುಳೇಬೈಲು
30.	ಶ್ರೀಮತಿ: ಮಂಜುಳ	428	18–11–02	0–20	ಕಲ್ಲಗಂಗೂರು
31.	ಹನುಮಂತಪ್ಪ (ನವೀಕರಣ)	429	28–11–02	0–15	ಸುಳೇಬೈಲು
32.	ಎಂ. ಚನ್ನವೀರಯ್ಯ	434	1–1–03	1–10	ಕಲ್ಲಗಂಗೂರು
33.	ಕೆ.ವಿ. ರಾಮಸ್ವಾಮಿ	436	4–1–03	0–20	ಮತ್ತೂರು
34.	ಜೆ.ಆರ್. ಮಂಜು	437	17–1–03	1–00	ಕಲ್ಲಗಂಗೂರು
35	ಎಲ್.ಜಿ. ಮಹೇಶ್ (ನವೀಕರಣ)	438	29–7–02	1–00	ಮತ್ತೂರು
36.	ಕರೀಂ ಖಾನ್ (ನವೀಕರಣ)	443	21–3–02	0–20	ಸುಳೇಬೈಲು
37.	ಮೆ: ಮೈಸೂರು ಕನ್‌ಸ್ಟ್ರಕ್ಷನ್ ಕಂ.	446	28–3–03	0–20	ಹೊಸಕೊಪ್ಪ
38.	ಜಿ. ರಂಗನಾಥ್ (ನವೀಕರಣ)	449	24–10–02	1–00	ಸೋಗಾನೆ
	ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕು		ಕಟ್ಟಡ ಕಲ್ಲು		
1.	ಎಂ. ರಾಮ	285	20–4–99	0–30	ಮತಿಘಟ್ಟ
2.	ಕೆ. ಗಣೇಶ್	328	7–3–2000	2–00	ಜಂಬರಘಟ್ಟ ಹನುಮಂತ
3.	ಬ್ರಹ್ಮಯ್ಯ	329	13–3–2000	1–00	ಜಂಬರಘಟ್ಟ
4.	– ಅದೇ –	330	– ಅದೇ –	0–20	– ಅದೇ –
5.	ವೆಂಕಟೇಶ್	336	19–9–2000	1–00	– ಅದೇ –
6.	ಎಂ. ಮಂಜುನಾಥ್ (ನವೀಕರಣ)	340	23–10–2000	0–30	ಕೂಡ್ಲಿಗೆರೆ
7.	– ಅದೇ – – " –	341	– ಅದೇ –	4–00	– ಅದೇ –
8.	ಬಿ. ಶೇಷಯ್ಯ	342	24–10–2000	0–30	ಜಂಬರಘಟ್ಟ
9.	ನಾಗರಾಜ್	362	8–5–2001	1–00	ಹಡ್ಲಘಟ್ಟ
10.	ಬ್ರಹ್ಮಯ್ಯ	368	12–6–01	1–00	ಜಂಬರಘಟ್ಟ
11.	ಮುನೀರ್ ಅಹ್ಮದ್	369	13–6–01	1–00	ಜಂಬರಘಟ್ಟ

1	2	3	4	5	6
12.	ಜಿ. ಗೋಪಿನಾಥ್ (ನವೀಕರಣ)	371	21–6–01	2–00	– ಅದೇ –
13.	ವೆಂಕಟೇಶಪ್ಪ	378	29–8–01	0–20	ಕೂಡ್ಲಿಗೆರೆ
14.	ಮಂಜಪ್ಪ	379	4–9–01	0–20	ಕೂಡ್ಲಿಗೆರೆ
15.	ಎಸ್.ಪಿ. ಶೇಷಾದ್ರಿ	380	11–9–01	2–00	ಜಂಬರಘಟ್ಟ
16.	ಎಂ. ಮಂಜುನಾಥ್ (ನವೀಕರಣ)	414	24–9–01	1–00	ಕೂಡ್ಲಿಗೆರೆ
17.	– ಅದೇ –	415	– ಅದೇ –	0–20	– ಅದೇ
18.	– ಅದೇ –	416	24–6–02	0–20	ಕಲಪನಹಳ್ಳಿ
19.	ಎಸ್.ಕೆ. ಚನ್ನೇಗೌಡ	421	22–7–02	1–00	ಕಾಚಗೊಂಡ
20.	– ಅದೇ –	422	– ಅದೇ –	1–00	– ಅದೇ –
21.	ಎಂ. ರಾಮಣ್ಣ	435	3–1–03	0–20	ಹನುಮಂತ
	ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು		ಕಟ್ಟಡದ ಕಲ್ಲು		
1.	ಮಾಲೆ ಮಂಜುನಾಥ್	280	1–4–99	0–20	ಮಳ್ಳ
2.	ಆರ್. ತೀರ್ಥೇಶ್	281	7–4–99	0–20	ಮಾವಿನಸರ
3.	ಎ.ಆರ್. ಶಿವರಾಜ್	287	29–4–99	0–20	ಮಲಂದೂರು
4.	ಸಿ. ರಾಧಾಕೃಷ್ಣ	301	5–7–99	0–20	ಕಣಿಕೆ
5.	ಪ್ರಸಾದ್	305	21–7–99	1–00	ಬೇಸೂರು
6.	ಎಂ.ಕೆ. ಜಾರ್ಜ್	324	29–12–99	1–00	ಕುಡಿಗೆರೆ
7.	ಕೆ. ಅರುಣ್ ಪ್ರಸಾದ್	331	23–3–2000	0–20	ಅಜಾಪುರ
8.	ರಿಚರ್ಡ್ ಡಿಕಾಸ್ಟ	332	28–3–2000	0–20	ಮಲಂದೂರು
9.	ಡಿ. ಪುಟ್ಟಪ್ಪ	333	29–3–2000	1–00	ತ್ಯಾಗರ್ತಿ
10.	ಅಮೀರ್ ಜಾನ್	339	26–9–2000	0–20	ಅಜಾಪುರ
11.	ಅಸ್ಸೆನಾಲ್	344	30–10–2000	0–20	ಮಲಂದೂರು
12.	ಕೃಷ್ಣಮೂರ್ತಿ	346	18–12–2000	0–30	ಮಲಂದೂರು
13.	ಸಿ.ಎನ್. ಲಕ್ಷ್ಮೀನಾರಾಯಣ	348	8–1–2001	1–00	ತೀರ್ಥ
14.	ರಾಜಾರಾಂ ಪಾಳ್	349	8–1–2001	0–30	ತೀರ್ಥ
15.	ಹೆಚ್.ಡಿ. ಮಹದೇವಪ್ಪ	351	12–2–2001	1–20	ಕೊರ್ಲಿಕೊಪ್ಪ
16.	ನಿತ್ಯಾನಂದ	352	12–3–01	0–20	ಖೈರಾ
17.	ಎಂ.ಎಸ್. ಸುರೇಶ್	363	15–5–01	0–20	ಗಂಟಿನಕೊಪ್ಪ
18.	ಎಂ.ಕೆ. ಜಾರ್ಜ್	364	21–5–01	1–00	ತ್ಯಾಗರ್ತಿ
19.	ಬಿ.ಸಿ. ಜಗದೀಶ್	367	11–6–01	1–00	ನಾರಗೋಡುಳ
20.	ಎಂ.ಎನ್. ಲಕ್ಷ್ಮೀನಾರಾಯಣ	377	17–8–01	1–00	ನಾಡಹಳ್ಳಿ ಕೈ
21.	ರಿಚರ್ಡ್ ಡಿಕಾಸ್ಟ	386	29–9–01	0–20	ಮಲಂದೂರು

1	2	3	4	5	6
22.	ಕೆ.ಎಸ್. ರಾಜಶೇಖರ್	388	12–10–01	0–30	ಗಂಟಿನಕೊಪ್ಪ
23.	ಗಣೇಶ್	394	11–12–01	0–10	ಚಿಕ್ಕಮತ್ತೂರು
24.	ರಾಮು	395	– ಅದೇ –	0–10	– ಅದೇ –
	ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು		ಕಟ್ಟಡದ ಕಲ್ಲು		
25.	ಬಿ.ಆರ್. ವೆಂಕಟೇಶ್	400	28–1–01	0–20	ಚಿಕ್ಕಮತ್ತೂರು
26.	ವಿನಯಕುಮಾರ್	406	18–2–02	1–00	ಜಂಬಾನಿ
27.	ನಿತ್ಯಾನಂದ	407	2–3–02	1–00	ಕರೆಹಿತ್ಲು
28.	ಎನ್. ಅಶೋಕ	418	28–6–02	0–20	ಮಲಂದೂರು
29.	ಬಿ.ಆರ್. ವೆಂಕಟೇಶ್	420	5–7–02	1–00	ಬ್ರಾಹ್ಮಣ ಬೇದೂರು
30.	ಸಿ. ರಾಧಕೃಷ್ಣ	432	18.12.02	0–30	ಚಿಕ್ಕಮತ್ತೂರು
31.	ಟಿ.ಹೆಚ್. ಮಂಜಪ್ಪ	441	17–2–03	1–00	ಬ್ರಾಹ್ಮಣ ಮಂಚಾಲೆ
	ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು		ಕಟ್ಟಡದಕಲ್ಲು :–		
1.	ಚನ್ನಪ್ಪ	296	5–6–99	0–20	ಹೊಸಬಾಳೆ
2.	ಒ.ಬಿ. ರಾಜಶೇಖರ್	316	11–10–99	1–00	ಕುಪ್ಪಗಡ್ಡೆ
3.	ಪ್ರಸಾದ್ ಎಂ ಗೌಡರ್	327	21–2–2000	0–30	ಹೊಸಬಾಳೆ
4.	ಹೆಚ್.ಬಿ. ನಿಂಗಪ್ಪ	401	28–1–2002	0–20	ಹುರಳಿ
5.	ಆರ್.ವೈ. ಬಸವರಾಜ್	402	28–1–02	0–20	– ಅದೇ –
6.	ಎಂ. ಶಿವರಾಜಂ ಕಂಚಿ (ನವೀಕರಣ)	412	3–12–2001	2–00	ಬಸ್ತಿಕೊಪ್ಪ
7.					
	ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು		ಸಾ. ಮರಳು :–		
1.	ಮಂಜುನಾಥ್ ಹೆಚ್ ಜಾದವ್	289	12–5–99	1–00	ಬೆನ್ನೂರು
2.	ಶಂಕರ್ ಇ ನಾಯಕ್	293	26–5–99	0–20	ಹಿರೇಕಲಗೋಡು
3.	ಯಾಲಕಪ್ಪ	294	1–6–99	0–20	ಹಿರೇಮಾಕೊಪ್ಪ
	ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು			ಕಟ್ಟಡದಕಲ್ಲು	
1.	ರಾಮಪೂಜಾರಿ (ನವೀಕರಣ)	399	26–9–01	0–20	ರಾಮಚಂದ್ರಪುರ
2.	ಡಿ. ಶಶಿಧರನ್ – " –	408	14–3–02	1–00	ಕರಿಮನೆ
3.	ಆರ್. ಚಂದ್ರ	411	8–4–02	0–20	ಆಲಗೇರಿಮಂಡ್ರಿ
4.	ಸಿ.ಎನ್. ಕಾಂತರಾಜ್ ಜೈನ್	417	28–6–02	0–20	ಹೊಸನಾಡು
5.	ಕೆ.ಸಿ. ಆರುಮುಗಂ	430	2–12–02	1–00	ಮಸಗಲ್ಲಿ

1	2	3	4	5	6
6.	ಪಿ.ಸಿ. ಮಹೇಂದ್ರ	431	– ಅದೇ –	0–20	– ಅದೇ
	ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು		ಕಟ್ಟಡದ ಕಲ್ಲು		
1.	ಎನ್. ರಘು (ನವೀಕರಣ)	433	4–4–2002	0–20	ಹಾರೋಗೊಪ
	ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು		ಕಟ್ಟಡದ ಕಲ್ಲು		
1.	ಡಿ. ಸುಬ್ರಮಣಿ (ನವೀಕರಣ)	288	12–5–99	2–00	ಬುಕ್ಲಾಪುರ
2.	ಶ್ರೀಮತಿ: ಗೀತಾ ಭಾಸ್ಕರ್	292	24–5–99	3–00	ಶಿರೂರು
3.	ಕೆ. ಕೇಶವ ಯಡಿಯಾಳ	343	24–10–2000	0–20	ಜಂಬುವಳಿ
4.	ಆರ್. ಕನ್ನಸ್ವಾಮಿ	345	7–11–2000	0–20	ಮೇಲಿನಕುರುವಳ್ಳಿ
5.	ಜಿ.ಎಸ್. ಚಿತ್ರಾನಾಗರಾಜ್	355	22–3–01	4–00	ಸುರಳಿಬಾಳೇ ಬೈಲು
6.	ಅಧ್ಯಕ್ಷರು, ಹರಿಜನ ಗಿರಿಜನ ಕಲ್ಲುಕುಟಿಕರ ಸಹಕಾರ ಸಂಘ,	358	28–4–01	2–00	ಮೇಲಿನಕುರುವಳ್ಳಿ
7.	ಬಿ.ಎಸ್. ಭಾಸ್ಕರ್‌ರಾವ್	359	14–12–99	9–20	– ಅದೇ –
8.	ಜಿ.ಎಸ್. ಚಿತ್ರಾನಾಗರಾಜ್	360	30–4–01	6–20	ಸುರಳಿ ಬಾಳೇಬೈಲು
9.	ಆರ್. ಕನ್ನಸ್ವಾಮಿ	365	13–7–2000	0–20	ಮೇಲಿನಕುರುವಳ್ಳಿ
10.	ಇಬ್ರಾಹಿಂ ಶರೀಫ್	373	18–7–01	1–20	ಗೇರುವಳ್ಳಿ
	ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು :–		ಕಟ್ಟಡದ ಕಲ್ಲು		
11.	ಡಿ.ಎಸ್. ಅಬ್ದುಲ್ ರಹಮಾನ್ (ನವೀಕರಣ)	374	20–7–01	1–20	ಗೇರುಬಳ್ಳಿ
12.	ಹೆಚ್.ಕೆ. ಅನಂತಶೆಟ್ಟಿ	375	14–8–01	1–00	ಹೊರಣಿ
13.	– ಅದೇ –	376	– ಅದೇ –	1–20	– ಅದೇ –
14.	ರಫೀಖ್	383	24–09–01	0–20	ಮೇಲಿನಕುರುವಳಿ
15.	ಬಿ. ವೆಂಕಟಪ್ಪ ನಾಯಕ್	387	8–10–01	1–00	ಬೇಗುವಳ್ಳಿ
16.	ಆರ್. ಕನ್ನಸ್ವಾಮಿ	391	28–11–01	0–20	ಮೇಲಿನಕುರುವಳಿ
17.	ಜಾನ್ ರೆಬೆಲ್ಲೋ (ನವೀಕರಣ)	393	4–5–01	1–00	ಮೇಲಿನಕುರುವಳಿ
18.	ಮಾರ್ಕ ಡಾಡ್ರಿಕ್ಸ್	398	9–1–02	1–20	ಗೇರುವಳ್ಳಿ
19.	ಅಧ್ಯಕ್ಷರು, ಹರಿಜನ ಗಿರಿಜನ ಕಲ್ಲುಕುಟಿಕರ ಸಹಕಾರ ಸಂಘ (ನವೀಕರಣ)	403	25–4–01	6–00	ಮೇಲಿನಕುರುವಳಿ
20.	– ಅದೇ –	404	– ಅದೇ –	1–20	ಬುಕ್ಲಾಪುರ
21.	ಕೆ. ಶಂಕರ್ ಶೆಟ್ಟ (ನವೀಕರಣ)	424	24–4–01	2–00	ಮೇಲಿನಕುರುವಳಿ

1	2	3	4	5	6
22.	ಡಿ.ಎಸ್. ಅಬ್ದುಲ್ ರಹಮಾನ್	427	5–10–01	1–30	– ಅದೇ –
23.	ಹೆಚ್.ಜಿ. ಸುಧಾಕರ	439	17–11–02	1–00	ಬೆದರಗೋಡು
		448			
	ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾ.		ಸಾಮಾನ್ಯ ಮರಳು :-		
1.	ಎಂ.ಆರ್. ಜಯಂತ್	298	28–6–99	6–00	ಮಹಿಷಿ
2.	ಎಂ.ಸಿ. ನಾಗೇಶ್	299	28–6–99	4–00	ಮಹಿಷಿ
3.	ಎಂ.ಸಿ. ದಿನೇಶ್	308	16–9–99	1–20	ಲಿಂಗಾಪುರ
4.	ಹೆಚ್.ಆರ್. ಪ್ರಕಾಶ್ (ನವೀಕರಣ)	312	4–10–00	4–00	ಲಿಂಗಾಪುರ
5.	ಎಂ.ಸಿ. ದಿನೇಶ್	319	3–11–99	1–00	ಲಿಂಗಾಪುರ
6.	– ಅದೇ –	320	– ಅದೇ –	1–00	ಲಿಂಗಾಪುರ

ಪಶು ಚಿಕಿತ್ಸಾ ಆಸ್ಪತ್ರೆಯ ಸೇವಾ ಶುಲ್ಕ ಕುರಿತು

4161 (4593) : ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶುಚಿಕಿತ್ಸಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರತಕ್ಕಂತಹ ಸಣ್ಣ ಮತ್ತು ದೊಡ್ಡ ಪ್ರಾಣಿಗಳಿಗೆ ಎಷ್ಟು ಸೇವಾ ಶುಲ್ಕ ನಿಗದಿಪಡಿಸಲಾಗಿದೆ:

ಆ) ಪಶುಗಳ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಎಷ್ಟು ಶುಲ್ಕವನ್ನು ನಿಗದಿಪಡಿಸಲಾಗಿದೆ: ವಿವರ ನೀಡುವುದು.

ಇ) ಒಳರೋಗಿ ಚಿಕಿತ್ಸೆ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಕೊಡಲು ಕಷ್ಟವಾಗುವುದೆಂದು ಬಂದ ಸಾರ್ವಜನಿಕರು ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಸರಿಯಾಗಿ ಪಶುಚಿಕಿತ್ಸಾಲಯಗಳಿಗೆ ಔಷಧಿಗಳು ಸರಬರಾಜಿಲ್ಲದೆ ಸಾರ್ವಜನಿಕ ಪಶುಗಳಿಗೆ ತೊಂದರೆಯಾಗುತ್ತಿರುವುದು ನಿಜವೇ:

ಉ) ಈ ರೀತಿ ಶುಲ್ಕ ವಸೂಲು ಮಾಡುವುದನ್ನು ತಪ್ಪಿಸಲು ಸರ್ಕಾರವು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ನಿಗದಿಪಡಿಸಲಾಗಿದ್ದ ಸೇವಾ ಶುಲ್ಕವನ್ನು ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 57 ಪಪಾಯೋ 2003 ದಿನಾಂಕ: 21–7–2003ರಲ್ಲಿ ಹಿಂತೆಗೆದುಕೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಸರ್ಕಾರ ಲಭ್ಯವಿರುವ ಅನುದಾನಕ್ಕೆ ಒಳಪಟ್ಟು ಔಷಧಿಗಳನ್ನು ಸರಬರಾಜು ಮಾಡುತ್ತಿದೆ.

ಉ) ಮೇಲೆ ತಿಳಿಸಿರುವಂತೆ ಸೇವಾಶುಲ್ಕ ಹಿಂತೆಗೆದುಕೊಳ್ಳಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಮಂಜೂರಾದ ಪಾಲಿಕ್ಲಿನಿಕ್‌ಗಳು

4162 (4777) : ಶ್ರೀ ಗೋಪಾಲ ಭಂಡಾರಿ .ಹೆಚ್ (ಕಾರ್ಕಳ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಎಷ್ಟು ಪಾಲಿಕ್ಲಿನಿಕ್‌ಗಳು ಮಂಜೂರಾಗಿದೆ; ಅವು ಎಲ್ಲೆಲ್ಲಿವೆ?

ಆ) ಅವುಗಳಲ್ಲಿ ಎಷ್ಟು ಕಾರ್ಯನಿರ್ವಹಿಸುತ್ತಿವೆ; ಅದರಲ್ಲಿ ಏನೆಲ್ಲ ಸೌಲಭ್ಯಗಳಿವೆ;

ಇ) ಕಾರ್ಕಳದಲ್ಲಿ ಪಾಲಿಕ್ಲಿನಿಕ್ ಕಾರ್ಯ ನಿರ್ವಹಿಸುತ್ತಿರುವುದೇ; ಕಾರ್ಯನಿರ್ವಹಿಸದಿದ್ದಲ್ಲಿ ಕಾರಣವೇನು?

ಶ್ರೀ ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಒಂದು ಕಾರ್ಕಳ

ಆ) ಒಂದು ಕಾರ್ಯನಿರ್ವಹಿಸುತ್ತಿವೆ. ಆದರೆ ಇನ್ನೂ ಕೆಲವೊಂದು ಸೌಕರ್ಯಗಳ ಅವಶ್ಯಕತೆ ಇದೆ.

ಇ) – ಕಾರ್ಯನಿರ್ವಹಿಸುತ್ತಿದೆ

ಬೀದರ್ ಜಿಲ್ಲೆಯ ಕೈಗಾರಿಕೆಗಳ ಬಗ್ಗೆ

4163 (4906) : ಶ್ರೀ ಗುಂಡಪ್ಪ ವಕೀಲ (ಔರಾದ್) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲಾ ಕೇಂದ್ರದಲ್ಲಿ No Industry Scheme ನಲ್ಲಿ ಹಾಗೂ ರಾಜ್ಯ ಸರ್ಕಾರದ Subsidy Scheme ನಲ್ಲಿ ಸ್ಥಾಪನೆಗೊಂಡ ಕೈಗಾರಿಕೆಗಳೆಷ್ಟು?

ಆ) ಅಂತಹ ಕೈಗಾರಿಕೆಗಳಿಗೆ ಕೇಂದ್ರದಿಂದ ಹಾಗೂ ರಾಜ್ಯದಿಂದ ಕೊಡಲಾದ ಸಬ್ಸಿಡಿ ಎಷ್ಟು;

ಇ) ಈಗ ಸಧ್ಯ ಎಷ್ಟು ಕೈಗಾರಿಕೆಗಳು ಚಾಲನೆಯಲ್ಲಿವೆ?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ದಿನಾಂಕ: 1.04.83 ರಿಂದ ಸುಮಾರು 1734 ಕೈಗಾರಿಕಾ ಘಟಕಗಳನ್ನು ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ.

ಆ) ರೂ. 783.45 ಲಕ್ಷಗಳ ಸಹಾಯಧನವನ್ನು 864 ಘಟಕಗಳಿಗೆ ಕೇಂದ್ರ ಸರ್ಕಾರದಿಂದ ನೀಡಲಾಗಿದೆ. ಹಾಗೂ 870 ಘಟಕಗಳಿಗೆ ರೂ. 1646.43 ಲಕ್ಷಗಳ ಸಹಾಯಧನವನ್ನು ರಾಜ್ಯ ಸರ್ಕಾರದಿಂದ ನೀಡಲಾಗಿದೆ.

ಇ) ಪ್ರಸ್ತುತ 509 ಕೈಗಾರಿಕಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಪಶುಗಳ ಆಸ್ಪತ್ರೆ ಕಟ್ಟಡಗಳ ಬಗ್ಗೆ

4164 (4907) : ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿರುವ ಪಶುಚಿಕಿತ್ಸಾಲಯ ಕೇಂದ್ರಗಳೆಷ್ಟು; ಮತ್ತು ಅಂತಹ ಕೇಂದ್ರಗಳಿಗೆ ತನ್ನದೇ ಆದ ಆಸ್ಪತ್ರೆ ಕಟ್ಟಡಗಳ ವ್ಯವಸ್ಥೆ ಇದೆಯೇ:

ಆ) ಈ ಎಲ್ಲಾ ಕೇಂದ್ರಗಳಲ್ಲಿ ಬೇಕಾಗಿರುವ ಸಿಬ್ಬಂದಿ ವಿವರಗಳೇನು:

ಇ) ಹಾಲಿ ಸಿಬ್ಬಂದಿ ಕೊರತೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಒಟ್ಟು 9 ಪಶುಚಿಕಿತ್ಸಾಲಯಗಳಿವೆ ಈ ಒಂಬತ್ತು ಪಶುಚಿಕಿತ್ಸಾಲಯಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ.

ಆ) ಪಶು ಚಿಕಿತಾಲಯಕ್ಕೆ ಬೇಕಾಗುವ ಸಿಬ್ಬಂದಿಗಳ ವಿವರ ಈ ಕೆಳಗಿನಂತಿದೆ.

1	–	ಪಶುವೈದ್ಯಾಧಿಕಾರಿ
1	–	ಪಶುವೈದ್ಯಕೀಯ ಪರೀಕ್ಷಕರು
1	–	ಪಶುವೈದ್ಯಕೀಯ ಸಹಾಯಕರು
2	–	ಡಿ ದರ್ಜೆ ನೌಕರರು

ಇ) ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಹತ್ತು ಪಶುವೈದ್ಯಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ. ಅವರಲ್ಲಿ ಮೂರು ಜನ ಔರಾದ್ ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ. ರಾಜ್ಯಾದ್ಯಂತ 250 ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದೆ.

ಬೀದರ್ ಜಿಲ್ಲೆಯ ವಸತಿ ನಿಲಯಗಳ ಕಟ್ಟಡಗಳು

4165 (4908) : ಶ್ರೀ ಗುಂಡಪ್ಪವಕೀಲ್ (ಔರಾದ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ 1. ಮುಧೋಳ (ಬಿ) 2. ಡಾಬಕಾ ಗ್ರಾಮಗಳಲ್ಲಿ ಸರ್ಕಾರಿ ವಸತಿ ನಿಲಯಗಳಿದ್ದು ಕಟ್ಟಡವಿಲ್ಲದೇ ಖಾಸಗಿ ಮನೆಗಳಲ್ಲಿ ನಿಲಯಗಳು ನಡೆಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ವಸತಿ ನಿಲಯಗಳ ನಿರ್ಮಾಣ ಕಾರ್ಯ ಕೈಗೊಳ್ಳಲು ಸರ್ಕಾರದ ಉದ್ದೇಶವಿದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆ – ಹೌದು

ಡಾಬಕಾದ ವಿದ್ಯಾರ್ಥಿನಿಲಯ ಖಾಸಗಿ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಮುಧೋಳ (ಬಿ) ವಿದ್ಯಾರ್ಥಿನಿಲಯವು ವಿದ್ಯಾರ್ಥಿನಿಯರು ದೊರೆಯದ ಕಾರಣ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿರುವುದಿಲ್ಲ. ಮುಧೋಳದಲ್ಲಿರುವ ವಿದ್ಯಾರ್ಥಿನಿಲಯವನ್ನು ಔರಾದ್‌ಗೆ ವರ್ಗಾಯಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

	ಪರಿಶಿಷ್ಟ ವರ್ಗಗಳ ಇಲಾಖೆ	–	ಇಲ್ಲ
	ಹಿಂದುಳಿದ ವರ್ಗಗಳ ಇಲಾಖೆ	–	ಇಲ್ಲ
ಆ)	ಸಮಾಜ ಕಲ್ಯಾಣ ಇಲಾಖೆ	–	ಸರ್ಕಾರದ ಪರಿಶೀಲನೆಯಲ್ಲಿದೆ
	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	–	ಉದ್ಭವಿಸುವುದಿಲ್ಲ
	ಹಿಂದುಳಿದ ವರ್ಗಗಳ ಇಲಾಖೆ	–	ಉದ್ಭವಿಸುವುದಿಲ್ಲ

ಯಳಂದೂರು ತಾಲ್ಲೂಕಿನಲ್ಲಿ ಗಣಿಗಾರಿಕೆ ನಡೆಸುತ್ತಿರುವುದರಿಂದ ಆಗುತ್ತಿರುವ ತೊಂದರೆಗಳ ಬಗ್ಗೆ

4167 (4793) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮತ್ತು ಶ್ರೀ ಜಿ. ನಂಜುಂಡಸ್ವಾಮಿ (ಕೊಳ್ಳೇಗಾಲ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಳಂದೂರು ತಾಲ್ಲೂಕು ಗುಂಬಳ್ಳಿ ಗ್ರಾಮದಲ್ಲಿ ಸರ್ವೆ ನಂ. 640, 641 ಮತ್ತು 642 ಜಮೀನಿನಲ್ಲಿ ಗಣಿಗಾರಿಕೆ ನಡೆಯುತ್ತಿದ್ದು, ಸಿಡಿಮದ್ದು ಸಿಡಿಸುತ್ತಿರುವುದರಿಂದ ಪಕ್ಕದಲ್ಲಿರುವ ಸಾರ್ವಜನಿಕ ಗುಂಬಳ್ಳಿ, ವೈ.ಕೆ. ಮೊಸಿಳ ಅಂಬಳೆಯಲ್ಲಿ ಪ್ರಧಾನ ಮಂತ್ರಿ ರಸ್ತೆ ಹಾಳಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದರೆ, ಇದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಬಂದಿದೆ.

ಆ) ಈಗಾಗಲೇ ಗಣಿ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಮತ್ಸ್ಯ ಆಶ್ರಯ ಯೋಜನೆಯ ಮಂಜೂರಾತಿ ಬಗ್ಗೆ

4168 (4768) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮತ್ಸ್ಯ ಆಶ್ರಯ ಯೋಜನೆ ಯಾವ ವರ್ಷದಿಂದ ಪ್ರಾರಂಭಿಸಲಾಯಿತು?

ಆ) ಯೋಜನೆ ಪ್ರಾರಂಭವಾದ ವರ್ಷದಿಂದ ಉಡುಪಿ ಜಿಲ್ಲೆಯಲ್ಲಿ ಮನೆ ಮಂಜೂರಾತಿ ಕೋರಿ ಬಂದ ಅರ್ಜಿಗಳೆಷ್ಟು? (ವರ್ಷವಾರು ವಿವರವನ್ನು ವಿಧಾನ ಸಭಾ ಕ್ಷೇತ್ರವಾರು ನೀಡುವುದು);

ಇ) ಅದರಲ್ಲಿ ಎಷ್ಟು ಜನರಿಗೆ ಮನೆ ಮಂಜೂರಾತಿ ನೀಡಲಾಗಿದೆ ಮತ್ತು ಎಷ್ಟು ಮನೆಗಳು ಪೂರ್ಣವಾಗಿವೆ; ಪೂರ್ಣವಾದ ಮನೆಗಳಿಗೆ ಅನುದಾನ ಹಣ ಪಾವತಿಸಲಾಗಿದೆಯೇ? (ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ವಿಧಾನ ಸಭಾವಾರು ವಿವರ ಒದಗಿಸುವುದು);

ಈ) ಪ್ರಸಕ್ತ ಮಂಜೂರಾದ ಮನೆಗಳಿಗೆ ಯಾವ ವರ್ಷದಿಂದ ಎಷ್ಟು ಮನೆಗಳಿಗೆ ಉಡುಪಿ ಜಿಲ್ಲೆಯಲ್ಲಿ ಅನುದಾನ ಬಿಡುಗಡೆಗೆ ಬಾಕಿ ಇದೆ? ಅನುದಾನ ಬಿಡುಗಡೆ ಮಾಡದೇ ಇರಲು ಕಾರಣವೇನು?

ಉ) ಮನೆ ಮಂಜೂರಾತಿ ಕೋರಿ ಬಂದ ಎಷ್ಟು ಅರ್ಜಿಗಳು ಮಂಜೂರಾತಿಗೆ ಬಾಕಿ ಇದೆ; ಬಾಕಿ ಇರುವ ಅರ್ಜಿದಾರರಿಗೆ ಯಾವಾಗ ಮನೆ ಮಂಜೂರು ಮಾಡಲಾಗುವುದು?

ಊ) ಮನೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ ಅರ್ಜಿದಾರರು ಬೇರೆ ಮೂಲಗಳಿಂದ ಹಣ ಒದಗಿಸಿಕೊಂಡು ಮನೆ ಕಟ್ಟಿಕೊಂಡಲ್ಲಿ ಮನೆ ಮಂಜೂರಾದ ನಂತರ ಅವರಿಗೆ ಅನುದಾನ ಬಿಡುಗಡೆ ಮಾಡಲಾಗುವುದೇ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) 1998–90ನೇ ಸಾಲಿನಿಂದ ಮತ್ಸ್ಯಾಶ್ರಯ ಯೋಜನೆಯನ್ನು ಪ್ರಾರಂಭಿಸಲಾಯಿತು.

ಆ) ಯೋಜನೆ ಪ್ರಾರಂಭವಾದ ವರ್ಷದಿಂದ ಉಡುಪಿ ಜಿಲ್ಲೆಯಲ್ಲಿ ಮನೆ ಮಂಜೂರಾತಿ ಕೋರಿ 3350 ಅರ್ಜಿಗಳು ಬಂದಿರುತ್ತವೆ. (ವರ್ಷವಾರು ಹಾಗೂ ವಿಧಾನ ಸಭೆ ಕ್ಷೇತ್ರವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.)

ಇ) 1510 ಮನೆಗಳಿಗೆ ಮಂಜೂರಾತಿ ನೀಡಲಾಗಿದೆ ಮತ್ತು 932 ಮನೆಗಳು ಪೂರ್ಣಗೊಂಡಿವೆ. ಪೂರ್ಣವಾದ ಮನೆಗಳಿಗೆ ಪೂರ್ಣ ಹಣವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಈಗಾಗಲೇ

ಬಿಡುಗಡೆ ಮಾಡಲಾಗಿದೆ. (ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ವಿಧಾನ ಸಭಾವಾರು ವಿವರ ಅನುಬಂಧ–2ರಲ್ಲಿ ನೀಡಲಾಗಿದೆ).

ಈ) ಉಡುಪಿ ಜಿಲ್ಲೆಗೆ ಮತ್ಸ್ಯಾಶ್ರಯ ಯೋಜನೆಯಡಿ ಇಲ್ಲಿಯವರೆಗೆ ಮಂಜೂರಾದ ಮನೆಗಳ ಪೈಕಿ 2001–02, 2002–03 ಮತ್ತು 2003–04ನೇ ಸಾಲಿನಲ್ಲಿ ಮಂಜೂರಾದ 500 ಮನೆಗಳಿಗೆ ಹಣ ಬಿಡುಗಡೆಗೆ ಬಾಕಿ ಇದೆ. ಹುಡ್ಕೋದಿಂದ ಸಾಲ ಬಿಡುಗಡೆ ಯಾಗದ ಕಾರಣ ಹಣ ಬಿಡುಗಡೆಯಾಗಿಲ್ಲ.

ಉ) 1840 ಅರ್ಜಿಗಳು ಬಾಕಿ ಇವೆ. ಮುಂಬರುವ ವರ್ಷಗಳಲ್ಲಿ ಬೇಡಿಕೆ ಮತ್ತು ಅನುದಾನ ಲಭ್ಯತೆ ಪರಿಗಣಿಸಿ ಮನೆ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಊ) ಇಲ್ಲ

ವಿಧಾನ ಸಭೆ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 4768 ರ ಅನುಬಂಧ – 1

ಮನೆ ಮಂಜೂರಾತಿ ಕೋರಿ ಬಂದ ಅರ್ಜಿಗಳ ವರ್ಷವಾರು, ವಿಧಾನ ಸಭಾ ಕ್ಷೇತ್ರವಾರು ವಿವರ

ಮನೆ ಮಂಜೂರಾತಿ ಕೋರಿ ಬಂದ ಅರ್ಜಿಗಳ ಸಂಖ್ಯೆ

ಜಿಲ್ಲೆ	ವಿಧಾನ ಸಭಾ ಕ್ಷೇತ್ರ	1998–99	1999–2000	2000–2001	2001–2002	2002–20003	2003–2004	ಒಟ್ಟು
1	2	3	4	5	6	7	8	9
ಉಡುಪಿ	1. ಕಾಪು	45	46	66	46	42	12	257
	2. ಉಡುಪಿ	42	49	83	75	32	13	294
	3. ಬ್ರಹ್ಮಾವರ	255	197	218	96	89	25	880
	4. ಕುಂದಾಪುರ	290	205	120	160	85	15	875
	5. ಬೈಂದೂರು	400	144	160	127	88	45	964
	6. ಕಾರ್ಕಳ	–	–	–	40	40	–	80
	ಒಟ್ಟು	1032	641	647	544	376	110	3350

ವಿಧಾನ ಸಭೆ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 4768ರ ಅನುಬಂಧ-2

ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ವಿಧಾನ ಸಭಾವಾರು ಮಂಜೂರಾದ ಮನೆಗಳ ವಿವರ

ಜಿಲ್ಲೆ	ವಿಧಾನ ಸಭಾ ಕ್ಷೇತ್ರ	ಮಂಜೂರಾದ ಮನೆಗಳ ಸಂಖ್ಯೆ	ಪೂರ್ಣಗೊಂಡ ಮನೆಗಳ ಸಂಖ್ಯೆ
ಉಡುಪಿ	1. ಕಾಪು	227	103
	2. ಉಡುಪಿ	172	79
	3. ಬ್ರಹ್ಮಾವರ	401	318
	4. ಕುಂದಾಪುರ	350	247
	5. ಬೈಂದೂರು	320	185
	6. ಕಾರ್ಕಳ	40	– –
	ಒಟ್ಟು	**1510**	**932**

ರಾಜ್ಯದಲ್ಲಿ ವಿಭಾಗ ಮಟ್ಟದ ವಕ್ಫ್ ಟ್ರಿಬ್ಯೂನಲ್

4169 (4594) : ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿಭಾಗ ಮಟ್ಟದ ವಕ್ಫ್ ಟ್ರಿಬ್ಯೂನಲ್ ರಚನೆ ರಚಿಸಲಾಗಿದೆಯೇ?

ಆ) ವಕ್ಫ್ ಟ್ರಿಬ್ಯೂನಲ್ ರಚನೆಯು ರೂಪುರೇಷಗಳೇನು: ಇದರಲ್ಲಿ ಸರ್ಕಾರದ ಅಧಿಕಾರಿಗಳೆಷ್ಟು: ಸರ್ಕಾರೇತರ ಸದಸ್ಯರುಗಳೆಷ್ಟು?

ಇ) ಯಾವಯಾವ ವಿಭಾಗ ಮಟ್ಟದಲ್ಲಿ ವಕ್ಫ್ ಟ್ರಿಬ್ಯೂನಲ್ ಅಸ್ತಿತ್ವಕ್ಕೆ ಬಂದಿರುತ್ತದೆ. ವಿವರ ನೀಡುವುದು. ಮತ್ತು ವಕ್ಫ್ ಟ್ರಿಬ್ಯೂನಲ್ ಕಛೇರಿಗಳ ವಿಳಾಸ ತಿಳಿಸುವುದು.

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) – ಹೌದು –

ಆ) ವಕ್ಫ್ ಕಾಯಿದೆ 1995ರ ಕಲಂ 83(1)ರಲ್ಲಿ ರಾಜ್ಯದಲ್ಲಿ ವಕ್ಫ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತಕರಾರು ಇದ್ದಲ್ಲಿ ಅವುಗಳನ್ನು ನ್ಯಾಯಾಂಗ ವ್ಯವಹರಣೆ ನಡೆಸಲು ಬೇಗನೇ ಇತ್ಯರ್ಥಗೊಳಿಸುವ ಉದ್ದೇಶದಿಂದ ವಕ್ಫ್ ನ್ಯಾಯ ಮಂಡಳಿಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವಿದೆ. ಹಾಗೂ ಅದ ಕಾಯಿದೆಯ ಅಧಿನಿಯಮ 83(4) ರನ್ವಯ ಪ್ರತಿ ವಕ್ಫ್ ನ್ಯಾಯಮಂಡಳಿಯು ಜಿಲ್ಲಾ ನ್ಯಾಯಾಧ್ಯಕ್ಷ ಹುದ್ದೆಗಿಂತ ಕಡಿಮೆ ಇಲ್ಲದ ಒಬ್ಬ ನ್ಯಾಯಾಧಿಕಾರಿ ಹೊಂದಿರಬೇಕಾಗುತ್ತದೆ. ಅದರಂತೆ ಸರ್ಕಾರಿ ಆದೇಶ ಸಂಖ್ಯೆ: ಆರ್.ಡಿ. 45 ಡಬ್ಲ್ಯೂಇಎಸ್ 97 ದಿನಾಂಕ: 6.1.1999ರಲ್ಲಿ ರಾಜ್ಯದ 4 ಕಂದಾಯ ವಿಭಾಗಗಳಲ್ಲಿ 4 ವಕ್ಫ್ ನ್ಯಾಯಮಂಡಳಿಗಳನ್ನು ರಚಿಸಲಾಗಿದೆ. ಸದರಿ ಟ್ರಿಬ್ಯುನಲ್‌ಗಳಲ್ಲಿ ಸರ್ಕಾರಿ ಅಥವಾ ಸರ್ಕಾರೇತರ ಸದಸ್ಯರುಗಳನ್ನು ನೇಮಿಸಲು ಅವಕಾಶವಿರುವುದಿಲ್ಲ.

ಇ) ವಿಭಾಗದ ಕೇಂದ್ರ ಸ್ಥಾನದ ಎದುರು ನಮೂದಿಸಿರುವ ದಿನಾಂಕದಿಂದ 4 ಕಂದಾಯ ವಿಭಾಗಗಳಾದ ಬೆಂಗಳೂರು ಮೈಸೂರು, ಬೆಳಗಾವಿ ಮತ್ತು ಗುಲ್ಬ 'ಗಳಲ್ಲಿರುವ ವಕ್ಫ್ ಟ್ರಿಬ್ಯೂನಲ್‌ಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ.

1. ಬೆಂಗಳೂರು ವಿಭಾಗ – 02.08.2001
   ಹಜರತ್ ಹಮಾದ್ ಷಾ ಕಾಂಪ್ಲೆಕ್ಸ್, ಕಬ್ಬನ್‌ಪೇಟೆ, ಬೆಂಗಳೂರು.
2. ಮೈಸೂರು ವಿಭಾಗ – 27.5.2002
   ನ್ಯೂ ಮುಸ್ಲಿಂ ಹಾಸ್ಟೆಲ್ ಕಟ್ಟಡ, ಸರಸ್ವತಿಪುರಂ, ಮೈಸೂರು.
3. ಬೆಳಗಾವಿ – 27.05.2002
   ತಾಳಿಕೋಟೆ ಕಟ್ಟಡ ಮುರಗ್ ಮಂಡಲ್ ಡೆಂಟಲ್ ಕಾಲೇಜು ಎದುರು ಸುಭಾಷ್ ನಗರ, ಬೆಳಗಾವಿ.
4. ಗುಲ್ಬರ್ಗಾ ವಿಭಾಗ – 27.05.2002
   ಮುಸ್ಲಿಂ ಹಾಸ್ಟೆಲ್ ಕಟ್ಟಡ, ಸ್ಟೇಷನ್ ರೋಡ್, ಗುಲ್ಬರ್ಗಾ.

ಹುಬ್ಬಳ್ಳಿ–ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿನ ಸಣ್ಣ ಕೈಗಾರಿಕೆಗಳಿಗೆ ಸಹಾಯಧನ

4170 (4595) : ಶ್ರೀ ಹೊನ್ನಾಳ್ಳಿ ಬಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಒಟ್ಟು ಸಂಖ್ಯೆಗಳೆಷ್ಟು; ಜಿಲ್ಲಾವಾರು ವಿವರ ನೀಡುವುದು;

ಆ) ಸಣ್ಣ ಕೈಗಾರಿಕೆಗಳ ಪುನಃಶ್ಚೇತನಕ್ಕೆ ಕೈಗೊಂಡ ಕ್ರಮಗಳಾವುವು; ವಿವರ ತಿಳಿಸುವುದು;

ಇ) ಯಾವ ಜ್ವಲಂತ ಸಮಸ್ಯೆಗಾಗಿ ಸಣ್ಣ ಕೈಗಾರಿಕೆಗಳು ತೊಂದರೆ ಅನುಭವಿಸುತ್ತಿವೆ; ಅಂತಹ ಜ್ವಲಂತ ಸಮಸ್ಯೆಗಳನ್ನು ನಿವಾರಿಸಲು ಕೈಗೊಂಡ ಕ್ರಮಗಳೇನು?

ಈ) ಸಣ್ಣ ಕೈಗಾರಿಕೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ ಎಷ್ಟು ಸಹಾಯಧನ ನೀಡಲಾಗಿದೆ; ವರ್ಷವಾರು ಹಾಗೂ ಜಿಲ್ಲಾವಾರು ವಿವರ ನೀಡುವುದು;

ಉ) ಇದರಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಬಾಕಿ ಇರುವ ಸಹಾಯಧನ ಮೊತ್ತವೆಷ್ಟು; ಹಾಗೂ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು)

ಅ) 2,98,218.

ಜಿಲ್ಲಾವಾರು ವಿವರ ಲಗತ್ತಿಸಲಾಗಿದೆ.

ಆ) ಪುನಶ್ಚೇತನಗೊಳಿಸಲು ರೋಗಗ್ರಸ್ತ ಕೈಗಾರಿಕೆಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಸರ್ಕಾರ ನೀಡುತ್ತಿದೆ;

1. ಘಟಕದ ಪುನಶ್ಚೇತನ ಯೋಜನಾ ವೆಚ್ಚ, ಶೇ. 25 ರಷ್ಟು ಹಣವನ್ನು ರೂ. 2.50 ಲಕ್ಷಗಳ ಮಿತಿಗೊಳಪಟ್ಟು ಬಡ್ಡಿ ರಹಿತ ಬೀಜಧನ ಸಾಲದ ರೂಪದಲ್ಲಿ ನೀಡಲಾಗುತ್ತದೆ.
2. ಕೆ.ಪಿ.ಟಿ.ಸಿ.ಎಲ್. ಹಾಗೂ ಇತರ ಪ್ರಾಂತೀಯ ವಿದ್ಯುತ್ ಸರಬರಾಜು ಕಂಪನಿಗಳು ಘಟಕವು ಮುಚ್ಚಿದ ಅವಧಿಯಲ್ಲಿ ನಿಗದಿತ ದರ ಹಾಗೂ ಬೇಡಿಕೆ ದರ ಪಾವತಿಯಿಂದ ವಿನಾಯಿತಿ ನೀಡುವುದು.
3. ವಿದ್ಯುತ್ ಬಾಕಿ ದರಗಳನ್ನು ಆರು ಅರ್ಧವಾರ್ಷಿಕ ಕಂತುಗಳಲ್ಲಿ ಶೇ. 6ರ ಬಡ್ಡಿ ಪಾವತಿಯಿಂದ ವಿನಾಯಿತಿ.
4. ಘಟಕವು ಮುಚ್ಚಿದ ಅವದಿಗೆ ಬಡ್ಡಿ ಪಾವತಿಯಿಂದ ವಿನಾಯಿತಿ.

5. ಕೆಐಎಡಿಬಿ:ಕೆಎಸ್‌ಎಸ್‌ಐಡಿಸಿ: ಕಿಯೋನಿಕ್ಸ್‌ಗಳ ಬಾಕಿ ಸಾಲ ಪಾವತಿಯನ್ನು ಒಂದು ವರ್ಷಗಳವರೆಗೆ ಮುಂದೂಡಿ ಅದನ್ನು ನಾಲ್ಕು ವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.
6. ಅಭಿವೃದ್ಧಿ ಸಾಲ ಮರು ಪಾವತಿಯನ್ನು ಕೈಗಾರಿಕೆಯು ಪುನಃಶ್ಚೇತನಗೊಳಿಸಿದ ನಂತರ ಮೂರು ವರ್ಷದ ಅವಧಿಯಲ್ಲಿ ಬಡ್ಡಿ ಇಲ್ಲದೆ ಪಾವತಿಸಲು ಅವಕಾಶ.
7. ವಾಣಿಜ್ಯ ತೆರಿಗೆ ಬಾಕಿಯನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ. 6ರ ಬಡ್ಡಿ ದರದಲ್ಲಿ ಮರುಪಾವತಿಸಲು ಅವಕಾಶ.
8. ಘಟಕವು ಪುನಃಶ್ಚೇತನಗೊಂಡ ನಂತರ ಮುಂದೆ ಪಾವತಿಸಬೇಕಾದ ವಾಣಿಜ್ಯ ತೆರಿಗೆಯನ್ನು ಬಡ್ಡಿ ಇಲ್ಲದೇ ಮೂರು ವರ್ಷಗಳವರೆಗೆ ಮುಂದೂಡಲು ಅವಕಾಶ ಹಾಗೂ ಈ ಮೊತ್ತವನ್ನು ಮೂರು ವಾರ್ಷಿಕ ಕಂತುಗಳಲ್ಲಿ ಪ್ರಸ್ತುತ ತೆರಿಗೆಯೊಡನೆ ಪಾವತಿಸಬೇಕಾಗುತ್ತದೆ.

ಇ) ಕೈಗಾರಿಕೆಗಳು ಕೆಳಕಂಡ ಸಮಸ್ಯೆಗಳನ್ನು ಎದುರಿಸುತ್ತವೆ.

1. ಕೈಗಾರಿಕಾ ಹಿಂಜರಿತ
2. ದುಡಿಮೆ ಬಂಡವಾಳದ ಕೊರತೆ
3. ವಿಳಂಬ ಪಾವತಿ
4. ಮಾಲೀಕತ್ವದ ತಗಾದೆಗಳು
5. ವಿದ್ಯುತ್ ಸಮಸ್ಯೆ
6. ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಹಿಂಜರಿತ

ಈ ತೊಂದರೆಗಳನ್ನು ನಿವಾರಿಸಲು ಕೈಗಾರಿಕಾ ನೀತಿ 2001–06ರಲ್ಲಿ ಅನೇಕ ರಿಯಾಯಿತಿ ಹಾಗೂ ಸವಲತ್ತುಗಳನ್ನು ಕಲ್ಪಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ:

1. ತಂತ್ರಜ್ಞಾನ ಉನ್ನತೀಕರಣ
2. ಗುಣಮಟ್ಟ ಉನ್ನತೀಕರಣ
3. ಮೂಲಭೂತ ಸೌಕರ್ಯ
4. ವ್ಯವಹಾರ ಪರಿಸರ ಅನಿಯಂತ್ರಣ
5. ಮಾನವ ಸಂಪನ್ಮೂಲ ಅಭಿವೃದ್ಧಿ
6. ISO - 9000, ISO-14000 ಪ್ರಮಾಣ ಪತ್ರ ಪಡೆದ ಘಟಕಗಳಿಗೆ ಉತ್ತೇಜನ ನೀಡುವುದು.

ಕೈಗಾರಿಕೆಗಳಿಗೆ ಸಹಕಾರಿಯಾಗಲು ಜಾಗೃತಿ ಶಿಬಿರಗಳು/ಸೆಮಿನಾರ್‌ಗಳು ಮತ್ತು ಕಾರ್ಯಾಗಾರಗಳನ್ನು WTO ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ನಡೆಸಲಾಗುತ್ತದೆ. WTO ರಿಲೇ ಸೆಂಟರ್ ಅನ್ನು ಸಹ ನಡೆಸಲಾಗುತ್ತದೆ.

ಈ) ಸಣ್ಣ ಕೈಗಾರಿಕೆಗಳಿಗೆ ಕೇಂದ್ರ ಸರ್ಕಾರದಿಂದ ಯಾವುದೇ ಸಹಾಯಧನ ನೀಡಲಾಗುವುದಿಲ್ಲ. ರಾಜ್ಯ ಸರ್ಕಾರದಿಂದ ಕಳೆದ 3 ವರ್ಷಗಳಲ್ಲಿ 3184 ಸಣ್ಣ ಕೈಗಾರಿಕೆಗಳಿಗೆ ರೂ. 4501.52 ಲಕ್ಷ ಸಹಾಯಧನ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ಹಾಗೂ ವರ್ಷವಾರು ವಿವರಗಳನ್ನು ಲಗತ್ತಿಸಲಾಗಿದೆ.

ಉ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 552 ಘಟಕಗಳಿಗೆ ರೂ. 1123.00 ಲಕ್ಷ ಸಹಾಯಧನ ಬಿಡುಗಡೆ ಬಾಕಿ ಇರುತ್ತದೆ. ಇದನ್ನು ಅದಷ್ಟು ಬೇಗನೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ – 1

ದಿನಾಂಕ: 31.3.2003ಕ್ಕೆ ಅನ್ವಯವಾಗುವಂತೆ ರಾಜ್ಯದಲ್ಲಿ ನೋಂದಾಯಿಸಲ್ಪಟ್ಟಿರುವ ಸಣ್ಣ ಕೈಗಾರಿಕೆಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ಜಿಲ್ಲೆ	2002–03ರವರೆಗೆ ಕ್ರೋಢೀಕೃತ ವಿವರ		
		ಘಟಕಗಳು	ಬಂಡವಾಳ	ಉದ್ಯೋಗಿಗಳು
1.	ಬೆಂಗಳೂರು(ನಗರ)	53665	159205	448731
2.	ಬೆಳಗಾಂ	27084	44049	112535
3.	ಬಳ್ಳಾರಿ	11361	25801	50966
4.	ಬಿಜಾಪುರ	5618	9365	33830
5.	ಬೀದರ್	6845	11865	37551
6.	ಚಿಕ್ಕಮಗಳೂರು	5169	7300	22771
7.	ಚಿತ್ರದುರ್ಗ	6894	11677	30075
8.	ಕೊಡಗು	3002	5449	21185
9.	ಧಾರವಾಡ	11757	23979	112723
10.	ಗುಲ್ಬರ್ಗಾ	11096	16573	51688
11.	ಹಾಸನ	8277	14037	37628
12.	ಉತ್ತರ ಕನ್ನಡ	6495	13874	37267
13.	ದಕ್ಷಿಣ. ಕನ್ನಡ	14144	28515	79848
14.	ಕೋಲಾರ	11262	31467	72972
15.	ಮಂಡ್ಯ	7120	11778	33226
16.	ಮೈಸೂರು	18149	29546	96882
17.	ರಾಯಚೂರು	7234	14045	36101
18.	ಶಿವಮೊಗ್ಗ	11127	17085	47676
19.	ತುಮಕೂರು	17615	32893	92291
20.	ಬೆಂಗಳೂರು (ಗ್ರಾಮಾಂತರ)	13726	32206	73671
21.	ಬಾಗಲಕೋಟೆ	5427	8539	24689
22.	ಚಾಮರಾಜನಗರ	6785	6196	28374
23.	ದಾವಣಗೆರೆ	6123	14339	30521
24.	ಗದಗ	6054	7362	22152

1 2	3	4	5
25. ಹಾವೇರಿ	6886	5267	25661
26. ಕೊಪ್ಪ	3451	9496	23644
27. ಉಡುಪಿ	5852	24468	37532
ಒಟ್ಟು	**616374.49**	**1722190**	

ಕರ್ನಾಟಕ ಮೀನುಗಾರಿಕಾ ನಿಗಮದ ನೌಕರರ ವೇತನ

4171 (4607) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಮೀನುಗಾರಿಕಾ ನಿಗಮದಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು? (ಹುದ್ದೆವಾರು ವಿವರ ನೀಡುವುದು)

ಆ) ಈ ನೌಕರರಿಗೆ ಕಳೆದ 7 ತಿಂಗಳಿಂದ ಸಂಬಳ ನೀಡಿಲ್ಲದೆ ಇರುವುದರಿಂದ ಬಹಳ ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಈ ನೌಕರರಿಗೆ ನೀಡಬೇಕಾಗಿರುವ ಬಾಕಿ ವೇತನ ಎಷ್ಟು ಹಾಗೂ ಎಂದು ನೀಡಲಾಗುವುದು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇದರಲ್ಲಿ ಒಟ್ಟು 227 ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ. ಹುದ್ದೆವಾರು ನೌಕರರ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು, ನಿಗಮವು 113 ನೌಕರರಿಗೆ 7 ತಿಂಗಳು ಸಂಬಳ ಪಾವತಿಸಿರುವುದಿಲ್ಲ. ಜೊತೆಗೆ ನಿಗಮವು ಉಳಿದ 114 ನೌಕರಿಗೆ 2 ರಿಂದ 6 ತಿಂಗಳ ಅವಧಿಯ ವೇತನ ಪಾವತಿ ಮಾಡಿರುವುದಿಲ್ಲ.

ಇ) ದಿನಾಂಕ: 30.6.2003ಕ್ಕೆ ನಿಗಮವು ಸುಮಾರು ರೂ. 53.5 ಲಕ್ಷಗಳನ್ನು ತನ್ನ ನೌಕರರಿಗೆ ಸಂಬಳದ ಬಾಕಿಯಾಗಿ ಪಾವತಿ ಮಾಡಬೇಕಾಗಿದೆ. ಈ ನಿಗಮವನ್ನು ಮುಚ್ಚುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ವಿಧಾನ ಸಭಾ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 4607ಕ್ಕೆ ಅನುಬಂಧ
ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿನಿಗಮ ಮಂಗಳೂರು ಇದರಲ್ಲಿರುವ ಹುದ್ದೆವಾರು ನೌಕರರ ವಿವರ

1.	ವ್ಯವಸ್ಥಾಪಕ ನಿರ್ದೇಶಕರು	–	1
2.	ವ್ಯವಸ್ಥಾಪಕರು	–	5
3.	ಹಿರಿಯ ವ್ಯವಸ್ಥಾಪಕರು	–	1
4.	ಸಹಾಯಕ ಮಾರುಕಟ್ಟೆ ವ್ಯವಸ್ಥಾಪಕರು	–	3
5.	ಸಹಾಯಕ ವ್ಯವಸ್ಥಾಪಕರು (ಲೀಗಲ್)	–	1
6.	ಸಹಾಯಕ ಲೆಕ್ಕ ವ್ಯವಸ್ಥಾಪಕರು	–	1

1	2		3
7.	ಹಿರಿಯ ಪ್ಲಾಂಟ್ ಸಹಾಯಕರು	–	2
8.	ಮಾರುಕಟ್ಟೆ ಸಂಘಟನಾಕಾರರು	–	3
9.	ಹಿರಿಯ ಮಾರುಕಟ್ಟೆ ಸಹಾಯಕರು	–	1
10.	ಹಿರಿಯ ಲೆಕ್ಕ ಸಹಾಯಕರು	–	10
11.	ಶೀಘ್ರಲಿಪಿಗಾರರು	–	1
12.	ಹಿರಿಯ ಸಹಾಯಕರು	–	1
13.	ಹಿರಿಯ ಬೆರಳಚ್ಚುಗಾರರು	–	1
14.	ಹಿರಿಯ ಪ್ಲಾಂಟ್ ಸಹಾಯಕರು	–	15
15.	ಹಿರಿಯ ಲೆಕ್ಕ ಸಹಾಯಕ	–	9
16.	ಕಿರಿಯ ಸಹಾಯಕ	–	07
17.	ಟೈಪಿಸ್ಟ್ ಕಂ. ಕ್ಲರ್ಕ್	–	06
18.	ಫೀಲ್ಡ್ ಸಹಾಯಕರು	–	22
19.	ಮಾರಾಟ ಸಹಾಯಕ	–	34
20.	ಅಡಿಗೆಯವರು	–	5
21.	ಚಾಲಕರು	–	4
22.	ಪ್ಲಾಂಟ್ ಹೆಲ್ಪರ್	–	44
23.	ಪೇದೆ	–	1
24.	ವಾಹನ ಸಹಾಯಕ	–	2
25.	ಆಕ್ಷನರ್	–	4
26.	ಅಡಿಗೆ ಸಹಾಯಕ	–	5
27.	ಸಹಾಯಕ	–	1
28.	ಲೇಡಿ ಹೆಲ್ಪರ್	–	36
29.	ಕಛೇರಿ ಸಹಾಯಕರು	–	1
		ಒಟ್ಟು	227

ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ನೀಡಬೇಕಾಗಿರುವ ಬಾಕಿ ಹಣ

4172 (4608) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆ ಎಷ್ಟು (ಕಾರ್ಖಾನೆವಾರು ವಿವರ ನೀಡುವುದು)

ಇ) ಈ ಕಾರ್ಖಾನೆಗಳಿಗೆ ಕಬ್ಬು ಬೆಳಗಾರರು ಸರಬರಾಜು ಮಾಡಿರುವ ಕಬ್ಬಿನ ಪ್ರಮಾಣ ಎಷ್ಟು? (ಕಾರ್ಖಾನೆವಾರು ವಿವರ ನೀಡುವುದು)

ಈ) ಈ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ನೀಡಬೇಕಾಗಿರುವ ಬಾಕಿ ಹಣ ಎಷ್ಟು? (ಕಾರ್ಖಾನೆವಾರು ವಿವರ ನೀಡುವುದು)

ಉ) ಸಕ್ಕರೆ ಕಾರ್ಖಾನೆಗಳಿಂದ ಒಟ್ಟು ಬೆಳೆಗಾರರಿಗೆ ನೀಡಬೇಕಾಗಿರುವ ಬಾಕಿ ಹಣವನ್ನು ಕೊಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ ಕಾರ್ಯನಿರತ ಒಟ್ಟು 42 ಸಕ್ಕರೆ ಕಾರ್ಖಾನೆಗಳು ಇವೆ. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:

1.	ಬೀದರ್ ಜಿಲ್ಲೆ	–	02
2.	ಗುಲ್ಬರ್ಗಾ ಜಿಲ್ಲೆ	–	01
3.	ಬಿಜಾಪು ಜಿಲ್ಲೆ	–	01
4.	ಬಾಗಲಕೋಟೆ ಜಿಲ್ಲೆ	–	06
5.	ಬೆಳಗಾವಿ ಜಿಲ್ಲೆ	–	12
6.	ಹಾವೇರಿ ಜಿಲ್ಲೆ	–	01
7.	ಮೈಸೂರು ಜಿಲ್ಲೆ	–	02
8.	ಶಿವಮೊಗ್ಗ ಜಿಲ್ಲೆ	–	01
9.	ಚಾಮರಾಜನಗರ ಜಿಲ್ಲೆ		01
10.	ಮಂಡ್ಯ ಜಿಲ್ಲೆ	–	04
11.	ದಾವಣಗೆರೆ ಜಿಲ್ಲೆ	–	03
12.	ಹಾಸನ ಜಿಲ್ಲೆ	–	01
13.	ಕೊಪ್ಪಳ ಜಿಲ್ಲೆ	–	01
14.	ಬಳ್ಳಾರಿ ಜಿಲ್ಲೆ	–	03
15.	ಚಿತ್ರದುರ್ಗ ಜಿಲ್ಲೆ	–	01
16.	ಉಡುಪಿ	–	01
17.	ಕೋಲಾರ	–	01
	ಒಟ್ಟು	–	42

ಆ) 2002–2003ನೇ ಸಾಲಿನಲ್ಲಿ ದಿನಾಂಕ 30.6.2003ರ ಅಂತ್ಯಕ್ಕೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆ ಪ್ರಮಾಣ 18.04.321 ಮೆ.ಟನ್ ಇರುತ್ತದೆ. ಕಾರ್ಖಾನೆವಾರು ವಿವರ ಅನುಬಂಧ–1ರಲ್ಲಿ ಲಗತ್ತಿಸಿದೆ.

ಇ) ಈ ಕಾರ್ಖಾನೆಗಳಿಗೆ ಕಬ್ಬು ಬೆಳೆಗಾರರು ಸರಬರಾಜು ಮಾಡಿರುವ ಕಬ್ಬಿನ ಪ್ರಮಾಣ ಒಟ್ಟು 1,64,86,240 ಮೆ.ಟನ್ ಇರುತ್ತದೆ (ವಿವರ ಅನುಬಂಧ–1ರಲ್ಲಿ ಲಗತ್ತಿಸಿದೆ)

ಈ) ಈ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ದಿ: 15.7.03ರ ಅಂತ್ಯಕ್ಕೆ 2002–03ನೇ ಸಾಲಿಗೆ ನೀಡಬೇಕಾಗಿರುವ 1160.55 ಕೋಟಿಗಳ ಪೈಕಿ ರೂ. 921.24 ಕೋಟಿ ಪಾವತಿ ಮಾಡಿ ರೂ. 239.31 ಕೋಟಿ ಬಾಕಿ ಉಳಿಸಿಕೊಂಡಿರುತ್ತವೆ. 2000–01ನೇ ಸಾಲಿಗೆ ರೂ. 2447 ಲಕ್ಷ ಹಾಗೂ 2001–02ನೇ ಸಾಲಿಗೆ 2,128 ಲಕ್ಷ ಒಟ್ಟು 28.506 ಲಕ್ಷ ಬಾಕಿ ಇರುತ್ತದೆ. ವಿವರ ಅನುಬಂಧ–2ರಲ್ಲಿ ಲಗತ್ತು ಮಾಡಿದೆ.

ಉ) ಇತ್ತೀಚಿನ ದಿನಗಳಲ್ಲಿ ಸಕ್ಕರೆ ಬೆಲೆಯಲ್ಲಿನ ಕುಸಿತದಿಂದಾಗಿ ಸಕ್ಕರೆ ಉದ್ಯಮವು ತೀವ್ರತರವಾದ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದೆ. ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು 12.60 ಲಕ್ಷ ಟನ್ ಸಕ್ಕರೆ ದಾಸ್ತಾನಿದ್ದು ಇದರ ಅಂದಾಜು ಮೌಲ್ಯ ರೂ. 1,400 ಕೋಟಿ ಆಗುತ್ತದೆ. ಈ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕೊಡಬೇಕಾದ ಒಟ್ಟು ಕಬ್ಬು ಬಿಲ್ಲಿನ ಬಾಕಿ ರೂ. 285.06 ಕೋಟಿ ಆಗುತ್ತದೆ. ಕೇಂದ್ರ ಸರ್ಕಾರದ ಆದೇಶದಂತೆ ಸಕ್ಕರೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಆದ್ದರಿಂದ ರೈತರ ಕಬ್ಬಿನ ಬಿಲ್ಲಿನ ಬಾಕಿ ತೀರಿಸಲು ಸಾಧ್ಯವಾಗಿರುವುದಿಲ್ಲ. ಸಕ್ಕರೆ ಬೆಲೆಯಲ್ಲಿ ತೀವ್ರವಾದ ಕುಸಿತ ಉಂಟಾಗಿದೆ.

2002–03ನೇ ಸಾಲಿಗೆ ಸಂಬಂಧಿಸಿದಂತೆ ಒಟ್ಟು ರೂ. 1160.55 ಕೋಟಿ ಬಾಕಿ ಪಾವತಿ ಮಾಡಬೇಕಾಗಿದ್ದು ಇದರ ಪೈಕಿ ರೂ. 920.24 ಕೋಟಿ ಪಾವತಿ ಮಾಡಲಾಗಿದ್ದು ರೂ. 239.30 ಕೋಟಿ ಪಾವತಿಯಾಗಬೇಕಾಗಿದೆ. ಹಿಂದಿನ ವರ್ಷಗಳ ಬಾಕಿ ರೂ. 46.52 ಕೋಟಿ ಸೇರಿಸಿದಲ್ಲಿ ಒಟ್ಟು ಪಾವತಿ ಮಾಡಬೇಕಾದ ಮೊತ್ತ ರೂ. 285.06 ಕೋಟಿ ಇರುತ್ತದೆ. ಕೆಲವೊಂದು ಕಾರ್ಖಾನೆಗಳು ತಮ್ಮದೇ ಹಣಕಾಸಿನ ಅಶಿಸ್ತಿನಿಂದಾಗಿ ಬಾಕಿ ಉಳಿಸಿಕೊಂಡಿವೆ. ಅಂತಹ ಕಾರ್ಖಾನೆಗಳ ವಿರುದ್ಧ ಕಬ್ಬು (ನಿಯಂತ್ರಣ) ಆದೇಶ 1966ರ ಅನ್ವಯ ಕ್ರಮ ಜರುಗಿಸಲಾಗುತ್ತಿದೆ. ಕಬ್ಬು ಬೆಲೆ ಬಾಕಿ ತೀರಿಸಲು ಸರ್ಕಾರವು ಕೂಡ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು ಈ ದಿಸೆಯಲ್ಲಿ ತೀರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ 6 ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ರೂ. 34.72 ಕೋಟಿಗಳಷ್ಟು ಮೃದು ಸಾಲವನ್ನು ಮಂಜೂರು ಮಾಡಿ ರೈತರ ಕಬ್ಬು ಬೆಲೆ ಬಾಕಿ ತೀರಿಸುವಲ್ಲಿ ಸಹಾಯ ಮಾಡಿದೆ.

(ರೂ. ಕೋಟಿಗಳಲ್ಲಿ)

ಕ್ರ. ಸಂ.	ಕಾರ್ಖಾನೆಯ ಹೆಸರು		ಯಾವ ಸಾಲಿನಲ್ಲಿ ಬಿಡುಗಡೆಯಾಗಿದೆ	ಮೊತ್ತ
1.	ಪಾಂಡವಪುರ,	ಸಸಕಾ	2002–03	12.30
2.	ಕರ್ನಾಟಕ	”	2001–02	4.00
3.	ಶ್ರೀ ಶ್ರೀ ರಾಮ	”	2001–2002	6.00
4.	ಶ್ರೀ ವಾಣಿವಿಲಾಸ	”	2001–02	5.00
5.	ಆಳಂದ	”	2002–02	5.50
6.	ದಕ್ಷಿಣ ಕನ್ನಡ	”	2003–04	1.92
			ಒಟ್ಟು	34.72

ಹುಬ್ಬಳ್ಳಿಯಲ್ಲಿ ರಫ್ತುವಲಯ ಕಛೇರಿಯನ್ನು ವಿಜಾಪುರಕ್ಕೆ ವರ್ಗಾವಣೆ ಮಾಡಿರುವುದರ ಬಗ್ಗೆ

4173 (1765) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗಿದ್ದ ರಫ್ತು ವಲಯ ಕಛೇರಿಯನ್ನು ವಿಜಾಪುರಕ್ಕೆ ವರ್ಗಾಯಿಸಿರುವುದು ನಿಜವೇ;

ಆ) ಹಾಗಿದ್ದರೆ, ಇದಕ್ಕೆ ಕಾರಣವೇನು?

ಇ) ರಫ್ತು ವಲಯ ಕಛೇರಿಯನ್ನು ವಿಜಾಪುರಕ್ಕೆ ವರ್ಗಾಯಿಸಿರುವುದರಿಂದ ಧಾರವಾಡ, ನಗರದ ಬೆಳಗಾವಿ ಹಾವೇರಿ ಬಳ್ಳಾರಿ ರಾಯಚೂರು ಕೊಪ್ಪಳ, ಉತ್ತರ ಕನ್ನಡ ಜಿಲ್ಲೆಗಳ ರೈತರಿಗೆ ಅನ್ಯಾಯ ಮಾಡಿದಂತೆ ಆಗಿಲ್ಲವೇ?

ಈ) ಹುಬ್ಬಳ್ಳಿಯು ಬಾಂಬೆ–ಪೂನಾ ರಾಷ್ಟ್ರೀಯ ಹೆದ್ದಾರಿಯಲ್ಲಿರುವುದರಿಂದ ರಫ್ತು ಮಾಹಿತಿಗೆ ಒಳ್ಳೆಯ ಮುಖ್ಯ ಕೇಂದ್ರವಾಗಿದ್ದು, ಹಾಗೂ ಒಳ್ಳೆಯ ರಸ್ತೆ, ರೈಲು ಹಾಗೂ ವಿಮಾನ ಸೌಕರ್ಯಗಳನ್ನು ಹೊಂದಿರುವುದರಿಂದ ರಫ್ತು ವಲಯ ಕಛೇರಿಯನ್ನು ಹುಬ್ಬಳ್ಳಿಯಲ್ಲಿಯೇ ಮುಂದುವರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ಹುಬ್ಬಳ್ಳಿಯಲ್ಲಿ ರಫ್ತುವಲಯ ಕಛೇರಿಯನ್ನು ಸ್ಥಾಪಿಸುವ ಪ್ರಸ್ತಾವನೆ ಇರಲಿಲ್ಲ ಕಾರಣ ಬಿಜಾಪೂರಕ್ಕೆ ಸ್ಥಳಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ

ಎನ್.ಜಿ.ಇ.ಎಫ್.ನ ನೌಕರರ ವಜಾ ಮಾಡಿರುವುದನ್ನು ಕುರಿತು

4174 (4766) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಸ್ವಾಮ್ಯದ ಎನ್.ಜಿ.ಇ.ಎಫ್.ನಲ್ಲಿ ಸ್ವಯಂ ನಿವೃತ್ತಿ ಕೊಡದ ಕಾರಣಕ್ಕಾಗಿ ಎಷ್ಟು ಜನ ಉದ್ಯೋಗಿಗಳನ್ನು ವಜಾ ಮಾಡಲಾಗಿದೆ;

ಆ) ಈ ನೌಕರರಲ್ಲಿ ಅರ್ಧಕ್ಕೂ ಹೆಚ್ಚು ಜನ ಪರಿಶಿಷ್ಟ ಜಾತಿ/ಪ.ವರ್ಗಕ್ಕೆ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ವಜಾಗೊಂಡಿರುವ ಎಷ್ಟು ಜನ ನೌಕರರು ಈ ವರ್ಗಕ್ಕೆ ಸೇರಿದವರಾಗಿರುತ್ತಾರೆ;

ಇ) 24.02.2003ರ ಸರ್ಕಾರಿ ಆದೇಶದಂತೆ ಎನ್.ಜಿ.ಇ.ಎಫ್. ಎಷ್ಟು ಜನ ನೌಕರರ ಸೇವೆಯನ್ನು ಬೇರೆ ಬೇರೆ ಇಲಾಖೆಗಳ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ; ವಿವರ ಹೆಸರುಗಳನ್ನು ನೀಡುವುದು;

ಈ) ಮಂಡ್ಯದ ಮೈಸೂರು ಅಸಿಟೇಟ್ ಕಾರ್ಖಾನೆಯು ಸಹ ಮುಚ್ಚಿದ್ದು, ಅಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸುಮಾರು 45 ಜನ ನೌಕರರನ್ನು ಬೇರೆ ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ತೆಗೆದುಕೊಂಡಿರುವುದು ನಿಜವೇ;

ಉ) ಹಾಗಿದ್ದಲ್ಲಿ, ಬೇರೆ ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಎನ್.ಜಿ.ಇ.ಎಫ್. ನೌಕರರ ಸೇವೆಯನ್ನು ಹಿಂದಕ್ಕೆ ಪಡೆದು ಅವರಿಗೆ ಸ್ವಯಂ ನಿವೃತ್ತಿ ಯೋಜನೆ ನೀಡಲು ಕಾರಣವೇನು; ಇದು ತಾರತಮ್ಯ ನೀತಿಯಲ್ಲವೇ;

ಊ) ಈ ಹಿನ್ನೆಲೆಯಲ್ಲಿ ಇನ್ನು 12 ರಿಂದ 15 ವರ್ಷ ಸೇವೆ ಬಾಕಿ ಇರುವ ಮತ್ತು ಉದ್ಯೋಗದ ಅವಶ್ಯಕತೆ ಇರುವ ಪ.ಜಾ/ಪ. ವರ್ಗಕ್ಕೆ ಸೇರಿದ ಎನ್.ಜಿ.ಇ.ಎಫ್. ನೌಕರರನ್ನು ಬೇರೆ ಬೇರೆ ಇಲಾಖೆಗಳಿಗೆ ನಿಯೋಜನೆ ಮೇರೆಗೆ ತೆಗೆದುಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು.)

ಅ) 121 ಉದ್ಯೋಗಿಗಳು. ಇವರುಗಳಿಗೆ ಕೈಗಾರಿಕಾ ವ್ಯಾಜ್ಯ ಕಾಯ್ದೆಯಡಿ ಮುಚ್ಚುವ (Closure) ಪರಿಹಾರವನ್ನು ನೀಡಲಾಗಿರುತ್ತದೆ.

ಆ) ಈ ರೀತಿ ಮುಕ್ತಿಗೊಳಿಸಲಾದ 121 ಉದ್ಯೋಗಿಗಳಲ್ಲಿ 53 ಜನರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿರುತ್ತಾರೆ.

ಇ) ಸರ್ಕಾರಿ ಆದೇಶ ದಿನಾಂಕ: 24-02-2003 ರಂತೆ ವಿವಿಧ ಮಂಡಳಿ ನಿಗಮ ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿ ನಿಯೋಜನೆ ಮೇಲಿರುವ 9 ಉದ್ಯೋಗಿಗಳು ಮಾತ್ರ ವಿಲೀನಗೊಳ್ಳಲು ಅರ್ಹರಿರುತ್ತಾರೆ.

ಹೆಸರುಗಳು:	ನಿಯೋಜನೆ ಮೇಲೆ
1. ಶ್ರೀ ಧನಂಜಯ ಎಸ್.ಡಿ.	ಕೆಎಸ್‌ಐಐಡಿಸಿ
2. ಶ್ರೀ ಶ್ರೀನಿವಾಸ ರೆಡ್ಡಿ ಎಸ್.	ಕೆಪಿಟಿಸಿಎಲ್
3. ಶ್ರೀ ಶ್ರೀನಿವಾಸ್ ಟಿ.ಎಸ್.	ಕೆಪಿಟಿಸಿಎಲ್
4. ಶ್ರೀ ರಮೇಶ್ ಹೆಚ್.	ಕೆಪಿಟಿಸಿಎಲ್
5. ಶ್ರೀ ವೆಂಕಟಾಚಲಪತಿ ಎ.	ಕೆಪಿಟಿಸಿಎಲ್
6. ಶ್ರೀಮತಿ ನಂದಿನಿ	ಕೆಪಿಟಿಸಿಎಲ್
7. ಶ್ರೀ ಉಮಾಪತಿ. ಎಸ್.	ಬಿಡಬ್ಲ್ಯೂಎಸ್‌ಎಸ್‌ಬಿ
8. ಶ್ರೀ ಜಗದೀಶ್ ಎನ್.	ಎಮ್‌ಎಸ್‌ಐಎಲ್
9. ಶ್ರೀ ಪರಮೇಶ್ ಎಮ್.ಎಸ್.	ಕೆ.ಎಸ್‌ಸಿ/ಎಸ್‌ಟಿ ಡಿ.ಸಿ

ಸರ್ಕಾರದ ಇಲಾಖೆಗಳಲ್ಲಿ ನಿಯೋಜನೆ ಮೇಲಿರುವ ಉದ್ಯೋಗಿಗಳು ವಿಲೀನಗೊಳ್ಳಲು ಅರ್ಹರಿರುವುದಿಲ್ಲ.

ಈ) ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಸಂಸ್ಥೆಯ 49 ಉದ್ಯೋಗಿಗಳು ಸರ್ಕಾರಿ ಇಲಾಖೆಗಳು/ನಿಗಮಗಳಲ್ಲಿ ನಿಯೋಜನೆ ಮೇಲೆ ಇರುತ್ತಾರೆ. ಸರ್ಕಾರಿ ಆದೇಶ ದಿನಾಂಕ 24-02-2003 ರಂತೆ 3 ಉದ್ಯೋಗಿಗಳು ಮಾತ್ರ ವಿಲೀನಗೊಳ್ಳಲು ಅರ್ಹರಿರುತ್ತಾರೆ. ಉಳಿದ ನೌಕರರುಗಳಿಗೆ ಸ್ವಯಂ ನಿವೃತ್ತಿ ಯೋಜನೆಯ ಪರಿಹಾರವನ್ನು ನೀಡಲಾಗುತ್ತದೆ.

ಉ) ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ (ಬಿಪಿಇ) 38 ಎಆರ್‌ಯು 2002 ದಿನಾಂಕ: 24-02-2003 ರಂತೆ ಸರ್ಕಾರಿ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಇರುವವರು ವಿಲೀನಗೊಳ್ಳಲು ಅರ್ಹರಿರುವುದಿಲ್ಲ. ಸಂಸ್ಥೆಯನ್ನು ಮುಚ್ಚುತ್ತಿದ್ದುದರಿಂದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ನಿಯೋಜನೆ ಮೇಲಿದ್ದ ನೌಕರರುಗಳನ್ನು ಸೇವೆಯಿಂದ ಹಿಂದೆ ಪಡೆದು ಕರ್ತವ್ಯದಿಂದ ಬಿಡುಗಡೆಗೊಳಿಸಿ ಸ್ವಯಂ ನಿವೃತ್ತಿ ಯೋಜನೆಯನ್ನು ನೀಡಬೇಕಾಯಿತು. ಹಾಗಾಗಿ ಇದು ಸರ್ಕಾರದ ಹಂತದಲ್ಲಿ ತಾರತಮ್ಯವಾಗಿರುವುದಿಲ್ಲ.

ಊ) ಮೇಲಿನ ಉದ್ಯೋಗಿಗಳನ್ನು ಈಗಾಗಲೇ ಸೇವೆಯಿಂದ ವಿಮುಕ್ತಿಗೊಳಿಸುವುದರಿಂದ ಅವರು ಎಸ್.ಜಿ.ಇ.ಎಫ್. ನೌಕರರುಗಳಾಗಿ ಉಳಿದಿರುವುದಿಲ್ಲ. ಆದುದರಿಂದ ಅವರುಗಳನ್ನು ಇತರೆ ಸಾರ್ವಜನಿಕ ಸಂಸ್ಥೆಗಳಿಗೆ ನಿಯೋಜನೆ ಮೇಲೆ ಕಳುಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಶಿಕ್ಕಲಿಗಾರ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸುವುದು

4175 (4767) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕದಲ್ಲಿರುವ ಶಿಕ್ಕಲಿಗಾರ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಲಾಗಿದೆಯೇ?

ಆ) ಇಲ್ಲದಿದ್ದರೆ, ಕಾರಣವೇನು? ಈ ಸಮಾಜದ ಜನಸಂಖ್ಯೆ ಎಷ್ಟು?

ಇ) ಬೇರೆ ಬೇರೆ ರಾಜ್ಯಗಳಲ್ಲಿ ಇದೇ ಸಮಾನಾಂತರ ಹೆಸರಿನ ಜಾತಿಯನ್ನು ಪರಿಶಿಷ್ಟ ಜಾತಿಗೆ ಸೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದರೆ, ಈ ಶಿಕ್ಕಲಿಗಾರ ಜನಾಂಗವನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಯಾವಾಗ ಸೇರಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ.

ಆ) ಈಗ ಇದು ಹಿಂದುಳಿದ ವರ್ಗಗಳ ಜಾತಿ ಪಟ್ಟಿಯ ಪ್ರವರ್ಗ–1 ರಲ್ಲಿ ಕ್ರಮ ಸಂಖ್ಯೆ 48(ಸಿ) ಯಲ್ಲಿ ಸೇರಿಸಿದೆ. ವಿವಿಧ ಅಧ್ಯಯನಗಳಿಂದ ಮತ್ತು ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನ ಮೇರೆಗೆ ಹಿಂದುಳಿದ ವರ್ಗಗಳ ವರ್ಗೀಕರಣವನ್ನು ಮಾಡಲಾಗಿದೆ ಸದ್ಯದಲ್ಲಿ ಸದರಿ ಜನಾಂಗದ ಜನಸಂಖ್ಯೆಯು ಲಭ್ಯವಿರುವುದಿಲ್ಲ.

ಇ) ಇಲ್ಲ.

ಈ) ಈ ಬಗ್ಗೆ ಕಾಲಕಾಲಕ್ಕೆ ಪ್ರಸ್ತಾವನೆಯು ಬಂದಲ್ಲಿ ಪರಿಶೀಲಿಸಲಾಗುವುದು.

ಬೆಂಗಳೂರು ನಗರದಲ್ಲಿರುವ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳು

4176 (4589) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಒಟ್ಟು ಸಣ್ಣ ಕೈಗಾರಿಕೆಗಳೆಷ್ಟು?

ಆ) ಇವುಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಇ) ಎಷ್ಟು ಸಣ್ಣ ಕೈಗಾರಿಕೆಗಳು ರೋಗಗ್ರಸ್ಥವಾಗಿವೆ;

ಈ) 2002–03ರಲ್ಲಿ ಹೊಸದಾಗಿ ಎಷ್ಟು ಸಣ್ಣ ಕೈಗಾರಿಕೆಗಳನ್ನು ಬೆಂಗಳೂರು ನಗರದಲ್ಲಿ ಪ್ರಾರಂಭಿಸಲಾಗಿದೆ?

ಉ) ರೋಗಗ್ರಸ್ಥ ಸಣ್ಣ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು)

ಅ) ದಿನಾಂಕ: 30.6.2003ರಲ್ಲಿದ್ದಂತೆ ನೋಂದಾಯಿತ ಸಣ್ಣ ಕೈಗಾರಿಕೆಗಳ ಒಟ್ಟು ಸಂಖ್ಯೆ: 31,635

ಆ) 2,54,591

ಇ) 71

ಈ) 2002-03ನೇ ಸಾಲಿನಲ್ಲಿ 1446 ಹೊಸ ಸಣ್ಣ ಕೈಗಾರಿಕೆಗಳು ಬೆಂಗಳೂರು ನಗರದಲ್ಲಿ ಪ್ರಾರಂಭವಾಗಿರುತ್ತವೆ.

ಉ) ಪುನಶ್ಚೇತನಗೊಳಿಸಲು ರೋಗಗ್ರಸ್ತ ಕೈಗಾರಿಕೆಗಳಿಗೆ ಕೆಳಕಂಡ ಸೌಲಭ್ಯಗಳನ್ನು ಸರ್ಕಾರದಿಂದ ನೀಡಲಾಗುತ್ತಿದೆ.

1. ಘಟಕದ ಪುನಶ್ಚೇತನ ಯೋಜನಾ ವೆಚ್ಚ ಶೇ. 25 ರಷ್ಟು ಹಣವನ್ನು ರೂ. 2.50 ಲಕ್ಷಗಳ ಮಿತಿಗೊಳಪಟ್ಟು ಬಡ್ಡಿ ರಹಿತ ಬೀಜಧನ ಸಾಲದ ರೂಪದಲ್ಲಿ ನೀಡಲಾಗುತ್ತದೆ.
2. ಕೆ.ಪಿ.ಟಿ.ಸಿ.ಎಲ್. ಹಾಗೂ ಇತರ ಪ್ರಾಂತೀಯ ವಿದ್ಯುತ್ ಸರಬರಾಜು ಕಂಪನಿಗಳು ಘಟಕವು ಮುಚ್ಚಿದ ಅವಧಿಯಲ್ಲಿ ನಿಗದಿತ ದರ ಹಾಗೂ ಬೇಡಿಕೆ ದರ ಪಾವತಿಯಿಂದ ವಿನಾಯಿತಿ ನೀಡುವುದು.
3. ವಿದ್ಯುತ್ ಬಾಕಿ ದರಗಳನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ.6ರ ಬಡ್ಡಿ ದರದಲ್ಲಿ ಪಾವತಿಸಲು ಅವಕಾಶ.
4. ಘಟಕವು ಮುಚ್ಚಿದ ಅವಧಿಗೆ ಬಡ್ಡಿ ಪಾವತಿಯಿಂದ ವಿನಾಯಿತಿ.
5. ಕೆಐಎಡಿಬಿ:ಕೆ ಎಸ್ ಎಸ್ ಐಡಿಸಿ: ಕಿಯೋನಿಕ್ಸ್‌ಗಳ ಬಾಕಿ ಸಾಲ ಪಾವತಿಯನ್ನು ಒಂದು ವರ್ಷಗಳವರೆಗೆ ಮುಂದೂಡಿ ಅದನ್ನು ನಾಲ್ಕು ವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.
6. ಅಭಿವೃದ್ಧಿ ಸಾಲ ಮರು ಪಾವತಿಯನ್ನು ಕೈಗಾರಿಕೆಯು ಪುನಃಶ್ಚೇತನಗೊಳಿಸಿದ ನಂತರ ಮೂರು ವರ್ಷದ ಅವಧಿಯಲ್ಲಿ ಬಡ್ಡಿ ಇಲ್ಲದೆ ಪಾವತಿಸಲು ಅವಕಾಶ.
7. ವಾಣಿಜ್ಯ ತೆರಿಗೆ ಬಾಕಿಯನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ. 6ರ ಬಡ್ಡಿ ದರದಲ್ಲಿ ಮರುಪಾವತಿಸಲು ಅವಕಾಶ.
8. ಘಟಕವು ಪುನಃಶ್ಚೇತನಗೊಂಡ ನಂತರ ಮುಂದೆ ಪಾವತಿಸಬೇಕಾದ ವಾಣಿಜ್ಯ ತೆರಿಗೆಯನ್ನು ಬಡ್ಡಿ ಇಲ್ಲದೇ ಮೂರು ವರ್ಷಗಳವರೆಗೆ ಮುಂದೂಡಲು ಅವಕಾಶ ಹಾಗೂ ಈ ಮೊತ್ತವನ್ನು ಮೂರು ವಾರ್ಷಿಕ ಕಂತುಗಳಲ್ಲಿ ಪ್ರಸ್ತುತ ತೆರಿಗೆಯೊಡನೆ ಪಾವತಿಸಬೇಕಾಗುತ್ತದೆ.

ಬೆಂಗಳೂರು ನಗರದಲ್ಲಿ ಹಿಂದುಳಿದ ವರ್ಗಗಳ ಮಹಿಳೆಯರಿಗೆ ವೃತ್ತಿ ತರಬೇತಿ ಕೌಶಲ್ಯ ಯೋಜನೆಯ ಸೌಲಭ್ಯ ಕುರಿತು

4177 (4590) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳೆಯರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಲು "ಕೌಶಲ್ಯ" ಯೋಜನೆಯನ್ನು ಸರ್ಕಾರ ಜಾರಿಗೊಳಿಸಿದೆಯೇ?

ಆ) ಹಾಗಿದ್ದಲ್ಲಿ, 2003-04ರಲ್ಲಿ ಬೆಂಗಳೂರು ನಗರದಲ್ಲಿ ಎಷ್ಟು ಪರಿಶಿಷ್ಟ ಜಾತಿ/ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳೆಯರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿಯನ್ನು ಈ ಯೋಜನೆಯಡಿಯಲ್ಲಿ ನೀಡಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಮತ್ತು ಆ) ಹೌದು.

2003–04ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ ಹಿಂದುಳಿದ ವರ್ಗದ ನಿರುದ್ಯೋಗಿ ಮಹಿಳಾ ಅಭ್ಯರ್ಥಿಗಳಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಲು ಸರ್ಕಾರವು "ಕೌಶಲ್ಯ" ಎಂಬ ಹೊಸ ಯೋಜನೆಯನ್ನು ಘೋಷಿಸಿದೆ. ಈ ಬಗ್ಗೆ ಇಲಾಖೆಯು ರೂಪಿಸಿರುವ ಪ್ರಸ್ತಾವಿಕ ಯೋಜನೆಯನ್ನು ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಜಾರಿಗೆ ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಚರ್ಮ ಕುಟೀರಗಳನ್ನು ಕುರಿತು

4179 (4592) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ಎಷ್ಟು ಚರ್ಮ ಕುಶಲಕರ್ಮಿಗಳಿಗೆ ಚರ್ಮ ಕುಟೀರಗಳು; ರಸ್ತೆ ಬದಿ ಕುಟೀರಗಳನ್ನು ನಿರ್ಮಿಸಲಾಗಿದೆ;

ಆ) ಇವುಗಳ ಪೈಕಿ, ಎಷ್ಟು ಚರ್ಮ ಕುಟೀರಗಳು; ರಸ್ತೆ ಬದಿ ಕುಟೀರಗಳು ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿವೆ;

ಇ) 2003–04ನೇ ಸಾಲಿನಲ್ಲಿ ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ರಸ್ತೆ ಬದಿ ಕುಟೀರಗಳನ್ನು ವಿತರಿಸಲಾಗುವುದು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಹಾಗೂ ಹಜ್ ಸಚಿವರು)

ಅ) 1990–91 ರಿಂದ 2002–03ರವರೆಗೆ 526 ರಸ್ತೆ ಬದಿ ಕುಟೀರಗಳನ್ನು ಬೆಂಗಳೂರು ನಗರದಲ್ಲಿ ಹಂಚಿಕೆ ಮಾಡಲಾಗಿದೆ.

ಆ) ಇವುಗಳ ಪೈಕಿ 35 ರಸ್ತೆ ಬದಿ ಕುಟೀರಗಳು ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿವೆ.

ಇ) ಸಮಾಜ ಕಲ್ಯಾಣ ಇಲಾಖೆಯು ಲಿಡ್ಕರ್ ಸಂಸ್ಥೆಗೆ ನೀಡಬಹುದಾದ ಸಹಾಯಧನ/ ಅನುದಾನವನ್ನು ಪರಿಗಣಿಸಿ ಶಿವಾಜಿನಗರ ವಿಧಾನಸಭಾ ಕ್ಷೇತ್ರವನ್ನೊಳಗೊಂಡಂತೆ ಬೆಂಗಳೂರಿನಲ್ಲಿ ರಸ್ತೆ ಬದಿ ಕುಟೀರಗಳ ಹಂಚಿಕೆ ಬಗ್ಗೆ ನಿರ್ಣಯಿಸಲಾಗುವುದು ಹಾಗೂ ಈ ಕಾರ್ಯಕ್ರಮವನ್ನು ಅಂತಿಮಗೊಳಿಸಲಾಗುವುದು.

ಬೆಂಗಳೂರು ನಗರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಾಗಿಟ್ಟ ಹಣ ಬಳಕೆಯಾಗದೇ ಇರುವುದು

4180 (4925) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ/ಪಂಗಡದವರ ಕಲ್ಯಾಣಕ್ಕಾಗಿ ಸರ್ಕಾರ ವಿವಿಧ ಯೋಜನೆಯಡಿಯಲ್ಲಿ ನೀಡಿದ್ದ ಹಣ ಬಳಕೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವಿಶೇಷ ಘಟಕ ಯೋಜನೆ, ವಿದ್ಯಾರ್ಥಿಗಳಿಗೆ ಹೆಚ್ಚುವರಿ ವಸತಿ ವೆಚ್ಚ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೀಡಬೇಕಾದ ಬಹುಮಾನದ ಹಣ ಇತ್ಯಾದಿಗಳನ್ನು ಬಿಡುಗಡೆ ಮಾಡದೇ ಇರಲು ಕಾರಣಗಳೇನು?

ಇ) 2002-03ನೇ ಸಾಲಿನಲ್ಲಿ ಸರ್ಕಾರ ನೀಡಿದ್ದ ಹಣವನ್ನು ಬಳಸದೇ ಇರುವವರ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ವಿವಿಧ ಯೋಜನೆಗಳಿಗೆ ಒದಗಿಸಿ ಬಿಡುಗಡೆಗೊಳಿಸಿದ ಹಣವನ್ನು ವಿಶೇಷ ಘಟಕ ಯೋಜನೆ, ಇ.ಬಿ.ಎಲ್. ಬಹುಮಾನದ ಹಣವನ್ನು ಸರ್ಕಾರದ ವಿವಿಧ ಸಂಸ್ಥೆಗಳಿಂದ ಖರ್ಚನ್ನು ಭರಿಸಬೇಕಾಗಿರುತ್ತದೆ. ಇದರಿಂದ ಕೆಲವು ಕಚೇರಿಗಳು ಒದಗಿಸಿದ ಹಣವನ್ನು ಪೂರ್ಣವಾಗಿ ಖರ್ಚು ಮಾಡಿರುವುದಿಲ್ಲ.

ಆ) ಮತ್ತು ಇ).

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಬೆಂಗಳೂರು (ನಗರ) ಇವರ ಕರ್ತವ್ಯ ನಿರ್ವಹಣೆಯಲ್ಲಿನ ಲೋಪತನದಿಂದ ಹಾಗೂ ಕೊರತೆಯಿರುವ ಖರ್ಚು ಮತ್ತು ವೆಚ್ಚಗಳ ಸಂಬಂಧ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರ ಬೆಂಗಳೂರು (ನಗರ) ಕಚೇರಿಯ ತಪಾಸಣಾ ವರದಿಯನ್ನು ಪರಿಶೀಲಿಸಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಬೆಂಗಳೂರು (ನಗರ) ಮತ್ತು ಕಚೇರಿ ಅಧೀಕ್ಷಕ ಇವರುಗಳನ್ನು ಇಲಾಖಾ ವಿಚಾರಣೆ ಬಾಕಿಯಿಟ್ಟು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳಿಂದ ತಯಾರಿಂದ ಸರಕುಗಳ ರಫ್ತಿನ ಬಗ್ಗೆ

4183 (4598) : ಶ್ರೀ. ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳು ಯಾವಯಾವ ದೇಶಗಳಿಗೆ ರಫ್ತು ಆಗುತ್ತದೆ;

ಆ) ಎಷ್ಟು ಮೌಲ್ಯದ ಸರಕುಗಳು ಬೇರೆ ದೇಶಗಳಿಗೆ ರಫ್ತು ಆಗುತ್ತಿದೆ;

ಇ) ಸಣ್ಣ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡಲು ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ರಫ್ತು ಮಾಡುವಲ್ಲಿ ಸರಳೀಕರಣವಾಗಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು)

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳು ಅಮೇರಿಕ, ಆಫ್ರಿಕ, ಐರೋಪ್ಯ ನೈರುತ್ಯ ಏಷ್ಯದ ದೇಶಗಳಿಗೆ ಹಾಗೂ ಇತರ ನೆರೆ ಹೊರೆಯ ದೇಶಗಳಿಗೆ ರಫ್ತಾಗುತ್ತಿವೆ.

ಆ) ರಾಜ್ಯದ 2002-2003ರಲ್ಲಿ ರೂ. 10,500 ಕೋಟಿ ಮೌಲ್ಯದ ಸರಕುಗಳು ಸಣ್ಣ ಕೈಗಾರಿಕೆಗಳಿಂದ ರಫ್ತಾಗಿರುತ್ತದೆ.

ಇ) ಹೌದು.

ಈ) ಸರ್ಕಾರವು ಕರ್ನಾಟಕ ಎಕ್ಸ್‌ಪೋರ್ಟ್ ಪ್ರಮೋಷನ್ ಪಾಲಿಸಿ 2002-07ನ್ನು ಘೋಷಿಸಿದೆ. ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರವು ರಾಜ್ಯ ಸರ್ಕಾರದ ರಫ್ತು ಉತ್ತೇಜನಾ ಕೇಂದ್ರವಾಗಿರುತ್ತದೆ. ರಫ್ತುದಾರರಿಗೆ ಸಂಬಂಧಿಸಿದ ತೊಂದರೆಗಳನ್ನು ವಿವಿಧ ಕೇಂದ್ರ ಮತ್ತು ರಾಜ್ಯಗಳ ರಫ್ತು ಸಂಬಂಧಿತ ಸಮಿತಿಗಳ ಮುಂದಿಟ್ಟು ಆಗಿಂದಾಗ್ಯೆ ಪರಿಹರಿಸುವ ಮೂಲಕ ರಾಜ್ಯದ ರಫ್ತು ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.

ರಾಜ್ಯದಲ್ಲಿ ತಯಾರಾದ ಸರಕುಗಳ ರಫ್ತು ಸಾಗಾಣಿಕೆಯ ತೊಂದರೆ

4184 (4599) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳು ಯಾವ ಯಾವ ದೇಶಗಳಿಗೆ ರಫ್ತು ಆಗುತ್ತವೆ.

ಆ) ಎಷ್ಟು ಮೌಲ್ಯದ ಸರಕುಗಳು ಬೇರೆ ದೇಶಗಳಿಗೆ ರಫ್ತು ಆಗುತ್ತಿವೆ.

ಇ) ರಾಜ್ಯದ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡಲು ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಹಾಗಿದ್ದಲ್ಲಿ ರಫ್ತು ಮಾಡಲು ಸರಳೀಕರಣವಾಗಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ರಾಜ್ಯದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳು ಅಮೇರಿಕ, ಆಫ್ರಿಕ, ಐರೋಪ್ಯ, ನೈರುತ್ಯ ಏಷ್ಯದ ದೇಶಗಳಿಗೆ ಹಾಗೂ ಇತರ ನೆರೆ ಹೊರೆಯ ದೇಶಗಳಿಗೆ ರಫ್ತಾಗುತ್ತಿದೆ.

ಆ) ರಾಜ್ಯದ 2002-2003ರ ಒಟ್ಟು ಅಂದಾಜು ರಫ್ತು ರೂ. 26,279.43 ಕೋಟಿಗಳಾಗಿದ್ದು, ಇದರಲ್ಲಿ ಶೇ. 60 ರಷ್ಟು ಅಂದರೆ ರೂ. 15,750 ಕೋಟಿಗಳು ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಂದ ರಫ್ತಾಗಿರುತ್ತದೆ.

ಇ) ಹೌದು

ಈ) ರಾಜ್ಯದ ರಫ್ತು ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲು ಹಾಗೂ ರಫ್ತು ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಕರ್ನಾಟಕ ರಫ್ತು ಉತ್ತೇಜನ ನೀತಿ 2002-2007ಅನ್ನು ಪ್ರಕಟಿಸಲಾಗಿದೆ. ಈ ನೀತಿಯ ಮುಖ್ಯಾಂಶಗಳೇನೆಂದರೆ

1. ರಾಷ್ಟ್ರದ ರಫ್ತು ವಹಿವಾಟಿನಲ್ಲಿ ರಾಜ್ಯದ ರಫ್ತು ಪ್ರಮಾಣವನ್ನು ಶೇ 7 ರಿಂದ ಶೇ 15ಕ್ಕೆ ಹೆಚ್ಚಿಸುವುದು.
2. ರಫ್ತು ಚಟುವಟಿಕೆಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
3. ಮಧ್ಯಮಾವಧಿ ರಫ್ತು ನೀತಿಯನ್ನು ಪ್ರತಿಯೊಂದು ರಫ್ತು ಕ್ಷೇತ್ರಗಳಿಗೆ ಅಳವಡಿಸುವುದು. ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರವು ರಾಜ್ಯ ಸರ್ಕಾರದ ರಫ್ತು ಉತ್ತೇಜನಾ ಕೇಂದ್ರವಾಗಿರುತ್ತದೆ. ರಫ್ತುಗಾರರಿಗೆ ಸಂಬಂಧಿಸಿದ ತೊಂದರೆಗಳನ್ನು ವಿವಿಧ ಕೇಂದ್ರ ಮತ್ತು ರಾಜ್ಯಗಳ ರಫ್ತು ಸಂಬಂಧಿತ ಸಮಿತಿಯಗಳ ಮುಂದಿಟ್ಟು ಆಗಿಂದ್ದಾಗೆ ಪರಿಹರಿಸಲಾಗುತ್ತಿದೆ.

The number of students on pre-matric Hostels Belgaum District

4185 (4600) : Sri Koujalagi Mahanthesh Shivananda (Byala Hongala): Minister for Social Welfare be pleased to State.

a) How many students are there in boys pre-matric hostels of Backward Classes and Minorites, SC/ST hostels of the State;

b) What is the expenditure of each student in each hostel every month;

c) Is if true the amount now given to the student is less;

d) If so, when what action is taken to enhance this;

e) How many students are there in different hostels of Soudatti and Bailahongala taluk of Belgaum district?

Sri A. Krishnappa (Minister for Social Welfare)

a) The details of number of students in pre-matric boys hostel of BCM, SC/ST are indicated below:

Sl. No.	Department	Number of Student
1.	Social Welfare Dept.	52695
2.	Backward Classes Department	50570
3.	Sche Tribal Welfare Department	3750
4.	Minority Department	Nil

b) An amount of Rs. 525/- monthly is incurred for each student residing in each of the hostel for Boarding, Lodging including Oil, Soap, Books and Stationery. In addition two sets of uniforms at a cost of Rs. 300/- P.a. and hair cutting charges of Rs. 30/- p.a is also given.

c) The amount given is sufficient

d) The question of enhancing the rate will be considered subject to availability of funds.

e) Details are indicated in the annexures-1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 4600ಕ್ಕೆ ಅನುಬಂಧ-1

ಸಮಾಜ ಕಲ್ಯಾಣ ಇಲಾಖೆ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿರುವ ವಿದ್ಯಾರ್ಥಿನಿಲಯಗಳು ಹಾಗೂ ಇವುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯ ವಿವರಗಳನ್ನು ಕೆಳಕಂಡಂತೆ ಇದೆ.

ಕ್ರ.ಸಂ.	ವಿದ್ಯಾರ್ಥಿನಿಲಯಗಳ ಹೆಸರು ಬೈಲಹೊಂಗಲ ತಾಲ್ಲೂಕು	
I.	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳು	ವಿದ್ಯಾರ್ಥಿಗಳ ಸಂಖ್ಯೆ
1.	ಬೈಲಹೊಂಗಲ	70
2.	ದೊಡ್ಡವಾಡ	50

1	2	3
3.	ಹೊಸಕೋಟೆ	35
4.	ಕಿತ್ತೂರು	50
5.	ಮಲ್ಲಾಪುರ	50
6.	ವಕ್ಕುಂದ	50
7.	ವಣ್ಣೂರ	50
8.	ಬೇವಿನಕೊಪ್ಪ	35
9.	ಮೇಕಲಮರ್ಡಿ	50
	ನಿಲಯಗಳು ಒಟ್ಟು 500	
2.	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳು ಬೈಲಹೊಂಗಲ 60 : ನಿಲಯಗಳು ಒಟ್ಟು 500	
	ಬಾಲಕರ ವಿದ್ಯಾರ್ಥಿನಿಲಯ ಸವದತ್ತಿ ತಾಲ್ಲೂಕು	
1.	ಸವದತ್ತಿ	58
2.	ರಾಮಪುರ	50
3.	ಮುನ್ನವಳ್ಳಿ	50
4.	ಹೂಲಿ	25
5.	ಹಿರೇಬುದನೂರು	50
6.	ದನಗಟ್ಟಿ	50
2.	ಬಾಲಕಿಯರ ವಿದ್ಯಾರ್ಥಿನಿಲಯಗಳು	
(1)	ಸವದತ್ತಿ	50
		333
	ಹಿಂದುಳಿದ ವರ್ಗಗಳ ಇಲಾಖೆ	
1.	ಬಾಲಕರ ಡಿ.ಟಿ ಬೈಲಹೊಂಗಲ	50
2.	ಬಾಲಕರ ಬಿಸಿಎಂ ಬೈಲಹೊಂಗಲ	55
3.	ಬಾಲಕ/ಬಾಲಕಿಯರ ಬಿಸಿಎಂ ಬೈಲಹೊಂಗಲ	50
4.	ಬಾಲಕರ ಕಿತ್ತೂರ	50
5.	ಬಾಲಕರ ದೇಶನೂರ	50
6.	ಬಾಲಕರ ನೇಸರಗಿ	50
7.	ಬಾಲಕರ ಸಂಪಗಾಂವ	50
8.	ಬಾಲಕರ ಬೈಲವಾಡ	50
9.	ಬಾಲಕರ ನಯಾನಗರ	50
10.	ದೊಡವಾಡ	50
11.	ತುರಕರಶಿಗಿಹಳ್ಳಿ	50
12.	ಹುಣಶಿಕಟ್ಟಿ	50
		605

ಸವದತ್ತಿ ತಾಲ್ಲೂಕು :

1.	ಮೆಟ್ರಿಕ್ ಪೂರ್ವ ಬಾಲಕರ ಸವದತ್ತಿ	60
2.	ಮೆಟ್ರಿಕ್ ಪೂರ್ವ ಬಾಲಕರ ಸವದತ್ತಿ (ಬಾಲಕಿ)	50
3.	– " – ಮುರಗೋಡ	50
4.	– " – ಚಚಡಿ	50
5.	– " – ಯಕ್ಕುಂಡಿ	50
6.	– " – ತಲ್ಲೂರ	50
7.	– " – ಚಿಕ್ಕೋಪ	50
8.	– " – ಕಡಬಿ	50
9.	– " – ಯರಗಟ್ಟಿ	50
10.	– " – ಸುತಗಟ್ಟಿ	50
11.	– " – ಹುಲಿಕಟ್ಟಿ	50
12.	– " – ಮುನವಳ್ಳಿ	50
13.	– " – ಹಾರುಗೊಪ್ಪ	50
14.	– " – ಯರಝರವಿ	50
15.	– " – ಸತ್ತಿಗೇರಿ	50
		770

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಬೈಲಹೊಂಗಲ ತಾಲ್ಲೂಕು

1.	ಪರಿಶಿಷ್ಟ ವರ್ಗದ ಬಾಲಕರ ವಿದ್ಯಾರ್ಥಿನಿಲಯ ನೇಗಿನಹಾಳ	50
2.	ಪರಿಶಿಷ್ಟ ವರ್ಗದ ಬಾಲಕರ ವಿದ್ಯಾರ್ಥಿನಿಲಯ, ವೂಸ್ತಮರಡಿ	50
3.	ಪರಿಶಿಷ್ಟ ವರ್ಗದ ಬಾಲಕರ ವಿದ್ಯಾರ್ಥಿನಿಲಯ, ಚಿಕ್ಕಬಳ್ಳಿಕಟ್ಟೆ	50

ಸವದತ್ತಿ ತಾಲ್ಲೂಕು :

1.	ಪರಿಶಿಷ್ಟ ವರ್ಗದ ಬಾಲಕಿಯರ ವಿದ್ಯಾರ್ಥಿನಿಲಯ ಯರಗಟ್ಟಿ	50

ತುರುವೇಕೆರೆ ತಾಲ್ಲೂಕಿನ ಹಡಗನಹಳ್ಳಿಯ ಮಸೀದಿಗಳ ಬಳಿ ಬೋರ್‌ವೆಲ್ ಕೊರೆಯಲು ಹಣ ಒದಗಿಸುವ ಬಗ್ಗೆ

4186 (4760) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಮಾಯಾಸಂದ್ರ ಹೋಬಳಿ ಇಟ್ಟಿಗೆ ಹಳ್ಳಿ ಹಾಗೂ ಹಡವನಹಳ್ಳಿ ಜನತಾ ಕಾಲೋನಿಯಲ್ಲಿ ಮಸೀದಿ ಇರುವುದು ನಿಜವೇ:

ಆ) ಹಾಗಿದ್ದಲ್ಲಿ ಮಸೀದಿಗೆ ಪ್ರಾರ್ಥನೆ ಮಾಡಲು ಹೋಗುವ ಭಕ್ತರಿಗೆ ನೀರಿಲ್ಲದ ಪರಿಸ್ಥಿತಿ ಬಂದಿರುವುದು ನಿಜವೇ.

ಇ) ನೀರಿಲ್ಲದ ಈ ಮಸೀದಿಗಳಿಗೆ ತಕ್ಷಣ ಹೊಸ ಬೋರ್‌ವೆಲ್ ಹಾಕಲು ಕೂಡಲೇ ಹಣ ಬಿಡುಗಡೆ ಮಾಡಲಾಗುವುದೇ?

ಶ್ರೀ ಎಂ.ಎಸ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) – ಹೌದು –

ಆ) – ಹೌದು –

ಇ) ಕರ್ನಾಟಕ ಸಹಾಯಾನುಧಾನ ಸಂಹಿತೆಯು ನಿಯಮಾವಳಿಯಲ್ಲಿ ಇಂತಹ ಕಾಮಗಾರಿಗಳಿಗೆ ಸಹಾಯಾನುಧನ ನೀಡಲು ಅವಕಾಶವಿರುವುದಿಲ್ಲ.

ತುರುವೇಕೆರೆ ತಾಲ್ಲೂಕಿನಲ್ಲಿ ಹೆಚ್ಚು ರೇಷ್ಮೆ ಬೆಳೆಯಲು ಪ್ರೋತ್ಸಾಹ

4187 (4761) : ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆ ಎಷ್ಟು ಎಕರೆಯಲ್ಲಿ ಬೆಳೆಯಲಾಗುತ್ತಿದೆ?

ಆ) ತಾಲ್ಲೂಕಿನಾದ್ಯಂತ ರೇಷ್ಮೆ ಬೆಳೆಯಲು ರೈತರಿಗೆ ಪ್ರೋತ್ಸಾಹ ನೀಡಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಇ) 4 ಹೋಬಳಿಗಳಲ್ಲೂ ಒಂದೇ ಸಮನಾಗಿ ರೈತರಿಗೆ ಜವಾಬ್ದಾರಿಯಿಂದ ರೇಷ್ಮೆ ತರಬೇತಿ ಕೊಡಲಾಗುವುದೇ?

ಈ) ಹಾಗಿದ್ದಲ್ಲಿ ಈ ವರ್ಷದಿಂದ ಜಿಲ್ಲೆಯಲ್ಲೇ ಪ್ರಮುಖ ಸ್ಥಾನ ಪಡೆಯಲಾಗುವುದೇ?

ಉ) ಉತ್ತಮ ಬೆಳೆಗಾರರಿಗೆ ಯಾವ ರೀತಿ ಪ್ರೋತ್ಸಾಹ ನೀಡಲಾಗುವುದು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ತುರುವೇಕೆರೆ ತಾಲ್ಲೂಕಿನಲ್ಲಿ 367.00 ಎಕರೆಗಳಲ್ಲಿ ಹಿಪ್ಪುನೇರಳೆಯ ಬೆಳೆ ಇದೆ.

ಆ) ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ :-

1. ರೇಷ್ಮೆ ಬೆಳೆಗಾರರಿಗೆ ಹಿಪ್ಪುನೇರಳೆ ಬೇಸಾಯ, ರೇಷ್ಮೆ ಹುಳು ಸಾಕಾಣಿಕೆ ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ತಿಳುವಳಿಕೆ /ತರಬೇತಿ ನೀಡಲಾಗುತ್ತಿದೆ.

2. ಹೊಸತಳಿ ಹಿಪ್ಪುನೇರಳೆ ಹಾಗೂ ರೇಷ್ಮೆ ಮೊಟ್ಟೆಗಳನ್ನು ಕ್ಷೇತ್ರಮಟ್ಟದಲ್ಲಿ ಬಿಡುಗಡೆ ಮಾಡಲಾಗುತ್ತಿದೆ.

3. ವಿವಿಧ ಕಾರ್ಯಕ್ರಮಗಳ ಅಡಿ ಸಹಾಯಧನ ಹಾಗೂ ಪ್ರೋತ್ಸಾಹಧನ ನೀಡಲಾಗುತ್ತಿದೆ.

4. ಉಚಿತವಾಗಿ ಬಿತ್ತನೆ ಪ್ರದೇಶಗಳಲ್ಲಿ ಸಾಮೂಹಿಕ ಸೋಂಕು ನಿವಾರಕ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ.

5. ರೇಷ್ಮೆ ಗೂಡು ವಹಿವಾಟನ್ನು ಮಾರುಕಟ್ಟೆಗಳಲ್ಲಿ ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುತ್ತಿದೆ.

6. ಬಿತ್ತನೆ ಗೂಡಿಗೆ ಇಲಾಖೆಯಿಂದ ದರ ನಿಗದಿಪಡಿಸಲಾಗಿದೆ.

7. ರೇಷ್ಮೆ ಗೂಡಿನ ಬೆಲೆ ಕುಸಿತದ ಹಿನ್ನೆಲೆಯಲ್ಲಿ ದಿ: 16–09–02 ರಿಂದ 15–12–02ರವರೆಗೆ ರೇಷ್ಮೆ ನೂಲು ಬಿಚ್ಚಾಣಿಕೆಗೆ ವಹಿವಾಟಾದ ಪ್ರತಿ ಕೆ.ಜಿ. ಗೂಡಿಗೆ 10.00 ರೂ.ನಂತೆ ಪ್ರೋತ್ಸಾಹ ಧನವನ್ನು ರೇಷ್ಮೆ ಬೆಳೆಗಾರರಿಗೆ ನೀಡಲಾಗಿರುತ್ತದೆ.

ಇ) ಹೌದು

ಈ) ದ್ವಿತಳಿ ಗೂಡು ಉತ್ಪಾದನೆಯಲ್ಲಿ ಆ ತಾಲ್ಲೂಕು ಪ್ರಮುಖ ಸ್ಥಾನದಲ್ಲಿದೆ.

ಉ) ಅಂತಹ ಬೆಳೆಗಾರರಿಗೆ ಪ್ರಶಸ್ತಿ ನೀಡಲಾಗಿದೆ.

ರಾಜ್ಯದಲ್ಲಿ ಗಣಿಗಾರಿಕೆಗಳಿಂದ ಬರುವ ವಾರ್ಷಿಕ ವರಮಾನ

4188 (4762) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅನುಮತಿ ಕೊಟ್ಟಿರುವ ಗಣಿಗಾರಿಕೆಗಳು ಎಷ್ಟು;

ಆ) ಹಾಗಿದ್ದಲ್ಲಿ, ಆ ಗಣಿಗಾರಿಕೆಗಳಿಂದ ವರ್ಷಕ್ಕೆ ಬರುವ ಆದಾಯವೆಷ್ಟು;

ಇ) ಕೆಲವು ಕಡೆ ತುಂಬಾ ಕಡಿಮೆ ದರಕ್ಕೆ ಕೊಟ್ಟಿರುವುದು ನಿಜವೇ;

ಈ) ಈ ರೀತಿ ಆದಾಗ ಸರ್ಕಾರಕ್ಕೆ ತುಂಬಾ ಹಾನಿಯಾಗುವುದಿಲ್ಲವೇ;

ಉ) ಇವುಗಳನ್ನು ಸರಿಪಡಿಸಿ ಆದಾಯ ಬರುವ ಹಾಗೆ ಮಾಡಲಾಗುವುದೇ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅನುಮತಿ ಕೊಟ್ಟಿರುವ ಗಣಿಗಾರಿಕೆಗಳ ವಿವರ ಕೆಳಕಂಡಂತಿದೆ :–

ವರ್ಷ	ಗಣಿ ಗುತ್ತಿಗೆಗಳು	ಕಲ್ಲು ಗಣಿ ಗುತ್ತಿಗೆಗಳು	ಒಟ್ಟು ಗುತ್ತಿಗೆಗಳು
2000–01	31	863	894
2001–02	42	1218	1260
2002–03	50	1412	1462

ಆ) 2002–03ನೇ ಸಾಲಿನಲ್ಲಿ ಈ ಗಣಿಗಾರಿಕೆಗಳಿಂದ ಬಂದಿರುವ ಆದಾಯ ರೂ. 167.15 ಕೋಟಿ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳ ಪುರಾತನ ದೇವಸ್ಥಾನ, ಮಸೀದಿ, ಚರ್ಚ್‌ಗಳ ದುರಸ್ತಿ

4185 (4775) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತ್ರಿಕೋಟ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶಗಳಲ್ಲಿ ಪುರಾತನ ದೇವಸ್ಥಾನ, ಮಸೀದಿ, ಚರ್ಚ್, ಗುರುದ್ವಾರ ದುರಸ್ತಿಗಾಗಿ "ಮುಖ್ಯಮಂತ್ರಿಗಳ ನಿಧಿ" ಸ್ಥಾಪಿಸಲಾಗಿದೆಯೇ;

ಆ) ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಈ ನಿಧಿಯಿಂದ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ;

ಇ) ದುರಸ್ತಿ ಕಾರ್ಯಕ್ಕೆ ಗರಿಷ್ಠ ಎಷ್ಟು ರೂಪಾಯಿಗಳನ್ನು ನೀಡಲಾಗುವುದು;

ಈ) ಬಿಜಾಪುರ ಜಿಲ್ಲೆಯಲ್ಲಿ ಈ ನಿಧಿಯಿಂದ ಕೈಗೊಂಡ ದುರಸ್ತಿ ಕಾರ್ಯಗಳು ಯಾವುವು;

ಉ) ಜಿಲ್ಲೆಗೆ ಈ ನಿಧಿಯ ಸೌಲಭ್ಯ ಕಲ್ಪಿಸದೇ ಇದ್ದಲ್ಲಿ, ಸರ್ಕಾರ ಸೌಲಭ್ಯ ಕಲ್ಪಿಸಲು ಕೈಗೊಳ್ಳಲಾಗುವ ಕ್ರಮಗಳೇನು?

ಊ) ಈ ನಿಧಿಯಿಂದ ಜಿಲ್ಲೆಯಲ್ಲಿ ಯಾವ ನಿರ್ದಿಷ್ಟ ಕಾಲಮಿತಿಯಲ್ಲಿ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುವುದು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು)

ಅ) ಹೌದು, ಮಾನ್ಯ ಮುಖ್ಯಮಂತ್ರಿಗಳು 2003--2004ನೇ ಸಾಲಿನ ಆಯವ್ಯಯ ಭಾಷಣದಲ್ಲಿ, ಗ್ರಾಮೀಣ ಪ್ರದೇಶದಲ್ಲಿನ ಹಳೇಯ ದೇವಸ್ಥಾನ, ಮಸೀದಿ, ಚರ್ಚು, ಗುರುದ್ವಾರ ಮತ್ತು ಬಸದಿಗಳ ದುರಸ್ತಿಗಾಗಿ "ಮುಖ್ಯಮಂತ್ರಿಗಳ ನಿಧಿ"ಯನ್ನು ಸ್ಥಾಪನೆ ಮಾಡುವುದಾಗಿ ಪ್ರಸ್ತಾಪಿಸಿದ್ದು, ಅದರಂತೆ, ಆರಂಭಿಕ ಕೊಡುಗೆಯಾಗಿ 1.00 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ಆ) ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಧಾರ್ಮಿಕ ಸಂಸ್ಥೆಗಳಿಗೆ ಸದರಿ ಯೋಜನೆಯಡಿಯಲ್ಲಿ ಸರ್ಕಾರದಿಂದ ಈವರೆಗೆ ಹಣ ಬಿಡುಗಡೆಯಾಗಿರುವುದಿಲ್ಲ. ಕಾರಣ ಯಾವುದೇ ದೇವಾಲಯ ದುರಸ್ತಿ ಕೆಲಸ ಪ್ರಾರಂಭಿಸಲಾಗಿಲ್ಲ.

ಇ) ಈ ನಿಧಿಯಿಂದ ಗರಿಷ್ಠ ರೂ. 10,000.00 ಗಳ ನೆರವನ್ನು ಒಂದು ಸಂಸ್ಥೆಗೆ ಒಮ್ಮೆ ಮಾತ್ರ ನೀಡಲಾಗುವುದು.

ಈ) ಈ ಯೋಜನೆಯಡಿ ಸರ್ಕಾರದಿಂದ ಈವರೆಗೆ ಹಣ ಬಿಡುಗಡೆಯಾಗಿರುವುದಿಲ್ಲ. ಕಾರಣ ಯಾವುದೇ ದೇವಸ್ಥಾನ ದುರಸ್ತಿ ಕಾರ್ಯ ಕೈಗೊಂಡಿರುವುದಿಲ್ಲ.

ಉ) ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಈ ಯೋಜನೆಯ ಸೌಲಭ್ಯ ಕಲ್ಪಿಸಲಾಗುವುದು.

ಊ) ಈಗಾಗಲೇ ನಿಧಿ ಸ್ಥಾಪಿಸಿರುವುದರಿಂದ ಕಾಲಮಿತಿ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಬ್ಸಿಡಿ ಹಣ ಬಾಕಿ ಕುರಿತು

4190 (4776) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತ್ರಿಕೋಟ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಸಣ್ಣ ಕೈಗಾರಿಕಾ ಘಟಕಗಳಿಗೆ ಸರ್ಕಾರದಿಂದ ಬರಬೇಕಾಗಿರುವ ಸಬ್ಸಿಡಿ ಬಾಕಿ ಹಣವೆಷ್ಟು?

ಆ) ಸರ್ಕಾರ ಸಬ್ಸಿಡಿ ಹಣವನ್ನು ಎಷ್ಟು ವರ್ಷಗಳಿಂದ ಬಾಕಿ ಉಳಿಸಿಕೊಂಡಿದೆ ಬಾಕಿ ಉಳಿಸಿಕೊಂಡ ಜಿಲ್ಲಾವಾರು ಸಬ್ಸಿಡಿ ಹಣವೆಷ್ಟು:

ಇ) ಸಣ್ಣ ಕೈಗಾರಿಕಾ ಘಟಕಗಳು ಆರ್ಥಿಕ ತೊಂದರೆ ಅನುಭವಿಸುತ್ತಿರುವ ಕಾರಣದಿಂದ ಘಟಕಗಳು ಮುಚ್ಚುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದರೆ, ಇವುಗಳ ಉತ್ತೇಜನಕ್ಕಾಗಿ ಸರ್ಕಾರ ನೀಡಬೇಕಾದ ಸಬ್ಸಿಡಿ ಬಾಕಿ ಹಣವನ್ನು ನೀಡುವುದೇ; ಹಾಗಿದ್ದರೆ, ನಿರ್ದಿಷ್ಟಪಡಿಸಿದ ಕಾಲಮಿತಿ ಏನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು)

ಅ) 31.03.03ರ ಅಂತ್ಯಕ್ಕೆ ರಾಜ್ಯದಲ್ಲಿನ 18279 ಸಣ್ಣ ಕೈಗಾರಿಕೆಗಳಿಗೆ ರೂ. 405.67 ಕೋಟಿಗಳಷ್ಟು ಸಹಾಯಧನ ಮೊತ್ತ ಬಾಕಿ ಇರುತ್ತದೆ.

ಆ) ದಿನಾಂಕ: 1.1.99 ರಿಂದ 31.3.03ರ ಅಂತ್ಯದವರೆಗೂ ಸಣ್ಣ ಕೈಗಾರಿಕೆಗಳಿಗೆ ಮಂಜೂರಾಗಿರುವ ಸಹಾಯಧನ ಬಿಡುಗಡೆಗಾಗಿ ಬಾಕಿ ಇರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ).

ಇ) ಸಹಾಯಧನ ಬಿಡುಗಡೆ ಬಾಕಿಯಿಂದ ಆದ ಆರ್ಥಿಕ ತೊಂದರೆ ಕಾರಣದಿಂದಲೇ ಸಣ್ಣ ಕೈಗಾರಿಕೆಗಳು ಮುಚ್ಚುತ್ತಿರುವುದು ಮುಖ್ಯ ಕಾರಣವಲ್ಲ. ವಿಶ್ವ ವ್ಯಾಪಾರ ಒಡಂಬಡಿಕೆ, ಮಾರುಕಟ್ಟೆ ಕುಸಿತ ಜಾಗತೀಕರಣ ಹಾಗೂ ಉದಾರೀಕರಣ ಇವು ಮುಂತಾದ ಕಾರಣಗಳು.

ಈ) ಆಯವ್ಯಯದಲ್ಲಿ ಹೆಚ್ಚಿನ ಸಹಾಯಧನ ಅನುದಾನವನ್ನು ಒದಗಿಸಿ, ಬಾಕಿ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಲು ವಿಶೇಷ ಪ್ರಯತ್ನ ಮಾಡಲಾಗುವುದು. ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ರೂ. 12.56 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಹೆಚ್ಚುವರಿ ಸಂಪನ್ಮೂಲವನ್ನು 'ಬಾಂಡ್' ಮುಖಾಂತರ ಅಥವಾ ಹೆಚ್ಚುವರಿ ಆಯವ್ಯಯ ಅನುದಾನದ ಮುಖಾಂತರ ಕ್ರೋಢೀಕರಿಸಿ ಸಬ್ಸಿಡಿ ಮೊತ್ತವನ್ನು ಆದಷ್ಟು ಬೇಗನೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

Districtwise details of state investment subsidy pendency as on March 2003

Sl. No.	Name of the District	No. of Units	Total Amount
1.	Bangalore (U)	1349	6353.38
2.	Bangalore (R)	1750	5196.97
3.	Bagalkot	401	715.87
4.	Belgaum	1448	1955.27
5.	Bellary	602	1557.28
6.	Bidar	554	521.25
7.	Bijapur	503	779.11
8.	Chamarajnagar	223	266.93
9.	Chitradurga	411	886.85
10.	Chickmagalur	281	427.53
11.	Davanagere	302	678.24
12.	Dharwad	704	1518.14
13.	Dakshina Kannada	874	1787.23
14.	Gadag	320	333.59
15.	Gulbarga	429	1028.54
16.	Hassan	576	844.57
17.	Haveri	237	286.00
18.	Karwar	1154	1809.27
19.	Kodagu	150	378.03
20.	Kolar	1625	3662.06

1	2	3	4
21.	Koppal	235	985.35
22.	Mandya	401	576.81
23.	Mysore	913	2452.00
24.	Raichur	242	616.61
25.	Shimoga	421	695.91
26.	Tumkur	1269	2681.62
27.	Udupi	905	1653.75
	Total	**18279**	**40567.36**

ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಶಾದಿ ಮಹಲ್ ಸ್ಥಾಪನೆ

4191 (4794) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತ್ರಿಕೋಟ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರತಿ ತಾಲ್ಲೂಕುಗಳಲ್ಲಿ ಶಾದಿಮಹಲ್ ನಿರ್ಮಾಣ ಮಾಡಲಾಗುತ್ತದೆಯೇ;

ಆ) ಪ್ರತಿ ತಾಲ್ಲೂಕಿಗೆ ಶಾದಿ ಮಹಲ್ ನಿರ್ಮಾಣ ಮಾಡುವುದಕ್ಕಾಗಿ ಸರ್ಕಾರ ನಿಗಧಿಪಡಿಸಿದ ಮತ್ತು ಒದಗಿಸಲಾದ ಅನುದಾನ ಎಷ್ಟು;

ಇ) ರಾಜ್ಯದಲ್ಲಿರುವ ಯಾವ ಯಾವ ಜಿಲ್ಲೆಗಳಲ್ಲಿ ಶಾದಿಮಹಲ್ ನಿರ್ಮಿಸುವ ಕಾರ್ಯವನ್ನು ಪ್ರಾರಂಭಿಸಲಾಗಿದೆ;

ಈ) ಇದಕ್ಕಾಗಿ ಸರ್ಕಾರದಿಂದ ನಿಗದಿಯಾದ ಅನುದಾನ ಎಷ್ಟು;

ಉ) ಬಿಜಾಪುರ ತಾಲ್ಲೂಕಿನಲ್ಲಿ ಯಾವ ಸ್ಥಳಗಳಲ್ಲಿ ಶಾದಿಮಹಲ್ ನಿರ್ಮಿಸಲಾಗುತ್ತದೆ. ವಿವರ ಒದಗಿಸುವುದು?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು)

ಅ) 175 ತಾಲ್ಲೂಕುಗಳ ಪೈಕಿ ಶಾದಿಮಹಲ್ ನಿರ್ಮಾಣ ಕಾರ್ಯವನ್ನು 67 ಸ್ಥಳಗಳಲ್ಲಿ ಕೈಗೊಂಡಿದ್ದು, ಇನ್ನುಳಿದ ತಾಲ್ಲೂಕು/ಶಾಸನ ಸಭಾ ಕ್ಷೇತ್ರಗಳಿಂದ ಪ್ರಸ್ತಾವನೆಗಳು ಬಂದ ಕೂಡಲೇ ಅವುಗಳನ್ನು ಸಹ ಪರಿಗಣಿಸಲಾಗುವುದು.

ಆ) ಸರ್ಕಾರವು ಪ್ರತಿ ತಾಲ್ಲೂಕು ಅಥವಾ ವಿಧಾನಸಭಾ ಮತಕ್ಷೇತ್ರಗಳಿಗೆ ಒಂದರಂತೆ ಶಾದಿಮಹಲ್ ನಿರ್ಮಾಣಕ್ಕೆ ಗರಿಷ್ಠ ರೂ. 5.00 ಲಕ್ಷಗಳವರೆಗೆ ಅನುದಾನವನ್ನು ನೀಡಲು ಉದ್ದೇಶಿಸಿರುತ್ತದೆ.

ಇ) ರಾಯಚೂರು ಮತ್ತು ಕೊಡಗು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 25 ಜಿಲ್ಲೆಗಳಲ್ಲಿನ ವಿವಿಧ ತಾಲ್ಲೂಕುಗಳಿಗೆ ಶಾದಿಮಹಲ್ ನಿರ್ಮಿಸಲು ಅನುದಾನ ಬಿಡುಗಡೆ ಮಾಡಲಾಗಿದ್ದು, ಕಟ್ಟಡ ನಿರ್ಮಾಣ ಕಾರ್ಯಪ್ರಗತಿಯಲ್ಲಿರುತ್ತದೆ.

ಈ) 2003-04ನೇ ಸಾಲಿಗೆ ರೂ. 550.00 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದೆ.

ಉ) ಬಿಜಾಪುರ ತಾಲ್ಲೂಕಿನಲ್ಲಿ ಕೆಳಕಂಡ 2 ಸ್ಥಳಗಳಲ್ಲಿ ಶಾದಿಮಹಲ್ ನಿರ್ಮಾಣ ಕಾಮಗಾರಿಗೆ ಅನುದಾನ ಒದಗಿಸಲಾಗಿದೆ.

1. ಬಿಜಾಪುರ ಮತಕ್ಷೇತ್ರ: ಇಮಾಮತ್ ಕಮಿಟಿ ಜಾಮಿಯಾ ಮಸೀದಿ ಬಿಜಾಪುರ ಟೌನ್, ಬಿಜಾಪುರ ರೂ. 5.00 ಲಕ್ಷ.
2. ತಿಕೋಟಾ ಮತಕ್ಷೇತ್ರ: ಹಾಜಿ ಮಸ್ತಾನ ಅಲ್ಪಸಂಖ್ಯಾತರ ಸೇವಾ ಸಂಘ ತಿಕೋಟಾ, ಬಿಜಾಪುರ ತಾಲ್ಲೂಕು ರೂ. 2.00 ಲಕ್ಷ.

ಬಿಜಾಪುರ ಜಿಲ್ಲೆಯಲ್ಲಿನ ಸಣ್ಣ ಕೈಗಾರಿಕೆ ಘಟಕಗಳಿಗೆ ಸಬ್ಸಿಡಿ ಬಾಕಿ ಪಾವತಿ ಬಗ್ಗೆ

4192 (4795) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತ್ರಿಕೋಟ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕಾ ಘಟಕಗಳಿಗೆ ಬರಬೇಕಾದ ಸಬ್ಸಿಡಿ ಬಾಕಿ ಹಣ ಎಷ್ಟು? ಎಷ್ಟು ವರ್ಷಗಳಿಂದ ಸಬ್ಸಿಡಿ ಹಣ ಬಾಕಿ ಇದೆ?

ಆ) ಜಿಲ್ಲೆಯಲ್ಲಿ ಯಾವ ಯಾವ ಸಣ್ಣ ಕೈಗಾರಿಕಾ ಘಟಕಗಳಿಗೆ ಎಷ್ಟೆಷ್ಟು ಸಬ್ಸಿಡಿ ಹಣ ಬಾಕಿ ಬರಬೇಕಾಗಿದೆ? ವಿವರ ಒದಗಿಸುವುದು?

ಇ) ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಬರಗಾಲವಿದ್ದರೂ ದ್ರಾಕ್ಷಿ ಬೆಳೆಗಾರರ ಒಣದ್ರಾಕ್ಷಿ ಘಟಕಗಳಿಗೆ ನೀಡಬೇಕಾದ ಸಬ್ಸಿಡಿ ಬಾಕಿ ಹಣ ನೀಡಲು ಸರ್ಕಾರ ಏನಾದರೂ ಕ್ರಮ ಕೈಗೊಳ್ಳಲಾಗುವುದೇ?

ಈ) ಹಾಗಿದ್ದರೆ, ಈ ಬಗ್ಗೆ ನಿರ್ಧಿಷ್ಟವಾದ ಕಾಲಮಿತಿ ಏನು? ವಿವರ ಒದಗಿಸುವುದು.

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕಾ ಘಟಕಗಳಿಗೆ ಜೂನ್ 2003ರ ಅಂತ್ಯದವರೆಗೆ 538 ಘಟಕಗಳಿಗೆ ರೂ. 8,17,82,708–00ಗಳ ಸಬ್ಸಿಡಿ ಬಾಕಿ ಇದೆ. ಇದು 01.01.99 ರಿಂದ ಬಾಕಿ ಇದೆ.

ಆ) ಬಿಜಾಪುರ ಜಿಲ್ಲೆಯಲ್ಲಿ 538 ವಿವಿಧ ತರಹದ ಸಣ್ಣ ಕೈಗಾರಿಕಾ ಘಟಕಗಳಿಗೆ ರೂ. 8,17,82,708ಗಳ ಸಬ್ಸಿಡಿ ಹಣ ಬಾಕಿ ಇದೆ.

ಇ) ಆಯವ್ಯಯದಲ್ಲಿ ಒದಗಿಸಲಾದ ಮೊತ್ತದಲ್ಲಿ ಬಿಜಾಪುರ ಜಿಲ್ಲೆಗೂ ಸೇರಿದಂತೆ ಸಬ್ಸಿಡಿ ಬಿಡುಗಡೆ ಮಾಡಲು ಪ್ರಯತ್ನ ಮಾಡಲಾಗುತ್ತಿದೆ.

ಈ) ರಾಜ್ಯದಲ್ಲಿ ಒಟ್ಟಾರೆ ಬಿಡುಗಡೆಗಾಗಿ ಬಾಕಿ ಇರುವ ರೂ. 405.00 ಕೋಟಿಗಳಲ್ಲಿ ಪ್ರಸಕ್ತ ಸಾಲಿನ ವರ್ಷದ ಆಯವ್ಯಯದಲ್ಲಿ ರೂ. 12.56 ಕೋಟಿಗಳನ್ನು ಒದಗಿಸಲಾಗಿದೆ. ಹೆಚ್ಚುವರಿ ಸಂಪನ್ಮೂಲವನ್ನು ಕ್ರೋಢೀಕರಿಸಿ ಬಾಕಿ ಸಬ್ಸಿಡಿ ಮೊತ್ತವನ್ನು ಬಾಂಡ್‌ಗಳ ಮೂಲಕ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಗುಲ್ಬರ್ಗಾ ವಿಧಾನಸಭಾ ಕ್ಷೇತ್ರದ ಕೊಳವೆ ಬಾವಿಗಳ ಫಲಾನುಭವಿಗಳು

4193 (4587) : ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪೂರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

4.	ಗೋಡಂಬಿ, ಎಂದರೆ-	
	(i) ಹಸಿ ಗೋಡಂಬಿ	ಶೇಕಡಾ ನಾಲ್ಕು
	(ii) ಗೋಡಂಬಿ ತಿರುಳು	ಶೇಕಡಾ ನಾಲ್ಕು
	(iii) ಗೇರೆಣ್ಣೆ	ಶೇಕಡಾ ನಾಲ್ಕು
5.	(i) ಕ್ಯಾಸೆಟ್ ಟೇಪ್ ರೆಕಾರ್ಡರುಗಳು (ಆಡಿಯೋ ಮತ್ತು ವಿಡಿಯೋ) ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು	ಶೇಕಡಾ ಹದಿನೈದು
	(ii) (ಎ) ಖಾಲಿ ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್ಟುಗಳು	ಶೇಕಡಾ ಹನ್ನೆರಡು
	(ಬಿ) ರೆಕಾರ್ಡು ಮಾಡಿಕೊಳ್ಳಲಾದ ಆಡಿಯೋ ಮತ್ತು ವೀಡಿಯೋ ಕ್ಯಾಸೆಟ್ಟುಗಳು.	ಶೇಕಡಾ ಹನ್ನೆರಡು
	(ಸಿ) ಕ್ಯಾಸೆಟ್ಟುಗಳ ಭಾಗಗಳು ಮತ್ತು ಪೂರಕ ಸಾಧನಗಳಲು.	ಶೇಕಡಾ ಹನ್ನೆರಡು
	(ಡಿ) ಆಡಿಯೋ ಮತ್ತು ವೀಡಿಯೋ ಮ್ಯಾಗ್ನೆಟಿಕ್ ಟೇಪುಗಳು	ಶೇಕಡಾ ಹನ್ನೆರಡು
	(iii) ಹೆಡ್‌ಕ್ಲೀನರ್‌ಗಳು, (ಎಲ್ಲಾ ರೀತಿಯ) ಆಡಿಯೋ ಕ್ಯಾಸೆಟ್ ಪ್ಲೇಯರುಗಳು ಮತ್ತು ರೆಕಾರ್ಡರುಗಳು ಮತ್ತು ಎಲೆಕ್ಟ್ರಾನಿಕ್ ಸರಕುಗಳಿಗೆ ವಿಶೇಷವಾಗಿ ಬಳಸುವ ಲೂಬ್ರಿಕೆಂಟುಗಳು	ಶೇಕಡಾ ಹನ್ನೆರಡು

1	2	3
5-	*** ***	***
XXX	XXX	XXX
7.	(i) ಸಿಮೆಂಟ್	ಶೇಕಡಾ ಹದಿನೈದು
	(ii) ಸಿಮೆಂಟ್ ಕಾಂಕ್ರೀಟು ಮಿಶ್ರಣ	ಶೇಕಡಾ ಹನ್ನೆರಡು
XXX	XXX	XXX
8ಎ	ಚೀಸ್	ಶೇಕಡಾ ಹನ್ನೆರಡು
9.	ಯಾವುದೇ ಇತರ ಸಮೂದಿನ ಅಡಿಯಲ್ಲಿ ಬಾರದ ಚೈನಾವೇರ್, ಪೋರ್ಸಲಿನ್ ವೇರ್, ಸ್ಟೋನ್‌ವೇರ್.	ಶೇಕಡಾ ಹದಿನೈದು
XXX	XXX	XXX ಶೇಕಡಾ ನಾಲ್ಕು
13.	ಸಿಗರೇಟು ಫಿಲ್ಟರುಗಳು	ಶೇಕಡಾ ಹನ್ನೆರಡು
14.	ಸಿಗಾರ್ ಮತ್ತು ಸಿಗರೇಟು ಕೇಸುಗಳು, ಹೋಲ್ಡರುಗಳು ಮತ್ತು ಲೈಟರುಗಳು, ತಂಬಾಕು ಪೈಪುಗಳು.	ಶೇಕಡಾ ಹದಿನೈದು
15.	ಸಿನಿಮಾಟೋಗ್ರಾಫ್, ಫೋಟೋಗ್ರಾಫ್ ಮತ್ತಿತರ ಕ್ಯಾಮರಗಳು, ಪ್ರೊಜೆಕ್ಟರುಗಳು, ಎನ್‌ಲಾರ್ಜರುಗಳು, ಲೆನ್ಸುಗಳು ಮತ್ತು ಅಂಥ ಕ್ಯಾಮರಾಗಳು, ಸಿನಿಮಾಟೋಗ್ರಾಫ್ ಪ್ರಾಜೆಕ್ಟರುಗಳು ಮತ್ತು ಎನ್‌ಲಾರ್ಜರುಗಳ ಭಾಗಗಳು ಮತ್ತು ಉಪಸಾಧನಗಳು ಮತ್ತು ಅವುಗಳ ಜೊತೆಗೆ ಬಳಕೆಗೆ ಅಗತ್ಯವಿರುವ ಪ್ಲೇಟುಗಳು ಮತ್ತು ಬಟ್ಟೆ.	ಶೇಕಡಾ ಹದಿನೈದು
15-ಎ	ಫೋಟೋ ಫ್ರೇಮುಗಳು ಮತ್ತು ಫೋಟೋ ಮೌಂಟ್‌ಗಳು	ಶೇಕಡಾ ಹನ್ನೆರಡು
16.	ಗಡಿಯಾರ, ಸಣ್ಣ ಗಡಿಯಾರ ಮತ್ತು ಕೈಗಡಿಯಾರಗಳು (ಎಲ್ಲಾ ರೀತಿಯವು) ಮತ್ತು (ಬೆಲೆಯುಳ್ಳ ಲೋಹಗಳಿಂದ ಮಾಡಿರುವುವುಗಳನ್ನು ಹೊರತುಪಡಿಸಿ) ಕೈಗಡಿಯಾರದ ಪಟ್ಟಿಗಳು, ಚೈನುಗಳು ಮತ್ತು ಬ್ರಾ ಸಲೆಟ್‌ಗಳನ್ನು ಒಳಗೊಂಡಂತೆ ಅವುಗಳ ಭಾಗಗಳು.	ಶೇಕಡಾ ಹದಿನೈದು
XXX	XXX	XXX
18.	ಕಾಫಿ ಎಂದರೆ-	
XXX	XXX	XXX
	(iii) ಇನ್‌ಸ್ಟಂಟ್ ಕಾಫಿ	ಶೇಕಡಾ ಹದಿನೈದು
	(iv) ಫ್ರೆಂಚ್ ಕಾಫಿ	ಶೇಕಡಾ ನಾಲ್ಕು
19.	(i) ಕೆಳಕಂಡ (ii)ನೇ ಬಾಬಿನ ಅಡಿಯಲ್ಲಿ ಬಾರದ ನಾರು ಉತ್ಪನ್ನಗಳು (ನಾರಿನ ಹಗ್ಗ, ನಾರಿನ ಎಳೆ ಮತ್ತು ನಾರಿನ ನೂಲು ಬಿಟ್ಟು)	ಶೇಕಡಾ ನಾಲ್ಕು

1	2	3
	(ii) ರಬ್ಬರ್‌ಯುಕ್ತ ನಾರಿನ ಉತ್ಪನ್ನಗಳು	ಶೇಕಡಾ ಹನ್ನೆರಡು
20.	(i) ಎಲ್ಲ ಬಗೆಯ ಕಂಪ್ಯೂಟರುಗಳು ಎಂದರೆ, ಮೈನ್, ಫ್ರೇಂ, ಮಿನಿ, ಪರ್ಸನಲ್, ಮೈಕ್ರೊ ಕಂಪ್ಯೂಟರುಗಳು ಮತ್ತು ಅವುಗಳ ಭಾಗಗಳನ್ನೊಳಗೊಂಡ ಅಂಥವುದೇ ಬಗೆಯವು.	ಶೇಕಡಾ ನಾಲ್ಕು
	(ii) ಪೆರಿಫರಲ್ಸ್, ಎಂದರೆ:-	
	(ಎ) ಎಲ್ಲ ಬಗೆಯ ಪ್ರಿಂಟರುಗಳು ಮತ್ತು ಅವುಗಳ ಭಾಗಗಳು, ಎಂದರೆ, ಡಾಟ್ ಮಾಟ್ರಿಕ್ಸ್, ಇಂಕ್ ಜೆಟ್, ಲೇಸರ್, ಲೈನ್, ಲೈನ್ ಮಾಟ್ರಿಕ್ಸ್ ಮತ್ತು ಅಂತಹುದೇ ಬಗೆಯವು.	ಶೇಕಡಾ ನಾಲ್ಕು
	(ಬಿ) ಟರ್ಮಿನಲ್‌ಗಳು, ಸ್ಕ್ಯಾನರುಗಳು, ಮಲ್ಟಿ ಮೀಡಿಯ ಕಿಟ್‌ಗಳು, ಪ್ಲಾಟರುಗಳು, ಮಾಡೆಂ ಮತ್ತು ಅವುಗಳ ಭಾಗಗಳು.	ಶೇಕಡಾ ನಾಲ್ಕು
	(iii) ಕಂಪ್ಯೂಟರ್ ಕಂಜೂಮಬಲ್‌ಗಳು ಎಂದರೆ, ಸ್ಟೇಷನರಿ, ಫ್ಲಾಪಿ ಡಿಸ್ಕ್‌ಗಳು, ಸಿ.ಡಿ. ರೋಂಗಳು, ಡಾಟ್ ಟೇಪುಗಳು, ಪ್ರಿಂಟರ್ ರಿಬ್ಬನ್‌ಗಳು, ಪ್ರಿಂಟರ್ ಕಾರ್ಟ್ರಿಜ್‌ಗಳು ಮತ್ತು ಕಾರ್ಟ್ರಿಜ್ ಟೇಪುಗಳು	ಶೇಕಡಾ ನಾಲ್ಕು
	(IV) ಕಂಪ್ಯೂಟರ್ ಕ್ಲೀನಿಂಗ್ ಕಿಟ್	ಶೇಕಡಾ ನಾಲ್ಕು
	(V) ಕಂಪ್ಯೂಟರ್ ಸಾಫ್ಟ್‌ವೇರ್	ಶೇಕಡಾ ನಾಲ್ಕು
21.	(i) ತಿಂಡಿನಿತಿಸುಗಳು,	ಶೇಕಡಾ ಹದಿನೈದು
	(ii) ಕೇಕುಗಳು ಮತ್ತು ಬಿಸ್ಕೇಟುಗಳು	ಶೇಕಡಾ ಹದಿನೈದು
XXX	XXX	XXX
23.	ತಾಮ್ರ ಎಂದರೆ:-	
	(i) ತಾಮ್ರದ ಉಂಡೆಗಳು, ಶೀಟುಗಳು ಮತ್ತು ಪಟ್ಟಿಗಳು	ಶೇಕಡಾ ಹನ್ನೆರಡು
	(ii) ತಾಮ್ರದ ಪಾತ್ರೆಗಳು (ಅಡಿಗೆ ಸಲಕರಣೆ)	ಶೇಕಡಾ ಎಂಟು
	(iii) ತಾಮ್ರದ ಗಟ್ಟಿಗಳು ಮತ್ತು ಇನ್ಸುಲೇಟೆಡ್ ತಂತಿ ಬಿಟ್ಟು ತಾಮ್ರದ ತಂತಿ	ಶೇಕಡಾ ನಾಲ್ಕು
	(iv) ಮೇಲಿನ (i) ರಿಂದ (iii)ನೇ ಬಾಬುಗಳಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಮತ್ತು ಬೇರೆ ಕಡೆ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು ತಾಮ್ರದ ಸಲಾಕಿಗಳು, ಗುಂಡುಗಳು, ಚೌಕುಗಳು ಮತ್ತು ಚಪ್ಪಟೆಗಳು ಸೇರಿ ತಾಮ್ರದ ವಸ್ತುಗಳು.	ಶೇಕಡಾ ಹನ್ನೆರಡು

1	2	3
24.	***	***
25.	ಅನುಪಯುಕ್ತ ಹತ್ತಿ	ಶೇಕಡಾ ನಾಲ್ಕು
25-ಎ	ಅನುಪಯುಕ್ತ ಹತ್ತಿ ನೂಲು	ಶೇಕಡಾ ನಾಲ್ಕು
25.ಬಿ	ಹತ್ತು ಹಾಸಿಗೆಗಳು, ಹತ್ತಿ ದಿಂಬುಗಳು, ಹತ್ತಿ ಕ್ವಿಲ್ಟ್‌ಗಳು, ಮತ್ತು ಹತ್ತಿ ಬಟ್ಟೆಯಿಂದ ತಯಾರಿಸಿದ ಕವರುಗಳು.	ಶೇಕಡಾ ನಾಲ್ಕು
26.	(i) ಕ್ರಾಕರಿ	ಶೇಕಡಾ ಹದಿನೈದು
	(ii) ಕಟ್ಲರಿ ಮತ್ತು ಟೇಬಲ್ ಮತ್ತು ಗೃಹೋಪಯೋಗಿ ಗಾಜಿನ ಪಾತ್ರೆಗಳು.	ಶೇಕಡಾ ಹದಿನೈದು

ಭಾಗ-ಡಿ

1.	ಯಾವುದೇ ಇತರ ನಮೂದಿನ ಅಡಿಯಲ್ಲಿ ಬಾರದ ದುರ್ಗಂಧ ನಿವಾರಕಗಳು, ಸೋಂಕು ನಿವಾರಕಗಳು, ಜೀವಾಣು ನಾಶಕಗಳು.	ಶೇಕಡಾ ಹನ್ನೆರಡು
2.	ಡಿಕ್ಟಾ ಫೋನುಗಳು ಮತ್ತು ಧ್ವನಿ ಮುದ್ರಣದ ಅಂಥ ಇತರ ಉಪಕರಣಗಳು ಮತ್ತು ಅದರ ಭಾಗಗಳು.	ಶೇಕಡಾ ಹನ್ನೆರಡು
3.	ಡೀಸಲ್ ಎಂಜಿನ್ನುಗಳು ಮತ್ತು ಅದರ ಭಾಗಗಳು ಮತ್ತು ಬಿಡಿ ಭಾಗಗಳು.	ಶೇಕಡಾ ಹನ್ನೆರಡು
4.	ಡ್ರೈಸೆಲ್ಲುಗಳು ಮತ್ತು ಡ್ರೈಸೆಲ್ ಬ್ಯಾಟರಿಗಳು	ಶೇಕಡಾ ಹದಿನೈದು
5.	*** ***	***
6.	ಉಣ್ಣೆ ಹಾಸುಗಂಬಳಿ ಮತ್ತು ಜಮಖಾನೆಗಳು, ದರಿಗಳು	ಶೇಕಡಾ ಹನ್ನೆರಡು
7.	*** ***	***

ಭಾಗ-ಇ

1.	ಬ್ರ್ಯಾಂಡ್ ಹೆಸರಿನ ಅಡಿಯಲ್ಲಿ ಮಾರಾಟ ಮಾಡಲಾದ ಕೊಬ್ಬರಿ ಎಣ್ಣೆ ಮತ್ತು ಐದನೇ ಅನುಸೂಚಿಯ 42ಎ ಕ್ರಮಸಂಖ್ಯೆ ಅಡಿಯಲ್ಲಿ ಬಾರದ ಖಾದ್ಯ ತೈಲಗಳು	
	(i) ಸಂಸ್ಕರಿಸಿಲ್ಲದ	ಶೇಕಡಾ ನಾಲ್ಕು
	(ii) ಸಂಸ್ಕರಿಸಿದ	ಶೇಕಡಾ ನಾಲ್ಕು
	(iii) ಹೈಡ್ರೋಜನ್ ಯುಕ್ತ ತೈಲ ಮತ್ತು ಎಣ್ಣೆ	ಶೇಕಡಾ ನಾಲ್ಕು
2.	ಎಲೆಕ್ಟ್ರಿಕಲ್ ವಸ್ತುಗಳು, ಎಂದರೆ-	
	(i) ಗ್ರೈಂಡರುಗಳು, ಮಿಕ್ಸರುಗಳು, ಬ್ಲೆಂಡರುಗಳು, ಹೇರ್ ಡ್ರೈಯರ್‌ಗಳು, ಷೇವರ್‌ಗಳು, ವಾಷಿಂಗ್ ಮಿಷಿನ್‌ಗಳು, ಹೀಟರ್‌ಗಳು, ಕುಕಿಂಗ್ ರೇಂಜ್‌ಗಳು, ಬಾಯ್ಲರ್‌ಗಳು, ಓವನುಗಳು, ಹಾಟ್ ಪ್ಲೇಟ್‌ಗಳು,	ಶೇಕಡಾ ಹದಿನೈದು

1	2	3
	ಕಾಯಿಲ್ ಸ್ಟೋವ್‌ಗಳು, ಗೀಸರ್‌ಗಳು, ವಾಕ್ಯೂಮ್ ಕ್ಲೀನರ್‌ಗಳು, ಫ್ಲೋರ್ ಪಾಲಿಷರಿಗಳು, ಜ್ಯೂಸ್ ಎಕ್ಸ್‌ಟ್ರಾಕ್ಟರ್‌ಗಳು, ಕ್ರೀಮಿ ವಿಪ್ಪರ್‌ಗಳು, ಎಗ್‌ಬೀಟರ್‌ಗಳು, ಐರನ್ ಬಾಕ್ಸ್‌ಗಳು, ಮಸಾಜ್ ಅಪರೇಟಸ್‌ಗಳು, ಕೆಟಲ್‌ಗಳು, ಸಾಸಪ್ಯಾನ್‌ಗಳು, ಸ್ಟೀಮರ್‌ಗಳು, ಕಾಫಿ ಮೇಕರ್‌ಗಳು, ಕುಕ್ಕರ್‌ಗಳು, ಎಗ್‌ಬಾಯ್ಲರ್‌ಗಳು, ಫ್ರೈಯಿಂಗ್ ಪ್ಯಾನ್‌ಗಳು, ಟೋಸ್ಟರ್‌ಗಳು, ಕಾಫಿ ಬೀಜ ಹುರಿಯುವ ಯಂತ್ರಗಳು, ರೂಮ್ ಹೀಟರ್‌ಗಳು ಮತ್ತು ಐಸ್‌ಕ್ರೀಮ್ ಚರ್ನರ್‌ಗಳು ಮತ್ತು ಅಂಥ ವಸ್ತುಗಳ ಭಾಗಗಳ ಮತ್ತು ಉಪ-ಸಾಧನಗಳು.	
	(ii) ಎಲೆಕ್ಟ್ರಿಕಲ್ ಅರ್ತನ್‌ವೇರ್ ಮತ್ತು ಪೋರ್ಸಲೀನ್	ಶೇಕಡಾ ಹನ್ನೆರಡು
	(iii) ಎಲೆಕ್ಟ್ರಿಕಲ್ ವಸ್ತುಗಳು, ಸಾಧನಗಳು, ಉಪಕರಣಗಳು ಮತ್ತು ಉಪ ಸಾಮಾಗ್ರಿಗಳು ಮೇಲಿನ (i)ನೇ ಬಾಬಿನ ಅಡಿಯಲ್ಲಿ ಬರುವ ಉಪ ಸಾಮಗ್ರಿಗಳಿಗೆ ಹೊರತಾದ) ಆದರೆ ಫ್ಯಾನುಗಳು, ಮತ್ತು ಟ್ಯೂಬ್ ಲೈಟ್‌ಗಳು ಮತ್ತು ಭಾಗಗಳು ಮತ್ತು ಉಪ ಸಾಧನಗಳನ್ನು ಒಳಗೊಂಡಂತೆ	ಶೇಕಡಾ ಹನ್ನೆರಡು
	(iv) ಎಲೆಕ್ಟ್ರಿಕ್ ಬಲ್ಬುಗಳು	ಶೇಕಡಾ ಹನ್ನೆರಡು
	(v) ವಾಷಿಂಗ್ ಮೆಷಿನ್‌ಗಳು ವ್ಯಾಕ್ಯೂಮ್ ಕ್ಲೀನರ್‌ಗಳು ಏರ್ ಸರ್ಕ್ಯುಲೇಟರ್‌ಗಳು ಮತ್ತು ವೋಲ್ಟೇಜ್ ಸ್ಟೆಬಿಲೈಸರ್‌ಗಳು	ಶೇಕಡಾ ಹದಿನೈದು
	(vi) ಟ್ರಾನ್ಸ್‌ಫಾರ್ಮರುಗಳು, ಟ್ರಾನ್ಸ್ ಮಿಷನ್ ವೈರ್‌ಗಳು ಮತ್ತು ಟವರ್‌ಗಳು ಎ.ಸಿ.ಎಸ್.ಆರ್. ಕಂಡಕ್ಟರುಗಳು ಮತ್ತು ಕೇಬಲ್‌ಗಳು	ಶೇಕಡಾ ಹದಿನೈದು
3.	ಎಲೆಕ್ಟ್ರೋಡುಗಳು ಎಂದರೆ ಎಲ್ಲಾ ಬಗೆಯ ವೆಲ್ಡಿಂಗ್ ಎಲೆಕ್ಟ್ರೋಡುಗಳು, ಗ್ರಾಫೈಟ್ ಎಲೆಕ್ಟ್ರೋಡುಗಳು, ಅನೋಡಗಳು, ವೆಲ್ಡಿಂಗ್ ರಾಡ್‌ಗಳು, ಸಾಲ್ಡರಿಂಗ್ ರಾಡ್‌ಗಳು ಮತ್ತು ಸಾಲ್ಡರಿಂಗ್ ವೈರುಗಳು ಸೇರಿ	ಶೇಕಡಾ ಹನ್ನೆರಡು
4.	ಈ ಅನುಸೂಚಿಯ ಯಾವುದೇ ಇತರ ನಮೂದಿನ ಅಡಿಯಲ್ಲಿ ಬರುವ ವಸ್ತುಗಳನ್ನು ಬಿಟ್ಟು ಎಲೆಕ್ಟ್ರಾನಿಕ್ ವಸ್ತುಗಳು ಇರುವುದನ್ನು ಹೊರತುಪಡಿಸಿ ಮತ್ತು ಅವುಗಳ ಭಾಗಗಳು ಮತ್ತು ಬಿಡಿ ಭಾಗಗಳು.	ಶೇಕಡಾ ಹತ್ತು

XXX XXX XXX

1	2	3
	ಭಾಗ-ಎಫ್	
1.	ಫೈಬರ್ ಗ್ಲಾಸಿನ ಸೀಟುಗಳು ಮತ್ತು ಹೆಲ್‌ಮೆಟ್‌ಗಳನ್ನು ಬಿಟ್ಟು ಫೈಬರ್ ಗ್ಲಾಸಿನ ವಸ್ತುಗಳು.	ಶೇಕಡಾ ಹನ್ನೆರಡು
2.	ಫಿಲ್ಮ್‌ಗಳು, ಎಂದರೆ:-	
	(i) ಫೋಟೋಗ್ರಾಫಿಕ್ ಪೇಪರ್ ಸೇರಿ ಫೋಟೋ ಗ್ರಾಫಿಕ್ ಫಿಲ್ಮ್‌ಗಳು	ಶೇಕಡಾ ಎಂಟು
	(ii) ಸಿನಿಮಾಟೋಗ್ರಾಫಿಕ್ ಫಿಲ್ಮ್‌ಗಳು	ಶೇಕಡಾ ಎಂಟು
	(iii) ಎಕ್ಸ್‌ರೇ ಫಿಲ್ಮ್‌ಗಳು	ಶೇಕಡಾ ಎಂಟು
3.	ಬೇರೆಡೆ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು ಅಗ್ನಿಶಾಮಕ ಉಪಕರಣಗಳು ಮತ್ತು ಸಾಧನಗಳು	ಶೇಕಡಾ ಹನ್ನೆರಡು
XXX	XXX	XXX
5.	ಪಟಾಕಿ ವಸ್ತುಗಳು	ಶೇಕಡಾ ಹದಿನೈದು
5.ಎ	***	***
6.	ಫೋಮ್ ರಬ್ಬರ್, ಪ್ಲಾಸ್ಟಿಕ್ ಫೋಮ್ ಅಥವಾ ಯಾವುದೇ ಇತರ ಸಿಂಥಟಿಕ್ ಫೋಮ್ ವಸ್ತುಗಳು ಅಂದರೆ ಶೀಟುಗಳು, ಕುಷನ್‌ಗಳು ಪಿಲ್ಲೋಗಳು ಮ್ಯಾಟ್ರಸ್ ಮುಂತಾದವು.	ಶೇಕಡಾ ಹದಿನೈದು
7.	(i) ತೋಟಗಳಲ್ಲಿ ಹಾಗೂ ಸಮುದ್ರ ದಂಡೆಯಲ್ಲಿ ಬಳಸುವ ಕೊಡೆಗಳು ಮತ್ತು ಅವುಗಳ ಭಾಗಗಳು.	ಶೇಕಡಾ ಹನ್ನೆರಡು
XXX	XXX	XX
8.	ಆಹಾರ ಮತ್ತು ಮದ್ಯಸಾರೇತರ ಪಾನೀಯಗಳು, ಎಂದರೆ:-	
	(i) ಸೇವನೆಗೆ ಸಿದ್ಧವಾದ ಆಹಾರ, ಸಂಸ್ಕರಿತ ಆಹಾರ, ಅರೆಬೆಂದ ಅಥವಾ ಅರೆ ಸಂಸ್ಕರಿತ ಆಹಾರ ಪದಾರ್ಥಗಳು, ಹಣ್ಣುಗಳು, (ಬಾದಾಮಿ, ವಾಲ್‌ನಟ್‌ಗಳು ಮತ್ತು ಪಿಸ್ತಾಸೇರಿ, ಆದರೆ ಒಣ ಹಣ್ಣುಗಳನ್ನು ಬಿಟ್ಟು) ಒಣಗಿಸಿದ ತರಕಾರಿಗಳು (ಬೇಯಿಸಿದ ಅಥವಾ ಬೇಯಿಸಿಲ್ಲದ), ಹಣ್ಣುಗಳು ಮತ್ತು ತರಕಾರಿ ಉತ್ಪನ್ನಗಳು (ಕೆಳಗಿನ (ii) (iii) ಮತ್ತು (iv)ನೇ ಬಾಬುಗಳ ಅಡಿಯಲ್ಲಿ ಬರುವ ಉತ್ಪನ್ನಗಳನ್ನು ಬಿಟ್ಟು) ಡಬ್ಬಿ. ಕ್ಯಾನುಗಳು, ಶೀಸೆಗಳು ಅಥವಾ ಯಾವುದೇ ಇತರ ರೀತಿಯ ಮೊಹರಾದ ಧಾರಕಗಳಲ್ಲಿ ಮಾರುವಾಗ	ಶೇಕಡಾ ಹದಿನೈದು

(ii)	ಹಾಲಿನ ಪುಡಿ ಸೇರಿ ಶಿಶು ಆಹಾರ (ಮೊಹರು ಮಾಡಿದ ಧಾರಕಗಳಲ್ಲಿ ಅಥವಾ ಇತರ ರೀತಿಯಲ್ಲಿ ಮಾರಾಟ ಮಾಡುವಂತಹುದು)	ಶೇಕಡಾ ಹದಿನೈದು
(iii)	ರುಚಿಗೊಳಿಸಿದ ಅಥವಾ ಸಿಹಿಗೊಳಿಸಿದ ಅಥವಾ ಇಲ್ಲದ ಮತ್ತು ತರಕಾರಿ ಅಥವಾ ಹಣ್ಣಿನ ರಸ ಅಥವಾ ಹಣ್ಣಿನ ತಿರುಳು ಒಳಗೊಂಡಿರುವ ಅಥವಾ ಒಳಗೊಂಡಿರದ ಆದರೆ ಸೌಮ್ಯ ಪಾನೀಯಗಳನ್ನು ಹೊರತು ಪಡಿಸಿ	ಶೇಕಡಾ ಹದಿನೈದು
	ಇಂಗಾಲಾಮ್ಲ ಮಿಶ್ರಿತ ನೀರನ್ನು ಶೀಸೆಗಳಲ್ಲಿ ಟಿನ್‌ಗಳಲ್ಲಿ ಅಥವಾ ಯಾವುದೇ ರೀತಿಯ ಮೊಹರು ಮಾಡಿದ ಧಾರಕಗಳಲ್ಲಿ ಮಾರಾಟ ಮಾಡಿದಾಗ.	ಶೇಕಡಾ ಹನ್ನೆರಡು
(iv)	ಇನ್‌ಸ್ಟೆಂಟ್‌ಮಿಕ್ಸ್, ಎಂದರೆ, ಜಾಮೂನ್ ಮಿಕ್ಸ್, ಇಡ್ಲಿ ಮಿಕ್ಸ್, ಐಸ್‌ಕ್ರೀಮಿ ಮಿಕ್ಸ್, ಜೆಲ್ಲಿ ಮಿಕ್ಸ್ ಮುಂತಾದುವು, ಸಾಂಬಾರ್ ಮತ್ತು ರಸಮ್ ಪುಡಿ ಮತ್ತು ಗೊಜ್ಜು, ಮಸಾಲೆ ಪುಡಿ ಮತ್ತು ಗೊಜ್ಜು, ಸಾರಿನ ಪುಡಿ ಮತ್ತು ಗೊಜ್ಜು ಮುಂತಾದುವು, ದ್ರವ ಅಥವಾ ಆ ಪುಡಿ ಅಥವಾ ಹರಳಿನ ರೂಪದಲ್ಲಿರುವಂಥ ಸೌಮ್ಯ ಪಾನೀಯಗಳು (ಹಣ್ಣು ಮತ್ತು ತರಕಾರಿ ಪಾನೀಯಗಳನ್ನು ಹೊರತುಪಡಿಸಿ)	
(v)	ಸಿಹಿ ತಿಂಡಿಗಳು ಮತ್ತು ಸಿಹಿ ಮಿಠಾಯಿಗಳೂ ಸೇರಿ ಆದರ ಮೇಲಿನ (i) ರಿಂದ (iv)ನೇ ಬಾಬುಗಳಲ್ಲಿ ಬರುವ ಮತ್ತು ಈ ಅನುಸೂಚಿಯಲ್ಲಿ ಯಾವುದೇ ನಮೂದಿನಲ್ಲಿ ಬರುವಂತಹವುಗಳನ್ನು ಹೊರತುಪಡಿಸಿ ಆಹಾರ ಪದಾರ್ಥಗಳು ಮತ್ತು ಪಾನೀಯಗಳು ಕೆಳಕಂಡಲ್ಲಿ ಮಾರಾಟ ಮಾಡಿದಾಗ	
(ಎ)	ಕೆಳಗಿನ (ಬಿ) ಉಪ ಬಾಬಿನಲ್ಲಿ ಬರುವ ಸ್ಥಳಗಳನ್ನು ಹೊರತುಪಡಿಸಿ ಇತರ ಸ್ಥಳಗಳು	ಶೇಕಡಾ ಹನ್ನೆರಡು
XXX	XXX	XXX
(vi)	ಸೋಯಮಿಲ್ಕ್	
(vii)	ಸೀಲು ಮಾಡಿದ ಧಾರಗಳಲ್ಲಿ ಮಾರಾಟ ಮಾಡುವ ಮಾಂಸ ಮತ್ತು ಶುಚಿಗೊಳಿಸಿದ ಕೋಳಿ ಮಾಂಸ	ಶೇಕಡಾ ಹನ್ನೆರಡು
9.	ಆಹಾರ ಸಂರಕ್ಷಾ ವಸ್ತುಗಳು, ಅಡಿಗೆ ಬಣ್ಣಗಳು ಮತ್ತು ಆಹಾರ ಸುವಾಸನೆಗೊಳಿಸುವ ಎಸೆನ್ಸುಗಳು	ಶೇಕಡಾ ಎಂಟು

10.	ಪಾದರಕ್ಷೆಗಳು	ಶೇಕಡಾ ಹನ್ನೆರಡು
	XXX XXX XXX	
11.	ಪಾದರಕ್ಷೆ ಪಾಲೀಷ್‌ಗಳು, ಷೂ ಕೇರ್ ಕಿಟ್, ಷೂ ಲೇಸ್‌ಗಳು.	ಶೇಕಡಾ ಹನ್ನೆರಡು
11-ಎ	ಕುಲುಮೆ ಎಣ್ಣೆ, ಟ್ರಾನ್ಸ್‌ಫಾರ್ಮರ್ ಆಯಿಲ್ ಮತ್ತು ಕೂಲೆಂಟ್ಸ್	ಶೇಕಡಾ ಹನ್ನೆರಡು
12.	(i) ಎಲ್ಲಾ ಬಗೆಯ ಪೀಠೋಪಕರಣಗಳು (ಸ್ಟೀಲ್ ಪೀಠೋಪಕರಣಗಳು ಮತ್ತು ಮೌಲ್ಡ್ ಮಾಡಿದ ಪೀಠೋಪಕರಣಗಳನ್ನು ಹೊರತುಪಡಿಸಿ) ಮತ್ತು ನಿರುಪಯುಕ್ತ ಟ್ರೆಜರ್ ಚೆಸ್ಟುಗಳು, ಸೇಫ್‌ಗಳು ಮತ್ತು ಅವುಗಳ ಭಾಗಗಳು ಮತ್ತು ಜೋಡಣೆಗಳು ಸೇರಿದಂತೆ ಯಾವುದೇ ವಸ್ತುವಿನಿಂದ ಮಾಡಿದ ಎಲ್ಲಾ ಬಗೆಯ ಎಲ್ಲಾ ವಿವರಗಳ ಪೀಠೋಪಕರಣಗಳು	ಶೇಕಡಾ ಹದಿನೈದು ಶೇಕಡಾ ಹದಿನೈದು ಶೇಕಡಾ ಹದಿನೈದು
	(ii) ಸ್ಟೀಲ್ ಪೀಠೋಪಕರಣಗಳು ಮತ್ತು ಮೌಲ್ಡ್ ಮಾಡಿದ ಪೀಠೋಪಕರಣಗಳು	ಶೇಕಡಾ ಹದಿನೈದು
13.	ತುಪ್ಪಳ ಮತ್ತು ತೊಗಲುಗಳು (ನಾಲ್ಕನೇ ಅನುಸೂಚಿಯಲ್ಲಿ ಬರುವುವುಗಳನ್ನು ಹೊರತುಪಡಿಸಿ) ಮತ್ತು ಅವುಗಳಿಂದ ತಯಾರಿಸಿದ ವಸ್ತುಗಳು ಆದರೆ, ಯಾವುದೇ ಇತರ ನಮೂದಿನಲ್ಲಿ ಬರುವುವುಗಳನ್ನು ಹೊರತುಪಡಿಸಿ	ಶೇಕಡಾ ಹನ್ನೆರಡು
14.	ಫ್ಯಾಕ್ಸ್ ಯಂತ್ರಗಳು ಮತ್ತು ಅವುಗಳ ಭಾಗಗಳು ಮತ್ತು ಜೋಡಣೆಗಳು.	

ಭಾಗ-ಜಿ

1.	ಗಾಲ್ವನೈಜ್ಡ್ ಕಬ್ಬಿಣದ ಬಕೆಟ್‌ಗಳು	ಶೇಕಡಾ ಎಂಟು
2.	ಗಾಜಿನ ಸೀಸೆಗಳು, ಟೇಬಲ್ ಮತ್ತು ಗಾಜಿನ ಗೃಹ ಬಳಕೆಯ ವಸ್ತುಗಳು ಗ್ಲಾಸ್‌ಮಿರರ್‌ನ್ನು ಹೊರತುಪಡಿಸಿ, ಗಾಜಿನ ಸೆಟ್‌ಗಳು ಮತ್ತು ಎಲ್ಲಾ ವಸ್ತುಗಳು	ಶೇಕಡಾ ಹದಿನೈದು
3.	ಗ್ಲಿಸರಿನ್	
4.	ಚಿನ್ನದ ದಾರ ಎಂದರೆ, ಲೋಹದ ಎಳೆ, ಲೋಹದ ಜರಿ ಎಳೆ, ಲೋಹದ ಪ್ಲಾಸ್ಟಿಕ್ ಎಳೆ, ಪಾಲಿಯಸ್ಟರ್ ಫಿಲ್ಮ್ ಎಳೆ ಮತ್ತು ಹೊಳೆಯುವ ಎಳೆಗಳು ಸೇರಿ ಎಲ್ಲ ಬಗೆಯ ಜರಿ.	ಶೇಕಡಾ ಎಂಟು ಶೇಕಡಾ ನಾಲ್ಕು

4-ಎ. ಗೋಟ್ಟ ಮತ್ತು ನಕ್ಕಿ — ಶೇಕಡಾ ನಾಲ್ಕು

5. ರೇಡಿಯೋ ಗ್ರಾಮಾಫೋನ್‌ಗಳು ಮತ್ತು ಅವುಗಳ ಭಾಗಗಳು ಮತ್ತು ಜೋಡಣೆಗಳು ಸೇರಿದಂತೆ ಪ್ರತಿಯೊಂದು ವಿವರಣೆಯ ಗ್ರಾಮಾಫೋನ್‌ಗಳು. — ಶೇಕಡಾ ಹನ್ನೆರಡು

6. ಗ್ರಾಮಾಫೋನ್ ನೀಡ್ಲ್‌ಗಳು ಸೇರಿದಂತೆ ಗ್ರಾಮಾ ಫೋನ್ ರೆಕಾರ್ಡ್‌ಗಳು, ಕಾಂಪ್ಯಾಕ್ಟ್ ಡಿಸ್ಕ್‌ಗಳು — ಶೇಕಡಾ ಹನ್ನೆರಡು

XXX XXX XXX

ಭಾಗ-ಹೆಚ್

1. ಹಾರ್ಡ್‌ವೇರ್ ಎಂದರೆ:-

(i) ಲೋಹದಿಂದ ಅಥವಾ ಅವುಗಳ ಮಿಶ್ರಲೋಹದಿಂದ ಮಾಡಿದ ಬೋಲ್ಟ್‌ಗಳು ಬೋಲ್ಟ್ ಎಂಡ್‌ಗಳು, ರಿವೆಟ್‌ಗಳು, ನಟ್‌ಗಳು, ಹಿಂಜಸ್ಸ್‌ಗಳು, ಸ್ಕ್ರೂಗಳು, ಸ್ಕ್ರೂ ಹುಕ್ಕುಗಳು ಸ್ಕ್ರೂರಿಂಗ್‌ಗಳು, ಸ್ಕ್ರೂ ಸ್ಟೆಂಹಿಂಗ್‌ಗಳು, ಸೆಲ್ಸ್ ಟ್ಯಾಪ್ ಸ್ಕ್ರೂಗಳು, ಡೋರ್ ಕ್ಲೋಸರ್‌ಗಳು, ವೀಲ್‌ಗಳು, ಬ್ಲಾಕ್‌ಗಳು, ಕ್ಲಾಂಪ್‌ಗಳು, ಗನಮೆಟಲ್ ಜೋಡಣೆಗಳು, ಕರ್ಟನ್ ರಾಡ್‌ಗಳು, ವೆನೆಷಿಯನ್ ಬ್ಲೇಂಡುಗಳು, ವರ್ಟಿಕಲ್ ಬ್ಲೆಂಡುಗಳು ಎಮರಿಬಟ್ಟೆ, ಎಮರಿಪೇಸ್ಟ್, ಎಮರಿಪೌಡರ್, ಕೋಟೆಡ್ ಅಬ್ರೆಸಿವ್‌ಗಳು, ರುಬ್ಬುವ ಕಲ್ಲುಗಳು, ಎಲ್ಲ ಬಗೆಯ ಬೀಗಗಳು ಮತ್ತು ಪ್ಯಾಡ್ಸ್ ಲಾಕ್‌ಗಳು, ವಾಷರ್‌ಗಳು, ಸ್ಪ್ರಿಂಗ್‌ಗಳು, ಸ್ಪ್ರಿಂಗ್ ವಾಷರ್‌ಗಳು, ಪ್ಯಾನಲ್ ಪಿನ್‌ಗಳು. ಗ್ಲಾಸ್ ಉಲ್, ಸ್ಟೀಲ್ ಉಲ್ ದರ್ಶಕಗಳು, ಮೊಳೆಗಳು, ತಂತಿಮೊಳೆಗಳು — ಶೇಕಡಾ ಹನ್ನೆರಡು

(ii) ಬೇರೆಡೆಯಲ್ಲಿ ನಿರ್ದಿಷ್ಟಪಡಿಸಿಲ್ಲದ ಇತರ ಬೇಸ್ ಮೆಟಲ್ ಅಥವಾ ಅದರ ಮಿಶ್ರಲೋಹಗಳಿಂದ ಮಾಡಿದ ಬಾಗಿಲು, ಕಿಟಕಿಗಳ ಜೋಡಣೆಗಳು, ಪೀಠೋಪಕರಣಗಳು. — ಶೇಕಡಾ ಹನ್ನೆರಡು

(iii) ಲೋಹದ ಮುಳ್ಳುತಂತಿ, ಲೋಹದ ತಂತಿಯ ಮೆಷಗಳು, ಲೋಹದ ತಂತಿ ನೆಟ್ಟಿಂಗ್‌ಗಳು — ಶೇಕಡಾ ಹನ್ನೆರಡು

(iv) ಪೇಂಟ್ ಬ್ರೆಶ್‌ಗಳು — ಶೇಕಡಾ ಹನ್ನೆರಡು

1.ಎ	ಕರಕುಶಲ ವಸ್ತುಗಳು ಎಂದರೆ ಹಿತ್ತಾಳೆ, ಕಂಚು, ತಾಮ್ರ, ಮತ್ತು ಇನ್ನಿತರ ಲೋಹಗಳಿಂದ ಮಾಡಿದ ವಸ್ತುಗಳು, ಬಿದರಿ ಕಲಾತ್ಮಕ ವಸ್ತುಗಳು, ಕೈಯಿಂದ ಮಾಡಿದ ಪಾಟರಿ ವಸ್ತುಗಳು, ಕಲ್ಲು ಅಮೃತ ಶಿಲೆ, ಮರದ ಕೆತ್ತನೆ ವಸ್ತುಗಳು, ಕೈಯಿಂದ ಮಾಡಿದ ಲ್ಯಾಂಪ್‌ಗಳು, ಕಲಾಕೃತಿಗಳು, ಡೋಕ್ರಾ ವಸ್ತುಗಳು, ತೆಂಗಿನ ಚಿಪ್ಪಿನ ವಸ್ತುಗಳು, ಶಂಖ ಮತ್ತು ಚಿಪ್ಪಿನ ವಸ್ತುಗಳು, ತಾಳೆಯ ಎಲೆಯ ವಸ್ತುಗಳು, ಪೆಷಾಯರ್ ಮೆಸ್ ವಸ್ತುಗಳು, ಸ್ಕ್ರೂ ಪೈನ್ ವಸ್ತುಗಳು, ಸ್ಟ್ರಾ ವಸ್ತುಗಳು, ಮರದ ಕೆತ್ತನೆಗಳು ಮತ್ತು ಮರದ ಮೂರ್ತಿಗಳು ಮತ್ತು ಮರದಿಂದ ತಯಾರಿಸಿದ ದೇಶೀಯ ವಸ್ತುಗಳು	ಶೇಕಡಾ ಹನ್ನೆರಡು
2.	ಹೆಲ್ಮೆಟ್‌ಗಳು	ಶೇಕಡಾ ಎಂಟು
3.	ಎಲ್ಲಾ ಬಗೆಯ ಹೊಸ್ಯೆರಿಗಳು (ಉದ್ದನೆಯ ಹೊಸ್ಯೆರಿ ಬಟ್ಟೆಗಳನ್ನು ಹೊರತುಪಡಿಸಿ)	ಶೇಕಡಾ ನಾಲ್ಕು

XXX XXX XXX

ಭಾಗ-ಐ

1.	ಐಸ್, ಐಸ್ ಫ್ರೂಟ್, ಐಸ್‌ಕ್ಯಾಂಡಿಗಳು ಮತ್ತು ಎಲ್ಲಾ ಬಗೆಯ ಐಸ್ ಕ್ರೀಮುಗಳು.	ಶೇಕಡಾ ಹದಿನೈದು
2.	*** ***	***
3	ಕೈಗಾರಿಕಾ ಗ್ಯಾಸ್ ಎಂದರೆ, ಆಮ್ಲಜನಕ, ಅಸಿಟಿಲಿನ್, ನೈಟ್ರೋಜನ್ ಮುಂತಾದವು	ಶೇಕಡಾ ಹದಿನೈದು
4.	ಎಲ್ಲಾ ಬಗೆಯ ಇಂಕ್‌ಗಳು	ಶೇಕಡಾ ಹನ್ನೆರಡು

XXX XXX XXX

6.	(i) ದಂತ ಮತ್ತು ಶ್ರೀಗಂಧದ ವಸ್ತುಗಳು	ಶೇಕಡಾ ಹದಿನೈದು
	(ii) ಬಾಗಿಲು ಚೌಕಟ್ಟುಗಳು, ಕಿಟಿಕಿ ಚೌಕಟ್ಟುಗಳು, ಷಟ್ಟರ್‌ಗಳು ಮತ್ತು ಪೀಠೋಪಕರಣಗಳನ್ನು ಹೊರತುಪಡಿಸಿ ರೋಜ್ ವುಡ್ ವಸ್ತುಗಳು	ಶೇಕಡಾ ಹದಿನೈದು

ಭಾಗ-ಜೆ

XXX XXX XXX

2.	ಚಿನ್ನ ಮತ್ತು ಬೆಳ್ಳಿಯ ವಸ್ತುಗಳು ಸೇರಿದಂತೆ ಅಮೂಲ್ಯ ಹರಳುಗಳಿರುವ ಅಥವಾ ಇಲ್ಲದಿರುವ ಒಡವೆಗಳು	ಶೇಕಡಾ ಎರಡು
3.	ಸೆಣಬು ಮತ್ತು ಪೊಲಿಪ್ರೊಪ್ಲೇನ್ ಕವರುಗಳು	ಶೇಕಡಾ ಹನ್ನೆರಡು

ಭಾಗ-ಕೆ

1. ಸೀಮೆಎಣ್ಣೆ — ಶೇಕಡಾ ಹದಿನೈದು

1.ಎ ದಿನಸಿ ಪದಾರ್ಥಗಳೆಂದರೆ:

(i) ಮೆಂತ್ಯ, ಗಸಗಸೆ, ದನಿಯಾ, ಶಾಜೀರಿಗೆ, ಸೋಂಪು, ಕಾಚು (ಕತ್ತಾ), ಅಜಿವಾನ, ಕೇಸರಿ, ಕಬಾಬ್ ಚೀನಿ, ಭೋಜುರ್ ಪೂಲ್, ತೇಜಪತಾ, ಜಾಪತ್ರೆ, ಮರಾಠಮೊಗ್ಗು, ಕಲ್ಲುಹೂ, ಖಜೂರ್ರ, ಉತ್ತತ್ತಿ, ಸಾಯಿಗೊ ಖರ್ಬೂಜ್ ಬೀಜಗಳು, ಹಿಂಗೂ (ಅಸಫೋಯಿ) ಮತ್ತು ಬ್ಯಾಂಡಜ್ ಜೇನು. — ಶೇಕಡಾ ಎಂಟು

XXX XXX XXX

(iii) ಆಲ್ಮಂಡ್, ವಾಲ್‌ನಟ್ ಮತ್ತು ಪಿಸ್ತಾ ಸೇರಿದಂತೆ ಒಣಹಣ್ಣುಗಳು — ಶೇಕಡಾ ಎಂಟು

(iv) ಜೀರಿಗೆ, ಒಣಮೆಣಸಿಕಾಯಿ, ಅರಿಶಿಣ ಮತ್ತು ಹುಣಸೇಹಣ್ಣು — ಶೇಕಡಾ ನಾಲ್ಕು

2. ಅಡುಗೆಗೆ ಹಾಗೂ ಬಡಿಸಲು ಉಪಯೋಗಿಸುವ ಶಾಖಾ ನಿರೋಧಕ ಲೇಪನದ ಅಡುಗೆ ಪಾತ್ರೆಗಳು — ಶೇಕಡಾ ಹನ್ನೆರಡು

3. ಅಲ್ಯೂಮಿನಿಯಂ ಅಥವಾ ಕಬ್ಬಿಣೇತರ ಲೋಹಗಳಿಂದ ಮಾಡಿದ ಮತ್ತು ಅಂಟು ನಿರೋಧಕ ಲೇಪನದ ಅಡುಗೆ ಪಾತ್ರೆಗಳು. — ಶೇಕಡಾ ಹನ್ನೆರಡು

ಭಾಗ-ಎಲ್

1. ಲ್ಯಾಮಿನೇಷನ್‌ಕೃತ, ಇಂಪ್ರೆಗ್ನೇಷನ್‌ಕೃತ ಅಥವಾ ಲೇಪಿತ ಹಾಸುಗಳು ಎಂದರೆ, ಸಾಮಾನ್ಯವಾಗಿ ನೆಲದ ಮೇಲೆ ಹಾಸಲು ಬಳಸಲಾಗುವ ಇನ್‌ಸೋಲಿಯಂ ಪಿವಿಸಿ (ವೈನಿಲ್) ಸಾಮಾಗ್ರಿಗಳು ಒಳಗೊಂಡಂತೆ (ನೆಲದ ಟೈಲ್‌ಗಳ ಹೊರತಾಗಿ) — ಶೇಕಡಾ ಹದಿನೈದು

XXX XXX XXX

3. 5ನೇ ಅನುಸೂಚಿಯ ಕ್ರಮಸಂಖ್ಯೆ 16 ರಲ್ಲಿ ಬರುವ ಮತ್ತು ಬೇರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಚರ್ಮದ ವಸ್ತುಗಳು — ಶೇಕಡಾ ಹದಿನೈದು

4. ವಿದ್ಯುಚ್ಛಕ್ತಿಯಿಂದ ಅಥವಾ ಹೈಡ್ರಾಲಿಕ್ ಶಕ್ತಿಯಿಂದ ನಡೆಸಲಾಗುವ ಲಿಫ್ಟ್‌ಗಳು — ಶೇಕಡಾ ಹದಿನೈದು

5. ಸುಣ್ಣಕಲ್ಲು ಸೇರಿದಂತೆ ಸುಣ್ಣ ಶೇಕಡಾ ನಾಲ್ಕು

XXX XXX XXX

7. ಲಾಟರಿ ಟಿಕೆಟ್‌ಗಳು ಶೇಕಡಾ ಇಪ್ಪತ್ತು

ಭಾಗ-ಎಮ್

1. ಯಂತ್ರೋಪಕರಣಗಳು, ಎಂದರೆ:-

(i) (ಎ) ಅರ್ತಮೂವರ್‌ಗಳು, ಎಂದರೆ ಡಂಪರ್‌ಗಳು, ಡಿಪ್ಪರ್‌ಗಳು, ಬುಲ್‌ಡೋಜರ್‌ಗಳು ಮುಂತಾದವು. ಶೇಕಡಾ ಎಂಟು

(ಬಿ) ಅರ್ತಮೂವರ್‌ಗಳ ಭಾಗಗಳು ಮತ್ತು ಉಪಸಾಧನಗಳು (ಡೀಜಲ್ ಎಂಜಿನ್ ಮತ್ತು ಅದರ ಭಾಗಗಳು, ಬ್ಯಾಟರಿಗಳು, ಮತ್ತು ಟೈರುಗಳು, ಟ್ಯೂಬ್‌ಗಳು ಮತ್ತು ಫ್ಲಾಪ್‌ಗಳ ಹೊರತಾಗಿ) ಶೇಕಡಾ ಹನ್ನೆರಡು

XXX XXX XXX

(iii) (ಎ) ಎಲ್ಲ ಬಗೆಯ ಯಂತ್ರೋಪಕರಣಗಳು ಮತ್ತು ಅವುಗಳ ಭಾಗಗಳು ಹಾಗೂ ಉಪ ಸಾಧನಗಳು, ಈ ನಮೂನೆಯ ಇತರ ಬಾಬುಗಳು, ಈ ನಮೂದಿನ ಇತರ ಬಾಬುಗಳ ಅಡಿಯಲ್ಲಿ ಬರುವ ಮತ್ತು ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ. ಶೇಕಡಾ ಹನ್ನೆರಡು

XXX XXX XXX

(ಸಿ) ಹೊಲಿಗೆ ಯಂತ್ರಗಳು ಮತ್ತು ಅದರ ಭಾಗಗಳು ಹಾಗೂ ಉಪಸಾಧನಗಳು ಶೇಕಡಾ ಹನ್ನೆರಡು

(ಡಿ) ಎಲ್ಲಾ ಬಗೆಯ ತೂಕದ ಯಂತ್ರಗಳು ಶೇಕಡಾ ಹನ್ನೆರಡು

(ಇ) ಕೈಗಾರಿಕಾ ಯಂತ್ರೋಪಕರಣಗಳಲ್ಲಿ ಬಳಸಲಾಗುವ ಟ್ವಿಸ್ಟ್ ಡ್ರಿಲರ್‌ಗಳು, ಟ್ಯಾಪಗಳು, ರೀಮರ್‌ಗಳು ಕಟರ್‌ಗಳು, ಡೈಗಳು, ಗ್ರೈಂಡಿಂಗ್ ವೀಲ್‌ಗಳು. ಬಟನ್ ಬಿಟ್‌ಗಳು, ಟಂಗ್ ಸ್ಟೇನ್ ಕಾರ್ಬೈಡ್ ಷೇರ್ ಪಾರ್ಟ್‌ಗಳು ಮತ್ತು ಸೆರಾಮಿಕ್ ಇಂಡಸ್ಟ್ರಿಯಲ್ ಫೇಪರ್ ಪಾರ್ಟ್‌ಗಳು ಮತ್ತು ಅಥವುಗಳೀ ಮುಂತಾದ ಯಂತ್ರ ಸಲಕರಣೆಗಳು ಮತ್ತು ಕಟಿಂಗ್ ಸಲಕರಣೆಗಳು ಶೇಕಡಾ ಎಂಟು

XXX XXX XXX

5. ಮೆಡಿಸಿನಲ್ ಮತ್ತು ಫಾರ್ಮಾಸ್ಯೂಟಿಕಲ್ ತಯಾರಿಕೆಗಳು (ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ) ಶೇಕಡಾ ಹನ್ನೆರಡು

XXX XXX XXX

6. ಪಾದರಸ — ಶೇಕಡಾ ಹನ್ನೆರಡು

XXX XXX XXX

9. ಖನಿಜಯುಕ್ತ ನೀರು, ಬಟ್ಟಿ ಇಳಿಸಿದ ನೀರು ಅಥವಾ ಯಾವುದೇ ಇತರ ಸಂಸ್ಕರಿಸಲಾದ ನೀರು. — ಶೇಕಡಾ ಹದಿನೈದು

XXX XXX XXX

11. ಯಂತ್ರಗಳು, ಭಾಗಗಳು ಮತ್ತು ಸಲಕರಣೆಗಳು ಸೇರಿದಂತೆ ಸೊಳ್ಳೆ ನಿವಾರಕಗಳು. — ಶೇಕಡಾ ಹನ್ನೆರಡು

XXX XXX XXX

15. (i) "ಭಾರತೀಯ ಸಂಗೀತ ವಾದ್ಯಗಳು ಎಂದರೆ, 'ವೀಣೆ, ವಯೋಲಿನ್, ತಂಬೂರಿ, ಮೃದಂಗ, ಘಟ, ಕಂಜರ, ಕೊಳಲು, ಸಿತಾರ, ಸರೋದ್, ಸಂತೂರ್, ದಿಲ್‌ರುಬ, ನಾದಸ್ವರ, ಡೋಲು, ತಬಲ, ಶೆಹನೈ, ಪಕ್‌ವಾಜ್, ವಿಚಿತ್ರ ವೀಣಾ, ಗೋಟುವಾದ್ಯ, ಮೋರ್‌ಸಿಂಗ್, ಚಂಡೆ, ತ್ರೈಂಗಲ್, ರುದ್ರವೀಣಾ ಮತ್ತು ಸಾರಂಗಿ ಮತ್ತು ಭಾಗಗಳು ಮತ್ತು ಅವುಗಳ ಉಪಸಾಧನಗಳು" — ಶೇಕಡಾ ನಾಲ್ಕು

(ii) ಮೇಲಿನ ಬಾಬು 1ರಲ್ಲಿ ಒಳಗೊಳ್ಳದ ಭಾರತೀಯ ಸಂಗೀತ ವಾದ್ಯಗಳು ಅವುಗಳ ಭಾಗಗಳು ಮತ್ತು ಉಪಭಾಗಗಳು — ಶೇಕಡಾ ಹದಿನೈದು

ಭಾಗ-ಎನ್

XXX XXX XXX

2. ನಾನ್ ಫೆರಸ್ ಎರಕುಗಳು ಹಾಗೂ ಮಿಶ್ರ ಲೋಹಗಳು — ಶೇಕಡಾ ಎಂಟು

3. *** *** ***

ಭಾಗ-ಒ

XXX XXX XXX

3. ಚಾಕ್ಷುಷ ವಸ್ತುಗಳು, ಎಂದರೆ:-

(i) ಬೈನಾಕ್ಯುಲರ್‌ಗಳು, ಒಪೆರ ಗ್ಲಾಸ್‌ಗಳು, ಟೆಲಿಸ್ಕೋಪ್‌ಗಳು, ಮೈಕ್ರೊಸ್ಕೋಪ್‌ಗಳು ಮತ್ತು ಅವುಗಳ ಭಾಗಗಳು ಹಾಗೂ ಉಪ ಸಾಧನಗಳು, ಲೆನ್ಸ್‌ಕೇರ್ ದ್ರಾವಣ. — ಶೇಕಡಾ ಹನ್ನೆರಡು

(ii) ಕನ್ನಡಕಗಳು, ಲೆನ್ಸ್‌ಗಳು ಮತ್ತು ಫ್ರೇಮುಗಳು, ಅವುಗಳ ಜೋಡಣೆಗಳು, ಭಾಗಗಳು ಮತ್ತು ಉಪ ಭಾಗಗಳು ಸೇರಿ. — ಶೇಕಡಾ ಹನ್ನೆರಡು

(iii) ಸನ್‌ಗ್ಲಾಸ್‌ಗಳು, ಗಾಗಲ್‌ಗಳು, ಲೆನ್ಸ್‌ಗಳು, ಫ್ರೇಮ್‌ಗಳು ಮತ್ತು ಅವುಗಳ ಜೋಡಣೆಗಳು, ಭಾಗಗಗಳು ಮತ್ತು ಉಪ ಭಾಗಗಳು. ಶೇಕಡಾ ಹನ್ನೆರಡು

ಭಾಗ-ಪಿ

1. (i) ಪೈಂಟುಗಳು, ಬಣ್ಣಗಳು, ವಾರ್ನಿಶಗಳು, ಪಿಗ್ಮೆಂಟುಗಳು, ಪಾಲಿಶ್‌ಗಳು, ಇಂಡಿಗೋ ಪಟ್ಟಿ, ಬೇಲ್‌ಆಯಿಲ್, ವೈಟ್ ಆಯಿಲ್, ಟರ್‌ಪೆಂಟೈನ್ (ಎಲ್ಲಾ ವಿಧವಾದ), ಥಿನ್ನರ್‌ಗಳು ಮತ್ತು ಪ್ರೈಮರ್‌ಗಳು, ಲೈಟ್ ಮಿನರಲ್ ಆಯಿಲ್, ಮೇಟಲ್ ಪಾಲಿಷಿಂಗ್ ಕೌಂಪೌಂಟ್, ಪಟ್ಟಿಗಳು ಮತ್ತು ಕೆಳಕಂಡ ಬಾಬು (ii) ರ ಅಡಿಯಲ್ಲಿ ಒಳಗೊಂಡವುಗಳನ್ನು ಹೊರತುಪಡಿಸಿ ಪ್ರೈಮರುಗಳು. ಶೇಕಡಾ ಹದಿನೈದು

(ii) ಅಕ್ರಿಲಿಕ್ ಪೇಂಟುಗಳು ಮತ್ತು ಬಣ್ಣಗಳು: ಪ್ಲಾಸ್ಟಿಕ್ ಎಮ್ಯುಲೇಶನ್ ಪೇಂಟುಗಳು ಮತ್ತು ಎಲ್ಲ ರೀತಿಯ ರಾಳದ ಮೆರುಗುಗಳು. ಶೇಕಡಾ ಹದಿನೈದು

XXX XXX XXX

3. ಆಮೋನಿಯ ಕಾಗದ, ಬ್ಲಾಟಿಂಗ್ ಕಾಗದ, ಕಾರ್ಬನ್ ಕಾಗದ, ಸೆಲೋಫೇನ್, ಪಿವಿಸಿ ಕೋಟೆಡೆ ಕಾಗದ, ಸ್ಟೆನಿಸಿಲ್ ಕಾಗದ, ವಾಟರ್ ಪ್ರೂಫ್‌ಕಾಗದ ಆರ್ಟ್‌ಬೋರ್ಡ್ಸ್, ಕಾರ್ಡ್‌ಬೋರ್ಡ್ಸ್, ಕೊರುಗೇಟೆಡ್ ಬೋರ್ಡ್ಸ್, ಡೂಪ್ಲೆಕ್ಸ್ ಬೋರ್ಡ್ಸ್, ಪಲ್ಪ್ಸ್, ಬೊರ್ಡ್ಸ್, ಸ್ಟ್ರಾ ಬೋರ್ಡ್, ಟ್ರಿಪ್ಲೆಕ್ಸ್ ಬೋರ್ಡ್, ಸ್ಟೂಡೆಂಟ್ ನೋಟ್ ಬುಕ್ಸ್ ಮುಂತಾದವುಗಳನ್ನು ಒಳಗೊಂಡಿರುವ ಎಲ್ಲಾ ರೀತಿಯ ಕಾಗದ ಆದರೆ ಫೋಟೋಗ್ರಾಫಿಕ್ ಕಾಗದವನ್ನು ಹೊರತುಪಡಿಸಿ ಶೇಕಡಾ ಎಂಟು

4. ರೀಫಿಲ್‌ಗಳು ಸೇರಿದಂತೆ ಎಲ್ಲಾ ವಿಧದ ಪೆನ್ನುಗಳು ಶೇಕಡಾ ಹನ್ನೆರಡು

5. ಪೆಟ್ರೋಲಿಯಂ ಉತ್ಪನ್ನಗಳು ಎಂದರೆ:-

(i) ಅಸ್ಫಾಲ್ಟ್ (ಬಿಟುಮೆನ್) ಶೇಕಡಾ ಹದಿನೈದು

(ii) ಬ್ರೇಕ್" ತೈಲ, ಗ್ರೀಸ್ ಸಾಲ್ವೆಂಟ್ ಎಣ್ಣೆಗಳು (ಎಲ್ಲ ಶ್ರೇಣಿಗಳು) ಪೆಟ್ರೋಲಿಯಂ ಜೆಲ್ಲಿ, ಸಫ್ತಾ, ಸ್ಪ್ರೇ ಎಣ್ಣೆ, ಮೆಥಾನಲ್, ಆರೋಮಾಕ್ಸ್ (ಆರೋಮೆಟಿಕ) ಸೊಳ್ಳೆ ಹಾಗೂ ಲಾರ್ವಿ ನಿವಾರಕ ಎಣ್ಣೆ, ರೋ ಸಲ್ಫರ್ ಹವಿಸ್ವಾಕ್, ಗ್ಲಾಸ್ ಕ್ಲೀನರ್, ಬೆಂಯಿನ್ ಟಾಲೀನ್ ಶೇಕಡಾ ಹದಿನೈದು

ಶೆಲ್ ಹೆಕ್ಸೇನ್, ಸ್ಪೆಷಲ್ ಬಾಯ್ಲಿಂಗ್ ಪಾಯಿಂಟ್
ಸ್ಪಿರೀಟ್ ಸೇರಿದಂತೆ ಲ್ಯೂಬ್ರಿಕೇಟರ್ ಎಣ್ಣೆ

XXX XXX XXX

6. (ನಾಲ್ಕನೇ ಅನುಸೂಚಿಗೆ ಸೇರಿದ) ಪೈಪುಗಳು ಟ್ಯೂಬುಗಳು ಮತ್ತು ಕಬ್ಬಿಣದ ಜೋಡಣೆಗಳು ಸಿಮೆಂಟ್ ಸ್ಟೋನ್‌ವೇರ್ ಮತ್ತು ಅಸಬೆಸ್ಟಾಸ್, ಸಿಮೆಂಟ್ ಗ್ರೀಲ್ಸ್, ಫೆಬ್‌ಫೈಬರ್ ಪೈಪುಗಳು — ಶೇಕಡಾ ಹನ್ನೆರಡು

7. ಪ್ಲಾಸ್ಟಿಕ್ ಸರಕುಗಳು, ಎಂದರೆ-

XXX XXX XXX

(ii) ದಪ್ಪ ಪಾಲಿಥಿನ್, ತೆಳು ಪಾಲಿಥಿನ್, ಗಟ್ಟಿ ಕ್ಲೋರೈಡ್ ಪೈಪುಗಳು ಮತ್ತು ಜೋಡಣೆಗಳು, ಕ್ಯಾಡಟ್ ಪೈಪುಗಳು ಮತ್ತು ಅದರ ಜೋಡಣೆಗಳನ್ನು ಹೊರತುಪಡಿಸಿ — ಶೇಕಡಾ ನಾಲ್ಕು

(iii) ಪ್ಲಾಸ್ಟಿಕ್ ಷೀಟುಗಳು ಮತ್ತು ಮೇಲಿನ (ii)ನೇ ಬಾಬಿನಲ್ಲಿ ನಿರ್ದಿಷ್ಟಪಡಿಸಲಾದವುಗಳನ್ನು ಹೊರತುಪಡಿಸಿ ಪಾಲಿಥಿನ್, ಪಾಲಿವಿನಿನಲ್ ಕ್ಲೋರೈಡ್ ಪಾಲಿಪ್ರೋಪೈಲಿನ್, ಪಾಲಿಸ್ಟಿರಿನ್ ಮತ್ತು ಅಂಥ ಇತರ ಸಾಮಾಗ್ರಿಗಳಿಂದ ತಯಾರಿಸಲಾದ ವಸ್ತುಗಳು ಸೇರಿದಂತೆ ಎಲ್ಲಾ ಪ್ರಕಾರದ ಪ್ಲಾಸ್ಟಿಕಾನಿಂದ ತಯಾರಿಸಲಾದ ವಸ್ತುಗಳು. — ಶೇಕಡಾ ಹದಿನೈದು

8. ಪ್ರತಿಯೊಂದು ಬಗೆಯ ಪ್ಲೇಯಿಂಗ್ ಕಾರ್ಡುಗಳು — ಶೇಕಡಾ ಹನ್ನೆರಡು

9. ರತ್ನಗಳು, ಎಂದರೆ, ವಜ್ರಗಳು, ಪಚ್ಚೆ, ಕೆಂಪು, ನೈಜ ಮುತ್ತುಗಳು ಮತ್ತು ನೀಲಮಣಿ ಮತ್ತು ಅಂಥ ರತ್ನಖಚಿತ ವಸ್ತುಗಳು. — ಶೇಕಡಾ ಎರಡು

10. ಪ್ರೆಷರ್ ಕುಕ್ಕರ್‌ಗಳು, ಅವುಗಳ ಬಾಗಗಳು ಮತ್ತು ಉಪ ಸಾಧನಗಳು. — ಶೇಕಡಾ ಹನ್ನೆರಡು

11. ಓದುವ ಪುಸ್ತಕಗಳನ್ನು ಹೊರತುಪಡಿಸಿ ಮುದ್ರಿತ ಸಾಮಾಗ್ರಿ — ಶೇಕಡಾ ಎಂಟು

12. ಪಂಪ್‌ಸೆಟ್‌ಗಳು ಎಂದರೆ:-

XXX XXX XXX

(ii) 10 ಎಚ್.ಪಿ.ಗಿಂತ ಹೆಚ್ಚಿನ ಸಾಮರ್ಥ್ಯದ ಆಯಿಲ್ ಎಂಜಿನ್‌ಗಳುಳ್ಳ ಪಂಪುಸೆಟ್ಟುಗಳು — ಶೇಕಡಾ ಹನ್ನೆರಡು

(iii) 10 ಎಚ್.ಪಿ.ಗಿಂತ ಹೆಚ್ಚಿನ ಸಾಮರ್ಥ್ಯದ ವಿದ್ಯುತ್‌ಚಾಲಿತ ಮೋಟಾರುಗಳುಳ್ಳ ಪಂಪಸೆಟ್ಟುಗಳು — ಶೇಕಡಾ ಹನ್ನೆರಡು

ಭಾಗ-ಆರ್

1.	*** ***	***
2.	ರೈಲ್‌ಕೋಚ್‌ಗಳು ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು	ಶೇಕಡಾ ಹನ್ನೆರಡು
	XXX XXX	XXX
4.	ರೇಜರ್ ಮತ್ತು ರೇಜರ್ ಬ್ಲೇಡುಗಳು	ಶೇಕಡಾ ಹದಿನೈದು
	XXX XXX	XXX
8.	ಕೈಯಿಂದ, ಯಂತ್ರದಿಂದ ಅಥವಾ ವಿದ್ಯುತ್‌ನಿಂದ ನಡೆಸಲಾಗುವ ರೋಲಿಂಗ್ ಶಟರ್‌ಗಳು ಮತ್ತು ಕೊಲ್ಯಾಪ್ಸಬಲ್ ಗೇಟುಗಳು ಮತ್ತು ಅವುಗಳ ಭಾಗಗಳು	ಶೇಕಡಾ ಹನ್ನೆರಡು
9.	(i) ರೂಫಿಂಗ್, ಲೈಟ್ ರೂಫಿಂಗ್ ಮತ್ತು ಫಾಲ್ಸ್ ರೂಫಿಂಗ್ ವಸ್ತುಗಳು, ಸಿಮೆಂಟ್ ಮತ್ತು ಆಸ್‌ಬೆಸ್ಟಾಸ್ ಶೀಟ್‌ಗಳು, ಆಸ್ಪಾಲ್ಟ್ ಶೀಟುಗಳು, ಹಾರ್ಡ್ ಮತ್ತು ಸಾಫ್ಟ್ ಬೋರ್ಡುಗಳು, ಪ್ಲೈವುಡ್, ವಿನಿಯರ್ಡ್ ಬೋರ್ಡುಗಳು ಮತ್ತು ಪ್ಯಾನೆಲ್‌ಗಳು ಮತ್ತು ಲ್ಯಾಮಿನೇಟೆಡ್ ಶೀಟ್‌ಗಳು ಸೇರಿ ಆದರೆ ಇತರಡೆ ನಿರ್ದಿಷ್ಟಪಡಿಸಿದುವುಗಳನ್ನು ಹೊರತುಪಡಿಸಿ	ಶೇಕಡಾ ಹನ್ನೆರಡು
	(ii) ಆಸ್ಪಾಲ್ಟ್ ಶೀಟುಗಳು	ಶೇಕಡಾ ಹನ್ನೆರಡು
10.	ರಬ್ಬರ್ ಎಂದರೆ:-	
	(i) ಕಚ್ಚಾ ರಬ್ಬರ್, ಎಂದರೆ, ದ್ರವ ಅಥವಾ ಶೀಟಿನ ರೂಪದಲ್ಲಿನ ಲೈಟೆಕ್ಸ್	ಶೇಕಡಾ ಹನ್ನೆರಡು
	(ii) ವಲ್ಕನೈಸ್ ಮಾಡಿದ ಅಥವಾ ಮಾಡದ ಮತ್ತು ಯಾವುದೇ ಜವಳಿ ಸಾಮಗ್ರಿಯೊಂದಿಗೆ ಸಂಯೋಜಿಸಿದ ಅಥವಾ ಸಂಯೋಜಿಸಿಲ್ಲದ ಗಟ್ಟಿಗೊಳಿಸದ ರಬ್ಬರ್ ಪ್ಲೇಟುಗಳು, ಶೀಟ್‌ಗಳು ಮತ್ತು ಸ್ಟ್ರಿಪ್‌ಗಳು	ಶೇಕಡಾ ಹದಿನೈದು
	(iii) ವಲ್ಕನೈಸ್ ಮಾಡಿದ್ದು ಗಟ್ಟಿಗೊಳಿಸಿಲ್ಲದ ಪೈಪಿಂಗ್ ಮತ್ತು ಟ್ಯೂಬಿಂಗ್	ಶೇಕಡಾ ಹದಿನೈದು
	(iv) ಯಾವುದೇ ಜವಳಿ ಸಾಮಗ್ರಿಯೊಂದಿಗೆ ಸಂಯೋಜಿಸಿದ ಅಥವಾ ಸಂಯೋಜಿಸಿಲ್ಲದ ವಲ್ಕನೈಸ್ ಮಾಡಿದ ರಬ್ಬರಿನ ಟ್ರಾನ್ಸ್‌ಮಿಷನ್, ಕನ್ವೇಯರ್ ಅಥವಾ ಎಲಿವೇಟರ್ ಬೆಲ್ಟ್‌ಗಳು ಅಥವಾ ಬೆಲ್ಟಿಂಗ್	

(v)	ಸಿಂಥೆಟಿಕ್ ರಬ್ಬರ್, ಸ್ಟೆರಿಯರ್ ಬಂಟಾ ಡೀನ್ ರಬ್ಬರ್ ಮತ್ತು ಬುಟೈಲ್ ರಬ್ಬರ್, ಸಿಂಥೆಟಿಕ್ ರಬ್ಬರ್ ಲೇಟೆಕ್ಸ್ ಪ್ರಿವಲ್ಕನೈಸಡ್ ಸಿಂಥಟಿಕ್ ರಬ್ಬರ್ ಲೇಟೆಕ್ಸ್ ಸೇರಿ	ಶೇಕಡಾ ಹನ್ನೆರಡು
11.	ರಬ್ಬರ್ ವಸ್ತುಗಳು, ಎಂದರೆ ಸಂಪೂರ್ಣವಾಗಿ ರಬ್ಬರ್ ನಿಂದ ತಯಾರಿಸಿದ ವಸ್ತುಗಳು (ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ)	ಶೇಕಡಾ ಹದಿನೈದು

XXX XXX XXX

ಭಾಗ-ಎಸ್.

XXX XXX XXX

3.	ಪ್ರತಿಯೊಂದು ಬಗೆಯ ಸ್ಯಾನಿಟರಿ ಜೋಡಣೆಗಳು, ಕಲ್ಲು, ಸೀಮೆಂಟ್ ಮತ್ತು ಕಬ್ಬಿಣ ಹಾಗೂ ಉಕ್ಕಿನ ಪೈಪುಗಳು ಮತ್ತು ಜೋಡಣೆಗಳನ್ನು ಹೊರತುಪಡಿಸಿ	ಶೇಕಡಾ ಹದಿನೈದು
4.	ಸ್ಯಾನಿಟರಿ ಟವಲ್‌ಗಳು, ಸ್ಯಾನಿಟರಿ ನ್ಯಾಪ್‌ಕಿನ್‌ಗಳು, ಬೆಲ್ಟ್ ರಹಿತ ನ್ಯಾಪ್‌ಕಿನ್‌ಗಳು ಮತ್ತು ಟ್ಯಾಂಪನ್‌ಗಳು	ಶೇಕಡಾ ಹನ್ನೆರಡು
	ಬೇಬಿಡಿಯೊಪರ್ಸ್‌ಗಳು, ಬೇಬಿ ನ್ಯಾಪಿಸ್‌ಗಳು ಡಿಸಪೋಸಬಲ್ ಡಯಾಪರ್‌ಗಳು	ಶೇಕಡಾ ಹನ್ನೆರಡು
5.	ಸುಗಂಧಿತ ಸುಪಾರಿ	

XXX XXX XXX

6.	ಹೊಲಿಗೆ ದಾರ	ಶೇಕಡಾ ನಾಲ್ಕು
6.ಎ	*** ***	***
7.	ಸ್ಲಾಟೆಡ್ ಆ್ಯಂಗಲ್‌ಗಳು ಮತ್ತು ಸ್ಟೀಲ್ ರ್ಯಾಕ್‌ಗಳ ಜೋಡಣೆಗೆ' ಸಿದ್ಧ ಭಾಗಗಳು.	ಶೇಕಡಾ ಹದಿನೈದು
8.	*** ***	***
9.	ಸೋಪುಗಳು ಎಂದರೆ :-	
(i)	(ಸ್ನಾನದ ಉದ್ದೇಶಗಳಿಗಾಗಿ ಇರುವ) ಸ್ನಾನದ ಸೋಪುಗಳು.	ಶೇಕಡಾ ಹದಿನೈದು
(ii)	ದ್ರವ ಮತ್ತು ಜಲ ರೂಪದಲ್ಲಿರುವ ಗಿಡ ಮೂಲಿಕೆಗಳ ಮತ್ತು ಔಷಧಿಯ ಶಾಂಪೂ	ಶೇಕಡಾ ಹದಿನೈದು
(iii)	ಸೋಪು, ಫ್ಲೇಕುಗಳು, ಸೋಪು ಪೌಡರುಗಳು ಸೇರಿದಂತೆ ಬಟ್ಟೆ ಒಗೆಯುವ ಸೋಪು.	ಶೇಕಡಾ ಹನ್ನೆರಡು

	(iv) ಡಿಟರ್ಜೆಂಟ್ ಬಿಲ್ಲೆಗಳು, ಡಿಟರ್ಜೆಂಟ್‌ಪೌಡರುಗಳು, ಡಿಟರ್ಜೆಂಟ್ ದ್ರವಗಳು ಮತ್ತು ಲಾಂಡ್ರಿ ಪ್ರೆಟ್‌ನರ್‌ಗಳು	ಶೇಕಡಾ ಹನ್ನೆರಡು
10.	ಧ್ವನಿ ಪ್ರಸರಣಾ ಸಾಧನ ಸಾಮಗ್ರಿಗಳು ಧ್ವನಿವರ್ಧಕಗಳು ಮತ್ತು ಅವುಗಳ ಭಾಗಗಳು ಸೇರಿ, ಆದರೆ ಟೆಲಿಫೋನ್ ಮತ್ತು ಅದರ ಭಾಗಗಳನ್ನು ಹೊರತುಪಡಿಸಿ	ಶೇಕಡಾ ಹನ್ನೆರಡು
11.	*** ***	***
	XXX XXX	XXX
13.	ದೇಹಧಾಡ್ಯ ಸಾಧನಗಳು, ಟ್ರೋಫಿಗಳು ಮೆಡಲ್‌ಗಳು ಮತ್ತು ಶೀಲ್ಡ್ ಗಳೂ ಸೇರಿದಂತೆ ಆದರೆ ಧರಿಸುವ ಉಡುಗೆ ತೊಡುಗೆಗಳನ್ನು ಹೊರತುಪಡಿಸಿ ಕ್ರೀಡಾ ಸಲಕರಣೆಗಳು (ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳು)	ಶೇಕಡಾ ನಾಲ್ಕು
	XXX. XXX.	XXX
15.	ಲೇಖನ ಸಾಮಗ್ರಿಗಳು, ಎಂದರೆ:-	
	(i) ಲೆಕ್ಕದ ಪುಸ್ತಕಗಳು, ಪೇಪರ್ ಎನ್ವಲಪ್‌ಗಳು, ಡೈರಿಗಳು, ಕ್ಯಾಲೆಂಡರುಗಳು, ರೇಸ್‌ಕಾರ್ಡುಗಳು, ಕ್ಯಾಟ್‌ಲಾಗುಗಳು, ಶುಭಾಶಯ ಕಾರ್ಡುಗಳು, ಆಮಂತ್ರಣ ಕಾರ್ಡುಗಳು, ವಿನೋದ ಪೋಸ್ಟ್ ಕಾರ್ಡುಗಳು, ಚಿತ್ರಮಯ ಪೋಸ್ಟ್‌ಕಾರ್ಡ್‌ಗಳು, ವಿಶೇಷ ಸಂದರ್ಭಗಳ ಕಾರ್ಡ್‌ಗಳು, ಫೋಟೋ ಮತ್ತು ಸ್ಟಾಂಪ್ ಆಲ್ಬಮ್‌ಗಳು.	ಶೇಕಡಾ ಹನ್ನೆರಡು
	(i-ಎ) "ಕ್ಲಿಪ್ ಬೋರ್ಡುಗಳು, ಕ್ಲಬ್ ಪೆನ್ಸಿಲ್, ಬ್ಲಾಕ್ ಲೆಡ್, ಡೇಟ್ ಸ್ಟ್ಯಾಂಪ್‌ಗಳು, ಡಸ್ಟರ್‌ಗಳು, ಇಂಡೆಕ್ಸ್ ಫೈಲ್‌ಕ್ಲಿಪ್‌ಗಳು, ಫೋಲ್ಡರ್‌ಗಳು, ಎಲ್ಲಾ ವಿಧದ ಕಛೇರಿ ಫೈಲುಗಳು, ಪೇಪರ್ ಕಟ್ಟರ್, ಬ್ಲಾಕ್‌ಬೋರ್ಡ್, ಬ್ಲಾಕ್ ಬೋರ್ಡ್ ಡಸ್ಟರ್‌ಗಳು.	ಶೇಕಡಾ ಹನ್ನೆರಡು
	(ii) ಪಂಚಿಂಗ್ ಮೆಷಿನ್‌ಗಳು ಮತ್ತು ಸ್ಟ್ಯಾಪ್ಲರ್ ಮೆಷಿನ್‌ಗಳೂ ಸೇರಿದಂತೆ ಕಛೇರಿ ಟೇಸ್ಟ್ ಸಾಮಾಗ್ರಿಗಳು.	ಶೇಕಡಾ ಹನ್ನೆರಡು
	(ii-ಎ) ಪೇಪರ್ ಪಿನ್‌ಗಳು, ಪೆನ್ಸ್ ಸ್ಟ್ಯಾಂಡ್‌ಗಳು, ಪೆನ್ಸಿಲ್ ಲೆಡ್, ಪೆನ್ಸಿಲ್ ಶಾರ್ಪ್‌ನರ್‌ಗಳು, ಪರ್ಮನೆಂಟ್ ಮಾರ್ಕರ್‌ಗಳು, ರೀಫಿಲ್ ಲೆಡ್‌ಗಳು,	ಶೇಕಡಾ ಹನ್ನೆರಡು

	ಸ್ಟಾಂಪ್‌ಪ್ಯಾಡ್‌ಗಳು, ಸ್ಟೆಪ್ಲರ್ ಪಿನ್‌ಗಳು, ಎಲ್ಲಾ ವಿಧದ ರೂಲರ್‌ಗಳು, ಗಲ್ಲಿ ಪಿನ್‌ಗಳು ಮತ್ತು ಪಿನ್ ಸ್ಟಡ್‌ಗಳು.	
15ಎ.	ಸ್ಟೀಲ್ ಡೋರ್ ಫ್ರೇಮುಗಳು, ಸ್ಟೀಲ್ ಡೋರ್‌ಗಳು, ಸ್ಟೀಲ್ ವಿಂಡೋ ಫ್ರೇಮುಗಳು ಮತ್ತು ಸ್ಟೀಲ್ ಷಟರ್‌ಗಳು	ಶೇಕಡಾ ಹನ್ನೆರಡು
16.	*** ***	***
	XXX XXX	XXX
18.	ಸ್ಟೌವ್‌ಗಳು, ಎಂದರೆ, ಗ್ಯಾಸ್ ಸ್ಟೌವ್‌ಗಳು ಮತ್ತು ಸೀಮೆಎಣ್ಣೆ ಸ್ಟೌವ್‌ಗಳು, ಬಾರ್‌ಬೆಕ್ಯೂ, ಚಾರ್‌ಕೋಲ್ ಓವನ್ ತಂದೂರ್ ಸ್ಟೋವ್‌ಗಳು ಮತ್ತು ಅವುಗಳ ಭಾಗಗಳು ಮತ್ತು ಉಪಸಾಧನಗಳು,	ಶೇಕಡಾ ಹನ್ನೆರಡು
	XXX XXX	XXX
18.ಬಿ	ದೇಶದ ಹೊರಗಿನಿಂದ ಆಮದು ಮಾಡಿಕೊಂಡ ಸಕ್ಕರೆ	ಶೇಕಡಾ ಹದಿನೈದು
19.	ಸೂಟ್‌ಕೇಸುಗಳು, ಬ್ರೀಫ್ ಕೇಸುಗಳು, ಅಟ್ಯಾಚ್ ಕೇಸುಗಳು ಮತ್ತು ಡೆಸ್ಪ್ಯಾಚ್ ಕೇಸುಗಳು, ಚರ್ಮದಿಂದ ಮಾಡಿದವು ಸೇರಿ, ಆದರೆ ಸ್ಟೀಲ್ ಟ್ರಂಕುಗಳನ್ನು ಬಿಟ್ಟು	ಶೇಕಡಾ ಹದಿನೈದು
20.	*** ***	***
21.	ಸರ್ಜಿಕಲ್ ಮತ್ತು ದಂತ ಚಿಕಿತ್ಸಾ ಸಾಧನ ಸಲಕರಣೆಗಳು, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳೂ ಒಳಗೊಂಡಂತೆ ಟೂಲ್ಸ್‌ಗಳು ಮತ್ತು ಉಪಸಾಧನಗಳು ಮತ್ತು ಯಂತ್ರೋಪಕರಣ ಸಾಧನಗಳು, ಸಿರಂಜುಗಳು ಮತ್ತು ಸೂಚಿಗಳು, ಶಸ್ತ್ರ ಚಿಕಿತ್ಸಾ ಕೊಠಡಿಯ ಸಲಕರಣೆಗಳು, ಶ್ಯಾಡೋ ಬಲ್ಪ್‌ಗಳು ಮತ್ತು ಟ್ಯೂಬ್‌ಗಳು, ಶಸ್ತ್ರ ಚಿಕಿತ್ಸೆಗಾಗಿ ಮತ್ತು ಪರೀಕ್ಷೆಗಳನ್ನು ನಡೆಸಲು ವಿಶೇಷವಾಗಿ ತಯಾರಿಸಾಲದ ಟೇಬಲ್‌ಗಳು ಮತ್ತು ಮಂಚಗಳು ಮತ್ತು ಸಕ್ಷನ್ ಸಾಧನಗಳು, ಸ್ಟ್ಯಾಂಡ್‌ಗಳು, ಸ್ಟ್ರೆಚರ್‌ಗಳು ಟ್ರಾಲಿಗಳು, ದಂತಚಿಕಿತ್ಸಾ ಕುರ್ಚಿಗಳು, ಪ್ರಯೋಗಶಾಲಾ ಸಲಕರಣೆಗಳು, ಬಿ.ಪಿ. ಸಲಕರಣೆಗಳು, ಸರ್ಜಿಕಲ್ ಕಾಟನ್ ವಾಲ್, ಎನಿಮಾ ಕ್ಯಾನ್‌ಗಳು, ಬೆಡ್‌ಪ್ಯಾನ್‌ಗಳು, ಕಿಡ್ನಿ ಟ್ರೇಯಾಸ್‌ಗಳು ಮತ್ತು ಅಂಥ ಇತರ ಆಸ್ಪತ್ರೆ ಸಾಮಾನುಗಳು, ಸರ್ಜಿಕಲ್ ಗ್ಲೋವ್‌ಗಳು ಆಲ್ ಫೈನ್‌ಗಳು, ಶಸ್ತ್ರ ಚಿಕಿತ್ಸಾ ಸೂಟ್‌ಗಳು, ರಬ್ಬರ್ ಶೀಟ್‌ಗಳು, ಕ್ಯಾತಟರ್‌ಗಳು, ಐ.ವಿ. ಸೆಟ್‌ಗಳು	ಶೇಕಡಾ ಹನ್ನೆರಡು

	ಮತ್ತು ಅಂಥವೇ ವಸ್ತುಗಳು, ಸಿರಿವಿಕಲ್ಕಾಲರ್‌ಗಳು, ಸೊಂಟದ ಪಟ್ಟಿಗಳು (ಅಬ್ಡಾಮಿನಲ್ ಬೆಲ್ಟ್‌ಗಳು) ಟೆಲೋನೆಟ್ ಪ್ಯಾರಾಫಿನ್ ಗಾಜ್ ಡ್ರೆಸ್ಸಿಂಗ್, ಅಲ್ಟ್ರಾಸೌಂಡ್ ಜೆಲ್ಲಿ ಪಿಂಚರ್ಸ್ (ಉಕ್ಕಿನ), ಮೆಡಿಷನ್ಸ್, ಆಕ್ಸಿಜನ್ ಮೆಡಿಕಲ್, ಕಿಡ್ ಮೆಡಿಕಲ್ ಡಿಸ್ ಪೋಸಬಲ್ ಇಂಟ್ರಾವೀನಸ್ ಅಡ್‌ಮಿನಿಸ್ಟ್ರೇಷನ್ ಸೆಟ್. ಥರ್ಮೋಮೀಟರ್, ಮೆಕ್ಯಾನಿಕಲ್ ನೇಸಲ್, ಫಿಲ್ಟರ್‌ಗಳು, ಇನ್‌ಸ್ಟ್ರುಮೆಂಟ್ ಸ್ಟೆರಿಲೈಸರ್, ಇಂಜಕ್ಷನ್ ನೀಡಲ್‌ಗಳು, ಹಾಸ್ಪಿಟಲ್ ವೇರ್‌ಗಳು, ಜಿಪ್ಸೋನ ಪ್ಲಾಸ್ಟರ್ ಆಫ್ ಪ್ಯಾರೀಸ್ ಬ್ಯಾಂಡೇಜ್, ಫಿಕ್ಸೆಡ್ ಪಾರ್ಶಿಯಲ್ ಡೆಂಚರ್‌ಗಳು, ಎನಾಮಲ್ಡ್ ಐರನ್ ಟ್ರೇಗಳು ಮತ್ತು ಬೇಸಿನ್‌ಗಳು (ಆಸ್ಪತ್ರೆಗಳಲ್ಲಿ ಬಳಸುವ) ಪಿಜಿ ರೆಕಾರ್ಡಿಂಗ್ ಚಾರ್ಟ್, ಇಸಿಜಿ ಜೆಲ್ಲಿ ಡ್ರಿಪ್ ಸೆಟ್, ಡಿಸ್‌ಪೋಸಬಲ್ ಹೈಪೋಡ್ರಿಮಿಕ್ ನೀಡಲ್‌ಗಳು, ಕಾಟನ್‌ಬಡ್‌ಗಳು, ಬೆಡ್ ಎಲಿವೇಟರ್‌ಗಳು ಅಬ್‌ಸಾರ್ಬೆಂಟ್ ಕಾಟನ್ ರೋಲ್‌ಗಳು ಮತ್ತು ಅಂಥವೇ ವಸ್ತುಗಳು.	
22.	ದೇಶದ ಹೊರಗಿನಿಂದ ಆಮದು ಮಾಡಿಕೊಂಡ ಕಚ್ಚಾ ರೇಷ್ಮೆ ಮತ್ತು ರೇಷ್ಮೆ ನೂಲು	ಶೇಕಡಾ ಎಂಟು
XXX	XXX	XXX
23.	ಈ ಅನುಸೂಚಿಯಲ್ಲಿ ಬೇರೆ ಎಲ್ಲಿಯೂ ನಿರ್ದಿಷ್ಟಪಡಿಸಿದವುಗಳ ಹೊರತಾದ ಸ್ಟೇನ್‌ಲೆಸ್ ಸ್ಟೀಲ್ ವಸ್ತುಗಳು.	ಶೇಕಡಾ ಹದಿನೈದು

ಭಾಗ–ಬಿ

1.	ಟ್ಯಾಬುಲೇಟಿಂಗ್ ಯಂತ್ರಗಳು, ಗಣಕ ಯಂತ್ರಗಳು (ಎಲ್ಲಾ ಬಗೆಯ ಯಾಂತ್ರಿಕ ಅಥವಾ ವಿದ್ಯುತ್ ಚಾಲಿತ ಗಣಕ ಯಂತ್ರಗಳು ಸೇರಿ) ಡೂಪ್ಲಿಕೇಟಿಂಗ್ ಯಂತ್ರಗಳು, ರೋನಿಯೋ ಯಂತ್ರಗಳು, ಅವುಗಳ ಭಾಗಗಳು ಮತ್ತು ಉಪ ಸಾಧನಗಳು.	ಶೇಕಡಾ ಹತ್ತು
1-ಎ	ಹೊಲಿಗೆ ಸಲಕರಣೆಗಳು, ಎಂದರೆ:- ಸೂಜಿಗಳು, ಕತ್ತರಿಗಳು, ಹುಕ್‌ಗಳು, ಗುಂಡಿಗಳು, ಬಕ್ಕಲ್‌ಗಳು, ಅಳತೆ ಟೇಪುಗಳು ಮತ್ತು ಅಳತೆ ಕಡ್ಡಿ ಕಾಲರುಗಳು ಮತ್ತು ಕಾಲರ್‌ಬೋನ್‌ಗಳು ಹಾರ್ನ್	ಶೇಕಡಾ ಹನ್ನೆರಡು

	ಬಟನ್‌ಗಳು, ಇಂಡೆಂಟ್ ಹುಕ್‌ಗಳು, ಐಗಳು, ಜೀನ್ಸ್ ಬಟನ್‌ಗಳು, ನಿಟ್ಟಿಂಗ್ ಪಿನ್‌ಗಳು ಲಾಂಗ್ ಸ್ಟಿಚ್ ಕಿಟಗಳು, ಎಂಎಸ್ ಕೋಟೆಡ್ ಬಟನ್‌ಗಳು, ಸ್ನ್ಯಾಪರುಗಳು, ಜಿಪ್‌ಫಾಸ್ನರ್‌ಗಳು, ಜಿಪ್ಪರ್‌ಗಳು, ಕಫಲಿಂಕ್‌ಗಳು, ಟ್ರೌಫ ಹುಕ್‌ಗಳು.	
2.	ಹುಣಸೇ ಬೀಜಗಳು	ಶೇಕಡಾ ನಾಲ್ಕು
3.	ಹದ ಮಾಡಲು ಬಳಸುವ ತೊಗಟೆಗಳು	ಶೇಕಡಾ ಹನ್ನೆರಡು
4.	*** ... ***	***
5.	(i) ಬ್ರಾಂಡ್ ಹೆಸರಿನಲ್ಲಿ ಮಾರಾಟವಾಗುವ ಟೀ	ಶೇಕಡಾ ಹದಿನೈದು
	(ii) ಮೇಲಿನದನ್ನು ಹೊರತುಪಡಿಸಿದ ಟೀ	ಶೇಕಡಾ ಹನ್ನೆರಡು
	XXX XXX XXX	
6.ಎ	ಟೆಲಿ ಪ್ರಿಂಟರ್‌ಗಳು ಮತ್ತು ಅವುಗಳ ಭಾಗಗಳು	ಶೇಕಡಾ ಹದಿನೈದು
7.	ಟೆಲಿವಿಷನ್ ಸೆಟ್ಟುಗಳು ಮತ್ತು ಅದರ ಘಟಕ ಭಾಗಗಳು ಮತ್ತು ಉಪ ಸಾಧನಗಳು.	ಶೇಕಡಾ ಹದಿನೈದು
7-ಎ	ಯಾವುದೇ ಅನುಸೂಚಿಯಲ್ಲಿ ಎಲ್ಲಿಯಾದರೂ ಸೇರಿಸಲಾದ, ವಿವರಿಸಲಾದ ಅಥವಾ ನಿದಿಷ್ಟಪಡಿಸಲಾದ ಅಂಥ ಜವಳಿಯನ್ನು ಹೊರತುಪಡಿಸಿಸಿದ ಜವಳಿ ಮತ್ತು ವಸ್ತ್ರಗಳು.	ಶೇಕಡಾ ಎಂಟು
7-ಬಿ	ದೇಶದ ಹೊರಗಿನಿಂದ ಆಮದು ಮಾಡಿಕೊಂಡ ಜವಳಿಗಳು ಮತ್ತು ಫ್ಯಾಬ್ರಿಕ್‌ಗಳು	ಶೇಕಡಾ ಹದಿನೈದು
8.	ಟೈಲುಗಳು:-	
	(i) ಮೊಸಾಯಿಕ್ ಟೈಲುಗಳು ಮತ್ತು ಚೂರುಗಳು	ಶೇಕಡಾ ಹದಿನೈದು
	(ii) ಸೇರಾಮಿಕ್ ಮತ್ತು ಹೊಳೆಯುವ ನೆಲ ಮತ್ತು ಗೋಡೆಯ ಟೈಲುಗಳು	ಶೇಕಡಾ ಹದಿನೈದು
	(iii) ನಾಡ ಹೆಂಚುಗಳನ್ನು ಹೊರತುಪಡಿಸಿ ಛಾವಣಿ ಹೆಂಚುಗಳು	ಶೇಕಡಾ ಹನ್ನೆರಡು
	(iv) ಮೇಲ್ಕಂಡ (i), (ii) ಮತ್ತು (iii) ನೇ ಬಾಬುಗಳಲ್ಲಿ ಬಾರದ ಇತರ ಟೈಲುಗಳು.	ಶೇಕಡಾ ಹದಿನೈದು
	(v) ಸಿಮೆಂಟನ್ನು ಬಿಟ್ಟು ಸಂದುಗಾರೆ ಪುಡಿ ಮತ್ತು ಮೇಲೆ ನಿರ್ದಿಷ್ಟಪಡಿಸಿದ ಟೈಲುಗಳು ಮತ್ತು ಚೂರುಗಳನ್ನು ಹಾಸಲು ಬಳಸುವ ಸಿಕು ಮಿಶ್ರಣ.	ಶೇಕಡಾ ಹದಿನೈದು

XXX XXX XXX

9.	***	***
	XXX XXX XXX	
9-ಬಿ	ದೇಶದ ಹೊರಗಿನಿಂದ ಆಮದು ಮಾಡಿಕೊಂಡ ತಂಬಾಕಿನ ಉತ್ಪನ್ನಗಳು	ಶೇಕಡಾ ಹದಿನೈದು
	XXX XXX XXX	
10-ಎ	ಸ್ಪನರ್‌ಗಳು, ಸ್ಕ್ರೂ ಡ್ರೈವರ್‌ಗಳು, ಫ್ಲೈಲ್ಸ್ ಕಟಿಂಗ್ ಪ್ಲೈಯರ್‌ಗಳು. ಸುತ್ತಿಗೆಗಳು ಕ್ಲೋ ಹ್ಯಾಮರ್, ಹ್ಯಾಂಡ್ ಫೋರ್ಕ್ ಮತ್ತು ಅದೇ ರೀತಿಯ ಅಂತಹ ಉಪಕರಣಗಳು (ಕೈಯಿಂದ ನಡೆಸುವ)	ಶೇಕಡಾ ಹನ್ನೆರಡು
10-ಬಿ	(i) (ಎಲೆಕ್ಟ್ರಾನಿಕ್ ಮತ್ತು ವಿದ್ಯುತ್‌ನಿಂದ ಚಾಲಿತವಾಗುವ ಆಟಿಕೆಗಳನ್ನು ಹೊರತುಪಡಿಸಿ) ಎಲ್ಲ ಬಗೆಯ ಆಟಿಕೆ ವಸ್ತುಗಳು.	ಶೇಕಡಾ ಎಂಟು
	(ii) ಎಲೆಕ್ಟ್ರಾನಿಕ್ ಆಟಿಕೆಗಳು	ಶೇಕಡಾ ಹದಿನೈದು
11.	(i) ಬೆರಳಚ್ಚು ಯಂತ್ರಗಳು, ಬೆರಳಚ್ಚು ಯಂತ್ರದ ರಿಬ್ಬನ್ ಸೇರಿದಂತೆ ಭಾಗಗಳು ಮತ್ತು ಪೂರಕ ವಸ್ತುಗಳು	ಶೇಕಡಾ ಹನ್ನೆರಡು
	XXX XXX XXX	
	ಭಾಗ-ವಿ	
1.	ವ್ಯಾಕ್ಯೂಂಫ್ಲಾಸ್ಕ್‌ಗಳು ಹಾಗೂ ಥರ್ಮೋವೇರ್ ವಸ್ತುಗಳು ಮತ್ತು ಅವುಗಳ ರೀಫಿಲ್‌ಗಳು	ಶೇಕಡಾ ಹನ್ನೆರಡು
2.	ಸಾಮಾನ್ಯವಾಗಿ ಮೋಟಾರು ವಾಹನಗಳ ಬಿಡಿ ಭಾಗಗಳಾಗಿ ಬಳಸುವ ವಸ್ತುಗಳನ್ನು ಹೊರತುಪಡಿಸಿ ಇತರೆ ಎಲ್ಲ ಬಗೆಯ ಕವಾಟ (ವಾಲ್ವ್‌ಗಳು)	ಶೇಕಡಾ ಹನ್ನೆರಡು
	XXX XXX XXX	
	ಭಾಗ-ಡಬ್ಲ್ಯೂ	
	XXX XXX XXX	
3.	ಜಲ ಮತ್ತು ಹವಾಮಾನ ನಿರೋಧಕ ಸಂಯುಕ್ತಗಳು	ಶೇಕಡಾ ಹದಿನೈದು
4.	ಜಲಮಾಪಕಗಳು	ಶೇಕಡಾ ಹನ್ನೆರಡು
4-ಎ	ಫೈಬರ್ ಗ್ಲಾಸ್, ಪ್ಲಾಸ್ಟಿಕ್ ಅಥವಾ ಸಿಂಥಟಿಕ್ ವಸ್ತು ವಿನಿಂದ ಮಾಡಲಾದ ನೀರು ಸಂಗ್ರಹಣಾ ಟ್ಯಾಂಕ್‌ಗಳು ಅಲ್ಯೂಮಿನಿಯಂನಿಂದ ತಯಾರಿಸಲಾದ ನೀರಿನ ಟ್ಯಾಂಕ್‌ಗಳು.	ಶೇಕಡಾ ಹನ್ನೆರಡು

5.	ತೂಕಗಳು ಮತ್ತು ಅಳತೆಗಳು	ಶೇಕಡಾ ಹನ್ನೆರಡು
6.	(i) ವೈರ್‌ಲೆಸ್ ರಿಸೆಪ್ಷನ್ ಉಪಕರಣಗಳು ಮತ್ತು ಸಲಕರಣೆಗಳು ಮತ್ತು ಅವುಗಳ ಘಟಕ ಭಾಗಗಳು ವಿಸ್ತಂತು ಗ್ರಹಣದ ಹೊರತಾದ ಉದ್ದೇಶಗಳಿಗೆ ನಿರ್ದಿಷ್ಟವಾಗಿ ವಿನ್ಯಾಸಗೊಳಿಸದಿರುವ ಎಲ್ಲಾ ಎಲೆಕ್ಟ್ರಿಕಲ್ ವಾಲ್ವ್‌ಗಳು ಅಕ್ಯೂಮುಲೇಟರುಗಳು, ಅಂಪ್ಲಿಫೈಯರ್‌ಗಳು ಮತ್ತು ಲೌಡ್ ಸ್ಪೀಕರುಗಳೂ ಸೇರಿ.	ಶೇಕಡಾ ಹದಿನೈದು
	(ii) ಪೇಜರ್‌ಗಳು ಮತ್ತು ಅವುಗಳ ಭಾಗಗಳು	ಶೇಕಡಾ ಹದಿನೈದು
7.	ಸೌದೆ, ನೀಲಗಿರಿ ಸರ್ವೆ ಹಲ್ವಾನಾ ಮರವನ್ನೊಳಗೊಂಡ ಎಲ್ಲಾ ರೀತಿಯ ಮರಗಳು, ಬಾಗಿಲು ಚೌಕಟ್ಟುಗಳು, ಕಿಟಕಿ ಚೌಕಟ್ಟುಗಳು ಮತ್ತು ಬಾಗಿಲುಗಳನ್ನೊಗೊಂಡ ಯಾವುದೇ ಆಕಾರ. ನಮೂನೆ ಅಥವಾ ಗಾತ್ರದ ಚೌಬೀನೆ.	ಶೇಕಡಾ ಹನ್ನೆರಡು
8.	ಮೇಣಗಳು (ಎಲ್ಲಾ ಬಗೆಯವು)	ಶೇಕಡಾ ಹನ್ನೆರಡು

ಭಾಗ- ಎಕ್ಸ್

1.	ಎಕ್ಸ್‌ರೆ ಉಪಕರಣ ಮತ್ತು ಸಲಕರಣೆಗಳು ಮತ್ತು ಮೇಡಿಕಲ್ ಇಮೇಜಿಂಗ್ ಡಯಾಗ್ನಾಸ್ಟಿಕ್ ಮತ್ತು ಚಿಕಿತ್ಸಾ ಸಲಕರಣೆಗಳು	ಶೇಕಡಾ ಹನ್ನೆರಡು

ಭಾಗ-ವೈ

1.	ಒಣಗಿದ, ಒದ್ದೆಯಾದ ಮತ್ತು ಕಂಪ್ರೆಸ್ ಮಾಡಿದ ಈಸ್ಟ್	ಶೇಕಡಾ ಎಂಟು

ಭಾಗ-ಜಡ್

1.	ಸತು, ಸೀಸ ಮತ್ತು ಕ್ಯಾಡ್ಮಿಯಂ	ಶೇಕಡಾ ನಾಲ್ಕು

ಆರನೇ ಅನುಸೂಚಿ

(5-ಬಿ ಮತ್ತು 17(6)ನೇ ಪ್ರಕರಣವನ್ನು ನೋಡಿ)

ಕ್ರ.ಸಂ.	ಕಾಮಗಾರಿಗಳ ಕರಾರಿನ ವಿವರಣೆ	ತೆರಿಗೆಯ ದರ
1	2	3
1.	ಸ್ಥಿರಯಂತ್ರ ಮತ್ತು ಯಂತ್ರ ಸಾಮಗ್ರಿಯ ನಿರ್ಮಾಣ ಮತ್ತು ಸ್ಥಾಪನೆ.	ಶೇಕಡಾ ಹನ್ನೆರಡು
2.	ನಿರ್ಮಾಣವನ್ನು ಒಳಗೊಂಡು ರಚನಾ ಕಾಮಗಾರಿಗಳ ನಿರ್ಮಾಣ ಮತ್ತು ಕಟ್ಟುವಿಕೆ, ಕಬ್ಬಿಣದ ಆಸರೆ ಕಟ್ಟುಗಳು ಮತ್ತು ಉದ್ದಸರಗಳು, ಇತ್ಯಾದಿ	ಶೇಕಡಾ ಹನ್ನೆರಡು
3.	ಕ್ರೇನುಗಳು ಮತ್ತು ಎತ್ತಿಗೆಗಳ ನಿರ್ಮಾಣ ಮತ್ತು ಸ್ಥಾಪನೆ.	ಶೇಕಡಾ ಹನ್ನೆರಡು
4.	ಎಲಿವೇಟರುಗಳು (ಲಿಫ್ಟ್‌ಗಳು) ಮತ್ತು ತಿರುಗುಮೆಟ್ಟಿಲುಗಳ ನಿರ್ಮಾಣ ಮತ್ತು ಸ್ಥಾಪನೆ.	ಶೇಕಡಾ ಹನ್ನೆರಡು

5.	ರೋಲಿಂಗ್ ಷಟರುಗಳು ಮತ್ತು ಬೀಳುಗೇಣುಗಳು	ಶೇಕಡಾ ಹನ್ನೆರಡು
6.	ಕಟ್ಟಡಗಳು, ಸೇತುವೆಗಳು, ರಸ್ತೆಗಳು, ಇತ್ಯಾದಿಗಳ ನಿರ್ಮಾಣಗಳಂಥ ಸಿವಿಲ್ ಕಾಮಗಾರಿಗಳು.	ಶೇಕಡಾ ಹನ್ನೆರಡು
7.	ಬಾಗಿಲುಗಳು, ಬಾಗಿಲು ಚೌಕಟ್ಟುಗಳು, ಕಿಟಕಿಗಳು, ಕಿಟಕಿಗಳ ಚೌಕಟ್ಟುಗಳು ಮತ್ತು ಗ್ರೀಲ್‌ಗಳ ಸ್ಥಾಪನೆ.	ಶೇಕಡಾ ಹನ್ನೆರಡು
8.	(i) ಮೊಸಾಯಿಕ್ ಟೈಲ್ಸುಗಳ ಸರಬರಾಜು ಮತ್ತು ಜೋಡಣೆ	ಶೇಕಡಾ ಹನ್ನೆರಡು
	(ii) ಮಾರ್ಬಲ್ ಸ್ಲ್ಯಾಬುಗಳು, ಪಾಲಿಸ್ಡ್ ಗ್ರಾನೈಟ್ ಕಲ್ಲುಗಳು ಮತ್ತು ಟೈಲ್ಸ್‌ಗಳು (ಮೊಸಾಯಿಕ್ ಟೈಲ್ಸ್‌ಗಳ ಹೊರತಾದ) ಸರಬರಾಜು ಮತ್ತು ಜೋಡಣೆ.	ಶೇಕಡಾ ಹನ್ನೆರಡು
	(iii) ಮೇಲಿನ (i) ಮತ್ತು (ii)ನೇ ಬಾಬುಗಳಲ್ಲಿ ನಿರ್ದಿಷ್ಟ ಪಡಿಸಿದವುಗಳಿಗೆ ಹೊರತಾದ ಸ್ಲಾಬುಗಳು, ಕಲ್ಲುಗಳು ಮತ್ತು ಶೀಟ್‌ಗಳ ಸರಬರಾಜು ಮತ್ತು ಜೋಡಣೆ.	ಶೇಕಡಾ ನಾಲ್ಕು
9.	ಡೀಪ್ ಫ್ರೀಜರುಗಳು, ಶೈತ್ಯಾಗಾರ ಸ್ಥಿರಯಂತ್ರಗಳು, ಆರ್ದ್ರತೆ ಮಾಡುವ ಸ್ಥಿರ ಯಂತ್ರಗಳು ಮತ್ತು ನಿರಾರ್ದ್ರತೆ ಮಾಡುವವುಗಳನ್ನು ಒಳಗೊಂಡು ಹವಾನಿಯಂತ್ರಣ ಸಾಧನಸಾಮಗ್ರಿಯನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು.	ಶೇಕಡಾ ಹನ್ನೆರಡು
10.	ಹವಾನಿಯಂತ್ರಕಗಳು ಮತ್ತು ಹವಾ ಶೀತಕಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು.	ಶೇಕಡಾ ಹನ್ನೆರಡು
11.	ವಿದ್ಯುತ್ ಸರಕುಗಳನ್ನು ಸರಬರಾಜು ಮಾಡುವುದು ಮತ್ತು ಜೋಡಿಸುವುದು ಟ್ರಾನ್ಸಫಾರ್ಮರ್‌ಗಳನ್ನು ಒಳಗೊಂಡು ವಿದ್ಯುತ್‌ಸಾಧಕ ಸಾಮಗ್ರಿಗಳ ಸರಬರಾಜು ಮತ್ತು ಸ್ಥಾಪನೆ.	ಶೇಕಡಾ ಹನ್ನೆರಡು
12.	ಒಳ ಅಲಂಕಾರಗಳಿಗಾಗಿನ ಕರಾರುಗಳನ್ನು ಒಳಗೊಂಡು ಪೀಠೋಪಕರಣಗಳು ಮತ್ತು ಜೋಡಣೆಗಳು, ವಿಭಾಗಕಗಳನ್ನು ಸರಬರಾಜು ಮಾಡುವುದು ಮತ್ತು ಜೋಡಿಸುವುದು.	ಶೇಕಡಾ ಹನ್ನೆರಡು
13	ರೈಲ್ವೆಯವರು ಸರಬರಾಜು ಮಾಡಿದ ಅಂಡರ್ ಕ್ಯಾರೇಜುಗಳ ಮೇಲೆ ರೈಲ್ವೆ ಕೋಚ್‌ಗಳ ನಿರ್ಮಾಣ.	ಶೇಕಡಾ ಹನ್ನೆರಡು
14.	ಹರಿಗೋಲುಗಳು, ದೋಣಿಗಳು, ಜಗ್ಗು ಹಡಗುಗಳು ಬಲೆ ದೋಣಿಗಳು ಮತ್ತು ಹೂಳೆತ್ತುವ ಯಂತ್ರಗಳ ನಿರ್ಮಾಣವನ್ನು ಒಳಗೊಂಡು ಹಡಗು ಮತ್ತು ದೋಣಿಯನ್ನು ನಿರ್ಮಿಸುವುದು.	ಶೇಕಡಾ ಹನ್ನೆರಡು

15. ಪ್ಲಂಬಿಂಗ್‌ಗಾಗಿ, ಚರಂಡಿಗಾಗಿ ಮತ್ತು ಅಂತಹ ಕಾರ್ಯಗಳಿಗಾಗಿ ಸ್ಯಾನಿಟರಿ ಫಿಟ್ಟಿಂಗ್‌ಗಳನ್ನು ಸರಬರಾಜು ಮಾಡುವುದು ಮತ್ತು ಜೋಡಿಸುವುದು.	ಶೇಕಡಾ ಹನ್ನೆರಡು
16. ಬಣ್ಣ ಬಳಿಯುವುದು ಮತ್ತು ಹೊಳಪು ಮಾಡುವುದು	ಶೇಕಡಾ ಹನ್ನೆರಡು
17. ವಿಮಾನಗಳು ಮತ್ತು ಹೆಲಿಕಾಪ್ಟರುಗಳ ನಿರ್ಮಾಣ, ದುರಸ್ತಿ, ಮೇಲ್ಪಾಟು ಮತ್ತು ಪೂರ್ಣ ದುರಸ್ತಿ	ಶೇಕಡಾ ಹನ್ನೆರಡು
18. ಮೋಟಾರು ವಾಹನಗಳ ಒಡಲುಗಳ ಮತ್ತು ಟ್ರೈಲರುಗಳ ನಿರ್ಮಾಣ ಮತ್ತು ಟ್ರೈಲರುಗಳ ನಿರ್ಮಾಣ.	ಶೇಕಡಾ ಹನ್ನೆರಡು
19. ಸಾಧನ ಸಾಮಗ್ರಿಗಳು, ಸ್ಥಾವರ ಮತ್ತು ಯಂತ್ರೋಪಕರಣಗಳು, ಉಪಕರಣಗಳು, ಸಲಕರಣೆಗಳು ಅಥವಾ ಕಟ್ಟಡಗಳ ಇನ್ಸುಲೇಷನ್ ಮತ್ತು ಲೈನಿಂಗ್.	ಶೇಕಡಾ ಹನ್ನೆರಡು
20. (i) ಈ ಅನುಸೂಚಿಯ 15ನೇ ಕ್ರಮಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿರುವುಗಳ ಹೊರತಾದ ಉದ್ದೇಶಗಳಿಗಾಗಿ ಪೈಪುಗಳನ್ನು ಒದಗಿಸುವುದು ಮತ್ತು ಹಾಕುವುದು (ಸ್ಟೀಲ್‌ಪೈಪುಗಳ ಹೊರತಾಗಿ)	ಶೇಕಡಾ ಹನ್ನೆರಡು
XXX XXX XXX	
21. ಉಪಕರಣಗಳು, ಸಾಧನಸಾಮಗ್ರಿಗಳು, ಸಲಕರಣೆಗಳು ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳ ಪೂರ್ಣ ಸರ್ವೀಸಿಂಗ್ ಮತ್ತು ನಿರ್ವಹಣೆ.	ಶೇಕಡಾ ಹನ್ನೆರಡು
22. ಕಂಪ್ಯೂಟರ್ ಸಾಫ್ಟ್‌ವೇರ್ ಪ್ರೋಗ್ರಾಮಿಂಗ್ ಮತ್ತು ಅವನ್ನು ಒದಗಿಸುವುದು.	ಶೇಕಡಾ ನಾಲ್ಕು
23. ಲೋಹದ ಅನಿಲ ಸಿಲಿಂಡರುಗಳ ನಿರ್ಮಾಣ, ಪರೀಕ್ಷೆ ಮತ್ತು ಮರು ಜೋಡಣೆ.	ಶೇಕಡಾ ನಾಲ್ಕು
24. ಟೈರು ರಿಟ್ರೇಡಿಂಗ್	ಶೇಕಡಾ ಹನ್ನೆರಡು
25. ಫೋಟೋಗ್ರಾಫ್ಸ್, ಫೋಟೋ ಪ್ರಿಂಟ್ಸ್ ಮತ್ತು ಫೋಟೋ ನೆಗೆಟಿವ್‌ಗಳ ಸಂಸ್ಕರಣ ಮತ್ತು ಸರಬರಾಜು	ಶೇಕಡಾ ಹನ್ನೆರಡು
26. ಎಲೆಕ್ಟ್ರಾನಿಕ್ಸ್ ಉಪಕರಣಗಳು, ಸಾಧನ ಸಲಕರಣೆಗಳು ಸಲಕರಣೆಗಳು, ಪರಿಕರಗಳು ಮತ್ತು ತಂತ್ರಗಳ ಸರಬರಾಜು ಮತ್ತು ಅಳವಡಿಕೆ.	ಶೇಕಡಾ ಹನ್ನೆರಡು
27. ಅಗ್ನಿಶಾಮಕ ಸಾಧನ ಸಲಕರಣೆಗಳು ಮತ್ತು ತಂತ್ರಗಳ ಸರಬರಾಜು ಮತ್ತು ಅಳವಡಿಕೆ	ಶೇಕಡಾ ಹನ್ನೆರಡು

28.	ಇಲೆಕ್ಟ್ರೋ ಪ್ಲೇಟಿಂಗ್ ಇಲೆಕ್ಟ್ರೋ ಗ್ಯಾಲ್ವನೈಸಿಂಗ್ ಮತ್ತು ಆ್ಯನೋಡೈಸಿಂಗ್ ಮತ್ತು ಅಂಥವೇ	ಶೇಕಡಾ ನಾಲ್ಕು
29.	ಸರಕುಗಳ ಬಾಟ್ಲಿಂಗ್, ಕ್ಯಾನಿಂಗ್ ಮತ್ತು ಪ್ಯಾಕಿಂಗ್	ಶೇಕಡಾ ಹನ್ನೆರಡು
30.	ಲ್ಯಾಮಿನೇಷನ್, ರಬ್ಬರೈಸೇಷನ್, ಕೋಟಿಂಗ್ ಮತ್ತು ಅಂಥವೇ ಸಂಸ್ಕರಣ.	ಶೇಕಡಾ ಹನ್ನೆರಡು
31.	ಮುದ್ರಣ ಮತ್ತು ಬ್ಲಾಕ್ ತಯಾರಿಕೆ	ಶೇಕಡಾ ಹನ್ನೆರಡು
32.	ತೂಕದ ಯಂತ್ರಗಳು ಮತ್ತು ವೇಬ್ರಿಡ್ಜ್‌ಗಳ ಸರಬರಾಜು ಮತ್ತು ನಿರ್ಮಿತಿ.	ಶೇಕಡಾ ಹನ್ನೆರಡು
33.	ಸಬ್‌ಮರ್ಸಿಬಲ್ ಮತ್ತು ಸೆಂಟ್ರಿಫ್ಯುಗಲ್ ಪಂಪ್‌ಸೆಟ್ಟುಗಳ ಸರಬರಾಜು ಮತ್ತು ಜೋಡಣೆ.	ಶೇಕಡಾ ಹನ್ನೆರಡು
34.	ಬಟ್ಟೆಗೆ ಬಣ್ಣ ಹಾಕುವುದು ಮತ್ತು ಪ್ರಿಂಟ್ ಮಾಡುವುದು.	ಶೇಕಡಾ ಹನ್ನೆರಡು
35.	ಮೋಟಾರು ವಾಹನಗಳ ಮೇಲೆ ಟ್ಯಾಂಕರುಗಳನ್ನು ಜೋಡಿಸುವುದು.	ಶೇಕಡಾ ಹನ್ನೆರಡು
36.	ವೆನಿತಿಯನ್ ಬ್ಲೇಂಡ್‌ಗಳು ಮತ್ತು ನೆಟ್‌ಗಳು ಸೇರಿದಂತೆ ಬಾಗಿಲು ಮತ್ತು ಕಿಟಕಿಗಳ ತೆರೆಗಳನ್ನು ಸರಬರಾಜು ಮಾಡುವುದು ಮತ್ತು ಜೋಡಿಸುವುದು.	ಶೇಕಡಾ ಹನ್ನೆರಡು
37. (i)	ಅಮೂಲ್ಯ ಅಥವಾ ಅರೆ-ಅಮೂಲ್ಯ ಹರಳುಗಳನ್ನು ಹುದುಗಿಸಿಲ್ಲದ ಚಿನ್ನ ಹಾಗೂ ಬೆಳ್ಳಿಯ ವಸ್ತುಗಳ ತಯಾರಿಕೆ ಅಥವಾ ಸಂಸ್ಕರಣ ಮತ್ತು ಸರಬರಾಜು.	ಶೇಕಡಾ ನಾಲ್ಕು
(ii)	ಅಮೂಲ್ಯ ಅಥವಾ ಅರೆ ಅಮೂಲ್ಯ ಹರಳುಗಳನ್ನು ಹುದುಗಿಸಿದ ಚಿನ್ನ ಮತ್ತು ಬೆಳ್ಳಿ ವಸ್ತುಗಳ ತಯಾರಿಕೆ ಅಥವಾ ಸಂಸ್ಕರಣ ಮತ್ತು ಸರಬರಾಜು.	ಶೇಕಡಾ ನಾಲ್ಕು
38.	ಸಿನಿಮಾಟೋಗ್ರಾಫಿಕ್ ಫಿಲ್ಮ್‌ಗಳ ಸಂಸ್ಕರಣ, ಮುದ್ರಣ ಮತ್ತು ಸರಬರಾಜು.	ಶೇಕಡಾ ನಾಲ್ಕು
39.	ಧ್ವನಿ ಪ್ರಸರಣಾ ಸಾಧನ ಸಾಮಗ್ರಿಗಳು (ಅಕೌಸ್ಟಿಕ್ ಇನ್ಸುಲೇಷನ್) ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳು.	ಶೇಕಡಾ ಹನ್ನೆರಡು
40.	ಕೂಲಿಂಗ್ ಟವರುಗಳ ಸರಬರಾಜು ಮತ್ತು ಸ್ಥಾಪನೆ.	ಶೇಕಡಾ ಹನ್ನೆರಡು
41.	ಜಲ್ಲಿ ಕಲ್ಲುಗಳ ಪೂರೈಕೆ ಮತ್ತು ಸೇರಿಸುವುದು.	ಶೇಕಡಾ ಹನ್ನೆರಡು
42.	ಎಲೆಕ್ಟ್ರಿಕಲ್ ಮೋಟಾರುಗಳ ರೀವೈಂಡಿಂಗ್	ಶೇಕಡಾ ಹನ್ನೆರಡು
43.	ಮೇಲಿನ ಯಾವುದೇ ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸದಿರುವ ಇತರ ಎಲ್ಲ ಕಾಮಗಾರಿಗಳ ಕರಾರುಗಳು.	ಶೇಕಡಾ ಹನ್ನೆರಡು
44.	ಮೇಲಿನ ಎರಡು ಅಥವಾ ಹೆಚ್ಚಿನ ಪ್ರವರ್ಗಗಳನ್ನು ಒಳಗೊಂಡ ಸಂಯೋಜಿತ ಕರಾರುಗಳು.	ಶೇಕಡಾ ಹನ್ನೆರಡು

ಏಳನೇ ಅನುಸೂಚಿ

(5-ಬಿ ಪ್ರಕರಣವನ್ನು ನೋಡಿ)

ಕ್ರ.ಸಂ.	ಕಾಮಗಾರಿಗಳ ಕರಾರಿನ ವಿವರಣೆ	ತೆರಿಗೆಯ ದರ
1	2	3
1.	ಮೋಟಾರ್ ಕಾರುಗಳನ್ನು ಒಳಗೊಂಡ ಮೋಟಾರು ವಾಹನಗಳು, ಮೋಟಾರು ಟ್ಯಾಕ್ಸಿ ಕ್ಯಾಬುಗಳು, ಮೋಟಾರು ಸೈಕಲ್ಲುಗಳು, ಮೋಟಾರು ಸ್ಕೂಟರುಗಳು, ಮೋಟರೇಟ್ಟುಗಳು, ಮೋಟಾರು ಅಮ್ನಿಬಸ್‌ಗಳು, ಫ್ಯಾನುಗಳು ಮತ್ತು ಮೋಟಾರು ಲಾರಿಗಳು.	ಶೇಕಡಾ ನಾಲ್ಕು
2.	ಮೋಟಾರು ವಾಹನಗಳ ಛಾಸಿಗಳು.	ಶೇಕಡಾ ನಾಲ್ಕು
3.	ಕ್ರೇನುಗಳನ್ನು ಒಳಗೊಂಡ ಸ್ಥಿರಯಂತ್ರ ಮತ್ತು ಯಂತ್ರ ಸಾಮಗ್ರಿ.	ಶೇಕಡಾ ನಾಲ್ಕು
4.	ಟೆಲಿವಿಷನ್ ಸೆಟ್‌ಗಳು ವೀಡಿಯೋ ಕ್ಯಾಸೆಟ್ ರೆಕಾರ್ಡ್‌ರುಗಳು ಮತ್ತು ಪ್ಲೇಯರುಗಳು, ಮೊದಲು ಧ್ವನಿ ಮುದ್ರಣ ಮಾಡಿದ ವೀಡಿಯೋ ಕ್ಯಾಸೆಟ್ ಮತ್ತು ವೀಡಿಯೋ ಆಟದ ಸಾಧನ ಸಾಮಗ್ರಿಗಳು.	ಶೇಕಡಾ ನಾಲ್ಕು
5.	ಕೋಷ್ಟಕ ಯಂತ್ರಗಳು, ಲೆಕ್ಕ ಹಾಕುವ ಯಂತ್ರಗಳು, ದ್ವಿಪ್ರತಿ ಮಾಡುವ ಯಂತ್ರಗಳು, ತೂಕ ಮಾಡುವ ಯಂತ್ರಗಳು, ರೋನಿಯೋ ಯಂತ್ರಗಳು, ಟೆಲೆಕ್ಸ್ ಪ್ರಿಂಟರುಗಳು ಮತ್ತು ಗಣಕ ಯಂತ್ರಗಳು.	ಶೇಕಡಾ ನಾಲ್ಕು
6.	ದೂರವಾಣಿಗಳು	ಶೇಕಡಾ ನಾಲ್ಕು
7.	ಕಥಾ ಚಲನಚಿತ್ರಗಳು	ಶೇಕಡಾ ನಾಲ್ಕು
8.	ಎಲ್ಲ ಬಗೆಯ ಪೀಠೋಪಕರಣಗಳು	ಶೇಕಡಾ ನಾಲ್ಕು
9.	ಎಲೆಕ್ಟ್ರಾನಿಕ್ ಸರಕುಗಳು ಮತ್ತು ವಿದ್ಯುತ್ ಸರಕುಗಳು ಒಳಗೊಂಡಂತೆ ಅವುಗಳ ಉಪಕರಣಗಳೂ, ಸಲಕರಣೆಗಳು ಮತ್ತು ಪರಿಕರಗಳು	ಶೇಕಡಾ ನಾಲ್ಕು
10.	ಹವಾ ನಿಯಂತ್ರಕಗಳು ಮತ್ತು ಹವಾ ಶೀತಕಗಳು	ಶೇಕಡಾ ನಾಲ್ಕು
11.	ನೀರು ಶೀತಕಗಳು, ರೆಫ್ರಿಜರೇಟರುಗಳು, ಡೀಫ್ರೀಜರುಗಳು, ಬಾಟಲಿ ಶೀತಕಗಳು ಮತ್ತು ಶೈತ್ಯಾಗಾರ ಸ್ಥಿರಯಂತ್ರಗಳು	ಶೇಕಡಾ ನಾಲ್ಕು
12.	ಚಲನಚಿತ್ರ ಕ್ಯಾಮೆರಾಗಳು, ಪ್ರೊಜೆಕ್ಟರುಗಳು ಮತ್ತು ದೀಪದ ವ್ಯವಸ್ಥೆಯ ಸಾಧನ ಸಾಮಗ್ರಿಗಳು	ಶೇಕಡಾ ನಾಲ್ಕು
13.	ಕುದುರೆಗಳು	ಶೇಕಡಾ ನಾಲ್ಕು

14.	ಗ್ಯಾಸ್ ಸಿಲಿಂಡರುಗಳು	ಶೇಕಡಾ ನಾಲ್ಕು
15.	ಕ್ರೇಟ್‌ಗಳು ಮತ್ತು ಬಟಲಿಗಳು	
16.	ಮೇಲಿನ ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸಿದ ಸರಕುಗಳನ್ನು	ಶೇಕಡಾ ನಾಲ್ಕು
	ಹೊರತುಪಡಿಸಿ ಇತರ ಸರಕುಗಳು	ಶೇಕಡಾ ನಾಲ್ಕು

ಕರ್ನಾಟಕ ವಿಧಾನಸಭೆ
ಹನ್ನೊಂದನೇ ವಿಧಾನಸಭೆ
ಆರನೇ ಅಧಿವೇಶನ
(ಮುಂದುವರೆದ ಉಪವೇಶನಗಳು)
ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2003
(2003ರ ವಿಧಾನಸಭೆಯ ವಿಧೇಯಕ ಸಂಖ್ಯೆ 15)

ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ನ್ನು (1961ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ಅಧಿನಿಯಮ, 2003 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. 3ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ರ (1961ರ ಕರ್ನಾಟಕ ಅಧಿನಿಯಮ 34) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಿದೆ) 3ನೇ ಪ್ರಕರಣದಲ್ಲಿ,-

(1) (2)ನೇ ಉಪ-ಪ್ರಕರಣದಲ್ಲಿ, (ಬಿ), (ಸಿ) ಮತ್ತು (ಡಿ) ಖಂಡಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಬಿ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯ ಅಧಿನಿಯಮ, 1994ರ (1994ರ ಕರ್ನಾಟಕ ಅಧಿನಿಯಮ 44) 2ನೇ ಪ್ರಕರಣದಲ್ಲಿ ಕ್ರಮವಾಗಿ (ಎಂ) ಮತ್ತು (ಎನ್) ಖಂಡಗಳಲ್ಲಿ ಪರಿಭಾಷಿಸಲಾದ ಮತ್ತು ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತರಾದ "ಅಧ್ಯಾಪಕರು" ಮತ್ತು "ವಿಶ್ವವಿದ್ಯಾಲಯದ ಅಧ್ಯಾಪಕರು" ತಮ್ಮ ಪೈಕಿ ಆಯ್ಕೆ ಮಾಡತಕ್ಕ ನಾಲ್ವರು ಸದಸ್ಯರು.

(ಸಿ) ನೋಂದಾಯಿತ ವೃತ್ತಿದಾರರ ಪೈಕಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ನಾಲ್ವರು ಸದಸ್ಯರು.

(ಡಿ) ಕರ್ನಾಟಕ ರಾಜ್ಯ ದಂತವೈದ್ಯ ಪರಿಷತ್ತು, ಕರ್ನಾಟಕ ಫಾರ್ಮಸಿ ಪರಿಷತ್ತು, ಕರ್ನಾಟಕ ನರ್ಸಿಂಗ್ ಪರಿಷತ್ತು, ಕರ್ನಾಟಕ ಆಯುರ್ವೇದ ಮತ್ತು ಹೋಮಿಯೋಪತಿ ಪರಿಷತ್ತಿನ

ಸದಸ್ಯರುಗಳ ಪೈಕಿ ಒಂದು ವರ್ಷದ ಅವಧಿಗಾಗಿ ಸುತ್ತು ಸರದಿಯಂತೆ ರಾಜ್ಯ ಸರ್ಕಾರವು ನಾಮನಿರ್ದೇಶಿಸಬಹುದಾದ ಒಬ್ಬ ಸದಸ್ಯ."

(2) (3)ನೇ ಉಪಪ್ರಕರಣದಲ್ಲಿ,

(i) "(ಡಿ) ಖಂಡದ" ಎಂಬ ಪದ, ಆವರಣಗಳು ಮತ್ತು ಅಕ್ಷರಕ್ಕೆ, "(ಸಿ) ಖಂಡದ" ಎಂಬ ಪದ, ಆವರಣಗಳು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು;

(ii) "(ಎ) (ಬಿ) ಮತ್ತು (ಸಿ) ಖಂಡಗಳ" ಎಂಬ ಪದಗಳು, ಆವರಣಗಳು ಮತ್ತು ಅಕ್ಷರಗಳಿಗೆ, "(ಎ) ಮತ್ತು (ಬಿ) ಖಂಡಗಳ" ಎಂಬ ಪದಗಳು, ಆವರಣಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

(3) (4)ನೇ ಉಪ-ಪ್ರಕರಣದಲ್ಲಿ, "ಸದಸ್ಯರು ತಮ್ಮ ಪೈಕಿಯಿಂದ" ಎಂಬ ಪದಗಳಿಗೆ, "(ಡಿ) ಖಂಡದಲ್ಲಿ ಉಲ್ಲೇಖಿಸಲಾದ ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರು ತಮ್ಮ ಪೈಕಿಯಿಂದ" ಎಂಬ ಪದಗಳು, ಆವರಣಗಳು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು.

3. 5ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿ, "ಇತರ ಸದಸ್ಯರು" ಎಂಬ ಪದಗಳಿಗೆ ಮೊದಲು "3ನೇ ಪ್ರಕರಣದ (2)ನೇ ಉಪ ಪ್ರಕರಣದ (ಡಿ) ಖಂಡದಲ್ಲಿ ಉಲ್ಲೇಖಿಸಿದ ಸದಸ್ಯರ ಹೊರತಾಗಿ" ಎಂಬ ಪದಗಳು, ಆವರಣ ಚಿಹ್ನೆಗಳು, ಅಂಕಿಗಳು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು.

4. 6ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 6ನೇ ಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:-

"ಪರಂತು, ಪರಿಷತ್ತಿನ ಚುನಾಯಿತ ಸದಸ್ಯನ ಹುದ್ದೆಯಲ್ಲಿ ರಿಕ್ತತೆ ಉಂಟಾದಲ್ಲಿ ಮತ್ತು ಪದಾವಧಿಯ ಉಳಿದಿರುವ ಸಮಯವು ಆರು ತಿಂಗಳುಗಳಿಗಿಂತ ಕಡಿಮೆ ಇದ್ದಲ್ಲಿ, ಅಂಥ ರಿಕ್ತಸ್ಥಾನವನ್ನು ತುಂಬಲು ಯಾವುದೇ ಚುನಾವಣೆ ನಡೆಸತಕ್ಕದ್ದಲ್ಲ."

5. 8ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 8ನೇ ಪ್ರಕರಣದಲ್ಲಿ,-

(i) (ಬಿ) ಖಂಡದಲ್ಲಿ, "ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ವೈದ್ಯಶಾಸ್ತ್ರ ವ್ಯಾಸಂಗ ವಿಭಾಗದ ಸದಸ್ಯನಾಗಿರುವುದು ನಿಂತು ಹೋಗಿದ್ದರೆ" ಎಂಬ ಪದಗಳಿಗೆ, "ಅಧ್ಯಾಪಕ ಅಥವಾ ಸಂದರ್ಭಾನುಸಾರ ವಿಶ್ವವಿದ್ಯಾನಿಲಯದ ಅಧ್ಯಾಪಕನಾಗಿರುವುದು ನಿಂತು ಹೋಗಿದ್ದರೆ ಅಥವಾ ನೋಂದಾಯಿತ ವೃತ್ತಿಗಾರನಾಗಿರುವುದು ನಿಂತು ಹೋಗಿದ್ದರೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (ಸಿ) ಖಂಡದಲ್ಲಿ, "(ಎ) ಅಥವಾ (ಸಿ) ಖಂಡಗಳ" ಎಂಬ ಪದಗಳು, ಆವರಣಗಳು ಮತ್ತು ಅಕ್ಷರಗಳಿಗೆ "(ಎ) ಖಂಡದ" ಎಂಬ ಪದ, ಆವರಣಗಳು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕದ್ದು.

6. 9ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ, ಈ ಮುಂದಿನ ಪರಂತುಕವನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:-

"ಪರಂತು, 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಡಿ) ಖಂಡದ ಅಡಿಯಲ್ಲಿ ನಾಮನಿರ್ದೇಶಿತನಾದ ಸದಸ್ಯನು ವೈದ್ಯಕೀಯ ಪರಿಷತ್ತಿನ ಸಭೆಯಲ್ಲಿ ಭಾಗವಹಿಸತಕ್ಕದ್ದು ಆದರೆ, ಅಂಥ ಸಭೆಯಲ್ಲಿ ಮತ ಚಲಾಯಿಸುವ ಹಕ್ಕು ಹೊಂದಿರತಕ್ಕದ್ದಲ್ಲ."

7. 13ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ,-

(ಎ) (1)ನೇ ಉಪ-ಪ್ರಕರಣದಲ್ಲಿ,

(i) "ಹದಿನೈದು ರೂಪಾಯಿಗಳ ಶುಲ್ಕದೊಂದಿಗೆ" ಎಂಬ ಪದಗಳಿಗೆ "ನಿಯಮಿತ ಶುಲ್ಕದೊಂದಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಪರಂತುಕದಲ್ಲಿ, "ಎರಡು ರೂಪಾಯಿಗಳ ಶುಲ್ಕವನ್ನು" ಎಂಬ ಪದಗಳಿಗೆ "ನಿಯಮಿತ ಶುಲ್ಕವನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (2)ನೇ ಉಪ-ಪ್ರಕರಣದಲ್ಲಿ, "ದಂಡ ಪ್ರಕ್ರಿಯಾಸಂಹಿತೆ, 1898 ರಲ್ಲಿ (1898ರ ಕೇಂದ್ರ ಅಧಿನಿಯಮ V)" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳಿಗೆ "ದಂಡ ಪ್ರಕ್ರಿಯಾ ಸಂಹಿತೆ, 1973 ರಲ್ಲಿ (1974ರ ಕೇಂದ್ರ ಅಧಿನಿಯಮ 2)" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು.

8. 15ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 15ನೇ ಪ್ರಕರಣದಲ್ಲಿ,-

(1) ಶೀರ್ಷಿಕೆಯಲ್ಲಿ "ದುರ್ನಡತೆಗಾಗಿ" ಎಂಬ ಪದಗಳಿಗೆ "ದುರ್ನಡತೆ, ಇತ್ಯಾದಿಗಳಿಗಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ,

(i) "ಯಾವುದೇ ದುರ್ನಡತೆಯ ತಪ್ಪಿತಸ್ಥನೆಂದು" ಎಂಬ ಪದಗಳಿಗೆ "ಯಾವುದೇ ದುರ್ನಡತೆ, ನಿರ್ಲಕ್ಷ್ಯ, ಅದಕ್ಷತೆ ಅಥವಾ ವೈದ್ಯಕೀಯ ನೀತಿ ಸಂಹಿತೆಯ ಉಲ್ಲಂಘನೆಯ ತಪ್ಪಿತಸ್ಥನೆಂದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ವಿವರಣೆಯಲ್ಲಿ "ದಂಡ ಪ್ರಕ್ರಿಯಾ ಸಂಹಿತೆ 1898 ರಲ್ಲಿ (1898ರ ಕೇಂದ್ರ ಅಧಿನಿಯಮ V)" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳಿಗೆ "ದಂಡ ಪ್ರಕ್ರಿಯಾ ಸಂಹಿತೆ, 1973 ರಲ್ಲಿ (1974ರ ಕೇಂದ್ರ ಅಧಿನಿಯಮ 2)" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು.

9. 16ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 16ನೇ ಪ್ರಕರಣದಲ್ಲಿ (ಸಿ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ,-

"(ಡಿ) ಆಸ್ಪತ್ರೆ, ನರ್ಸಿಂಗ್ ಹೋಂಗಳು, ಸಮಾಲೋಚನಾ ಕೊಠಡಿಗಳು, ರೋಗನಿದಾನ ಕೇಂದ್ರಗಳು, ಪಾಲಿಕ್ಲಿನಿಕ್‌ಗಳು, ಚಿಕಿತ್ಸಾಲಯಗಳು, ಯಾವುದೇ ಹೆಸರಿನಿಂದ ಕರೆಯಲ್ಪಡುವ ವೈದ್ಯಕೀಯ ವೃತ್ತಿಯನ್ನು ನಡೆಸುವ ಆರೋಗ್ಯ ಮತ್ತು ಆರೈಕೆ ಕೇಂದ್ರಗಳು ಮುಂತಾದ ವೈದ್ಯಕೀಯ ಸಂಸ್ಥೆಗಳನ್ನು ಪರಿಶೀಲಿಸುವುದು".

10. 18ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 18ನೇ ಪ್ರಕರಣದಲ್ಲಿ, (1)ನೇ ಉಪ-ಪ್ರಕರಣದಲ್ಲಿ, "ಒಬ್ಬ ವ್ಯಕ್ತಿಯು, ಅಂಥ ಎಲ್ಲ ವಿಚಾರಣೆಗಳಲ್ಲಿ ವೈದ್ಯಕೀಯ ಪರಿಷತ್ತಿಗೆ ಕಾನೂನು ಸಲಹೆಗಾರನಾಗಿರತಕ್ಕದ್ದು" ಎಂಬ ಪದಗಳಿಗೆ "ಒಬ್ಬ ಕಾನೂನು ಸಲಹೆಗಾರನ

ನೆರವನ್ನು ವೈದ್ಯಕೀಯ ಪರಿಷತ್ತು ಅಂಥ ಎಲ್ಲ ವಿಚಾರಣೆಗಳಲ್ಲಿ ಪಡೆದುಕೊಳ್ಳಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

11. 19ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 19ನೇ ಪ್ರಕರಣದಲ್ಲಿ,-

(1) (1)ನೇ ಉಪ-ಪ್ರಕರಣದಲ್ಲಿ, "ಪ್ರತಿವರ್ಷದ ಡಿಸೆಂಬರ್ ಮೂವತ್ತೊಂದರಂದು ಅಥವಾ ಅದಕ್ಕೆ ಮೊದಲು ಎರಡು ರೂಪಾಯಿಗಳ ನವೀಕರಣ ಶುಲ್ಕವನ್ನು" ಎಂಬ ಪದಗಳಿಗೆ "ನಿಯಮಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೆ ಮೊದಲು ನಿಯಮಿಸಲಾದ ಶುಲ್ಕವನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಪಡೆದ ಒಂದು ಸಂಘ ಅಥವಾ ಸಂಸ್ಥೆಯು ನಡೆಸಿದ ನಿರಂತರ ವೈದ್ಯಕೀಯ ಶಿಕ್ಷಣ (ಸಿಎಂಇ) ಕಾರ್ಯಕ್ರಮದಲ್ಲಿ ಒಂದುನೂರು ಘಂಟೆಗಳಿಗಿಂತ ಕಡಿಮೆ ಇಲ್ಲದ ಅವಧಿಯವರೆಗೆ ಭಾಗವಹಿಸಿದ್ದಕ್ಕೆ ಒಂದು ಪ್ರಮಾಣ ಪತ್ರವನ್ನು ನೋಂದಾಯಿತ ವೈದ್ಯಕೀಯ ವೃತ್ತಿದಾರನು ನೀಡಿದ ಹೊರತು ನೋಂದಣಿಯ ನವೀಕರಣವನ್ನು ಮಾಡತಕ್ಕದ್ದಲ್ಲ."

12. 23ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 23ನೇ ಪ್ರಕರಣದಲ್ಲಿ, "ದಂಡ ಪ್ರಕ್ರಿಯಾ ಸಂಹಿತೆ 1898 ರ (1898ರ ಕೇಂದ್ರ ಅಧಿನಿಯಮ V) ಅಡಿಯಲ್ಲಿ" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳಿಗೆ "ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಅಡಿಯಲ್ಲಿ" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು.

13. 26ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 26ನೇ ಪ್ರಕರಣದಲ್ಲಿ, (1)ನೇ ಉಪ-ಪ್ರಕರಣದಲ್ಲಿ, "ಸರ್ಕಾರಿ ರಾಜ್ಯಪತ್ರದಲ್ಲಿ" ಎಂಬ ಪದಗಳಿಗೆ "ವೈದ್ಯಕೀಯ ಪರಿಷತ್ತಿನ ಕಚೇರಿಯ ಸೂಚನಾಫಲಕದಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ನ್ನು,

(i) "ಅಧ್ಯಾಪಕರು" ಮತ್ತು "ವಿಶ್ವವಿದ್ಯಾನಿಲಯದ ಅಧ್ಯಾಪಕರು" ಎಂಬ ಪದಾವಳಿಯನ್ನು ಪರಿಭಾಷಿಸಲು ಮತ್ತು ಈ ಎರಡೂ ಪ್ರವರ್ಗಗಳಿಂದ ಜಂಟಿಯಾಗಿ ವೈದ್ಯಕೀಯ ಪರಿಷತ್ತಿಗೆ ನಾಲ್ಕು ಜನ ಸದಸ್ಯರನ್ನು ಚುನಾಯಿಸುವುದಕ್ಕೆ ಉಪಬಂಧ ಕಲ್ಪಿಸಲು;

(ii) ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾಗುವ 4 ಜನರ ಪೈಕಿ ಒಬ್ಬರನ್ನು ಕರ್ನಾಟಕ ದಂತ ಪರಿಷತ್ತು, ಫಾರ್ಮಸಿ ಪರಿಷತ್ತು, ನರ್ಸಿಂಗ್ ಪರಿಷತ್ತು ಹಾಗೂ ಆಯುರ್ವೇದ ಮತ್ತು ಹೋಮಿಯೋಪತಿ ಪರಿಷತ್ತಿನಿಂದ ಒಂದು ವರ್ಷದ ಅವಧಿಗೆ ಸುತ್ತು ಸರದಿಯ ಮೇಲೆ ನಾಮನಿರ್ದೇಶಿಸುವುದಕ್ಕೆ, ಮತ್ತು ಅವರು ವೈದ್ಯಕೀಯ ಪರಿಷತ್ತಿನ ಸಭೆಯಲ್ಲಿ ಮತ ಚಲಾಯಿಸುವ ಅಧಿಕಾರವನ್ನು ಹೊಂದಿರುವುದಿಲ್ಲ ಎಂಬುದಾಗಿ ಉಪಬಂಧ ಕಲ್ಪಿಸಲು;

(iii) ಚುನಾಯಿತ ಸದಸ್ಯನ ಹುದ್ದೆಯು ಖಾಲಿಯಾಗಿದ್ದು ಅದರ ಉಳಿಕೆ ಅವಧಿಯು ಆರು ತಿಂಗಳಿಗಿಂತ ಕಡಿಮೆ ಇದ್ದ ಸಂದರ್ಭದಲ್ಲಿ, ಆ ಸ್ಥಾನವನ್ನು ತುಂಬಲು ಚುನಾವಣೆಯನ್ನು ನಡೆಸತಕ್ಕದ್ದಲ್ಲವೆಂದು ಉಪಬಂಧ ಕಲ್ಪಿಸಲು;

(iv) ನಿಯಮಗಳ ಮೂಲಕ ಶುಲ್ಕವನ್ನು ನಿರ್ಧರಿಸುವುದಕ್ಕಾಗಿ ಉಪಬಂಧ ಕಲ್ಪಿಸಲು;

(v) ನಿರ್ಲಕ್ಷ್ಯ, ಅದಕ್ಷತೆ ಮತ್ತು ವೈದ್ಯಕೀಯ ನೀತಿ ಸಂಹಿತೆಯನ್ನು ಉಲ್ಲಂಘಿಸಿದ ಕಾರಣದ ಮೇಲೆ ವೈದ್ಯಕೀಯ ವೃತ್ತಿದಾರರನ್ನು ತೆಗೆದುಹಾಕುವುದಕ್ಕೆ ಉಪಬಂಧಕಲ್ಪಿಸಲು;

(vi) ವೈದ್ಯಕೀಯ ಸಂಸ್ಥೆಗಳನ್ನು ತಪಾಸಣೆ ಮಾಡುವುದಕ್ಕೆ ವೈದ್ಯಕೀಯ ಪರಿಷತ್ತಿಗೆ ಅಧಿಕಾರ ನೀಡಲು;

(vii) ನೋಂದಣಿಯ ನವೀಕರಣಕ್ಕಾಗಿ ಕೋರಿಕೆ ಸಲ್ಲಿಸುವ ಮೊದಲು ನಿರಂತರ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರ ಬಗ್ಗೆ ಒಂದು ಪ್ರಮಾಣ ಪತ್ರವನ್ನು ಒದಗಿಸುವಂತೆ ವೈದ್ಯಕೀಯ ವೃತ್ತಿದಾರಿಗೆ ಅಗತ್ಯಪಡಿಸಲು;

- ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಇತರ ಕೆಲವು ಪ್ರಾಸಂಗಿಕ ಮತ್ತು ಆನುಷಂಗಿಕ ತಿದ್ದುಪಡಿಗಳನ್ನೂ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಎ.ಬಿ. ಮಾಲಕರೆಡ್ಡಿ
ವೈದ್ಯಕೀಯ ಶಿಕ್ಷಣ ಸಚಿವರು

ಟಿ. ರಾಜಣ್ಣ
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ರ (1961ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ

XX XX XX

3. ಪರಿಷತ್ತಿನ ಸ್ಥಾಪನೆ, ನಿಗಮನ ಮತ್ತು ರಚನೆ.- (1) XX XX XX

(2) ಪರಿಷತ್ತು ಈ ಮುಂದಿನ ಹದಿನೈದು ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು ಎಂದರೆ:-

(ಎ) XX XX XX

(ಬಿ) ಕರ್ನಾಟಕ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳ ವೈದ್ಯಕೀಯ ವ್ಯಾಸಂಗ ವಿಭಾಗಗಳ ಸದಸ್ಯರುಗಳ ಪೈಕಿ ತಮ್ಮೊಳಗೆ ಚುನಾಯಿಸಿಕೊಂಡಂಥ ಇಬ್ಬರು ಸದಸ್ಯರು.

(ಸಿ) ಈ ಅಧಿನಿಯಮ ಅಡಿಯಲ್ಲಿ ನೋಂದಾಯಿತರಾಗಿ ವೈದ್ಯಕೀಯ ವೃತ್ತಿ ನಿರತರಾದ ಕರ್ನಾಟಕ ರಾಜ್ಯದಲ್ಲಿಯ ವೈದ್ಯಕೀಯ ಕಾಲೇಜುಗಳ ಸದಸ್ಯರುಗಳ ಪೈಕಿ ತಮ್ಮೊಳಗೆ ಚುನಾಯಿಸಿಕೊಂಡಂಥ ಇಬ್ಬರು ಸದಸ್ಯರು; ಮತ್ತು

(ಡಿ) ರಾಜ್ಯ ಸರ್ಕಾರವು ನಾಮನಿರ್ದೇಶಿಸುವ ಐದು ಸದಸ್ಯರು, ಇವರುಗಳ ಪೈಕಿ ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತರಾಗದವರು ಒಬ್ಬರಿಗಿಂತ ಹೆಚ್ಚು ಇರತಕ್ಕದ್ದಲ್ಲ.

(3) (2)ನೇ ಉಪ ಪ್ರಕರಣದ (ಡಿ) ಖಂಡದ ಅಡಿಯಲ್ಲಿ ನಾಮ ನಿರ್ದೇಶನ ಮಾಡುವಾಗ ರಾಜ್ಯ ಸರ್ಕಾರವು ಮಹಿಳೆಯರು ಮತ್ತು ವೃತ್ತಿಪರ ಇತರ ಗುಂಪುಗಳ, (ಎ), (ಬಿ) ಮತ್ತು (ಸಿ) ಖಂಡಗಳ ಅಡಿಯಲ್ಲಿ ಚುನಾಯಿತರಾಗದ ಪ್ರತಿನಿಧಿಗಳ ಕ್ಲೇಮುಗಳಿಗೆ ಸೂಕ್ತ ಗಮನವನ್ನು ನೀಡತಕ್ಕದ್ದು.

(4) ವೈದ್ಯಕೀಯ ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳನ್ನು ಸದಸ್ಯರು ತಮ್ಮ ಪೈಕಿಯಿಂದ ಚುನಾಯಿಸಿಕೊಳ್ಳತಕ್ಕದ್ದು.

XX XX XX

5. ಪದಾವಧಿ.- ವೈದ್ಯಕೀಯ ಪರಿಷತ್ತಿನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಇತರ ಸದಸ್ಯರು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಅವರ ನಾಮನಿರ್ದೇಶನದ ಅಥವಾ ಚುನಾವಣೆಯ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಥವಾ ಅವರ ಉತ್ತರಾಧಿಕಾರಿಗಳನ್ನು ನಾಮನಿರ್ದೇಶನ ಮಾಡುವವರೆಗೆ ಅಥವಾ ಚುನಾಯಿಸುವವರೆಗೆ - ಇವುಗಳಲ್ಲಿ ಯಾವುದು ಹೆಚ್ಚಿನ ಅವಧಿಯದ್ದೊ ಆ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಸಂದರ್ಭಾನುಸಾರ ಪುನಃ ನಾಮನಿರ್ದೇಶಿತರಾಗಲು ಅಥವಾ ಪುನಃ ಚುನಾಯಿತರಾಗಲು ಅರ್ಹರಾಗಿರತಕ್ಕದ್ದು.

6. ರಿಕ್ತತೆ.- ವೈದ್ಯಕೀಯ ಪರಿಷತ್ತಿನ ಯಾವುದೇ ಸದಸ್ಯ ಮರಣ ಹೊಂದಿದಾಗ, ರಾಜಿನಾಮೆ ಕೊಟ್ಟಾಗ ಅಥವಾ ಆತನ ಸ್ಥಾನವು ರಿಕ್ತವಾದಾಗ ಆ ಸ್ಥಾನಕ್ಕೆ ಇನ್ನೊಬ್ಬ ವ್ಯಕ್ತಿಯನ್ನು 3ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ನಾಮನಿರ್ದೇಶನ ಮಾಡುವ ಅಥವಾ ಸಂದರ್ಭಾನುಸಾರವಾಗಿ ಚುನಾಯಿಸುವ ಮೂಲಕ ನೇಮಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಯಾರ ಸ್ಥಾನದಲ್ಲಿ ನೇಮಿಸಲಾಗಿದೆಯೋ ಆ ವ್ಯಕ್ತಿಯು ನಾಮನಿರ್ದೇಶಿತನಾಗಿದ್ದ ಅಥವಾ ಚುನಾಯಿತನಾಗಿದ್ದ ಪದಾವಧಿಯ ಉಳಿದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

XX XX XX

8. ಸದಸ್ಯರಾಗಿ ಮುಂದುವರೆಯಲು ಅನರ್ಹತೆಗಳು.- ಯಾರೇ ವ್ಯಕ್ತಿಯು ತನ್ನ ನಾಮನಿರ್ದೇಶನದ ಅಥವಾ ಚುನಾಯಿತ ಅವಧಿಯಲ್ಲಿ,-

(ಎ) ವೈದ್ಯಕೀಯ ಪರಿಷತ್ತಿನ ಅಭಿಪ್ರಾಯದಲ್ಲಿ, ಪರಿಷತ್ತಿನ ಮೂರು ನಿರಂತರ ಸಾಮಾನ್ಯ ಸಭೆಗಳಿಗೆ ಕಾರಣವಿಲ್ಲದೆ ಗೈರು ಹಾಜರಾದರೆ; ಅಥವಾ

(ಬಿ) 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಚುನಾಯಿತನಾದ ಸದಸ್ಯನ ಸಂದರ್ಭದಲ್ಲಿ, ಆತ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ವೈದ್ಯಶಾಸ್ತ್ರ ವ್ಯಾಸಂಗ ವಿಭಾಗದ ಸದಸ್ಯನಾಗಿರುವುದು ನಿಂತುಹೋಗಿದ್ದರೆ; ಅಥವಾ

(ಸಿ) 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಅಥವಾ (ಸಿ) ಖಂಡಗಳ ಅಡಿಯಲ್ಲಿ ಚುನಾಯಿತರಾದ ಸದಸ್ಯರ ಸಂದರ್ಭದಲ್ಲಿ ಅವರು ನೋಂದಾಯಿತ ವೃತ್ತಿದಾರರಾಗಿರುವುದು ನಿಂತುಹೋದರೆ; ಅಥವಾ

(ಡಿ) 7ನೇ ಪ್ರಕರಣದಲ್ಲಿ ನಮೂದಿಸಿದ ಯಾವುದೇ ಅನರ್ಹತೆಗಳಿಗೆ ಒಳಪಟ್ಟರೆ

- ರಾಜ್ಯಸರ್ಕಾರವು ಆತನ ಸ್ಥಾನವು ರಿಕ್ತವಾಗಿದೆಯೆಂದು ಘೋಷಿಸತಕ್ಕದ್ದು.

9. ಪರಿಷತ್ತಿನ ಸಭೆಯ ವೇಳೆ ಮತ್ತು ಸ್ಥಳ ಹಾಗೂ ಸಭೆಗಳಲ್ಲಿನ ಕಾರ್ಯ ವಿಧಾನ.- XX XX

XX XX XX

13. ವೈದ್ಯಕೀಯ ವೃತ್ತಿದಾರರ ನೋಂದಣಿ.- (1) ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 102) ಅನುಸೂಚಿಗಳಲ್ಲಿ ಒಳಗೊಂಡ ಯಾವುವೇ ವೈದ್ಯಕೀಯ ವಿದ್ಯಾರ್ಹತೆಗಳನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯೂ ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗಾಗಿ, ತಾನು ಪಡೆದ ವಿದ್ಯಾರ್ಹತೆಯ ವಿವರಗಳು ಮತ್ತು ಅವುಗಳನ್ನು ಮಂಜೂರು ಮಾಡಿದ ದಿನಾಂಕಗಳನ್ನು ನಮೂದಿಸಿದ ಒಂದು ಅರ್ಜಿಯನ್ನು ತನ್ನ ಡಿಗ್ರಿ, ಡಿಪ್ಲೊಮಾ ಅಥವಾ ಲೈಸನ್ಸ್ ಹಾಗೂ ಹದಿನೈದು ರೂಪಾಯಿಗಳ ಶುಲ್ಕದೊಂದಿಗೆ ರಿಜಿಸ್ಟ್ರಾರರಿಗೆ ಸಲ್ಲಿಸತಕ್ಕದ್ದು. ಅರ್ಜಿದಾರನು ನೋಂದಾಯಿತನಾಗಲು ಹಕ್ಕುಳ್ಳವನೆಂದು ರಿಜಿಸ್ಟ್ರಾರ್‌ರವರಿಗೆ ಮನದಟ್ಟಾದಲ್ಲಿ ರಿಜಿಸ್ಟರಿನಲ್ಲಿ ಆತನ ಹೆಸರನ್ನು ನಮೂದಿಸತಕ್ಕದ್ದು:

ಪರಂತು, ರಿಜಿಸ್ಟ್ರಾರ್ ರವರು, 34ನೇ ಪ್ರಕರಣದ ಮೂಲಕ ನಿರಸನಗೊಳಿಸಲಾದ ಯಾವುದೇ ಅಧಿನಿಯಮಗಳ ಅಡಿಯಲ್ಲಿ ನೋಂದಾಯಿತರಾಗಿದ್ದ ಮತ್ತು ಮೈಸೂರು ಕಾನೂನುಗಳ ಅಳವಡಿಕೆ ಆದೇಶ, 1956ರ ಮೂಲಕ ಅಳವಡಿಸಿಕೊಂಡ ಸದರಿ ನಿರಸಿತ ಅಧಿನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ನಿರ್ವಹಿಸಲಾದ ರಿಜಿಸ್ಟರಿನಲ್ಲಿ ಸೇರಿಸಲಾಗಿದ್ದ ವೃತ್ತಿಗಾರರ ಹೆಸರುಗಳನ್ನು, ಅವರು ಅರ್ಜಿಸಲ್ಲಿಸಿ ಎರಡು ರೂಪಾಯಿಗಳ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ 1898 ರಲ್ಲಿ (1898ರ ಕೇಂದ್ರ ಅಧಿನಿಯಮ V), ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಪರಿಭಾಷಿಸಿದಂತೆ ಒಂದು ಸಂಜ್ಞೇಯ ಅಪರಾಧದ ಬಗ್ಗೆ ಅಪರಾಧ ನಿರ್ಣೀತನಾದ ಅಥವಾ ಕರ್ನಾಟಕ ವೈದ್ಯಕೀಯ ಪರಿಷತ್ತಿನಿಂದ ಅಥವಾ ಭಾರತದ ಇತರ ಯಾವುದೇ ರಾಜ್ಯದ ವೈದ್ಯಕೀಯ ಪರಿಷತ್ತಿನಿಂದ ಯುಕ್ತ ವಿಚಾರಣೆಯ ತರುವಾಯ ವೃತ್ತೀಯ ದೃಷ್ಟಿಕೋನದಿಂದ ಕುಖ್ಯಾತವೆನಿಸುವ ನಡವಳಿಕೆಗಾಗಿ ತಪ್ಪಿತಸ್ಥನಾದ ಯಾವುದೇ ವ್ಯಕ್ತಿಯ ನೋಂದಣಿಯನ್ನು ಅನುಮತಿಸಲು ವೈದ್ಯಕೀಯ ಪರಿಷತ್ತು ನಿರಾಕರಿಸಬಹುದು.

XX XX XX

15. ವೈದ್ಯಕೀಯ ವೃತ್ತಿದಾರರ ಹೆಸರನ್ನು ದುರ್ನಡತೆಗಾಗಿ ರಿಜಿಸ್ಟರಿನಿಂದ ತೆಗೆದು ಹಾಕುವುದು.- (1) ವೈದ್ಯಕೀಯ ವೃತ್ತಿದಾರನು ವೈದ್ಯಕೀಯ ಪರಿಷತ್ತಿನಿಂದ ಯುಕ್ತ ವಿಚಾರಣೆಯ ತರುವಾಯ ಯಾವುದೇ ದುರ್ನಡತೆಯ ತಪ್ಪಿತಸ್ಥನೆಂದು ಕಂಡುಬಂದರೆ ವೈದ್ಯಕೀಯ ಪರಿಷತ್ತು,-

(ಎ) ಅಂಥ ವೈದ್ಯಕೀಯ ವೃತ್ತಿದಾರನಿಗೆ ಒಂದು ಎಚ್ಚರಿಕೆ ಪತ್ರವನ್ನು ಹೊರಡಿಸಬಹುದು;

ಅಥವಾ

(ಬಿ) ಅಂಥ ವೈದ್ಯಕೀಯ ವೃತ್ತಿದಾರನ ಹೆಸರನ್ನು

(i) ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ರಿಜಿಸ್ಟರ್‌ನಿಂದ ತೆಗೆಯಲು ನಿರ್ದೇಶಿಸಬಹುದು, ಅಥವಾ

(ii) ಅಂಥ ತೆಗೆಯುವಿಕೆಯ ಅವಧಿಯನ್ನು ನಿರ್ದಿಷ್ಟಪಡಿಸದೇ ರಿಜಿಸ್ಟರ್‌ನಿಂದ ತೆಗೆಯಲು ನಿರ್ದೇಶಿಸಬಹುದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ "ದುರ್ನಡತೆ" ಯು,-

(ಎ) ನೈತಿಕ ಅಧಃಪತನವನ್ನು ಒಳಗೊಂಡ ಮತ್ತು ದಂಡ ಪ್ರಕ್ರಿಯಾ ಸಂಹಿತೆ 1898 (1898ರ ಕೇಂದ್ರ ಅಧಿನಿಯಮ V) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಪರಿಭಾಷಿಸಿದಂತೆ ಸಂಜ್ಞೇಯವಾದ ಒಂದು ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ವೈದ್ಯ ವೃತ್ತಿದಾರನ ಅಪರಾಧ ನಿರ್ಣಯ;

XX XX XX

18. ವೈದ್ಯಕೀಯ ಪರಿಷತ್ತಿಗೆ ಕಾನೂನು ಸಲಹೆಗಾರ.- (1) ವೈದ್ಯಕೀಯ ಪರಿಷತ್ತಿನ ಮುಂದಿರುವ ವಿಚಾರಣೆಗಳಲ್ಲಿ ಉದ್ಭವಿಸುವ ಎಲ್ಲ ಕಾನೂನಿನ ಪ್ರಶ್ನೆಗಳ ಸಂಬಂಧದಲ್ಲಿ ವೈದ್ಯಕೀಯ ಪರಿಷತ್ತಿಗೆ ಸಲಹೆ ನೀಡುವ ಉದ್ದೇಶಕ್ಕಾಗಿ ಹತ್ತು ವರ್ಷಗಳಿಗಿಂತ ಕಡಿಮೆಯಲ್ಲದಂತೆ ಉಚ್ಚನ್ಯಾಯಾಲಯದ ನ್ಯಾಯವಾದಿಯಾಗಿರುವ ಒಬ್ಬವ್ಯಕ್ತಿಯು, ಅಂಥ ಎಲ್ಲ ವಿಚಾರಣೆಗಳಲ್ಲಿ ವೈದ್ಯಕೀಯ ಪರಿಷತ್ತಿಗೆ ಕಾನೂನು ಸಲಹೆಗಾರನಾಗಿ ಇರತಕ್ಕದ್ದು.

XX XX XX

19. ನೋಂದಣಿಯ ನವೀಕರಣ.- (1) 13ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಪ್ರತಿಯೊಬ್ಬ ವೈದ್ಯಕೀಯ ವೃತ್ತಿದಾರನು ತನ್ನ ಹೆಸರನ್ನು ರಿಜಿಸ್ಟರಿನಲ್ಲಿ ಮುಂದುವರಿಸಲು ಪ್ರತಿವರ್ಷದ ಡಿಸೆಂಬರ್ ಮೂವತ್ತೊಂದರಂದು ಅಥವಾ ಅದಕ್ಕೆ ಮೊದಲು ಎರಡು ರೂಪಾಯಿಗಳ ನವೀಕರಣ ಶುಲ್ಕವನ್ನು ವೈದ್ಯಕೀಯ ಪರಿಷತ್ತಿಗೆ ನೀಡತಕ್ಕದ್ದು.

XX XX XX

23. ಶವಪಂಚನಾಮೆ ಮುಂತಾದವುಗಳಲ್ಲಿ ಸೇವೆ ಸಲ್ಲಿಸುವುದರಿಂದ ವಿನಾಯಿತಿ.- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗತಕ್ಕ ಪ್ರತಿಯೊಬ್ಬ ವ್ಯಕ್ತಿಯು ಆತನು ಹಾಗೆ ಬಯಸಿದಲ್ಲಿ ಯಾವುದೇ ಶವಪಂಚನಾಮೆ ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1898ರ (1898ರ ಕೇಂದ್ರ ಅಧಿನಿಯಮ V) ಅಡಿಯಲ್ಲಿ ಜ್ಯೂರಿ ಸದಸ್ಯನಾಗಿ ಸೇವೆಸಲ್ಲಿಸುವುದರಿಂದ ವಿನಾಯಿತಿಗೊಳಿಸತಕ್ಕದ್ದು.

XX XX XX

26. ವೃತ್ತಿದಾರರ ಪಟ್ಟಿಯ ಪ್ರಕಟಣೆ.- (1) ರಜಿಸ್ಟ್ರಾರನು ಪ್ರತಿವರ್ಷ ಜೂನ್ ಮೂವತ್ತನೇ ದಿನಾಂಕದಂದು ಅಥವಾ ಅದಕ್ಕೂ ಮೊದಲು ಆ ವರ್ಷದ ಜನವರಿ ಒಂದನೇ

ದಿನಾಂಕದಂದು ರಿಜಿಸ್ಟರಿನಲ್ಲಿ ನೋಂದಾಯಿಸಿದ ಎಲ್ಲಾ ವೃತ್ತಿದಾರರ ಸರಿಯಾದ ಹೆಸರು ಮತ್ತು ವಿದ್ಯಾರ್ಹತೆಯ ಪಟ್ಟಿಯನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸತಕ್ಕದ್ದು.

XX XX XX

ಕರ್ನಾಟಕ ವಿಧಾನಸಭೆ

ಹನ್ನೊಂದನೇ ವಿಧಾನಸಭೆ

ಆರನೇ ಅಧಿವೇಶನಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2003

[2003ರ ವಿಧಾನಸಭೆಯ ವಿಧೇಯಕ ಸಂಖ್ಯೆ 5]

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2003 ಎಂದು ಕರೆಯತಕ್ಕದ್ದು.

(2) ಇದು 2002ರ ಸೆಪ್ಟೆಂಬರ್ ಆರನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 46ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 46ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು ಎಂದರೆ:-

"ಪರಂತು, ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2002ರ ಪ್ರಾರಂಭದ ದಿನಾಂಕದಂದು ಹುದ್ದೆಯಲ್ಲಿರುವ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿಯು, ಅವರ ಚುನಾವಣೆಯ ದಿನಾಂಕದಿಂದ ಮೂವತ್ತಮೂರು ತಿಂಗಳುಗಳಾಗಿರತಕ್ಕದ್ದು ಮತ್ತು ಸದರಿ ಅವಧಿಯ ಮುಕ್ತಾಯದ ನಿಕಟಪೂರ್ವದಲ್ಲಿ ಚುನಾಯಿತರಾಗಬೇಕಾದ ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿಯು, ಉಳಿದ ಇಪ್ಪತ್ತೇಳು ತಿಂಗಳುಗಳ ಅವಧಿಯಾಗಿರತಕ್ಕದ್ದು, ಪರಂತು, ಈ ಎರಡೂ ಸಂದರ್ಭಗಳಲ್ಲಿ ಅವರು ಆ ಸಮಯದಲ್ಲಿ ಗ್ರಾಮ ಪಂಚಾಯತಿಯ ಸದಸ್ಯರಾಗಿರುವುದು ನಿಂತುಹೋಗಿರತಕ್ಕದ್ದಲ್ಲ."

3. ಕೆಲವು ಕ್ರಮಗಳ ಮಾನ್ಯೀಕರಣ ಇತ್ಯಾದಿ.- ಮೂಲ ಅಧಿನಿಯಮದ 46ನೇ ಪ್ರಕರಣದ (1)ನೇ ಉಪ ಪ್ರಕರಣದ ಪರಂತುಕದ ಬಲದಿಂದ ಮೂವತ್ತು ತಿಂಗಳುಗಳಿಗೆ

ಮೀರಿದ ಇನ್ನೂ ಮೂರು ತಿಂಗಳ ಅವಧಿಗಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿಯ ವಿಸ್ತರಣೆಯು ಮತ್ತು ಮೂರು ತಿಂಗಳುಗಳ ಆ ಅವಧಿಯಲ್ಲಿ ಅಂಥ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಕೈಗೊಂಡ ಅಥವಾ ಮಾಡಿದ (ಹೊರಡಿಸಿದ ಯಾವುದೇ ಆದೇಶವು ಸೇರಿದಂತೆ) ಯಾವುದೇ ಕ್ರಮ ಅಥವಾ ಕಾರ್ಯವು, ಈ ಅಧಿನಿಯಮದ ಮೂಲಕ ಸೇರಿಸಲಾದ 46ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಉಪಬಂಧಗಳು ಅಂಥ ವಿಸ್ತರಣೆಯು ಪ್ರಚಲಿತವಿದ್ದ ಅಥವಾ ಕ್ರಮ ಅಥವಾ ಕಾರ್ಯವನ್ನು ಕೈಗೊಂಡ ಅಥವಾ ಮಾಡಿದ ಎಲ್ಲ ಸುಸಂಗತ ಕಾಲಗಳಲ್ಲಿ ಜಾರಿಯಲ್ಲಿದ್ದರೆ ಹೇಗೋ ಹಾಗೆ ಸಿಂಧುವಾಗಿವೆ ಮತ್ತು ಪರಿಣಾಮಕಾರಿಯಾಗಿವೆ ಎಂದು ಭಾವಿಸತಕ್ಕದ್ದು.

4. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ, 2002 (2002ರ ಕರ್ನಾಟಕ ಅಧ್ಯಾದೇಶ 6) ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಗ್ರಾಮ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿಯನ್ನು, ಈಗ ಇರುವ ಮೂವತ್ತು ತಿಂಗಳುಗಳನ್ನು ಮೀರಿ ಇನ್ನೂ ಮೂರು ತಿಂಗಳಷ್ಟು ವಿಸ್ತರಿಸುವುದಕ್ಕಾಗಿ ಮತ್ತು ಅದರ ಪರಿಣಾಮವಾಗಿ, ಸದರಿ ಅವಧಿಯ ಮುಕ್ತಾಯಕ್ಕೆ ನಿಕಟಪೂರ್ವದಲ್ಲಿ ಚುನಾಯಿತರಾಗಬೇಕಾದ ಗ್ರಾಮಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿಯನ್ನು, ಉಳಿದ 27 ತಿಂಗಳುಗಳ ಅವಧಿಗೆ ಕಡಿಮೆ ಮಾಡುವುದಕ್ಕಾಗಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ ಮತ್ತು ವಿಷಯವು ತುರ್ತು ಸ್ವರೂಪದ್ದಾದ್ದರಿಂದ, ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ 2002ನ್ನು (2002ರ ಕರ್ನಾಟಕ ಅಧ್ಯಾದೇಶ 6) ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲು ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ಕಾರ್ಯಕಲಾಪ ನಿಯಮಗಳ 80(1)ನೇ ನಿಯಮದ ಮೂಲಕ ಅಗತ್ಯಪಡಿಸಲಾದಂತೆ

ವಿವರಣಾತ್ಮಕ ಹೇಳಿಕೆ

ಗ್ರಾಮ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿಯನ್ನು, ಈಗ ಇರುವ ಮೂವತ್ತು ತಿಂಗಳುಗಳನ್ನು ಮೀರಿ ಇನ್ನೂ ಮೂರು ತಿಂಗಳಷ್ಟು ವಿಸ್ತರಿಸುವುದಕ್ಕಾಗಿ ಮತ್ತು ಅದರ ಪರಿಣಾಮವಾಗಿ, ಸದರಿ ಅವಧಿಯ ಮುಕ್ತಾಯಕ್ಕೆ ನಿಕಟಪೂರ್ವದಲ್ಲಿ ಚುನಾಯಿತರಾಗಬೇಕಾದ ಗ್ರಾಮಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿಯನ್ನು, ಉಳಿದ 27 ತಿಂಗಳುಗಳ ಅವಧಿಗೆ ಕಡಿಮೆ ಮಾಡುವುದಕ್ಕಾಗಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ ಮತ್ತು ವಿಷಯವು ತುರ್ತು ಸ್ವರೂಪದ್ದಾದ್ದರಿಂದ, ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ 2002ನ್ನು (2002ರ ಕರ್ನಾಟಕ ಅಧ್ಯಾದೇಶ 6) ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲು ಈ ವಿಧೇಯಕವನ್ನು ಮಂಡಿಸಲಾಗಿದೆ.

ಎಂ.ವೈ. ಘೋರ್ಪಡೆ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಟಿ. ರಾಜಣ್ಣ
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ, 14)

ಉದ್ಧೃತ ಭಾಗ

XX XX XX

46. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿ ಮತ್ತು ಸೇವಾ ಷರತ್ತುಗಳು.- (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಲಾದುದನ್ನು ಹೊರತುಪಡಿಸಿ, ಗ್ರಾಮ ಪಂಚಾಯತಿಯ ಪ್ರತಿಯೊಬ್ಬ ಅಧ್ಯಕ್ಷ ಮತ್ತು ಪ್ರತಿಯೊಬ್ಬ ಉಪಾಧ್ಯಕ್ಷನ ಹುದ್ದೆಯ ಅವಧಿಯು ಆತನ ಚುನಾವಣೆಯ ದಿನಾಂಕದಿಂದ ಮೂವತ್ತು ತಿಂಗಳುಗಳ ಅಥವಾ ಆತನು ಗ್ರಾಮ ಪಂಚಾಯತಿಯ ಸದಸ್ಯನಾಗಿರುವುದು ನಿಂತು ಹೋಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯಾಗಿರತಕ್ಕದ್ದು.

XX XX XX

ಕರ್ನಾಟಕ ವಿಧಾನಸಭೆ
ಹನ್ನೊಂದನೇ ವಿಧಾನಸಭೆ
ಆರನೇ ಅಧಿವೇಶನ

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2003
(2003ರ ವಿಧಾನಸಭೆಯ ವಿಧೇಯಕ ಸಂಖ್ಯೆ 13)

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ನ್ನು (1975ರ ಕರ್ನಾಟಕ ಅಧಿನಿಯಮ 23) ಈ ಮುಂದಿನ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ಅಧಿನಿಯಮ, 2003 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ರ (1975ರ ಕರ್ನಾಟಕ ಅಧಿನಿಯಮ 23) 2ನೇ ಪ್ರಕರಣದಲ್ಲಿ, "ಒಂದು ತೋಟವನ್ನು" ಎಂಬ ಪದಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಥವಾ ಉದ್ಯಾನವನಗಳಾಗಿ ಅಭಿವೃದ್ಧಿಪಡಿಸಲು ಮತ್ತು ಸಂರಕ್ಷಿಸಲು ರಾಜ್ಯ ಸರ್ಕಾರವು ಮೀಸಲಿಟ್ಟಿರುವ ಕಟ್ಟಡ ಸಹಿತವಾದ ಅಥವಾ ಕಟ್ಟಡರಹಿತವಾದ ಯಾವುದೇ ಭೂಮಿಯನ್ನು"

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಬೆಂಗಳೂರು ನಗರದ ಜನನಿಬಿಡ ಭಾಗದಲ್ಲಿದ್ದ ಕೇಂದ್ರ ಕಾರಾಗೃಹವನ್ನು ಪರಪ್ಪನ ಅಗ್ರಹಾರಕ್ಕೆ ಸ್ಥಳಾಂತರಿಸಲಾಗಿದೆ ಮತ್ತು ನಗರದ ಮಧ್ಯಭಾಗದಲ್ಲಿ ಸ್ವಚ್ಛಗಾಳಿಯನ್ನು ನೀಡುವ ಪ್ರದೇಶಗಳನ್ನು ರಕ್ಷಿಸಿಕೊಂಡುಬರುವ ಉದ್ದೇಶದಿಂದ ಕೇಂದ್ರ ಕಾರಾಗೃಹ ಕಟ್ಟಡ ಮತ್ತು ಭೂಮಿಯನ್ನು ಉದ್ಯಾನವನವನ್ನಾಗಿ ಅಭಿವೃದ್ಧಿಪಡಿಸಿ ಸಂರಕ್ಷಿಸಿಕೊಂಡು ಬರಲು ಮೀಸಲಾಗಿರಿಸಬೇಕೆಂದು ರಾಜ್ಯಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ರ ಉದ್ದೇಶಕ್ಕಾಗಿ ಕೇಂದ್ರ ಕಾರಾಗೃಹದ ಆವರಣಗಳನ್ನು ಉದ್ಯಾನವನವೆಂದು ಅಧಿಸೂಚಿಸಲು ರಾಜ್ಯಸರ್ಕಾರಕ್ಕೆ ಅಧಿಕಾರ ನೀಡುವುದಕ್ಕಾಗಿ ಸದರಿ ಅಧಿನಿಯಮದ 2ನೇ ಪ್ರಕರಣದಲ್ಲಿ ಕಂಡುಬರುವ "ಉದ್ಯಾನವನ" ಎಂಬ ಪದದ ಪರಿಭಾಷೆಯನ್ನು ತಿದ್ದುಪಡಿ ಮಾಡುವುದು ಆವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ಆರ್ಥಿಕ ವೆಚ್ಚ ತಗಲುವುದಿಲ್ಲ.

ಎಂ. ಶಿವಣ್ಣ
ತೋಟಗಾರಿಕೆ ಸಚಿವರು

ಟಿ. ರಾಜಣ್ಣ
ಕಾರ್ಯದರ್ಶಿ

ಕರ್ನಾಟಕ ವಿಧಾನಸಭೆ
ಹನ್ನೊಂದನೇ ವಿಧಾನಸಭೆ
ಆರನೇ ಅಧಿವೇಶನ
ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 2003
(2003ರ ವಿಧಾನಸಭೆಯ ವಿಧೇಯಕ ಸಂಖ್ಯೆ 4)

ಕರ್ನಾಟಕ ಅಬ್ಕಾರಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಅಬ್ಕಾರಿ ಅಧಿನಿಯಮ, 1965ನ್ನು (1966ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಅಬ್ಕಾರಿ (ತಿದ್ದುಪಡಿ) ಅಧಿನಿಯಮ, 2003 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಅಬ್ಕಾರಿ ಅಧಿನಿಯಮ, 1965ರ (1966ರ ಕರ್ನಾಟಕ ಅಧಿನಿಯಮ 21) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (11ಎ) ಖಂಡದಲ್ಲಿ "ಮದ್ಯದ ಅಂಶವಿರುವ ಮತ್ತು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

3. 43ಎ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 43ಎ ಪ್ರಕರಣದಲ್ಲಿ (2)ನೇ ಉಪ ಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಪ್ರಾಧಿಕೃತ ಅಧಿಕಾರಿಯು, (1)ನೇ ಉಪಪ್ರಕರಣದ ಅಡಿಯಲ್ಲಿ ವಶಪಡಿಸಿಕೊಂಡ ಸ್ವತ್ತಿನ ಸಂಬಂಧದಲ್ಲಿ ವ್ಯವಹರಣೆಗಳ ಅಂತಿಮ ವಿಲೆಯು ಇತ್ಯರ್ಥದಲ್ಲಿರುವಾಗ ಮತ್ತು ಈ ಪ್ರಕರಣ ಮತ್ತು 43ಬಿ ಮತ್ತು 43ಜಿ ಪ್ರಕರಣಗಳಿಗೊಳಪಟ್ಟು ಪ್ರಾಧಿಕೃತ ಅಧಿಕಾರಿಯು

ಅಂದಾಜು ಮಾಡಿದ ಮೌಲ್ಯಕ್ಕೆ ಸಮನಾದ ಮೊತ್ತಕ್ಕೆ ಒಂದು ಅನುಸೂಚಿತ ಬ್ಯಾಂಕಿನಿಂದ ನೀಡಲಾದ (ಅಂಥ ವ್ಯವಹರಣೆಯು ಅಂತಿಮವಾಗಿ ವಿಲೆಯಾಗುವವರೆಗೆ ಕಾಲಕಾಲಕ್ಕೆ ನವೀಕರಿಸತಕ್ಕ) ಬ್ಯಾಂಕ್ ಖಾತರಿಯನ್ನು ಹಾಜರು ಪಡಿಸಿದ ಮೇಲೆ ಮತ್ತು ಹಾಗೆ ಬಿಡುಗಡೆ ಮಾಡಿದ ಸ್ವತ್ತನ್ನು ಅಥವಾ ಸಂದರ್ಭಾನುಸಾರ ಅಬ್ಕಾರಿ ಶುಲ್ಕಕ್ಕೆ ಗುರಿಯಾಗತಕ್ಕ ವಸ್ತುಗಳನ್ನು ಹಾಜರುಪಡಿಸುವುದಕ್ಕಾಗಿ ಅದರ ಮಾಲೀಕನು, ಒಂದು ಬಂಧಪತ್ರವನ್ನು ಬರೆದುಕೊಡಬೇಕೆಂದು ಅಗತ್ಯಪಡಿಸಿದಾಗಲೆಲ್ಲ, ಪ್ರಾಧಿಕೃತ ಅಧಿಕಾರಿಯ ಮುಂದೆ ಅದನ್ನು ಬರೆದುಕೊಟ್ಟ ಮೇಲೆ,-

(i) ಅಬ್ಕಾರಿ ಶುಲ್ಕಕ್ಕೆ ಗುರಿಯಾಗತಕ್ಕ ವಸ್ತುಗಳ ಹೊರತಾಗಿ ವಶಪಡಿಸಿಕೊಂಡ ಸ್ವತ್ತನ್ನು, ಅಂಥ ಸ್ವತ್ತಿನ ಮಾಲೀಕನಿಗೆ ಬಿಡುಗಡೆ ಮಾಡಬಹುದು;

(ii) ಮಾಲೀಕನು ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಒಂದು ಲೈಸೆನ್ಸನ್ನು ಹೊಂದಿದ್ದರೆ, ವಶಪಡಿಸಿ ಕೊಂಡ ಅಬ್ಕಾರಿ ಶುಲ್ಕಕ್ಕೆ ಗುರಿಯಾಗತಕ್ಕ ವಸ್ತುಗಳನ್ನು ಬಿಡುಗಡೆ ಮಾಡಬಹುದು.

4. ಹೊಸ 45ಬಿ ಪ್ರಕರಣದ ಸೇರ್ಪಡೆ.- ಮೂಲ ಅಧಿನಿಯಮದ 45ಎ ಪ್ರಕರಣದ ತರುವಾಯ, ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"45ಬಿ. ಲೈಸೆನ್ಸಿನ ರದ್ದಿಯಾತಿ ಅಥವಾ ಅಮಾನತ್ತಿನ ಬದಲು ಹಣವನ್ನು ಸ್ವೀಕರಿಸಲು ಅಥವಾ ದಂಡವಿಧಿಸಲು ವಿಶೇಷ ಉಪಬಂಧ.- (1) 45ನೇ ಪ್ರಕರಣದಲ್ಲಿ ಅಥವಾ 45ಎ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಒಬ್ಬ ಲೈಸೆನ್ಸ್‌ದಾರಕನು ಅಥವಾ ಅಂಥ ಧಾರಕನ ನೌಕರನು, ಲೈಸೆನ್ಸಿನ ಷರತ್ತುಗಳ ಪೈಕಿ ಯಾವುದೇ ಷರತ್ತನ್ನು ಅಥವಾ ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮವನ್ನು ಮತ್ತು ಯಾವುದರ ಉಲ್ಲಂಘನೆಯಿಂದ ಲೈಸೆನ್ಸು ರದ್ದಾಗುತ್ತದೆಯೋ ಅಥವಾ ಅಮಾನತುಗೊಳ್ಳುತ್ತದೆಯೋ ಅದನ್ನು ಉಲ್ಲಂಘಿಸಿದಲ್ಲಿ, ಅಬ್ಕಾರಿ ಆಯುಕ್ತ, ಉಪ ಆಯುಕ್ತ ಅಥವಾ ಈ ಸಂಬಂಧದಲ್ಲಿ ವಿಶೇಷವಾಗಿ ಅಧಿಕಾರಪಡೆದ ಯಾವೊಬ್ಬ ಅಬ್ಕಾರಿ ಅಧಿಕಾರಿಯು, ಅಂಥ ರದ್ದಿಯಾತಿ ಅಥವಾ ಅಮಾನತ್ತಿನ ಬದಲು, ಅಂಥ ನಿಯಮದಲ್ಲಿ ಅಥವಾ ಲೈಸೆನ್ಸಿನ ಷರತ್ತುಗಳಲ್ಲಿ ಉಪಬಂಧಿಸಲಾದ ಮೊಬಲಗು ಅಥವಾ ದಂಡವನ್ನು ಮೀರದಂತೆ,

(i) ಅಂಥ ಧಾರಕನು ಅರ್ಜಿಯನ್ನು ಸಲ್ಲಿಸಿದ ಮೇಲೆ, ಹಣದ ಮೊತ್ತವನ್ನು ಸ್ವೀಕರಿಸಬಹುದು; ಮತ್ತು

(ii) ಇತರ ಸಂದರ್ಭಗಳಲ್ಲಿ ದಂಡ ವಿಧಿಸಬಹುದು.

ಪರಂತು, ಅಂಥ ಲೈಸೆನ್ಸ್‌ಧಾರಕನಿಗೆ, ಯಾವ ಕಾರಣಗಳ ಮೇಲೆ ದಂಡ ವಿಧಿಸಲು ಪ್ರಸ್ತಾಪಿಸಲಾಗಿದೆಯೋ ಆ ಕಾರಣಗಳ ಬಗ್ಗೆ ಲಿಖಿತ ನೋಟೀಸನ್ನು ನೀಡಿದ ಮತ್ತು ಈ ವಿಷಯದಲ್ಲಿ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು, ಈ ಪ್ರಕರಣದ ಅಡಿಯಲ್ಲಿ ದಂಡ ವಿಧಿಸುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ;

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಯಾರಿಂದ ಯಾವುದೇ ಹಣದ ಮೊತ್ತವನ್ನು ಸ್ವೀಕರಿಸಲಾಗಿದೆಯೋ ಅಥವಾ ಯಾರ ಮೇಲೆ ದಂಡ ವಿಧಿಸಲಾಗಿದೆಯೋ ಆ ಯಾವನೇ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧಕ್ಕಾಗಿ ಅವೇ ಸಂಗತಿಗಳ ಸಂಬಂಧದಲ್ಲಿ ಪ್ರಾಸಿಕ್ಯೂಷನ್ನಿಗೆ ಗುರಿಯಾಗತಕ್ಕದ್ದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ ಕರ್ನಾಟಕ ಅಬ್ಕಾರಿ ಅಧಿನಿಯಮ, 1965ನ್ನು ತಿದ್ದುಪಡಿ ಮಾಡುವುದು ಆವಶ್ಯಕವೆಂದು ಪರಿಗಣಿಸಲಾಗಿದೆ,-

(i) ಅಬ್ಕಾರಿ ಮರ ಎಂಬುದರ ಪರಿಭಾಷೆಯಲ್ಲಿ ಬರುವ "ಮದ್ಯದ ಅಂಶವಿರುವ ಮತ್ತು" ಎಂಬ ಪದಗಳನ್ನು ಬಿಟ್ಟುಬಿಡುವ ಮೂಲಕ "ಹೆಂಡ" ಮತ್ತು "ಅಬ್ಕಾರಿಮರ" ಎಂಬ ಪದಗಳ ಪರಿಭಾಷೆಯಲ್ಲಿನ ಸಂದಿಗ್ಧತೆಯನ್ನು ನಿವಾರಿಸುವುದು;

(ii) ವಶಪಡಿಸಿಕೊಂಡ ಸ್ವತ್ತಿನ ಮೌಲ್ಯಕ್ಕೆ ಸಮನಾದ ಮೊತ್ತಕ್ಕೆ ಬ್ಯಾಂಕ್ ಖಾತರಿಯನ್ನು ಹಾಜರುಪಡಿಸಿದ ಮೇಲೆ ಅಂಥ ಸ್ವತ್ತಿನ ಮಾಲೀಕರಿಗೆ, 43ಎ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ವಶಪಡಿಸಿ ಕೊಳ್ಳಲಾದ ಸ್ವತ್ತಿನ ಮಧ್ಯಂತರ ಅಭಿರಕ್ಷೆಯನ್ನು ನೀಡಲು ಉಪಬಂಧ ಕಲ್ಪಿಸುವುದು;

(iii) ಲೈಸೆನ್ಸಿನ ಷರತ್ತುಗಳ ಅಥವಾ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಉಲ್ಲಂಘನೆಗಾಗಿ, ಲೈಸೆನ್ಸಿನ ರದ್ದಿಯಾತಿ ಅಥವಾ ಅಮಾನತ್ತಿನ ಬದಲು ಹಣವನ್ನು ಸ್ವೀಕರಿಸುವುದಕ್ಕೆ ಅಥವಾ ದಂಡವನ್ನು ವಿಧಿಸುವುದಕ್ಕೆ ಉಪಬಂಧಕಲ್ಪಿಸುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಎಸ್.ಎಂ. ಕೃಷ್ಣ
ಮುಖ್ಯಮಂತ್ರಿ

ಟಿ. ರಾಜಣ್ಣ
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ಅಬ್ಕಾರಿ ಅಧಿನಿಯಮ, 1965ರ (1966ರ ಕರ್ನಾಟಕ ಅಧಿನಿಯಮ 21)

ಉದ್ಧೃತ ಭಾಗ

XX XX XX

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ವಿರದಿದ್ದರೆ,-

(1) XX XX XX

(11ಎ) "ಅಬ್ಕಾರಿ ಮರ" ಎಂಬುದು ಅದರ ಹುಳಿಯೊಡೆದ ಅಥವಾ ಹುಳಿಯೊಡೆಯದ ರಸದಲ್ಲಿ ಮದ್ಯದ ಅಂಶವಿರುವ ಮತ್ತು ಅದರಿಂದ ಹೆಂಡ ಅಥವಾ ಇತರ ಯಾವುದೇ ಮದ್ಯವನ್ನು ತಯಾರಿಸಬಹುದಾದ ಗುಲ್ಮೋಹವಾ, ತೆಂಗು, ತಾಳೆ, ಈಚಲು, ಖರ್ಜೂರ, ಬಗನಿ ಅಥವಾ ದೊಡ್ಡ ಸಾಲಮರ ಅಥವಾ ಯಾವುದೇ ಇತರ ಮರ;

XX XX XX

ಕರ್ನಾಟಕ ವಿಧಾನ ಸಭೆ

ಶುಕ್ರವಾರ 1ನೇ ಆಗಸ್ಟ್ 2003 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-40 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ. ವಿ. ವೆಂಕಟಪ್ಪ) ರವರು

ಪೀಠವನ್ನು ಅಲಂಕರಿಸಿದ್ದರು

1. ಸಂತಾಪ ಸೂಚನೆ :

ಪ್ರೊ : ಕೀರ್ತಿನಾಥ್ ಕುರ್ತಕೋಟಿಯವರ ನಿಧನದ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಕೊಪ್ಪಳದಲ್ಲಿ ರೈತ ಕುಟುಂಬವೊಂದರ ಆರು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆ ಬಗ್ಗೆ...

ಅಧ್ಯಕ್ಷರು : ಈ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಮೊದಲು ಸಂತಾಪ ಸೂಚನೆ ಇದೆ ಅದನ್ನು ಮೊದಲು ಮುಗಿಸಿಬಿಡೋಣ.

ಶ್ರೀ ಜಗದೀಶ್ ಶೆಟ್ಟರ್ : ಸಂತಾಪ ಸೂಚಕ ನಿರ್ಣಯ ಆದ ಮೇಲೆ ಚರ್ಚೆಗೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು : ನೋಡೋಣ Let us see ಈಗ ಸಂತಾಪ ಸೂಚನೆ.

ಕನ್ನಡ ಸಾರಸ್ವತಲೋಕದ ದಿಗ್ಗಜರಲ್ಲಿ ಒಬ್ಬರಾಗಿದ್ದ ಪ್ರೊ: ಕೀರ್ತಿನಾಥ ಕುರ್ತಕೋಟಿಯವರು ಇಂದು ದಿನಾಂಕ 31.07.2003 ರಂದು ತಮ್ಮ ಪತ್ನಿ ಸರಸ್ವತಿಯವರ ನಿಧನದ ಆಘಾತವನ್ನು ತಡೆಯಲಾರದೆ ಹೃದಯಾಘಾತದಿಂದ ನಿಧನರಾಗಿದ್ದು ಇವರ ನಿಧನದಿಂದ ಕನ್ನಡ ಸಾರಸ್ವತಲೋಕ ಒಬ್ಬ ಉತ್ತಮ ವಿಮರ್ಶಕ, ಪಂಚಭಾಷಾತಜ್ಞ, ಸಾಹಿತಿ, ಅಂಕಣಕಾರ ಹಾಗೂ ಗೀತಾ ನಾಟಕಕಾರನನ್ನು ಕಳೆದುಕೊಂಡಂತಾಗಿದೆ ಎಂದು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀಯುತರು ದಿನಾಂಕ 13.10.1928 ರಂದು ಜನಿಸಿ ಗದಗಿನಲ್ಲಿ ಹೈಸ್ಕೂಲ್, ಧಾರವಾಡದ ಕೆ.ಇ. ಬೋರ್ಡ್ ಮತ್ತು ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗ ಮುಗಿಸಿ, 1950 ರಿಂದ ಗದಗಿನ ವಿ.ಸ. ಹೈಸ್ಕೂಲಿನಲ್ಲಿ ಶಿಕ್ಷಕ ವೃತ್ತಿಯನ್ನು ಆರಂಭಿಸಿದ ಅವರು ಇಂಗ್ಲೀಷಿನಲ್ಲಿ ಎಂ.ಎ. ಪದವಿ ಪಡೆದು ಪುಣೆಯ ಪರಶುರಾಮಭಾವು ಕಾಲೇಜಿನಲ್ಲಿ ಅಧ್ಯಾಪಕರಾಗಿ ನಂತರ ಗುಜರಾತ್‌ನ ಆನಂದದಲ್ಲಿ ಸರದಾರ ವಲ್ಲಭಭಾಯಿ ಪಟೇಲ್ ವಿಶ್ವವಿದ್ಯಾಲಯದ ಇಂಗ್ಲೀಷ್ ಪ್ರಾಧ್ಯಾಪಕರಾಗಿ ದುಡಿದು 1989 ರಲ್ಲಿ ನಿವೃತ್ತರಾದರು. ಧಾರವಾಡದ ಮನೋಹರ ಗ್ರಂಥಮಾಲೆಯ ಸೂತ್ರಧಾರರಾಗಿ ಹಾಗೂ "ಜ್ಞಾನಪೀಠ ಪ್ರಶಸ್ತಿ" ಪ್ರಾದೇಶಿಕ (ಕನ್ನಡ) ಸಮಿತಿ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀಯುತರು ಕರ್ನಾಟಕ ಸಾಂಸ್ಕೃತಿಕ ಜಗತ್ತಿಗೆ ನೀಡಿದ ಕೊಡುಗೆ ಅಪಾರ. ಶ್ರೀಯುತ ಕೀರ್ತಿನಾಥ ಕುರ್ತಕೋಟಿಯವರು ಸಮಕಾಲೀನ ಕನ್ನಡ ಸಾಹಿತ್ಯ ವಿಮರ್ಶೆಯ ವಿನಯವಂತ ಧ್ವನಿಯಾಗಿದ್ದವರು.

ಶ್ರೀಯುತರು ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿಯು ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

ಶ್ರೀಯುತರು, ಅವರ ಬಾಳ ಸಂಗಾತಿ ಶ್ರೀಮತಿ ಸರಸ್ವತಿ ಅವರೊಂದಿಗೆ ತಾಸುಗಳ ಅಂತರದಲ್ಲಿ, ಇಹಲೋಕ ತ್ಯಜಿಸಿದ್ದು ಒಂದು ಅಪರೂಪದ ಸಂಗತಿ.

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನನ್ನ ಸಮರ್ಥನೆಯನ್ನು ಮಾಡುತ್ತೇನೆ. ಶ್ರೀ ಕೀರ್ತಿನಾಥ ಕುರ್ತಕೋಟಿಯವರನ್ನು ಅರಿಯದ ಕನ್ನಡ ನಾಡಿನ ಜನರೇ ಇಲ್ಲ. ಸಾರಸ್ವತ ಲೋಕಕ್ಕೆ ಅವರು ಸಲ್ಲಿಸಿದಂಥ ಸೇವೆ ಸ್ಮರಣೀಯವಾದುದು; ಮತ್ತು ದೀರ್ಘ ಕಾಲ ನೆನಪಿನಲ್ಲಿ ಉಳಿಯತಕ್ಕಂಥದ್ದು ಆಗಿದೆ. ಇಂಥ ಒಬ್ಬ ಹಿರಿಯ ಸಾಹಿತಿ ಕುರ್ತಕೋಟಿಯವರು ಒಂದು ದೃಷ್ಟಿಯಿಂದ ಅವರು ಜ್ಞಾನ ನಿಧಿ. ತಮ್ಮ ಅಮೂಲ್ಯವಾದ ಕೊಡುಗೆಯಿಂದ ಕನ್ನಡ ನಾಡಿನಷ್ಟೇ ಪರಿಚಿತರಲ್ಲ, ಅವರು ಇಂಗ್ಲೀಷ್ ಸಾಹಿತ್ಯದಲ್ಲೂ ಕೈ ಆಡಿಸಿದಂಥವರು. ಬಹುಶಃ ವಿಶೇಷ ಏನು ಎಂದರೆ ಅವರು ಮತ್ತು ಅವರ ಬಾಳ ಸಂಗಾತಿ ಕೆಲವೇ ಗಂಟೆಗಳಲ್ಲಿ ಒಬ್ಬರನ್ನೊಬ್ಬರು ಅಗಲಿರುವುದು ಏನು ತೋರಿಸುತ್ತದೆಂದರೆ ಅವರಿಬ್ಬರಲ್ಲಿ ಎಷ್ಟು ಸ್ನೇಹ ಇತ್ತು ಎನ್ನುವುದಕ್ಕೆ ಇದೊಂದು ಜ್ವಲಂತ ಸಾಕ್ಷಿಯಾಗಿದೆ. ಕೆಲವೇ ಗಂಟೆಗಳಲ್ಲಿ ಇಬ್ಬರೂ ಮೃತರಾಗಿ ಒಂದು ಹೊಸ ಇತಿಹಾಸವನ್ನೇ ಬರೆದಿದ್ದಾರೇನೋ ಎಂದೆನಿಸುತ್ತದೆ. ಗಂಡು ಹೆಣ್ಣಿನ ಸಂಬಂಧ ಕೇವಲ ದೈಹಿಕ ಸಂಬಂಧವಲ್ಲ. ನಾವೆಲ್ಲರೂ ತಿಳಿದಿರುವ ಹಾಗೆ Hindu marriage is not a contract ಅದೊಂದು ಸಂಸ್ಕಾರ. ಆ ಸಂಸ್ಕಾರ ಸಾವಿನೊಂದಿಗೆ ಪರಿಸಮಾಪ್ತಿ ಆಗುವುದಿಲ್ಲ. ಇದು ಶಾಶ್ವತವಾದುದು ಎಂಬ ನಮ್ಮ ಕಲ್ಪನೆಗಳೇನಿವೆ ಅದಕ್ಕೆ ಪೂರಕವಾದಂಥ ಮತ್ತು ವಿಶೇಷವಾಗಿ ನಾವೆಲ್ಲರೂ ಗಮನದಲ್ಲಿಡಬಹುದಾದಂಥ, ಬಹುಶಃ ಎಲ್ಲರೂ ನೆನಪಿನಲ್ಲಿ ಇಡಬೇಕಾದಂಥ ವಿಶೇಷ ಸಂಗತಿ. ಇಂಥ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡು ಕನ್ನಡದ ಸಾರಸ್ವತ ಲೋಕ ಬಡವಾಗಿದೆ. ರಾಜ್ಯದ ಜನ ತಮ್ಮ ನಮನಗಳನ್ನು ಸಮರ್ಪಣೆ ಮಾಡಿದ್ದಾರೆ. ಜನಪ್ರತಿನಿಧಿಗಳಾದ ನಾವು ಈ ಶಾಸನಸಭೆಯ ಮೂಲಕ ಅವರ ಸಂಬಂಧಪಟ್ಟವರಿಗೆ ನಮ್ಮ ಸಂತಾಪ ಸೂಚನೆಯನ್ನು ಕಳುಹಿಸುವುದರ ಜೊತೆಗೆ ನಾವೆಲ್ಲರೂ ಕೂಡ ಅವರಿಗೆ ಸಂಬಂಧ ಪಟ್ಟವರೇ, ಸಂಬಂಧಿಕರೇ, ನಾವೆಲ್ಲಾ ಅವರ ಅನುಯಾಯಿಗಳೇ, ನಾವೆಲ್ಲರೂ ಅವರ ಸಾರತ್ವತ ಲೋಕಕ್ಕೆ ಕೊಟ್ಟ ಕೊಡುಗೆಯನ್ನು ಹಂಚಿ ಉಂಡವರೇ. ಹೀಗಾಗಿ ತಾವು ಸೂಚಿಸಿದ ಸಂತಾಪ ಸೂಚನೆಗೆ ಅನಿಮೋದನೆಯನ್ನು ಕೋರುತ್ತಾ ಅವರ ಆತ್ಮಕ್ಕೆ ದಯಾಮಯನಾದ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಮತ್ತು ಸಾರಸ್ವತ ಲೋಕಕ್ಕೆ ಇವರ ಸಾವಿನಿಂದ ಆಗಿರತಕ್ಕಂಥ ನೋವನ್ನು ಸಹಿಸುವ ಸಾಮರ್ಥ್ಯವನ್ನು ಕರುಣಿಸಲಿ ಎಂದು ಹೇಳಿ ಪ್ರಾರ್ಥನೆ ಮಾಡಿ ನನ್ನ ಧ್ವನಿಗೂಡಿಸುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಕೀರ್ತಿನಾಥ ಕುರ್ತಕೋಟಿಯವರು ಕನ್ನಡ ಸಾಹಿತ್ಯ ರಂಗದ ದಿಗ್ಗಜರಲ್ಲಿ ಒಬ್ಬರು. ಧಾರವಾಡದ ನೆಲವು ಇಡೀ ರಾಜ್ಯಕ್ಕೆ, ಇಡೀ ರಾಷ್ಟ್ರಕ್ಕೆ ಅನೇಕ ಸಾಹಿತಿಗಳನ್ನು , ಕವಿಗಳನ್ನು ಪರಿಚಯಿಸಿ ದೊಡ್ಡದಾದ ಕೊಡುಗೆಯನ್ನೇ ಕೊಟ್ಟಿದೆ. ಮಾನ್ಯ ಕೀರ್ತಿನಾಥ ಕುರ್ತಕೋಟಿಯವರು ಧಾರವಾಡವನ್ನು ತಮ್ಮ ಕರ್ಮಭೂಮಿಯನ್ನಾಗಿ ಮಾಡಿಕೊಂಡು ಹಲವಾರು ಸಾಹಿತ್ಯಗಳನ್ನು ರಚನೆ ಮಾಡಿದರು. ಅವರು ಸಾಹಿತ್ಯಾತ್ಮಕವಾಗಿ ಪರಿಚಯವಾಗಿದ್ದಲ್ಲದೇ ಹೆಚ್ಚು ಪರಿಚಯಾತ್ಮಕವಾಗಿದ್ದು ಅವರ ವಿಮಾರ್ಶಾತ್ಮಕ ಲೇಖನಗಳಿಂದ ಯಾವುದೇ ಒಂದು ಸಾಹಿತ್ಯದ ಬಗ್ಗೆ ಅವರ ವಿಮರ್ಶಾತ್ಮಕ ಲೇಖನಗಳು ಏನು

ಇರುತ್ತಿತ್ತೋ ಅದಕ್ಕೆ ಬಹಳ ಮೌಲ್ಯವಿತ್ತು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರು ಯಾವ ರೀತಿಯಲ್ಲಿ ವಿಮರ್ಶಾತ್ಮಕವಾದಂಥ ವಿಚಾರಗಳನ್ನು ಹೇಳುತ್ತಾರೆ ಅದಕ್ಕೆ ಸಾಹಿತ್ಯರಂಗದಲ್ಲಿ ಎಲ್ಲಾ ಸಾಹಿತಿಗಳು ಹೆಚ್ಚು ಬೆಲೆಯನ್ನು ಕೊಡುತ್ತಿದ್ದರು ಎಂಬುದು ಬಹಳ ಮುಖ್ಯವಾದಂಥದ್ದು. ಹೀಗಾಗಿ ವಿಮರ್ಶಾತ್ಮಕ ಲೇಖನಗಳ ರಂಗದಲ್ಲಿ ಮಾನ್ಯ ಕೀರ್ತಿನಾಥ ಕುರ್ತಕೋಟಿಯವರ ಕೊಡುಗೆ ಬಹಳ ಅಪಾರವಾದುದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನು ಅವರ ದಾಂಪತ್ಯ ಜೀವನದಲ್ಲಿ ದಂಪತಿಗಳಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ ಯಾವ ರೀತಿಯಲ್ಲಿ ಇತ್ತು ಎನ್ನುವಂಥದ್ದು ಅವರ ಮರಣದಲ್ಲಿಯೇ ನಾವು ನೋಡುತ್ತಿದ್ದೇವೆ. ಅವರ ಧರ್ಮಪತ್ನಿಯವರು ಅನಾರೋಗ್ಯದಿಂದಾಗಿ ಆಸ್ಪತ್ರೆಯನ್ನು ಸೇರಿದ್ದಾರೆ. ಆಸ್ಪತ್ರೆಯಲ್ಲಿ ಅವರ ಪತ್ನಿ ಮರಣ ಹೊಂದಿರುವ ಸುದ್ಧಿ ಕುರ್ತಕೋಟಿಯವರಿಗೆ ತಿಳಿಯುವ ಮುಂಚೆಯೇ, ಬಹುಶಃ ಅದೇನೋ ಒಂದು ಆತ್ಮ ಸಂಬಂಧ ಎಂದು ನಾವು ಏನು ಹಿಂದೂ ಧರ್ಮದಲ್ಲಿ ಹೇಳುತ್ತೇವೆಯೋ, ಆ ರೀತಿಯಲ್ಲಿ ಅವರು ಆಸ್ಪತ್ರೆಯಲ್ಲಿ ಇದ್ದಾರೆ, ಪತ್ನಿಯ ಮರಣದ ಸುದ್ಧಿ ತಿಳಿಯುವುದಕ್ಕಿಂತ ಮುಂಚೆಯೇ ಇವರೂ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ ಎಂದರೆ ಆ ದಂಪತಿಗಳಲ್ಲಿ ಯಾವ ರೀತಿಯಾದಂಥ ಪ್ರೀತಿ, ವಿಶ್ವಾಸವಿತ್ತು ಎನ್ನುವಂಥದ್ದು ತಿಳಿಯುತ್ತದೆ. ಅದೊಂದು ದ್ಯೋತಕ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹುಶ: ನನಗೆ ನೆನಪಿನಲ್ಲಿರುವ ಹಾಗೆ ಖ್ಯಾತ ಸಂಶೋಧಕರಾದ ಶಂ.ಭಾ. ಜೋಶಿಯವರೂ ಕೂಡ ತಮ್ಮ ಪತ್ನಿಯನ್ನು ಅಗಲಿದಾಗ ಅದೇ ದಿನವೇ ಪತ್ನಿಯೂ ಕೂಡ ಮರಣವನ್ನಪ್ಪಿ ಒಂದೇ ದಿನ ದಂಪತಿಗಳಿಬ್ಬರೂ ನಿಧನ ಹೊಂದಿದ್ದರು ಎಂಬುದನ್ನು ನಾವು ನೋಡಿದ್ದೇವೆ. ಶಂ.ಭಾ ಜೋಶಿಯವರೂ ಕೂಡ ಧಾರವಾಡದಲ್ಲಿದ್ದಂಥವರಾಗಿದ್ದರು. ಕುರ್ತಕೋಟಿಯವರು ಕೂಡ ಧಾರವಾಡದವರು. ಮಾನ್ಯ ಕೀರ್ತಿನಾಥ ಕುರ್ತಕೋಟಿಯವರ ನಿಧನದಿಂದಾಗಿ ಸಾಹಿತ್ಯ ರಂಗಕ್ಕೆ ತುಂಬಲಾರದ ನಷ್ಟವಾಗಿ ಸಾಹಿತ್ಯ ರಂಗ ಬಡವಾಗಿದೆ. ಅದರಲ್ಲೂ ವಿಮರ್ಶಾತ್ಮಕ ಲೇಖನಗಳ ರಂಗಕ್ಕೆ ದೊಡ್ಡದಾದ ಕೊರತೆಯೇ ಉಂಟಾಗಿದೆ. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಮಾನ್ಯ ಕೀರ್ತಿನಾಥ್ ಕುರ್ತಕೋಟಿಯವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯಿಂದ ಏನೊಂದು ದುಃಖ ಉಂಟಾಗಿದೆ ಆ ದುಃಖವನ್ನು ಭರಿಸುವಂಥ ಶಕ್ತಿಯನ್ನು ದೇವರು ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ **ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ನೀರಾವರಿ ಸಚಿವರು)** : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕೀರ್ತಿನಾಥ ಕುರ್ತಕೋಟಿಯವರು ನಮ್ಮ ಗ್ರಾಮದ ಹತ್ತಿರದ ಗ್ರಾಮದವರು. ಕುರ್ತಕೋಟಿ ಗ್ರಾಮದವರು. ನಾವು ಒಂದು ರೀತಿಯಲ್ಲಿ ಅವರನ್ನು ರೈತರು ಎಂದರೂ ಅಡ್ಡಿಯಿಲ್ಲ. ಅವರು ಅತ್ಯಂತ ಸುಸಂಸ್ಕೃತ ಮನೆತನದಿಂದ ಬಂದಿರತಕ್ಕಂಥವರು, ನಿಜವಾದ ಅರ್ಥದಲ್ಲಿ ಅವರು ಕನ್ನಡ ನಾಡಿಗೆ ಕೀರ್ತಿಯಾಗಿದ್ದರು ಅವರು ಅತ್ಯಂತ ವಿಮರ್ಶಕರು ಆಗಿದ್ದರು. ವಿಮರ್ಶಕರ ಸಾಲಿನಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಸಾರಸ್ವತ ಲೋಕದಲ್ಲಿ ನೋಡಿದಾಗ ಕೀರ್ತಿನಾಥ ಕುರ್ತಕೋಟಿಯವರು ಯಾವುದೇ ಭಾಷೆಯ ವಿಮರ್ಶಕರಿಗೆ ಯಾರಿಗೂ ಎರಡನೆಯವರಲ್ಲ. ಆದುದರಿಂದ ಹಲವಾರು ಸಂದರ್ಭದಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ಕೊಡತಕ್ಕಂಥ ಸಂದರ್ಭದಲ್ಲಿ ಯಾವ ಸಂದರ್ಭದಲ್ಲಿ ನಿರ್ಣಯ ಮಾಡುವುದು ಕಠಿಣವೆನಿಸಿದಾಗ ಅವರನ್ನು ಜ್ಞಾನಪೀಠ ಪ್ರಶಸ್ತಿ ಕೊಡಮಾಡಬೇಕಾಗಿರತಕ್ಕಂಥ

ಸಮಿತಿಯವರು ನೆನಪಿಸಿಕೊಳ್ಳುತ್ತಿದ್ದರು. ಒಂದು ಉದಾಹರಣೆಯನ್ನು ಇಲ್ಲಿ ಹೇಳುವುದಾದರೆ ಜ್ಞಾನಪೀಠ ಪ್ರಶಸ್ತಿಯನ್ನು ಗುಜರಾತಿನ 'ಮುನ್ಷಿಯವರ ತಪಸ್ವಿನಿ' ಗೆ ಕೊಡಬೇಕೋ ಅಥವಾ ಮರಾಠಿಯ ಖಾಂಡೇಕರ ಅವರ 'ಯಾಯತಿ' ಗೆ ಕೊಡಬೇಕೋ ಎನ್ನುವ ಸಂದಿಗ್ಧ ಪರಿಸ್ಥಿತಿ ಎದುರಾದಾಗ ಕೀರ್ತಿನಾಥ ಕುರ್ತಕೋಟಿ ಅವರ ಪರಾಮರ್ಶೆಗೆ ಆ ಸಾಹಿತ್ಯಗಳನ್ನು ನೀಡಲಾಯಿತು. ಅವರು, ಇದರ ಬಗ್ಗೆ ತುಲನಾತ್ಮಕವಾಗಿ ವಿಮರ್ಶೆ ಮಡಿ 'ಯಯಾತಿ' ಪರವಾಗಿ ನಿರ್ಣಯಕ್ಕೆ ತಮ್ಮ ಅಭಿಮತನ್ನು ನೀಡಿದರು ಆ ಸಂದರ್ಭದಲ್ಲಿ ಅವರು ಕೊಟ್ಟಿರತಕ್ಕಂಥ ಕಾರಣಗಳು ಇವರನ್ನು ರಾಷ್ಟ್ರಮಟ್ಟದಲ್ಲಿ ಎಂತಹ ದೊಡ್ಡ ವಿಮರ್ಶಕರು ಎನ್ನುವುದನ್ನು ಎತ್ತಿತೋರಿಸಿತು. ಅವರು ಕೊಟ್ಟಿರತಕ್ಕಂತ ವಿಮರ್ಶೆಯನ್ನು ಸಾರಸ್ವತ ಲೋಕ ಸಂಪೂರ್ಣವಾಗಿ ಮೆಚ್ಚಿತು ಎನ್ನುವುದನ್ನು ಹೇಳಿದರೆ ಅವರು ಆ ಕ್ಷೇತ್ರದಲ್ಲಿ ಎಷ್ಟು ದೊಡ್ಡವರು ಎಂದು ನೆನಪಿಸಿಕೊಳ್ಳಬಹುದು. ಅವರು ನನಗೆ ವೈಯಕ್ತಿಕವಾಗಿ ಬಹಳಷ್ಟು ಸಮೀಪದವರು. ನನ್ನ ಅತ್ಯಂತ ದೊಡ್ಡ ಹಿತೈಷಿ. ನನ್ನ ಸಾರ್ವಜನಿಕ ಬದುಕಿನಲ್ಲಿ ಹೇಗೆ ಇರಬೇಕು ಎನ್ನುವುದರ ಬಗ್ಗೆ ಮಾರ್ಗದರ್ಶನ ಮಾಡಿದವರು. ಅದು ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರಿಗೂ ಗೊತ್ತಿದೆ. ನನ್ನ ಸಾರ್ವಜನಿಕ ಬದುಕಿನಲ್ಲಿ ಎತ್ತರಕ್ಕೆ ಹೋಗಬೇಕೆಂದು ನಾನು ಪ್ರಯತ್ನ ಮಾಡುವಾಗ ಬೆಲ್ಲದ್ ಅವರನ್ನು ಅವರು ಸಂಪರ್ಕಿಸಿದ್ದರೂ ಆಶ್ಚರ್ಯವಿಲ್ಲ. ಅಷ್ಟು ಅವರು ನನಗೆ ಮಾರ್ಗದರ್ಶನ ಮಾಡುತ್ತಿದ್ದರು ಮತ್ತು ಸಹಕಾರ ನೀಡುತ್ತಿದ್ದರು. ಅದಕ್ಕೆ ಕಾರಣ ಕೂಡ ಇತ್ತು, ಅವರು ನನ್ನ ತಂದೆಯವರ ಜೊತೆಯಲ್ಲಿ ಓದಿದವರು. ಪಕ್ಕದ ಊರಿನವರು ಎನ್ನುವುದಕ್ಕೆ ನಮ್ಮ ವೈಯಕ್ತಿಕ ಸಂಬಂಧ ಬಹಳಷ್ಟು ಗಾಢವಾಗಿತ್ತು. ಅವರು ಬರೆದಿರತಕ್ಕಂಥ ಮುನಿ ಚಂದ್ರಗುಪ್ತ, ಗೀತನಾಟಕ ಯುಗಧರ್ಮ, ಸಾಹಿತ್ಯ ದರ್ಶನ ಇವೆಲ್ಲವೂ ಸಾಹಿತ್ಯ ಕ್ಷೇತ್ರದಲ್ಲಿ ಎಲ್ಲರಿಂದ ಮೆಚ್ಚುಗೆ ಹಾಗೂ ಶ್ರೇಷ್ಠ ಕೃತಿಗಳೆಂದು ಹೆಸರಾಗಿವೆ. 'ವಿಮರ್ಶೆ ವಿನಯ' ಎಂಬ ಬೃಹತ್ ಗ್ರಂಥಗಳು ವಿಮರ್ಶಾ ಕ್ಷೇತ್ರದ ಉದ್ದಗಲಕ್ಕೂ ವ್ಯಾಪಿಸಿದ ಉತ್ತುಂಗ ಕೃತಿಗಳು ಆಗಿವೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಬಹಳಷ್ಟು ಅಭಿಮಾನದಿಂದ ನೆನೆಯುತ್ತೇನೆ. ಅವರು ಸಂಪಾದಿಸಿರತಕ್ಕಂಥ ಹಾಗೂ ನಡೆದು ಬಂದ ದಾರಿ ಮೂರು ಸಂಪುಟ, ಕನ್ನಡ ಸಾಹಿತ್ಯದ ಗಂಭೀರ ಅಧ್ಯಯನ ಮಾಡುವವರಿಗೆ ಇವತ್ತು ಅದು ಒಂದು ರೀತಿಯ ರೆಫರೆನ್ಸ್ ಬುಕ್‌ಗಳಾಗಿವೆ. ಅಂತಹ ದೊಡ್ಡ ಸಾಹಿತಿ ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅವರ ಸಾವು ಎಲ್ಲರ ಮೇಲೆ ಪ್ರಭಾವ ಬೀರಿದೆ ಎಂದರೆ ಸಾಮಾನ್ಯ ಜನರ ಮೇಲೆ ಪ್ರಭಾವ ಬೀರಿದೆ ಎನ್ನುವಂತಹ ವಿಚಾರನ್ನು ಮಾನ್ಯ ಕಾನೂನು ಹಾಗೂ ಸಂಸದೀಯ ಸಚಿವರು ಬಹಳ ಸುಂದರವಾಗಿ ಹೇಳಿದ್ದಾರೆ. ಅವರು ದಾಂಪತ್ಯ ಜೀವನ ಎಲ್ಲರಿಗೂ ಆದರ್ಶ ಎನ್ನುವ ಹಾಗೆ ಅವರು ನಡೆದುಕೊಂಡು ಬಂದರು. ಕೇವಲ ಅವರ ದಾಂಪತ್ಯ ಜೀವನ ಅಷ್ಟೇ ಅಲ್ಲ. ಸಾಮಾಜಿಕ ಬದುಕೂ ಸಹ ಎಲ್ಲರಿಂದ ಪ್ರೀತಿ ಗೌರವ ಪಡೆದುಕೊಳ್ಳುವಂಥದ್ದಾಗಿತ್ತು. ಅವರ ನಿಧನದಿಂದ ಈ ದೊಡ್ಡ ಸಾಹಿತ್ಯ ಕ್ಷೇತ್ರದಲ್ಲಿ ದಿಗ್ಗಜರು ನಮ್ಮನ್ನು ಬಿಟ್ಟು ಅಗಲಿದ್ದಾರೆಂದು ತಿಳಿದುಕೊಂಡು ಸನ್ಮಾನ್ಯ ಮುಖ್ಯಮಂತ್ರಿಗಳು, ಇಂತಹ ಒಬ್ಬ ದೊಡ್ಡ ಕನ್ನಡದ ಸೇವಕ ನಮ್ಮನ್ನು ಬಿಟ್ಟು ಅಗಲಿದ್ದಾರೆಂದು ಹಾಗೂ ಅವರು ಏರಿರತಕ್ಕಂಥ ಎತ್ತರವನ್ನೆಲ್ಲಾ ಗಮನಿಸಿ ಅವರ ಅಂತ್ಯಕ್ರಿಯೆ ಸಹ ಸಕಲ ಸರ್ಕಾರಿ ಮರ್ಯಾದೆಯಿಂದ ಆಗಬೇಕೆಂದು ನಿನ್ನೆ ನಿರ್ಣಯಿಸಿ ಆದೇಶ ಕೊಟ್ಟರು. ಇವತ್ತು ಕೀರ್ತಿನಾಥ ಕುರ್ತಕೋಟಿ ಅವರ ನಿಧನ ಸಾರಸ್ವತ ಲೋಕಕ್ಕೆ ತುಂಬಲಾರದ ಹಾನಿಯಾಗಿದೆ. ಸಾರಸ್ವತ ಲೋಕ ಅವರನ್ನು ಕಳೆದುಕೊಂಡು ಬಡವಾಗಿದೆ. ಕನ್ನಡ ನಾಡು ಅವರನ್ನು ಕಳೆದುಕೊಂಡು ಬಡವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿ ಅವರ

ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಶ್ರೀಮತಿಯವರ ಆತ್ಮಕ್ಕೂ ಸಹ ಚಿರಶಾಂತಿಯನ್ನು ನೀಡಲಿ ಎಂದು ಹಾರೈಸಿ ಮತ್ತೊಮ್ಮೆ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ತಾವು ತಂದಿರತಕ್ಕಂಥ ಸಂತಾಪ ಸೂಚನೆಯನ್ನು ನಾನು ಬೆಂಬಲಿಸುತ್ತೇನೆ.

+ **ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ)** : ಮಾನ್ಯ ಅಧ್ಯಕ್ಷರೆ, ಕೀರ್ತಿನಾಥ ಕುರ್ತಕೋಟಿಯವರು ನಮ್ಮ ಗದಗ ಜಿಲ್ಲೆಯವರು. ಗದಗ್ ತಾಲ್ಲೂಕಿನ ಒಂದು ಭೂಮಿಯ ಮಣ್ಣೇ ಹಾಗೆ ಎಂದು ಕಾಣುತ್ತದೆ. ಬಹುಶಃ ಇತ್ತೀಚಿತ್ತಲಾಗಿ ನಾವು ಕುಂಬಳ ಗ್ರಾಮದ ಚನ್ನವೀರಕಣವಿಯವರು ಹಾಗೆಯೇ ಚಾಮರಾಜ ಕವಿ ಕೂಡ ನಮ್ಮ ಗದಗ್ ತಾಲ್ಲೂಕಿನ ನಾರಾಯಣ ಪುರದವರು; ಪ್ರಭುಲಿಂಗ ಲೀಲೆ ಬರೆದರು. ಹೀಗೆ ನಮ್ಮ ಗದುಗಿನಲ್ಲಿ ಬಹಳ ಜನ ಉತ್ತಮವಾದಂತಹ ಸಾಹಿತಿಗಳು ಇವತ್ತು ಆಗಿಹೋಗಿದ್ದಾರೆ. ಅದರಲ್ಲೂ ಕೂಡ ಕೀರ್ತಿನಾಥ ಕುರ್ತಕೋಟಿಯವರು ಇಂಗ್ಲೀಷ್ ಪ್ರಾಧ್ಯಾಪಕರಾದರೂ ಕೂಡ ಕನ್ನಡದ ಬಗೆಗೆ ಅವರು ಮಾಡಿದಂತಹ ಸೇವೆಯನ್ನು ನಾವು ಮೆಚ್ಚಬೇಕಾಗುತ್ತದೆ. ಬಹುಶಃ ಬೇಂದ್ರೆಯವರ ಸಾಹಿತ್ಯವನ್ನು ಹೆಚ್ಚು ಬೆಳಕಿಗೆ ತಂದುಕೊಟ್ಟವರು ಕೀರ್ತಿನಾಥ ಕುರ್ತಕೋಟಿಯವರು. ನಾವು ಹೋದವರ್ಷ ಲಕ್ಕುಂಡಿ ಉತ್ಸವ ಮಾಡಿದಾಗ ಇವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಗೋಷ್ಠಿ ಕೂಡ ನಡೆಸಿದೆವು. ಅವತ್ತು ಅವರು ಹೇಳಿದಂತಹ ಹಾಗೂ ನುಡಿದಂತಹ ಮಾತುಗಳು ಇವತ್ತಿಗೂ ಕೂಡ ನಮ್ಮ ಹೃದಯಾಂತರಾಳದಲ್ಲಿ ಉಳಿದಿವೆ. ಅಂತಹ ಒಬ್ಬ ಸಾಹಿತ್ಯ ವಿಮರ್ಶಕರನ್ನು ನಾವು ಕಳೆದುಕೊಂಡಿದ್ದೇವೆ. ಬಹುಶಃ ತಮಗೆ ತಿಳಿದ ಹಾಗೆ 2--3 ದಿವಸಗಳ ಹಿಂದೆ ಒಬ್ಬ ಕೃಷಿಗೆ ಅಪಾರವಾದಂತಹ ಸೇವೆಯನ್ನು ಸಲ್ಲಿಸಿದವರನ್ನು ಕಳೆದುಕೊಂಡಿದ್ದೇವೆ. ಆದರೆ ಇವತ್ತು ಸಾಹಿತ್ಯ ಕ್ಷೇತ್ರದಲ್ಲಿ ಅಪಾರವಾದಂತಹ ಸೇವೆಯನ್ನು ಸಲ್ಲಿಸಿದಂತಹ ಒಬ್ಬ ಸಾಹಿತಿಯನ್ನು ಕೂಡ ಕಳೆದುಕೊಂಡಿದ್ದೇವೆ. ನಾವು ಸಾಮಾನ್ಯ ಕೇಳಿರುವುದು ಗಂಡ ತೀರಿಕೊಂಡಾಗ ಹೆಂಡತಿ ಆಘಾತದಿಂದ ಸಾವಿಗೀಡಾಗುತ್ತಾಳೆ. ಆದರೆ ಇವತ್ತು ಇದು ತದ್ವಿರುದ್ಧವಾಗಿದೆ. ಅವರ ಧರ್ಮಪತ್ನಿ ತೀರಿಕೊಂಡಾಗ ಅವರ ಮನೆಯೊಳಗೆ ಈ ರೀತಿಯಾಗಬಹುದು ಎನ್ನುವ ಸಂಶಯದ ಮೇಲೆ ಅವರಿಗೆ ಹೇಳಬಾರದು ಅಂದುಕೊಂಡಿದ್ದರಂತೆ ಆದರೆ ಹೋಗಿ ಹೇಳಿದ ತಕ್ಷಣ ಅವರು ಆಘಾತವಾಗಿ ಹೋಗಿದ್ದಾರೆ. ಅಂದರೆ ಅವರ ಒಂದು ಪ್ರೇಮ ಸಂಬಂಧ ಎಷ್ಟೊಂದು ಗಾಢವಾಗಿ ಇತ್ತು ಎನ್ನುವುದು ಕೂಡ ಇದರಿಂದ ಸ್ಪಷ್ಟವಾಗುತ್ತದೆ. ಆ ಒಂದು ಹಿನ್ನೆಲೆಯಲ್ಲಿ ನಿಜವಾಗಲೂ ಸಾಹಿತ್ಯ ಲೋಕ ಇವತ್ತು ಇವರನ್ನು ಕಳೆದುಕೊಂಡು ಬಡವಾಗಿದೆ ಎಂದು ಹೇಳಿ, ಅವರುಗಳ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪ್ರಾರ್ಥಿಸುತ್ತಾ ತಾವು ತಂದಿರುವ ಸಂತಾಪ ಸೂಚನೆಯನ್ನು ಬೆಂಬಲಿಸುತ್ತೇನೆ.

+ **ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ)** : ಮಾನ್ಯ ಅಧ್ಯಕ್ಷರೆ, ಇವತ್ತು ಬೆಂಗಳೂರು ಆಡಳಿತಾತ್ಮಕವಾಗಿ ರಾಜಧಾನಿಯಾದರೆ, ಧಾರವಾಡ ಒಂದು ಸಾಂಸ್ಕೃತಿಕ ರಾಜಧಾನಿ. ಈ ಕನ್ನಡ ನಾಡಿಗೆ ಅನೇಕ ಜನ ಸಾಹಿತಿಗಳನ್ನು ಕೊಟ್ಟಂತಹ ಈ ಧಾರವಾಡದಲ್ಲಿ ಕೀರ್ತಿನಾಥ ಕುರ್ತಕೋಟಿಯವರು ಸಹ ನಮ್ಮ ಕನ್ನಡ ನಾಡಿಗೆ ಕನ್ನಡ ಭಾಷೆಗೆ ಬಹು ದೊಡ್ಡ ಸೇವೆಯನ್ನು ಸಲ್ಲಿಸಿದವರು. ಈಗಾಗಲೇ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಹೆಚ್.ಕೆ. ಪಾಟೀಲ್‌ರವರು, ಮಾನ್ಯ ಎಸ್.ಎಸ್. ಪಾಟೀಲ್ ರವರು ಮಾನ್ಯ ಚಂದ್ರೇಗೌಡರು ಎಲ್ಲರೂ ಕೂಡ ಅವರ ಬಗ್ಗೆ ಮಾತನಾಡಿದರು. ಬಹುಶಃ ಧಾರವಾಡ ಅನೇಕ ಸಾಹಿತಿಗಳನ್ನು ಕೊಟ್ಟಂತಹ ಒಂದು ಸಾಂಸ್ಕೃತಿಕ ನಗರ. ಆ ನಗರಕ್ಕೆ ಇಂತಹ ಕಿರೀಟಪ್ರಾಯರಾದಂತಹ ಶಂಬಾ

ಜೋಶಿಯವರಾಗಲಿ ಅಥವಾ ಬೇಂದ್ರೆಯವರಾಗಲಿ ಇವರೆಲ್ಲರ ಸಾಲಿನಲ್ಲಿ ಬಹಳ ಉತ್ತಮ ಕೃಷಿಯನ್ನು ಮಾಡಿದಂತಹ ಕೀರ್ತಿನಾಥ ಕುರ್ತಕೋಟಿಯವರು ಬಹು ಭಾಷಾ ಪಂಡಿತರು. ಅವರು ಇಂಗ್ಲೀಷ್ ಪಂಡಿತರಾದರೂ ಸಹ ಅವರು ಕರ್ನಾಟಕದ ಒಂದು ಸಾಹಿತ್ಯವನ್ನು ಬೆಳೆಸುವುದಕ್ಕೆ ಮಹಾರಾಷ್ಟ್ರ ಮತ್ತು ಗುಜರಾತ್‌ನಲ್ಲಿ ತಮ್ಮ ಸೇವೆಯನ್ನು ಮಾಡಿ ನಿವೃತ್ತಿಯ ನಂತರ ಧಾರವಾಡಕ್ಕೆ ಬಂದು ನೆಲೆಸಿದ್ದರು. ಬಹುಶಃ ಧರವಾಡದ ಸಾಂಸ್ಕೃತಿಕ ನಗರದಲ್ಲಿ ಅವರ ಕೊನೆಯ ಕಾಲದಲ್ಲಿ ಬಹಳ ದೊಡ್ಡ ಕೃಷಿಯನ್ನು ಮಾಡುವುದರ ಮೂಲಕ ಅನೇಕ ಜನ ಸಾಹಿತಿಗಳಿಗೆ ಪ್ರೇರಣೆ ನೀಡಿದರು. ಅವರು ವಿಮರ್ಶಾತ್ಮಕ ಸಾಹಿತ್ಯವನ್ನು ಏನು ಕೊಟ್ಟಿದ್ದಾರೆ ಆ ಒಂದು ಸಾಹಿತ್ಯದಿಂದ ಬಹುಶಃ ಧಾರವಾಡದ ಇವತ್ತಿನ ಯುವ, ಸಾಹಿತಿಗಳೆಲ್ಲಾ ಬೆಳೆದು ಬಂದಿದ್ದಾರೆ. ಹೀಗೆ ಅವರು ಕೊಟ್ಟಂತಹ ಸಾಹಿತ್ಯದಿಂದ ಅನೇಕ ಜನ ಸಾಹಿತಿಗಳು ಇವತ್ತು ಬೆಳೆದುಬಂದಿದ್ದಾರೆ, ಮತ್ತು ಅವರು ಕೊಟ್ಟಿರುವಂತಹ ಸಾಹಿತ್ಯ ಸಂಶೋಧನಾತ್ಮಕವಾದಂಥಾದ್ದಾಗಿದೆ ಅದರಿಂದ ಅನೇಕ ಜನರು ಪ್ರೇರಣೆ ಪಡೆದು, ಇವತ್ತು ಸಾಹಿತ್ಯಲೋಕದಲ್ಲಿ ದೊಡ್ಡ- ದಿಗ್ಗಜರಾಗಿದ್ದಾರೆ, ಇವರಿಗೆ ಕರ್ನಾಟಕ ರಾಜ್ಯ ಸರ್ಕಾರವೂ ಅನೇಕ ಪ್ರಶಸ್ತಿಗಳನ್ನು ಕೊಟ್ಟಿದೆ, ಇನ್ನೂ ಅನೇಕ ಪ್ರಶಸ್ತಿಗಳು ಸಿಗಬೇಕಾಗಿತ್ತು. ಇವತ್ತಿನ ದಿವಸ ದ.ರಾ.ಬೇಂದ್ರೆಯವರಾಗಲೀ, ಶಂಬಾ ಜೋಶಿಯವರಾಗಲೀ, ಇವರು ಕನ್ನಡ ನಾಡಿನಲ್ಲೇ ಅಗ್ರಗಣ್ಯ ಸಾಹಿತಿಗಳೆಂದರೆ ತಪ್ಪಾಗಲಾರದು. ಅಂತಹ ಸಾಹಿತಿಗಳ ಅನೇಕ ಕೃತಿಗಳನ್ನು ವಿಮರ್ಶೆ ಮಾಡುವುದರ ಮೂಲಕ, ಅವರ ಸಾಹಿತ್ಯದ ಎತ್ತರವನ್ನು ತೋರಿಸಿ ಕೊಟ್ಟಂತಹ ಒಬ್ಬ ದೊಡ್ಡ ಸಾಹಿತಿಗಳಾಗಿದ್ದಾರೆ, ಇವರ ಅಗಲಿಕೆ ಕನ್ನಡನಾಡಿಗೆ ಮತ್ತು ಸಾರಸ್ವತಲೋಕಕ್ಕೆ, ಒಂದು ದೊಡ್ಡ ಕಂದಕವನ್ನು ನಿರ್ಮಾಣ ಮಾಡಿದೆ, ಇವರ ಸಾವಿನ ಸುದ್ದಿ ಕೇಳಿ, ನಮಗೆ ಬಹಳ ವಿಷಾದವಾಯಿತು; ಮೊನ್ನೆ 75ನೇ ವರ್ಷದ ಚನ್ನವೀರ ಕಣವಿಯವರ ಕಾರ್ಯಕ್ರಮಕ್ಕೆ ಇವರು ಬರಬೇಕಾಗಿತ್ತು, ಅವತ್ತಿನ ದಿವಸ ನಾನು ಅಲ್ಲಿ ಉಪಸ್ಥಿತನಾಗಿದ್ದೆ, ಅವರ ಆರೋಗ್ಯ ಸ್ಥಿತಿ ಸರಿಯಿಲ್ಲದ ಕಾರಣ ಬಂದಿಲ್ಲವೆಂದು ತಿಳಿಸಿದರು. ನಾನು ಅವರನ್ನು ಕಾಣುವಂತಹ ಅಪೇಕ್ಷೆಯೂ ಇತ್ತು, ಆದರೆ ಅವರನ್ನು ಕಾಣುವುದಕ್ಕೆ ಆಗಲಿಲ್ಲ, ನನಗೆ ಅವರು ಆರಾಮವಾಗಿದ್ದಾರೆ, ಅವರ ಮನೆಯವರಿಗೆ ಆರಾಮವಿಲ್ಲವೆನ್ನುವಂತಹ ವಿಚಾರ ತಿಳಿದು ಬಂತು, ಆದರೂ ಅವರ ಮನೆಗೆ ಹೋಗಬೇಕೆಂಬ ವಿಚಾರವಿತ್ತು, ಆದರೆ ಈ ಒಂದು ಪ್ರಸಂಗದಲ್ಲಿ ಅವರ ಮನೆಯವರನ್ನೂ ಸಹಿತ ಕಾಣುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ನಿನ್ನೆ ದಿವಸ ಇವರ ಸಾವಿನ ಸುದ್ದಿಯನ್ನು ತಿಳಿದು ನನಗೆ ಆಘಾತವಾಗಿದೆ. ಮತ್ತೆ ಶ್ರೀ ಜಿ.ಬಿ. ಜೋಶಿಯವರು ಜಡಭರಿತ ಎಂದು ಕನ್ನಡನಾಡಿಗೆ ಶ್ರೇಷ್ಠರಾಗಿದ್ದಾರೆ, ಅವರು, ನಾವು ಒಂದೇ ಓಣಿಯಲ್ಲಿ ಇದ್ದವರು ರಾಮಜ್ಯೋಶಿಯವರು ಅವರ ಬಗ್ಗೆ ನಿನ್ನೆ ಪರಿಚಯ ಮಾಡಿ ಕೊಟ್ಟಿದ್ದಾರೆ. ಅವರೊಡನೆಯೂ ಸಹಿತ ನನಗೆ ಸಂಬಂಧವಿದೆ, ಮತ್ತೆ ನಾನು ಈ ಸದನಕ್ಕೆ ಬಂದಿರುವಂಥಾದ್ದು ಮಾನ್ಯ ಶ್ರೀ ಶಂಬಾ ಜೋಶಿಯವರ ಪ್ರೇರಣೆಯಿಂದ, ಇವರ ಗೋಕಾಕ್ ಚಳುವಳಿಯ ಮೂಲಕ, ಈ ಸದನದಲ್ಲಿ ಕನ್ನಡನಾಡಿನ ಪ್ರತಿನಿಧಿಯಾಗಿ ವಿಧಾನಸಭೆಗೆ ಬಂದಿದ್ದೇನೆ ಎಲ್ಲಾ ಸಾಹಿತ್ಯಲೋಕದ ದಿಗ್ಗಜರು ನನಗೆ ನೀಡಿದಂತಹ ಸಹಕಾರದಿಂದ ಕನ್ನಡನಾಡಿನ ಪ್ರತಿನಿಧಿಯಾಗಿ ವಿಧಾನಸಭೆಗೆ ಬಂದಿದ್ದೇನೆ, ಎನ್ನುವಂತಹ ವಿಚಾರ ನನಗೆ ಹೆಮ್ಮೆ ಎನ್ನಿಸುತ್ತದೆ, ಇಂತಹ ಪ್ರೊ: ಕೀರ್ತಿನಾಥ ಕುರ್ತಕೋಟಿಯವರು, ನಮ್ಮ ಇಡೀ ಸಾರಸ್ವತ ಲೋಕಕ್ಕೆ, ಸಾಹಿತ್ಯ ಲೋಕಕ್ಕೆ ಕೊಟ್ಟಂತಹ, ಕೊಡುಗೆ ಅಪಾರವಾದಂಥದ್ದು. ಅದಕ್ಕೆ ಸರ್ಕಾರ ನಿನ್ನೆ ದಿವಸ ಅವರಿಗೆ ಸರ್ಕಾರೀ ಗೌರವದೊಂದಿಗೆ ಏನು ಅಂತ್ಯಕ್ರಿಯೆ ಮಾಡಿದೆ, ಇದು

ಕನ್ನಡನಾಡಿಗೆ ಕನ್ನಡ ಭಾಷೆಗೆ, ಈ ನಾಡಿಗೆ ಸೇವೆ ಮಾಡಿದಂಥವರಿಗೆ ಕೊಟ್ಟಂತಹ ದೊಡ್ಡ ಮನ್ನಣೆಯನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿದ್ದಾರೆ. ಆ ದಿಶೆಯಲ್ಲಿ ಪ್ರೊ: ಕೀರ್ತಿನಾಥ ಕುರ್ತ ಕೋಟಿಯವರ ಪ್ರೇರಣೆ, ಮತ್ತೆ ಅವರ ದಾರಿಯಲ್ಲಿ ಈ ನಾಡು ಮುನ್ನಡೆಯಲಿ, ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಸಾಹಿತಿಗಳೆಲ್ಲ, ಆ ಬದುಕಿನಲ್ಲಿ ಮುನ್ನಡೆಯಲಿ, ಅವರ ಆದರ್ಶಗಳನ್ನು ತೆಗೆದುಕೊಂಡು ನಮ್ಮ ಜೀವನದಲ್ಲಿ ಮುನ್ನಡೆಯುವ ಮೂಲಕ, ಅವರ ಆತ್ಮಕ್ಕೆ ಶಾಂತಿ ದೊರೆಯಲಿ, ಮನುಷ್ಯ ಎಷ್ಟು ದಿವಸ ಬದುಕಿದ್ದ ಎಂಬುದು ಮುಖ್ಯವಲ್ಲ, ಅವರು ಹೇಗೆ ಬದುಕಿದರು, ಬದುಕಿನಲ್ಲಿ ಏನು ತೋರಿಸಿಕೊಟ್ಟರು ಎಂಬುದು ಮುಖ್ಯ. ಆ ದಿಶೆಯಲ್ಲಿ ಅವರು ಕನ್ನಡನಾಡಿಗೆ ಕೊಟ್ಟಂತಹ ಸಾಹಿತ್ಯ ಅತ್ಯುತ್ತಮವಾದುದು ಇಡೀ ಕನ್ನಡನಾಡಿಗೆ ಶ್ರೇಷ್ಠವಾದಂತಹ ಸಾಹಿತ್ಯವನ್ನು ಕೊಟ್ಟಿದ್ದಾರೆ. ಅವರ ಆತ್ಮಕ್ಕೆ ಶಾಂತಿ ದೊರೆಯಲಿ, ಎಂದು ಹಾರೈಸಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೂ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ)** : ಮಾನ್ಯ ಅಧ್ಯಕ್ಷರೇ ಪ್ರೋ: ಕೀರ್ತಿನಾಥ ಕುರ್ತಕೋಟಿಯವರ ನಿಧನ, ಕನ್ನಡ ಸಾಹಿತ್ಯಲೋಕಕ್ಕೆ ಅಷ್ಟೇ ಅಲ್ಲ ಇಡೀ ದೇಶದ ಸಾಹಿತ್ಯ ಲೋಕಕ್ಕೆ ಆಗಿರುವಂತಹ ಅಪಾರವಾದ ನಷ್ಟವೆಂದು ನಾನು ತಿಳಿದಿರುವಂಥವನು. ಮಾನ್ಯರ ಆಳವಾದಂತಹ ಜ್ಞಾನ, ಅವರ ಲೇಖನಗಳನ್ನು ಓದಿದಂತಹ ನಮಗೆಲ್ಲರಿಗೂ, ಅವರಿಗೆ ಇದ್ದಂಥ ನೆನಪಿನ ಬಗ್ಗೆ ನಮ್ಮ ಪ್ರಖ್ಯಾತರಾಗಿರುವಂತಹ ಶ್ರೀ ವೈ.ಎನ್.ಕೆ. ಯವರು, ಪತ್ರಿಕೋದ್ಯಮಿಗಳು ಹೇಳಿರುವಂತಹ ಒಂದು ಮಾತು, ನನಗೆ ಈಗ ಜ್ಞಾಪಕಕ್ಕೆ ಬರುತ್ತಿದೆ. ಈ ಸಂದರ್ಭದಲ್ಲಿ ಅದರ ಉಲ್ಲೇಖ ಅಗತ್ಯವೆಂದು ನಾನು ತಿಳಿದಿದ್ದೇನೆ, "ಕುರ್ತಕೋಟಿ, ಕುರ್ತಕೋಟಿ, ಎಂತಹ ಮೆಮರಿ, ಎಂತಹ ಮೆಮರಿ, ನಿನಗೆ ಟೇಪರೇಕಾರ್ಡರ್ ಅನ್ ನೆಸಸರಿ" ಎಂದು ಹೇಳಿದ್ದಾರೆ. ಅಂದರೆ ಅವರು ವಿಚಾರಗಳ ಬಗ್ಗೆ ವಿಮರ್ಶೆ ಮಾಡುತ್ತಿದ್ದಂಥಾದ್ದು, ಯಾವತ್ತಿಗೂ ಸಹಿತ ಅವರ ಲೇಖನಗಳನ್ನು ಓದುತ್ತಿದ್ದಂಥವರಿಗೆ ಮರೆಯುವುದಕ್ಕೆ ಸಾಧ್ಯವಿಲ್ಲ, ಕನಕಪುರದಲ್ಲಿ 67ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಂತಹ ಸಂದರ್ಭದಲ್ಲಿ ನಾನು ಅವರನ್ನು ಆಮಂತ್ರಿಸುವುದಕ್ಕೆ ಭೇಟಿ ಮಾಡುವಂತಹ ಸಂದರ್ಭ ದೊರೆಯಿತು, ನನಗೆ ವೈಯಕ್ತಿಕವಾಗಿ ಧಾರವಾಡ ಜಿಲ್ಲೆಯ ಅನೇಕ ಸಾಹಿತಿಗಳು ಪರಿಚಯವಿದ್ದರೂ ಸಹಿತ, ಶ್ರೀ ದಯಾನಂದ ಶ್ಯಾನುಭಾಗರು ಮತ್ತು ಪ್ರೊ: ಕೀರ್ತಿನಾಥ ಕುರ್ತಕೋಟಿಯವರು ಬಹಳ ಆತ್ಮೀಯರು, ಯಾರಾದರು ಸಾಹಿತ್ಯದ ಬಗ್ಗೆ ಸ್ವಲ್ಪ ಅಭಿರುಚಿ ಇದೆಯೆಂದ ತಕ್ಷಣವೇ, ಮಾನ್ಯ ಪಾಟೀಲ್ ಪುಟ್ಟಪ್ಪನವರು, ಮತ್ತೆ ಮಾನ್ಯ ರಾಮ್‌ಜಾದವ್ ಅವರು ಇವರು ತೀರಿಕೊಂಡಿದ್ದಾರೆ, ಪ್ರೊ: ಕೀರ್ತಿನಾಥ ಕುರ್ತಕೋಟಿಯವರು, ಇವರೆಲ್ಲಾ ನಮ್ಮನ್ನು ಬಹಳ ಆತ್ಮೀಯತೆಯಿಂದ ನೋಡುತ್ತಿದ್ದರು. ನಾವು ಏನೋ ಬಹಳ ದೊಡ್ಡ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದೇವೇನೋ, ಎಂದು, ಅವರ ಸಾಹಿತ್ಯದ ಬಗ್ಗೆ ಮತ್ತೆ ಅವರ ಬಗ್ಗೆ ನಾವು ಸ್ವಲ್ಪ ಗೌರವವನ್ನು ತೋರಿಸಿದರೆ, ನಮ್ಮನ್ನು ಬಹಳ ಅಭಿಮಾನದಿಂದ ನೋಡುವಂಥಾದ್ದು ಇತ್ತು. ಇವತ್ತು ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಗೆ ಬಹಳ ದೊಡ್ಡ ಹೆಸರು ಇರುವಂಥದ್ದಕ್ಕೆ ಕಾರಣ ಇಂತಹ ದೊಡ್ಡ ವಿದ್ವಾಂಸರು ನೆಲೆಯಾಗಿರುವಂಥಾದ್ದು ಎಂದು ನಾನು ಭಾವಿಸಿಕೊಂಡಿದ್ದೇನೆ. ಇವತ್ತು ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಅನೇಕ ವಿಚಾರಗಳು ಅಂದರೆ ನೀರಿನ ವಿಚಾರದಲ್ಲಿ, ನೆಲದ ವಿಚಾರಗಳಲ್ಲಿ ಬಹಳ ಭಿನ್ನಾಭಿಪ್ರಾಯಗಳಿವೆ. ಆದರೆ ಸಂಸ್ಕೃತಿಯ ದೃಷ್ಟಿಯಿಂದ, ಸಾಂಸ್ಕೃತಿಕ ದೃಷ್ಟಿಯಲ್ಲಿ ನಾವಿಬ್ಬರೂ

ಒಂದು ಎನ್ನುವಂಥಾದ್ದನ್ನು ಶ್ರೀ ದ.ರಾ ಬೇಂದ್ರೆಯವರಿರಬಹುದು, ಮಾನ್ಯ ಗೋಕಾಕ್‌ರವರು ಇರಬಹುದು, ಪ್ರೊ: ಕೀರ್ತಿನಾಥ ಕುರ್ತಕೋಟಿಯವರು ಇರಬಹುದು. ವಿಶೇಷವಾದಂತಹಹ ಸಂಬಂಧವನ್ನು ಕಲ್ಪಿಸುವುದರಲ್ಲಿ ಪ್ರೊ: ಕೀರ್ತಿನಾಥ ಕುರ್ತಕೋಟಿಯವರ ಕೊಡುಗೆ ಅಪಾರವಾದಂಥಾದ್ದು, ಎಂದು ನಾನು ತಿಳಿದುಕೊಂಡಿದ್ದೇನೆ, ಮತ್ತೆ ನಾವು ವಿಶೇಷವಾಗಿ ಸೆಂಟರ್ ಪೇಜ್ ಆರ್ಟಿಕಲ್ ಅನ್ನು ಓದುವಂಥವರಿಗೆ, ನಿಜವಾಗಿಯೂ something missing ಎಂದು ಅನ್ನಿಸುತ್ತದೆ. ಯಾವುದೇ ಒಂದು ವಿಮರ್ಶೆಯಾಗಬೇಕೆಂದ ತಕ್ಷಣವೇ ಪ್ರೊ: ಕೀರ್ತಿನಾಥ ಕುರ್ತಕೋಟಿಯವರು ಕಾಣುತ್ತಾರೆ ಹಾಗೆಯೇ ಮೈಸೂರಿನಲ್ಲಿ ಮಾನ್ಯ ಹೆಚ್.ಎಸ್.ಕೆ.ಯವರು ಇದ್ದಾರೆ. ಸೋಮವಾರದಂದು ಮಾನ್ಯ ಹೆಚ್.ಎಸ್.ಕೆ. ಯವರ ಆರ್ಥಿಕ ಚಿಂತನೆಯನ್ನು ಓದದೇ ಹೋದರೆ ಏನೋ ಒಂದು ಕಳೆದುಕೊಂಡಿದ್ದೇವೆ ಎಂದು ನನಗನ್ನಿಸುತ್ತದೆ, ಅದೇ ರೀತಿ ಪ್ರೊ: ಕೀರ್ತಿನಾಥ ಕುರ್ತಕೋಟಿಯವರ ವಿಮರ್ಶೆ ಏನು ಇದೆ, ಇದಕ್ಕೆ ಮತ್ತೊಂದು ಹೆಸರು ಕುರ್ತಕೋಟಿಯವರು ಎಂದು ನನ್ನ ಅಭಿಪ್ರಾಯವಾಗಿದೆ. ಅವರ ಅಗಲಿಕೆ ಇವತ್ತು ಸಾರಸ್ವತ ಲೋಕಕ್ಕೆ ಅಷ್ಟೇ ಅಲ್ಲ, ಚಿಂತನೆಯನ್ನು ಮಾಡತಕ್ಕಂಥ ಜನರಿಗೆ ಆಗಿರುವಂಥಾ ದೊಡ್ಡ ನಷ್ಟವೆಂದು ತಿಳಿದು, ತಾವು ಬಹಳ ಸೂಕ್ಷ್ಮವಾಗಿ ತಮ್ಮ ನಿರ್ಣಯದಲ್ಲಿ ಹೇಳಿದ್ದೀರಿ ಇಂತಹ ಒಬ್ಬ ದೊಡ್ಡ ದಿಗ್ಗಜರು, ಅವರ ಕುಟುಂಬ ವರ್ಗದವರು ತೀರಿಕೊಂಡ ಆಘಾತವನ್ನು ತಡೆದುಕೊಳ್ಳಲಾರದೆ ಏನು ಅಸು ನೀಗಿದ್ದಾರೆ ಅವರ ಆತ್ಮಕ್ಕೆ ಶಾಂತಿಯನ್ನು ಕೋರುವ ನಿರ್ಣಯವನ್ನು ಏನು ಮಂಡಿಸಿದ್ದೀರಿ, ಅದಕ್ಕೆ ನನ್ನ ಬೆಂಬಲವನ್ನು ಸೂಚಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ, ಮತ್ತೆ ಇವತ್ತಿನ ದಿವಸ ಸಾಹಿತ್ಯ ಲೋಕದಲ್ಲಿ ಕೆಲಸ ಮಾಡುವಂತಹ ಯುವಕರಿಗೆ, ಅವರ ಅಭ್ಯಾಸ, ಮತ್ತು ಅವರಿಗೆ ಇದ್ದಂತಹ ಜ್ಞಾಪಕ ಶಕ್ತಿ, ಮಾರ್ಗದರ್ಶನವಾಗಲಿ, ಎಂದು ಹಾರೈಸಿ, ನನಗೆ ಮಾತನಾಡಲು ತಾವು ಅವಕಾಶವನ್ನು ಕೊಟ್ಟಿದ್ದೀರಿ, ಅದಕ್ಕೆ ನನ್ನ ಧನ್ಯವಾದಗಳು.

ಅಧ್ಯಕ್ಷರು : ದಿವಂಗತರಾದ ಶ್ರೀ ಕೀರ್ತಿನಾಥ ಕುರ್ತಕೋಟಿಯವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರುಗಳೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2) ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ:

ವಿಷಯ : ಕುಷ್ಟಗಿ ತಾಲ್ಲೂಕಿನ ಎಂ. ರಾಂಪುರ ಗ್ರಾಮದ ಒಂದೇ ಕುಟುಂಬದಲ್ಲಿ ಆರು ಜನರು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇವತ್ತು ಪತ್ರಿಕೆಯಲ್ಲಿ.....

ಅಧ್ಯಕ್ಷರು : ಒಂದು ನಿಮಿಷ, ಪ್ರಶ್ನೋತ್ತರ ಮುಗಿಯಲಿ,

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರವನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಪ್ರಶ್ನೋತ್ತರಗಳನ್ನು ತೆಗೆದುಹಾಕೋಣವೇ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ರೈತರ ಕುಟುಂಬದಲ್ಲಿ ಒಟ್ಟು ಆರು ಜನರು ಹಸಿವಿನಿಂದಾಗಿ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಇದು ಬಹಳ ಗಂಭೀರವಾದಂಥಾದ್ದು...

ಗೊಂದಲ

ಅಧ್ಯಕ್ಷರು : ಪ್ರಶ್ನೆಗಳನ್ನು ಕಳುಹಿಸಿರುವವರು ಬೇಕಾದಷ್ಟು ಜನರಿದ್ದಾರೆ. ಈ ವಿಷಯವನ್ನು ನಿನ್ನೆ ಪ್ರಸ್ತಾಪ ಮಾಡಿದ್ದಾರೆ. ತಾವು ನಿನ್ನೆ ಈ ವಿಷಯವನ್ನು ರೈಜ್ ಮಾಡಬೇಕಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಈ ವಿಷಯ ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಒಂದೇ ಕುಟುಂಬದ ಆರು ಜನರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಇದು ಬಹಳ ಗಂಭೀರವಾದದ್ದು.

ಗೊಂದಲ

ಅಧ್ಯಕ್ಷರು : ರೆಕಾರ್ಡ್ ಮಾಡಬೇಡಿ. ಒಂದೇ ಸಾರಿ 5--6 ಜನರು ನಿಂತು ಮಾತನಾಡಿದರೆ ಹೇಗೆ?

XXX

ಗೊಂದಲ

ಅಧ್ಯಕ್ಷರು : ಪ್ರಶ್ನೋತ್ತರವಾದ ನಂತರ ನೋಡೋಣ, ಈ ವಿಷಯದ ಬಗ್ಗೆ ಸಂಬಂಧಪಟ್ಟ ಎಂಎಲ್ಎಗಳು ನಿನ್ನೆ ಸಭೆಯಲ್ಲಿ ಮಾತನಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ನಾವು ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕಗುತ್ತದೆ......

ಗೊಂದಲ

ಅಧ್ಯಕ್ಷರು : ನಿನ್ನೆ ಸಂಬಂಧಪಟ್ಟಂತಹ ಎಂಎಲ್ಎಗಳು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಮಾನ್ಯ ಮಂತ್ರಿಯವರು, ನಾನೇ ಇನ್‌ಸ್ಪೆಕ್ಟ್ ಮಾಡಿ, ಸಂಬಂದಪಟ್ಟ ಡಿ.ಸಿ.ಯವರ ಹತ್ತಿರ ಮಾತನಾಡಿ, ಪೂರ್ಣವಾದ ವಿವರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಪುನಃ ಚರ್ಚಿಸಲು ಅದರಲ್ಲೇನಿದೆ?

11.10 ಪಿ.ಎಂ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಪ್ರಶ್ನೋತ್ತರಗಳನ್ನು ಮತ್ತು ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ನಿನ್ನೆ ಪ್ರಸ್ತಾಪ ಮಾಡಿರಬಹುದು. ಆದರೆ ಅಲ್ಲಂ ವೀರಭದ್ರಪ್ಪನವರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇದು ಬಹಳ ಗಂಭೀರವಾದ ವಿಷಯ 6 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿದೆ...

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಾದ ಮೇಲೆ ಶೂನ್ಯ ವೇಳೆ, ಪ್ರಶ್ನೆಗಳನ್ನು ಕಳುಹಿಸಿರುವವರು ಬೇಕಾದಷ್ಟು ಸದಸ್ಯರು ಇದ್ದಾರೆ, ನಿನ್ನೆ ಈ ವಿಷಯ ಮಾತನಾಡಿದ್ದಾರೆ, ನಿನ್ನೆ ತಾವು ರೈಸ್ ಮಾಡಬೆಕಾಗಿತ್ತು..

ಗೊಂದಲ

ಯಾರದ್ದನ್ನು ಬರೆದುಕೊಳ್ಳಬೇಡಿ, 6–7 ಜನ ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ಮಾತನಾಡುವುದನ್ನು ಬರೆದಕೊಳ್ಳಬೇಡಿ XXX ಒಂದೇ ಸಲ 4–5 ಜನ ನಾಯಕರು ಎದ್ದುನಿಂತು

X X X ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಲಿಲ್ಲ.

ಮಾತನಾಡಿದರೆ ಹೇಗೆ? ನಿನ್ನೆ ಸಂಬಂಧಪಟ್ಟ ಎಂಎಲ್‌ಎಗಳು ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಪ್ರಶ್ನೋತ್ತರ ವೇಳೆಯಾದ ಮೇಲೆ ನೋಡೋಣ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ನಿಲುವಳಿ ಸೂಚನೆಯ ಉದ್ದೇಶವೇನು?

ಗೊಂದಲ

ಅಧ್ಯಕ್ಷರು :, ನಿನ್ನೆ ದಿವಸ ಸಂಬಂದಪಟ್ಟ ಎಂಎಲ್‌ಎಗಳು ಆ ವಿಷಯದ ಬಗ್ಗೆ ಮಾತನಾಡಿದ್ದಾರೆ, ಅದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳಿದರೆಂದರೆ, ನಾನೇ ಇನ್‌ಸ್ಪೆಕ್ಟ್ ಮಾಡಿ, ಸಂಬಂಧಪಟ್ಟ ಡಿ.ಸಿ. ಹತ್ತಿರ ಮಾತನಾಡಿ ಪೂರ್ಣವಾದ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದಾರೆ, ಮತ್ತೆ ಅದರಲ್ಲಿ ಏನಿದೆ? ಇದು ನೀವು ನಡೆದುಕೊಳ್ಳುವ ವರ್ತನೆ ಸರಿಯಲ್ಲ. ಪ್ರಶ್ನೆಗಳನ್ನು ಕಳುಹಿಸಿರುವವರು ಬಹಳಷ್ಟು ಮಂದಿ ಸದಸ್ಯರಿದ್ದಾರೆ, ಮಾನ್ಯ ಶೆಟ್ಟರ್‌ರವರು ಈ ರೀತಿ ಮಾತನ್ನಾಡುತ್ತಾರೆಂದರೆ ನಾನು ಇಷ್ಟಪಡುವುದಿಲ್ಲ ನಿನ್ನೆಯೇ ವಿಷಯ ಪ್ರಸ್ತಾಪ ಆಗಿದೆ ಎಂದು ಎಂದು ಹೇಳಿದರೂ ಪುನಃ ಮಾತನಾಡಿದರೆ ಹೇಗೆ?

ಗೊಂದಲ

ನಿನ್ನೆ ಈ ಬಗ್ಗೆ ಪ್ರಸ್ತಾಪ ಆಗಿದೆ, ಅವರು ಕಳುಹಿಸಿರುವ ಸೂಚನೆಯನ್ನು ನಾನು ತಿರಸ್ಕರಿಸಿದ್ದೇನೆ. ತಿರಸ್ಕರಿಸಿ ಅವರಿಗೆ ಎಂಡಾರ್ಸ್‌ಮೆಂಟ್ ಕೂಡ ಕೊಟ್ಟಿದ್ದೇನೆ. ನಿನ್ನೆಯೇ ನೀವು ಹೇಳಬೇಕಾಗಿತ್ತು. ನಿನ್ನೆ ನೀವು ಏಕೆ ಹೇಳಲಿಲ್ಲ? ನಿನ್ನೆ ನೀವು ಏನು ಮಾಡುತ್ತಿದ್ದೀರಿ? ನಾನು ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುತ್ತೇನೆ.

(ಬಿಜೆಪಿಯ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ಹೂಡಿದರು.)

ಅದಕ್ಕಾಗಿ ಈಗ ನಾನು ಸಭೆಯ ಅಭಿಪ್ರಾಯವನ್ನು ಕೇಳುತಿದ್ದೇನೆ, ಯಾರ್ಯಾರು ಪರವಾಗಿದ್ದೀರಿ ಹೇಳಿ, ಸಭೆಯ ಅಭಿಮತ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಬೇಕೆನ್ನುವುದಾಗಿದೆ.

ಗೊಂದಲ

ಆದ್ದರಿಂದ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುತ್ತೇನೆ ಬಹಳ ಜನ ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಲು ಕಾಯುತ್ತಿದ್ದಾರೆ ಈ ರೀತಿ ವರ್ತಿಸಿದರೆ ಜನ ನಿಮ್ಮನ್ನು ಮೆಚ್ಚುವುದಿಲ್ಲ, ನಾನು ಸಭೆಯ ಅಭಿಪ್ರಾಯದ ಮೇಲೆ ಹೋಗುತ್ತಿದ್ದೇನೆ. The house is supreme I cannot allow it ನಾನು ಸಭೆಯ ಅಭಿಪ್ರಾಯದಂತೆ ಹೋಗಬೇಕು, ನಾನು ಅವರ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ಎಂಡಾರ್ಸ್‌ಮೆಂಟ್ ಅನ್ನು ಕಳುಹಿಸಿಕೊಟ್ಟಿದ್ದೇನೆ, 185 ಜನರು ಪ್ರಶ್ನೋತ್ತರ ವೇಳೆ ಮೊದಲು ಆಗಲಿ ಎಂದು ಹೇಳುತ್ತಿದ್ದಾರೆ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುತ್ತೇನೆ. ಈಗ ಪ್ರಶ್ನೋತ್ತರಗಳು

3 ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು : ಗೋಪಾಲ ಭಂಡಾರಿಯವರೇ, ಪ್ರಶ್ನೆ ಕೇಳಿ..

ಶ್ರೀ ಗೋಪಾಲ ಭಂಡಾರಿ ಹೆಚ್ : ಮಾನ್ಯ ಅಧ್ಯಕ್ಷರೆ....

ಗೊಂದಲ

ಅಧ್ಯಕ್ಷರು : ಅವರು ಹೇಳಿದ್ದು ಒಂದನ್ನು ಬರೆದುಕೊಳ್ಳಬೇಡಿ. ಅವರು ಉದ್ದೇಶಪೂರ್ವಕವಾಗಿಯೇ ಗಲಾಟೆ ಮಾಡುತ್ತಿದ್ದಾರೆ. ಸಭೆಯ ಅಭಿಪ್ರಾಯ ನನಗೆ ಮುಖ್ಯ.

ಸಭೆಯಲ್ಲಿ 185 ಜನ ಮಾನ್ಯ ಸದಸ್ಯರು ಪ್ರಶ್ನೋತ್ತರಗಳು ಆಗಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ, ಮೊದಲು ಪ್ರಶ್ನೋತ್ತರಗಳನ್ನು ಮುಗಿಸೋಣ..... I can not allow. The House is supreme. ನೀವು 35 ಜನ ಸುಪ್ರೀಂ ಅಲ್ಲ. ಗೋಪಾಲ ಭಂಡಾರಿಯವರೇ, ಉಪ ಪ್ರಶ್ನೆ ಕೇಳಿ.....

ಗೊಂದಲ

This is not the way. ನೀವು ಈ ರೀತಿ ಗಲಾಟೆ ಮಾಡಿದರೆ ಜನರು ಮೆಚ್ಚುವುದಿಲ್ಲ. ಪ್ರಶ್ನೋತ್ತರ ವೇಳೆ ಆದ ಮೇಲೆ ನೋಡೋಣವೆಂದರೂ ಕೇಳದಿದ್ದರೆ ಹೇಗೆ? ನೀವು ನೂರು ಸಾರಿ ಕೇಳಿದರೂ ನಾನು ಅಲೋ ಮಾಡುವುದಿಲ್ಲ. ಪ್ರಶ್ನೋತ್ತರ ವೇಳೆ ಆದ ಮೇಲೆ ಸಹ I will decide on merits. ಸಿ. ಗುರುಸ್ವಾಮಿಯವರೇ ಪ್ರಶ್ನೆ ಕೇಳಿ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ......

ಗೊಂದಲ

ಅಧ್ಯಕ್ಷರು : ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದು, ನಾನು ಹೇಳುವುದು ಮತ್ತು ಮಾನ್ಯ ಮಂತ್ರಿಗಳು ಹೇಳುವುದನ್ನು ಮಾತ್ರ ಬರೆದುಕೊಳ್ಳಿ. ಅವರು ಹೇಳಿದ್ದು ಯಾವುದನ್ನೂ ಬರೆದುಕೊಳ್ಳಬೇಡಿ.

ಗೊಂದಲ

Mr. Speaker : The House is supreme. I cannot allow. I abide the decision taken by the House. ನೀವು ಯಾವುದನ್ನೂ ಒಪ್ಪುತ್ತೀರಿ ಹೇಳಿ. ನನಗೆ ನೀವು 35 ಜನ ಸುಪ್ರೀಂ ಅಲ್ಲ. 185 ಜನ ಸುಪ್ರೀಂ. This is my decision. ನೀವು ಐನೂರು ಸಲ ಕೇಳಿದರೂ ನಾನು ಅಲೋ ಮಾಡುವುದಿಲ್ಲ. ಜನರು ಪತ್ರಿಕೆಗಳಲ್ಲಿ ದೂರದರ್ಶನದಲ್ಲಿ ಎಲ್ಲಾ ನೋಡುತ್ತಿದ್ದಾರೆ. ನಾನು ಸಭೆಯ ತೀರ್ಮಾನದ ಮೇಲೆ ಹೋಗುತ್ತೇನೆಯೇ ಹೊರತು, ನಾನು ನಿನಗೆ ಅಲೋ ಮಾಡುವುದಿಲ್ಲ.

ಗೊಂದಲ

ಶ್ರೀ ವಿ. ಸೋಮಣ್ಣನವರೂ ಇಲ್ಲ. ಶ್ರೀ ರಾಜಾ ವೆಂಕಟಪ್ಪನಾಯಕ್ ರವರೂ ಇಲ್ಲ. ಶ್ರೀ ಭರಮಗೌಡ ಕಾಗೆ ಅವರೂ ಇಲ್ಲ. ಶ್ರೀ ಆರ್ ಅಶೋಕ್ ಅವರೂ ಇಲ್ಲ. ಶ್ರೀ ದಿನೇಶ್ ಗುಂಡೂರಾವ್ ಸಹ ಇಲ್ಲ. Regular questions are over.

ಕೃಷಿ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡುವ ಬಗ್ಗೆ

552 (4881) : ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೃಷಿ ಇಲಾಖೆಯಲ್ಲಿ 443 ದ್ವಿತೀಯ ದರ್ಜೆ ಸಹಾಯಕರಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿಯನ್ನು ಇಲಾಖೆಯ ಆದೇಶಗಳನ್ವಯ ಸಕ್ರಮಗೊಳಿಸಿದ ನಂತರವೂ ಸಾಮಾನ್ಯ ಜೇಷ್ಠತಾ ಪಟ್ಟಿಯಲ್ಲಿ ಅವರ ಹೆಸರನ್ನು ಸೇರಿಸದೆ ಹೆಚ್ಚುವರಿ ಜೇಷ್ಠತಾ ಪಟ್ಟಿಯಲ್ಲಿಗುವ ಔಚಿತ್ಯವೇನು;

ಆ) ಮೇಲಿನ 443 ಹುದ್ದೆಗಳಿಗೆ ಮುಂಬಡ್ತಿ ನೀಡಿರುವುದನ್ನು ಫ್ರೀಜ್ ಮಾಡಿ ಸಕ್ರಮಗೊಳಿಸುವ ಫ್ರೀಜಿಂಗ್ ಪ್ರಸ್ತಾವನೆಯು ಸುಮಾರು ವರ್ಷಗಳಿಂದಲೂ ಸರ್ಕಾರದೊಡನೆ ಪತ್ರ ವ್ಯವಹಾರದಲ್ಲಿದ್ದು, ಇತ್ಯರ್ಥಗೊಂಡಿರುವುದಿಲ್ಲ; ಈ ಬಗ್ಗೆ ಗಮನ ನೀಡಿ ಪ್ರಸ್ತಾವನೆಯನ್ನು ಇತ್ಯರ್ಥಗೊಳಿಸುವುದೇ;

ಇ) ಮೇಲಿನ ಪ್ರಸ್ತಾವನೆಯನ್ನು ಪರಿಗಣಿಸಿ ಶೀಘ್ರವಾಗಿ ಸೂಕ್ತ ಆದೇಶ ಹೊರಡಿಸಿ ನೌಕರರ ಹಿತ ಕಾಪಾಡಲು ಕ್ರಮ ಕೈಗೊಳ್ಳಲಾಗುವುದೇ;

ಎ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಕೃಷಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಬಡ್ತಿಯಿಂದ ಶೇಕಡ 50ರಷ್ಟು ಮತ್ತು ನೇರ ನೇಮಕಾತಿಯಿಂದ ಶೇಕಡ 50 ರಷ್ಟು ತುಂಬಲು ಅವಕಾಶವಿದೆ. ಆದರೆ, ಕೃಷಿ ಇಲಾಖೆಯಲ್ಲಿ ನೇರ ನೇಮಕಾತಿ ಹುದ್ದೆಗಳನ್ನು ಮುಂಬಡ್ತಿ ಹುದ್ದೆಗಳನ್ನಾಗಿ ಪರಿವರ್ತಿಸಿಕೊಳ್ಳದೆ ಅನುಪಾತಕ್ಕಿಂತ ಹೆಚ್ಚಾಗಿ ನೇರ ನೇಮಕಾತಿ ಹುದ್ದೆಗಳನ್ನು ಬಡ್ತಿಯಿಂದ ತುಂಬಿರುವುದರಿಂದ ಅವರನ್ನು ಹೆಚ್ಚುವರಿ ಪಟ್ಟಿಯಲ್ಲಿ ತೋರಿಸಲಾಗಿದೆ.

ಆ) ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ 78 ಸೇಸಿಇ 2002, ದಿನಾಂಕ: 30-8-2002ರ ಪ್ರಕಾರ ರಿಕ್ತ ಸ್ಥಾನಗಳನ್ನು ನೇರ ನೇಮಕಾತಿಯಿಂದಲೇ ತುಂಬಬೇಕೆಂದು ಆದೇಶವಿರುವುದರಿಂದ ಇತ್ಯರ್ಥಗೊಂಡಿರುವುದಿಲ್ಲ.

ಇ) ಪರಿಶೀಲಿಸಲಾಗುತ್ತಿದೆ

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ನೌಕರರ ವರ್ಗಾವಣೆ ಕುರಿತು

553 (4841) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಡಿ.ಸಿ.ಸಿ. ಬ್ಯಾಂಕ್‌ಗಳ ಅಂತರ ಜಿಲ್ಲಾ ವರ್ಗಾವಣೆಗೆ ತೆಗೆದುಕೊಂಡಿರುವ ಕ್ರಮವೇನು? ಇದನ್ನು ಯಾವಾಗ ಜಾರಿಗೊಳಿಸಲಾಗುವುದು? ಜಾರಿಗೊಳಿಸಲು ಇರುವ ತೊಂದರೆಗಳೇನು?

ಆ) ವರ್ಗಾವಣೆ ನೀತಿ ಅನುಸರಿಸುವುದರಿಂದ ಈ ಸಹಕಾರ ಕ್ಷೇತ್ರದಲ್ಲಿ ಶಿಸ್ತನ್ನು ಮೂಡಿಸಲು ಸಹಕಾರಿಯಾಗಿ ಬಾಕಿ ವಸೂಲಾತಿ ಹೆಚ್ಚಾಗಲು ಅವಕಾಶವಾಗುತ್ತದೆ. ಎಂದು ಹೇಳಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ನಿಯಮಕ್ಕನುಗುಣವಾಗಿ ಅಂತರ ವರ್ಗಾವಣೆ ನೀತಿ ಜಾರಿಗೆ ತರಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ನೌಕರರ ವರ್ಗಾವಣೆಯ ಅಧಿಕಾರ ಆಯಾ ಬ್ಯಾಂಕಿನ ಆಡಳಿತ ಮಂಡಳಿಯ ಅಧೀನಕ್ಕೆ ಒಳಪಟ್ಟಿರುತ್ತದೆ, ಕೇಂದ್ರ ಸಹಕಾರ ಬ್ಯಾಂಕುಗಳ ನೌಕರರ ಅಂತರ್ ಜಿಲ್ಲಾ ವರ್ಗಾವಣೆಯ ಸಂಬಂಧ ಯಾವುದೇ ಪ್ರಸ್ತಾವ ಸರ್ಕಾರದ ಮುಂದೆ ಇರುವುದಿಲ್ಲ. ಆದ್ದರಿಂದ ಅದನ್ನು ಜಾರಿಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಕಾರ್ಕಳ ಹಾಗೂ ಉಡುಪಿ ಜಿಲ್ಲೆಗಳಲ್ಲಿನ ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಒದಗಿಸುವುದು

556 (4835) : ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ ಅಂಗನವಾಡಿಗಳಿಗೆ ಎಷ್ಟು ಸ್ವಂತ ಕಟ್ಟಡಗಳಿವೆ: ಎಲ್ಲಿ ಕಟ್ಟಡಗಳಿಲ್ಲ ವಿವರ ಒದಗಿಸುವುದು:

ಆ) ಕಾರ್ಕಳ ತಾಲ್ಲೂಕು ಮತ್ತು ಉಡುಪಿ ಜಿಲ್ಲೆಯ ಯಾವ ಯಾವ ಕೇಂದ್ರಕ್ಕೆ ಕಟ್ಟಡ ಇದೆ ಯಾವುದಕ್ಕೆ ಇಲ್ಲ ವಿವರ ಒದಗಿಸುವುದು;

ಇ) ಉಳಿದ ಕಟ್ಟಡ ಇಲ್ಲದ ಕೇಂದ್ರಗಳಿಗೆ ಕಟ್ಟಡ ಒದಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೇ; ಹಾಗಿದ್ದರೆ, ಯಾವುದು: ವಿವರ ಒದಗಿಸುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ 23304 ಸ್ವಂತ ಕಟ್ಟಡಗಳು ಹಾಗೂ ಉಡುಪಿ ಜಿಲ್ಲೆಯಲ್ಲಿ 736 ಸ್ವಂತ ಕಟ್ಟಡಗಳು ಇವೆ. ರಾಜ್ಯಾದ್ಯಂತ 16997 ಅಂಗನವಾಡಿ ಕೇಂದ್ರಗಳು ಹಾಗೂ ಉಡುಪಿ ಜಿಲ್ಲೆಯ 291 ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿಲ್ಲ.

ಆ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ರಾಜ್ಯದಲ್ಲಿ 2003–04ನೇ ಸಾಲಿನಲ್ಲಿ 945 ಅಂಗನವಾಡಿ ಕಟ್ಟಡಗಳನ್ನು ಇಲಾಖಾ ಅನುದಾನದಲ್ಲಿ ಹಾಗೂ 397 ಕಟ್ಟಡಗಳನ್ನು ನಬಾರ್ಡ್ ಸಂಸ್ಥೆಯ ಸಹಯೋಗದೊಂದಿಗೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4835 ರ ಅನುಬಂಧ

ಸ್ವಂತ ಅಂಗನವಾಡಿ ಕಟ್ಟಡಗಳು ಇರುವ ಅಂಗನವಾಡಿ ಕೇಂದ್ರಗಳು ಕುಂದಾಪುರ ತಾಲ್ಲೂಕು ಅಂಗನವಾಡಿ ಕಟ್ಟಡಗಳ ಮಾಹಿತಿ

ಕ್ರಮ ಸಂಖ್ಯೆ	ಅಂಗನವಾಡಿ ಕೇಂದ್ರಗಳ ಹೆಸರು	ಗ್ರಾಮಪಂಚಾಯತ್ ಹೆಸರು
1)	ಗೋಪಾಡಿ	ಬೇಜಾಡಿ
2)	ಪಿಡುಗೋಪಾಡಿ	”
3)	ಬೇಜಾಡಿ	”
4)	ಬೇಜಾಡಿ ಫಿಶರೀಸ್	”
5)	ಕುಂಭಾಶಿ	ಕುಂಬಾಶಿ
6)	ಕೊರವಾಡಿ	”
7)	ಮಾಕೋಡು	ಕೋಟೇಶ್ವರ
8)	ಕೋಟೇಶ್ವರ	”
9)	ಹಳೆಅಳಿವೆ	”
10)	ಅಂಕದಕಟ್ಟೆ	”
11)	ತಕ್ಕಟ್ಟೆ	”
12)	ಕೊಮೆ	”
13)	ಮಾಲಾಡಿ	”

1	2	3
14)	ಮತ್ಯಾಡಿ	,,
15)	ವಡೇರಹೋಬಳಿ	ಪುರಸಭೆ
16)	ಕೆದೂರು	ಕೆದೂರ
17)	ಬೆಳಗೋಡ	ಕೆದೂರ
18)	ಉಳ್ತೂರು	ಕೆದೂರ
19)	ಹಲ್ತೂರು	ಕೆದೂರ
20)	ವಕ್ವಾಡಿ ಎ	ಕಾಳಾವರ
21)	ವಕ್ವಾಡಿ ಬಿ	ಕಾಳಾವರ
22)	ಅನೋಡ ಬಿ	ಕಾಳಾವರ
23)	ಕಾಳಾವರ–2	ಕಾಳಾವರ
24)	ಕೊರ್ಗಿ	ಕಾಳಾವರ
25)	ಹೊಸ್ಮಠ	ಕಾಳಾವರ
26)	ಬೇಳತಾರು	ಬೇಳೂರು
27)	ದೇವಸ್ಥಾನಬೆಟ್ಟು	ಬೇಳೂರು
28)	ಉಳ್ಳಾಡಿ	ಬೇಳೂರು
29)	ಬಡಾಬೆಟ್ಟು	ಬೇಳೂರು
30)	ಮೊಗೆಬೆಟ್ಟು	ಬೇಳೂರು
31)	ಚಿತ್ತೂರು	ಚಿತ್ತೂರು
32)	ಮಾರಣಕಟ್ಟೆ	ಚಿತ್ತೂರು
33)	ಸೃಕಂಬಳಿ	ಚಿತ್ತೂರು
34)	ಬೆಳ್ವಾಣ	ಚಿತ್ತೂರು
35)	ನಾರ್ಕಳಿ	ಆಲೂರು
36)	ಹರ್ಕೂರು	ಆಲೂರು
37)	ಆಲೂರು	ಆಲೂರು
38)	ಕಳ	ಆಲೂರು
39)	ತಾರಿಬೇರು	ಆಲೂರು
40)	ಬಡಾಕೆರೆ	ನಾಡಾ
41)	ಕದೋಳಿ	ಚಿತ್ತೂರು
42)	ಕುಂದಬಾದಂಡಾಡಿ	ಹಕ್ಲಾಡಿ
43)	ಬಾರಂದಾಡಿ	ಹಕ್ಲಾಡಿ
44)	ನೂಜಾಡಿ	ಹಕ್ಲಾಡಿ
45)	ಭಗ್ವಾಡಿ	ಹಕ್ಲಾಡಿ

1	2	3
46)	ಹಕ್ಲಾಡಿ ಗುಡ್ಡ	ಹಕ್ಲಾಡಿ
47)	ಹಕ್ಲಾಡಿ	ಹಕ್ಲಾಡಿ
48)	ಹಕ್ಲಾಡಿ ತೊಪ್ಲು	ಹಕ್ಲಾಡಿ
49)	ಸೇನಾಪುರ	ನಾಡಾ
50)	ಬಂಟ್ವಾಡಿ	ನಾಡಾ
51)	ನಾಡಾ	ನಾಡಾ
52)	ಹೆಮ್ಮುಂಡೆ	ನಾಡಾ
53)	ಕಡಿಕೆ	ನಾಡಾ
54)	ಕೋಣ್ಕೆ	ನಾಡಾ
55)	ಹಡವು (ಪಡುಕೋಣೆ)	ನಾಡಾ
56)	ಹರ್ಕೂರು (ದಕ್ಷಿಣ)	ಅಲೂರು
57)	ಗೋಳಿಯಂಗಡಿ	ಬೆಳ್ವೆ
58)	ಸೂರ್ಗೋಳಿ	ಬೆಳ್ವೆ
59)	ಗುವತ್ಮಿಲ	ಬೆಳ್ವೆ
60)	ಅಲ್ಬಡಿ	ಬೆಳ್ವೆ
61)	ಕಲ್ಮರ್ಗಿ	ಬೆಳ್ವೆ
62)	ಕಲ್ಮರ್ಗಿ	ಬೆಳ್ವೆ
63)	ಶೇಡಿಮನೆ	ಮಡಾಮಕ್ಕಿ
64)	ಅರಸಿನಕಾನ	ಮಡಾಮಕ್ಕಿ
65)	ಮಡಾಮಕ್ಕಿ	”
66)	ಮಾಂಡ್ಯಮುರ್ಕೈ	”
67)	ಬಡಾಬೆವ್ವ	”
68)	ಹೆಂಗವಳ್ಳಿ	ಹೆಂಗವಳ್ಳಿ
69)	ಹರ್ಣಿಜಡ್ಡು	ಹೆಂಗವಳ್ಳಿ
70)	ತೆತಾಂಬತ್ತು	ಹೆಂಗವಳ್ಳಿ
71)	ಹಾಲಾಡಿ ಪೇಟೆ	ಹಾಲಾಡಿ
72)	ಹಾಲಾಡಿ 28	ಹಾಲಾಡಿ
73)	ತಟ್ಟವಟ್ಟು	ಹಾಲಾಡಿ
74)	ಮುದೂರಿ	ಹಾಲಾಡಿ
75)	ಡೋರಾಡಿ	ಹಾಲಾಡಿ
76)	ಕಾನಾಡಿ	ಹಾಲಾಡಿ
77)	ರಟ್ಟಾಡಿ	ಅಮಾನೆಬೈಲು

1	2	3
78)	ರಟ್ಯಾಡಿ	ಅಮಾನೆಬೈಲು
79)	ಹೆಮ್ಮಣ್ಣೆ	ಅಮಾನೆಬೈಲು
80)	ಅಬ್ಯಾಡಿ	ಶಂಕರನಾರಾಯಣ
81)	ಮಾವಿನಕೊಡ್ಲು	ಶಂಕರನಾರಾಯಣ
82)	ಭರತ್‌ಕಲ್	ಶಂಕರನಾರಾಯಣ
83)	ಹೆಗ್ಗೋಡ್ಲು	ಶಂಕರನಾರಾಯಣ
84)	ಕೆಲ	ಅಮಾನೆಬೈಲು
85)	ಬಳ್ಮನೆ ಅಮಾನೆಬೈಲು	ಅಮಾನಬೈಲು
86)	ಕಡವಾನೆ	ಅಮಾನಬೈಲು
87)	ಮುಚ್ಚಟ್ಟು–1	ಅಮಾನಬೈಲು
88)	ಮುಚ್ಚಟ್ಟು–2	ಅಮಾನಬೈಲು
89)	ವಂಡ್ಸೆ	ವಂಡ್ಸೆ
90)	ಹರಾವರಿ	ವಂಡ್ಸೆ
91)	ಅತ್ರಾಡಿ	ವಂಡ್ಸೆ
92)	ಹಟ್ಟಿಯಂಗಡಿ	ಹಟ್ಟಿಯಂಗಡಿ
93)	ಕನ್ಯಾನ	ಹಟ್ಟಿಯಂಗಡಿ
94)	ಗುರುಗುಂಜೆಬೆಟ್ಟು	ಹಟ್ಟಿಯಂಗಡಿ
95)	ಕೆಂಚನೂರ	ಹಟ್ಟಿಯಂಗಡಿ
96)	ಗುಡ್ಡೆಯಂಗಡಿ	ಹಟ್ಟಿಯಂಗಡಿ
97)	ಕರಾಡಿ	ಕರಾಡಿ
98)	ಕುಳ್ಳಬಳ್ಳಿ	ಕೆರಾಡಿ
99)	ಬೆಳ್ಳಾಲ	ಕೆರಾಡಿ
100)	ಮೂಡವಾಲಂದ	ಕೆರಾಡಿ
101)	ಮೋರ್ಟು	ಕೆರಾಡಿ
102)	ನಂದೋಳಿ	ಕರಾಡಿ
103)	ಯಾಳಸಕಟ್ಟೆ	ಕುರ್ಕುಂಡೆ
104)	ಕೆರ್ಕಿ	”
105)	ಹೆರ್ಜಾಡಿ	
106)	ಕೆರ್ಕಿ	”
107)	ನಾಕೂರು	”
108)	ಕೊಲ್ಲೂರು	”
109)	ಹನ್ಗೆಹಳ್ಲು	ಕೊಲ್ಲೂರು

1	2	3
110)	ಹಳ್ಳಿಬೇರು	ಕೊಲ್ಲೂರು
111)	ಕಡೂರು	ಗೋಳಿಹೊಳೆ
112)	ಸಲಕೋಡ	ಜಡ್ಕಲ್
113)	ಕಾನ್ಕಿ	ಜಡ್ಕಲ್
114)	ಮುದಾರಂತಿ	ಜಡ್ಕಲ್
115)	ಬೆಳ್ಯಲ್	ಜಡ್ಕಲ್
116)	ಅರಶಿರೂರು	ಗೋಳಿಹೊಳೆ
117)	ಹುಲ್ಕಡಕೆ	ಗೋಳಿಹೊಳೆ
118)	ನೇರಂಬಳ್ಳಿ	ಹಂಗಳೂರು
119)	ಹಂಗಳೂರು	ಹಂಗಳೂರು
120)	ಕಳ್ಳಿಗುಡ್ಡೆ	ಬಳ್ಕೂರು
121)	ಕಳುವಿನ ಬಾಗಿಲು	ಬಳ್ಕೂರು
122)	ಕೋಣಿ--2	ಕೋಣಿ
123)	ಸಾಂತಾಪುರ	ಕೋಣಿ
124)	ಮೂಡಲಕಟ್ಟೆ	ಕೋಣಿ
125)	ಉಸ್ಕೂರು ಕಂದಾವರ	ಕೋಣಿ
126)	ಹೇರಿಕುದ್ರು	ಅಮಗಳ್ಳಿ
127)	ಬಸ್ರೂರು ಮೀರ್ಡಿ	ಬಸ್ರೂರು
128)	ಆನೆಗಳ್ಳಿ	ಆನಗಳ್ಳ
129)	ಬಸ್ರೂರ--1	ಬಸ್ರೂರು
130)	ಕಳಂದೆ	ಆನಗಳ್ಳಿ
131)	ಹಟ್ಟಿಕುದ್ರು	ಬಸ್ರೂರು
132)	ಮೇಲ್ಕವ್ಯೆರಿ	ಕೋಣಿ
133)	ಸಿದ್ದಾಪುರ	ಸಿದ್ದಾಪುರ
134)	ಜನ್ನಾರೆ	"
135)	ಹೆನ್ನಬೈಲು	"
136)	ತಾರೆಕೊಡ್ಲಿ	"
137)	ಐರಬೈಲು	"
138)	ಕಾರಬೈಲು	"
139)	ಉಳ್ಳೂರು--74	"
140)	ಕಾರೂರ	ಹೊಸಂಗಡಿ
141)	ಹೊಸಂಗಡಿ--2	"
142)	ತಾರಿಗದ್ದೆ	ಹಳ್ಳಿಹೊಳೆ

1	2	3
143)	ಹಳ್ಳಿಹೊಳೆ	”
144)	ಯಡಮೊಗ್ಗ	ಹೊಸಂಗಡಿ
145)	ಕಮಲಶಿಲೆ	ಹಳ್ಳಿಹೊಳೆ
146)	ಜಾಂಬೂರು	ಸಿದ್ದಾಪುರ
147)	ಕೊಳಾಲಿ	ಹೊಸಂಗಡಿ
148)	ಇರಿಗೆ	ಹಳ್ಳಿಹೊಳೆ
149)	ಇರಿಗೆ	
150)	ಅದ್ರೆ	ಅದ್ರೆ
151)	ಕೊದ್ಯಾಡಿ	”
152)	ಕೊಡಿಗೆ	”
153)	ಕುಂಬಾರಮಕ್ಕಿ	ಸಿದ್ದಾಪುರ
154)	ಬೆಕಳಮಕ್ಕಿ	ಅದ್ರೆ
155)	ಮರವಂತ	ಮರವಂತೆ
156)	ಹೊಸಪೇಟೆ	ತ್ರಾಸಿ
157)	ದೇವಳಿ	”
158)	ವಲವಾಡಿ	”
159)	ಹೊನಾಡು	”
160)	ಹೊಸಾಡು	”
161)	ಮುಳ್ಳಿಕೇಂದ್ರ	”
162)	ಗುಜ್ಜಾಡಿ	ಗುಜ್ಜಾಡಿ
163)	ಬೆಣ್ಣೆಗೆರೆ	”
164)	ಕೊಡಪಾಡಿ	”
165)	ನಾವುಂದ	ನಾವುಂದ
166)	ಅರೆಹೊಳೆ	”
167)	ಕೊಯನಗರ	”
168)	ಗಂಗೊಳ್ಳಿ	ಗಂಗೊಳ್ಳಿ
169)	ಹಾರುಹಿತ್ಲು	”
170)	ಸಂತೋಷನಗರ	ಹೆಮ್ಮಾಡಿ
171)	ಮುದತ್ಮುಡಿ	”
172)	ಕನ್ನಡಕುದ್ರು	”
173)	ಕಟು	”
174)	ಬಾಳಿಕೆರೆ	”

1	2	3
175)	ಕಟ್‌ಬೆಲ್ತೂರ್	”
176)	ಸುಳ್ಯ	”
177)	ಹರಗೋಡ	”
178)	ತಲ್ಲೂರು	ತಲ್ಲೂರು
179)	ಕೋಟೆಬಾಗಿಲು	”
180)	ಆಲ್ಬುದ್ರು	”
181)	ಹಾದಣಾಳ್ಜಿ ಮಂಡಳಾ	ಹಾದ್ದೂಳ್ಳಿ ಮಂಡಳಿ
182)	ಜನ್ನಾಡಿ	”
183)	ಕೊಳನಕಲ್	”
184)	ಗೌಡ	”
185)	ಹೆ. ಕಾನಾಡಿ	”
186)	ಯಡ್ಯಾಡಿ ಮತ್ಯಾಡಿ	ಹೊಲಮಂಡಾಡಿ
187)	ಯಡಾಡಿ	”
188)	ಗುಡ್ಡಮ್ಮ	”
189)	ಮೊಳಹಳ್ಳಿ	ಮೊಳಹಳ್ಳಿ
190)	ಕೈಲಕೆರೆ	”
191)	ಮರತ್ತೂರು	”
192)	ಕೋಣಿಹರ	”
193)	ಹೋಂ. ಮುಂದಾಡಿ	ಹೊಂ. ಮುಂದಾಡಿ
194)	ಸುಣ್ಣಾರಿ	”
195)	ಜಸ್ತಿ	”
196)	ಕೊಂಡೆಳ್ಳಿ	ಶಂಕರನಾರಾಯಣ
197)	ಬೈವಾರು	”
198)	ಅಗ್ರಹಾರ	”
199)	ಕುಪ್ಪಾರು	”
200)	ಕನ್ಯಾಟ್ಟು	ಅಂಪಾರು
201)	ನೆಲ್ಲಿಕಟ್ಟೆ	”
202)	ಹಾಲ್ಕಾಡು–1	ಕಾಪ್ರಡಿ
203)	ಕುಡ್ಲೂರು	”
204)	ವಂಕ್ಕ	”
205)	ಮೂಡುವಾಲ್ತೂರು	”
206)	ಕಾವ್ರಾಡಿ	”

1	2	3
207)	ಅಂಪಾರು	ಅಂಪಾರು
208)	ಹಾನ್ನಾಹು-2	ಕಾವ್ರಡಿ
209)	ಶಂಕರನಾರಾಯಣ	ಶಂಕರನಾರಾಯಣ
210)	ಕುಂಬದ ಕೋಣಿ	ಕುಂಬದಕೋಣಿ
211)	ಹಳಗೇರಿ	"
212)	ತೆಂಕಬೆಟ್ಟು	"
213)	ನಂದನವನ ಎಲ್.ಪಿ.ಎಸ್	ಕೆನಾಗಾಲ
214)	ಕೆಗಾಣಲು	"
215)	ಮಾಗೇರಿ	"
216)	ಕಾಲ್ತೋಡು	ಕಾಲ್ತೋಡು
217)	ಮಡೇರಿ	"
218)	ಬೋಳಾಬಳ್ಳಿ	"
219)	ಮೆಟ್ಟಿನಹೊಳೆ	"
220)	ಹೊರಂಚಾಲು	ಕಂಬದಕೋಣಿ
221)	ವಲಾಮಿಹೆರುಜಾಲು	"
222)	ಕಿರಿಮಂಜೆಲಶ್ವರ	"
223)	ಕೊಣೇರಿ	"
224)	ನಾಗೂರು	ಕಿರಮಂಜೇಶ್ವರ
225)	ಕೊಣೇರಿ	"
226)	ಹೊಸಹಿತ್ಲು	"
227)	ಹಕ್ರೆಮಠ	"
228)	ಉಳ್ಳೂರು	ಹೆರೂರು
229)	ಉಳ್ಳೂರು ಕುಪ್ಪಳ್ಳಿ	"
230)	ಮೇಕೋಡು	"
231)	ಹೇರೂರು	"
232)	ರಾಗಿಹತ್ಲು	"
233)	ಮೇಟ್ ಶಿರೂರು	"
234)	ಕರಾವಳಿ	ಶಿರೂರು
235)	ಕಳಿಹಿತ್ಲು	"
236)	ಹಡವಿನಕೋಣಿ	"
237)	ಅಳ್ವೆಗದ್ದೆ	"
238)	ಮ್ಬೆಂಕ್ತಿ	"

1	2	3
239)	ಆಳ್ರಕೋಡಿ	ಪಡುವದಿ
240)	ತಾರಪತಿ	„
241)	ದೊಂಜಿ	„
242)	ಸೋಮೇಶ್ವರ	„
243)	ಬಿಮೊಣಾರು	ಬಿದೊಗಾರು
244)	ಆಲಂದೂರು	ಯಡ್ತರೆ
245)	ಉಪ್ಪಂದ	ಆಲಂದೂರು
246)	ಬನಲಾಡಿ	ಬಿಜೂರು
247)	ಕಂಚಿಕಾನ್	„
248)	ಮಲ್ಲಿಬಾರ್	ಯಡ್ತರೆ
249)	ಅಂಬಾಗಿಲು	ಉಪ್ಪುಂದ
250)	ಬಾಲಿಮಕ್ಕಿ	ಬಿಜೂರು
251)	ಕಳವಾಡಿ	ಬೈಂದೂರು
252)	ಮಣಿಕಲ್	ಉಪ್ಪುಂದ
253)	ಗಂಗನಾಡು	ಬೈಂದೂರೆ
254)	ಬೈಂದೂರು	ಯಡ್ತರೆ
255)	ಹೊತ್ಕೋಟ್	ಬ್ಯಾಳ
256)	ತಗ್ಗಸೇಣ	ಬೈಂದೂರು
257)	ಯಡ್ತರೆ	ಯಡ್ತರೆ
258)	ಕರೊಕಳಿ	ಉಪ್ಪುಂದ
259)	ಓಲಗ ಮನಂಡ	„
260)	ನಂದನವನ	ತೊಗಜಾರ್
261)	ಕೊರಾಡಿ	ಯಡ್ತರ್
262)	ಇಡೂರು ಕುಂಜ್ಞಾಡಿ	ಚಿತ್ತೂರು
263)	ವಸ್ರ	ಬೈಂದೂರು
264)	ಬಂಕೇಶ್ವರ	ಯಡ್ತರೆ
265)	ಮರೂರು	ಹೆಂಗವಳ್ಳಿ
266)	ಆಡಿಣ ಹಲಪ್ರಮಂಗಲ	ವಸ್ರ
267)	ಮೆಲ್ ಶಿರೂರು	ಶಿರೂರು
268)	ಬಂಡಕೋಡ್	ಉಳ್ಳೂರ್-74
269)	ಕೆಚ್ಚೇರಿ	ಕೋಣಿ
270)	ಹುಂಚನಿ	ಗೋಳಿಹೊಳೆ
271)	ಜನತಾಕೇರಿ	ಮರವಂತೆ

ಕಾರ್ಕಳ ತಾಲ್ಲೂಕಿನಲ್ಲಿ ಸ್ವಂತ ಅಂಗನವಾಡಿ ಕಟ್ಟಡಗಳು ಇರುವ ಕೇಂದ್ರಗಳು

ಕ್ರಮ ಸಂಖ್ಯೆ	ಅಂಗನವಾಡಿ ಕೇಂದ್ರಗಳ ಹೆಸರು	ಗ್ರಾಮಪಂಚಾಯತ್ ಹೆಸರು
1)	ನಾಯರ್ ಕೋಡು	ಹೆಬ್ರಿ
2)	ಮುಕ್ಕಾಣಿ	,,
3)	ಮುಳ್ಳುಗುಡ್ಡೆ	,,
4)	ಬ್ಯಾಣ	,,
5)	ಕರೆಬೆಟ್ಟು	ಶಿವಪುರ
6)	ಬಾಡಾಗುಡ್ಡೆ	ಹೆಬ್ರಿ
7)	ಬಂಗಾರಗುಡ್ಡೆ	,,
8)	ಬಚ್ಚಪ್ಪ	,,
9)	ರಾಗಿಹಕ್ಲು	,,
10)	ಹಂದಿಕಲ್ಲು	,,
11)	ಕೊಂಡೆ ಜಡ್ಡು	,,
12)	ಕಾಸನಮಕ್ಕಿ	ನಾಡ್ಪಾಲು
13)	ಸೋಮೇಶ್ವರ	,,
14)	ಸೀತಾನದಿ	,,
15)	ಕುಚ್ಚೂರು–1	ಕುಚ್ಚೂರು
16)	ಕುಚ್ಚೂರು–2	ಕುಚ್ಚೂರು
17)	ಸೂಳೆಕಟ್ಟೆ	,,
18)	ಬೀಡಿಬೆಟ್ಟು	,,
19)	ಬೇಳಂಜೆ ದೂ ಕಟ್ಟೆ	,,
20)	ಮುದ್ರಾಡಿ	ಮುದ್ರಾಡಿ
21)	ಬಲ್ಲಾಡಿ ಶಾಲೆ	,,
22)	ಬಲ್ಲಾಡಿ ಎಸ್	ಮುದ್ರಾಡಿ
23)	ಉಪ್ಪಳ	,,
24)	ಕಬ್ಬಿನಾಳ	,,
25)	ವರಂಗ	ವರಂಗ
26)	ಮುನಿಯಾಲು	,,

1	2	3
27)	ಮುರೆಲ್‌ಕಡಿ	
28)	ಚಟಕಲ್‌ಪುರ	„
29)	ಅಂಡಾರು	„
30)	ಮಟ್ಲಕಾಡಿ	„
31)	ಪಡುಕುತೂರು	„
32)	ಎಣ್ಣೆಹೊಳೆ	ಮರ್ಣೆ
33)	ಕೈಕಂಬ	„
34)	ದಪ್ಪತ್ತ	ಮರ್ಣೆ
35)	ದಾಸಗದ್ದೆ	„
36)	ಕುರ್ಸುಕಟ್ಟೆ	„
37)	ಬೊಂಡುಕುವೇರಿ	„
38)	ಹೆರ್ಮುಂಡೆ	„
39)	ಶಿರ್ಲಾಲು	ಶಿರ್ಲಾಲು
40)	ಸೂರ್ಯಂಕುಚ್ಚು	„
41)	ಕರ್ನಾಕೆ	„
42)	ಬಂಗ್ಲೆಗುಡ್ಡೆ	„
43)	ಶೆಟ್ಟಿಬೆಟ್ಟು	„
44)	ಚಾರ್ಕಳ	ಕಡ್ತಲ
45)	ಕಡ್ತಲ	ಕಡ್ತಲ
46)	ಚೆನ್ನಬೆಟ್ಟು	„
47)	ಕುಣ್ಣಾಜೆ	„
48)	ಕುಣ್ಣಾಜೆ ಮಾಡುಬೆಟ್ಟು	ಮಾಳ
49)	ಎಳ್ಳಾರೆ	ಕಡ್ತಲ
50)	ಮೊಳೆಕೊಡೆಬೆಟ್ಟು	ಮಾಳ
51)	ಮಾಳಚಾರೆ	„
52)	ಮಲ್ಲಾರು	„
53)	ಇಂದಿರಾನಗರ	„
54)	ಕೋಂಡಗ್ಗೈ	„
55)	ಬಜೆಗೋಳಿ	ಮುಡಾರು

1	2	3
56)	ಮುಡಾರು ದಾವೇಲಗುತ್ತು	,,
57)	ಕಡಾರಿ	,,
58)	ಮಂಜಲ್‌ಪಾದೆ	,,
59)	ನಲ್ಲೂರು	ನಲ್ಲೂರು
60)	ನಲ್ಲೂರು ಕಳತತಾದೆ	,,
61)	ಮೂಡುಮನೆ	,,
62)	ನಲ್ಲೂರು ಪರಪ್ಪಾಡಿ	,,
63)	ಪುಷ್ಪೊಬೆಟ್ಟು	,,
64)	ತೆಳ್ಳಾರು	ಶಿರ್ಲಾಲು
65)	ಚಿದ್ರಪಕ್ಕಿ	,,
66)	ಈದು	ಈದು
67)	ಕರಿಂಬಾಲು	,,
68)	ಮಲ್ಲಂಜೆ	,,
69)	ಬರಿಮಾರು	,,
70)	ಜಂಗೊಟ್ಟು	,,
71)	ಗುಮ್ಮೆತ್ತು	ಈದು
72)	ನಾರಲ್‌ಬೆಟ್ಟ	,,
73)	ಇರ್ವತ್ತೂರು	ರೆಂಜಾಳ
74)	ಕೋರಂಜೆ	,,
75)	ರಂಜಾಳ	,,
76)	ಮಹಾಲಕ್ಷ್ಮಿ ರಂಜಾಳ	,,
77)	ಮಿಯಾರು ಬೋಡಕಟ್ಟೆ	ಬಯಾರು
78)	ಮಿಯಾರು ಶಾಲೆ	,,
79)	ಬೋರ್ಕಟ್ಟೆ	,,
80)	ಗುಂಡಾಜೆ	,,
81)	ಕಾರೋಲ್‌ಗುಡ್ಡೆ	,,
82)	ಕಾಡಂಬಳಿ	,,
83)	ಸಾಣೂರು	ಸಾಣೂರು

1	2	3
84)	ಸಾಣೂರು ಮುದ್ದಣನಗರ	,,
85)	ಮುರತ್ತಂಗಡಿ	,,
86)	ಪುತ್ಕೇರಿ	,,
87)	ಪಡ್ಡಾಯಿಗುಡೆ	,,
88)	ಇಟ್ಟಿಕಟ್ಟೆ	ಕುಕ್ಕುಂದೂರು
89)	ಕುಕ್ಕುಂದೂರು	
90)	ದುರ್ಗಾಪರಮೇಶ್ವರಿ	,,
91)	ವರಪ್ಪ	,,
92)	ನಕ್ರೆಗುಂಡ್ಯದ	,,
93)	ನಕ್ರೆ	,,
94)	ಬಾವರಿಪ್ಪನಗರ	,,
95)	ಪುಡ್ಕ	,,
96)	ನೆಲ್ಲಿ ಕಟ್ಟೆ	ಹಿರ್ಗಾನ
97)	ಚಿಕ್ಕಮಾಬೆಟ್ಟು	,,
98)	ಹಿರ್ಗಾನ	,,
99)	ತುಂಟೆಹಿತ್ಲು	,,
100)	ರಾಮಪ್ಪ ಖಾಸಗಿ	ಪುರಸಭೆ
101)	ಬೆಳ್ಮಣಿ ಹೊದ್ದಾರ್	ಬೆಳ್ಮಣಿ
102)	ಬೆಳ್ಮಣಿ ವಜನಾರ್	,,
103)	ಪೇರ್ಪಾಡೆ	,,
104)	ಅಬ್ಬನಡ್ಕ	,,
105)	ನಂದಳಿಕೆ	,,
106)	ನಂ.ಮಾವಿನಕಟ್ಟೆ	,,
107)	ನಂ.ದೇವಸ್ಥಾನ	,,
108)	ಸೂಡಾ	,,
109)	ಕಾಪಿಕಾಡು	,,
110)	ಪಡುಬೆಟ್ಟು	,,
111)	ಮುಲ್ಲಡ್ಕ	ಮುಂಡ್ಕೂರು

1	2	
112)	ಮುಂಡ್ಲೂರು	"
113)	ಪಂಚಡ್ಕು	"
114)	ಸಂಕಲಕರಿಯಾ	"
115)	ಪ್ರೊಗ್ರಾಲ್	"
116)	ಸಚ್ರೇರಿಪೇಟೆ	"
117)	ಇನ್ನ	"
118)	ಪಡುಇನ್ನ	"
119)	ಕ್ಯಾನಾಲು	"
120)	ಕಡೆಕುಂಜ	"
121)	ಕೈರಬೆಟ್ಟು	ಪೆಳ್ಳ
122)	ಕರಲಾಡಿ	"
123)	ಮಲಾಬೆಟ್ಟು	"
124)	ಸಾಳೆಕಟ್ಟೆ	"
125)	ಏಂಜೂರು	"
126)	ಎಡ್ಮೇರು	"
127)	ದಾದಬೆಟ್ಟು	"
128)	ಪಳ್ಳೆ	"
129)	ಮುದ್ದಲ್‌ಪಾಣೆ	"
130)	ಪ್ಯಾರೆ	ಪ್ಯಾರೆ
131)	ಬಸ್ರೂರ–1	ಬಸ್ರೂರು
132)	ಕಳಂಸೆ	ಅನಗಳ್ಳಿ
133)	ಹಟ್ಟಿಕುದ್ರು	ಬಸ್ರೂರು
134)	ಮೇಲ್ಕವೇರಿ	ಕೋಣಿ
135)	ಸಿದ್ದಾಪುರ	ಸಿದ್ದಾಪುರ
136)	ಜನ್ಸಾರ	"
137)	ಹೆನ್ನಬೈಲು	"
138)	ತಾರೆಕೊಡ್ಗ	"
139)	ಐರಬೈಲು	"
140)	ಕಾರಬೈಲು	"
141)	ಉಳ್ಳೂರು–74	"

1	2	3
142)	ಕಾರೂರ	ಹೊಸಂಗಡಿ
143)	ಹೊಸಂಗಡಿ–2	,,
144)	ತಾರಿಗಡ್ಡೆ	ಹಳ್ಳಿಹೊಳೆ
145)	ಹಳ್ಳಿಹೊಳೆ	ಹಳ್ಳಿಹೊಳೆ
146)	ಯಡಮೊಗ್ಗ	ಹೊಸಂಗಡಿ
147)	ಕಮಲಶಾಲೆ	ಹಳ್ಳಿಹೊಳೆ
148)	ಜಾಂಬೂರು	ಸಿದ್ದಾಪುರ
149)	ಕೊಳಾಲಿ	ಹೊಸಂಗಡಿ
150)	ಇರಿಗ	ಹಳ್ಳಿಹೊಳೆ
151)	ಬೊಗಾಣುಗಡ್ಡೆ	ನಿಟ್ಟೆ
152)	ಚೇತನಹಳ್ಳಿ	,,
153)	ಎರ್ಮುಂಜೆ ಪಲ್ಲ	,,
154)	ಜೋಳ ತೋಣ	ಜೋಳ
155)	ಅಂಬರಾಡಿ	,,
156)	ಬೋಳ	,,
157)	ವಂಜಾರಕಟ್ಟೆ	,,
158)	ಕದಿಂಜೆ	,,
159)	ಬೇಲಾಡಿ	ಕಾಂತಾವರ
160)	ಕಾಂತವರ	,,
161)	ಮಾರಂತೆ ಗುಡ್ಡೆ	,,
162)	ಬಾರಾಡಿ	,,
163)	ಹಾರ್ಜಡ್ಡು	ಕುಕ್ಕಂದೂರು
164)	ಕಾರಾಡಿ	ಹೆಬ್ರಿ

ಉಡುಪಿ ತಾಲ್ಲೂಕಿನಲ್ಲಿರುವ ಸ್ವಂತ ಅಂಗನವಾಡಿ ಕಟ್ಟಡಗಳ ಮಾಹಿತಿ – ಶಿಶು ಅಭಿವೃದ್ಧಿ ಯೋಜನೆ

ಕ್ರಮ ಸಂಖ್ಯೆ	ಅಂಗನವಾಡಿ ಕೇಂದ್ರಗಳ ಹೆಸರು	ಗ್ರಾಮಪಂಚಾಯತ್ ಹೆಸರು
1)	ಪಟ್ಲ	ಅತ್ರಾಡಿ
2)	ಹಿರೆಬೆಟ್ಟು	,,
3)	ಅತ್ರಾಡಿ	,,

1	2	3
4)	ಮದಗ	,,
5)	80 ಬಡಗಬೆಟ್ಟು	80 ಬಡಗಬೆಟ್ಟು
6)	ಮೇಲ್ ಕಬ್ಯಾಡಿ	,,
7)	ಶಾಂತಿನಗರ	,,
8)	ಕುಕ್ಕುದಕಟ್ಟೆ	,,
9)	ವರ್ಕಳ	ನಗರಸಭೆ ಉಡುಪಿ
10)	ಹೆರ್ಗ	,,
11)	ಪಂಚನಬೆಟ್ಟು	ಬೊಮ್ಮರಬೆಟ್ಟು
12)	ಕೊಂಡಾಡಿ 1	,,
13)	ಕೊಂಡಡಿ 2	,,
14)	ಪುತ್ತಿಗೆ	,,
15)	ಮುಂಚುಜಿ	,,
16)	ಪೆರಂಪಳ್ಳಿ 1	ನಗರಸಭೆ ಉಡುಪಿ
17)	ಪೆರಂಪಳ್ಳಿ 2	,,
18)	ಪೆರಂಪಳ್ಳಿ 3	,,
19)	ದೊಡ್ಡಣ ಗುಡ್ಡೆ	,,
20)	ಕಕ್ಕುಂಜೆ 1	,,
21)	ಸಗ್ರಿ	,,
22)	ನಿಟ್ಟೂರು	,,
23)	ಮಣಿಪ್ಪೋಳಿಗುಜ್ಜಿ	,,
24)	ಸ್ವಾಬ್ರಕಟ್ಟೆ 2	ಎಡ್ತಾಡಿ
25)	ಎಡ್ತಾಡಿ	,,
26)	ಅಲ್ತಾರು	,,
27)	ಹೇರಾಡಿ	,,
28)	ರಂಗನಕೇರಿ	,,
29)	ಕೂಡ್ಲಿ	,,
30)	ಎಂ.ಜೆ. ಕಾಲನಿ	ವಡ್ಡರ್ಸೆ
31)	ಕಾವಡಿ	,,

1	2	3
32)	ಶಿರಿಯಾರ	ಶಿರಿಯಾರ
33)	ಕೊಳ್ಕೆಬೈಲು	,,
34)	ಕಾಜ್ರಳ್ಳಿ (ಮೆಕ್ಕೆಕಟ್ಟು)	,,
35)	ಪಡುಮುಂಡು	,,
36)	ಶೇರ್ಣ	,,
37)	ಪೇತ್ರಿ	ಚೇರ್ಕಾಡಿ
38)	ಕನ್ನಾರು	,,
39)	ಮಡಿ	,,
40)	ಸುರೆಬೆಟ್ಟು (ಅಲಡ್ಕ)	,,
41)	ಕುಂಜಾಲು	ಕುಂಜಾಲು
42)	ಆರೂರು	,,
43)	ಕುರುಡುಂಜಿ	,,
44)	ಕೀರ್ತಿನಗರ	,,
45)	ಕೆರಾಡಿಮೇಲ್	,,
46)	ಬೆಳ್ಮಾರು	ಕುಂಜಾಲು
47)	ಕರ್ಜೆ	ಹೊಸೂರು
48)	ಕುರ್ಪಾಡಿ	,,
49)	ಹರಾವು	,,
50)	ಕಡಂಗೋಡು	,,
51)	ಹಲುವಳ್ಳಿ	,,
52)	ಎ.ಪಿ.ಶಾಲಿ ಹಂದಾಡಿ	ಹಂದಾಡಿ
53)	ಮುಳ್ಳುಜಿಡ್ಡು	,,
54)	ಮಟಪಾಡಿ	,,
55)	ಕುಮ್ರಗೋಡು	,,
56)	ಮಟಪಾಡಿ ಬಲ್ಜಿ	,,
57)	ಹೇರೂರು ಎಂಡಿ.	ಜಾಂತಾರು
58)	ಹೇರೂರು ಶಾಲೆ	,,
59)	ರಾಜೀವನಗರ	,,

1	2	3	1
60)	ಅಂಗಡಿಬೆಟ್ಟು	„	
61)	ಹೇರೂರು 2	„	
62)	ಬೈಕಾಡಿ	ಹಾರಾಡಿ	
63)	ಗಾಂಧಿನಗರ ಬೈಕಾಡಿ	„	
64)	ಹಾರಾಡಿ ಹೊಸ್ನಾಳ	„	
65)	ಕುಕ್ಕುಡಿ	„	
66)	ಬೋರ್ಡ್‌ಶಾಲೆ	ವಾರಂಬಳ್ಳಿ	
67)	ವಾರಂಬಳ್ಳಿ ಕಾಲೋನಿ	„	
68)	ಇಂದಿರಾನಗರ	„	
69)	ಸಾಲಿಕೇರಿ	„	
70)	ಅವರ್ಸೆ	ಅವರ್ಸೆ	
71)	ಹೈಕಾಡಿ	„	
72)	ಹಿಲಿಯಾಣ	„	
73)	ನಡುಬಿಡ್ಡು	ಹೆಗ್ಗುಂಜೆ	
74)	ಹೆಗ್ಗುಂಜೆ	„	
75)	ಮುದ್ದುಮನೆ	„	
76)	ಶೀರೂರುಮೂರುಕೈ	„	
77)	ಮೂಡುಗುಡ್ಡೆ	„	
78)	ಬಲ್ಲಾಡಿ	ಬಲ್ಲಾಡಿ	
79)	ಮಣಿಕಲ್	„	
80)	ಬಿಜ್ಜಾಡಿ	„	
81)	ಗುಲ್ವಾಡಿಮನೆ	„	
82)	ಕಕ್ಕುಂಜೆ	„	
83)	ಮೂರ್ವಿ	„	
84)	ಕೇದಾರ್	ಉದ್ಯಾವರ	
85)	ಬೊಳ್ಜೆಶಾಲೆ	„	
86)	ಮುದ್ದೆಲಗುಡ್ಡೆ	„	
87)	ಜೋಳಾರಗುಡ್ಡೆ	„	

1	2	3
88)	ಪಿತ್ರೋಡಿ	,,
89)	ಉದ್ಯಾವರ ಪಡುಕೆರೆ	,,
90)	ಉದ್ಯಾವರಿ ಮೇಲ್ಪೇಟೆ	,,
91)	ಸಂಪಿಗೆ ನಗರ	ಉದ್ಯಾವರ
92)	ಜೆ.ಎಸ್. ನಗರ	ಕಟಪಾಡಿ
93)	ಎಣಗುಡ್ಡೆ	,,
94)	ಶಂಕರಪುರ	,,
95)	ಕಟಪಾಡಿಬೀಡು	,,
96)	ಅಚ್ಚಡ	,,
97)	ಕೋಟೆ	ಕೋಟೆ
98)	ಕೋಟೆಪಟ್ನ	,,
99)	ಇಂದಿರಾನಗರ	,,
100)	ಮಟ್ಟು	,,
101)	ಗಿರಿನಗರ	ಕುರ್ಕಾಲ್
102)	ಕುರ್ಕಾಲ್	,,
103)	ಸುಭಾಶ್‌ನಗರ	,,
104)	ಪಾಡಿಗಾರ	ಪೆರ್ಡೂರು
105)	ಬಾಳೆಬ್ಬೈಲು	,,
106)	ಶ್ಯಾನರಬೆಟ್ಟು	,,
107)	ಅಲಂಗಾರು	,,
108)	ಜೋಗಿಬೆಟ್ಟು	,,
109)	ಹೊಸಂಗಡಿ	,,
110)	ಬಜಿ	ಕುಕ್ಕೆಹಳ್ಳಿ
111)	ಕುಕ್ನಾಹಳ್ಳಿ	,,
112)	ಮರಾಠಕೇರಿ	,,
113)	ಕುಕ್ಕೇಹಳ್ಳಿ	,,
114)	ಕಂಬ್ಳಮಂಜು	,,
115)	ದೊಡ್ಡಣಗುಡ್ಡೆ	,,

1	2	3
116)	ಬೈರಂಪಳ್ಳಿ	ಬೈರಂಪಳ್ಳಿ
117)	41 ಶೀರೂರು	"
118)	ಕೊಫದಕಟ್ಟೆ	"
119)	ಬಂಡಶಾಲೆ	"
120)	ಮಣಿಪುರ ವಿ.ಪಿ.	ಮಣಿಪುರ
121)	ಮಣಿಪುರ ಎಂ.ಎಂ	"
122)	ಕುಂತಳನಗರ	"
123)	ಮರ್ಣೆ	"
124)	ಗುಂಡುಪಾಜಿ	"
125)	ಕೊಡಂಗಲ	"
126)	ಅಲೆವೂರು	ಅಲೆವೂರು
127)	ಅಲೆವೂರುಪದವು	"
128)	ಕರ್ವಾಲ್	"
129)	ಕೊರಂಗ್ರಪಾಡಿ 2	"
130)	ಪಡುಅಲೆವೂರು	"
131)	ಬೈಲೂರು	26 ಬಡಗಬೆಟ್ಟು
132)	ಹನುಮಾನ್ ಗ್ಯಾರೇಜ್	ನಗರಸಭೆ
133)	ಮೂಡುಬೆಳ್ಳಿ	ಬೆಳ್ಳಿ
134)	ಕಪ್ಪಂಡ ಕರಿಯ	ಬೆಳ್ಳಿ
135)	ಕಾಜರಗುತ್ತು	ಕೊಡಿಬೆಟ್ಟು
136)	ಪಾರ್ವಾಡಿ	"
137)	ಪೆರ್ಣಂಕಿಲ	"
138)	ಓಂತಿಬೆಟ್ಟು	"
139)	ಪಡು ಅಂಜಾರು	"
140)	ಕುರಿ	"
141)	ಕೊಡಿಬೆಟ್ಟು	"
142)	ಬಾರ್ಕೂರು	ಬಾರ್ಕೂರು
143)	ನಾಗರಮಣಿ 1	"

1	2	3
144)	ಹನೆಹಳ್ಳಿ	ಹನೆಹಳ್ಳಿ
145)	ಮೂಡುಕೇರಿ	,,
146)	ಬಂಡೀಮಠ	,,
147)	ಕೊರಾಡಿ	,,
148)	ಕಾಡ್ತೂರು	ಕಾಡೂರು
149)	ಬಸ್ತಿಗುಡ್ಡೆ	,,
150)	ಮೂಳೂರು	ಕಾಪು
151)	ಕಡು	,,
152)	ಪೊಲಿಪು	,,
153)	ಕೊಪ್ಪಲಂಗಡಿ	,,
154)	ಮಲ್ಲಾರು	ಮಲ್ಲಾರು
155)	ಪಕೀರ್ನಕಟ್ಟೆ	,,
156)	ಪಕೀರ್ನಕಟ್ಟೆ ಮಸೀದಿ	,,
157)	ರಾಣ್ಯಕೇರಿ	,,
158)	ಮಜೂರು	ಮಜೂರು
159)	ಮಜೂರು ಪಂ. ಬಳಿ	,,
160)	ಪಾದೂರು	,,
161)	ಚಂದ್ರನಗರ	,,
162)	69 ಹೇರೂರು	,,
163)	ಕೈಪುಂಜಾಲು	ಉಲಿಯಾರಗೊ
164)	ಕಲ್ಯ 1	,,
165)	ಕಲ್ಯ 2	,,
166)	ಇನ್ನಂಜೆ	ಇನ್ನಂಜೆ
167)	ಕಲ್ಲಮಂಜೇಡಿ	,,
168)	ಪಾಂಗಾಳಗುಡ್ಡೆ	,,
169)	ಗಾಂಧಿನಗರ	,,
170)	ಪಡುನಿಟ್ಟೂರು	ನಗರಸಭೆ ಉಡುಪಿ
171)	ಕೊಡಂಕೂರು 1	,,
172)	ಸಂತೆಕಟ್ಟೆ 1	,,

1	2	3
173)	ಉಪ್ಪೂರು ಸಾಲ್ಮರ	,,
174)	ಉಗ್ಗೆಲ್‌ಬೆಟ್ಟು	,,
175)	ಲಕ್ಷ್ಮೀನಗರ	,,
176)	ಕಾರ್ತಿಬೈಲು	ಹಾವಂಜಿ
177)	ಗೋಳಿಕಟ್ಟೆ	ಹಾವಂಜಿ
178)	ಹೊಡೆ	ಕೆಮ್ಮಣ್ಣು
179)	ಬಡನಿಡಿಯೂರು	ಬಡನಿಡಿಯೂರು
180)	ಸನ್ಯಾಸಿಮಠ	,,
181)	ಕದಿಕೆ	,,
182)	ತೊಟ್ಟಂ 1	,,
183)	ತೆಂಕನಿಡಿಯೂರು	ತೆಂಕನಿಡಿಯೂರು
184)	ಕಳಾರ್ಕಳಬೆಟ್ಟು	,,
185)	ವಿಷ್ಣುಮೂರ್ತಿನಗರ	,,
186)	ಬಯಲಕೆರೆ	,,
187)	ನಿಡಂಬಳ್ಳಿ	ಕಲ್ಯಾಣಪುರ
188)	ಎಡಬೆಟ್ಟು	,,
189)	ಕಳನೇಜಾರು	,,
190)	ಐರೋಡಿ	ಐರೋಡಿ
191)	ಪಾಂಡೇಶ್ವರ	ಪಾಂಡೇಶ್ವರ
192)	ಚರ್ಚಶಾಲೆ	,,
193)	ನೀರ್ಲಾಡಿಜಿಡ್ಡು	,,
194)	ಎಡಬೆಟ್ಟು	,,
195)	ಮೂಡಹಡು	,,
196)	ನ್ಯೂಕಾರ್ಕಡ	ಸಾಲಿಗ್ರಾಮ ಪುರಸಭೆ
197)	ಗುಂಡ್ಮಿ	,,
198)	ಪಡುಬಿದ್ರಿ	ಪಡುಬಿದ್ರಿ
199)	ಬೀಡಿನಕೇರೆ	,,
200)	ಕರಜನಡ್ಕ	,,
201)	ನವಶಕ್ತಿ	,,

1	2	3
202)	ಪಾದೆಬೆಟ್ಟು	”
203)	ತೆಂಕ 1	ತೆಂಕ
204)	ತೆಂಕ 2	”
205)	ಎರ್ಮಾಳ ಗರೊಡಿ	”
206)	ಪೊಂದಾಡ	”
207)	ಹೆಜಮಾಡಿ 2	ಹೆಜಮಾಡಿ
208)	ಬೋರುಗುಡ್ಡೆ	”
209)	ಉಚ್ಚಿಲ	ಬಡಾ
210)	ಉಚ್ಚಿಲಪಡು	”
211)	ನಿರ್ಮಾಳ್ ಬಡಾ	”
212)	ಎರ್ಮಾಳ್ ತೊಟ್ಟಂ	”
213)	ಮುಳ್ಳುಗುಡ್ಡೆ	”
214)	ಫಲಮಾರು	ಫಲಮಾರು
215)	ಮೂಡುಫಲಿಮಾರು	
216)	ಅವರಲೆಮಟ್ಟು	”
217)	ನಂದಿಕೂರು 1	ಫಲಿಮೂರು
218)	ನಂದಿಕೂರು 2	”
219)	ಎಲ್ಲೂರು	ಎಲ್ಲೂರು
220)	ಪಣಿಯೂರು ಸೆಂಟರ್	”
221)	ಇರಂದಾಡಿ	”
222)	ದುರ್ಗಾನಗರ	”
223)	ಉಕ್ಕುಕ್ಕಿಕಟ್ಟೆ	ಎಲ್ಲೂರು
224)	ಪಿಲಾರಲ	ಮುದದಂಗಡಿ
225)	ಪಿಲಾರ್‌ಖಾನ್	”
226)	ಸಾಂತಲಾತು 2	”
227)	ಕೋಡಿ	ಕೋಡಿ
228)	ಕೋಡಿಕನ್ಯಾನ	”
229)	ಕೋಡಿದೆಂಗ್ರೆ	”

1	2	3
230)	ಕೋಟತಟ್ಟು	ಕೋಟತಟ್ಟು
231)	ಅರಾಮದೇವಸ್ಥಾನ	,,
232)	ಕೋಟಶಾಲೆ	,,
233)	ಹಂದಟ್ಟು	,,
234)	ಕೋಟ ಕಲ್ಮಾಡಿ	,,
235)	ಕಾಸನಗುಂಡು	ಕೋಟ
236)	ಮುಡುಗಿಳಿಯಾರು	,,
237)	ಹೊಸಬೆಂಗ್ರ	ಕೋಡಿ
238)	ಹೊಸರಕಾಲನಿ	ಕೋಟ
239)	ಮೂಡುಗಿಳಿಯಾರ ಜಂಕ್ಷನ್	,,
240)	ಜಿಟ್ಟಿಗದೇವಸ್ಥಾನ	,,
241)	ಮಣೂರು	,,
242)	ದಾಸನಕಟ್ಟೆ	ಸಾಲ್ಲೂರು
243)	ಮದ್ದೂರು ಪೇಟ ಅರ್ಧ	,,
244)	ಹಸ್ಕುಂದ	,,
245)	ಹಸ್ಕುಂದ ಕಲ್ಮನ್	,,
246)	ತಾರಿಕಟ್ಟೆ	,,
247)	ಅಂಬಾರಮಕ್ಕಿ	,,
248)	ನಂಜಾರು	,,
249)	ಕೆಂಜೂರು	ಕಳತ್ತೂರು ಸಂತೆಕಟ್ಟೆ
250)	ಬಲ್ಲಿಬೈಲು	,,
251)	ಬೈದೆಬಿಟ್ಟು	,,
252)	ಕೊಕ್ಕರ್ಣೆ	ಕೊಕ್ಕರ್ಣೆ
253)	ಸುರಾಲು	,,
254)	ಜಿಗ್ರಬೆಟ್ಟು	,,
255)	ಕೋಟಂಬೈಲು	,,
256)	ಪಡುಕೋಟಂಬೈಲು	,,
257)	ನುಕ್ಕೂರು	,,
258)	ಸಾಸ್ತಾವು	,,

1	2	3
259)	ಬೀಡಿನಗುಡ್ಡೆ	ನಗರಸಭೆ ಉಡುಪಿ
260)	ಕಲ್ಮಾಡಿ	"
261)	ಮಲ್ಪೆ ಪಡು 1	ಅಂಬಲಪಾಡಿ
262)	ಮಲ್ಪೆ ಪಡು 2	ಉಡುಪಿ ನಗರಸಭೆ
263)	ಮಲ್ಪೆಪಡು 3	"
264)	ಕೊಳ 1	"
265)	ಮೂಡಬೆಟ್ಟು	"
266)	ಮದ್ವನಗರ	"
267)	ಹಾಳೆಕಟ್ಟೆ	"
268)	ಲಕ್ಷ್ಮೀನಗರ	"
269)	ಕಡೆಕಾರ್	ಕಡೆಕಾರ
270)	ಕನರ್‌ಪಾಡಿ	"
271)	ಕಲತ್ಪಾಡಿ	"
272)	ಒಬ್ಬಿರ್ಯಗುಡ್ಡೆ	"
273)	ಕುತ್ಪಾಡಿ ಜನತಾ ಕಾಲೋನಿ	"
274)	ಅಂಬಲಪಾಡಿ	ಅಂಬಲಪಾಡಿ
275)	ಪಂದುಬೆಟ್ಟು	ಕಡೆಕಾರ್
276)	ಕಿಡಿಯೂರು	ಅಂಬಲಪಾಡಿ
277)	ಕಪ್ಪೆಟ್ಟು	ಅಂಬಲಪಾಡಿ
278)	ಕಡೆಕಾರ್‌ಪಡುಕಲಿ	ಕಡೆಕಾರ್
279)	ಶಿರ್ವಪದವು	ಶಿರ್ವ
280)	ಹಿಂದೂಶಾಲೆ	"
281)	ದರ್ಮೆಟ್ಟು	"
282)	ಇಂದ್ರಾಪುರ	"
283)	ಜರಿಟಿಕಲ್ಲು	"
284)	ಕೋಡುದುರ್ಗಾಂಬಿಕಾ ಶಾಲೆ	"
285)	ಮಟ್ಟೂರು	"
286)	ಶಾರದಾಶಾಲೆ	"

1	2	3
287)	ತಂಕರಪಲ್ಕ್	”
288)	ಎಸ್.ಎಂ.ಎಸ್. ಪಂಜಿಮಾರ್	”
289)	ನೋರ್ಕಳ	”
290)	ಕುತ್ಯಾರು	ಕುತ್ಯಾರು
291)	ಅಗರಬಂಡೆ	”
292)	ಕಳತ್ತೂರು 1	”
293)	ಕಳತ್ತೂರು 2	”
294)	ಬೆಳಪು	ಬೆಳಪು
295)	ಜವನರಕಟ್ಟೆ	”
296)	ಪಾಂಬೂರು	”
297)	ಪಡುಬೆಳ್ಳೆ	”

ಉಡುಪಿ ತಾಲ್ಲೂಕಿನಲ್ಲಿರುವ ಸ್ವಂತ ಅಂಗನವಾಡಿ ಕಟ್ಟಡವಿಲ್ಲದ ಅಂಗನವಾಡಿ ಕೇಂದ್ರಗಳ ಪಟ್ಟಿ

ಕ್ರಮ ಸಂಖ್ಯೆ	ಅಂಗನವಾಡಿ ಕೇಂದ್ರಗಳ ಹೆಸರು	ಗ್ರಾಮಪಂಚಾಯತ್
1)	ಬಾಳ್ಕಟ್ಟ	ಅತ್ರಾಡಿ
2)	ಆದರ್ಶ ನಗರ	ಬಡಗಬೆಟ್ಟು
3)	ದೊಡಣಗಡ್ಡೆ-2	ನಗರ ಸಭೆ
4)	ಶೆಟ್ಟಿಬೆಟ್ಟು	ನಗರಸಭೆ
5)	ಗೋಳಿಕಟ್ಟೆ	”
6)	ಬಿ.ಎಂ.ಶಾಲೆ	”
7)	ಸಣ್ಣಕ್ಕಿಬೆಟ್ಟು	”
8)	ಕೆ.ಇ.ಬಿ. ಅಂಗನವಾಡಿ	ಬೊಮ್ಮರಬೆಟ್ಟು
9)	ಕುಕ್ಕುಂಜೆ 2	ನಗರಸಭೆ, ಉಡುಪಿ
10)	ನಯಂಪಳ್ಳಿ	”
11)	ಬುಡ್ನಾರು	”
12)	ಮಂಚಿ	”
13)	ಕಾಜ್ರಳ್ಳಿ	ಎಡ್ತಾಡಿ
14)	ಗಿರಿಕಮಠ	”
15)	ಬನ್ನಾಡಿ	”

1	2	3
16)	ಪರಮಹಂಸ ಶಾಲೆ	ವಡ್ಡರ್ಸೆ
17)	ಅಚಲಾಡಿ	,,
18)	ವಡ್ಡರ್ಸೆ	,,
19)	ಶಿರಿಯಾರ ಮೇಲ್ಮನೆ	ಶಿರಿಯಾರ
20)	ಮೂಮಡ್ಡಿನಜೆಡ್ಡು	ಜೇರ್ಕಾಡಿ
21)	ದಾಸನವೊಳಲು	,,
22)	ನೀಲಾವರ	ಕುಂಜಾಲು
23)	ಸಂದನಕುದ್ರು	,,
24)	ಎಳ್ಳಂಪಳ್ಳಿ	,,
25)	ನೀಲಾವರ ಗುಡ್ಡೆ	,,
26)	ಮೇಲ್ಕರ್ಜೆ	ಹೊಸೂರು
27)	ಹಳಮಳಿಗೆ (ಸೂಚಿ)	,,
28)	ಬೆಣ್ಣೆಕುದ್ರು	ಹಂದಾಡಿ
29)	ಗಣಪತಿ ದೇವಸ್ಥಾನ	,,
30)	ಹೇರಂಜಿ	ಚಾಂತಾರು
31)	ಬ್ರಹ್ಮಾವರ	,,
32)	ಶಂಕರನಾರಾಯಣ	ಆವರ್ಸೆ
33)	ಕಿರಾಡಿ	,,
34)	ಜೋರಾಡಿ	,,
35)	ಮಾವಿನಕಟ್ಟೆ	,,
36)	ಕಾರಿಕೂಡ್ಲು	ಆವರ್ಸೆ
37)	ಹೊಯ್ಗೆಬೇಳಾರ್	,,
38)	ಭಾವಣ	,,
39)	ದೂಪದಕಟ್ಟೆ	,,
40)	ಗುಡಮಕ್ಕಿ	,,
41)	ಕಕ್ಕುಂಜೆ–2	,,
42)	ಪೂರ್ವಿ	ಹೆಗ್ಗುಂಜೆ
43)	ರತ್ನಗಿರಿ	ಆವರ್ಸೆ

1	2	3
44)	ಹೊಳೆಬಾಗಿಲು	ಹೆಗ್ಗುಂಜೆ
45)	ಬನ್ನೇರ್ಲು ಕಟ್ಟೆ	ಬಿಲ್ಲಾಡಿ
46)	ನೈಲಾಡಿ	”
47)	ಹಳ್ಳಿಬೈಲು	”
48)	ಕೊಕ್ಕನಬೈಲು	”
49)	ಮಠದಂಗಡಿ	ಉದ್ಯಾವರ
50)	ಗುಡ್ಡೆಯಂಗಡಿ	”
51)	ಜೊಕ್ಕಾಡಿ	ಕಟಪಾಡಿ
52)	ಶಿವಾನಂದನಗರ	”
53)	ಸರ್ಕಾರಿ ಗುಡ್ಡೆ	”
54)	ಮಟ್ಟು ಎಸ್.ಸಿ. ಕಾಲೋನಿ	ಕೋಟೆ
55)	ಮಟ್ಟು ದೇವಸ್ಥಾನ	”
56)	ಮೊಸಾರ	”
57)	ಪೆರ್ಡೂರು ಲೋಕಲ್	ಪೆರ್ಡೂರು
58)	ಕುಕ್ಕುಂಜಾರವು	”
59)	ಪಾಂಟ್ಯಾಳ	”
60)	ಹೆರ್ಡೆ	”
61)	ಅನಂತಪದ್ಮನಾಭ	”
62)	ಕುರುಬರ ಕೇರಿ	ಕುಕ್ಕೆಹಳ್ಳಿ
63)	ಕುಕ್ಕಿಕಟ್ಟೆ	”
64)	ಬೆಳ್ಳಂಪಳ್ಳಿ	”
65)	ಬೆಳ್ಳರ್ಪಾಡಿ	ಬೈರಂಪಳ್ಳಿ
66)	ಕುಂಟಾಲ್‌ಕಟ್ಟೆ	”
67)	ಹಾಲಕ್ಕಿ	”
68)	ಪಕ್ಕಾಲು	ಪೆರ್ಡೂರು
69)	ಮೂಡುಅಲೆವೂರು	ಅಲೆವೂರು
70)	ಕೊರಂಗ್ರಪಾಡಿ 1	”
71)	ಚಿಟ್ಪಾಡಿ	ನಗರಸಭೆ

1	2	3
72)	ಪಣಿಯಾಡಿ	ನಗರಸಭೆ
73)	ಇಂದಿರಾನಗರ	,,
74)	ದುಗ್ಲಿ	,,
75)	ಕುಕ್ಕಿಕಟ್ಟೆ	,,
76)	ಜಗನ್ನಾಥ ನಗರ	,,
77)	ಪಡುಬೈಲೂರು	,,
78)	ಅಕ್ಷರ ಕರಾವಳಿ	ಮೂಡುಬೆಳ್ಳೆ
79)	ತಿರ್ಲಪಲ್ಕೆ	,,
80)	ಕಟ್ಟೆಂಗೇರಿ	,,
81)	ಪಡುಬೆಟ್ಟು	,,
82)	ಬೆರಂಜೆ	,,
83)	ಹಾಲೆಕೋಡಿ	ಚಾರ್ಕೂರು
84)	ಮೆರಿನೋಳ್	,,
85)	ನಾಗರ ಮಠ 2	,,
86)	ಹನೆಹಳ್ಳಿ ಕಾಲನಿ	ಹನೆಹಳ್ಳಿ
87)	ಮುಂಡಾಡಿ	ಕಾಡೂರು
88)	ನಡೂರು	,,
89)	ಅಲೆಯ	,,
90)	ತಂತ್ರಾಡಿ	,,
91)	ಕಂಡಿಕೆ	ಕಾಡೂರು
92)	ಮೂಳೂರು ಯುಬಿಎಂಸಿ	ಕಾಪು
93)	ಮಾಳೂರು 2	,,
94)	ಪೊಲಿಪು ಗರಡಿಬಳಿ	,,
95)	ಕೋತಲಕಟ್ಟೆ	ಉಳಿಯಾರಗೋಳಿ
96)	ಪಾಂಗಾಳ 2	ಇನ್ನಂಜೆ
97)	ಕೊಡಂಕೂರು 2	ನಗರ ಸಭೆ, ಉಡುಪಿ
98)	ರಾಜೀವನಗರ	,,
99)	ಹನುಮಂತನಗರ	,,

1	2	3
100)	ಹನುಮಂತನಗರ ಶಾಲೆ	,,
101)	ಸುಬ್ರಮಣ್ಯ ಗುಡ್ಡೆ	,,
102)	ಎಲ್.ವಿ.ಪಿ.1	,,
103)	ಎಲ್.ವಿ.ಪಿ.2	,,
104)	ಅಮ್ಮುಂಜೆ	ಉಪ್ಪೂರು
105)	ಕುದ್ರುಬೆಟ್ಟು	,,
106)	ಜೆ. ರ್‍ಯಾಬೆಟ್ಟು	,,
107)	ಜಾತಬೆಟ್ಟು	,,
108)	ಕೀಳಂಜೆ	ಹಾವಂಜೆ
109)	ದಾಸಬೆಟ್ಟು	,,
110)	ಮುಗ್ಗೇರಿ	,,
111)	ಹಿಂದೂ ಶಾಲೆ ಕೆಮ್ಮಣ್ಣು	ಕೆಮ್ಮಣ್ಣು
112)	ಪಡುಕುದ್ರು	,,
113)	ಕಾನ್ವೆಂಟ್ ಕೆಮ್ಮಣ್ಣು	,,
114)	ಖಂಡಿಗೆ ಶಾಲೆ	,,
115)	ಗುಜ್ಜರ್‌ಬೆಟ್ಟು 1	,,
116)	ಗುಜ್ಜರ್‌ಬೆಟ್ಟು 2	,,
117)	ಗುಡೇರಿಕಂಬ್ಳ	,,
118)	ಪಡುತೋನ್ಸೆಬೆಂಗ್ರೆ	,,
119)	ಗರಡಿಮಜಲು	ತೆಂಕನಿಡಿಯೂರು
120)	ಬೆಳ್ಕಲೆ	,,
121)	ಹಿಂದೂಶಾಲೆ ಕಲ್ಯಾಣಪುರ	ಕಲ್ಯಾಣಪುರ
122)	ನೇಜಾರು	,,
123)	ತೊಟ್ಟಂ 2	ನಗರಸಭೆ
124)	ಜೆಪ್ಪುಕಟ್ಟೆಕಿ	ಪಕಾಡಿ
125)	ಅಲ್ಸೆಬೆಟ್ಟು	,,
126)	ಹಂಗಾರ್‌ಕಟ್ಟೆ	,,
127)	ದಂಡಿಬೆಟ್ಟು	,,

1	2	3
128)	ಚಿತ್ರಪಾಡಿ	ಸಾಲಿಗ್ರಾಮ ಪುರಸಭೆ
129)	ಪಾರಂಪಳ್ಳಿ	,,
130)	ಗೆಂಡೆಕೆರೆ	,,
131)	ಹದ್ದಿನಬೆಟ್ಟು	,,
132)	ಗುಂಡ್ಮಿ ಮಸೀದಿ	,,
133)	ಪಾತಾಳಬೆಟ್ಟು	,,
134)	ಪಡುಕೆರೆ	,,
135)	ಕಾರ್ಕಡ	,,
136)	ಚೆಲ್ಲಮಕ್ಕಿ	,,
137)	ಪಡುಬಿದ್ರಿ	ಪಡುಬಿದ್ರಿ
138)	ನಾಗರಾಜ ಎಸ್ಟೇಟ್	,,
139)	ಪೂಲ	,,
140)	ಹೆಜಮಾಡಿ 1ಕೆ	ಹೆಜಮಾಡಿ
141)	ಹೆಜಮಾಡಿಕೋಡಿ	,,
142)	ಹೆಮಾಡಿ ಮಟ್ಟು	,,
143)	ಶ್ರೀನಿಧಿ	ಬಡಾ
144)	ದುರ್ಗಾಪರಮೇಶ್ವರಿ	,,
145)	ಆಧಮಾರು	ಎಲ್ಲೂರು
146)	ಮುದರಂಗಡಿ	ಮುದರಂಗಡಿ
147)	ಕೋಡಿತಲೆ	ಕೋಡಿ
148)	ದಾನಕುಂದ	ಕೋಟತಟ್ಟು
149)	ಕದ್ರಿಕಟ್ಟೆ	ಕೋಟ
150)	ನಂದಿಕೇಶ್ವರ	,,
151)	ರಾಮಪ್ರಸಾದ್ ಶಾಲೆ	ಕೋಟ
152)	ಮಿಯಾರುಬೆಟ್ಟು	ನಾಲ್ಕೂರು
153)	ಮಾರಾಳಿ	,,
154)	ಕಜ್ಕೆ	,,
155)	ಅರಮನೆ ಜೆಡ್ಡು	,,

1	2	3
156)	ಹೆಸ್ಕುಂದ	"
157)	ನಾಲ್ಕೂರು 2	"
158)	ಕಳ್ತೂರು	ಕಳ್ತೂರು ಸಂತೆಕಟ್ಟೆ
159)	ಸಂತೆಕಟ್ಟೆ	"
160)	ಅಮುಚಿ	"
161)	ಗಾಂಧಿನಗರ	ಕೊಕ್ಕರ್ಣೆ
162)	ಒಳಬೈಲು	"
163)	ಬೆನಗಲ್	"
164)	ವಡ್ಡಂಬೆಟ್ಟು	"
165)	ಹೊರ್ಲಾಳಿ	"
166)	ಮೊಗವೀರ ಪೇಟೆ	"
167)	ಬಿ.ಎಂ.ಎಂ. ಶಾಲೆ ಕೊಕ್ಕರ್ಣೆ	ಕೊಕ್ಕರ್ಣೆ
168)	ಅಜ್ಜರಕಾಡು	ನಗರಸಭೆ ಉಡುಪಿ
169)	ನಾರ್ತ್‌ಶಾಲೆ	"
170)	ಸೌತ್ ಶಾಲೆ	"
171)	ಸರಸ್ವತಿ ಶಾಲೆ	"
172)	ಮಹಾತ್ಮಾಗಾಂಧಿ ಶಾಲೆ	"
173)	ಬಾಪುತೋಟ	"
174)	ಬೊಟ್ಟಲ	"
175)	ಕೊಳ 2	"
176)	ಕೊಳ 3	"
177)	ಕೊಡವೂರು	"
178)	ಉದ್ದಿನಹಿತ್ಲು	"
179)	ಕನರ್‌ಪಾಡಿ 1	ಕಡೆಕಾರ್
180)	ಚಿತ್ರಬೆಟ್ಟು	ಶಿರ್ವ
181)	ಮೇಲ್‌ಬೊಳಿಂಜಾರ್	"
182)	ಕುತ್ಯಾರ್ ಪಂ.ಬಳಿ	ಕುತ್ಯಾರು
183)	ಪಾಂಬೂರು ಮಾನಸ	ಬೆಳ್ಳೆ

1	2	3
184)	ಸರಳಬೆಟ್ಟು	ನಗರಸಭೆ
185)	ನಾಲ್ಕೂರು	ನಾಲ್ಕೂರು
186)	ಸ್ವಾಬ್ರಕಟ್ಟೆ 1	ಎಡ್ತಾಡಿ
187)	ನೂಜಿನ ಬೈಲು	ಚೇರ್ಕಾಡಿ
188)	ಹಾರಾಡಿ ಶಾಲೆ	ಹಾರಾಡಿ
189)	ಸಿ.ಹೆಚ್.ಪಿ.ಭರ್ತಿ	ವಾರಂಬಳ್ಳಿ
190)	ಸಿ.ಹೆಚ್.ಪಿ. ಉಪ್ಪಿನಕೋಟೆ	"
191)	ಉಪ್ಪಿನಕೋಟೆ	"
192)	ಸಾಂತೂರು 1	ಮುದರಂಗಡಿ
193)	ದುರ್ಗಾನಗರ	ಕುರ್ಕಾಲ್
194)	ಮೆಣಸಿನಹಾಡಿ	ಪೆರ್ಡೂರು

ಕಟ್ಟಡಗಳು ಇಲ್ಲದ ಅಂಗನವಾಡಿ ಕೇಂದ್ರಗಳು ಕುಂದಾಪುರ ತಾಲ್ಲೂಕು

ಕ್ರಮ ಸಂಖ್ಯೆ	ಅಂಗನವಾಡಿ ಕೇಂದ್ರಗಳ ಹೆಸರು	ಪಂಚಾಯತ್ ಹೆಸರು
1)	ಕರ್ನಾಟಕ ಟೈಲ್ಸ್	ಪುರಸಭೆ
2)	ಮೈಲಾರೇಶ್ವರ	"
3)	ಚರ್ಚ್‌ರಸ್ತೆ	"
4)	ಯುಬಿಎಂಸಿ ಶಾಲೆ	"
5)	ಫೇರಿ ರಸ್ತೆ	"
6)	ಖಾರ್ವಿಣ ಕೇರಿ	"
7)	ವಡೇರ ಹೋಬಳಿ –2	"
8)	ನೂಜಿ	ಕಾಳಾವರ ಪಂಚಯತ್
9)	ಕಾಳವರ–ಎ	"
10)	ಅಸೋಡ –ಎ	"
11)	ಕಬ್ಸ್	ಕಾಲ್ತೋಡು ಪಂಚಾಯತ್
12)	ಯೆರು ಕೋಣೆ	ಹೇರೂರು ಪಂಚಾಯತ್
13)	ಮಯ್ಯಾಡಿ	ಬೈಂದೂರು ಪಂಚಾಯತ್
14)	ಸುರಕುಂದ	"
15)	ಬಾಡ	"

1	2	3
16)	ಹಳ್ಳಿ ಹೊಸೂರು	”
17)	ಅಮ್ಮನವರ ತೊಪ್ಲು	ಉಪ್ಪುಂದ ಪಂಚಾಯತ್
18)	ಪಡುವರಿ	ಪಡುವರಿ ಪಂಚಾಯತ್
19)	ಪಡು.ಕ	”
20)	ಕರಾವಳಿ–2	ಶಿರೂರು ಪಂಚಾಯತ್
21)	ಗೋಳಿ ಹೋಳಿ	ಗೋಳಿ ಹೊಳೆ ಪಂಚಾಯತ್
22)	ಯಳಜಿತ್	”
23)	ಡಿ. ಸನ್‌ಮರ್	ಜಡ್ಕಲ್ ಪಂಚಾಯತ್
24)	ಹಾಲ್ಕಲ್	”
25)	ಮುದೂರು ಜಿಜೆಡ್ ಪಿಎಸ್	”
26)	ಕೋಡಿ ಯುಜಿಎಂಸಿ	ಪುರಸಭೆ
27)	ಕೋಡಿ 1	”
28)	ಕೋಡಿ 2	”
29)	ಎಂ.ಕೋಡಿ	”
30)	ಕೋಡಿ ಮುನಕೇರ	”
31)	ಬಸ್ರೂರು–2	ಬಸ್ರೂರು ಪಂಚಾಯತ್
32)	ಕೋಣಿ 1	ಕೋಣಿ ಪಂಚಾಯತ್
33)	ಕಂದಾವರ	”
34)	ಬಳ್ಕೂರು	ಬಳ್ಕೂರು ಪಂಚಾಯತ್
35)	ವಾರಾಹಿ	ಸಿದ್ಧಾಪುರ ಪಂಚಯತ್
36)	ಎಳಬೇರು	ಹಳ್ಳಿ ಹೊಳೆ ಪಂಚಾಯತ್
37)	ಬಾಗಿಮಾನೆ	ಹೊಸಂಗಡಿ ಪಂಚಾಯತ್
38)	ಯದ್ನಾಳ	ಅಬ್ಬಿ
39)	ಬರೆಗುಂಡಿ	ಆಜ್ರೆ
40)	ಹೊಸಂಗಡಿ	ಹೊಸಂಗಡಿ
41)	ಬೆಳ್ಳಿ	ಬೆಳ್ತಿ ಗ್ರಾಮ ಪಂಚಾಯತ್
42)	ಹಂಟ	ಮಧಾಮಕ್ಕಿ ಪಂಚಾಯತ್
43)	ಹೈಕಾಡಿ	ಹಾಲಾಡಿ ಪಂಚಾಯತ್
44)	ಕುಳಂಜೆ	ಶಂಕರನಾರಾಯಣ

1	2	3
45)	ಮಜಟ್ಟು	ಅಮಾಸೆಬೈಲು
46)	ಬಳ್ಮನೆ	ಅಮಾಸೆ ಬೈಲು
47)	ಮೂಡಬೆಟ್ಟು	ಶಂಕರನಾರಾಯಣ
48)	ಮೂಡಬಗೆ	ಅಂಪಾರು
49)	ಗುಡಿಬೆಟ್ಟು	,,
50)	ಗಾವಳಿ	ಹಾರ್ದಳ್ಳಿ ಮಂಡಳ್ಳಿ
51)	ಕರಿಕಲ್ ಕಟ್ಟೆ	ಹೊಂಬಾಡಿ ಮುಂಡ್ಕಾಡಿ
52)	ಮೂಡಮರವಂತೆ	ಮರವಂತೆ
53)	ನಿರೋಣಿ	,,
54)	ತ್ರಾಸಿ	ತ್ರಾಸಿ
55)	ನಾಯಕೋಡಿ	ಗುಜ್ಜಾಡಿ
56)	ಬಂ.ಗಂಗೊಳ್ಳಿ	ಗಂಗೊಳ್ಳಿ
57)	ಮೊ. ಗಂಗೊಳ್ಳಿ	,,
58)	ಬಾರ್ತಿಕೊರಿ	,,
59)	ಹೆಮ್ಮಾಡಿ	ಹೆಮ್ಮಾಡಿ
60)	ದೇವಲ್ಕುಂದ	,,
61)	ಉಪ್ಪಿನಕುದ್ರು	ತಲ್ಲೂರು
62)	ಅಕ್ಷರ ಕರವಾಡಿ	ನಾಡ
63)	ಇಡೂರು ಜಿಎಲ್‌ಪಿಎಸ್	ಚಿತ್ತೂರು
64)	ಬೆಳ್ಳಾಲ	ನಾಡ
65)	ಅತ್ತಿಕೋಣೆ	ನಾಡ
66)	ಹಂದ್ಯನಗರಿ	ಕಂಡಿ
67)	ಕತೇರಿ	ಕೋಣಿ
68)	ತಟ್ಟೆಕಟ್ಟೆ	ತಟ್ಟೆಕಟ್ಟೆ
69)	ಬೇಲೂರು	ಬೇಲೂರು
70)	ಗಲವಾಡಿ	ಕಕುಂಜೆ
71)	ಹೊಸೂರು	ಚಿತ್ತೂರು
72)	ರಾಜಾಡಿ	ತಾಳೂರು

ಕಟ್ಟಡಗಳು ಇಲ್ಲದ ಅಂಗನವಾಡಿ ಕೇಂದ್ರಗಳು ಕಾರ್ಕಳ ತಾಲ್ಲೂಕು

ಕ್ರಮ ಸಂಖ್ಯೆ	ಅಂಗನವಾಡಿ ಕೇಂದ್ರಗಳ ಹೆಸರು	ಗ್ರಾಮಪಂಚಾಯಿತ್ ಹೆಸರು
1)	ದೇಂಗಬೆಟ್ಟು	ಸಾಣೂರು
2)	ಕಾರೋಲ್‌ಗುಡ್ಡೆ	ಮಿಯ್ಯಾರು
3)	ರಾಮೇರಗುತ್ತು	,,
4)	ಸಜ್ಜೇರಿ ಪೇಟೆ	ಮುಂಡ್ಕೂರು
5)	ಪಾಜನಕ್ಕ	ಮುಕಾದು
6)	ಕಾಬೆಟ್ಟು	ಪುರಸಭೆ
7)	ಗಂಗಾಧರೇಶ್ವರ	ರಂಜಾಳ
8)	ಬಗಲ್ಲಕಟ್ಟು	,,
9)	ಮೆಂತಾಡಿಜಡ್ಡು	ಜಿಲ್ರ
10)	ಸಜಲ	ಕಾಂತಾವರ
11)	ಪೊಂಜಾಜೆ	ಈರು
12)	ಮದಕ	ಕಾಂತಾವರ
13)	ಜಾರಿಗೆಕಟ್ಟೆ	ಮುಂಡ್ಕೂರು
14)	ಮೇಲ್ಮಠ	ಮುದ್ರಾಡಿ
15)	ಕನ್ಯಾನ	ಹೆಬ್ರಿ
16)	ಚಾರ	,,
17)	ಡೆರಾಲ್ಲಬೆಟ್ಟು	ರಂಜಾಳ
18)	ಪಂಜಾಲಕೆರೆ	,,
19)	ಗುಡ್ಡೆಯಂಗಡಿ	ಮರ್ಣೆ
20)	ಅಕ್ಕಾಲು ನಕ್ರೆ	ಕುಕ್ಕುಂದೂರು
21)	ಬಂಗ್ಲೆಗುಡ್ಡೆ	ಪುರಸಭೆ
22)	ಜೈನಾಶ್ರಮ	,,
23)	ಪತ್ತೊಂಜಿಕಟ್ಟೆ	,,
24)	ಮಲೆಬೆಟ್ಟು	ದುರ್ಗ
25)	ಕುಂಟಿಕೋಟ್ಟು	ಬೆಳ್ಮಣ್

ಅಂಗನವಾಡಿಗಳಲ್ಲಿ ಬೆಲ್ಲದ ಬದಲು ಸಕ್ಕರೆಯ ಉಪಯೋಗದ ಬಗ್ಗೆ

560 (4951) : ಶ್ರೀ ಗುರುಸ್ವಾಮಿ ಸಿ (ಚಾಮರಾಜನಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗನವಾಡಿ ಮತ್ತು ಇತರರಿಗೆ ಕೊಡುತ್ತಿರುವ ಆಹಾರ ತಯಾರಿಕೆಗಾಗಿ ಬೆಲ್ಲವನ್ನು ಉಪಯೋಗಿಸುತ್ತಿದ್ದು, ಕೆಲ ತಿಂಗಳುಗಳಿಂದ ಬೆಲ್ಲದ ಬದಲಿಗೆ ಸಕ್ಕರೆಯನ್ನು ಇಲಾಖೆಯು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಈ ಬದಲಾವಣೆಗೆ ಕಾರಣವೇನು; ತಿಳಿಸುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ)ಆ) 2003–04ನೇ ಸಾಲಿನಿಂದ ಅಮೈಲೈಸ್ ಯುಕ್ತ ಶಕ್ತಿಯುತ ಆಹಾರದಲ್ಲಿ ಬೆಲ್ಲದ ಬದಲಿಗೆ ಸಕ್ಕರೆಯನ್ನು ಉಪಯೋಗಿಸಬೇಕೆಂದು ದಿನಾಂಕ:28.2.2002 ರಂದು ನಡೆದ ತಜ್ಞರ ಸಭೆಯಲ್ಲಿ ಕೈಗೊಂಡ ನಿರ್ಧಾರದಂತೆ ಸಕ್ಕರೆಯನ್ನು ಉಪಯೋಗಿಸಲಾಗುತ್ತಿದೆ.

ಎ.ಆರ್.ಇ.ಎಫ್ ನಲ್ಲಿ ಬೆಲ್ಲವನ್ನು ಉಪಯೋಗಿಸುವುದರಿಂದ ಬೆಲ್ಲದಲ್ಲಿ ಕೆಲವು ಸಲ ಕಸ ಕಡ್ಡಿ ಕೂಡಿಕೊಂಡಿರುವುದರಿಂದ ಆಹಾರದ ಗುಣಮಟ್ಟದಲ್ಲಿ ಪರಿಣಾಮವಾಗುತ್ತಿರುವುದು ಹಾಗೂ ಇದರಿಂದ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುಬಹುದೆಂಬ ಉದ್ದೇಶದಿಂದ ಸಕ್ಕರೆಯನ್ನು ಉಪಯೋಗಿಸಲಾಗುತ್ತಿದೆ. ಅಕ್ಕಿ ಸಿಹಿ ಪೊಂಗಲ್ ತಯಾರಿಸಲು ಬೆಲ್ಲವನ್ನು ಉಪಯೋಗಿಸಲಾಗುತ್ತಿದೆ.

ಆಳಂದ ಸಕ್ಕರೆ ಕಾರ್ಖಾನೆಯ ಕಾಮಿಕರ ವೇತನ ಪಾವತಿ ಮಾಡುವ ಬಗ್ಗೆ

561 (4838) : ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಳಂದ ಸಕ್ಕರೆ ಕಾರ್ಖಾನೆಯ ಕಾಮಿಕರ ಸಂಬಳವನ್ನು ಹಲವು ತಿಂಗಳಿನಿಂದ ಪಾವತಿ ಮಾಡಿರುವುದಿಲ್ಲ. ಇದನ್ನು ಯಾವಾಗ ಪಾವತಿ ಮಾಡಲಾಗುವುದು:

ಆ) ರೈತರ ಕಬ್ಬಿನ ಬಿಲ್ ಎಷ್ಟಿದೆ; ಅದನ್ನು ಯಾವಾಗ ಸಂದಾಯ ಮಾಡಲಾಗುವುದು;

ಇ) ಸಕ್ಕರೆ ಉತ್ಪಾದನೆಯಿಂದ ಬಂದಿರುವ ಹಣವನ್ನು ಯಾವುದಕ್ಕಾಗಿ ಉಪಯೋಗಿಸಿದ್ದಾರೆ; ವಿವರ ನೀಡುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಆಳಂದ ಸಹಕಾರ ಸಕ್ಕರೆ ಕಾರ್ಖಾನೆಯ ಕಾರ್ಮಿಕರಿಗೆ ಸೆಪ್ಟೆಂಬರ್–2002ರಿಂದ ಇಲ್ಲಿಯವರೆವಿಗೆ ವೇತನ ಪಾವತಿ ಮಾಡಿರುವುದಿಲ್ಲ. ಜಿಲ್ಲಾಧಿಕಾರಿಗಳ ನಿರ್ದೇಶನ ಹಾಗೂ ಆಡಳಿತ ಮಂಡಳಿಯ ಸಭೆಯ ತೀರ್ಮಾನದಂತೆ ಸರ್ಕಾರದಿಂದ ಬಿಡುಗಡೆಯಾಗಬೇಕಾದ ಮೃದು ಸಾಲದಲ್ಲಿ ರೂ. 50.00 ಲಕ್ಷಗಳು ಪಾವತಿಸಲು ಕ್ರಮವಿಡಲಾಗುತ್ತಿದೆ.

ಆ) ರೈತರ ಹಿಂದಿನ ಬಾಕಿ ರೂ. 3.92 ಕೋಟಿ ಚಾಲ್ತಿ ಹಂಗಾಮಿನ ಬಾಕಿ ರೂ. 2.03 ಕೋಟಿ ಒಟ್ಟು ರೂ. 5.95 ಕೋಟಿ ಬಾಕಿ ಇರುತ್ತದೆ. ಸರ್ಕಾರದಿಂದ ರೂ. 3.00 ಕೋಟಿ ಮೃದು ಸಾಲ ಬಿಡುಗಡೆಯಾದ ನಂತರ ಮಂಜೂರಾತಿ ಷರತ್ತುಗಳಂತೆ ಪಾವತಿಗೆ ಕ್ರಮವಿಡಲಾಗುವುದು. ಬೀದರ್ ಡಿಸಿಸಿ ಬ್ಯಾಂಕ್‌ನಿಂದ ಒತ್ತೆ ಸಾಲ ಪಡೆಯಲು ಸಹ ಕ್ರಮವಿಡಲಾಗುವುದು.

ಇ) 2002–03ನೇ ಸಾಲಿನಲ್ಲಿ ಉತ್ಪಾದನೆಯಾದ ಸಕ್ಕರೆ 7065 ಟನ್ ಬೀದರ್ ಡಿಸಿಸಿ ಬ್ಯಾಂಕ್‌ಗೆ ಅಡವಿಟ್ಟು ರೂ. 203.00 ಲಕ್ಷಗಳ ಸಾಲವನ್ನು ಪಡೆದು ರೈತರ ಕಬ್ಬಿನ ಬಿಲ್ಲನ್ನು ಪಾವತಿಸಿದೆ.

ರಾಜ್ಯದಲ್ಲಿ ಸುಗಂಧ ಸಸ್ಯಗಳ ರಫ್ತು ವಲಯ ಸ್ಥಾಪನೆ

562 (4871) : ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸುಗಂಧ ಸಸ್ಯಗಳ ರಫ್ತು ವಲಯ ನಿರ್ಮಿಸಲು ಸರ್ಕಾರ ಯೋಜನೆಯನ್ನು ತಯಾರಿಸಿದೆಯೇ?

ಆ) ಹಾಗಿದ್ದಲ್ಲಿ ಯೋಜನೆಯ ಅಂದಾಜು ವೆಚ್ಚ ಎಷ್ಟು?

ಇ) ಈ ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಲಾಗಿದೆ?

ಈ) ಹಾಗಿದ್ದಲ್ಲಿ ಯಾವಾಗ ಕಳುಹಿಸಲಾಗಿದೆ.

ಉ) ಕೇಂದ್ರ ಸರ್ಕಾರದಿಂದ ಅನುಮತಿ ದೊರಕಿದೆಯೇ?

ಊ) ಇಲ್ಲದಿದ್ದಲ್ಲಿ ಅನುಮತಿ ಪಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಋ) ಈ ಉದ್ದೇಶಿತ ರಫ್ತುವಲಯ ನಿರ್ಮಿಸಿರುವುದರಿಂದ ಆಗತಕ್ಕ ಪ್ರಯೋಜನಗಳೇನು?

ಎ) ರಾಜ್ಯ ಸರ್ಕಾರ ಇದಕ್ಕಾಗಿ ಖರ್ಚು ಮಾಡಲಿರುವ ಹಣವೆಷ್ಟು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ತಯಾರಿಸಿದೆ.

ಆ) ಅಂದಾಜು ವೆಚ್ಚವು ರೂ. 22.53 ಕೋಟಿಗಳಾಗಿರುತ್ತದೆ.

ಇ) ಹೌದು

ಈ) ಏಪ್ರಿಲ್ 2003 ರಲ್ಲಿ ಕಳುಹಿಸಲಾಗಿದೆ.

ಉ) ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಮಾರ್ಪಾಡು, ರಫ್ತು ಮಾರುಕಟ್ಟೆ ವಿವರ ಮತ್ತಿತರೆ ವಿವರಗಳನ್ನು ಕೇಂದ್ರ ಸರ್ಕಾರವು ಕೋರಿದ್ದು ಈ ವಿವರಗಳನ್ನು ಸಲ್ಲಿಸಲಾಗಿದೆ.

ಋ) ಉದ್ದೇಶಿತ ಸುಗಂಧ ಸಸ್ಯಗಳ ರಫ್ತುವಲಯ ಸ್ಥಾಪನೆಯಿಂದ ನಿಸರ್ಗದಲ್ಲಿ ಹಾಳಾಗುತ್ತಿರುವ ಈ ಸಸ್ಯ ಸಂಪತ್ತಿನ ಸಂರಕ್ಷಣೆ ರೈತರಿಗೆ ಉತ್ತಮ ಗುಣಮಟ್ಟದ ಸಸಿಗಳ ದೊರೆಯುವಿಕೆ. ಸುಗಂಧ ಸಸ್ಯಗಳ ಸಂಗ್ರಹಣೆ ಶೇಖರಣೆ; ಸಂಸ್ಕರಣೆ ಹಾಗೂ ಮೌಲ್ಯ ಹೆಚ್ಚಳದ ಮೂಲ ಸೌಕರ್ಯಕ್ಕೆ ಸಹಾಯ, ರೈತರಿಗೆ ದೊರೆಯುವ ಆದಾಯದಲ್ಲಿ ಹೆಚ್ಚಳ ವಿದೇಶಿ ಮಾರುಕಟ್ಟೆಯಲ್ಲಿ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ಹಾಗೂ ವಿದೇಶಿ ವಿನಿಮಯಗಳಿಸಲು ಸಹಾ ಸಾಧ್ಯವಾಗುತ್ತದೆ.

ಎ) ರಾಜ್ಯ ಸರ್ಕಾರವು ಸುಗಂಧ ಸಸ್ಯಗಳ ಕೃಷಿ ರಫ್ತುವಲಯ ಸ್ಥಾಪನೆಗೆ ರೂ. 570 ಲಕ್ಷವನ್ನು ಹೂಡಲು ಉದ್ದೇಶಿಸಿದೆ.

ರಾಜ್ಯದ ದ್ರಾಕ್ಷಿ ಬೆಳಗಾರರ ಸಮಸ್ಯೆ ಕುರಿತು

564 (4856) : ಶ್ರೀ ಭರಮಗೌಡ ಅ ಕಾಗೆ (ಕಾಗವಾಡ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಹೆಕ್ಟೇರ್‌ನಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ; ದ್ರಾಕ್ಷಿ ಬೆಳೆಗಾರರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬರಗಾಲದಿಂದ ನೀರಿನ ಕೊರತೆಯಿಂದ ಪಾರಾಗಲು ದ್ರಾಕ್ಷಿ ಬೆಳೆಗಾರರಿಗೆ ನಬಾರ್ಡ್‌ನಿಂದ ಕಡಿಮೆ ಬಡ್ಡಿ ದರದಲ್ಲಿ ಎಷ್ಟು ಸಾಲ ನೀಡಲಾಗಿದೆ ವಿವರ ಒದಗಿಸುವುದು;

ಇ) ದ್ರಾಕ್ಷಿ ಬೆಳೆಗೆ ಬೆಂಬಲ ಬೆಲೆ ನೀಡಲು ಸರಕಾರ ಯೋಜಿಸಲಾಗುತ್ತಿದೆಯೆ ವಿವರ ಒದಗಿಸುವುದು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) 11,719 ಹೆಕ್ಟೇರ್

ಬಂದಿದೆ.

ಆ) ರೂ. 318.78 ಲಕ್ಷಗಳು

ಜಿಲ್ಲೆ	ಫಲಾನುಭವಿಗಳು	ಪ್ರದೇಶ (ಎಕರೆಗಳಲ್ಲಿ)	ನೀಡಲಾಗಿರುವ ಸಾಲದ ಮೊತ್ತ (ಲಕ್ಷ ರೂ.ಗಳಲ್ಲಿ)
ಬಿಜಾಪುರ	293	1259	314.68
ಬೆಳಗಾವಿ	3	17	4.10

ಇ) ಇಲ್ಲ

ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಅಂತ್ಯೋದಯ ಅನ್ನ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ

566 (4889) : ಶ್ರೀ ದಿನೇಶ್ ಗುಂಡುರಾವ್ (ಗಾಂಧೀನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ನೆರವಿನ ಅಂತ್ಯೋದಯ ಅನ್ನ ಯೋಜನೆಯನ್ನು ಬೆಂಗಳೂರು ನಗರದಲ್ಲಿ ಜಾರಿಗೊಳಿಸಲಾಗಿರುವುದೇ; ಹಾಗಿದ್ದಲ್ಲಿ, ಈ ಯೋಜನೆಯ ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡವೇನು;

ಆ) ಬೆಂಗಳೂರು ನಗರದಲ್ಲಿ ನಿಗದಿಪಡಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು);

ಇ) ಈ ಯೋಜನೆಯನ್ನು ಎಂದಿನಿಂದ ಜಾರಿಗೊಳಿಸಲಾಗುವುದು/

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹೌದು.

ಬೆಂಗಳೂರು ನಗರದಲ್ಲಿ ಹಾಲಿ ಇರುವ ಬಿ.ಪಿ.ಎಲ್ ಕುಟುಂಬಗಳ ಪೈಕಿ ಕಡು ಬಡ ಕುಟುಂಬಗಳನ್ನು ಈ ಯೋಜನೆಯಡಿ ಫಲಾನುಭವಿಗಳಾಗಿ ಆಯ್ಕೆ ಮಾಡಲಾಗುವುದು.

ಆ) 14620.

ವಿಧಾನಸಭಾ ಕ್ಷೇತ್ರವಾರು ಫಲಾನುಭವಿಗಳ ಸಂಖ್ಯೆ ಸಧ್ಯದಲ್ಲಿ ದೊರೆಯುವುದಿಲ್ಲ. ಆದರೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ವಲಯವಾರು ನಿಗದಿ ಪಡಿಸಿರುವ ಫಲಾನುಭವಿಗಳ ಸಂಖ್ಯೆಯು ಈ ಕೆಳಕಂಡಂತಿದೆ.

ಕ್ರ.ಸ.	ವಲಯವಾರು ಹೆಸರು	ಚಾಲ್ತಿಯಲ್ಲಿರುವ ಹಳದಿ ಪಡಿತರ ಚೀಟಿ	ನಿಗದಿ ಪಡಿಸಿರುವ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ
1.	ಉತ್ತರವಲಯ	24376	2590
2.	ದಕ್ಷಿಣವಲಯ	47367	5035
3.	ಪೂರ್ವವಲಯ	17452	1855
4.	ಪಶ್ಚಿಮವಲಯ	34389	3655
5.	ಕೇಂದ್ರವಲಯ	13996	1485
	ಒಟ್ಟು	137580	14620

ಇ) ಯೋಜನೆಯನ್ನು ಜಾರಿಗೊಳಿಸುವ ಪ್ರಕ್ರಿಯೆಯು ಫಲಾನುಭವಿಗಳನ್ನು ಗುರುತಿಸುವಿಕೆ, ಗುರುತಿಸಲ್ಪಟ್ಟ ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಸ್ಥಿರೀಕರಿಸುವಿಕೆ, ಪಡಿತರ ಚೀಟಿ ವಿತರಣೆ, ಕೇಂದ್ರ ಸರ್ಕಾರದಿಂದ ಆಹಾರಧಾನ್ಯ ಬಿಡುಗಡೆ ಮತ್ತು ಅಂತಿಮವಾಗಿ ಆಹಾರಧಾನ್ಯವನ್ನು ನ್ಯಾಯಬೆಲೆ ಅಂಗಡಿಗಳಿಗೆ ಹಂಚಿಕೆ ಮಾಡುವುದು ಮುಂತಾದ ಕಾರ್ಯಗಳನ್ನು ಒಳಗೊಂಡಿದೆ. ಹೊಸದಾಗಿ ಗುರುತಿಸಲ್ಪಟ್ಟ ಕುಟುಂಬಗಳಿಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಆದಷ್ಟು ಬೇಗನೆ ಮುಕ್ತಾಯಗೊಳಿಸಲಾಗುವುದು.

ಬಬಲೇಶ್ವರ ಏತನೀರಾವರಿ ಯೋಜನೆಯ ಮಂಜೂರಾತಿ ಬಗ್ಗೆ

330 (3061) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತಿಕೋಟ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಬಲೇಶ್ವರ ಏತ ನೀರಾವರಿ ಯೋಜನೆಯನ್ನು ಮಂಜೂರು ಮಾಡಲಾಗಿದೆಯೇ;

ಆ) ಯೋಜನೆಯ ಸಮೀಕ್ಷಾ ಕಾರ್ಯ ಮತ್ತು ಅನ್ವೇಷಣಾ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆಯೇ;

ಇ) ಪೂರ್ಣಗೊಳಿಸಿದಲ್ಲಿ, ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆಯೇ;

ಈ) ಯೋಜನೆಯನ್ನು ಪ್ರಾರಂಭಿಸಲು ಹಾಕಿಕೊಂಡ ಕಾಲಮಿತಿ ಏನು?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಬಬಲೇಶ್ವರ ಏತ ನೀರಾವರಿ ಯೋಜನೆಯ ಪ್ರಾಥಮಿಕ ತನಿಖಾ ವರದಿಗೆ ಸರ್ಕಾರದಿಂದ ಅನುಮೋದನೆ ನೀಡಲಾಗಿದ್ದು, ವಿವರವಾದ ಸಮೀಕ್ಷಾ ಕಾರ್ಯ ಹಾಗೂ ಅನ್ವೇಷಣೆಗೆ ಅನುಮೋದನೆ ನೀಡಲಾಗಿದೆ.

ಆ) ಪೂರ್ಣಗೊಳಿಸಲಾಗಿದೆ.

ಇ) ವಿವರವಾದ ಯೋಜನಾ ವರದಿಯ ತಯಾರಿಕೆಯು ಮುಕ್ತಾಯದ ಹಂತದಲ್ಲಿರುತ್ತದೆ.

ಈ) ವಿವರವಾದ ಯೋಜನಾ ವರದಿಗೆ ಅನುಮೋದನೆಯನ್ನು ನೀಡಿ, ಇದೇ ಆರ್ಥಿಕ ಸಾಲಿನಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಆ) ತಡೆ ಹಿಡಿಯಲಾದ ಪ್ರಶ್ನೆಗಳು :

ಅಧ್ಯಕ್ಷರು : ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡರು : ಅವರೂ ಇಲ್ಲ.

ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 1–8–03ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯಲ್ಲಿರುವ 87 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ –1)

ಅಧ್ಯಕ್ಷರು : ಮಂಡಿಸಲಾಯಿತು. ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

4. ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡಬೇಕೆಂದು ವಿರೋಧ ಪಕ್ಷದವರಿಂದ ಧರಣಿ ಮುಂದುವರಿಕೆ

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಇವರು ಹೀಗೆ ಗೂಂಡಾಗಿರಿ ಮಾಡುವುದಕ್ಕಾಗುವುದಿಲ್ಲ. ಸದನ ನಡೆಸುವುದೆಂದರೆ ಗೂಂಡಾಗಿರಿ ಮಾಡಿ ನಡೆಸುವುದಲ್ಲ. ನಿಯಮಗಳ ಪ್ರಕಾರ ನಡೆಸಬೇಕು.

ಗೊಂದಲ

ಅಧ್ಯಕ್ಷರು : ತಾವು ಕುಳಿತುಕೊಳ್ಳುತ್ತಿರೋ ಇಲ್ಲವೋ? ನೀವು ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಇದೇನಿದು? ನಿನ್ನೆ ಚರ್ಚೆಯಾಯಿತು ಚರ್ಚೆಯಾದ ಮೇಲೆ ನಿಲುವಳಿ ಸೂಚನೆ ತರುವುದೇನೆಂದರೆ ಹೇಗೆ? ಅವರು ಅದನ್ನು ಬೇರೆ ಫಾರಂನಲ್ಲಿ ಬೇಕಾದರೆ ತೆಗೆದುಕೊಳ್ಳಲಿ;

ಅಧ್ಯಕ್ಷರು : ನಿನ್ನೆ ಪ್ರಸ್ತಾಪವಾಗಿದೆ. ನಾನೇ ಹೋಗಿ ಇನ್‌ಸ್ಪೆಕ್ಷನ್ ಮಾಡಿಕೊಂಡು ಬರುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ. ಸಂಬಂಧಪಟ್ಟ ಲೋಕಲ್ ಎಂ.ಎಲ್.ಎ. ಯವರು ನಿನ್ನೆ ವಿಷಯ ಎತ್ತಿದ್ದಾರೆ. ಆಗ ನೀವು ನೋಡಲಿಲ್ಲ ಅಷ್ಟೇ. ನೀವು ಎಲ್ಲಿದ್ದಿರೋ? ಮಾನ್ಯ ಕರಡಿ ಸಂಗಣ್ಣನವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳೂ ಉತ್ತರ ಹೇಳಿದ್ದಾರೆ. ಈಗ ನಾನು ಅಲೋ ಮಾಡುವುದಿಲ್ಲ. ನೀವು ಪ್ರೊಸೀಜರ್‌ಗೆ ಎಗೆನೆಸ್ಟಾಗಿ ಹೋಗುತ್ತಿದ್ದೀರಿ. ಈ ವಿಷಯ ನಿನ್ನೆ ಪ್ರಸ್ತಾಪವಾಗಿದೆ.

ಗೊಂದಲ

ಅಧ್ಯಕ್ಷರು : ಅವರು ಹೇಳುವುದನ್ನು ಕೇಳಿ. ನಿನ್ನೆ ಈ ವಿಷಯ ಚರ್ಚೆಯಾಗಿದೆ. ಸಂಬಂಧಪಟ್ಟ ಎಂ.ಎಲ್.ಎ ರವರು ಎತ್ತಿದ್ದಾರೆ. ಮಾನ್ಯ ಮಂತ್ರಿಗಳು, ನಾನೇ ಹೋಗಿ ಇನ್ಸಾಪೆಕ್ಟ್ ಮಾಡಿಕೊಂಡು ಬಂದು ಉತ್ತರವನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ ಈಗ ಪುನ: ಅದನ್ನೇ ಎರಡನೇ ಸಲ ಏಕೆ ಎತ್ತಬೇಕು? ಈಗ ನಾನು ಅಲೋ ಮಾಡುವುದಿಲ್ಲ. ನಿನ್ನೆ ವಿಷಯ ಪ್ರಸ್ತಾಪ ಆಗಿದೆ. ಪ್ರೊಸೀಡಿಂಗ್ಸ್

ತರಿಸುತ್ತೇನೆ, ನೋಡಿ. ಈ ರೀತಿ 2 ಸಲ 3 ಸಲ ಎತ್ತಲು ನಾನು ಅಲೋ ಮಾಡುವುದಿಲ್ಲ. ನೀವು ಏನಾದರೂ ಹೇಳಿ ನಾನು ಅಲೋ ಮಾಡುವುದಿಲ್ಲ. ನಾನು ಈ ಮನೆಯ ನಿಯಮಾವಳಿ ಪ್ರಕಾರ ಹೋಗುತ್ತೇನೆ. ನಿಯಮಾವಳಿಯ ಪ್ರಕಾರ ನಾನು ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇನೆ ಈ ಸಭೆಯ ಮಾನ್ಯ ಸದಸ್ಯರು ಪ್ರಶ್ನೋತ್ತರ ವೇಳೆ ಆಗಬೇಕೆಂದರು. ಪ್ರಶ್ನೆಗಳನ್ನು ಕೇಳಿ ಎಂದು ಕರೆದಿದ್ದೇನೆ, ಒಬ್ಬರೂ ಪ್ರಶ್ನೆಯನ್ನು ಕೇಳಲಿಲ್ಲ, ಕೇಳುವವರಿಗೆ ತಾವು ಅಡಚಣೆ ಮಾಡಿದಿರಿ. ಮಾನ್ಯ ಗೋಪಾಲ ಭಂಡಾರಿಯವರು ಪ್ರಶ್ನೆ ಕೇಳುವುದಕ್ಕೆ ಎದ್ದರೆ ಅದಕ್ಕೂ ನೀವು ಅವಕಾಶಕೊಡಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ನೋಡಿ ಇದು ಮಾನ್ಯ ಮಂತ್ರಿಗಳ ಉತ್ತರ. ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಪತ್ರಿಕೆಗಳಲ್ಲಿ ಬಂದಿದೆ. ದಯವಿಟ್ಟು ನಾವು ಹೇಳಲು ಅವಕಾಶ ಕೊಡಿ. ಈ ಗಂಭೀರವಾದ ವಿಷಯವನ್ನು ಹೇಳಲು ನಾನು ಹೊರಟಿದ್ದೇನೆ. ಸರ್ಕಾರ ಏಕೆ ಹಿಂದೇಟು ಹಾಕುತ್ತಿದೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, ದಯವಿಟ್ಟು ಕ್ಷಮಿಸಬೇಕು. ಸಂಖ್ಯಾ ಬಲದ ಆಧಾರದ ಮೇಲೆ ವಿಧಾನಸಭೆಯನ್ನು ನಡೆಸಿ ಇಡೀ ವಿರೋಧ ಪಕ್ಷದವರ ಬಾಯಿ ಮುಚ್ಚಿಸಿ.....

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ : ಸಂಖ್ಯಾದ ಬಲದ ಮೇಲಲ್ಲ, ನಿಯಮದ ಪ್ರಕಾರ....

ಗೊಂದಲ

ಶ್ರೀ ಯು.ಆರ್. ಸಭಾಪತಿ : ಸಂಖ್ಯಾಬಲದ ಮೇಲಲ್ಲ.

ಅಧ್ಯಕ್ಷರು : ಇಲ್ಲಿ ಸಂಖ್ಯಾ ಬಲದ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಸಂಖ್ಯಾ ಬಲ ಎಂದು ಮೇಲಿಂದ ಮೇಲೆ ಮಾತನಾಡುತ್ತೀರಿ. ನೀವು ಹೇಳಿದುದಕ್ಕೆಲ್ಲಾ ನಾವು ಹೌದು ಎಂದು ಹೇಳಬೇಕೇ?

ಗೊಂದಲ

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಸಂಖ್ಯಾಬಲ ಎಂದು ಏಕೆ ಹೇಳುತ್ತೀರಿ. ಆ ರೀತಿ ಹೇಳಬೇಡಿ.

ಶ್ರೀ ಯು.ಆರ್. ಸಭಾಪತಿ : ಬಹುಸಂಖ್ಯಾತರ ವಿರುದ್ಧ ಇವರು ದಬ್ಬಾಳಿಕೆ ಮಾಡುತ್ತಿದ್ದಾರೆ. ನಾವು ಬಹುಮತ ಪಕ್ಷದಲ್ಲಿದ್ದೇವೆ. ಇವರು ನಮ್ಮ ಬಾಯಿ ಮುಚ್ಚಿಸುವುದು ಬೇಡ.

ಗೊಂದಲ

ಅಧ್ಯಕ್ಷರು : ಸಂಖ್ಯಾ ಬಲ ಎಂದು ಏಕೆ ಹೇಳುತ್ತೀರಿ? ನಿನ್ನೆ ಪ್ರಸ್ತಾಪ ಮಾಡಿರುವುದನ್ನೇ ಪುನಃ ಈಗ ಏಕೆ ಎತ್ತುತ್ತಾರೆ? ಈ ರೀತಿಯಾದರೆ, ನಾಳೆ ನಮಗೂ ಅವಕಾಶ ಕೊಡಿ ಎಂದು ಇನ್ನೊಂದು ನಾಲ್ಕು ಜನರು ಬರುತ್ತಾರೆ. ನನಗೆ ಗೊತ್ತಿದೆ, ನಿನ್ನೆ ಅವರು ಪ್ರಸ್ತಾಪ ಮಾಡಿದ್ದಾರೆ, ನಾನು ಟಿ.ವಿ.ಯಲ್ಲಿ ನೋಡಿದ್ದೇನೆ. ಸಭೆಯ ಅಭಿಪ್ರಾಯದಂತೆ ನಾನು ಹೋಗಬೇಕು, ಅದು ನನ್ನ ಕರ್ತವ್ಯ. 178 ಜನ ಒಂದು ಕಡೆ ಇದ್ದಾರೆ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಹಾಗಾದರೆ ಸಭೆ ಒಂದು ಅನುಮತಿ ಕೊಡುತ್ತದೆ. ಮೆಜಾರಿಟಿ ಯಾವ ಪಕ್ಷಕ್ಕಿದೆ ಅವರಂತೆಯೇ ನಡೆಸಿ, ವಿರೋಧ ಪಕ್ಷದವರ್ಯಾರೂ ಮಾತನಾಡಬಾರದು ಎಂದು ಮಾಡಿಬಿಡಿ.

ಅಧ್ಯಕ್ಷರು : ಕೆಲವು ವಿಷಯಗಳನ್ನು ಮೆಜಾರಿಟಿ ಆಧಾರದ ಮೇಲೆಯೇ ತೀರ್ಮಾನ ಮಾಡಬೇಕಾಗುತ್ತದೆ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಇಲ್ಲಿ ಯಾವುದೇ ನಿಯಮಾವಳಿಗಳು ಬೇಡ ಆದರ ಪ್ರಶ್ನೆಯೇ ಇಲ್ಲಿ ಬೇಡ. ಮೆಜಾರಿಟಿ ಇದ್ದರೆ ಅವರು ಮಾಡಿಕೊಳ್ಳಬಹುದೇ? ಇದಕ್ಕೆ ನಿಯಮಗಳೇಕೆ ಬೇಕು?

ಅಧ್ಯಕ್ಷರು : ಹಾಗಾದರೆ, ನಾಳೆಯೂ ಇದನ್ನೇ ತೆಗೆದುಕೊಳ್ಳಬಹುದೇ? ನೀವೂ ಹೀಗೆಯೇ ಮಾತನಾಡುತ್ತೀರಲ್ಲಾ

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಯಾವ ರೂಪದಲ್ಲಿ ಚರ್ಚೆ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ. ಇದು ನಿಲುವಳಿ ಸೂಚನೆ ಹೇಗಾಗುತ್ತದೆ ಎಂದು ಹೇಳಿ.

ಅಧ್ಯಕ್ಷರು : ನಿನ್ನೆ ಪ್ರಸ್ತಾಪವಾಗಿದೆ ಎಂದು ಹೇಳಿದ ಮೇಲೂ ಮತ್ತೆ ಅದನ್ನೇ ಎತ್ತುತ್ತಿರುವುದನ್ನು ನೋಡಿ. ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ನಿಲುವಳಿ ಸೂಚನೆ ಹೇಗಾಗುತ್ತದೆ? ಅವರು ಹೇಳಿದ ತಕ್ಷಣ ನಿಲುವಳಿ ಸೂಚನೆಯಾಗುವುದಿಲ್ಲ.

ಅಧ್ಯಕ್ಷರು : ಇದು ನಿಲುವಳಿ ಸೂಚನೆ ಅಲ್ಲ : ಶೂನ್ಯವೇಳೆ ಇದರ ಬಗ್ಗೆ ನಿಲುವಳಿ ಸೂಚನೆಯನ್ನು ಯಾರೂ ಕೊಟ್ಟಿಲ್ಲ. ಪ್ರಶ್ನೋತ್ತರ ವೇಳೆ ಮುಗಿದ ನಂತರ ಎತ್ತಿ ಎಂದರೆ ಅದೂ ಆಗುವುದಿಲ್ಲ, ಅವರು ಏತಿ ಅಂದರೆ ಪ್ರೇತಿ ಎನ್ನುತ್ತಾರೆ. ಅದಕ್ಕೊಂದು ಲೆಕ್ಕಚಾರ ಬೇಡವೇ? ನಾವು ಇವತ್ತು ಏನು ಮಾಡಿದ್ದೇವೆ ಎನ್ನುವುದನ್ನು ಜನರೇ ಡಿಸೈಡ್ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರ ಇವತ್ತು ರೈತರ ಬಗ್ಗೆ ಏನು ಮಾಡುತ್ತಿದೆ.....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಬಹು ಸಂಖ್ಯಾತ ಸದಸ್ಯರ ಮೇಲೆ ಅಲ್ಪಸಂಖ್ಯಾತ ಸದಸ್ಯರ ದಬ್ಬಾಳಿಕೆ. ಮಾತನಾಡುವಾಗ ಯಾರಾದರೂ ನಿಮ್ಮ ಬಾಯಿ ಮುಚ್ಚಿದರೇನು? ನಿನ್ನೆ ಶೂನ್ಯವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದಾಗ ಮಾತನಾಡಬೇಕಿತ್ತು. ಅದಕ್ಕೆ ಬೇಡ ಅಂದರೇನು?

ಅಧ್ಯಕ್ಷರು : ನಿನ್ನೆ ಮಾತನಾಡಬಹುದಿತ್ತಲ್ಲ. ಏಕೆ ಹೀಗೆ ಮಾಡಿದರು? ವಿರೋಧ ಪಕ್ಷದವರು ನಿನ್ನೆ ಇದರ ಬಗ್ಗೆ ಮಾತನಾಡಬೇಕು ಎಂದರೆ ನಾನು ಅಲೋ ಮಾಡುತ್ತಿದ್ದೆ. ನಿನ್ನೆ ಸುಮ್ಮನಿದ್ದು ಇವತ್ತು ಮತ್ತೆ ಎತ್ತುತ್ತಿದ್ದಾರೆ. ಹೀಗಾದರೆ, ನಾಳೆ ಮತ್ತೆ ಇನ್ನೊಂದು ನಾಲ್ಕು ಜನರು ಮಾತನಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಏನಾಗಿದೆ ಎನ್ನುವಂಥಾದ್ದರ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದಿದೆ. ಮಂತ್ರಿಗಳು ಹೇಳುತ್ತಾರೆ..........

ಅಧ್ಯಕ್ಷರು : ತಾವೇ ಇನ್ಸ್‌ಪೆಕ್ಟ್ ಮಾಡಿ ಬಂದು ಹೇಳುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಪದೇ ಪದೇ ಇವರು ನಿಮ್ಮನ್ನು ಛಾಲೆಂಜ್ ಮಾಡುತ್ತಿದ್ದಾರೆ. ಇವರು ಯಾವಾಗಲೂ ಕೂಡ ಛಾಲೆಂಜ್ ಕೊಟ್ಟುಕೊಂಡು ಹೋಗುತ್ತಿದ್ದಾರೆ. ಈ ರೀತಿಯಾಗಿ ಸದನ ನಡೆದರೆ ಅದು ಯಾರಿಗೂ ಗೌರವ ತರತಕ್ಕಂಥಾದ್ದು ಅಲ್ಲ. ನಾವು ಏನಾದರೂ ಮಾಡಿದರೆ ನಮಗೆ ಟೀಕೆ ಮಾಡಲಿ. ಆದರೆ ತಾವು ಹೇಳಿದ ಮೇಲೂ

ಇಬ್ಬರನ್ನೂ ಸಮಾನ ದೃಷ್ಟಿಯಿಂದ ನೋಡತಕ್ಕಂಥ ಅಧ್ಯಕ್ಷರಿಗೆ ಅಗೌರವ ತೋರಿಸತಕ್ಕಂಥ ರೀತಿಯಲ್ಲಿ ಮಾತನಾಡುವುದೇ ಆದರೆ ಇವರಿಗೆ ಏನು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಇವರು ರೈತರ ಹಕ್ಕುಗಳನ್ನು ಮೊಟಕುಗೊಳಿಸುತ್ತಿದ್ದಾರೆ, ರೈತರನ್ನು ಸಾಯಿಸುತ್ತಿದ್ದಾರೆ, ಅವರು ಹಸಿವಿನಿಂದ ಸಾಯುತ್ತಿದ್ದಾರೆ.

ಅಧ್ಯಕ್ಷರು : ನಾಳೆ ಮತ್ತೆ ಒಂದೈದು ಜನ ಎದ್ದು ಇದರ ಬಗ್ಗೆ ಮಾತನಾಡಿದರೆ ಈ ವಿಷಯವನ್ನು ಮತ್ತೆ ತೆಗೆದುಕೊಳ್ಳಬೇಕೇ? ಏನಿದು? ನೀವು ನಿನ್ನೆ ಮತನಾಡಬಹುದಿತ್ತು. ಚಂದ್ರೇಗೌಡರೇ, ನೀವು ಹೇಳಿ.

ಗೊಂದಲ

ಅಧ್ಯಕ್ಷರು : ಇದು ನಿಲುವಳಿ ಸೂಚನೆ ಅಲ್ಲ ನೀವ್ಯಾರೂ ನಿಲುವಳಿ ಸೂಚನೆ ಕೊಟ್ಟಿಲ್ಲ. ನೀವು ಎತ್ತುತ್ತಿರುವುದು ಶೂನ್ಯವೇಳೆಯಲ್ಲಿ.

5. ಅಧ್ಯಕ್ಷರ ತೀರ್ಪು

'ಧರಣಿ ನಿರತರಾಗಿ ಸದನದ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದ ಬಿ.ಜೆ.ಪಿ ಸದಸ್ಯರನ್ನು ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಿಯಮ 347ರ ಪ್ರಕಾರ ಸದನದಿಂದ ಹೊರಗೆ ಕಳುಹಿಸುವುದರ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 347ನೇ ನಿಯಮದ ಪ್ರಕಾರ "ಅಧ್ಯಕ್ಷರು ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ, ಅಂಥ ಸದಸ್ಯರಿಗೆ ಸದನದಿಂದ ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುದು ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೇಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರು ಹಾಜರಾಗತಕ್ಕದ್ದು" ಎಂದು ಇದೆ. ಅದರಂತೆ ತಾವು 347 ನೇ ವಿಧಿಯಂತೆ ಅವರನ್ನು ಹೊರಗೆ ಹೋಗುವಂತೆ ಆಜ್ಞೆ ಮಾಡಬೇಕು. ಅದನ್ನು ಪಾಲನೆ ಮಾಡದಿದ್ದರೆ........

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಸಭೆಯನ್ನು ಈ ರೀತಿ ನಡೆಸಲು ಸಾಧ್ಯವಿಲ್ಲ. ಇದು ದಬ್ಬಾಳಿಕೆಯಾಗುತ್ತದೆ, ಇದು ಗೂಂಡಾಗಿರಿಯಾಗುತ್ತದೆ. ಈ ರೀತಿಯ ಕೆಲವೇ ಜನರ ದಬ್ಬಾಳಿಕೆಗೆ ತಾವು ಮಣಿಯಬಾರದು ಎಂದು ನಾನು ತಮ್ಮಲ್ಲಿ ಮನವಿ ಮಾಡಿ 347 ನೇ ನಿಯಮದ ಪ್ರಕಾರ ಅವರನ್ನು ಹೆಸರಿಸಿ ಹೊರಗೆ ಕಳುಹಿಸಬೇಕೆಂದು ಹೇಳುತ್ತಿದ್ದೇನೆ

ಅಧ್ಯಕ್ಷರು : 347ನೇ ನಿಯಮದ ಪ್ರಕಾರ ಸದಸ್ಯರನ್ನು ಸಭೆಯ ಹೊರಗೆ ಕಳುಹಿಸಬೇಕೆಂದು ಮಾನ್ಯ ಸಂಸದೀಯ ಸಚಿವರು ಹೇಳಿರುವುದರಿಂದ "ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ" ಅಂಥ ಸದಸ್ಯರಿಗೆ ಸದನದಿಂದ ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುದು ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೇಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರು ಹಾಜರಾಗತಕ್ಕದ್ದು ಅಂದರೆ ಇದು ಇವತ್ತಿಗೆ ಮಾತ್ರ ಅನ್ವಯವಾಗುತ್ತದೆ. ನಾನು ಈಗ 347ನೇ ನಿಯಮಾವಳಿಯನ್ನು ಉಪಯೋಗಿಸುತ್ತಿದ್ದೇನೆ. ದಯವಿಟ್ಟು ಈ ಕೆಳಕಂಡ ಮಾನ್ಯ ಸದಸ್ಯರು ಹೊರಗೆ ಹೋಗಬೇಕು:-

ಶ್ರೀಯುತರುಗಳಾದ :
ಜಗದೀಶ್ ಶೆಟ್ಟರ್
ರಾಜೇಂದ್ರ ವರ್ಮಾ
ಪಿ.ಹೆಚ್. ಪೂಜಾರ್
ಕಟ್ಟಾ ಸುಬ್ರಹ್ಮಣ್ಯ ನಾಯ್ಡು
ರಮೇಶ್ ಪಿ.
ಡಿ.ವಿ. ಸದಾನಂದಗೌಡ
ವಿಶ್ವೇಶ್ವರ ಹೆಗಡೆ ಕಾಗೇರಿ
ಎಸ್. ಸುರೇಶ್ ಕುಮಾರ್
ಎಂ.ಡಿ. ಲಕ್ಷ್ಮೀನಾರಾಯಣ
ಎನ್. ಯೋಗೀಶ್ ಭಟ್
ಚಿಕ್ಕನಗೌಡ್ರ
ಪ್ರಭಾಕರ ಬಂಗೇರ
ಪಿ.ಸಿ. ಮೋಹನ್
ಎಸ್.ಎ. ರವೀಂದ್ರನಾಥ್
ಕೆ.ಎನ್. ಸುಬ್ಬಾರೆಡ್ಡಿ
ರೇವುನಾಯಕ್ ಬೆಳಮಗಿ.

ಬಸವರಾಜ ಮಂಡಿಮಠ್ , ಪ್ರಕಾಶ ಖಂಡ್ರೆ, ವಿವೇಕಾನಂದ ವೈದ್ಯ, ಎಸ್. ಅಂಗಾರ, ಹಾಲಾಡಿ ಶ್ರೀನಿವಾಸ ಶೆಟ್ಟರು, ಚಂದ್ರಕಾಂತ ಜಿ. ಬೆಲ್ಲದ್, ಆರ್. ಅಶೋಕ್.

347ನೇ ವಿಧಿಯ ಪ್ರಕಾರ ಮಾನ್ಯ ಮಂತ್ರಿಗಳು ನಿಮ್ಮನ್ನು ಹೆಸರಿಸಿರುವುದರಿಂದ ದಯವಿಟ್ಟು ಒಬ್ಬೊಬ್ಬರಾಗಿ ಸದನದಿಂದ ಹೊರಗೆ ಹೋಗಿ ಇವತ್ತು ಸಂಜೆಯವರೆಗೆ ನೀವು ಸದನಕ್ಕೆ ಬರುವಹಾಗಿಲ್ಲ. ದಯವಿಟ್ಟು ಹೊರಗೆ ಹೋಗಬೇಕು.

ಗೊಂದಲ

ಓ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಿಯಮ 347ರ ಪ್ರಕಾರ ವಿರೋಧ ಪಕ್ಷದವರಿಂದ ಆಕ್ಷೇಪ ಮಾನ್ಯ ಸದಸ್ಯರನ್ನು ಅಮಾನತ್ತುಗೊಳಿಸಿದ್ದಕ್ಕೆ.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಇದೇ ಮೊದಲನೆ ಬಾರಿ ಶಾಸನಸಭೆಯ ಗೌರವಾನ್ವಿತ ಅಧ್ಯಕ್ಷರ ತೀರ್ಪಿನ ವಿರುದ್ಧ ಮೊಂಡುತನ ಮಾಡಿದಂಥದ್ದೂ ಸಹ ಇದು ಮೊದಲನೇ ಸಲ. ಇಂಥ ವಿಚಾರಗಳಲ್ಲಿ ಚರ್ಚೆಗೆ ಸರ್ಕಾರ ಎಂದೂ ಪ್ರತಿರೋಧ ಮಾಡಿಲ್ಲ. ತಾವೂ ಕೂಡ ಎಲ್ಲಾ ಸಂಧರ್ಭಗಳಲ್ಲೂ ಗೌರವಾನ್ವಿತ ಸದಸ್ಯರುಗಳ ಇಚ್ಛೆಗನುಸಾರವಾಗಿ ತಾವು ಇಲ್ಲಿ ನಡೆದುಕೊಂಡಿದ್ದೀರಿ. ಅದನ್ನು ಉಳಿಸಿಕೊಳ್ಳುವುದು ಅವರಿಗೆ ಸೇರಿದ ವಿಚಾರ. ಇದು ನಿಜವಾಗಿಯೂ ನೋವಿನ ಸಂಗತಿಯಾಗಿದೆ. ಪ್ರತಿಪಕ್ಷಗಳನ್ನು ಹೊರಗೆ ಹಾಕಿ ಸದನ ನಡೆಸಬೇಕೆನ್ನತಕ್ಕಂಥದ್ದು ನಮ್ಮ ಉದ್ದೇಶವಲ್ಲ. ಆದರೆ ಸರ್ಕಾರ ಚರ್ಚೆ ಮಾಡುವುದಕ್ಕೆ ಸಿದ್ಧವಿದೆಯೆಂದು ಹೇಳಿದರೂ, ಈ ರೂಪದಲ್ಲಿ

ಅಲ್ಲ, ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಸಿದ್ಧವಿದೆಯೆಂದು ಹೇಳಿದರೂ ಕೂಡ, ಈ ರೀತಿ ಮೊಂಡುತನ ಮಾಡುವುದಿದೆಯಲ್ಲಾ ಇದು ಶ್ರೀಮಾನ್ ಖರ್ಗೆಯವರು ಹೇಳಿದ ಹಾಗೆ It is a tyranny against the majority by the minority. therefore, they deserve this.

ಗೊಂದಲ

ಶ್ರೀ ಯು.ಆರ್. ಸಭಾಪತಿ : ಕಪಟ ನಾಟಕ ಮಾಡುವ ಬಿಜೆಪಿಗೆ ಧಿಕ್ಕಾರ. ರೈತರಿಗೆ ಮೋಸ ಮಾಡುವಂಥ ಬಿಜೆಪಿಗೆ ಧಿಕ್ಕಾರ.

ಗೊಂದಲ

ಅಧ್ಯಕ್ಷರು : ದಯವಿಟ್ಟು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ, ಮೊದಲನೇ ಸಲ ಹೇಳಿ ಆಯಿತು. 2ನೇ ಸಲವೂ ತಮ್ಮೆಲ್ಲರಲ್ಲಿ ಕೇಳಿಕೊಳ್ಳುತ್ತಿದ್ದೇನೆ, ನೀವೆಲ್ಲಾ ನಿಯಮಾವಳಿಗೆ ವಿರುದ್ಧವಾಗಿ ನಡೆಯುತ್ತಿದ್ದೀರಿ, ಸದನವನ್ನು ನಮ್ಮ ನಿಯಮಾವಳಿ ಪ್ರಕಾರ ಸುಗಮವಾಗಿ ನಡೆಸಿಕೊಂಡು ಹೋಗುವುದು ನನ್ನ ಧರ್ಮ ಹಾಗೂ ನನ್ನ ಕರ್ತವ್ಯವಾಗಿದೆ.

ಗೊಂದಲ

ಶ್ರೀ ಯು.ಆರ್. ಸಭಾಪತಿ : ಈ ರೀತಿ ಕಪಟ ನಾಟಕವನ್ನು ಭಾ.ಜ.ಪಾ.ದವರು ಮಾಡಬಾರದು. ಈ ರೀತಿ ರೈತರ ಬಗ್ಗೆ ಮೊಸಳೆ ಕಣ್ಣೀರು ಬೇಡ....... ಇವರದೆಲ್ಲಾ ಚುನಾವಣೆ ಸ್ಟಂಟ್ ಮಾಡುತ್ತಿದ್ದಾರೆ. ಇದಕ್ಕೆಲ್ಲಾ ಅವಕಾಶ ಕೊಡಬೇಡಿ.

ಗೊಂದಲ

ಅಧ್ಯಕ್ಷರು : ಚರ್ಚೆಗೆ ಸಿದ್ಧವಾಗಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾನೇ ಹೋಗಿ ಇನ್ಸ್‌ಪೆಕ್ಷನ್ ಮಾಡಿಕೊಂಡು ಬಂದು ಸದನದಲ್ಲಿ ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದಾರಲ್ಲಾ ಸಿದ್ಧ ಇಲ್ಲವೆಂದು ಹೇಳಿಲ್ಲ. ಆದರೆ ಇವತ್ತು ಅಲ್ಲ. ಇನ್ನೊಂದು ದಿವಸ ಚರ್ಚೆಗೆ ತೆಗೆದುಕೊಳ್ಳೋಣ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ಕೊನೆಗೂ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಆಡಳಿತ ಪಕ್ಷದ ಸದಸ್ಯರುಗಳಿಗೆ ಹೇಳುವುದೇನೆಂದರೆ ನಾನು ಮಾತನಾಡುವಾಗ ಅಡ್ಡಿ ಮಾಡಬಾರದೆಂದು ಮೊದಲು ಕೇಳಿಕೊಂಡು.....

ಶ್ರೀ ಯು.ಆರ್. ಸಭಾಪತಿ : ಬೆಳಿಗ್ಗೆ ನೀವು ಅಡ್ಡಿ ಮಾಡುತ್ತಿದ್ದೀರಿ. ನೀವು ಮಾತನಾಡುವಾಗ ಏಕೆ ಅಡ್ಡಿ ಮಾಡಬಾರದು?

ಗೊಂದಲ

ಅಧ್ಯಕ್ಷರು : ಶ್ರೀ ಚಂದ್ರೇಗೌಡರು ಮತ್ತು ಶ್ರೀ ಖರ್ಗೆಯವರು ಮಾತನಾಡಿದಾಗ ಯಾವ ರೀತಿ ಅಡ್ಡಿಪಡಿಸಿದರು ಎಂಬುದನ್ನು ನೀವು ನೋಡಿಲ್ಲವೇ? ಅದು ಆಗಬಹುದಾ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಯಾರೇ ಅಡ್ಡಿಪಡಿಸಿದರೂ ಕೂಡ ಅದು ಸರಿಯಾದಂಥ ಕ್ರಮವಲ್ಲ. ಏನು ಇವತ್ತು.....

ಗೊಂದಲ

ಅಧ್ಯಕ್ಷರು : ನಿಯಮಾವಳಿಗೆ ವಿರುದ್ಧವಾಗಿ ಹೋಗುವುದು ನ್ಯಾಯವೆ ತಾವೇ ಹೇಳಿ; ಸೋಮಶೇಖರ್‌ರವರೇ ಎರಡನೇ ಸಲ ಹೇಳಿದ್ದೇನೆ.... ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್

ಕೊಡುತ್ತೇನೆಂದು ಹೇಳಿದ್ದಾರೆ. ಕಳೆದ ಮೂರುವರೆ ವರ್ಷದಿಂದ ಅವಕಾಶ ಕೊಟ್ಟುಕೊಂಡು ಬಂದಿದ್ದೇನೆ. ನಿಯಮಾನುಸಾರ ಕೊಡುತ್ತೇವೆಂದು ಹೇಳಿದರೂ ಕೂಡ ನೀವೆಲ್ಲಾ ಕೇಳದಿದ್ದರೆ ಹೇಗೆ?

ಗೊಂದಲ

ಶ್ರೀ ಬಿ. ಸೋಮಶೇಖರ್ : ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನನಗೊಂದು ಅವಕಾಶ ಸಿಗಬೇಕಾದದ್ದು ಧರ್ಮ. ಇದು ನ್ಯಾಯಬದ್ಧವಾಗಿರತಕ್ಕಂಥದ್ದು. ಮಾತನಾಡುವುದಕ್ಕೆ ನನಗೆ ಅವಕಾಶ ಕೊಡಿ ಎಂದು ನಾನು ಅಷ್ಟು ಹೊತ್ತಿನಿಂದ ಕೇಳುತ್ತಿದ್ದೆ. ಇವತ್ತು ಏನೋ ಒಪ್ಪಿಗೆಯನ್ನು ಕೊಟ್ಟಿದ್ದೀರಿ. ಇವತ್ತು ಬೆಳಿಗ್ಗೆಯಿಂದ ನಡೆದಿರತಕ್ಕಂಥ ಘಟನೆ ಯಾರಿಗೂ ಶೋಭೆ ತರತಕ್ಕಂಥದ್ದಲ್ಲ. ಎಲ್ಲರೂ ನಾಚಿಕೆ ಪಡತಕ್ಕಂಥ ಒಂದು ಪರಿಸ್ಥಿತಿ ಉದ್ಭವವಾಗಿದೆ.

ಅಧ್ಯಕ್ಷರು : ಘಟನೆಗೆ ಯಾರು ಕಾರಣ? ಹೇಳಿ.

ಶ್ರೀ ಬಿ. ಸೋಮಶೇಖರ್ : ಎಲ್ಲರೂ ಕಾರಣ. ಇವತ್ತು ಈ ಸದನದಲ್ಲಿ ಪ್ರಸ್ತಾಪ ಮಾಡಿರತಕ್ಕಂಥ ವಿಚಾರ ಸಾಧಾರಣ ವಿಚಾರವಲ್ಲ. ಒಂದೇ ಕುಟುಂಬದ ಆರು ಜನರು ಬಡತನ ತಾಳಲಾರದೆ ಹಸಿವಿನಿಂದ ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಒಂದು ನಿದರ್ಶನ ಕರ್ನಾಟಕದ ಇತಿಹಾಸದಲ್ಲಿ ಬೇರೊಂದಿಲ್ಲ. ಇಂಥ ಒಂದು ವಿಚಾರವನ್ನು ನಮ್ಮ ವಿರೋಧ ಪಕ್ಷದವರಿಗೆ....

ಗೊಂದಲ

ಶ್ರೀ ಯು.ಆರ್. ಸಭಾಪತಿ : ಪ್ರಶ್ನೋತ್ತರ ವೇಳೆ ಆದ ನಂತರ ಇದನ್ನು ತೆಗೆದುಕೊಳ್ಳಿ ಎಂದು ಹೇಳಲಿಲ್ಲವೇ?..... ವಿರೋಧ ಮಾಡುತ್ತಾರೆ ಹಾಗೆ ಹೀಗೆ ಎಂದು ಹೇಳಿದರೆ ಹೇಗೆ? ವಿರೋಧ ಪಕ್ಷದವರಿಗೆ ಹಾಗಾದರೆ ದಿನನಿತ್ಯ ಪ್ರಶ್ನೋತ್ತರ ಬೇಡವೇ? ಪ್ರತಿನಿತ್ಯವೂ ನಿಲುವಳಿ ಸೂಚನೆ, ಹಾಗಾದರೆ ದಿನನಿತ್ಯ ಪ್ರಶ್ನೋತ್ತರ ವೇಳೆ ನಿಮಗೆ ಬೇಡ ಅಲ್ಲವೇ?

ಗೊಂದಲ

ಶ್ರೀ ಬಿ. ಸೋಮಶೇಖರ್ : ಇಂಥ ಒಂದು ವಿಚಾರವನ್ನು ಸದನ ನಡೆಯುವಾಗ ಈ ಸದನದ ಗಮನಕ್ಕೆ ಈ ನಿಯಮಾವಳಿಗಳ ಪ್ರಕಾರ ತರತಕ್ಕಂಥದ್ದು ನಮ್ಮ ವಿರೋಧ ಪಕ್ಷದವರ ಕರ್ತವ್ಯ ಈ ವಿಚಾರದ ಗಾಂಭೀರತೆಯನ್ನು ಅರಿತುಕೊಂಡು ರೂಲ್ 64 ರ ಪ್ರಕಾರ ನಿಲುವಳಿ ಸೂಚನೆಯನ್ನು ವಿರೋಧಪಕ್ಷದವರು ಮತ್ತು ನಮ್ಮ ಪಕ್ಷದವರು ಎರಡೂ ಕಡೆಯಿಂದ ಕೊಟ್ಟಿದ್ದೇವೆ.

ಅಧ್ಯಕ್ಷರು : ಇಲ್ಲ, ನಿಲುವಳಿ ಸೂಚನೆಯನ್ನು ಕೊಟ್ಟಿಲ್ಲ. ನೋ.ನೋ, ಶೂನ್ಯ ವೇಳೆ

ಗೊಂದಲ

ಅಧ್ಯಕ್ಷರು : ನಿಲುವಳಿ ಸೂಚನೆ ಕೊಟ್ಟಿದ್ದರೆ ನಿನ್ನೆ ಏಕೆ ಸುಮ್ಮನೆ ಇದ್ದಿರಿ? ನಿನ್ನೆಯೇ ಪ್ರಸ್ತಾಪ ಮಾಡಬಹುದಾಗಿತ್ತಲ್ಲಾ ಏಕೆ ಸುಮ್ಮನಿದ್ದಿರಿ? ತಾವು ನಿನ್ನೆಯೇ ಪ್ರಸ್ತಾಪ ಮಾಡದೇ ಏಕೆ ಸುಮ್ಮನಿದ್ದೀರಿ? ಇವತ್ತು ಮಾಡುವುದನ್ನು ನಿನ್ನೆಯೇ ಮಾಡಬಹುದಾಗಿತ್ತಲ್ಲಾ.

ಗೊಂದಲ

ಅಧ್ಯಕ್ಷರು : ಇಲ್ಲಿ ಕೇಳ್ರೀ, ಅದೇ ದಿವಸ ಡಿಸ್‌ಕಸ್ ಆಗಿರುವುದರಿಂದ ರಿಜೆಕ್ಟ್ ಆಗಿದೆ.

ಗೊಂದಲ

ಅಧ್ಯಕ್ಷರು : ತಾವು ಕೊಟ್ಟು ಆದಮೇಲೆ ಬೆಳಿಗ್ಗೆಯೇ ರಿಜೆಕ್ಟ್ ಮಾಡಿದ್ದೇನೆ. ಅದು ರಿಜೆಕ್ಟ್ ಆಗಿದೆ.

11.40 ಪಿ.ಎಂ

ಗೊಂದಲ

ಅಧ್ಯಕ್ಷರು : ಒಂದು ಸಲ ಸೇಮ್ ಸೆಷನ್‌ನಲ್ಲಿ ವಿಷಯ ಎತ್ತಿದ್ದನ್ನು 2ನೇ ಸಲ ಎತ್ತಕೂಡದು.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ.

ಅಧ್ಯಕ್ಷರು : ನಿಲುವಳಿ ಸೂಚನೆಯನ್ನು ನಾನು ರಿಜೆಕ್ಟ್ ಮಾಡಿದ್ದೇವೆ. It has been regected

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, I have a point of order ನಿಯಮ ಇವರಿಗೆ ಯಾರಿಗೂ ಇಲ್ಲ, ಗೊತ್ತು, ಇದು ಗೊಂಡಾಗಿರಿ ಎನ್ನುವುದು ಗೊತ್ತಾಗಿದೆ. My point of order is ತಾವು ಯಾವ ಸದಸ್ಯರನ್ನು ಈ ದಿವಸಕ್ಕೆ ಸಸ್ಪೆಂಡ್ ಮಾಡಿದ್ದೀರೋ ಆ ಸದಸ್ಯರು ಪುನಃ ಇಲ್ಲಿ ಮಾತನಾಡುವುದಕ್ಕೆ ಅವಕಾಶವಿದೆಯೇ? that is point of order ನೀವು ಸಸ್ಪೆಂಡ್ ಮಾಡಿದ್ದೀರಿ. they have to go out from the House.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ suspended members how can they speak?

ಅಧ್ಯಕ್ಷರು : ನಾನು ಆಗಲೇ ರಿಜೆಕ್ಟ್ ಮಾಡಿ ಕಳುಹಿಸಿಕೊಟ್ಟಿದ್ದೇನೆ. ಸಸ್ಪೆಂಡ್ ಆದ ಸದಸ್ಯರುಗಳು ಮಾತನಾಡುವುದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ನಿಯಮಾವಳಿ ಪ್ರಕಾರ, ವಿಷಯದ ಗಾಂಭೀರ್ಯತೆ ಅರಿತು ನಾವು ಎದುರು ಪಕ್ಷದವರು ನಿಲುವಳಿ ಸೂಚನೆ ಕೊಟ್ಟಿದ್ದೇವೆ. ನಿಲುವಳಿ ಸೂಚನೆಯನ್ನು ಒಪ್ಪಬೇಕೆಂದು ನಾವು ಹೇಳುತ್ತಿಲ್ಲ. ಆದರೆ, ನಮ್ಮ ಕರ್ತವ್ಯವನ್ನು ಮಾಡುತ್ತಾ, ಅದನ್ನು ಈ ಸದನದ ಗಮನಕ್ಕೆ ತಂದು ನಿಯಮ 64ರ ಪ್ರಕಾರ ನಾವಿಬ್ಬರೂ ಇದನ್ನು ತಂದಿದ್ದೇವೆ. ತಾವು ಸ್ವಲ್ಪ ಸಾವಧಾನದಿಂದ ಇದ್ದರೆ, ಸಬ್‌ಮಿಷನ್ ಮಾಡುತ್ತೇವೆ.

ಅಧ್ಯಕ್ಷರು : ನೀವು ಸುಮ್ಮನಿದ್ದರೆ, ನಾನು ಸಾವಧಾನದಿಂದ ಇರುತ್ತೇನೆ.

ಶ್ರೀ ಬಿ. ಸೋಮಶೇಖರ್ : ಹಾಗೆ ಮಾಡಿದ್ದರೆ, ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ತಾವು ರಿಜೆಕ್ಟ್ ಮಾಡಿ ಚಿಂತೆಯಿಲ್ಲ, ತಾವು ಇದನ್ನು ಅಡ್ಮಿಟ್ ಮಾಡಿಕೊಳ್ಳಲೇಬೇಕೆಂದೇನೂ ಇಲ್ಲ. ನಮ್ಮ ಕರ್ತವ್ಯವನ್ನು ನಾವು ಮಾಡುತ್ತೇವೆ. ತಾವು ಈ ಒಂದು ವಿಚಾರ ನಿಯಮಾವಳಿ ವ್ಯಾಪ್ತಿಗೆ ಬರುವುದಿಲ್ಲವೆನ್ನುವ ತೀರ್ಮಾನಕ್ಕೆ ಬಂದ ಮೇಲೆ, ತಾವು ಇದನ್ನು ಬೇರೆ ರೂಪಕ್ಕೆ ಕನ್‌ವರ್ಟ್ ಮಾಡಬಹುದಾಗಿತ್ತು. ಅದಕ್ಕೆ ತಾವು ಅವಕಾಶ ಕೊಡದಿದ್ದರೆ, ಹೇಗೆ? ದಯವಿಟ್ಟು ಕ್ಷಮಿಸಬೇಕು. ತಾವು, ಈ ಸರ್ಕಾರದವರು ನಡೆದುಕೊಂಡದ್ದು ನನಗೆ ಬಹಳ ನೋವಾಗುತ್ತಿದೆ. ಕಾರಣವೇನೆಂದರೆ.......

ಗೊಂದಲ

ಶ್ರೀ ಎಂ.ಆರ್. ಸಭಾಪತಿ : ಸಭಾಧ್ಯಕ್ಷರ ತೀರ್ಪಿಗೆ ಅವಮಾನ ಮಾಡಿದವರು ನೀವು.

ಗೊಂದಲ

ಶ್ರೀ ಬಿ. ಸೋಮಶೇಖರ್ : ನಾನು ವಿಷಾದದಿಂದ ಹೇಳುತ್ತಿದ್ದೇನೆ. With all my humble submission

ಶ್ರೀ ಯು.ಆರ್. ಸಭಾಪತಿ : ನೀವು ಸಭಾಧ್ಯಕ್ಷರಿಗೆ ಎಷ್ಟು ಗೌರವ ಕೊಟ್ಟಿದ್ದೀರಿ? ಪ್ರಶ್ನೋತ್ತರ ವೇಳೆ ನಂತರ ತೆಗೆದುಕೊಳ್ಳೋಣವೆಂದು ಹೇಳಿದರೂ ನೀವು ಮತ್ತೆ ಮತ್ತೆ ಹಠ ಹಿಡಿಯುತ್ತಿದ್ದೀರಿ. ನೀವು ಅದರ ಬಗ್ಗೆ ಗಮನ ಸೆಳೆಯುತ್ತಿಲ. ಸಭಾಧ್ಯಕ್ಷರಿಗೆ ಅಗೌರವ ತರುತ್ತಿರುವವರು ನೀವು. ನಮ್ಮ ಬಗ್ಗೆ ಮಾತನಾಡಬೇಕಾದ್ದಿಲ್ಲ.

ಶ್ರೀ ಬಿ. ಸೋಮಶೇಖರ್ : ನೀವು ವಿರೋಧ ಪಕ್ಷದವರ ಮಾತನ್ನು ಕೇಳುವುದಕ್ಕೆ ತಯಾರಿಲ್ಲವಲ್ಲಾ.

ಶ್ರೀ ಯು.ಆರ್. ಸಭಾಪತಿ : ನೀವು ಮಾತನಾಡಿದ್ದನ್ನೆಲ್ಲಾ ನಾವು ಕೇಳಬೇಕೇ?

ಶ್ರೀ ಬಿ. ಸೋಮಶೇಖರ್ : ನಾನು ಹೇಳುವುದೇನೆಂದರೆ, ತಾವು ಕೇಳಿ......

ಗೊಂದಲ

ಶ್ರೀ ಯು.ಆರ್. ಸಭಾಪತಿ : ಪ್ರಶ್ನೋತ್ತರ ವೇಳೆ ಆಗಲಿ ಎಂದು ನಾವು ಹೇಳುತ್ತಿದ್ದೇವೆ. ತಾವು ಪ್ರಶ್ನೋತ್ತರದ ನಂತರ ಕೇಳಬೇಕಾಗಿತ್ತು. ಅದನ್ನು ಅವರು ಕೇಳಲು ತಯಾರಿಲ್ಲ. ಇದ್ಯಾವ ನ್ಯಾಯ? ನೀವೂ ಕೊಟ್ಟಂಥ ತೀರ್ಮಾನಕ್ಕೆ ಗೌರವ ಕೊಡದಿದ್ದರೆ ಇವರೇಕೆ ವಿರೋಧ ಪಕ್ಷದವರಾಗಿರಬೇಕು?

ಗೊಂದಲ

ಶ್ರೀ ಬಿ. ಸೋಮಶೇಖರ್ : ಏಕೆ ಈ ವಿಚಾರ ಬಹಳ ಗಾಬರಿಯಾಯಿತೆಂದರೆ, ಈ 6 ಜನರು ಸಾಮೂಹಿಕ ಆತ್ಮಹತ್ಯೆ ಮಾಡಿಕೊಂಡಿರುವುದರ ಜೊತೆಗೆ, ಬ್ಯಾಡಗಿಯಲ್ಲಿ 51 ಜನರು ಇದೇ ಪರಿಸ್ಥಿತಿಯಿಂದ ಆತ್ಮಹತ್ಯೆಗೆ ಸಾಲಾಗಿ ನಿಂತಿದ್ದಾರೆ. ಇಂಥ ಒಂದು ವಿಚಾರದಲ್ಲಿ ಚರ್ಚೆ ಮಾಡಬೇಕೆಂದು ಹೇಳಿ ತೆಗೆದುಕೊಂಡಾಗ ತಾವು ಸ್ವಲ್ಪ ಮಟ್ಟಿಗೆ ಸಬ್‌ಮಿಷನ್‌ಗೆ ಅವಕಾಶ ಕೊಟ್ಟಿದ್ದರೆ ಚೆನ್ನಾಗಿತ್ತು. ತಾವು ಸರ್ಕಾರದವರನ್ನು ಕೇಳಿ ರಿಜೆಕ್ಟ್ ಆದರೂ ಮಾಡಿ ಚಿಂತೆ ಇಲ್ಲ. ಬೇರೆ ರೂಪಕ್ಕಾದರೂ ಕನ್‌ವರ್ಟ್ ಮಾಡಿ. ನಿಲುವಳಿ ಸೂಚನೆಯ ಅರ್ಥವೇನು? ಸದನದ ಪ್ರತಿಯೊಂದು ಬಿಸಿನೆಸ್ ಅನ್ನೂ ಬದಿಗೊತ್ತಿ ಇದನ್ನು ಪ್ರಥಮವಾಗಿ ತೆಗೆದುಕೊಳ್ಳುವುದೇ ನಿಲುವಳಿ ಸೂಚನೆ. ಒಂದು ವೇಳೆ ನಿಲುವಳಿ ಸೂಚನೆ ಬೇಡ, ಅದನ್ನು ನಂತರ ತೆಗೆದುಕೊಳ್ಳೋಣವೆಂದು ಹೇಳಿದ್ದರೆ, ಬೇರೆ ರೂಪದಲ್ಲಿ ಅದಕ್ಕೆ ಅವಕಾಶ ಕೊಟ್ಟಿದ್ದರೆ, ಒಪ್ಪಿಕೊಳ್ಳುತ್ತಿದ್ದೆವು. ಅದಕ್ಕೂ ಅವಕಾಶ ಕೊಡದೆ, ನಾವು ಸಬ್‌ಮಿಷನ್ ಮಾಡುವುದಕ್ಕೂ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು : ನಾನು ಪ್ರಶ್ನೋತ್ತರ ವೇಳೆ ಆದ ಮೇಲೆ ನೋಡೋಣ ಎಂದು ಹೇಳಿದೆ. ಅದಕ್ಕೆ ತಾವು ಯಾರೂ ಒಪ್ಪಲಿಲ್ಲವಲ್ಲ.

ಶ್ರೀ ಬಿ. ಸೋಮಶೇಖರ್ : ಆದ್ದರಿಂದ ಈ ಪರಿಸ್ಥಿತಿ ಉದ್ಭವವಾಯಿತು.

ಅಧ್ಯಕ್ಷರು : ನಾನು ಕ್ವೆಶ್ಚನ್ ಹವರ್ ಆದ ಮೇಲೆ ನೋಡೋಣವೆಂದು ಹೇಳಿದೆ. ಅದಕ್ಕೆ ತಾವು ಏಕೆ ಒಪ್ಪಲಿಲ್ಲ?

ಗೊಂದಲ

ಶ್ರೀ ಬಿ. ಸೋಮಶೇಖರ್ : ಇಲ್ಲಿ ಎರಡು ತಪ್ಪುಗಳಾಗಿವೆ. ತಮ್ಮ ಕಛೇರಿಯಲ್ಲಿ ನಾವು ನಿಲುವಳಿ ಸೂಚನೆ ಕೊಟ್ಟಿದ್ದರೂ ಅದನ್ನು ತಮ್ಮ ಗಮನಕ್ಕೆ ತರದೆ, ನಿಲುವಳಿ ಸೂಚನೆ ಬಂದಿಲ್ಲವೆಂದು

ಹೇಳಿದ್ದು ಮೊದಲನೇ ತಪ್ಪು. ಎರಡನೇ ತಪ್ಪೆಂದರೆ, ನಮಗೆ ಅವಕಾಶವನ್ನೇ ಕೊಡದೇ ಏಕಾಏಕಿ ವಿರೋಧ ಪಕ್ಷದ ಸುಮಾರು 31 ಜನ ಸದಸ್ಯರನ್ನು ತಾವು ಈ ರೀತಿ ಅಮಾನತ್ತು ಮಾಡಿರುವುದು ಆರೋಗ್ಯಕರವಾದುದಲ್ಲ. ನಾನು ಮತ್ತೆ ಕಳಕಳಿಯಿಂದ ಕೇಳುತ್ತೇನೆ. ತಾವು ಚರ್ಚೆಗೆ ಅವಕಾಶ ಕೊಡಿ. ತಾವು ಈ ಸದನದ ನಿಯಮಾವಳಿ ಪ್ರಕಾರ ನಡೆಸಬೇಕಾದ ಚರ್ಚೆಗೆ ಅವಕಾಶ ಕೊಡಿ. ತಾವು ರಿಜೆಕ್ಟ್ ಮಾಡಿದರೂ ಚಿಂತೆ ಇಲ್ಲ. ಆದರೆ, ಅದರ ಬಗ್ಗೆ ಪುನರ್ ಪರಿಶೀಲನೆ ಮಾಡಿ.

ಅಧ್ಯಕ್ಷರು : ನೋಡೋಣ. ನನಗೆ ಆಲೋಚನೆ ಮಾಡುವುದಕ್ಕೆ ಸಮಯ ಕೊಡಿ.

ಗೊಂದಲ

ಅಧ್ಯಕ್ಷರು : ನನಗೆ ಆಲೋಚನೆ ಮಾಡುವುದಕ್ಕೆ ಸಮಯ ಬೇಡವೆ? ನೀವೇನೋ ಪ್ರಸ್ತಾಪಿಸಿದ್ದೀರಿ, Let us think over

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ Rule 64(2): ಏನು ಹೇಳುತ್ತದೆಂದರೆ

"If objection to leave being granted is taken, the speaker shall request those members who are in favour of leave being granted to rise in their places and if not less than twenty three members rise accordingly, the speaker shall intimate that leave is granted."

ಅಧ್ಯಕ್ಷರು : ಆಯಿತು.

ಶ್ರೀ ಬಿ. ಸೋಮಶೇಖರ್ : ಈಗ 23 ಜನ ಎದ್ದು ನಿಂತು ಕೇಳಿದರೆ ತಾವು ಅವಕಾಶ ಕೊಡಲೇಬೇಕು.

ಅಧ್ಯಕ್ಷರು : ಕ್ವೊಶ್ಚನ್ ಹವರ್ ಆದಮೇಲೆ ನೋಡೋಣವೆಂದು ಹೇಳಿದೆ. ಕ್ವೊಶ್ಚನ್ ಹವರ್ ಆದಮೇಲೆ ತಮಗೂ ಆಪಾರ್ಚುನಿಟಿ ಕೊಡುತ್ತಿದ್ದೆ. ಕ್ವೊಶ್ಚನ್ ಹವರ್ ಆಗಕೂಡದೆಂದು ಹೇಳುತ್ತಾರಲ್ಲಾ.

ಗೊಂದಲ

ಶ್ರೀ ಎಂ.ಆರ್. ಸಭಾಪತಿ : ತಾವು ಪ್ರಶ್ನೋತ್ತರದ ನಂತರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಹೇಳಲೂ ಇವರು ಬಿಡಲಿಲ್ಲ.

ಅಧ್ಯಕ್ಷರು : ಕ್ವೊಶ್ಚನ್ ಹವರ್ ಆದ ನಂತರ ನೋಡೋಣವೆಂದು ನಾನು ಹೇಳಿದ್ದು. ಬೇಕಾದರೆ ಪ್ರೊಸೀಡಿಂಗ್ಸ್ ತೆಗೆಯಿರಿ. ಕ್ವೊಶ್ಚನ್ ಹವರ್ ಸದಸ್ಯರು ಕಾದಿದ್ದಾರೆ, ಪ್ರಶ್ನೋತ್ತರದ ನಂತರ ನೋಡೋಣವೆಂದು ಹೇಳಿದ್ದೆ. ಅದಕ್ಕೂ ತಾವು ಒಪ್ಪದಿದ್ದರೆ ಹೇಗೆ? I dont like it.

ಗೊಂದಲ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನೀವು 4 ವರ್ಷಗಳಿಂದ ಈ ಸದನವನ್ನು ನಮ್ಮೆಲ್ಲರ ಸಹಕಾರ ತೆಗೆದುಕೊಂಡು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದೀರಿ. ಇದೇ ರೀತಿ ಇನ್ನೊಂದು ವರ್ಷ ಮುಂದುವರೆಯಬೇಕೆಂಬುದು ನಮ್ಮೆಲ್ಲರ ಇಚ್ಛೆ. ಇವತ್ತು ನಡೆದಿರುವ ಘಟನಾವಳಿಗಳೇನಿವೆ ಇಂಥ ಒಂದು ಒಂದು ಬಿಗಿ ವಾತಾವರಣದಲ್ಲಿ ಇದನ್ನು ಬಗೆಹರಿಸಲಿಕ್ಕಾಗುವುದಿಲ್ಲ. ಏಕೆಂದರೆ, ಕ್ವೊಶ್ಚನ್ ಹವರ್ ಮುಗಿಸಿದ ಮೇಲೆ ಕಾನ್ಸ್ಟಿಟ್ಯೂಷನಲ್ ಅಮೆಂಡ್‌ಮೆಂಡ್, ರೆಸಲ್ಯೂಷನ್ ಸಹ ಮಾಡಲಿಕ್ಕೆ ಈ ಹಂತದಲ್ಲಿ ತಾವು ಹೊರಟು ಹೋಗಿದ್ದೀರಿ. ಈ ಸಂದರ್ಭದಲ್ಲಿ ವಿಷಯದ ಗಾಂಭೀರ್ಯತೆಯನ್ನು ಅರಿತಿರುವ ತಾವು ಇದನ್ನು ಚರ್ಚೆಗೆ ಮಾಡಲಿಕ್ಕೆ

ಅವಕಾಶ ಮಾಡಿಕೊಡುತ್ತೇವೆಂದೂ ಸಹ ಹೇಳುತ್ತಿದ್ದೀರಿ. ಇದನ್ನು ಬಗೆಹರಿಸಬೇಕಾದರೆ 5 ನಿಮಿಷಗಳ ಕಾಲ ಸದನವನ್ನು ಮುಂದಕ್ಕೆ ಹಾಕಿ. ಚರ್ಚೆ ಮಾಡಿ. ಇಲ್ಲದಿದ್ದರೆ ಇದರಿಂದ ಉಪಯೋಗವಾಗುವುದಿಲ್ಲ. ಇದು ಸಭೆಗೆ ಗೌರವ ತರುವ ವಿಚಾರವಲ್ಲ, ದಯವಿಟ್ಟು 2 ನಿಮಿಷಗಳ ಕಾಲ ಸದನವನ್ನು ಮುಂದಕ್ಕೆ ಹಾಕಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, I have grat respect to the submission made by the semer leaders ಸೋಮಶೇಖರ್ ಇರಬಹುದು. ಇಲ್ಲಿ ಪ್ರಶ್ನೆ ಏನೆಂದರೆ ನಾವು ವಿಷಯವನ್ನು ಪ್ರಸ್ತಾಪ ಮಾಡಿದಾಗ ನಾವು ಪ್ರತಿಕ್ರಿಯೆಯನ್ನು ಕೊಡುವುದಕ್ಕೆ ಮುಂಚೆ ಇದು ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲವೆಂದು ಹೇಳಿ ತಾವು ನಿರ್ಣಯ ಕೊಟ್ಟಿದ್ದೀರಿ ಇದು ಮೊದಲನೇ ಭಾಗ. ಆಗುತ್ತದೋ, ಬಿಡುತ್ತದೋ, ಚರ್ಚೆಗೆ ಬೇರೆ ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಪ್ರತಿಪಕ್ಷದ ನಾಯಕರು ಏನಾದರೂ ಪ್ರತಿಪಾದನೆ ಮಾಡಿದ್ದರೆ, ತಾವು ಆಲೋಚನೆ ಮಾಡುವುದಕ್ಕೆ ಸಮಯ ಸಿಗುವುದು. ಹಾಗೂ ಮಾಡದೆ, ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇವೆ, ಈಗಲೇ ತೆಗೆದುಕೊಳ್ಳಬೇಕೆಂದು ಹೇಳುವುದಿದೆಯಲ್ಲಾ ಇದು ಎರಡನೆಯ ಭಾಗ...

ಅಧ್ಯಕ್ಷರು : ಯಾವುದೇ ವಿಷಯವಾಗಲಿ ಕ್ವೆಶ್ಚನ್ ಹವರ್ ಆದ ನಂತರ ತೆಗೆದುಕೊಳ್ಳೋಣವೆಂದು ಹೇಳಿದ್ದೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಯಾವ ವಿಷಯವನ್ನೂ ಮಾತನಾಡಲೂ ಅವಕಾಶವಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಘಟನಾವಳಿಯ ಈ ಘಟ್ಟದಲ್ಲಿ ಬಹಳ ಮುಖ್ಯವಾದುದೆಂದರೆ, ತಾವು ಈಗಾಗಲೇ 347ನೇ ವಿಧಿಯನ್ನು ಜಾರಿಗೊಳಿಸಿದ್ದೀರಿ. ಅದನ್ನು ಈಗ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದಕ್ಕೆ ಗೌರವ ಕೊಟ್ಟರೆ ನಂತರ ನೋಡಬಹುದು. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಅವರು ಹೇಳಿದ ಹಾಗೆ ಯಾವ ರೂಪದಲ್ಲಾದರೂ ಚರ್ಚೆಗೆ ತೆಗೆದುಕೊಳ್ಳಿ. ಸರ್ಕಾರ ಅದಕ್ಕೆ ಸಿದ್ಧವಿದೆ. ಇದರಲ್ಲಿ ಬಹಳ ಮುಖ್ಯವಾದ ಪ್ರಶ್ನೆ ಎಂದರೆ ನಿನ್ನೆ ಇದೇ ವಿಚಾರ ಪ್ರಸ್ತಾಪ ಮಾಡಿದ್ದಾರೆ.

ಗೊಂದಲ

ಅಧ್ಯಕ್ಷರು : ಮಾನ್ಯ ಸೋಮಶೇಖರ್ ಮಾತನಾಡುವಾಗ ಅವರು ಸುಮ್ಮನೆ ಇದ್ದರು ಇವರು ಮಾತನಾಡುವಾಗ ನೀವೇಕೆ ಗಲಾಟೆ ಮಾಡುತ್ತೀರಿ? ನಾನು ಇದಕ್ಕೆ ಅಲೋ ಮಾಡುವುದಿಲ್ಲ.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ನಿನ್ನೆ ತಾನೇ ಸರ್ಕಾರ ಉತ್ತರ ಕೊಟ್ಟಿದೆ. ಆದರೂ ಕೂಡ ಚರ್ಚೆ ಮಾಡಬೇಕೆಂದು ಹೇಳುತ್ತಾರೆ. ಅದು ತಮ್ಮ ವಿವೇಚನೆಗೆ ಬಿಟ್ಟಿದ್ದು.

ಗೊಂದಲ

ಶ್ರೀ ಯು.ಆರ್. ಸಭಾಪತಿ : ನಿಯಮಾವಳಿ ಪ್ರಕಾರ ಮಾತನಾಡುವುದಾದರೆ ಕುಳಿತುಕೊಳ್ಳಲಿ, ಇಲ್ಲದಿದ್ದರೆ ಇವರನ್ನು ಹೊರಗೆ ಹಾಕಲೇಬೇಕಾಗುತ್ತದೆ

ಶ್ರೀ ಡಿ.ಬಿ. ಚಂದ್ರೇಗೌಡ :– ನಿನ್ನೆ ಈ ವಿಚಾರ ಪ್ರಸ್ತಾಪಿಸಿದಾಗ, ಜಾಣ ಮೌನ ಅನುಸರಿಸಿದ ವಿರೋಧ ಪಕ್ಷದ ನಾಯಕರು, ಇವತ್ತು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ತರುವುದು ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ :– ಯಾವುದೋ ವಿಚಾರವನ್ನು ಪ್ರಸ್ತಾಪಿಸಿ ಸರ್ಕಾರದ ಅಭಿಪ್ರಾಯವನ್ನೂ ಕೇಳುವುದಕ್ಕೆ ಮುಂಚೆ ಪ್ರತಿಪಕ್ಷಗಳು ಸರ್ಕಾರಕ್ಕೆ ಧಿಕ್ಕಾರವೆಂದು ಕೂಗುವುದಿದೆಯಲ್ಲಾ ಇದನ್ನೇ ಗೂಂಡಾಗಿರಿ ಎಂದು ಹೇಳುವುದು. ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಕ್ವೊಶ್ಚನ್ ಹವರ್ ಆದಮೇಲೆ ತೆಗೆದುಕೊಳ್ಳಬೇಕೋ ಅಥವಾ ಮೊದಲು ತೆಗೆದುಕೊಳ್ಳಬೇಕೋ ಎನ್ನುವುದೇ ಪ್ರಶ್ನೆ ಇರುವುದು. ತಾವು ಈಗಾಗಲೇ ಕ್ವೊಶ್ಚನ್ ಹವರ್ ಈಜ್ ಓವರ್ ಎಂದು ಹೇಳಿಯಾಗಿದೆ. ಅದಾದಮೇಲೆ, ಅದನ್ನು ರಿವೋಕ್ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲದಿದ್ದರೆ, ಅವರಿಗೆ ಮಾತನಾಡಲು ಅವಕಾಶ ಕೊಡಬೇಕಾಗಿದೆ. ಅದಕ್ಕೆ ೫ ನಿಮಿಷ ಕರೆದು ಇತ್ಯರ್ಥಪಡಿಸಬೇಕು. ಏಕೆಂದರೆ, ಕ್ವೊಶ್ಚನ್ ಹವರ್ ಈಜ್ ಓವರ್ ಎಂದು ತಾವು ಹೇಳಿ ಅದು ರೆಕಾರ್ಡ್‌ಗೆ ಹೋಗಿಯಾಗಿದೆ. ಪ್ರಶ್ನೋತ್ತರವೇಳೆ ಮುಗಿದ ಮೇಲೆ ಉಳಿದಿರುವಂಥದ್ದು ಚರ್ಚೆಗೆ ಅವಕಾಶ ಕೊಡಬೇಕು ಅನ್ನುವಂಥದ್ದು. ಅದಕ್ಕೋಸ್ಕರ ತಾವು ಪುನಃ ತೀರ್ಮಾನ ಮಾಡಬೇಕು.

ಗೊಂದಲ

ಅಧ್ಯಕ್ಷರು : ಮಾನ್ಯ ಸಭಾಪತಿಯವರೇ ತಾವು ಕುಳಿತುಕೊಳ್ಳಿ. ನೋಡಿ ಈ ಮಧ್ಯೆ ಮಾನ್ಯ ಸಂಸದೀಯ ಸಚಿವರು ಅವರನ್ನು ನೇಮ್ ಮಾಡಿರುವುದರಿಂದ, I cannot go against the decision of the House. ನೋ ನೋ ಆಚೆ ಕಳುಹಿಸುವುದು ನನ್ನ ಕರ್ತವ್ಯ ಅವರು ವಿತ್‌ಡ್ರಾ ಮಾಡಿದರೆ ನಾನು ನೋಡುತ್ತೇನೆ. If the Hon. Minister withdraws....

ಗೊಂದಲ

ಅವರು ನೇಮ್ ಮಾಡಿರುವುದರಿಂದ ಒಂದೈದು ನಿಮಿಷ ಹೋಗಿ ಬಂದುಬಿಡಿ ಆಮೇಲೆ ನೋಡೋಣ, ಅವರು ಮಂತ್ರಿಗಳು ಅದನ್ನು ವಾಪಸ್ ತೆಗೆಯುವವರೆಗೂ I have no jurisdiction ತಾವು ಒಂದು ಹತ್ತು ನಿಮಿಷ ಹೊರಗೆ ಹೋಗಿ ಬನ್ನಿ ಬೇಕಾದರೆ ಆಮೇಲೆ ನೋಡೋಣ. ಬೇಕಾದರೆ ಅಡ್ಜರ್ನ್ ಮಾಡೋಣ... ಮಂತ್ರಿಗಳು ವಿತ್‌ಡ್ರಾ ಮಾಡಿದರೆ I have no objection

ಗೊಂದಲ

ಅಧ್ಯಕ್ಷರು : ಪ್ರಶ್ನೋತ್ತರವಾದ ಮೇಲೆ ನೋಡೋಣವೆಂದು ನಾನು ಹೇಳಲಿಲ್ಲವೆ? ಈ ಮಧ್ಯೆ ಏನೇನು ಘಟನೆಗಳು ನಡೆಯಿತು ಎಂದು ತಾವು ಅರ್ಥ ಮಾಡಿಕೊಳ್ಳಿ. ಮಾನ್ಯ ಸಂಸದೀಯ ಸಚಿವರು ತಮ್ಮನ್ನೆಲ್ಲಾ ನೇಮ್ ಮಾಡಿದ್ದಾರೆ. Until he withdraws, I cannot take any decision.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಏನು ನಿರ್ಣಯ ತೆಗೆದುಕೊಂಡಿದ್ದೀರಿ ಆ ನಿರ್ಣಯವನ್ನು ಎಲ್ಲರೂ ಗೌರವಿಸಬೇಕಾದುದು ನಮ್ಮೆಲ್ಲರ ಕರ್ತವ್ಯ....

ಅಧ್ಯಕ್ಷರು : ಅದರ ಮೇಲೆಯೇ ಆರ್ಗ್ಯುಮೆಂಟ್ ಮಾಡುತ್ತಿದ್ದಾರೆ. ನಮ್ಮ ರೂಲಿಂಗ್ ಮೇಲೆಯೇ ಚಾಲೆಂಜ್ ಮಾಡುತ್ತಿದ್ದಾರೆ.. ಆಯಿತು ಹತ್ತು ನಿಮಿಷ ಹೋಗಿ, ಆಮೇಲೆ ನಾನು ಕರೆಸುತ್ತೇನೆ. ಮಂತ್ರಿಗಳು ವಾಪಸ್ ತೆಗೆಯುವವರೆಗೂ I have no jurisdiction. ಅಲ್ಲಿಗೆ ನಿಮಗೆ ರೂಲಿಂಗ್‌ಗೂ ಗೌರವ ಇಲ್ಲ, ಯಾವುದಕ್ಕೂ ಗೌರವ ಇಲ್ಲವೆಂಬುದು ಅರ್ಥವಾಯಿತು.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸರ್ಕಾರ ಎಂದೂ ಕೂಡ ಚರ್ಚೆಗೆ ತಯಾರಿಲ್ಲ ಎಂದು ಹೇಳಿಲ್ಲ ಅಥವಾ ಮತ್ತೊಂದು ಏನೂ ಹೇಳಿಲ್ಲ. ತಾವು ಕೊಟ್ಟಂಥ ನಿರ್ಣಯಕ್ಕೆ ಅವರು ಪ್ರತಿಭಟನೆ ಮಾಡುತ್ತಿದ್ದಾರೆ ಅಷ್ಟೆ ಇದು ಸರ್ಕಾರದ ವಿರುದ್ಧ ಅಲ್ಲ, ತಾವು ಕೊಟ್ಟಂಥ ನಿರ್ಣಯದ ವಿರುದ್ಧ ಪ್ರತಿಭಟನೆ, ಅಂದರೆ ಇದರ ಅರ್ಥ ಏನು? ಈ ಸದನದಲ್ಲಿ ಅಧ್ಯಕ್ಷರಿಗೆ ಎಷ್ಟರ ಮಟ್ಟಿಗೆ ಅವರು ಗೌರವ ಕೊಡುತ್ತಿದ್ದಾರೆಂಬುದು ಇದರಿಂದ ಗೊತ್ತಾಗುತ್ತದೆ.

ಅಧ್ಯಕ್ಷರು : ಸಂಸದೀಯ ಸಚಿವರು ತಮ್ಮನ್ನೆಲ್ಲಾ ನೇಮ್ ಮಾಡಿದ್ದಾರೆ. Until the Hon.Minister withdraws, I have no jurisdiction. ಸಭೆಯ ನಿಯಮಾವಳಿಯ ಪ್ರಕಾರ ಒಂದು ಸಲ ಮಾನ್ಯ ಮಂತ್ರಿಗಳು ನೇಮ್ ಮಾಡಿದರೆ ತಾವು ಆಚೆಗೆ ಹೋಗಬೇಕಾಗುತ್ತದೆ, ಅದನ್ನು ನೀವು ಧಿಕ್ಕರಿಸುತ್ತಿದ್ದೀರಿ ಅಷ್ಟೆ..

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ತಮ್ಮ ಆದೇಶವನ್ನು ಪ್ರಶ್ನೆ ಮಾಡಿದರೆ ತಾವು ಏನು ನಿರ್ಣಯ ಮಾಡಬೇಕೋ ಮಾಡಿ; ಅವರು ಆ ಕುರ್ಚಿಯ ಮೇಲೆ ಕುಳಿತ ಬಳಿಕ ಈ ಸದನದ ಸಂಪೂರ್ಣ ಅಧಿಕಾರ ತಮ್ಮ ಕೈಯಲ್ಲಿ ಇದೆ. ತಾವು ಅಧಿಕಾರವನ್ನು ಚಲಾಯಿಸತಕ್ಕಂಥದ್ದು ತಮ್ಮ ವಿವೇಚನೆಗೆ ಬಿಟ್ಟಿರತಕ್ಕಂಥದ್ದು.. ತಮ್ಮ ವಿವೇಚನೆಯಿಂದ ಅಧಿಕಾರ ಚಲಾಯಿಸಿ ಅಧ್ಯಕ್ಷರೇ.

ಅಧ್ಯಕ್ಷರು : ನೋಡಿ ಸಚಿವರು ನೇಮ್ ಮಾಡಿದ್ದಾರೆ. ಆದ್ದರಿಂದ ನೀವು ಹೊರಗೆ ಹೋಗಬೇಕಾದುದು ನಿಮ್ಮ ಕರ್ತವ್ಯ ಆಮೇಲೆ ನಾನೇ ಕರೆಸುತ್ತೇನೆ. ಬೇಕಾದರೆ ಆಮೇಲೆ ಕರೆಸೋಣ.

ಶ್ರೀ ಎಂ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ನಿನ್ನೆ ಚರ್ಚೆಯಾಗುವಾಗ ಎಲ್ಲ ಮಾನ್ಯ ಸದಸ್ಯರು ಇಲ್ಲಿಯೇ ಇದ್ದರು.

ಗೊಂದಲ

ಅಧ್ಯಕ್ಷರು : ಎಲ್ಲಾ ಇಲ್ಲಿಯೇ ಇದ್ದರೂ ಸಹ ನಿನ್ನೆ ಮಾತನಾಡುವಾಗ ಒಬ್ಬರೂ ಹೇಳಲಿಲ್ಲ, ನಾನು ಪ್ರಶ್ನೋತ್ತರ ವೇಳೆ ಮುಗಿಯಲಿ ಆಮೇಲೆ ನೋಡೋಣ ಎಂದು ಹೇಳಿದ್ದೆ ಅಲ್ಲವೆ? ಅಷ್ಟರೊಳಗೆ ನೀವು ಹೀಗೆ ಹಠ ಮಾಡಿದರೆ ಹೇಗೆ? ನೀವು ಅಡ್ಡಿ ಬಂದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರು ಹೇಳಿದ ಹಾಗೆ ದಯವಿಟ್ಟು ತಾವು ವಿತ್‌ಡ್ರಾ ಮಾಡಿಕೊಳ್ಳಿ.

ಗೊಂದಲ

ಅಧ್ಯಕ್ಷರು : ನೋ ನೋ.. ಇದು ರಾಜ್ಯದ ಪ್ರಶ್ನೆಯಲ್ಲ. ನೀವು ರೂಲಿಂಗ್ ಅನ್ನೇ ಚಾಲೆಂಜ್ ಮಾಡುತ್ತಿದ್ದೀರಲ್ಲಾ.. I am very sorry you are challenging the Rulling ಸಭೆಗೆ ವಿರುದ್ಧವಾಗಿ ರೂಲಿಂಗ್ ಅನ್ನೇ ಚಾಲೆಂಜ್ ಮಾಡುತ್ತಿದ್ದೀರಲ್ಲಾ ಮಾನ್ಯ ಸಚಿವರು ನೇಮ್ ಮಾಡಿದ ಮೇಲೆ It is my duty to read out ತಾವು ದಯವಿಟ್ಟು ಹೊರಗೆ ಹೋಗಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮಗೆ ಗೌರವ ಕೊಟ್ಟು ಅವರು ಹೋಗುತ್ತಿಲ್ಲ. ಇಲ್ಲಿ ಸರ್ಕಾರದ ಮೇಲೆ ದೂರುತ್ತಿದ್ದಾರೆ. ಇದು ಏನಾಗಿದೆ ಎಂದರೆ, "ಎಮ್ಮೆಗೆ ಜ್ವರ ಬಂದರೆ ಆಕಳಿಗೆ ಬರೆ ಹಾಕುವುದು" ಆ ರೀತಿ ನಡೆದಿದೆ. ಮಾಡುವುದು ಅವರು, ಹೇಳುವುದು ನಮ್ಮ ಮೇಲೆ.

ಅಧ್ಯಕ್ಷರು : ನೋಡಿ ನಿಯಮಾವಳಿಗಳನ್ನು ಧಿಕ್ಕರಿಸಬೇಡಿ... ಮಿನಿಸ್ಟರ್ ನೇಮ್ ಮಾಡಿದ್ದಾರೆ ತಾವು ದಯವಿಟ್ಟು ಹೊರಗೆ ಹೋಗಿ ಹತ್ತು ನಿಮಿಷ ಆದಮೇಲೆ ನಾವು ಕರೆಸುತ್ತೇವೆ ಇನ್ನೇನು?.. ನಾನು ಕರೆಸುತ್ತೇನೆ ದಯವಿಟ್ಟು ಹೋಗಿ, ಸರ್ಕಾರವನ್ನು ಕೇಳಿಕೊಂಡು ನಾನೇ ಕರೆಸುತ್ತೇನೆ. ಮಾಡಲಿ ಬಿಡಿ ಅವರು ವಿತ್ ಡ್ರಾ ಮಾಡಿದರೆ I have no objection ಎಂದು ಹೇಳುತ್ತಿದ್ದೇನಲ್ಲಾ. I can't compel the Hon'ble Minister to withdraw it. ನೋಡಿ ನಾಯ್ಡುರವರೇ ನನಗೆ ಎಲ್ಲಾ ಗೊತ್ತಿದೆ, ನೋಡಿ ಮೂವತ್ತು ವರ್ಷಗಳ ಹಿಂದೆಯೇ ಲೆಜಿಸ್ಲೇಟಿವ್ ಕೌನ್ಸಿಲ್ ಛೇರ್ಮನ್ ಆಗಿದ್ದೆ ನನಗೂ ಅನುಭವ ಇದೆ, ಅರ್ಥವಾಯಿತೆ? ಮಾನ್ಯ ರಾಮಕೃಷ್ಣ ಹೆಗಡೆಯವರು ವಿರೋದ ಪಕ್ಷದ ನಾಯಕರು ಆಗಿದ್ದಾಗ, ಮಾನ್ಯ ಬೊಮ್ಮಾಯಿಯವರು ವಿರೋಧ ಪಕ್ಷದ ನಾಯಕರು ಆಗಿದ್ದಾಗ ನಾನು ಛೇರ್ಮನ್ ಆಗಿದ್ದೆ, ಈಗಲ್ಲ ಅದು 30 ವರ್ಷಗಳ ಹಿಂದೆ.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮೊದಲು ನೀವು ಏನು ಆಜ್ಞೆ ಮಾಡಿದ್ದೀರಿ ಅದು ಪಾಲನೆ ಆಗಲಿ, ಮೊದಲು ಅವರು ನಿಮ್ಮ ಆಜ್ಞೆಯನ್ನು ಪಾಲನೆ ಮಾಡಲಿ, ತದನಂತರ ಮುಂದೆ ಮಾತನಾಡಿ ನೋಡೋಣ.

ಅಧ್ಯಕ್ಷರು : ನಾನು ಸರ್ಕಾರದ ಜೊತೆಯಲ್ಲಿ ಮಾತನಾಡಿ ಆಮೇಲೆ ಕರೆಸುತ್ತೇನೆ. ಈಗ ತಾವು ದಯವಿಟ್ಟು ಹೋಗಿ.

ಗೊಂದಲ

ತಾವು ಆಜ್ಞೆ ಪಾಲನೆ ಮಾಡಿ ಎಲ್ಲಾ ಸರಿ ಹೋಗಬಹುದು. The Government may accept it. Afterwards, the Government may accept my suggestion. ತಾವು ದಯವಿಟ್ಟು ಐದು ನಿಮಿಷ ಹೋಗಿ ಬನ್ನಿ. ಎಲ್ಲರಿಗೂ ಕಾಫಿ ಕೊಡಿಸುವುದಕ್ಕೆ ನಾನು ಹೇಳುತ್ತೇನೆ ದಯವಿಟ್ಟು ಹೋಗಿ...

ಶ್ರೀ ಜಗದೀಶ್ ಶೆಟ್ಟರ್ : ಆ ನಿರ್ಣಯವನ್ನು ಪುನರ್ ವಿಮರ್ಶೆ ಮಾಡುವ ತೀರ್ಮಾನವನ್ನು ತಾವೇ ಕೈಗೊಳ್ಳಿ

ಅಧ್ಯಕ್ಷರು : ಅವರು ಪುನರ್‌ವಿಮರ್ಶೆ ಮಾಡಬೇಕು, ನಾನಲ್ಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ನಾಯ್ಡುರವರೇ ಹೋಗಿ ಸ್ವಲ್ಪ ಕಾಫಿ ಕುಡಿದು ಬನ್ನಿ ಎಂದು ಮಾನ್ಯ ಅಧ್ಯಕ್ಷರೇ ಹೇಳಿದ್ದಾರೆ. ಹೋಗಿ ಕಾಫಿ ಕುಡಿದು ಬನ್ನಿ. ಅಧ್ಯಕ್ಷರು ಕಾಫಿ ಕುಡಿಯುವುದಕ್ಕೆ ಅಹ್ವಾನ ಕೊಟ್ಟರೆ ನೀವು ಹೋಗುವುದಿಲ್ಲವೆ? ಮಾನ್ಯ ಸುಬ್ಬಾರೆಡ್ಡಿಯವರೇ ಮಾನ್ಯ ಅಧ್ಯಕ್ಷರು ಕಾಫಿ ಕುಡಿಯುವುದಕ್ಕೆ ಹೋಗಿ ಬರಬೇಕೆಂದು ಹೇಳಿದ್ದಾರೆ, ಹೋಗಿ ಬನ್ನಿ ಸ್ವಾಮಿ...

ಗೊಂದಲ

ಶ್ರೀ ಬಿ. ರಮಾನಾಥ ರೈ : ಬಾವಿಯಲ್ಲಿ ಕುಳಿತು ಬೇಜಾವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ, ನಿಮ್ಮ ಜವಾಬ್ದಾರಿಯನ್ನು ಹೇಗೆ ನಿರ್ವಹಣೆ ಮಾಡಬೇಕು ಎಂಬುದು ನಿಮಗೆ ಗೊತ್ತಿಲ್ಲವೆ? ನೀವು ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತೀರಲ್ಲಾ ನಿಮ್ಮಿಂದ ನಾವು ಬೇಜಾವಾಬ್ದಾರಿಯನ್ನು ಕಲಿಯಬೇಕಾಗಿದೆ.

ಗೊಂದಲ

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ತಾವು ರೂಲ್ 347ರ ಪ್ರಕಾರ ಯಾವೊಬ್ಬ ಸದಸ್ಯನ ವರ್ತನೆ ಸರಿಯಿಲ್ಲದಿದ್ದರೆ ಆಡಳಿತ ಪಕ್ಷದವರು ಯಾರಾದರೂ ಅದನ್ನು ಮೂವ್ ಮಾಡಿದರೆ ಅದರಂತೆ ಅವರನ್ನು ಹೊರಗೆ ಹಾಕತಕ್ಕಂಥ ನಿರ್ಧಾರವನ್ನು ತೆಗೆದುಕೊಂಡಿದ್ದೀರಿ. ಇಲ್ಲಿ ನಿಯಮ 64ರಲ್ಲಿ ಏನು ಇದೆ? ಯಾವುದಾದರೂ ನಿಲುವಳಿ ಸೂಚನೆಗೆ 23 ಜನ ಬೆಂಬಲವಾಗಿ ನಿಂತು ಇದು ಬೇಕು ಎಂದು ಹೇಳಿದಾಗ ಅದಕ್ಕೆ ಅವಕಾಶ ಕೊಡತಕ್ಕಂಥದ್ದು ತಮ್ಮ ಕೈಯಲ್ಲಿ ಇದೆ. ಈಗ ವಿರೋಧ ಪಕ್ಷದವರ ಸಂಖ್ಯೆ ಯಾವಾಗಲೂ ಕಡಿಮೆ ಇರುತ್ತದೆ. ಆಡಳಿತ ಪಕ್ಷದವರ ಸಂಖ್ಯೆ ಯಾವಾಗಲೂ ಜಾಸ್ತಿ ಇರುತ್ತದೆ. ಈ ಎಲ್ಲಾ ನಿಯಮಗಳಲ್ಲೂ ಈ 23 ಜನ ಎಂದು ಏಕೆ ಇಟ್ಟರು? ಕೊನೇಪಕ್ಷ 23 ಜನ ಏನಾದರೂ ಒಂದು ವಿಚಾರವನ್ನು ಎತ್ತಿದ್ದರೆ, ಅದಕ್ಕೆ ಮಾನ್ಯತೆ ಕೊಟ್ಟು ಚರ್ಚೆಗೆ ಅವಕಾಶ ಕೊಡಬೇಕೆಂದೇ ನಾವು 23 ಜನರನ್ನು ಇಟ್ಟಿರತಕ್ಕಂಥದ್ದು ಪ್ರತಿಯೊಂದಕ್ಕೂ ಆಡಳಿತ ಪಕ್ಷದವರ ಹತ್ತಿರ ರೆಸಲ್ಯೂಷನ್ x x x

ಗೊಂದಲ

Mr. Speaker : No, no. Don't say like that, (interruptions) Don't tell like that. I don't accept.

ಗೊಂದಲ

Mr. Speaker : You please withdraw that word.

ಗೊಂದಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರುಗಳು ಈ ರೀತಿಯಾಗಿ ಮಾಡಿದರೆ ಹೇಗೆ?

Mr. Speaker : You please withdraw that word

ಶ್ರೀ ಬಿ. ಸೋಮಶೇಖರ್ : XXX

Mr. Speaker : Don't take it remove it form the records

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ನಾನು ಮಾತನಾಡಬೇಕೇ ಬೇಡವೇ ಯಾವ ರೀತಿ ಎಂದು ಹೇಳಿಬಿಡಿ.

ಗೊಂದಲ

ಅಧ್ಯಕ್ಷರು : ನಾನು ಒಪ್ಪಿಗೆ ಕೊಟ್ಟಮೇಲೆ ಮಾತನಾಡುವುದಕ್ಕೆ ಎದ್ದು ನಿಂತುಕೊಳ್ಳಬೇಕು. not at this stage ಮೊದಲೇ ರಿಜೆಕ್ಟ್ ಮಾಡಿದ್ದೇನಲ್ಲಾ not at this stage ಅರ್ಥವಾಯಿತೇ? ನಾನು ಪರ್ಮಿಷನ್ ಕೊಟ್ಟ ಮೇಲೆ ಫುಲ್ ಮೆಜಾರಿಟಿ ಇದೆಯೇ ಕೋರಂ ಇದೆಯೇ ಎಂಬುದನ್ನು ನಾನು ನೋಡುತ್ತೇನೆ. ಅರ್ಥವಾಯಿತೇ? ನೀವು ಮಂತ್ರಿಗಳಾಗಿ ಕೆಲಸ ಮಾಡಿ ಅನುಭವ ಹೊಂದಿರುವವರು ಈ ರೀತಿ ಮಾತನಾಡಬಾರದು. I don't like it. ನಾನು ಯಾವತ್ತೂ ಅವರು ಹೇಳಿದ ಹಾಗೆ ಮಾಡಿಲ್ಲ. I have got my own discretionary power.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ಪ್ರಶ್ನೆ ಮಾಡುತ್ತಿಲ್ಲ. ತಾವು ತಪ್ಪು ತಿಳಿದುಕೊಳ್ಳಬೇಡಿ, ತಮ್ಮನ್ನು ಪ್ರಶ್ನೆ ಮಾಡುವ ಅಧಿಕಾರ ನಮಗೆ ಇಲ್ಲ.

ಶ್ರೀ ಯು.ಆರ್. ಸಭಾಪತಿ : ಅವರು ತಮ್ಮನ್ನೇ ಪ್ರಶ್ನಿಸುತ್ತಿದ್ದಾರೆ ಬೇರೆ ಬೇರೆ ರೀತಿಯಲ್ಲಿ ಅವರು ನಮ್ಮನ್ನು ತೋರಿಸಿ ತಮ್ಮನ್ನೇ ಪ್ರಶ್ನಿಸುತ್ತಿದ್ದಾರೆ.

---

x x x ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಬಿ. ಸೋಮಶೇಖರ್ : ಅವಕಾಶವನ್ನು ಕೊಡದಿದ್ದರೆ ನಿಯಮಾವಳಿ ಏಕೆ ಇರಬೇಕು?

ಅಧ್ಯಕ್ಷರು : ಸೋಮಶೇಖರ್‌ರವರಲ್ಲಿ, ಒಪ್ಪಿದೆ ಸ್ವಾಮಿ ಆದರೆ ಅದು ಯಾವಾಗ? ಅದು ಸೆಕೆಂಡ್ ಸ್ಟೇಜ್. ನಾನು ಒಪ್ಪಿದರೆ 23 ಜನ ಎದ್ದು ನಿಂತುಕೊಳ್ಳಬೇಕು, ಆದರೆ ಆ ರೀತಿ ಸಂದರ್ಭ ಬಂದಿಲ್ಲ. ಯಾವಾಗಲೂ ನಾನು ನಿಯಮ 69ರ ಪ್ರಕಾರ ಯಾವುದಕ್ಕಾದರೂ ಅಲೋ ಮಾಡುತ್ತಿದ್ದೆ. ಆದರೆ ಆ ಸಂದರ್ಭವೇ ಬರಲಿಲ್ಲ. ನಾನು ಒಪ್ಪಿದ ಮೇಲೆ 23 ಜನ ಎದ್ದು ನಿಂತುಕೊಳ್ಳುವುದು, not in the first stage ಆದರೆ ಇಲ್ಲಿ ಫಸ್ಟ್ ಸ್ಟೇಜ್‌ನಲ್ಲಿಯೇ ರಿಜೆಕ್ಟ್ ಮಾಡಲಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಾನಂದ ಪಾಟೀಲ್‌ರವರನ್ನು ಈಗಾಗಲೇ ಅಮಾನತ್ತು ಮಾಡಲಾಗಿದೆ. ಅಮಾನತ್ತು ಮಾಡಿರುವುದರಿಂದ ಶಿವಾನಂದ ಪಾಟೀಲರಿಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಡಿ.

ಅಧ್ಯಕ್ಷರು : ಅವರಿಗೆ ಅವಕಾಶ ಇಲ್ಲ. ಶೂನ್ಯವೇಳೆ ಇರುವಾಗ ನೋ ಪಾಯಿಂಟ್ ಆಫ್ ಆರ್ಡರ್.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, A suspended member cannot speak on the floor of the House or that it cannot go into record. They are suspended. Therefore. I appeal to the speaker. It shall not go into record.

ಅಧ್ಯಕ್ಷರು : ಜಗದೀಶ್ ಶೆಟ್ಟರ್‌ರವರೆ ನಿಮ್ಮನ್ನು ಈಗಾಗಲೇ ಸಸ್ಪೆಂಡ್ ಮಾಡಲಾಗಿದೆ. ತಾವು ಹೊರಗೆ ಹೋಗುತ್ತೀರೋ ಇಲ್ಲವೋ?

ಗೊಂದಲ

ಅಧ್ಯಕ್ಷರು : ದಯವಿಟ್ಟು ಕೇಳಿ, ನಾನು ಯಾರ್‍ಯಾರ ಹೆಸರನ್ನು ಹೇಳಿದ್ದೇನೋ ಅವರನ್ನು ಈ ದಿನ ಸಂಜೆಯವರೆವಿಗೂ ಸಸ್ಪೆಂಡ್ ಮಾಡಿದ್ದೇನೆ. ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸದನವು ಮಧ್ಯಾಹ್ನ 12 ಗಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 15 ನಿಮಿಷಗಳ ನಂತರ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

7. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಿಯಮ 347 ರ ಪ್ರಕಾರ ಅಮಾನತ್ತುಗೊಳಿಸಿ ಹೊರಹಾಕಿ ಸದಸ್ಯರುಗಳನ್ನು ನಿಯಮ 348 (2) ರ ಪ್ರಕಾರ ಪುನಃ ವಾಪಸ್ಸು ಕರೆಸುವ ಬಗ್ಗೆ

(ಸದನವು ಪುನಃ ಮಧ್ಯಾಹ್ನ 1–20 ಗಂಟೆಗೆ ಸಮಾವೇಶಗೊಂಡಿತು)

(ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ಪೀಠವನ್ನು ಅಲಂಕರಿಸಿದ್ದರು)

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ವಿಧಾನಸಭೆಯಲ್ಲಿ ನಡೆದಂಥ ಘಟನೆ ಏನಿದೆ ಅದು ಯಾರೂ ಸಹ ಸಂತೋಷಪಡತಕ್ಕ ಒಂದು ಘಟನೆಯಲ್ಲ. ಆದರೆ, ದುರಾದೃಷ್ಟವಶಾತ್ ಅಹಿತಕರವಾದ ಘಟನೆಯಾಗಿ, ಪ್ರಥಮಬಾರಿಗೆ ತಮ್ಮ ಅವಧಿಯಲ್ಲಿ ನಮ್ಮ ಅಧಿಕೃತವಾದ ವಿರೋಧಪಕ್ಷದ ನಾಯಕರನ್ನೊಳಗೊಂಡಂತೆ ಆ ಎಲ್ಲಾ ಸದಸ್ಯರುಗಳನ್ನು

ತಾವು ನಿಯಮ 347ರ ಪ್ರಕಾರ ಈ ಸದನದಿಂದ ಹೊರಗೆ ಹಾಕತಕ್ಕ ಆದೇಶವನ್ನು ಮಾಡಿದ್ದೀರಿ. ನಾನು ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೂ ಪ್ರಜಾಪ್ರಭುತ್ವದ ವ್ಯವಸ್ಥೆಯ ಒಳಗಡೆ ವಿರೋಧ ಪಕ್ಷದವರು, ಆಡಳಿತ ಪಕ್ಷದವರು ಘರ್ಷಣೆ ಮಾಡತಕ್ಕಂಥದ್ದು, ಚಕಮಕಿ ಮಾಡತಕ್ಕಂಥದ್ದು ನಡೆದುಕೊಂಡು ಬಂದಂಥ ಒಂದು ಪದ್ಧತಿ. ಆದರೆ ಈ ಒಂದು ವಿಚಾರದಲ್ಲಿ ಈ ಮಟ್ಟಕ್ಕೆ ಹೋಗಬಾರದಾಗಿತ್ತು. ಆದರೆ ಹೋಗಿದೆ. ಆದರೆ ಇಲ್ಲಿ ಈ ಆರೋಗ್ಯಕರವಾದಂಥ ಚರ್ಚೆಯಾಗಬೇಕಾದರೆ ಎಲ್ಲಾ ವಿರೋಧ ಪಕ್ಷದ ಸದಸ್ಯರುಗಳು ಈ ಸದನದಲ್ಲಿರಬೇಕಾಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಸರ್ಕಾರದವರು ಆಡಳಿತ ಪಕ್ಷದ ಸದಸ್ಯರು ಏನು ಈ ಹೊರಗಡೆ ಹಾಕತಕ್ಕಂಥ ಮೋಷನ್‌ಅನ್ನು ಮೂವ್ ಮಾಡಿದ್ದಾರೆ, ಅದನ್ನು ಹಿಂತೆಗೆದುಕೊಂಡು ನಿಯಮ 348ರ ಪ್ರಕಾರ ಅದನ್ನು ಪುನರ್ ಪರಿಶೀಲನೆ ಮಾಡಿ ಈ ವಿರೋಧ ಪಕ್ಷದ ನಾಯಕರು ಮತ್ತು ಅವರ ಪಕ್ಷದ ಸದಸ್ಯರುಗಳನ್ನು ತಾವು ವಾಪಸ್ ಕರೆಸಿಕೊಂಡು ಈ ಒಂದು ಚರ್ಚೆಗೆ ಅನುವು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

†**ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ)** : ಮಾನ್ಯ ಸಭಾಧ್ಯಕ್ಷರೇ, ಕಳೆದ ವರ್ಷ ಮಾನ್ಯ ಪ್ರಧಾನಮಂತ್ರಿಗಳು, ಲೋಕಸಭಾಧ್ಯಕ್ಷರು ಮತ್ತೆ ನಾವೆಲ್ಲಾ ಸೇರಿಕೊಂಡು ದೆಹಲಿಯ ಪಾರ್ಲಿಮೆಂಟ್‌ನಲ್ಲಿ ಕುಳಿತುಕೊಂಡು ಧರಣಿ ಮಾಡತಕ್ಕಂಥ ವಿಚಾರದಲ್ಲಿ ಅನೇಕ ತೀರ್ಮಾನಗಳನ್ನು ಮಾಡಿದೆವು. ಆ ತೀರ್ಮಾನಗಳನ್ನು ಮಾಡುವಾಗ ಸರ್ಕಾರದವರ ಸಂಯಮ, ಸಭಾಧ್ಯಕ್ಷರುಗಳ ಸಂಯಮ ಮತ್ತು ನಿಯಮಾವಳಿಗಳು, ವಿರೋಧಪಕ್ಷಗಳ ಪಾತ್ರ ಇವೆಲ್ಲವೂ ಸಹಿತ ದೀರ್ಘವಾಗಿ ಚರ್ಚೆಯಾಯಿತು. ನನ್ನ ಮನಸ್ಸಿಗೆ ಬಹಳ ನೋವಾಗಿರತಕ್ಕಂಥದ್ದು ಏನೆಂದರೆ, ಇಲ್ಲಿ ಕೇವಲ ಕರ್ನಾಟಕ ವಿಧಾನಸಭೆಯ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿಲ್ಲ. ಇಡೀ ದೇಶದಲ್ಲಿ ಈ ನಿರ್ಣಯಗಳಿಗೇನಾದರೂ ಅರ್ಥ ಇದೆಯೇ ಎನ್ನತಕ್ಕಂಥ ಸಂದೇಹ ನನಗೆ ಅನೇಕ ಸಂದರ್ಭಗಳಲ್ಲಿ ಬರುತ್ತಿದೆ. ಎಲ್ಲಾ ರಾಷ್ಟ್ರೀಯ ಪಕ್ಷಗಳು, ಪ್ರಾದೇಶಿಕ ಪಕ್ಷಗಳು, ವಿರೋದ ಪಕ್ಷದ ನಾಯಕರುಗಳು, ಮುಖ್ಯಮಂತ್ರಿಗಳು, ಪ್ರಧಾನಮಂತ್ರಿಗಳ ಸಮ್ಮುಖದಲ್ಲಿ ಪ್ರಧಾನ ಮಂತ್ರಿಗಳನ್ನು ಸೇರಿಸಿ ಮಾಡಿರತಕ್ಕಂಥ ತೀರ್ಮಾನಕ್ಕೆ ಬೆಲೆ ಇಲ್ಲವೇನೋ ಎನ್ನತಕ್ಕಂಥ ಒಂದು ಖೇದಕರವಾದಂಥ ವಿಚಾರ ವ್ಯಕ್ತವಾಗುತ್ತದೆ. ಇವತ್ತು ದೇಶದಲ್ಲಿ ಆಗುತ್ತಿರತಕ್ಕಂಥದ್ದು ಸತ್ಸಂಪ್ರದಾಯ ಅಲ್ಲ. ಖಂಡಿತವಾಗಿ ಈ ಸಂಸ್ಥೆಗಳನ್ನು ಬಲಪಡಿಸುವ ದೃಷ್ಟಿಯಿಂದ ಇದು ಸರಿಯಲ್ಲ ಪ್ರಜಾಪ್ರಭುತ್ವದಲ್ಲಿ ವಿಧಾನಸಭೆ, ಲೋಕಸಭೆ ಮತ್ತು ಸಂವಿಧಾನದಿಂದ ರಚನೆಯಾಗಿರತಕ್ಕ ಬೇರೆ ಬೇರೆ ಸಂಘ ಸಂಸ್ಥೆಗಳು ಏನಿವೆ, ಇವುಗಳನ್ನು ಡೀವ್ಯಾಲ್ಯೂ ಮಾಡತಕ್ಕಂಥದ್ದು ಅಷ್ಟೊಂದು ಸರಿಯಾಗಿ ನನಗೆ ಕಾಣುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಸದನದಲ್ಲಿ ಚರ್ಚೆ ಆಗಬೇಕು. ಪ್ರತಿ ಒಂದು ವಿಚಾರದಲ್ಲೂ ಸಹಿತ ಇಲ್ಲಿ ಚರ್ಚೆ ಆಗಬೇಕು. ವಿರೋಧ ಪಕ್ಷದವರು ನಾವೂ ಸಹಿತ ಸರ್ಕಾರದ ವೈಫಲ್ಯಗಳನ್ನು, ಸರ್ಕಾರದಲ್ಲಿ ಆಗತಕ್ಕ ಅನ್ಯಾಯಗಳನ್ನು ಸರ್ಕಾರದ ಭ್ರಷ್ಟಾಚಾರದ ವ್ಯವಸ್ಥೆಯನ್ನು ಜನಗಳಿಗೆ ಮುಟ್ಟಿಸುವುದರಲ್ಲಿ ನಾವು ಕೆಲಸ ಮಾಡಿಕೊಂಡು ಹೋಗಿ ಅಲ್ಲಿಗೆ ನಿಲ್ಲಿಸಬೇಕಾಗುತ್ತದೆ. ಈ ಒಂದು ಸದನದ ಹೊರಗಡೆ ನಾವು ಜನಗಳ ಹತ್ತಿರ ಹೋಗಿ ಬಾಕಿ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಸಂಪ್ರದಾಯ ನನಗೆ ಅನ್ನಿಸತಕ್ಕಂಥದ್ದು, ಕರ್ನಾಟಕ ವಿಧಾನಸಭೆ ರಾಷ್ಟ್ರದ ವಿಧಾನಸಭೆಗೆ ಮಾದರಿ ಆಗಬೇಕು. ಎನ್ನತಕ್ಕದ್ದು ನನ್ನ ಆಸೆ. ನಾನು ಸಾಂದರ್ಭಿಕವಾಗಿ, ಪ್ರಾಸ್ತಾವಿಕವಾಗಿ ಈ ಮಾತನ್ನು ಹೇಳಿದ್ದೇನೆ. ಇನ್ನು ಇವತ್ತು ಬೆಳಿಗ್ಗೆ ನಡೆದಿರತಕ್ಕ ಘಟನೆ ನಿನ್ನೆ ದಿನ

ಮಾನ್ಯ ಮಲ್ಲಿಕಾರ್ಜುನ ನಾಗಪ್ಪನವರು ಹಾಗೂ ಮಾನ್ಯ ಕಂದಾಯ ಸಚಿವರು ಈ ಕೊಪ್ಪಳ ಜಿಲ್ಲೆಯಲ್ಲಿ ಆಗಿರತಕ್ಕ ಸಾವು ಅದು ಹಸಿವಿನಿಂದ ಬಡತನದಿಂದ, ಬರಗಾಲದಿಂದ ಆಗಿರತಕ್ಕ ಆತ್ಮಹತ್ಯೆ ಬಗ್ಗೆ ಉತ್ತರವನ್ನು ಕೊಟ್ಟರು. ಮಾನ್ಯ ಸದಸ್ಯರಾಗಿರತಕ್ಕಂತ ಕರಡಿ ಸಂಗಣ್ಣನವರು ಇದರ ಬಗ್ಗೆ ನನ್ನ ಜೊತೆ ಪ್ರಸ್ತಾಪ ಮಾಡಿ ತಮ್ಮ ಕಛೇರಿಗೂ ಸಹಿತ ನಿಲುವಳಿ ಸೂಚನೆಯನ್ನು ನಾವು ಕಳುಹಿಸುತ್ತಿದ್ದೇವೆ, ಚರ್ಚೆಯಲ್ಲಿ ನಾವು ಸಹ ಭಾಗವಹಿಸಬೇಕು ಇದರ ಬಗ್ಗೆ ಮಾತನಾಡಬೇಕು ಎನ್ನತಕ್ಕ ಮಾತನ್ನು ಹೇಳಿದರು. ಅದು ಎಲ್ಲಿ ಅಚಾತುರ್ಯ ನಡೆಯಿತು ಎಂಬ ಬಗ್ಗೆ ನಾನು ಸ್ವಲ್ಪ ದೂರದಲ್ಲಿ ಕುಳಿತುಕೊಂಡಿರುವುದರಿಂದ ನನಗೆ ಸರಿಯಾಗಿ ಗ್ರಹಿಸಲಿಕ್ಕೆ ಆಗಲಿಲ್ಲ. ತಾವು ಕಳೆದ ನಾಲ್ಕು ವರ್ಷಗಳಿಂದ ತಮ್ಮ ಒಂದು ಅನುಭವದಿಂದ ಈ ಸದನವನ್ನು ನಡೆಸಿಕೊಂಡು ಹೋಗಿದ್ದೀರಿ. ನಾವೆಲ್ಲರೂ ನಿಮಗೆ ಸಹಕಾರವನ್ನು ಕೊಟ್ಟಿದ್ದೇವೆ. ಆದರೆ ಯಾವತ್ತೂ ಸಹಿತ ಈ ಸದನದಲ್ಲಿ ಸದಸ್ಯರನ್ನು ಹೊರಗೆ ಹಾಕಿದ ಘಟನೆ ನಡೆದಿರಲಿಲ್ಲ. ಅದೂ ವಿರೋಧ ಪಕ್ಷದ ನಾಯಕರು ಅಂದರೆ ಮನ್ಯ ಮುಖ್ಯಮಂತ್ರಿಗಳಿಗೆ ಈ ಒಂದು ಸದನದ ಒಳಗಡೆ ಸಮಾನಾಂತರವಾಗಿರತಕ್ಕಂಥ ಒಂದು ಹುದ್ದೆ. ಅವರನ್ನು ಹೊರಗೆ ಇಟ್ಟು ಈ ಸದನವನ್ನು ನಡೆಸತಕ್ಕಂಥದ್ದಕ್ಕೆ ವಿರೋಧ ಪಕ್ಷದಲ್ಲಿರತಕ್ಕಂಥ ನಮಗೆ ಮನಸ್ಸು ಒಪ್ಪುವುದಿಲ್ಲ. ಆದ್ದರಿಂದ ನನಗೆ ಏನು ಅನಿಸಿತು ಎಂದರೆ ಎಲ್ಲೋ ಒಂದು ಕಡೆ ಸರ್ಕಾರದವರು ಅವಸರದಿಂದ ಈ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಸ್ವಲ್ಪ ಸಂಯಮವನ್ನು ತಾಳಿದ್ದಾರೆ ಈ ಘಟನೆ ನಡೆಯುತ್ತಿರಲಿಲ್ಲ, ಅವರನ್ನು ಹೊರಗೆ ಹಾಕತಕ್ಕ ಪ್ರಸಂಗ ಬರುತ್ತಿರಲಿಲ್ಲ ಎನ್ನತಕ್ಕದ್ದು ನನ್ನ ಅಭಿಪ್ರಾಯ. ಅದರಿಂದ ತಾವು ಇವತ್ತು ನಮ್ಮ ಪುಸ್ತಕದಲ್ಲಿರತಕ್ಕ ನಿಯಮಾವಳಿ 347ರ ಪ್ರಕಾರ ಅವರನ್ನು ಹೊರಗೆ ಹಾಕತಕ್ಕಂಥದ್ದಕ್ಕೆ ಸರ್ಕಾರದ ಸಲಹೆ ಮೇರೆಗೆ ಏನು ಮಾಡಿದ್ದೀರಿ ಇದು ನನಗೆ ಏನು ಅನ್ನಿಸುತ್ತದೆ? ಅಂದರೆ ಇದು ನನ್ನ ಒಂದು ಸಣ್ಣ ಅಭಿಪ್ರಾಯ ಸ್ವಾಮಿ. ತಾವು ದಯಮಟ್ಟು ತಪ್ಪು ತಿಳಿಯಬಾರದು. ಸದನದಲ್ಲಿ ಬಹುಮತದ ಅಭಿಪ್ರಾಯವನ್ನು ತೆಗೆದುಕೊಂಡಂತಹ ಸಂದರ್ಭದಲ್ಲಿ ಸ್ವಲ್ಪ ನಮ್ಮ ವಿರೋಧ ಪಕ್ಷದಲ್ಲಿ ಧ್ವನಿ ಸಣ್ಣದು ಇರಬಹುದು. ನಮ್ಮ ಸಂಖ್ಯೆಯೂ ಬಹಳ ಕಡಿಮೆ ಇರಬಹುದು. ಆದರೆ ಅನೇಕ ಸಂದರ್ಭದಲ್ಲಿ ವಿರೋಧ ಪಕ್ಷದ ಪಾತ್ರವನ್ನು ವಹಿಸುವಾಗ ಸತ್ಯವನ್ನು ನುಡಿಯತಕ್ಕಂಥ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಅದರಿಂದಾಗಿ ಆಡಳಿತ ಪಕ್ಷದವರು, ಅದರಲ್ಲೂ ಈ ಒಂದು ಸಭೆಯಲ್ಲಿ 40 ವರ್ಷಗಳಿಂದ ಇರತಕ್ಕಂಥ ಗೌರವಾನ್ವಿತ ಸದಸ್ಯರುಗಳು ಇದ್ದಾರೆ. ನಾವೆಲ್ಲಾ ಅವರ ಮುಂದೆ ಏನೂ ಅಲ್ಲ. ಅವರ ಅನುಭವದಲ್ಲಿ ಅರ್ಧ ಇಲ್ಲ. ಅವರ ರಾಜಕೀಯ ಅನುಭವದಷ್ಟು ನಮ್ಮ ವಯಸ್ಸುಗಳು. ಅದರಿಂದಾಗಿ ನನಗೆ ಅನ್ನಿಸತಕ್ಕಂಥದ್ದು ಸರ್ಕಾರ ಮಡಿರತಕ್ಕದ್ದು ಎಲ್ಲೋ ಒಂದು ಕಡೆ ಅವಸರದ ಕ್ರಮ ಆಯಿತೇನೋ ಎಂದು ಅನ್ನಿಸುತ್ತದೆ. ದಯಮಾಡಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ತಾವು ಕೊಟ್ಟಿರತಕ್ಕಂಥ ತೀರ್ಮಾನ ಏನಿದೆ ಅದನ್ನು ಮರು ಪರಿಶೀಲನೆ ಮಡಿ. ದಯಮಾಡಿ ಅವರನ್ನೆಲ್ಲಾ ಒಳಗಡೆ ಕರೆಸಿಕೊಳ್ಳಿ. ಇವತ್ತು ಸಭೆ ನಡೆಸೋಣ; ಮತ್ತು ಆ ವಿಚಾರದ ಬಗ್ಗೆಯೂ ಚರ್ಚೆ ಆಗಲಿ ಏಕೆಂದರೆ ಪತ್ರಿಕೆಗಳಲ್ಲಿ ಆ ವಿಚಾರ ಬಂದಿದೆ. ನಮ್ಮ ರಾಜ್ಯದ ಪ್ರಮುಖವಾದ ಪತ್ರಿಕೆಗಳೆಲ್ಲವೂ ಸಹಿತ ಈ ಹಸಿವಿನ ಸಾವಿನ ಬಗ್ಗೆ ವರದಿ ಮಾಡಿವೆ. ಅದರ ಸತ್ಯಾಸತ್ಯತೆಯನ್ನು ಪ್ರಪಂಚ ತಿಳಿಯಬೇಕಾಗುತ್ತದೆ, ರಾಷ್ಟ್ರ ತಿಳಿಯಬೇಕಗುತ್ತದೆ. ಕರ್ನಾಟಕದಲ್ಲಿ ಹಸಿವಿನಿಂದ ಸಾಯುತ್ತಿರತಕ್ಕಂಥ, ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಕುಟುಂಬಗಳ ಬಗ್ಗೆ ಎಂದು ಹೇಳಿದರೆ ಅದು

ನಿಜವಾಗಿಯೂ ಸಹಿತ ಬಹಳ ಧಾರುಣವಾಗಿರತಕ್ಕಂಥ ಕಥೆ. ಅದರ ಬಗ್ಗೆ ಚರ್ಚೆಯಾಗಬೇಕು. ದಯಮಾಡಿ ಅವರನ್ನು ಕರೆಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಾ ನಾನು ಈ ಅಭಿಪ್ರಾಯಗಳನ್ನು ಮಂಡಿಸುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದೀರಿ, ತಮಗೆ ಧನ್ಯವಾದಗಳು.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೆ, ಕುಷ್ಟಗಿ ಕ್ಷೇತ್ರದ ಮಾನ್ಯ ಸದಸ್ಯರು ವಿಷಯ ಪ್ರಸ್ತಾಪ ಮಾಡಿದರು. ಆದರೆ ನಿನ್ನೆ ದಿನಪತ್ರಿಕೆಗಳಲ್ಲಿ ಅದು ಯಾವುದೂ ಅಷ್ಟು ಪ್ರಸ್ತಾಪ ಆಗಿರಲಿಲ್ಲ. ಮಾನ್ಯ ಕಂದಾಯ ರಾಜ್ಯ ಸಚಿವರಾದ ಶ್ರೀ ಮಲ್ಲಿಕಾರ್ಜುನ ನಾಗಪ್ಪನವರು ಉತ್ತರವನ್ನು ಕೊಟ್ಟರು. ಅದರ ಬಗ್ಗೆ ಆ ಭಾಗದ ಶಾಸಕರಾದ ಮಾನ್ಯ ಕರಡಿ ಸಂಗಣ್ಣನವರು ಆಕ್ಷೇಪಣೆಯನ್ನು ಎತ್ತಿದರೂ ಕೂಡ ವಿಷಯ ಅಲ್ಲಿಗೇ ನಿಂತು ಹೋಯಿತು. ಇವತ್ತು ಏನಾಗಿದೆ ಎಂದು ಹೇಳಿದರೆ ಈ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಳಲ್ಲಿ ಸರ್ಕಾರಕ್ಕೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ವಿರೋಧ ಪಕ್ಷದವರಿಗೂ ಇದೆ. ಸಂಖ್ಯಾ ಬಲ ಜಾಸ್ತಿ ಇದೆ ಎಂದ ತಕ್ಷಣ ವಿರೋಧ ಪಕ್ಷದವರ ಮಾತನ್ನು ಕೇಳಬಾರದು ಎಂಬ ಧೋರಣೆ ಸರಿಯಲ್ಲ ಇಲ್ಲಿ ವಿರೋಧ ಪಕ್ಷದವರು ಸರ್ಕಾರದ ಮೇಲೆ ಆರೋಪ ಮಾಡುವುದೇ ಮುಖ್ಯವಾಗಿ ಇರುವುದಿಲ್ಲ. ಆದರೆ ಮಾನ್ಯ ನಾಗಪ್ಪನವರು ಏನು ಹೇಳಿದರು ಅಂದರೆ ಆ ಅಮ್ಮನಿಗೆ ಅಸ್ತಮಾ ಇತ್ತು, ಅಸ್ತಮಾ ರೋಗದಿಂದ ಅವರು ನಿಧನ ಹೊಂದಿದರು. ಆ ನಿಧನ ಹೊಂದಿದ್ದಕ್ಕೆ ಅವರ ಕುಟುಂಬ ವರ್ಗದವರು ಈ ರೀತಿ ಮಾಡಿದರು ಎಂದು.

ಅಧ್ಯಕ್ಷರು : ನಿನ್ನೆ ಒಂದು ಚುಟುಕು ಉತ್ತರ ಹೇಳಿದ್ದಾರೆ. ಇವತ್ತು ಸ್ಟೇಟ್‌ಮೆಂಟ್ ಮಾಡುತ್ತಾರೆ ಬಿಡಿ.

ಶ್ರೀ ಕೆ. ಎಂ. ಕೃಷ್ಣಮೂರ್ತಿ : ವಿರೋಧ ಪಕ್ಷದವರನ್ನು ಏನು ಹೊರಗೆ ಇಟ್ಟಿದ್ದೀರಿ, ಹೊರಗೆ ಇಟ್ಟು ನಾವು ಚರ್ಚೆ ಮಾಡುವುದು ಇದೆಯಲ್ಲಾ ಇದು ಆರೋಗ್ಯಕರವಾದ ಒಂದು ಚರ್ಚೆ ಆಗುವುದಿಲ್ಲ. ದಯವಿಟ್ಟು ತಾವು ಏನು ನಿರ್ಣಯ ಮಾಡಿದ್ದೀರಿ, ಆ ನಿರ್ಣಯವನ್ನು ವಾಪಸ್ ತೆಗೆದುಕೊಂಡು ವಿರೋಧ ಪಕ್ಷದವರನ್ನೂ ಕೂರಿಸಿಕೊಂಡು ಎಲ್ಲಿ ಏನು ಆಗಿದೆ ಎನ್ನುವುದನ್ನು ವಿಮರ್ಶೆ ಮಾಡಿ ಚರ್ಚೆಮಾಡಿ. ಇವತ್ತೇನು ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಅದಕ್ಕೆ ಪರಿಹಾರ ಏನು ಸೂಚಿಸಬೇಕು ಎನ್ನುವುದನ್ನು ಸರ್ಕಾರ ನಿರ್ಧಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) : ಮಾನ್ಯ ಅಧ್ಯಕ್ಷರೇ ಇವತ್ತು ಮಾನ್ಯ ಸೋಮಶೇಖರ್ ಹಾಗೂ ಶ್ರೀ ಸಿಂಧ್ಯಾಜಿ ಅವರು ಹೇಳಿದ ಹಾಗೆ ಈ ಘಟನೆ ನಾನು ಬರುವುದರೊಳಗೆ ಆಗಿತ್ತು. ನಾನು ಅದೇ ಪಕ್ಷದಲ್ಲಿ ಇದ್ದರೂ ಕೂಡ ಸುದೈವದಿಂದ ಆಸಮಯದಲ್ಲಿ ನಾನು ಇರಲಿಲ್ಲ ಎಂದು ತಾವು ನನ್ನನ್ನು ಎಕ್ಸ್‌ಪೆಲ್ ಮಾಡಿಲ್ಲ ಅದಕ್ಕೂ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಆದರೆ ಮಾನ್ಯ ಸಂಸದೀಯ ಸಚಿವರ ಗಮನಕ್ಕೆ ನಾನು ಒಂದು ವಿಚಾರವನ್ನು ತರಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ಏಕೆಂದರೆ ಅವರ ಬಗ್ಗೆ ನನಗಂತೂ ಬಹಳ ಗೌರವ ಇದೆ. ನಾನು ಮೊದಲಿನಿಂದಲೂ ಅವರ ಪಕ್ಷದಲ್ಲಿಯೇ ಇದ್ದವನು. ಮತ್ತು ಅವರ ನೇತೃತ್ವದಲ್ಲಿಯೇ ಸ್ವಲ್ಪ ಬೆಳೆದಿದ್ದೇನೆ. ಇವತ್ತು ದುದೈವದಿಂದ ಅವರು ಅಲ್ಲಿಗೆ ಹೋದರು, ನಾನು ಇಲ್ಲಿಗೆ ಬಂದೆ. ಆದರೆ ಅವರು ಎಂದೂ ಈ ತರಹದ ಅವಸರದ ನಿರ್ಣಯ ತೆಗೆದುಕೊಳ್ಳತಕ್ಕಂಥ ವ್ಯಕ್ತಿ ಅಲ್ಲ. ಆದರೆ ನನಗೆ ಒಂದು ವಿಷಯ ತಿಳಿಯುತ್ತಿಲ್ಲ. ಈ ನಿರ್ಣಯ ಮಾಡಲಿಕ್ಕೆ ಇವತ್ತು ಅವರು ನಿಮ್ಮನ್ನು ಪ್ರಚೋದಿಸಿದರೋ ಅಥವಾ ನೀವು ಅವರನ್ನು ಪ್ರಚೋದಿಸಿದಿರೋ ಎಂಬುದು ನನಗಂತೂ ತಿಳಿಯುತ್ತಿಲ್ಲ. ಆ ಘಟನೆ ನಡೆದಂತಹ ಸಂದರ್ಭದಲ್ಲಿ

ನಾನು ಇರಲಿಲ್ಲ. ಆದರೂ ಅವರ ಗಮನಕ್ಕೆ ಒಂದು ವಿಚಾರವನ್ನು ತರಲಿಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಇವತ್ತು ಶ್ರೀ ಸಿಂಧ್ಯಾಜಿ ಅವರು ಹೇಳಿದ ಹಾಗೆ ಈ ವಿಧಾನಸಭೆಯಲ್ಲಿ ನನ್ನ ಅನುಭವ ಬಹಳ ಇಲ್ಲ. ಈ ಹಿಂದೆ ನನ್ನ ಅನುಭವ ಕೇವಲ ಐದು ವರ್ಷಗಳು ಮತ್ತು ಈಗ ನಾಲ್ಕು ವರ್ಷಗಳ ಅನುಭವ ಅಷ್ಟೇ. ಆದರೆ ಯಾವುದೇ ಸದಸ್ಯರನ್ನಾಗಲೀ ಅಥವಾ ವಿರೋಧ ಪಕ್ಷದ ನಾಯಕರನ್ನು ಆಗಲೀ ಈ ಸಭೆಯಿಂದ ಸಸ್ಪೆನ್‌ಷನ್ ಮಾಡಿ ಹೊರಗೆ ಹಾಕಿರತಕ್ಕಂತ ಘಟನೆ ಕಳೆದ 8.9.10 ವರ್ಷದಲ್ಲಿ ಜರುಗಿಲ್ಲ. ಆದರೆ ಇವತ್ತು ರಾಷ್ಟ್ರದಲ್ಲಿ ಕೂಡ ಪಾರ್ಲಿಮೆಂಟ್‌ನಲ್ಲಿ ಒಂದು ಘಟನೆ ಮೇಲಿಂದ ಮೇಲೆ ನಡೆಯುತ್ತಿರುತ್ತದೆ. ಅದನ್ನು ನಾನು ತಮ್ಮ ಜ್ಞಾಪಕಕ್ಕೆ ತರಲು ಇಚ್ಛಪಡುತ್ತಿದ್ದೇನೆ. ಆದರೆ ಅದನ್ನು ನಿದರ್ಶನವಾಗಿ ಇಟ್ಟುಕೊಳ್ಳಿ ಎಂದು ನಾನು ತಮ್ಮಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಈ ರಾಷ್ಟ್ರದಲ್ಲಿ, ಪಾರ್ಲಿಮೆಂಟಿನಲ್ಲಿ ತಮಗೆ ಗೊತ್ತಿದೆ, ಡಿಫೈನ್ಸ್ ಮಿನಿಸ್ಟರ್ ಆಗಿರತಕ್ಕ ಶ್ರೀ........

ಅಧ್ಯಕ್ಷರು : ಈಗ ಅವೆಲ್ಲಾ ಬೇಡಿ.

ಶ್ರೀ ಶಿವಾನಂದ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಉದಾಹರಣೆ ಕೋಟ್ ಮಾಡುತ್ತೇನೆ. you cannot prevent me to quote the example.

Mr. speaker : we have no jurisdiction to discuss what is going on in the Parliament.

Sri Shivananda S. Patil : We are bound by the precedents of the parliament.

ಅಧ್ಯಕ್ಷರು : ಈಗ ನಮ್ಮ ಮುಂದೆ ಇರುವ ವಿಷಯ ಅದಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಿಮ್ಮ ಯಾವುದೇ ರೂಲ್ಸ್ ಇರಲಿ ಹೌಸ್‌ನಲ್ಲಿ ಪ್ರೊಸೀಜರ್ಸ್ ಇದೆ. ನಾನು ಎಕ್ಸಾಂಪಲ್ ಕೋಟ್ ಮಾಡುವುದಕ್ಕಾದರೂ ಅವಕಾಶ ಕೊಡಿ.

ಅಧ್ಯಕ್ಷರು : ಬೇಕಾಗಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಾನು ಎಕ್ಸಾಂಪಲ್ ಕೋಟ್ ಮಾಡಬಾರದೆ?

ಅಧ್ಯಕ್ಷರು : ಎಕ್ಸಾಂಪಲ್ ಬೇಡ, ಸುಮ್ಮನೇ ಅರ್ಧ ನಿಮಿಷದಲ್ಲಿ ಹೇಳಿ, ಎಕ್ಸಾಂಪಲ್ ಬೇಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ನನಗೆ ತಿಳಿದದ್ದನ್ನು ಹೇಳಬೇಕಲ್ಲ.

ಅಧ್ಯಕ್ಷರು : ಪುಸ್ತಕ ಓದುವುದಕ್ಕೆ ಹೋಗಬೇಡಿ

ಶ್ರೀ ಶಿವಾನಂದ ಎಸ್. ಪಾಟೀಲ್ : ನಾನು ಪುಸ್ತಕ ಓದುವುದಕ್ಕೆ ಹೊರಟಿಲ್ಲ ಅರ್ಧಯಕ್ಷರೆ, ಅಧ್ಯಕ್ಷರೆ,

ಅಧ್ಯಕ್ಷರು : ಪಾರ್ಲಿಮೆಂಟಿನಲ್ಲಿ ಏನು ಪ್ರೊಸೀಜರ್ ಇದೆ ಅಲ್ಲಿ ಏನು ನಡೆಯಿತು ಎಂದು ಹೇಳಿ ನಾವು ಏಕೆ ಇಲ್ಲಿ ಡಿಸ್ಕಸ್ ಮಾಡಬೇಕು? Are we entitled to discuse all those things? Come on tell me.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಅವರು ಮಾತನಾಡಬೇಕಾದರೆ ನೀವು ಅವಕಾಶ ಕೊಡಬೇಕು.

ಗೊಂದಲ

ಅಧ್ಯಕ್ಷರು : ಪಾರ್ಲಿಮೆಂಟ್ ವಿಚಾರ ಎಂದರೆ ಅವರು ಉತ್ತರ ಹೇಳುತ್ತಾರೆ. There is no end for all those things.

ಶಿವಾನಂದ ಎಸ್. ಪಾಟೀಲ್ : ನಾನು ಡಿಬೇಟ್ ಮಾಡುತ್ತಿಲ್ಲ. ತಮ್ಮ ಮುಖಾಂತರ ಅವರ ವಿವೇಚನೆಗೆ ಬಿಡುತ್ತೇನೆ.

ಅಧ್ಯಕ್ಷರು : ಪಾರ್ಲಿಮೆಂಟ್‌ನಲ್ಲಿ ನಡೆದಿರುವುದನ್ನು ನೀವು ದಯವಿಟ್ಟು ಇಲ್ಲಿ ಎತ್ತಬೇಡಿ ಅಷ್ಟೇ.

ಶಿವಾನಂದ ಎಸ್. ಪಾಟೀಲ್ : ನಾನು ಹೇಳಬೇಕಾಗಿದ್ದು ಇಷ್ಟೇ. ಒಬ್ಬ ಡಿಫೆನ್ಸ್ ಮಿನಿಸ್ಟರ್‌ನ ಆನ್ಸರ್ ಅನ್ನು ಪಾರ್ಲಿಮೆಂಟ್‌ನ ಹೌಸ್‌ನಲ್ಲಿ ಮೂರು ವರ್ಷದಿಂದ ಅಕ್ಸೆಪ್ಟ್ ಮಾಡುತ್ತಾ ಇರಲಿಲ್ಲ. ಆದರೂ..

ಅಧ್ಯಕ್ಷರು : ಇಲ್ಲಿ ಪಾಲಿಮೆಂಟಿನಲ್ಲಿ ಏನು ನಡೆಯುತ್ತಿದೆ ಎಂದು ಹೇಳಿ ಇಂಡಲ್ಜ್ ಮಾಡಿ ಅದರ ಬಗ್ಗೆ ನೀವು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ No, please. ಇಲ್ಲಿ ಕೇಳಿನಮ್ಮ ಮುಂದೆ ಇರುವುದು ಒಂದು ಚಿಕ್ಕ ವಿಷಯ .

ಶ್ರೀ ಕೆ. ಜಯಪ್ರಕಾಶ್ : ಪಾರ್ಲಿಮೆಂಟ್ ಡಿಬೇಟನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಿ ಅದರ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತೇವೆ.

ಅಧ್ಯಕ್ಷರು : ಅದರ ಬಗ್ಗೆ ಅಲ್ಲ. that is a different issue. Don't mix up the issues.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಪಾಲಿಮೆಂಟ್ ಇಶ್ಯೂಸನ್ನು ನಾವು ಇಲ್ಲಿ ಕೋಟ್ ಮಾಡುತ್ತೇವೆ. ನಾವು ಫಾಲೋ ಮಾಡುತ್ತೇವೆ.

MR. Speaker : Don't mix up the issues.

ಶ್ರೀ ಜಯಪ್ರಕಾಶ್ ಹೆಗಡೆ : ಅದರ ಬಗ್ಗೆ ಚರ್ಚೆ ಏಕೆ ಬೇಡ?

ಶ್ರೀ ಶಿವಾನಂದ ಎಸ್. ಪಾಟೀಲ್ : ನೀವು ಪಾರ್ಲಿಮೆಂಟ್ ಪ್ರೊಸೀಜರ್ ಪ್ರಕಾರ...

ಅಧ್ಯಕ್ಷರು : ರಾಜ್ಯಾಂಗದ ಪ್ರಕಾರ ನಾವು ರ್‍ಯಾಟಿಫೈ ಮಾಡಬೆಕು, ಮಾಡಲೇಬೇಕು.

ಗೊಂದಲ

ಶ್ರೀ ಜಯಪ್ರಕಾಶ್ ಹೆಗಡೆ : ನಾವು ಅಲ್ಲಿ ನಡೆದದ್ದನ್ನು ಇಲ್ಲಿ ಕೋಟ್ ಮಾಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ನೀವೇ ಎಕ್ಸ್‌ಪ್ಲೈನ್ ಮಾಡಬೇಕು. ನಾನು ಹೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ರಾಜ್ಯಾಂಗದ ಪ್ರಕಾರ ರ್‍ಯಾಟಿಫೈ ಮಾಡಬೇಕು. Don't mix up the issues.

ಶ್ರೀ ಶಿವಾನಂದ ಎಸ್. ಪಾಟೀಲ್ : ನಾನಂತೂ ಅಧ್ಯಕ್ಷರಿಗೆ ಕನ್‌ವಿನ್ಸ್ ಮಾಡುವ ಕೆಪಾಸಿಟಿ ಇಲ್ಲ. ನಿಮಗೇನಾದರೂ ಇದ್ದರೆ ಹೇಳಿ.

ಶ್ರೀ ಬಿ. ಸೋಮಶೇಖರ್ : ತಾವು ತಾಳ್ಮೆ ಬಿಟ್ಟಿದ್ದೀರಿ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು : ಇಲ್ಲ, ಇಲ್ಲ.

ಶ್ರೀ ಬಿ. ಸೋಮಶೇಖರ್ : ಕೋಪ ಮಾಡಿಕೊಂಡರೆ ಹೇಗೆ?

ಅಧ್ಯಕ್ಷರು : ಆಯಿತು. ಪಾರ್ಲಿಮೆಂಟ್‌ನಲ್ಲಿ ನಡೆಯುವ ಡಿಸ್ಕ್‌ಷನ್ ಬಗ್ಗೆ ಇಲ್ಲಿ ಡಿಸ್ಕಷನ್ ಮಾಡುವುದಕ್ಕೆ ಆಗುತ್ತದೆಯೇ ಹೇಳಿ?

ಶ್ರೀ ಬಿ. ಸೋಮಶೇಖರ್ : ಏನೋ ಉದಾಹರಣೆ ಕೊಡುತ್ತಿದ್ದಾರೆ. ಅದು ರಿಲೆವೆಂಟ್ ಉದಾಹರಣೆ ರಿಲೆವೆಂಟ್ ಆಗಿದ್ದನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಪರ್ನಾಂಡೀಸ್ ಅವರ ಬಗ್ಗೆ ಹೇಳುತ್ತಿದ್ದಾರೆ. Can we talk?

ಗೊಂದಲ

ಶ್ರೀ ಬಿ. ಸೋಮಶೇಖರ್ : ಎರಡು ನಿಮಿಷದಲ್ಲಿ ಹೇಳಿದರೆ ಏನಾಗುತ್ತದೆ?

Mr. Speaker : He is a responsible Minister in the Central cabinet. Can we discuss about Fernandes here?

ಗೊಂದಲ

Mr. Speaker : We have to maintain the dignity of the House. Can we discuss about Fernandes here? ಅವರು ಸೆಂಟ್ರಲ್ ಗವರ್ನಮೆಂಟ್ ಡಿಸಿಷನ್ ಮೇಲೆಲ್ಲಾ ಮಾತನಾಡುತ್ತಾರೆ ದಯವಿಟ್ಟು ಅದರ ಬಗ್ಗೆ ಮಾತನಾಡಬೇಡಿ ಇವೊತ್ತು ಏನು ಘಟನೆ ನಡೆದಿದೆಯೋ ಅದಕ್ಕೆ ಸಂಬಂದಪಟ್ಟಂತೆ ಸೀಮಿತವಾಗಿ ಮಾತನಾಡಿ. ಡಿಬೆಟ್ ಎಲ್ಲಿಂದೆಲ್ಲಿಗೋ ಹೋಗುತ್ತಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಡಿಬೇಟ್ ಆಗಲಾರದೆ ನೀವು expel ಮಾಡಿದಿರಾ? ಅದನ್ನಾದರೂ ಹೇಳಬೇಕು.

ಅಧ್ಯಕ್ಷರು : ನಿಯಮಾವಳಿ ಪ್ರಕಾರ ಅವರು ಮೂವ್ ಮಾಡಿದರು. ನಾನು ಅವರನ್ನು expel ಮಾಡಿದ್ದೇನೆ. ಅಷ್ಟೆ That's all.

ಶ್ರೀ ಶಿವಾನಂದ ಎಸ್. ಪಾಟೀಲ್ : ನಿಮ್ಮ prerogative ಅನ್ನು ನಾನು ಕ್ವೆಶ್ಚನ್ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಪಾರ್ಲಿಮೆಂಟ್‌ನಲ್ಲಿರುವ ಮಿನಿಸ್ಟರ್‌ಗ ಬಗ್ಗೆ ಇಲ್ಲಿ ನಡೆಯುವ ವಿಚಾರಣೆ ಬಗ್ಗೆ ನಾವು ಇಲ್ಲಿ ಡಿಸ್‌ಕಸ್ ಮಾಡುವುದಕ್ಕಾಗುವುದಿಲ್ಲ. ಇವೊತ್ತು ನಡೆದ ಘಟನೆ ವಿಷಯವೇನಿದೆ, ಅದರ ಬಗ್ಗೆ ಒಂದು ನಿಮಿಷ ಮಾತನಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು Kaul & Shakdhar ಅನ್ನು ಇಲ್ಲಿ ಅನೇಕ ಬಾರಿ ರೆಫರ್ ಮಾಡುತ್ತಾರೆ ಪಾರ್ಲಿಮೆಂಟ್‌ನಲ್ಲಿ ನಡೆದಿರುವುದು ಇರುತ್ತದೆ ಅದನ್ನು ನಾವು ಇಲ್ಲಿ ಚರ್ಚೆ ಮಡುತ್ತೇವಲ್ಲಾ.

ಅಧ್ಯಕ್ಷರು : ಪಾರ್ಲಿಮೆಂಟ್‌ನಲ್ಲಿ ಶ್ರೀ ಜಾರ್ಜ್ ಫರ್ನಾಂಡೀಸ್ ಬಗ್ಗೆ ನಡೆದ ಚರ್ಚೆಯನ್ನು ಇಲ್ಲಿ ಹೇಗೆ ಚರ್ಚೆ ಮಾಡುವುದು? ಯಾವ ಕಾನೂನಿನಲ್ಲಿ ಅವಕಾಶವಿದೆ, ಹೇಳಿ? I don't allow ಹಾಗಾದರೆ, ನಾಳೆ ಇನ್ನೊಬ್ಬ ಮಂತ್ರಿಗಳ ಮೇಲೂ ಹೇಳುತ್ತಾರೆ. can we allow?

ಶ್ರೀ ಎಸ್.ಎಸ್. ಪಾಟೀಲ್ : ಪಾರ್ಲಿಮೆಂಟ್‌ನಲ್ಲಿ ಏನು ನಡೆಯುತ್ತದೆಂದು ನೋಡಿಕೊಂಡೇ ನಾವು ಇಲ್ಲಿ ನಡೆಸುತ್ತಿದ್ದೇವೆ.

ಅಧ್ಯಕ್ಷರು : ನೀವು ಈ ರೀತಿ ಮಾತನಾಡಿದರ.......

ಶ್ರೀ ಶಿವಾನಂದ ಎಸ್. ಪಾಟೀಲ್ : ತಾವು Patience ನಿಂದ ಒಂದು ನಿಮಿಷ ಕುಳಿತುಕೊಂಡರೆ...

ಅಧ್ಯಕ್ಷರು : ಇಲ್ಲಿ ಮಾನ್ಯ ಜಾರ್ಜ್ ಫರ್ನಾಂಡೀಸ್ ಬಗ್ಗೆ ಮಾತನಾಡಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಮಗೆ ನೀವು ಪದೇ ಪದೇ ಸಂಸದೀಯ ವ್ಯವಹಾರ ಸಚಿವರ ತಾಳ್ಮೆ ಕಳೆದುಕೊಳ್ಳುತ್ತೀರಿ. ವಿಷಯ ಬಹಳ ಸೀಮಿತವಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಾನು ಹೇಳಿದ್ದು Wrong record ಆಗಬಾರದು. ನಾನು ತಮ್ಮನ್ನು ತಾಳ್ಮೆ ಕಳೆದುಕೊಳ್ಳುತ್ತಾರೆಂದು ಹೇಳಿಲ್ಲ. ಅವರು ಎಂದೂ ತಾಳ್ಮೆ ಕಳೆದುಕೊಂಡಿಲ್ಲವೆಂದು ಹೇಳಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇವೊತ್ತು ಸೀಮಿತವಾದ ಪ್ರಶ್ನೆ ಇದ್ದು, ಮಾನ್ಯ ಹಿರಿಯ ಮುಖಂಡರು ಪ್ರಸ್ತಾಪ ಮಾಡಿದ್ದಾರೆ. ನೀವೂ ಅದಕ್ಕೆ ನನ್ನ ಬೆಂಬಲವಿದೆಯೆಂದು ಒಂದು ಮಾತು ಹೇಳಿದರೆ ಮುಗಿದುಹೋಗುತ್ತದೆ. ಇಲ್ಲದಿದ್ದರೆ ಮತ್ತೆ ವಿಷಯಾಂತರವಾಗಿ ಅದು ಮತ್ತೊಂದು ರೀತಿಯಲ್ಲಿ ತಿರುವು ತೆಗೆದುಕೊಳ್ಳಬಹುದು ಎಂದು ಅಷ್ಟೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಈ ನಿಲುವು ತೆಗೆದುಕೊಳ್ಳಬಾರದೆಂದು ನಾನು ಹೇಳುತ್ತಿದ್ದೇನೆ, ಮತ್ತು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ; ಒಬ್ಬ ಮಂತ್ರಿ ಸಂವಿಧಾನಬದ್ಧವಾಗಿ ಕಾರ್ಯನಿರ್ವಹಿಸುವುದಕ್ಕೆ ಬಿಡದೇ ಇದ್ದರೂ ಸಹ ಪಾರ್ಲಿಮೆಂಟ್‌ನಲ್ಲಿ ಇದುವರೆವಿಗೂ expel ಮಾಡಿಲ್ಲ.

ಅಧ್ಯಕ್ಷರು : ನಾನು ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ. We are not discussing that matter. ಜವಾಬ್ದಾರಿಯುತ ಸಚಿವರ ಬಗ್ಗೆ ಮಾತನಾಡುವುದು ಸರಿಯಲ್ಲ.

Sri Shivananda S. Patil : He has been prevented from the last four years. Nobody has been expelled.

ಅಧ್ಯಕ್ಷರು : ಒಬ್ಬ ಜವಾಬ್ದಾರಿಯುತ ಸಚಿವರ ಬಗ್ಗೆ ಮಾತನಾಡುವುದು ಚೆನ್ನಾಗಿ ಕಾಣುವುದಿಲ್ಲ.

Sri D.B. Chandregowda : That is the business of the Parliament. ರಾಜಕೀಯ ನಿರ್ಣಯಗಳನ್ನು how can we discuss?

Sri B. Somashekar : He is quoting an example. How it is not relevant to this House?

ಶ್ರೀ ಡಿ.ಬಿ. ಚಂದ್ರೇಗೌಡ : ಪ್ರತಿ ಪಕ್ಷಗಳು ಅಲ್ಲಿ ತೆಗೆದುಕೊಂಡಿರುವ ತೀರ್ಮಾನ ಇಲ್ಲಿ ಹೇಗೆ relevant ಆಗುತ್ತದೆ? ಪಾರ್ಲಿಮೆಂಟ್‌ನಲ್ಲಿ ಆಗುವ ಚರ್ಚೆಗಳು ಬೇರೆ.

ಗೊಂದಲ

ಅಧ್ಯಕ್ಷರು : ಪಾರ್ಲಿಮೆಂಟಿನಲ್ಲಿ ಏನು ನಡೆಯಿತು ಎಂಬುದು ಇಲ್ಲಿ ಬೇಡ. ಈಗ ಇಲ್ಲಿರುವ ವಿಷಯವೇ ಬೇರೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ನಾನು ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್‌ರವರಗೆ ಒಂದು ಪ್ರಶ್ನೆ ಕೇಳುತ್ತೇನೆ. ಅಲ್ಲಿ ಅವರು ತೆಗೆದುಕೊಂಡಿರುವ ನಿಲುವು ಸರಿ ಅಥವಾ ಸರಿ ಇಲ್ಲವೆಂದು ನಾವು ಇಲ್ಲಿ ತೀರ್ಮಾನ ಮಾಡುವುದಕ್ಕಾಗುತ್ತದೆಯೇ? When we are not in a position to take any decision here, what is the relevance in discussing the matter here? ಅಲ್ಲಿ ತೆಗೆದುಕೊಂಡಿರುವ ತೀರ್ಮಾನಗಳ ಬಗ್ಗೆ ಇಲ್ಲಿ ನಿಲುವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದ ಮೇಲೆ ಅದರ ಬಗ್ಗೆ ಚರ್ಚೆ ಮಾಡುವುದಾದರೂ ಏನಿದೆ?

ಗೊಂದಲ

ಅಧ್ಯಕ್ಷರು : ವಿಷಯ ಒಳಗಡೆ ಸೆಟ್ಲ್ ಆಗಿದ್ದರೂ ಮತ್ತೆ ಇವರು ಬೇರೆ ರೀತಿ ಪ್ರೇರೇಪಣೆ ಮಾಡುತ್ತಿದ್ದಾರೆ! Again you are raising some other subject.

ಶ್ರೀ ಡಿ.ಬಿ. ಚಂದ್ರೇಗೌಡ : ಸಂಸತ್ತಿನಲ್ಲಿ ನಡೆಯತಕ್ಕಂಥ, ಸಂವಿಧಾನಿಕವಾದ ಅಥವಾ ನಿಯಮಾವಳಿಗೆ ಸೇರಿದಂಥ ಯಾವ ವಿಚಾರಗಳಿಗೆ ರೂಲಿಂಗ್ ಕೊಡುತ್ತಾರೋ, ಅದೆಲ್ಲವನ್ನೂ ಚರ್ಚೆ ಮಾಡಬಹುದು. ಆದರೆ, ಕೆಲವು ನಿಲುವುಗಳನ್ನು ಪ್ರತಿಪಕ್ಷಗಳು, ಆಳುವ ಪಕ್ಷಗಳು ಏನು ತೆಗೆದುಕೊಳ್ಳುತ್ತವೆ. ಅದರ ಬಗ್ಗೆ ನಾವು ಇಲ್ಲಿ ಹೇಗೆ ಚರ್ಚೆ ಮಾಡುವುದು? If it is a ruling of the Speaker or if it is a subject-matter of the House, then we can. ಅಲ್ಲಿ ಅವರು ಯಾವ ತೀರ್ಮಾನ ತೆಗೆದುಕೊಂಡಿದ್ದಾರೋ ನಮಗೆ ಗೊತ್ತಿಲ್ಲ ಅದು ಪತ್ರಿಕೆಗಳಲ್ಲಿ ಬರುತ್ತದೆ. It is a ruling of the Speaker, How can we discuss? ಡಿಸ್‌ಕಸ್ ಮಾಡೋಣವೆಂದರೆ ಮಾಡೋಣ. I am also prepared for that. ಇವೊತ್ತು ಇರುವುದು. ನಾನು ಮೊದಲೇ ಹೇಳಿದಂತೆ, suspension ಬಗ್ಗೆ ಅವರು ಹೇಳಿದಂತೆ....

ಶ್ರೀ ಎಸ್.ಎಸ್. ಪಾಟೀಲ್ : ತಾವು ಅದಕ್ಕೆ ಅಂಟಿಕೊಳ್ಳಬಾರದು. ಪಾರ್ಲಿಮೆಂಟ್ ನಮಗೆ ಮಾರ್ಗದರ್ಶನವಾಗಿದೆ. ಅಲ್ಲಿನ ಎಷ್ಟೋ ನಡವಳಿಕೆಗಳನ್ನು ನೋಡಿ ನಡೆಯಬೇಕಾಗಿದೆ. ಅಲ್ಲಿ ಹೇಳಿದ್ದನ್ನು ಇಲ್ಲಿ ಕೋಟ್ ಮಾಡುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಇಲ್ಲಿ ನೋಡಿದೆವಲ್ಲಾ ಯಾರು ಯಾರಿಗೆ ಮಾರ್ಗದರ್ಶನವೆಂದು! ನಾವು ಹಿರಿಯರು, ಅನುಭವಿ ಸದಸ್ಯರಿದ್ದೀರಿ.

ಅಧ್ಯಕ್ಷರು : ತಾವು ಪುನಃ ಪಾರ್ಲಿಮೆಂಟ್ ವಿಷಯ ಎತ್ತಬಾರದು. I am requesting you.

ಶ್ರೀ ಶಿವಾನಂದ ಎಸ್ . ಪಾಟೀಲ್ : ನಾನು ಪಾರ್ಲಿಮೆಂಟ್ ವಿಷಯ ಎತ್ತುವುದಿಲ್ಲ. ಇಲ್ಲಿನ ವಿಷಯವನ್ನೇ ಹೇಳುತ್ತೇನೆ. ನೀವು ಮಾನ್ಯ ಸದಸ್ಯರಾದ ರಮೇಶ್ ಕುಡಚಿ ಅವರನ್ನು ಹೊರಕ್ಕೆ ಹಾಕಿಸಿದಿರಿ. ಅವರು ಅವರ ಪಕ್ಷದ ಸದಸ್ಯರೇ! Expelled list ನಲ್ಲಿ ರಮೇಶ್ ಕುಡಚಿಯವರ ಹೆಸರು ಇದೆ. ಅವರು ಕಾಂಗ್ರೆಸ್ (ಐ) ಎಂ.ಎಲ್.ಎ. ನಿಮ್ಮ ಪಕ್ಷದ ಸದಸ್ಯರೇ,

ಅಧ್ಯಕ್ಷರು : ಸ್ವಲ್ಪ ತಡೆಯಿರಿ. ಅದು ರಮೇಶ್ ಪಿ.

ಶ್ರೀ ಶಿವಾನಂದ ಎಸ್ . ಪಾಟೀಲ್ : ಮಾನ್ಯ ಅಧ್ಯಕ್ಷರೆ, ನೀವು ಮೊದಲನೇ ಲಿಸ್ಟ್ ಓದಿಲ್ಲ. ಅದು ಆಗಲೇ ಹೊರಗಡೆ ಪ್ರೆಸ್‌ಗೆ ಹೋಯಿತು ನನ್ನ ಹತ್ತಿರ ಇರುವ ಲಿಸ್ಟ್‌ನಲ್ಲಿ ರಮೇಶ್ ಕುಡಚಿ ಎಂದು ಇದೆ.

ಅಧ್ಯಕ್ಷರು : ಮೊದಲು ಏನು ರೆಕಾರ್ಡ್ ಆಗಿದೆ ಎಂಬುದನ್ನು ನೋಡಿ ಹೇಳುತ್ತೇನೆ. ಈಗ ತಾವು ಮಾತನಾಡಿ ಮುಗಿಸಿ.

ಶ್ರೀ ಅಪ್ಪಾಜಿ.ಎಸ್. ನಾಡಗೌಡ : ಅದು ಹೇಳದೆ ಸ್ಲಿಪ್ ಆಗಿದ್ದರೂ.....

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇವರ ಮಾತಿಗೆ ನೀವು ಯೀಲ್ಡ್ ಆಗಬೇಡಿ.

ಅಧ್ಯಕ್ಷರು : ಇಲ್ಲ, ಆಗುವುದಿಲ್ಲ, ವೆರಿಫೈ ಮಾಡಿ ಅವರು ತಪ್ಪು ದಾಂಗಳದದ್ದರ ಅವರನ್ನು ಶಿಕ್ಷಿಸುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇದು ಹೊಸ Precedent ಆಗುತ್ತದೆ. ಈ ರೀತಿ ಹದಿನೈದು ವರ್ಷಗಳ ಇತಿಹಾಸದಲ್ಲಿ ಎಂದೂ ಆಗಿಲ್ಲ.

ದಯಮಾಡಿ ಅದನ್ನು ವಿತ್‌ಡ್ರಾ ಮಾಡುವ ಮೂಲಕ ಅವರನ್ನು ಕರೆದು... ನಾವು ಕೊನೆಗೆ ಅಷ್ಟೇ ಹೇಳುತ್ತೇವೆ. ನೀವು ಮೊದಲೇ ಇಷ್ಟು ಮಾಡಿದ್ದರೆ ನಾನು ಹೇಳುವ ಪ್ರಸಂಗ ಬರುತ್ತಿರಲಿಲ್ಲ. ಅದಕ್ಕೋಸ್ಕರ ನಾನು ಮಾನ್ಯ ಸಂಸದೀಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. At any time you can withdraw it. ವಿತ್‌ಡ್ರಾ ಮಾಡಿ ಅವರನ್ನು ಒಳಗೆ ಕರೆಸಿಕೊಳ್ಳುವ ಪ್ರಯತ್ನ ಮಾಡಬೇಕು.

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಅನೇಕ ಹಿರಿಯ ಮಾನ್ಯ ಸದಸ್ಯರು ಮಾತನಾಡಿ ಅನೇಕ ಸಲಹೆಗಳನ್ನು ತಮ್ಮ ಮುಂದಿಟ್ಟಿದ್ದಾರೆ. ನನಗಾಗಿರುವ ನೋವು ಏನೆಂದರೆ, ಸರ್ಕಾರಕ್ಕೂ ಪ್ರತಿಪಕ್ಷಕ್ಕೂ, ವಾದ ವಿವಾದ, ಚರ್ಚೆ ಇವೆಲ್ಲವೂ ಆಗಬೇಕು. ಅದು ಸಂಸದೀಯ ವ್ಯವಹಾರಗಳ ನಡವಳಿಕೆಯ ವ್ಯಾಪ್ತಿಯೊಳಗೆ ಆಗುತ್ತದೋ, ಅದನ್ನು ಬಿಟ್ಟುಹೋಗುತ್ತದೋ, ಕೆಲವು ಸಾರಿ emotional issues ಬಂದಾಗ ಬಿಟ್ಟುಹೋಗಬಹುದು. ಆದರೆ, ನಾವು ಉದ್ವೇಗಕ್ಕೆ ಒಳಗಾಗಬಾರದೆಂದು ಶ್ರೀಮಾನ್ ಸಿಂಧ್ಯಾರವರು ಹೇಳಿದ್ದಾರೆ. ಸಂಯಮ ನಾವು ತಾಳಿರುವ ನಿಲುವು. ಸರ್ಕಾರ ಸಂಯಮದಲ್ಲಿರಬೇಕು. ನನಗಿರುವ ಪ್ರಶ್ನೆಯೇನೆಂದರೆ, ಸಂಸದೀಯ ವ್ಯವಹಾರಗಳ ಸಚಿವರು ಎಂದೂ ತಾಳ್ಮೆ ಕಳೆದುಕೊಳ್ಳುವುದಿಲ್ಲ. ಇವೊತ್ತೇಕೆ ಕಳೆದುಕೊಂಡರು ಎಂದು ಮಿತ್ರರಾದ ಶ್ರೀ ಶಿವಾನಂದ ಪಾಟೀಲ್‌ರವರು ಪ್ರಶ್ನಿಸಿದರು. ಇಲ್ಲಿ ಪ್ರಶ್ನೆ ಇರುವುದು ಸರ್ಕಾರ ಹಾಗೂ ಪ್ರತಿಪಕ್ಷಗಳ ಮಧ್ಯೆ ಅಲ್ಲ ದಯಮಾಡಿ ನಾವು ಗೌರವದಿಂದ ನೋಡಿಕೊಳ್ಳಬೇಕಾಗಿರುವುದು ಅಧ್ಯಕ್ಷರ ಕುರ್ಚಿ ಬಗ್ಗೆ ಅಧ್ಯಕ್ಷರ ತೀರ್ಪಿನ ಬಗ್ಗೆ ಅಧ್ಯಕ್ಷರ ನಿಲುವಿನ ಬಗ್ಗೆ ನಾನು ಈಗ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವನಾಗಿದ್ದರೂ ಹಿಂದೆ ಶ್ರೀ ಜಗದೀಶ್ ಶೆಟ್ಟರ್‌ರವರ ಜಾಗದಲ್ಲಿ ಕುಳಿತು ಕೆಲಸ ಮಾಡಿದ್ದೇನೆ ಅಲ್ಲಿಯೂ, ಇಲ್ಲಿಯೂ ಎರಡೂ ಕಡೆಗಳಲ್ಲೂ ಕೆಲಸ ಮಾಡಿದ್ದೇನೆ. ಯಾವತ್ತು ಸದನಕ್ಕೆ ಪೀಠಕ್ಕೆ ಅಗೌರವ ತೋರುವ ಕೆಲಸ ಮಾಡಿಲ್ಲ. ಭಾವುಕರಾಗುವ ಸಂದರ್ಭ ಬಂದಾಗ ನಾವು ನಿಯಮಗಳನ್ನು ಸ್ವಲ್ಪ ಮೀರುತ್ತೇವೆ. ಅಂತಹುದ್ದು ಆಗಿರಬಹುದೇ ಹೊರತು ಸರ್ಕಾರವೇನಾದರೂ ಚರ್ಚೆ ಮಾಡುವುದಕ್ಕೆ ನಾವು ವಿರೋಧಿಸಿದ್ದೇವೆಂದು ಸರ್ಕಾರಕ್ಕೆ ಧಿಕ್ಕಾರ ಹಾಕುವುದು... ಸಂತೋಷ ಹತ್ತು ಧಿಕ್ಕಾರ ಹಾಕಿ, ನೂರು ಧಿಕ್ಕಾರ ಹಾಕಿ, ಸಾವಿರ ಧಿಕ್ಕಾರ ಹಾಕಿ, ನಾವೂ ಹಾಕುತ್ತೇವೆ ಆದರೆ, ನಾವು ಅಧ್ಯಕ್ಷ ಪೀಠದ ಗೌರವ ಕಾಪಾಡುವ ಪ್ರಶ್ನೆ ಬಂದಾಗ ನಾವೆಲ್ಲರೂ ಕೂಡ ಸಂಯಮ ಕಳೆದುಕೊಳ್ಳಬಾರದು. ಅದನ್ನು ಕಳೆದುಕೊಂಡ ದಿವಸ ಪ್ರಜಾತಂತ್ರದ ವ್ಯವಸ್ಥೆಗೆ ಮಣ್ಣು ಹಾಕಿದಂತಾಗುತ್ತದೆ. ಆ ದೃಷ್ಟಿಯಿಂದ ಸೀಮಿತವಾಗಿ ಇವೊತ್ತು ಹೇಳುತ್ತಿದ್ದೇನೆ. ಈ ಘಟನೆ ಆಗಬಾರದಿತ್ತು. ಈ ಸಾಲದ ಶಾಸನಸಭೆಯಲ್ಲಿ ಕಳೆದ ಮೂರೂವರೆ ವರ್ಷಗಳಲ್ಲಿ ಎಂದೂ ನಡೆಯದಿರುವ ಘಟನೆ ಇದಾಗಿದೆ.

1.50 ಪಿ.ಎಂ

ಈ ಘಟನೆಗೆ ಕಾರಣವಾದದ್ದು ನನಗನ್ನಿಸಿದಂತೆ, ಅವರೇನು ತಪ್ಪು ತಿಳಿದುಕೊಂಡಿದ್ದಾರೋ ಗೊತ್ತಿಲ್ಲ, ಸರ್ಕಾರ ಎಂದೂ ಇಲ್ಲಿ ಚರ್ಚೆಗೆ ಪ್ರತಿರೋಧವನ್ನು ಮಾಡಲಿಲ್ಲ. ನಾವು ನಿಮ್ಮ ರೂಲಿಂಗ್‌ನ್ನು ರಕ್ಷಣೆ ಮಾಡಲು ಮುಂದಾದೆವೇ ಹೊರತು ಸರ್ಕಾರ ಚರ್ಚೆಗೆ ಹಿಂದಕ್ಕೆ ಹೋಗಲಿಲ್ಲ ಚರ್ಚೆಗೆ ಹಿಂದೆ ಸರಿಯತಕ್ಕಂಥ ಪ್ರಶ್ನೆಯೇ ಇಲ್ಲ. ಆ ಕಾರಣ ನಾವು ತಾಳ್ಮೆ ಕೆಟ್ಟಿದ್ದೇವೆಂದದಾರೂ ಹೇಳಲಿ ಸರಿಯಾಗಿ ನಡೆದುಕೊಂಡಿದ್ದಾರೆಂದಾದರೂ ಹೇಳಲಿ, ನನ್ನ ಮನಸ್ಸಿನಲ್ಲಿರುವ ಉದ್ವೇಗವನ್ನು ನಾನು ಸದನದ ಮುಂದೆ ಇಟ್ಟಿದ್ದೇನೆ. ಆದರೂ, ಈ ವಿಚಾರದಲ್ಲಿ ನಾವು ಈಗಾಗಲೇ ಒಳಗಡೆ ಕುಳಿತು ಮಾತನಾಡಿದ್ದೇವೆ. ಅವರನ್ನು ಹೊರಗಿಟ್ಟು ಸಭೆ ನಡೆಸಬೇಕು ಎನ್ನತಕ್ಕದ್ದು ಬಿಲ್‌ಕುಲ್ ಸರ್ಕಾರದ

ಮನಸ್ಸಿನಲ್ಲಿ ಇಲ್ಲ. ಇದರಲ್ಲಿ ಯಾವ ಸಂಶಯವೂ ಬೇಡ. ಅನಿವಾರ್ಯವಾಗಿ ಆಗತಕ್ಕಂಥ ಪ್ರಸಂಗವಾಗಿದೆ. ಇನ್ನು ಮುಂದೆ ಈ ರೀತಿ ನಡವಳಿಕೆ ಆಗದಂತೆ ಅವರೂ ನೋಡಿಕೊಳ್ಳಬೇಕು. ನಾವೂ ನೋಡಿಕೊಳ್ಳಬೇಕು. ಆ ರೀತಿ ನಾವಿಬ್ಬರೂ ಸೇರಿ ತಮ್ಮ ಕೈಬಲಪಡಿಸುತ್ತೇವೆ. ಮುಂದೆ ಇಂಥ ಪ್ರಸಂಗ ಆಗದಂತೆ ನೋಡಿಕೊಳ್ಳುತ್ತೇವೆ. ಎಂಬ ಆಶ್ವಾಸನೆಯನ್ನು ಸರ್ಕಾರದ ಪರವಾಗಿ ಕೊಡುತ್ತೇನೆ. ನಿಯಮ 347ರಲ್ಲಿ ಕೆಲವು ಸದಸ್ಯರನ್ನು ಅನಿವಾರ್ಯವಾದ ಕಾರಣದಿಂದ ಹೊರಕ್ಕೆ ಹಾಕಬೇಕಾದ ಪ್ರಸಂಗ ಬಂದಿದ್ದಕ್ಕಾಗಿ ನನಗೇನೋ ವಿಷಾಧವಾಗಿದೆ. ಅವರಿಗೆ ಆಗಿದೆಯೋ ಏನೋ ಗೊತ್ತಿಲ್ಲ. ವ್ಯಕ್ತಿಗತವಾಗಿ ನನಗಂತೂ ವಿಷಾಧವಾಗಿದೆ. ಆ ವಿಷಾಧವನ್ನು ನಾನು ಉಣ್ಣಲು ತಯಾರಾಗಿದ್ದೇನೆ. ಬೇರೆಯವರು ತಯಾರಾಗಿದ್ದರೋ ಇಲ್ಲವೋ ಗೊತ್ತಿಲ್ಲ. ಇಂಥ ಪ್ರಸಂಗ ಆಗಬಾರದು. ಇಂಥದ್ದನ್ನು ತಡೆಯಲು ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡೋಣ. ತಾವು ಕೊಟ್ಟಂಥ ಆದೇಶದಂತೆ, 348ನೇ ವಿಧಿಯಂತೆ ತಮಗೆ ಅಧಿಕಾರವಿದೆ. ತಾವೇ ಕೊಟ್ಟಿರತಕ್ಕ ನಿರ್ಣಯವನ್ನು ನಾವು ಬದಲಾವಣೆ ಮಾಡಬೇಕು. ಆ ರೀತಿ ಬದಲಾವಣೆ ಮಾಡುವುದಕ್ಕೆ ತಮ್ಮ ಕೈಬಲಪಡಿಸುವುದಕ್ಕಾಗಿ ನಾನು ತಮ್ಮ ಮುಂದೆ ಈ ಠರಾವನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳಲ್ಲಿ ಒಂದು ವಿನಂತಿ ಈ ರೀತಿ ಆಗಬಾರದಿತ್ತು, ಆಗಿಹೋಗಿದೆ. ನಾವು ಒಳಗಡೆ ಕುಳಿತುಕೊಂಡು ಮಾತನಾಡಿ ಒಪ್ಪಂದಕ್ಕೆ ಬಂದ ಪ್ರಕಾರ... ಏಕೆಂದರೆ, ಈ ಸದನ ಸರ್ವೋಚ್ಛ ಸರ್ವೋಚ್ಛ, ಎಂದರೆ ನಾವೇನು ಇಲ್ಲಿ ಮಾತನಾಡುತ್ತೇವೆ, ಜನತೆ ಏನು ಕಾಯುತ್ತಿರುತ್ತಾರೆ, ಜನತೆ ನಮ್ಮನ್ನು ಏತಕ್ಕಾಗಿ ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿದ್ದಾರೆ, ಎನ್ನುವುದನ್ನು ಅರ್ಥ ಮಾಡಿಕೊಂಡು ನಾವು ಮಾತನಾಡಿದರೆ ಸಾಕು, ಒಳಗಡೆ ಕುಳಿತುಕೊಂಡು ಮಾತನಾಡಿ ಒಪ್ಪಂದಕ್ಕೆ ಬಂದ ಪ್ರಕಾರ ಅವರು ಮೋಷನ್ ಮೂವ್ ಮಾಡುತ್ತಾರೆ, ಮಾನ್ಯ ಸೋಮಶೇಖರ್‌ರವರು, ಸಿಂಧ್ಯಾರವರು, ಕೃಷ್ಣಮೂರ್ತಿಯವರೆಲ್ಲಾ ಹೇಳಿದ್ದಾರೆ. ಸಭೆಯ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದು ನಮ್ಮ ಕರ್ತವ್ಯ ಅಕಸ್ಮಾತ್ ಆಗಬಾರದಿತ್ತು ಆಗಿಹೋಯಿತು, ಏನೂ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ನಾನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಏನು ಹೇಳಿದ್ದಾರೋ ಅನನ್ನು ಒಪ್ಪಿಕೊಂಡು ನಿಯಮ, 347ರ ಪ್ರಕಾರ ಸದನಕ್ಕೆ ಬಾರದಂತೆ ತಡೆಹಿಡಿದ ಈ ಕೆಳಕಂಡ ಸದಸ್ಯರುಗಳನ್ನು ನಿಯಮ 384 (2) ರ ಮೇರೆಗೆ ಸದರಿ ನಿಷೇಧವನ್ನು ಹಿಂತೆಗೆದುಕೊಂಡಿದ್ದೇನೆಂದು ಹಾಗೂ ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆಯೆಂದು ಹೇಳುತ್ತೇನೆ ಮಾನ್ಯ ಸದಸ್ಯರುಗಳ ಹೆಸರು: ಈ ರೀತಿ ಇದೆ. ಶ್ರೀಯುತರುಗಳಾದ ಜಗದೀಶ್‌ಶೆಟ್ಟರ್, ರಾಜೇಂದ್ರವರ್ಮ ಪಿ.ಹೆಚ್. ಪೂಜಾರ್, ಕಟ್ಟಾಸುಬ್ರಮಣ್ಯ ನಾಯ್ಡು, ರಮೇಶ್ ಪಿ. ನಮ್ಮ ರೆಕಾರ್ಡ್ಸ್ ಪ್ರಕಾರ Not Ramesh Kudachi, ಡಿ.ವಿ. ಸದಾನಂದಗೌಡ, ವಿಶ್ವೇಶ್ವರ ಹೆಗಡೆ ಕಾಗೇರಿ ಎಸ್. ಸುರೇಶ್‌ಕುಮಾರ್, ಎಂ,ಡಿ. ಲಕ್ಷ್ಮೀನಾರಾಯಣ, ಆರಗಜ್ಞಾನೇಂದ್ರ, ಎನ್. ಯೋಗೀಶ್‌ಭಟ್, ಚಿಕ್ಕನಗೌಡರ್, ಪ್ರಭಾಕರ್ ಬಂಗೇರ, ಪಿ.ಸಿ. ಮೋಹನ್, ಎಸ್.ಎ. ರವೀಂದ್ರನಾಥ್, ರೇವೂನಾಯಕ್ ಬೆಳಮುಗಿ, ಕೆ.ಎನ್. ಸುಬ್ಬಾರೆಡ್ಡಿ, ಬಸವರಾಜ್‌ಮಂಡೀಮಠ್, ಹಾಲಾಡಿ ಶ್ರೀನಿವಾಸಶೆಟ್ಟಿ ಪ್ರಕಾಶ್‌ಖಂಡ್ರೆ, ವಿವೇಕಾನಂದವೈದ್ಯ, ಎಸ್. ಅಂಗಾರ, ಚಂದ್ರಕಾಂತ ಬೆಲ್ಲದ್, ಆರ್. ಅಶೋಕ್ ಇವರುಗಳೆಲ್ಲಾ ದಯವಿಟ್ಟು ಒಳಗಡೆ ಬರಬೇಕೆಂದು ನನ್ನ ಮನವಿ.

(ನಿಷೇಧಿತ ಬಿ.ಜೆ.ಪಿ. ಸದಸ್ಯರು ಸದನದೊಳಗೆ ಆಗಮಿಸಿದರು)

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ತಮ್ಮ ತೀರ್ಮಾನವನ್ನು ಸ್ವಾಗತ ಮಾಡುತ್ತಾ ಒಂದು ಸಮಸ್ಯೆ ನನ್ನ ಮನಸ್ಸಿನಲ್ಲಿ ಉಳಿದುಹೋಗಿದೆ. ಇವತ್ತು ತಾವು ಅವರ ಹೆಸರುಗಳನ್ನು ಇಲ್ಲಿ ಹೇಳಿದಿರಿ ಆಗ ಅವರುಗಳು ಸದನದ ಬಾವಿಯಲ್ಲಿದ್ದರು. ತಾವು ಸದನವನ್ನು ಮುಂದೂಡಿ ಒಳಕ್ಕೆ ಹೋದಿರಿ. ಆದರೆ, ಅವರುಗಳನ್ನು ಹೊರಕ್ಕೆ ಹಾಕಿರಲಿಲ್ಲ. ಪುನಹ ಒಳಕ್ಕೆ ಬರಲು ಬಿಡಲಿಲ್ಲ. ಇದರ ಬಗ್ಗೆ ನನ್ನ ಮನಸ್ಸಿನಲ್ಲಿ ಸ್ವಲ್ಪ ಗೊಂದಲ ಇದೆ. ಏಕೆಂದರೆ ಅವರನ್ನು ಹೊರಕ್ಕೆ ಹಾಕದೆಯೇ ಪುನಹ ಒಳಕ್ಕೆ ಬರದಂತೆ ತಡೆಯಲು ಸಾಧ್ಯವಾಗುತ್ತದೆಯೇ? ಏಕೆಂದರೆ, There should not be a new precedent. ಸದಸ್ಯರುಗಳನ್ನು ಹೊರಕ್ಕೆ ಹಾಕದೆಯೇ ಅವರನ್ನು ಹೊರಗಿನಿಂದ ಒಳಕ್ಕೆ ಬರಲು ಬಿಡದೇ ಇರತಕ್ಕ ಸಂದರ್ಭದಲ್ಲಿ......

ಅಧ್ಯಕ್ಷರು : ಹೊರಕ್ಕೆ ಹಾಕುವ ಆಜ್ಞೆಯನ್ನು ಮಾಡಿದ್ದೇನಲ್ಲಾ? When once the order is issued...

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ತಾವು ಸದನವನ್ನು ಮುಂದೂಡಿ ಹೋದಿರಿ. ಆಗ ಅವರುಗಳು ಸದನದ ಬಾವಿಯಲ್ಲಿದ್ದರು. ಅವರು ಬಾವಿಯಲ್ಲಿದ್ದಂಥ ತಾವು ಸದನವನ್ನು ಮುಂದೂಡಿ ಹೋದಾಗ...

ಅಧ್ಯಕ್ಷರು : ಮಾನ್ಯ ಹೆಗಡೆಯವರೆ, ಇಲ್ಲಿ ಕೇಳಿ. ಇಲ್ಲಿ ನಾನು ಆಜ್ಞೆಯನ್ನು ಜಾರಿಗೆ ಕೊಟ್ಟೆ. ಒಂದು ಸಲ ಅವರು ಹೊರಗಡೆ ಹೋದಮೇಲೆ ಪುನಹ ಅವರು ಬರುವಂತಿಲ್ಲವಲ್ಲಾ? ಬರುವಂತೆ ಇದ್ದರೆ ಬಂದಿರುತ್ತಿದ್ದರಲ್ಲಾ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಅಲ್ಲಿ ಬರಲಿಕ್ಕೆ ಬಿಡಲಿಲ್ಲ.

ಅಧ್ಯಕ್ಷರು : ಇಲ್ಲ, ಇಲ್ಲ. ಯಾರು ಹೇಳಿದ್ದು?

ಶ್ರೀ ಕೆ.ಜಯಪ್ರಕಾಶ್ ಹೆಗಡೆ : ಬಾಗಿಲಿನಲ್ಲಿ ಆದೇಶವೆಂದು ಹೇಳಿದರು.

ಅಧ್ಯಕ್ಷರು : ಹೆಗಡೆಯವರೆ ಬೇಡ. Please ಬೇಡ. ಮಾನ್ಯ ಸದಸ್ಯರುಗಳೇ ಬನ್ನಿ ಬನ್ನಿ.

(ಬಿ.ಜೆ.ಪಿ. ಸದಸ್ಯರುಗಳು ಸದನದ ಒಳಕ್ಕೆ ಆಗಮಿಸಿ ಅವರವರ ಸ್ಥಾನಗಳಲ್ಲಿ ಆಸೀನರಾದರು)

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಒಂದು ಕ್ಲಾರಿಫಿಕೇಷನ್ ಮುಂದೆ ಈ ರೀತಿ ನಡೆಯಬಾರದು. ಆದ್ದರಿಂದ ತಾವೇನು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ.

ಅಧ್ಯಕ್ಷರು : ಅವರಿಗೆ ಹೊರಗಡೆ ಹಾಕಲಿಲ್ಲವೆಂದರೆ ಒಳಕ್ಕೆ ಬರಬಹುದಿತ್ತಲ್ಲಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ರೂಲ್ 347ರ ಪ್ರಕಾರ ತಮಗೆ ಆ ಅಧಿಕಾರ ಇತ್ತು ಅದನ್ನು ಚಲಾಯಿಸಿದ್ದೀರಿ. ಮತ್ತೆ ತಮಗೆ ಅದನ್ನು ವಿಥ್‌ಡ್ರಾ ಮಾಡಲು ಅಧಿಕಾರವಿದೆ, ಅದರಂತೆ ವಿಥ್‌ಡ್ರಾ ಮಾಡಿಕೊಂಡಿದ್ದೀರಿ. ಆದ್ದರಿಂದ ಅವರ ಪ್ರಶ್ನೆಯೇ ಬರುವುದಿಲ್ಲ. ಆ ಆಜ್ಞೆ ಮಾಡಿದಮೇಲೆಯೇ ತಾವು ಹೌಸ್ ಆಡ್‌ಜರ್ನ್ ಮಾಡಿದಿರಿ. ಆದ್ದರಿಂದ ನ್ಯಾಚುರಲಿ ಅವರಾಗಿಯೇ ಒಳಕ್ಕೆ ಬಂದಿಲ್ಲ.

Mr. Speaker : Also rule No. 363, residuary powers

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಮ್ಮ ಆಜ್ಞೆಯ ಪ್ರಕಾರ ಅವರು ಈಗ ಒಳಗಡೆ ಬಂದಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ತಾವು ಮೊದಲೇ ಹೊರಕ್ಕೆ ಹಾಕಿಸಿಬಿಟ್ಟಿದ್ದರೆ ಈ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಅವರು ಬಾವಿಯಲ್ಲಿ ಇದ್ದವರನ್ನು ಒಳಗಡೆ ಬರದಂತೆ ನಿಷೇಧ ಮಾಡಬಹುದೇ?

Mr. spekar : Rule 363 as well as rule 348 ಪ್ರಕಾರ ನಾನು ಆಜ್ಞೆ ಮಾಡಿದ್ದೇನೆ. ದಯವಿಟ್ಟು ಅದನ್ನೇಕೆ ಪುನಃ ಮಾಡುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್ : ಚರ್ಚೆ ಬೇಕಾಗಿಲ್ಲ ಆದರೆ, ಅದು ಪ್ರಿಸಿಡೆಂಟ್ ಆಗಬಾರದು.

ಶ್ರೀ ಡಿ.ಬಿ. ಚಂದ್ರೇಗೌಡ : ಸಂಪ್ರದಾಯಗಳು ಆಕಾಶದಿಂದ ಬೀಳುವುದಿಲ್ಲ. ಅನುಭವದಿಂದ ಬರುತ್ತವೆ. Conventions ಇವೆಲ್ಲಾ They don't fall from heaven.

ಅಧ್ಯಕ್ಷರು : ರೂಲ್ 363ರ ಪ್ರಕಾರ ನನಗೇ ಅಧಿಕಾರವಿದೆ. 348ರ ಪ್ರಕಾರ ಅಲ್ಲ, According to rule 363 I have got every power-residuary power.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ನಮಗೆ ಮತ್ತು ಕೃಷ್ಣಮೂರ್ತಿಯವರಿಗೆ...........

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ ಮಾನ್ಯ ಜಗದೀಶ್‌ಶೆಟ್ಟರ್‌ರವರೆ, ಹೊರಗಡೆ ಏನಾಗಿದೆ ಆ ವಿಷಯವನ್ನು ಪುನಹ ನಾನು ನಿಮಗೆ ಹೇಳಬೇಕಾಗಿಲ್ಲ. ಮಾನ್ಯ ಸಂಸದೀಯ ವ್ಯವಹಾರದ ಸಚಿವರು ಆ ನಿರ್ಣಯವನ್ನು ವಾಪಸ್ ಪಡೆದಿರುವುದರಿಂದ ತಮ್ಮನ್ನೆಲ್ಲಾ ಒಳಗಡೆ ಕರೆಸಿದ್ದೇನೆ. ಎರಡನೆಯದಕ್ಕೆ ಇನ್ನೊಂದು ವಿವರಣೆಯನ್ನು ಕೊಡಬೇಕಾಗುತ್ತದೆ. ಅದೇನೆಂದರೆ, ಮೊದಲು ಅಡ್‌ಜರ್ನ್‌ಮೆಂಟ್ ಮೋಷನ್‌ನ್ನು ಮೂವ್ ಮಾಡಿದ್ದಾರೆಂದು... ನಾನು ಹೇಳಬೇಕಾಗಿದ್ದರೆ ನನ್ನ ಮುಂದೆ ಆ ಕಡತ ಇರಲಿಲ್ಲ. ಆ ಕಡತವನ್ನು ತಂದುಕೊಟ್ಟಾದಮೇಲೆ ಅಡ್‌ಜರ್ನ್‌ಮೆಂಟ್ ಮೋಷನ್‌ಅನ್ನು ಮೂವ್ ಮಾಡಿ, ನಿನ್ನೆ ಡಿಸ್‌ಕಷನ್ ಆಗಿದ್ದರಿಂದ ರಿಜೆಕ್ಟ್ ಮಾಡಿದ್ದಷ್ಟೇ ಹೊರತು there was no bad intention from my side. ಎಂದು ನಾನು ನಿಮಗೆ ಹೇಳಬೇಕಾಗಿತ್ತು ಕಡತವನ್ನು ಆಮೇಲೆ ನಮ್ಮ ಕಾರ್ಯದರ್ಶಿಯವರು ತಂದುಕೊಟ್ಟಿದ್ದರಿಂದ ಅನಂತರ ನಾನು ಅದನ್ನು ನೋಡಿದೆ. ಈ ರೀತಿ ಆಗಬಾರದಿತ್ತು. ಆಗಿಹೋಗಿದೆ, ಇದನ್ನು ಎಲ್ಲರೂ ಈ ಕಡೆಯ, ಆ ಕಡೆಯ ಎಲ್ಲಾ ಪಕ್ಷದ ಸದಸ್ಯರುಗಳು ಇದನ್ನು ಮರೆತು ನಮ್ಮ ಕೆಲಸವನ್ನು ಮುಂದುವರೆಸೋಣ. ನೀವು ಸಬ್ಜೆಕ್ಟ್ ಮ್ಯಾಟರ್‌ನ್ನು ಪಾರಂಭ ಮಾಡಿರಿ.

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ತಮ್ಮ ಈ ಪೀಠವೇನಿದೆ ಅದಕ್ಕೆ ನಮ್ಮೆಲ್ಲರ ಗೌರವವಿದೆ. ಇವತ್ತೇನು ಘಟನೆಗಳಾಗಿವೆ ಅದರ ಬಗ್ಗೆ ಹೆಚ್ಚು ಹಿಂದಕ್ಕೆ ಹೋಗಲಾರದೆ ಅದನ್ನು ಮರೆತು ಮುಂದೆ ತಾವು ಏನೇನು ನಡೆಯಿತು ಎಂದು ಹೇಳಿದ್ದೀರಿ.. ಆದ್ದರಿಂದ ಅದನ್ನು ಹೆಚ್ಚು ಬೆಳಸಲಾರದೆ, ಇವತ್ತು ತಾವೇನು ಮಾಡಿದ್ದೀರಿ.

ಅಧ್ಯಕ್ಷರು : ಎಲ್ಲರೂ ಮರೆಯೋಣ. ನಾನೂ ಮರೆಯುತ್ತೇನೆ.

8. ನಿಯಮ 69ರ ಮೇರೆಗೆ ಚರ್ಚೆ

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಎಂ.ರಾಂಪುರ ಗ್ರಾಮದಲ್ಲಿ ಒಂದೇ ಕುಟುಂಬದ ಆರು ಮಂದಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ

ಶ್ರೀ ಜಗದೀಶ್‌ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ; ಇಲ್ಲಿ ಬಹಳ ಮುಖ್ಯವಾಗಿ ನಾವು ಇವತ್ತು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ತರಲು ಮುಖ್ಯವಾದ ಕಾರಣವೇನೆಂದರೆ, ಇವತ್ತಿನ ಬೆಳಗಿನ ಪತ್ರಿಕೆಗಳಲ್ಲಿ ಅಂದರೆ ಪ್ರಜಾವಾಣಿ, ಕನ್ನಡಪ್ರಭ, ವಿಜಯಕರ್ನಾಟಕ ಪತ್ರಿಕೆಯಲ್ಲಿ ಇರಬಹುದು, ಉದಯವಾಣಿಯಲ್ಲಿ ನಿನ್ನೆಯ ಘಟನೆಯ ಬಗ್ಗೆ ಸಂಪಾದಕೀಯದಲ್ಲಿ ಲೇಖನ ಬಂದಿದೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿರಬಹುದು. ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ

ಒಂದೇ ಕುಟುಂಬದ ಆರು ಜನರ ಆತ್ಮಹತ್ಯೆಯ ಬಗ್ಗೆ ಸುದ್ದಿ ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಬಹುಶಃ ನಮ್ಮ ರಾಜ್ಯದ ಇತಿಹಾಸದಲ್ಲಿ ಈ ರೀತಿಯ ಘೋರವಾದ ದುರಂತ ಸಂಭವಿಸಿರಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಇದು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಎಂ.ರಾಂಪುರ ಗ್ರಾಮದಲ್ಲಿ ನಡೆದದ್ದು. ಹೂಜಿ ಕುಟುಂಬಕ್ಕೆ ಸೇರಿದ ಒಂದೇ ಕುಟುಂಬದ ಆರು ಜನ ಸದಸ್ಯರು ಕ್ರಿಮಿನಾಶಕ ವಿಷಯವನ್ನು ತೆಗೆದುಕೊಂಡು ಮೃತಪಟ್ಟಿರುವ ಸುದ್ದಿಯನ್ನು ನಾವು ನೋಡುತ್ತಿದ್ದೇವೆ. ಇವತ್ತು ಬೇರೆ ಬೇರೆ ಕಡೆಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ. ಆದರೆ ಆ ಪ್ರಕರಣಗಳ ಹಿನ್ನೆಲೆಯನ್ನು ನಾವು ನೋಡಬೇಕಾಗುತ್ತದೆ. ಕೆಲವೊಂದು ವೈಯಕ್ತಿಕ ದ್ವೇಷಗಳ ಸಲುವಾಗಿ ಇರಬಹುದು. ಕೆಲವೊಂದು ಮಾನಸಿಕ ಸ್ಥಿಮಿತವನ್ನು ಕಳೆದುಕೊಂಡು ಇರಬಹುದು. ಬೇರೆ ಬೇರೆ ಕಾರಣಗಳಿಗೂ ಕೆಲವರು ಆತ್ಮಹತ್ಯೆ ಮಾಡಿಕೊಂಡಿರಬಹುದು. ಕೆಲವು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಫೇಲಾಗಿದ್ದಕ್ಕೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಆದರೆ ಇವತ್ತು ಈ ಘಟನೆ ಬಗ್ಗೆ ಪತ್ರಿಕೆಗಳಲ್ಲಿ ಮೇಲ್ನೋಟದ ವರದಿಗಳು ಬಂದಿವೆ. ಈ ಒಂದು ರೈತ ಕುಟುಂಬದ ಆರೂ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಅಲ್ಲಿ ಇಲ್ಲಿ ಹೊಲದಲ್ಲಿ ಒಂದಿಷ್ಟು ಕೂಲಿ-ನಾಲಿ ಕೆಲಸ ಮಾಡಿಕೊಂಡು ಬದುಕು ಸಾಗಿಸುತ್ತಿದ್ದಂತಹ ಅತ್ಯಂತ ಬಡ ಕುಟುಂಬದ ಜನರಾಗಿದ್ದರು. ಈ ಆರೂ ಜನ ಕುಟುಂಬದ ಸದಸ್ಯರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಏಕೆ ನಿರ್ಮಾಣವಾಯಿತು ಎನ್ನುವ ಬಗ್ಗೆ ನಾವು ಇವತ್ತು ಚಿಂತನೆಯನ್ನು ಮಾಡಬೇಕಾಗುತ್ತದೆ. ಇವತ್ತು ಸುಪ್ರೀಂ ಕೋರ್ಟ್ ಸಹಿತ ತನ್ನ ಒಂದು ತೀರ್ಪಿನಲ್ಲಿ ದೇಶದಲ್ಲಿನ ಯಾವುದೇ ರಾಜ್ಯದಲ್ಲಿ ಭಾರತದ ಯಾರೇ ಒಬ್ಬ ನಾಗರೀಕ ಉಪವಾಸ ಅಥವಾ ಹಸಿವಿನಿಂದ ಸಾಯಬಾರದು ಎಂದು ಹೇಳಿದೆ. ಅದರ ಬಗ್ಗೆ ಈಗಾಗಲೇ ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಎಲ್ಲಾ ಸರ್ಕಾರಗಳಿಗೆ ಸುಪ್ರಿಂ ಕೋರ್ಟ್ ಈ ದಿಸೆಯಲ್ಲಿ ಡೈರೆಕ್ಷನ್ ಅನ್ನೂ ಸಹ ಕೊಟ್ಟಿದ್ದಾರೆ. ಉಪವಾಸದಿಂದ ಸಾಯುವಂತಹ ಪರಿಸ್ಥಿತಿ ನಿರ್ಮಾಣವಾಗಬಾರದು. ಅವರಿಗೆ ಆಹಾರವನ್ನು ಕೊಡುವಂತಾದ್ದು, ಅವರು ದಿನನಿತ್ಯ ಜೀವನ ನಡೆಸುವುದಕ್ಕೆ ವ್ಯವಸ್ಥೆ ಮಾಡುವಂತಾದ್ದು ಸರ್ಕಾರದ ಆದ್ಯ ಕರ್ತವ್ಯಗಳಲ್ಲಿ ಒಂದಾಗಿದೆ ಮತ್ತು ಅದು ನಮ್ಮ ಸಂವಿಧಾನದ ಒಂದು ಹಕ್ಕೂ ಸಹ ಆಗಿದೆ. ಆದರೆ ಇಂತಹ ಪರಿಸ್ಥಿತಿ ಇದ್ದಂತಹ ಸಂದರ್ಭದಲ್ಲೂ ಸಹಿತ ಇವತ್ತು ಹಸಿವಿನಿಂದ ರೈತ ಕುಟುಂಬದ ಆರೂ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದರೆ, ಬಹುಶಃ ಇದೊಂದು ದೊಡ್ಡದಾದಂತಹ ದುರಂತವೆಂದು ನಾನು ಹೇಳಬೇಕಾಗುತ್ತದೆ. ಇದಕ್ಕೆ ಉದಾಹರಣೆ ಈ ಪತ್ರಿಕಾ ವರದಿಯಲ್ಲಿದೆ. ತೀವ್ರ ಬಡತನ, ಹಸಿವು, ಅನಾರೋಗ್ಯ ಮತ್ತು ಸಾಲದ ಬಾಧೆ ತಾಳಲಾರದೆ ಈ ಆರೂ ಜನ ರೈತ ಕುಟುಂಬದ ಸದಸ್ಯರು ಆತ್ಮಹತ್ಯೆ ಮಾಡಿಕೊಂಡರು ಎನ್ನುವ ಮಾತು ಇದರಲ್ಲಿದೆ. ಘಟನೆ ನಡೆದ ಸ್ಥಳಕ್ಕೆ ಅಲ್ಲಿನ ಪೊಲೀಸ್ ಅಧಿಕಾರಿಗಳು ಹೋಗಿದ್ದಾರೆ. ಅಲ್ಲಿ ಅವರು ವಿಚಾರಣೆ ಮಾಡಿದ್ದಾರೆ. ವಿಚಾರಣೆ ಮಾಡಿದಾಗ ಕಳೆದ ಕೆಲವು ತಿಂಗಳಿನಿಂದ ಗ್ರಾಮದಲ್ಲಿ ಕೂಲಿಯೂ ಸಿಗದೇ ಪರದಾಡುತ್ತಿದ್ದುದು ತಿಳಿದು ಬಂದಿದೆ. ಮಾನ್ಯ ಅಧ್ಯಕ್ಷರೇ, ಬರಗಾಲದ ಪರಿಸ್ಥಿತಿ ಕುರಿತು ಸಾಕಷ್ಟು ವಿಚಾರಗಳ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಯಾರು ಕೂಲಿಕಾರರು ಇದ್ದಾರೋ, ಅವರಿಗೆ ಕೆಲಸ ಸಿಗಬೇಕು ಎನ್ನುವ ಉದ್ದೇಶದಿಂದ ಕೂಲಿಗಾಗಿ ಕಾಳು ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಇವತ್ತು ಈ ಕುಟುಂಬಕ್ಕೆ ಅವರು ನಾವು ಕೆಲಸ ಮಾಡುತ್ತೇವೆ ಎಂದರೂ ಕೂಡ ಅವರ ಕೈಗೆ ಕೆಲಸ ಕೊಡುವಂತಹ ಪರಿಸ್ಥಿತಿ ಅಲ್ಲಿ ಇಲ್ಲ. ಕಳೆದ ಹಲವಾರು ದಿನಗಳಿಂದ ಅವರು ನಮಗೆ ಕೆಲಸ ಕೊಡಿ ಎಂದು ಕೇಳಿದ್ದರೂ ಅವರಿಗೆ

ಕೆಲಸ ಕೊಡಲಾರದಂತಹ ಪರಿಸ್ಥಿತ ಅಲ್ಲಿ ಇದ್ದುದ್ದು ನಮಗೆ ತಿಳಿದು ಬಂದಿದೆ. ಆ ಬಗ್ಗೆ ಪತ್ರಿಕೆಯಲ್ಲಿ ಬರೆದಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಗ್ರಾಮದಲ್ಲಿ ಕೂಲಿಯೂ ಸಿಗದೇ ಅವರು ಪರದಾಡುತ್ತಿದ್ದರು. ಅಂದರೆ ಇದರ ಅರ್ಥ ಏನಾಗುತ್ತದೆ? ಎಲ್ಲಿ ಬರಗಾಲ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿತ್ತೋ ಯಾವ ಗ್ರಾಮಗಳಲ್ಲಿ ಅದರ ಅವಶ್ಯಕತೆ ಇತ್ತೋ, ಅಲ್ಲಿ ಅವುಗಳನ್ನು ಕೈಗೊಂಡಿಲ್ಲ ಎಂಬುದು ಇದರಿಂದ ತಿಳಿದು ಬರುತ್ತದೆ. ಅವರಿಗೆ ಒಂದಿಷ್ಟು ಅಕ್ಕಿ ಒಂದಿಷ್ಟು ಕೂಲಿಯ ಹಣ ಅವರ ಕೈಗೆ ಸಿಕ್ಕಿದ್ದರೆ ಬಹುಶಃ ಆ ಕುಟುಂಬ ಈ ರೀತಿ ದುರಂತಕ್ಕೆ ಈಡಾಗುತ್ತಿರಲಿಲ್ಲ. ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮುಂದುವರೆದು ಪತ್ರಿಕಾ ವರದಿಯಲ್ಲಿ, ಇಲ್ಲಿ ಅವರು ಎರಡು ತಿಂಗಳಿನಿಂದ ಅರೆ ಹೊಟ್ಟೆಯಲ್ಲಿ ಬದುಕುತ್ತಿದ್ದರು. ಕಳೆದ ಎರಡು ದಿನಗಳಿಂದ ಪೂರ್ತಿ ಉಪವಾಸ ಇದ್ದರು ಎಂದು ಕುಟುಂಬದ ಆಪ್ತರಾಗಿದ್ದ ತಮ್ಮಣ್ಣ ನಡುವಿನಮನಿ ಮತ್ತು ಚನ್ನಬಸಪ್ಪ ಪೂಜಾರ್ ತಿಳಿಸಿದರು. ಅದೇ ರೀತಿಯಲ್ಲಿ ಅಲ್ಲಿದ್ದಂತಹ ಪೊಲೀಸ್ ಅಧಿಕಾರಿ ಸಹಿತ ಹೇಳಿದ್ದು, ಪತ್ರಿಕೆಗಳಲ್ಲಿ ವರದಿಯಾಗಿದೆ. ಬಡತನ, ಸಾಲ ಬಾಧೆಯಿಂದ ಜಿಗುಪ್ಸೆಗೊಂಡು, ಬದುಕಿದ್ದರೂ ತಂದೆಗೆ ಭಾರ, ಸಾಯುವುದೇ ಲೇಸು ಎಂಬ ತೀರ್ಮಾನಕ್ಕೆ ಬಂದು ಎಲ್ಲರೂ ಒಟ್ಟಿಗೇ ವಿಷ ಸೇವಿಸಿದ್ದಾರೆಂದು ಶಂಕಿಸಲಾಗಿದೆ. ಸ್ಥಳದಲ್ಲಿದ್ದ ಡಿಎಸ್‌ಪಿ ಸುಭಾಷ್ ಗುಡಿಮನಿ ಸುದ್ದಿಗಾರರಿಗೆ ತಿಳಿಸಿದರು. ಅಂದರೆ ಪೊಲೀಸ್ ಅಧಿಕಾರಿಗಳು ಸುದ್ಧಿಗಾರರ ಜೊತೆಯಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಈ ಹಿನ್ನಲೆಯಲ್ಲಿ ಇವರು ಆತ್ಮಹತ್ಯೆ ಮಾಡಿಕೊಂಡರು ಎಂದು ಹೇಳಿದ್ದಾರೆ. ಇದು ಒಂದು ಪತ್ರಿಕೆಯಲ್ಲಿ ಬಂದಿದೆ. ಹಾಗೆಯೇ ಮತ್ತೊಂದು ಪತ್ರಿಕೆಯಲ್ಲಿ ಬಂದಿರುವಂತಾದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಇಲ್ಲಿ ಕಳೆದ ಒಂದು ವಾರದಿಂದ ಮನೆಯಲ್ಲಿ ಒಲೆಯನ್ನೇ ಹೊತ್ತಿಸಿರಲಿಲ್ಲ. ಒಲೆಯನ್ನೇ ಹೊತ್ತಿಸಿಲ್ಲದೇ ಅವರು ಯಾವ ರೀತಿಯಾಗಿ ಬದುಕಿರಬಹುದು? ಒಂದೇ ಒಂದು ಸೇರು ಕಾಳೂ ಇಲ್ಲ, ಅದಕ್ಕಾಗಿ ಅವರು ಹಸಿವಿನಿಂದ ಆತ್ಮಹತ್ಯೆ ಮಾಡಿಕೊಂಡರು ಎಂದು ಅಲ್ಲಿದ್ದಂತಹವರು ಬಿಕ್ಕಿಬಿಕ್ಕಿ ಅತ್ತರು. ಅಂದರೆ ಅವರು ಯಾವ ಧಾರುಣ ಪರಿಸ್ಥಿತಿಯಲ್ಲಿ ಅವರು ಇದ್ದರು ಎಂಬುದು ಅರ್ಥವಾಗುತ್ತದೆ. ನಾವು ಬರಗಾಲದ ಪರಿಸ್ಥಿತಿ ಬಗ್ಗೆ ಇಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ನಾನೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಮಾನ್ಯ ಮಂತ್ರಿಗಳಾದ ಶ್ರೀ ಅಲ್ಲಂ ವೀರಭದ್ರಪ್ಪನವರ ಕ್ಷೇತ್ರದಲ್ಲಿ ಇದೇ ರೀತಿಯಾದಂತಹ ಹಸಿವಿನಿಂದ ಸಾವು ಉಂಟಾಗಿತ್ತು ಆತ್ಮಹತ್ಯೆ ಮಾಡಿಕೊಳ್ಳಲಾಗಿತ್ತು. ಆ ಘಟನೆ ಬಗ್ಗೆ ಹೇಳಿದಂತಹ ಸಂದರ್ಭದಲ್ಲಿ ಅವರು ಆ ರೀತಿಯ ಘಟನೆ ನಮ್ಮಲ್ಲಿ ಸಂಭವಿಸಿಲ್ಲ ಎನ್ನುವಂತಹ ಮಾತನ್ನು ಹೆಳಿದರು. ಬಹುಶಃ ನಾಳೆ ನಮ್ಮ ಮಂತ್ರಿಗಳಾದ ಶ್ರೀ ಮಲ್ಲಿಕಾರ್ಜುನ ನಾಗಪ್ಪನವರು ಉತ್ತರ ಕೊಡುವಾಗ ಹಾಗೆಯೇ ಹೇಳಬಹುದು. ಅವರ ಮನೆಯಲ್ಲಿ ಕೆಲವರಿಗೆ ಏನೋ ಒಂದು ರೀತಿಯ ರೋಗ ಇತ್ತು. ಅದರಿಂದ ಅವರು ಬೇಜಾರುಗೊಂಡು ಆತ್ಮಹತ್ಯೆ ಮಾಡಿಕೊಂಡು ಸತ್ತಿರಬಹುದು ಎನ್ನುವಂತಹ ಉತ್ತರ ಕೂಡ ಸರ್ಕಾರದಿಂದ ಬರಬಹುದು. ಆದರೆ ಇಂತಹ ಘಟನೆ ನಡೆದ ಸ್ಥಳಕ್ಕೆ ಸ್ವತಃ ಮಂತ್ರಿಗಳೇ ಹೋಗಬೇಕಾಗುತ್ತದೆ. ಅಲ್ಲಿ ಹೋಗಿ ನೋಡಬೇಕಾಗುತ್ತದೆ. ಅಲ್ಲಿ ಸ್ಥಳೀಯ ಗ್ರಾಮಸ್ಥರುಗಳು ಇದ್ದಾರೆ ಮೃತ ಕುಟುಂಬದ ತಂದೆಯವರು ಇನ್ನೂ ಅಲ್ಲೇ ಇದ್ದಾರೆ. ಅವರ ತಂದೆಯವರ ಸ್ಟೇಟ್‌ಮೆಂಟ್ ಅನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ. ಅವರ ಸ್ಟೇಟ್‌ಮೆಂಟ್ ಅನ್ನು ನೀವು ತೆಗೆದುಕೊಳ್ಳದೇ, ಇಲ್ಲಿ ವೇಗ್ ಆಗಿ ಏನಾದರೊಂದನ್ನು ನೀವು ಹೇಳಿದರೆ ಅದರಿಂದ ತಪ್ಪು ಸೂಚನೆ ಅಥವಾ ತಪ್ಪು ಕಲ್ಪನೆ ಇಡೀ ರಾಜ್ಯಕ್ಕೆ ಹೋಗುತ್ತದೆ. ಆದ್ದರಿಂದ ಅವರು ಆ ರೀತಿ ಮಾಡಬಾರದು ಸರ್ಕಾರ ಕೇವಲ ಅಧಿಕಾರಿಗಳ ರಿಪೋರ್ಟ್ ಮೇಲೆ ಉತ್ತರ

ಹೇಳುವುದಾದರೆ, ಅಧಿಕಾರಿಗಳು ಆ ರೀತಿಯೇ ರಿಪೋರ್ಟ್ ಕೊಡುತ್ತಾರೆ. ಆದ್ದರಿಂದಾಗಿ ನಾನು ಹೇಳುವಂತಾದ್ದು ಏನೆಂದರೆ, ಮಾನ್ಯ ಮಂತ್ರಿಗಳು ತಕ್ಷಣವೇ ಅಲ್ಲಿಗೆ ವಿಸಿಟ್ ಮಾಡಬೇಕು. ಅಧಿಕಾರಿಗಳು ಅಲ್ಲಿ ಡಿ.ಸಿ.ಯವರು ಹೋಗಿ ಏನೊಂದು ರಿಪೋರ್ಟ್ ಕೊಟ್ಟಿದ್ದಾರೋ ಅದನ್ನಾದರೂ ಇವತ್ತು ಹೇಳುವಂತಾದ್ದು ಆಗಬೇಕಾಗುತ್ತದೆ ಅಂದಾಗ ಮಾತ್ರ ಅಲ್ಲಿ ನಿಜವಾದಂತಹ ಪರಿಸ್ಥಿತಿ ಏನಿದೆ? ಅದರ ಹಿನ್ನೆಲೆ ಏನಿದೆ? ಎನ್ನುವಂತಾದ್ದು ಇವತ್ತು ಸರ್ಕಾರಕ್ಕೆ ಗೊತ್ತಾಗಲಿಕ್ಕೆ ಸಾಧ್ಯವಿದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಸರ್ಕಾರ ಇವತ್ತು ರೈತರ ಆತ್ಮಸ್ಥೈರ್ಯವನ್ನು ಹೆಚ್ಚಿಸುವುದಕ್ಕೆ ಏನು ಮಾಡುತ್ತಿದೆ ಎನ್ನುವಂತಾದ್ದನ್ನು ನಾವು ಕೇಳಬೇಕಾಗುತ್ತದೆ. ಈ ರೀತಿಯಾಗಿ ಇಡೀ ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಸುಮಾರು 300ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಾವು ಕಳೆದ ಎರಡು ವರ್ಷಗಳಿಂದ ಸದನದಲ್ಲಿ ಒತ್ತಾಯ ಮಾಡುತ್ತಿದ್ದೇವೆ. ಇವತ್ತು ಅವರಿಗೆ ಆತ್ಮಸ್ಥೈರ್ಯ ಕೊಡುವಂತಹ ಹಲವಾರು ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ ಎಂದು ನಾವು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ. ಆದರೆ ಸರ್ಕಾರ ಅದರ ಬಗ್ಗೆ ಸಂಪೂರ್ಣವಾದಂತಹ ನಿಷ್ಕಾಳಜಿ ವಹಿಸುತ್ತಿದೆ. ಇವತ್ತು ರೈತರ ವಿರೋಧಿಯಾದಂತಹ ಧೋರಣೆಯನ್ನು ಈ ಸರ್ಕಾರ ಅನುಸರಿಸುತ್ತಿದೆ. ಈ ಸರ್ಕಾರ ರೈತರ ಕಲ್ಯಾಣಕ್ಕಾಗಿ ಯಾವುದೇ ಒಂದು ಕೆಲಸವನ್ನೂ ಸಹ ಮಾಡುತ್ತಿಲ್ಲ, ಇದು ರೈತರ ವಿರೋಧಿ ಸರ್ಕಾರ ಎನ್ನುವಂತಹ ಮಾತುಗಳನ್ನು ನಾವು ಇವತ್ತು ಹೇಳಬೇಕಾಗುತ್ತದೆ. ಬಹುಶಃ ನಮ್ಮ ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಮ್ಮ ರೈತರ ಬಾಂಧವರು ಜೀವನದಲ್ಲಿ ಜಿಗುಪ್ಸೆಗೊಂಡು, ಸಾಲದ ಬಾಧೆ ತಾಳಲಾರದೇ ಆತ್ಮಹತ್ಯೆ ಮಾಡಿಕೊಂಡಿರುವ 300 ಕ್ಕೂ ಹೆಚ್ಚು ಉದಾಹರಣೆಗಳನ್ನು ನಾವು ಇವತ್ತು ನೋಡಬಹುದಾಗಿದೆ. ನಿನ್ನೆ ಅಥವಾ ಮೊನ್ನೆ ನಮ್ಮ ಶಿಗ್ಗಾಂವ ತಾಲ್ಲೂಕಿನ ತಿಮ್ಮಾಪುರದಲ್ಲಿ ಒಂದು ಘಟನೆ ನಡೆದಿದೆ. ಅಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮಂಡ್ಯ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಹಿರೇಕೆರೂರು ತಾಲ್ಲೂಕಿನಲ್ಲಿ ಒಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇತ್ತೀಚಿನ ಒಂದು ವಾರದಲ್ಲಿ ನಡೆದಂತಹ ಘಟನೆಗಳನ್ನು ಮಾತ್ರ ನಾನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಪಟ್ಟಿ ಇವತ್ತು ಸರ್ಕಾರದ ಬಳಿ ಇಲ್ಲ. ಅವರ ಒಂದು ಲಿಸ್ಟ್ ಇವತ್ತು ನನ್ನ ಕಡೆ ಇದೆ. ಸರ್ಕಾರದ ಕಡೆ ಅಂತಹ ಯಾವುದೊಂದು ಲಿಸ್ಟ್ ಸಹಾ ಇಲ್ಲ. ನನ್ನ ಕಡೆ 38–40 ರೈತರ ಹೆಸರುಗಳಿರುವ ಲಿಸ್ಟ್‌ವೊಂದಿದೆ. ಅದನ್ನು ಇಲ್ಲಿ ಓದಿಕೊಂಡು ಹೋದರೆ ಟೈಮ್ ಆಗುತ್ತದೆ. ಬಹುಶಃ ಆ ಲಿಸ್ಟ್ ಸರ್ಕಾರದ ಕಡೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸರ್ಕಾರಕ್ಕೆ ಆ ಬಗ್ಗೆ ವರದಿಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಈ ಸರ್ಕಾರಕ್ಕೆ ಎಷ್ಟೊಂದು ಜಿಗುಪ್ಸೆ ಮತ್ತು ನಿರ್ಲಕ್ಷ್ಯ ಇದೆ ಎನ್ನುವುದು ಇದರಿಂದ ಅರ್ಥವಾಗುತ್ತದೆ. ನಾನು ಸದನದಲ್ಲಿ ಇದರ ಬಗ್ಗೆ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ನಿಮ್ಮ ಪ್ರಕಾರ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವುದನ್ನು ಹೇಳಿ ಎಂದು ನಾವು ಕೇಳಿದಾಗ ಸರ್ಕಾರ ಯಾವುದೇ ಒಂದು ಲಿಸ್ಟ್ ಅನ್ನು ಕೊಟ್ಟಿಲ್ಲ. ನನ್ನ ಬಳಿ ಇರುವ ಈ ಲಿಸ್ಟ್ ಅನ್ನು ನಾನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಇವತ್ತು ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಯಾವ ಗ್ರಾಮದಲ್ಲಿ ಮಾಡಿಕೊಂಡಿದ್ದಾರೆ ಎನ್ನುವಂತಹ ಮಾಹಿತಿ ನನ್ನ ಕಡೆ ಇದೆ. ಹಾಗಾದರೆ ಸರ್ಕಾರ ಏನು ಮಾಡುತ್ತಿದೆ? ಇವತ್ತು ನಾನು ಸರ್ಕಾರಕ್ಕೆ ಕೇಳುವುದೇನೆಂದರೆ, ನಿಮ್ಮ ರೆಕಾರ್ಡ್ಸ್ ಪ್ರಕಾರ ಇವತ್ತು ಇಡೀ ರಾಜ್ಯದಲ್ಲಿ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಎಂಬುದನ್ನು ಹೇಳಿ. ಅದರ .....

ಶ್ರೀ ಕೆ. ಭಾರತೀ ಶಂಕರ್ : ಈಗ ನೀವು ಬರೀ ಲಿಸ್ಟ್ ಮಾಡಿಕೊಂಡು ಕುಳಿತಿದ್ದೀರಲ್ಲಾ, ನೀವು ಎಲ್ಲಿಗೆ ಹೋಗಿದ್ದೀರಿ ಎನ್ನುವುದನ್ನು ಮೊದಲು ಹೇಳ್ರಿ.

ಶ್ರೀ ಜಗದೀಶ್ ಶೆಟ್ಟರ್ : ನೋಡಿ. ನಿಮ್ಮ ಮುಖ್ಯಮಂತ್ರಿಗಳು ಎಲ್ಲಿಯೂ ಕೂಡ ಹೋಗಿರಲಿಕ್ಕಿಲ್ಲ. ಆದರೆ ನಾನು ಸಾಕಷ್ಟು ರೈತ ಕುಟುಂಬದವರ ಮನೆಗಳಿಗೆ ಭೇಟಿ ಕೊಟ್ಟು ಅವರಿಗೆ ಸಾಂತ್ವನ ಹೇಳುವಂತಹ ಕೆಲಸವನ್ನು ಮಾಡಿದ್ದೇನೆ. ನಿಮ್ಮ ಮಂತ್ರಿಗಳು ಯಾರೂ ಅಲ್ಲಿಗೆ ಹೋಗಿಲ್ಲ. ನಿಮ್ಮ ಕಾಂಗ್ರೆಸ್ಸಿನ ಅಧ್ಯಕ್ಷಿಣಿಯವರು ಆಂಧ್ರ ಪ್ರದೇಶದ ರೈತರು ಆತ್ಮಹತ್ಯೆ ಮಾಡಿಕೊಂಡರೆ ಅಲ್ಲಿಗೆ ಹೋಗಿ ಅವರ ಕುಟುಂಬದವರನ್ನು ಭೇಟಿಯಾಗಿ ಸೌಜನ್ಯ ವ್ಯಕ್ತಪಡಿಸಿ ಪರಿಹಾರವನ್ನು ಕೊಟ್ಟು ಬರುತ್ತಾರೆ. ಆದರೆ ನಿಮ್ಮ ಕಾಂಗ್ರೆಸ್ಸಿನ ಅಧ್ಯಕ್ಷಿಣಿಯವರು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟಿಲ್ಲ. ಇಲ್ಲಿ ಯಾವ ಕುಟುಂಬದವರನ್ನೂ ಸಹ ಅವರು ಭೇಟಿ ಮಾಡಲಿಲ್ಲ. ಇಲ್ಲಿನ ಮುಖ್ಯಮಂತ್ರಿಯವರೂ ಸಹ ಹೋಗಿಲ್ಲ. ಇದು ನಿಮ್ಮ ರೈತ ವಿರೋಧಿ ಧೋರಣೆಯಾಗಿದೆ. ಇಲ್ಲಿ ರೈತರಿಗೆ ಏನು ಸ್ಪಂದನೆ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಮ್ಮ ಅಧ್ಯಕ್ಷರು ಈ ಸದನದ ಸದಸ್ಯರಲ್ಲವಾದ್ದರಿಂದ ಅವರ ಬಗ್ಗೆ ಇವರು ಮಾತನಾಡಬಾರದು. ನೀವು ಹೋಗಿದ್ರಿ. ಸಂತೋಷ. ನಮ್ಮಲ್ಲೂ, District In-charge Minister ಇರುತ್ತಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ಸಹಿತ ಏನಾದರೂ ಆದರೆ ಅವರು ತಕ್ಷಣ ಅಲ್ಲಿಗೆ ಹೋಗುತ್ತಿರುತ್ತಾರೆ. ನೀವು ನಿಮಗೆ ಅನುಕೂಲ ಇದ್ದಾಗ ಎಲ್ಲೆಲ್ಲಿ ಬೇಕೋ ಅಲ್ಲಿಗೆಲ್ಲಾ ಹೋಗುತ್ತಿರಬಹುದು. ಆದರೆ ಸರ್ಕಾರದ ಜವಾಬ್ದಾರಿ ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಇಂತಹ ಘಟನಗೆಳು ನಡೆದರೆ, ಅದಕ್ಕೆ ಸ್ಪಂದಿಸತಕ್ಕಂಥದ್ದು ನಮ್ಮ ಕರ್ತವ್ಯವಾಗಿದೆ. ನಮ್ಮ ಜನ ಅದನ್ನು ಮಾಡುತ್ತಿದ್ದಾರೆ. ತಾವು ಏನು ಮಾಡಿದ್ದೀರೋ ಅದನ್ನು ನೀವು ಹೇಳಿಕೊಳ್ಳಿ ಇನ್ನೊಬ್ಬರು ಮಾಡಿಲ್ಲ. ಎನ್ನುವಂತದ್ದನ್ನು ಕೇಳುವುದಕ್ಕೆ ಹೋಗಬೇಡಿ ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಹೇಳುವುದು ಯಾವುದೇ ಹೆಸರು ಪ್ರಸ್ತಾಪ ಮಾಡಿ ಟೀಕೆ ಮಡುವುದು ಅಲ್ಲ, ಒಂದು ರಾಷ್ಟ್ರೀಯ ಪಕ್ಷದ ಅಧ್ಯಕ್ಷರು, ಅವರ ಪಕ್ಷದ ಅಧ್ಯಕ್ಷರು ಅವರ ಬಗ್ಗೆ ಹೇಳುತ್ತಿದ್ದೇನೆ. ಅವರೊಡನೆ ಒಂದು ರಾಜ್ಯಕ್ಕೆ ಹೋಗಿ ನಾವು ಅಲ್ಲಿ ಸಾಂತ್ವನ ಹೇಳಿದಿರಿ. ಅದೇ ರೀತಿ ಇಲ್ಲಿ ಕರೆದುಕೊಂಡು ಬಂದು ಸಾಂತ್ವನ ಹೇಳುವಂತಹ ಕೆಲಸ ಮಾಡಬೇಕೆಂದು ನಾನು ಹೇಳುವುದು. ಸರ್ಕಾರ ನಿಮ್ಮದಿದೆ. ನಿಮ್ಮ ಮುಖ್ಯ ಮಂತ್ರಿಗಳು ಎಷ್ಟು ಕಡೆ ಹೋಗಿದ್ದಾರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮಗೆ ಶೆಟ್ಟರ್‌ರವರು ಯಾವಾಗಲೂ ಬುದ್ಧಿವಾದ ಹೇಳುತ್ತಾರೆ. ನಾವು ಅವರ ಅಧ್ಯಕ್ಷರಿಗೆ ಯುನಾನಿಮಸಿ ಓಟು ಕೊಟ್ಟು ರಾಜ್ಯ ಸಭಾ ಮೇಂಬರ್ ಮಾಡಿ ಕಳುಹಿಸಿದ್ದೇವೆ. ರಾಷ್ಟ್ರೀಯ ಅಧ್ಯಕ್ಷರು ಎಷ್ಟು ಹಳ್ಳಿಗಳಿಗೆ ಬಂದಿದ್ದಾರೆ? ಎಷ್ಟು ಹಣ ಕೊಟ್ಟಿದ್ದಾರೆ ಎಲ್ಲೆಲ್ಲಿ ಹೋಗಿದ್ದಾರೆ, ನಿಮ್ಮಿಂದ ಹೋದವರು, ನಮ್ಮ ರೆಪ್ರೆಸೆಂಟೇಟಿವ್ ಆಗಿ ಹೋದವರೇ ಬರುವುದಿಲ್ಲ. ಆ ಎರಡು ಕೋಟಿ ರೂಪಾಯಿಗಳ ಹಣದಲ್ಲಿ ಹಣವನ್ನೂ ಕೊಡುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಆಂಧ್ರದ ರೈತರ ಬಗ್ಗೆ ಬರುವಂತಹ ಕಣ್ಣೀರು, ಕರ್ನಾಟಕದ ರೈತರ ಬಗ್ಗೆ ಏಕೆ ಬರುವುದಿಲ್ಲ ಎಂದು ಕೇಳಿದೆ ಅಷ್ಟೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ. ಮಧ್ಯೆ ಡಿಸ್ಟರ್ಬ್ ಮಾಡಬೇಡಿ. ನಾಯ್ಡುರವರೇ, ನೀವು ಕುಳಿತುಕೊಳ್ಳಿ ನೀವೇನು ಉತ್ತರ ಹೇಳಬೇಕಾಗಿಲ್ಲ. ನಿಮ್ಮ ನಾಯಕರು ಉತ್ತರ ಹೇಳುತ್ತಾರೆ.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಕೊಡುವುದನ್ನೂ ಕಲಿಯಬೇಕು, ತೆಗೆದುಕೊಳ್ಳುವುದನ್ನೂ ಕಲಿಯಬೇಕು. ಬರೀ ನಾವು ಹೇಳುತ್ತೇವೆ, ನೀವು ಟಾಲರೇಟ್ ಮಾಡಿ ಎಂದು ಹೇಳಿದರೆ ಹೆಗೆ? ನಾಯ್ಡು ಅವರ ಮೇಲೆ ವಿಶೇಷವಾದ ಪ್ರೀತಿ ಇದೆ. ಆ ಮಾತು ಬೇರೆ, ಆದರೆ ನಮ್ಮ ಮೇಲೆ ಅದೇ ಪ್ರೀತಿ ತೋರಿಸಿ ಎಂದು ಹೇಳುತ್ತಿದ್ದೇವೆ. ನಾವು ಓಟು ಕೊಟ್ಟಿದ್ದೇವೆ.

ಶ್ರೀ ಆರಗಜ್ಞಾನೇಂದ್ರ : ಆಂಧ್ರದ ರೈತರ ಸಾವಿನ ವಿಚಾರದಲ್ಲಿ ನಿಮ್ಮ ಅಧ್ಯಕ್ಷರಿಗೆ ಕಣ್ಣೀರು ಬರುತ್ತದೆ. ಕರ್ನಾಟಕದ ನಿಮ್ಮ ಪಕ್ಷದ ಸರ್ಕಾರ ಇರುವ ಕಡೆ ಜನ ಸತ್ತರೆ ನಿಮ್ಮ ಅಧ್ಯಕ್ಷರಿಗೆ ಕಣ್ಣೀರು ಬರುವುದಿಲ್ಲವೇ? ಈ ಕಣ್ಣೀರು ಕತೆ ಏನೆಂದು ನಮಗೆ ಗೊತ್ತಾಗಬೇಕು.

ಶ್ರೀ ಬಿ. ರಮಾನಾಥ ರೈ : ಆಂಧ್ರಕ್ಕೆ ಎಷ್ಟು ಕಣ್ಣೀರು ಸುರಿಸಿದ್ದಾರೆ, ಕರ್ನಾಟಕಕ್ಕ ...ಟ್ಟ ಕಣ್ಣೀರು ಸುರಿಸಿದ್ದಾರೆಂದು ಗೊತ್ತಿದೆ. ಮತ್ತೆ ಏಕೆ ಇಲ್ಲಿ ಮಾತನಾಡುವುದು?

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಹೋಗಿ ಬಂದಿದ್ದಾರೆ, ಇಲ್ಲಿಯೂ ಬನ್ನಿ ಎಂದು ಹೇಳಿದೆ. ಲ್ಲಿ ಏನಾಗಿದೆ ಎಂದರೆ, ರಾಜ್ಯದ ಮುಖ್ಯ ಮಂತ್ರಿಗಳು ಯಾವುದೇ ಒಬ್ಬ ರೈತ ಕುಟುಂಬದವರು ತ್ಮಹತ್ಯೆ ಮಾಡಿಕೊಂಡರೆ ಸ್ಥಳಕ್ಕೆ ಹೋಗಿ ಭೇಟಿ ಆಗಿ ಸಾಂತ್ವನ ಹೇಳುವ ಕೆಲಸ ಮಾಡಲಿಲ್ಲ. ನಮ್ಮ ಾನ್ಯ ಮುಖ್ಯ ಮಂತ್ರಿಗಳು ಹೇಳಲಿ ಯವ ಕುಟುಂಬಕ್ಕೆ ಭೇಟಿ ಕೊಟ್ಟಿದ್ದಾರೆ ಎಂಬುದನ್ನು ಹೇಳಲಿ ವರ ಜೊತೆ ಸೌಜನ್ಯದ ಮಾತನಾಡಿದ್ದೇನೆ ಎಂದು ಹೇಳಲಿ. ನಮ್ಮ ಮುಖ್ಯ ಮಂತ್ರಿಗಳಿಗೆ ಯಾರು ತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬ ಇದೆ, ಅವರ ಬಗ್ಗೆ ಏಕೆ ತಾತ್ಸಾರ ಇದೆ ಎಂದು ನನಗೆ ರ್ಥವಾಗುತ್ತಿಲ್ಲ. ಒಂದು ಕಡೆಯಾದರೂ ಹೋಗಬೇಕಾಗಿತ್ತು; ಆದರೆ ಹೋಗಲಿಲ್ಲ. ಇವತ್ತು ಮಾನ್ಯ ುಖ್ಯ ಮಂತ್ರಿಗಳು ಮತ್ತು ಈ ಸರ್ಕಾರ ರೈತರ ವಿರುದ್ಧ ತಾತ್ಸಾರ ನೀತಿ ಹೊಂದಿದೆ ಎಂದು ನಾನು ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದರು. ವರೆಲ್ಲಾ ಪ್ರತಿಪಕ್ಷದ ಶಾಸಕರು ಆಗಿ ಇಲ್ಲಿದ್ದಾಗ ಹೇಳಿದ್ದರು. ಆ ಸಂದರ್ಭದಲ್ಲಿ ಗುಲ್ಬರ್ಗ ಮತ್ತು ೀದರ್‌ನಲ್ಲಿ ಅಲ್ಲಿಯ ರೈತರು ಕೇವಲ ಒಂದೆರಡು ತಿಂಗಳುಗಳ ಅಂತರದಲ್ಲಿ 18 ಜನರು ಆತ್ಮಹತ್ಯೆ ಾಡಿಕೊಂಡಿದ್ದರು. ಆ ಸಂದರ್ಭದಲ್ಲಿ ಅವರು ಇಲ್ಲಿ ಏನು ಡಿಮಾಂಡ್ ಮಾಡಿದ್ದರು ಅಂದರೆ ್ರೈತರ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಡಿಮಾಂಡ್ ಮಾಡಿದ್ದರು. ಸದನದ ಸಮಿತಿ ಆಯಿತು, ನಾವೂ ಸದನದ ಸಮಿತಿಯ ಸದಸ್ಯರಾಗಿ ಹೋಗಿದ್ದೆವು. ಏಳೆಂಟು ಜನ ರೈತ ಕುಟುಂಬದವರಿಗೆ ಈ ಸದನದ ಸಮಿತಿ ರೆಕಮಂಡ್ ಮಾಡಿತ್ತು. ಏಳೆಂಟು ಜನ ರೈತ ಕುಟಂಬದವರು ಸಾಲದ ಬಾಧೆಯಿಂದ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕೆಂದು ನಮ್ಮ ವರದಿಯಲ್ಲಿ ಹೇಳಿದ್ದೆವು. ಆಗಿನ ಜನತಾದಳದ ಸರ್ಕಾರ ಪರಿಹಾರ ಕೊಟ್ಟಿತ್ತು. ಕಳೆದ ಎರಡು ವರ್ಷಗಳಿಂದ ಮಾನ್ಯ ಖರ್ಗೆಯವರು ಅಲ್ಲಿದ್ದಾರೆ, ಆ ಸದನದ ಮಿತಿಯಲ್ಲಿ ಇದ್ದು ಶ್ರೀ ಕಾಗೋಡು ತಿಮ್ಮಪ್ಪನವರೂ ಅಲ್ಲಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಆತ್ಮಹತ್ಯೆ ಮಾಡಿಕೊಂಡು ಯಾರಾದರೂ ರೈತರು ಸತ್ತರೆ ತಕ್ಷಣ ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರಿಗೆ ಡಿಸಿಯವರಿಗೆ ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರ ಕೊಟ್ಟಿದ್ದರು.

ಶ್ರೀ ಜಗದೀಶ್ ಶೆಟ್ಟರ್ : ಏಕೆ ನೀವು ಈ ರೀತಿ ತಾರತಮ್ಯ ಮಾಡುತ್ತಿದ್ದೀರಿ? ಎರಡು ವರ್ಷಗಳಿಂದ ಸದನದಲ್ಲಿ ಹೋರಾಟ ಮಾಡುತ್ತಿದ್ದೇವೆ. ತಾವು ಇಲ್ಲಿ ಕೆಲವರು ವೈಯುಕ್ತಿಕ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಹೇಳಿ ಅದನ್ನು ಇನ್‌ವೆಸ್ಟಿಗೇಷನ್ ಮಾಡುತ್ತೇವೆಂದು ಬಜೆಟ್ ಭಾಷಣದಲ್ಲಿ ಹೇಳಿದಿರಿ. ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್ ಭಾಷಣದಲ್ಲಿ ಏನು ಹೇಳಿದ್ದಾರೆ ಎಂದರೆ ಪ್ಯಾರಾ 31 ರಲ್ಲಿ ರೈತರ ಆತ್ಮಹತ್ಯೆ ವಿಷಯಗಳಿಗೆ ಸಂಬಂಧಿಸಿದಂತೆ ವೀರೇಶ್ ಸಮಿತಿಯು ನೀಡುವ ವರದಿಯನ್ನು ಸರ್ಕಾರವು ಪರಿಶೀಲಿಸಿದೆ. ಸಾಲದ ಹೊರೆಯಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಂಡ ದುರಾದೃಷ್ಟಕರ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಒದಗಿಸಿಕೊಡಲಾಗುವುದು ಎಂದು ಫೆಬ್ರವರಿ ತಿಂಗಳ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ರೈತರ ಆತ್ಮಹತ್ಯೆಗೆ ಸಾಲ ಸಂಸ್ಥೆಯಿಂದ ಪಡೆದ ಸಾಲದ ಹೊರೆಯೇ ಸಂಭವನೀಯ ಕಾರಣ ಎಂಬ ಬಗ್ಗೆ ಅಸಿಸ್ಟೆಂಟ್ ಕಮಿಷನರ್ ಅಧ್ಯಕ್ಷತೆಯ ಸಮಿತಿಯು ದೃಢೀಕರಣ ಪತ್ರ ನೀಡಲಿದೆ ಎನ್ನುವ ಮಾತನ್ನು ಹೇಳಿದಿರಿ. ಆ ಸಮಸ್ಯೆಯನ್ನು ಮೂರು ತಿಂಗಳೊಳಗೆ ಇತ್ಯರ್ಥ ಪಡಿಸಲಾಗುವುದು ಎಂದು ಹೇಳಿದಿರಿ. ಇಲ್ಲಿಯವರೆಗೆ ಅಸಿಸ್ಟೆಂಟ್ ಕಮಿಷನರ್ ನೇತೃತ್ವದಲ್ಲಿ ಏನಾದರೂ ಸಮಿತಿ ಆಗಿದೆಯೇ ಹೇಗೆ? ಈ ಬಗ್ಗೆ ಯಾವಾಗ ಸಮಿತಿ ಮಾಡುತ್ತೀರಿ? ಫೆಬ್ರವರಿ ತಿಂಗಳಲ್ಲಿ ನೀವು ಅಶ್ಯೂರೆನ್ಸ್ ಕೊಟ್ಟಿರಿ, ಫೆಬ್ರವರಿ ತಿಂಗಳಲ್ಲಿ ಬಜೆಟ್ ಭಾಷಣ ಮಾಡಿದಿರಿ, ಆದಮೇಲೆ ತಕ್ಷಣ ಮಾಡಬೇಕಗಿತ್ತು. ಇದುವರೆಗೆ ಏಕೆ ಮಾಡಲಿಲ್ಲ? ಯಾವಾಗ ಮಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಅದರ ಬಗ್ಗೆ ಒಂದು ವಿಶೇಷ ಕಮಿಟಿಯನ್ನು ಜಿಲ್ಲೆಯಲ್ಲಿ ಮಾಡಿ ಆ ಸಬ್ ಡಿವಿಷನ್‌ನಲ್ಲಿ ಅಸಿಸ್ಟೆಂಟ್ ಕಮಿಷನರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ 18.7.03 ಕ್ಕೆ ಆರ್ಡರ್ ಇಶ್ಯೂ ಮಾಡಿದ್ದೇವೆ. ಆ ಆರ್ಡರ್ ಪ್ರಕಾರ ಎಲ್ಲೆಲ್ಲಿ ಈ ಪರಿಹಾರದ ಕೆಲಸ ಮಾಡಬೇಕು ಅದನ್ನು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಜುಲೈ 18ನೇ ತಾರೀಖು ನಮ್ಮ ಸದನ ಪ್ರಾರಂಭ ಆದಮೇಲೆ ಇಲ್ಲಿ ಚರ್ಚೆ ಪ್ರಾರಂಭ ಆದಮೇಲೆ ಜುಲೈ 18ಕ್ಕೆ ಆರ್ಡರ್ ಇಶ್ಯೂ ಮಾಡಿದ್ದಾರೆ. ಅಂದರೆ, ಸರ್ಕಾರಕ್ಕೆ ಎಷ್ಟೊಂದು ನಿರ್ಲಕ್ಷ್ಯ ಇದೆ ಎಂದು ಇದರ ಮೇಲೆ ಅರ್ಥವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಏನಾದರೂ ಮಾಡಿದರೆ ಹೀಗೆ ಹೇಳುತ್ತೀರಿ ಮಾಡದೆ ಇದ್ದರೆ ಯಾವಾಗ ಮಾಡುತ್ತೀರಿ ಎಂದು ಕೇಳುತ್ತೀರಿ. ಬಜೆಟರಿ ಬಿಲ್ ಪಾಸ್ ಮಾಡಿಕೊಡುತ್ತೇವೆಂದು ಹೇಳಿದಿರಿ, ನಿನ್ನೆ ಪಾಸ್ ಮಾಡಿಕೊಟ್ಟಿರಿ.

ಶ್ರೀ ಜಗದೀಶ್ ಶೆಟ್ಟರ್ : ಫೆಬ್ರವರಿ ತಿಂಗಳಲ್ಲಿ ಬಜೆಟ್‌ಗೆ ವೋಟ್ ಆನ್ ಅಕೌಂಟ್ ಕೊಟ್ಟಿದ್ದೇವೆ. ಅಸಿಸ್ಟೆಂಟ್ ಕಮಿಷನರ್ ನೇತೃತ್ವದಲ್ಲಿ ಕಮಿಟಿ ಮಾಡುವುದಕ್ಕೆ ಅವರಿಗೆ ಯಾವುದೇ ತೊಂದರೆ ಇರಲಿಲ್ಲ ಇಲ್ಲಿಯವರೆಗೆ ಸುಮ್ಮನೆ ಕುಳಿತರು, ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪ ಆದ ಮೇಲೆ ಮೊನ್ನೆ 18ನೇ ತಾರೀಕು ಆರ್ಡರ್ ಇಶ್ಯೂ ಮಾಡುತ್ತಾರೆ. ಸರ್ಕಾರ ಎಷ್ಟೊಂದು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ ಎಂದು ಇದರಿಂದ ಅರ್ಥವಾಗುತ್ತಿದೆ. ರೈತರ ವಿರುದ್ಧವಾಗಿ ಇಷ್ಟೊಂದು ಬೇಜವಾಬ್ದಾರಿತನದಿಂದ ಸರ್ಕಾರ ನಡೆದುಕೊಳ್ಳುತ್ತಿದೆ. ಎನ್ನುವುದಕ್ಕೆ ಇದು ಒಂದು ಉದಾಹರಣೆ. ಒಂದು ಪರಿಹಾರ ಕೊಡುವುದಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ. ಆ ಕುಟುಂಬ ವರ್ಗದವರಿಗೆ ಪರಿಹಾರ ಕೊಡಲಿಕ್ಕೆ ಆಗುತ್ತಿಲ್ಲ. ಈ ಬಗ್ಗೆ ನಾವು ಕಳೆದ ಅಧಿವೇಶನದಲ್ಲಿ ಕೇಳಿದ್ದೇವೆ, ಆದರೂ

ನಮಗೆ ಸ್ಪಷ್ಟೀಕರಣ ಕೊಡುವುದಕ್ಕಾಗುತ್ತಿಲ್ಲ. ಎಷ್ಟೋಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ಒಂದು ವರದಿ ಕೊಡಿ ಎಂದು ಕೇಳಿದೆವು ಒಂದು ಸ್ಟೇಟಸ್ ರಿಪೋರ್ಟ್ ಮಾಡಿ ಎಂದು ಕೇಳಿದೆವು ಎಷ್ಟು ಜನರಿಗೆ ನೀವು ಇದುವರೆಗೆ ಪರಿಹಾರ ಕೊಟ್ಟಿದ್ದೀರಿ ಎಂದು ಕೇಳಿದೆವು ಅದು ಯಾವುದನ್ನೂ ನೀವು ಇವತ್ತಿನವರೆಗೂ ಕೊಡಲಿಲ್ಲ. ಆ ರೀತಿಯ ಮನೋಸ್ಥಿತಿ ಇವತ್ತು ರೈತರಲ್ಲಿ ಬಂದಿದೆ. ಈ ಪರಿಸ್ಥಿತಿ ರೈತರದ್ದು ಆಗುತ್ತಿದೆ ಇದೇ ಕೊಪ್ಪಳ ಜಿಲ್ಲೆಯಲ್ಲಿ ಏನಾಗಿದೆ ಎಂದು ಕಳೆದ ಸಾರಿ ಬರಗಾಲದ ಚರ್ಚೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಕೊಪ್ಪಳ ಜಿಲ್ಲೆಯಲ್ಲಿ ಈ ಘಟನೆಗಳು ನಡೆಯುತ್ತಿವೆ. ಮತ್ತೊಂದು ಹಿರೇಬಗನಾಳ ಗ್ರಾಮದಲ್ಲಿ ಕಳೆದ ಒಂದೂವರೆ ತಿಂಗಳಲ್ಲಿ ಪೊಲೀಸರ ದೌರ್ಜನ್ಯ ಆಗಿ ಜುಲೈ ಮೊದಲನೇ ವಾರದಲ್ಲಿ ಪೊಲೀಸರ ದೌರ್ಜನ್ಯ ಆಗಿ ಅಲ್ಲಿ ರೈತರು ಬಹಳ ಭಯದ ವಾತಾವರಣದಲ್ಲಿದ್ದಾರೆ. ಪೊಲೀಸ್ ವ್ಯವಸ್ಥೆ ಬಗ್ಗೆ ಎಷ್ಟೊಂದು ಆಕ್ರೋಶ ಆಗಿದೆ ಎಂದರೆ, ಒಬ್ಬ ಪೊಲೀಸ್ ಪೇದೆ ಖಾಕಿ ಡ್ರೆಸ್ ಹಾಕಿಕೊಂಡು ಹಿರೇಬಗನಾಳ್ ಗ್ರಾಮಕ್ಕೆ ಹೋದರೆ, ಅವನಿಗೆ ಛೀಮಾರಿ ಹಾಕುವ, ಒಳಗೆ ಬಿಡಲಾರದ ಪರಿಸ್ಥಿತಿ ಹಿರೇಬಗನಾಳ ಗ್ರಾಮದಲ್ಲಿ ಇದೆ. ಯಾವ ಒಬ್ಬ ಪೊಲೀಸ್ ಪೇದೆ ಅಲ್ಲಿ ಹಿರೇಬಗನಾಳ ಗ್ರಾಮಕ್ಕೆ ಹೋಗಲಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಹಿರೇಬಗನಾಳ ಗ್ರಾಮದಲ್ಲಿ ರೈತರ ಮೇಲೆ ಬಹಳಷ್ಟು ದೌರ್ಜನ್ಯ ಮಾಡಿ ಲಾಠಿ ಪ್ರಹಾರ ಮಾಡಿ ಜೀವದ ಭಯ ಹುಟ್ಟಿಸುವ ವಾತಾವರಣವನ್ನು ರಾಜ್ಯ ಸರ್ಕಾರ ನಿರ್ಮಾಣ ಮಾಡಿದೆ. ಆ ಅಧಿಕಾರಿಗಳು ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಇವತ್ತಿಗೂ ಯಾವುದೇ ಒಂದು ಕ್ರಮವನ್ನು ಅವರು ಕೈಗೊಂಡಿಲ್ಲ ಎನ್ನುವ ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಅಲ್ಲಿ ಕೆಂಪಯ್ಯನವರು ಬಂದಿದ್ದರು, ಆಗಲೇ ಗುಲ್ಬರ್ಗ ವಲಯದ ಮಹಾ ನಿರ್ದೇಶಕರಾದ ಕೆಂಪಯ್ಯನವರು ಆ ಹಿರೇಬಗನಾಳ ಗ್ರಾಮಕ್ಕೆ ಭೇಟಿ ಕೊಟ್ಟಿದ್ದರು. ಅಲ್ಲಿ ಅಲ್ಲಿಯ ಅಧಿಕಾರಿಗಳು ತಪ್ಪು ಮಾಡಿದರೂ, ಅಲ್ಲಿಯ ಡಿಸಿ- ಎಸ್‌ಪಿ. ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅವರು ಏನು ಚಳುವಳಿ ಮಾಡುತ್ತಿದ್ದರು ಆ ಚಳುವಳಿಯನ್ನು ಹತ್ತಿಕ್ಕುವ -- ದೃಷ್ಟಿಯಿಂದ ಸಾವಿರಾರು ಸಂಖ್ಯೆಯ ಪೊಲೀಸರನ್ನು ಕರೆದುಕೊಂಡು ಹೋಗಿ ಪೊಲೀಸ್‌ನವರ ದೌರ್ಜನ್ಯ ಹೆಣ್ಣುಮಕ್ಕಳು, ಮಕ್ಕಳು ಎಂದು ನೋಡಲಾರದೆ ಅವರ ಮೇಲೆ ಎಲ್ಲ ರೀತಿಯ ದೌರ್ಜನ್ಯ ಮಾಡಿದ್ದರು. ನಾನು ಸ್ವತ: ಅಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಅದೇ ರೀತಿ ಕೆಂಪಯ್ಯನವರು ಹಿರೇಬಗನಾಳ್ ಘಟನೆ ಬಗ್ಗೆ ಅವರು ಹೇಳುತ್ತಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಯಾವುದಕ್ಕೂ ಘಟನೆಯನ್ನು ತನಿಖೆಗೆ ಒಳಪಡಿಸಿ ಕ್ರಮ ಕೈಗೊಳ್ಳುವುದು ಎಂದು ಹೇಳುತ್ತಾರೆ. ಯಾರು ತಪ್ಪು ಮಾಡಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಕೆಂಪಯ್ಯನವರು ಹೇಳಿದರು ಎನ್ನುವುದು ಪತ್ರಿಕೆಯಲ್ಲಿ ಬಂದಿದೆ. ಹಿರಿಯ ಪೊಲೀಸ್ ಅಧಿಕಾರಿಗಳು ಹೋಗಿ ಅಲ್ಲಿ ತಪ್ಪಾಗಿದೆ ಎಂದು ಹೇಳಿದಾಗ ಇಲ್ಲಿಯವರೆಗೆ ಎಷ್ಟು ಜನರ ಮೇಲೆ ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದೀರಿ ಎಂದು ಹೇಳಬೇಕಾಗುತ್ತದೆ. ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ, ರೈತರಿಗೆ ಸಂರಕ್ಷಣೆ ಮಾಡುವುದಕ್ಕೆ ನಿಮ್ಮಿಂದ ಏನಾಗುತ್ತದೆ ಎಂದು ಕೇಳಬಯಸುತ್ತೇನೆ. ಅದಕ್ಕಾಗಿ ಈ ರೀತಿ ಇವತ್ತು ಪೊಲೀಸರ ದೌರ್ಜನ್ಯ ಮತ್ತು ರೈತರ ಆತ್ಮಹತ್ಯೆ ದುರಂತ ನಡೆಯುತ್ತಿರುವುದು ಕೇವಲ ಕೊಪ್ಪಳ ಜಿಲ್ಲೆಗೆ ಮಾತ್ರ ಸೀಮಿತ ಅಲ್ಲ. ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇರುವುದರಿಂದ ಸರ್ಕಾರ ಇದರ ಬಗ್ಗೆ ತಕ್ಷಣ ಒಂದು ಸ್ಪಂದನೆ ಮಾಡುವ ಕೆಲಸ ಮಾಡಬೇಕೆಂದು ಹೇಳುತ್ತೇನೆ.

2.20 ಪಿ.ಎಂ.

ಕೊನೆಯದಾಗಿ ನಾನು ಹೇಳುವುದೇನೆಂದರೆ, ಎರಡು ದಿವಸದ ಹಿಂದೆ ಮಲ್ಲೇಶಪ್ಪ ಅಕ್ಕಿಮನಿ ಎನ್ನುವ ರೈತ ಶಿಗ್ಗಾಂವ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅಲ್ಲಿಗೆ ಉಸ್ತುವಾರಿ ಸಚಿವರೇ ಆಗಲಿ, ಅಧಿಕಾರಿಗಳೇ ಆಗಲಿ ಯಾರೂ ಹೋಗಿಲ್ಲ. ಶಿಗ್ಗಾಂವ್ ತಾಲ್ಲೂಕಿನ ತಿಮ್ಮಾಪುರ ಗ್ರಾಮದಲ್ಲಿ ಮಲ್ಲೇಶಪ್ಪ ಅಕ್ಕಿಮನಿ ಎನ್ನುವ ರೈತ ಆತ್ಮಹತ್ಯೆ ಮಾಡಿಕೊಂಡು ತೀರಿಕೊಂಡಿದ್ದಾನೆ. ಇನ್ನೂ ಅಲ್ಲಿಗೆ ಯರೂ ಭೇಟಿ ಕೊಟ್ಟಿಲ್ಲ. ಈ ರೀತಿಯ ಪರಿಸ್ಥಿತಿ ಅಲ್ಲಿದೆ. ಆದುದರಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಯಾವ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಆತನ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಕೊಡಬೇಕು ಮತ್ತು ಕೊಪ್ಪಳದಲ್ಲಿ ಒಂದೇ ಕುಟುಂಬದ ಆರು ಜನರು ಏನು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಆ ಪ್ರಕರಣದ ಬಗ್ಗೆ ಸಂಪೂರ್ಣವಾದಂಥ ತನಿಖೆಯಾಗಬೇಕು ಎಂದು ನಾನು ಒತ್ತಾಯ ಮಡುತ್ತೇನೆ. ಏಕೆಂದರೆ ನ್ಯಾಯಾಂಗ ತನಿಖೆಯಾದರೆ ಆತ್ಮಹತ್ಯೆಯ ಹಿನ್ನೆಲೆ ಏನು? ಯಾವ ಉದ್ದೇಶದಿಂದ ತೀರಿಕೊಂಡರು, ಈ ಬಗ್ಗೆ ಎಲ್ಲಾ ಸತ್ಯಾಂಶಗಳು ಹೊರಗೆ ಬರುವುದಕ್ಕೆ ಸಾಧ್ಯತೆ ಇದೆ. ಅದಕ್ಕಾಗಿ ನಾನು ನ್ಯಾಯಾಂಗ ತನಿಖೆಯನ್ನು ಒತ್ತಾಯ ಮಾಡುತ್ತಿರುವುದು. ಇನ್ನೊಂದು ನಾನು ಹೇಳುವುದೇನೆಂದರೆ ಇಂದು ಹಳ್ಳಿಗಳಲ್ಲಿ ಬಲವಂತವಾಗಿ ಸಾಲ ವಸೂಲಾತಿ ಕಾರ್ಯ ನಡೆಯುತ್ತಿದೆ, ಟ್ರ್ಯಾಕ್ಟರ್‌ಗಳು ಸೀಜ್ ಆಗುತ್ತಿವೆ, ಆಸ್ತಿ ಜಪ್ತಿ ಆಗುತ್ತಿದೆ, ರೈತರ ಮನೆ ಮುಂದೆ ಅಸಹ್ಯಕರವಾಗಿ ಸಾಲ ವಸೂಲಾತಿ ನಡೆಯುತ್ತಿದೆ. ಹೀಗಾಗಿ ಆ ಕಾರಣದಿಂದಲೂ ಕೂಡ ರೈತರು ಮಾನಸಿಕವಾಗಿ ಚಿಂತೆಗೀಡಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಆದಕಾರಣ ಸಾಲ ವಸೂಲಾತಿಯನ್ನು ಸಂಪೂರ್ಣವಾಗಿ ಸರ್ಕಾರ ಕೈಬಿಡಬೇಕೆಂದು ಮತ್ತು ರೈತರ ಬೇಡಿಕೆಗಳನ್ನು ಈಡೇರಿಸಿಕೊಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡಿ ಇವೊತ್ತೇನು ಅಧ್ಯಕ್ಷರಾದ ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರಿ ಅದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಆ ಭಾಗದಿಂದ ಬಂದಿರುವ ನಮ್ಮ ಪಕ್ಷದ ಶಾಸಕರಾದ ಮಾನ್ಯ ಕರಡಿ ಸಂಗಣ್ಣನವರು ಮಾತನಾಡುತ್ತಾರೆ. ನಾನು ಕೆಲವು ವಿಚಾರಗಳನ್ನು ಸೂಕ್ಷ್ಮವಾಗಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಚಿಪಡುತ್ತೇನೆ. ಈ ಆರು ಜನರ ಸಾಮೂಹಿಕ ಆತ್ಮಹತ್ಯೆ ಏನಾಗಿದೆ ಅಂದರೆ ಇಲ್ಲಿ ಒಟ್ಟಾರೆ ಏಳು ಜನರು ಆಗುತ್ತಾರೆ. ಮೊದಲು ದೊಡ್ಡ ಅಕ್ಕ ಈರಬಸಮ್ಮ ಎನ್ನುವವರು ಹಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲಿ ಗುರುವಾರ ಮುಂಜಾನೆ ಮೃತಪಟ್ಟಿರುತ್ತಾರೆ. ಅಕ್ಕನ ಸಾವಿನ ದುಃಖವನ್ನು ತಡೆಯಲು ಆಗದೇ ನಾಲ್ವರು ಸಹೋದರರು, ಇಬ್ಬರು ಸಹೋದರಿಯರು ಕ್ರಿಮಿನಾಶಕ ಔಷಧಿಯನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥದ್ದು. ಬಹುಶಃ ಈ ರೀತಿಯ ಆತ್ಮಹತ್ಯೆ ಮಾಡಿಕೊಂಡಿರುವುದು ಕರ್ನಾಟಕ ರಾಜ್ಯದ ಇತಿಹಾಸದಲ್ಲಿಯೇ ಮೊದಲನೆಯದು ಎಂದು ನಾನು ಭಾವಿಸಿಕೊಳ್ಳುತ್ತೇನೆ. ಇತ್ತೀಚಿನ ದಿನಗಳಲ್ಲಿ ಸಾಮೂಹಿಕ ಆತ್ಮಹತ್ಯೆ ಪ್ರಕರಣಗಳು ಜಾಸ್ತಿ ಆಗಿವೆ. ಚನ್ನಪಟ್ಟಣದ ಒಂದೇ ಕುಟುಂಬದ ಐದು ಜನರು ನನ್ನ ಕ್ಷೇತ್ರದ ಮುತ್ತತ್ತಿಯ ಭೀಮೇಶ್ವರ ನದಿಯಲ್ಲಿ ಸಾಮಾಹಿಕವಾಗಿ ನದಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಪ್ರಕರಣ ನಡೆದು ಇನ್ನೂ ಒಂದು ವಾರವೂ ಕೂಡ ಆಗಿಲ್ಲ. ಅದಕ್ಕೆ ಬೇರೆ ಕಾರಣ ಇರಬಹುದು. ಈಗ ಮೊನ್ನೆ ತಾನೇ ಕೊಪ್ಪಳದಲ್ಲಿ ಆತ್ಮಹತ್ಯೆ ನಡೆದಿದೆ.

ಈ ರೀತಿ ನಿರಂತರವಾಗಿ ನಡೆಯುತ್ತಿದೆ. ಇದಕ್ಕೆ ಕಾರಣ ಏನು? ಸಮಾಜದಲ್ಲಿ ಏನೋ ಒಂದು ರೀತಿಯಲ್ಲಿ ಶಾಂತಿ ಇಲ್ಲದೇ ಇದ್ದಾಗ, ಆರ್ಥಿಕ ಮುಗ್ಗಟ್ಟು ಬಂದಾಗ ಅಥವಾ ಮನಸ್ಸಿನಲ್ಲಿ ದುಗುಡ, ಅನಿಶ್ಚಿತತೆ, ಈ ರೀತಿಯ ಒಂದು ವಾತಾವರಣ ಸೃಷ್ಟಿಯಾದಾಗ ಇಂಥ ಎಕ್ಸ್‌ಟ್ರೀಮ್ ಸ್ಟೆಪ್ಸ್‌ನಲ್ಲಿ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿ ಬರುತ್ತದೆ. ಅದೇ ರೀತಿಯಲ್ಲಿ ಇಲ್ಲಿ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿ ಬಂದಿರಬಹುದು. ಈಗಾಗಲೇ ವಿರೋದ ಪಕ್ಷ ನಾಯಕರು ಹೇಳಿದರು, ಸುಪ್ರೀಂಕೋರ್ಟ್‌ನವರು ನಿರ್ದೇಶನ ಕೊಟ್ಟಿರತಕ್ಕಂಥದ್ದು ಇರಬಹುದು. ಆದರೆ ಸಂವಿಧಾನದಲ್ಲಿ ಏನು ಹೇಳಲಾಗಿದೆಯೆಂದರೆ ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಪ್ರಾಣ ರಕ್ಷಣೆ, ಆಸ್ತಿ ರಕ್ಷಣೆ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ ಎಂದು ಹೇಳಲಾಗಿದೆ. ಇದರ ಜೊತೆಗೆ ಒಂದರಿಂದ ಹದಿನಾಲ್ಕನೇ ವರ್ಷದವರೆಗೆ ಮಕ್ಕಳಿಗೆ ವಿದ್ಯೆಯನ್ನು ಕಲಿಸತಕ್ಕಂಥದ್ದು, ಜನರಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದು, ಈ ಎಲ್ಲ ಮೂಲಭೂತ ಸೌಕರ್ಯಗಳನ್ನು ಜನರಿಗೆ ಒದಗಿಸಿಕೊಡತಕ್ಕಂಥ ಜವಾಬ್ದಾರಿ ಚುನಾಯಿತ ಸರ್ಕಾರಗಳಿಗೆ ಇರುತ್ತದೆ. ಈ ಸರ್ಕಾರ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೇ ಇರುವಾಗ ಸಮಾಜದಲ್ಲಿ ಅಶಾಂತಿ ಮತ್ತು ಗೊಂದಲಗಳು ಸೃಷ್ಟಿಯಾಗುತ್ತವೆ. ಇದರಿಂದಾಗಿ ಸಾರ್ವಜನಿಕರು ಈ ಒಂದು ಹಂತಕ್ಕೆ ತಲುಪುತ್ತಾರೆ. ಇಲ್ಲೇನಾಗಿದೆಯೆಂದರೆ ಈ ಆರು ಜನರ ಆತ್ಮಹತ್ಯೆ ಪ್ರಕರಣದ ಬಗ್ಗೆ ಸ್ಪಷ್ಟವಾಗಿ ಹೇಳುತ್ತಾರೆ. ಅವರು ಬಡತನದ ಬೇಗೆಯಿಂದ ನರಳುತ್ತಿದ್ದರು, ಆಹಾರಕ್ಕೆ ಹಣವಿರಲಿಲ್ಲ, ಕೂಲಿಯೂ ಸಹ ಸಿಕ್ಕಿರಲಿಲ್ಲ, ಸಾಲದ ಹೊರೆ ಬೇರೆ ಜಾಸ್ತಿಯಾಗಿತ್ತು. ಈ ಎಲ್ಲ ಕಷ್ಟಗಳನ್ನು ಸಹಿಸಿಕೊಳ್ಳಲಾರದೇ ಈ ಒಂದು ಕೃತ್ಯವನ್ನು ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇದರಿಂದ ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ. ಬರ ಪರಿಹಾರ ಕಾಮಗಾರಿಗಳನ್ನು ಸುಮಾರು ಒಂದು ಲಕ್ಷದ ಹದಿಮೂರು ಸಾವಿರದಷ್ಟು ತೆಗೆದುಕೊಂಡಿದ್ದೇವೆ, ಹತ್ತು ಕೋಟಿ ಮಾನವ ದಿನಗಳ ಉದ್ಯೋಗವನ್ನು ಸೃಷ್ಟಿ ಮಾಡಿದ್ದೇವೆ ಎನ್ನುವ ಉತ್ತರವನ್ನು ಸರ್ಕಾರದವರು ಕೊಟ್ಟು. ಆದರೆ ಈ ಕುಟುಂಬದವರು ಸುಮಾರು ಎಂಟೆತ್ತು ದಿನಗಳಿಂದ ಈ ಒಂದು ಸಮಸ್ಯೆಯನ್ನು ಎದುರಿಸುತ್ತಾ ಬಂದಿದ್ದಾರೆ. ಸರ್ಕಾರದ ಗಮನಕ್ಕೆ ಈ ವಿಚಾರ ಬರಲಿಲ್ಲವೆ? ಈ ಒಂದು ಕುಟುಂಬದ ಪರಿಸ್ಥಿತಿ ಬಗ್ಗೆ ಸರ್ಕಾರದ ಗಮನಕ್ಕೆ ಬರಲಿಲ್ಲವೇ? ಇದನ್ನು ನಾನು ಕೇಳುವುದಕ್ಕೆ ಇಚ್ಚೆಪಡುತ್ತೇನೆ. ಅಂದರೆ ನೀವು ಹೇಳಬಹುದು, ಪ್ರತಿಯೊಂದು ಕುಟುಂಬದಲ್ಲೂ ಏನೇನು ನಡೆಯುತ್ತದೆ ಎಂದು ತಿಳಿದುಕೊಳ್ಳುವುದಕ್ಕಾಗುತ್ತದೆಯೇ? ಆತ್ಮಹತ್ಯೆ ಮಾಡಿಕೊಳ್ಳುತ್ತಿರುತ್ತಾರೆ, ಅದಕ್ಕೆ ನಾವೇನು ಜವಾಬ್ದಾರರು, ಈ ರೀತಿಯಲ್ಲಿ ನೀವು ಹಾರಿಕೆ ಉತ್ತರವನ್ನು ಕೊಡಬಹುದು. ಆದರೆ ನೈತಿಕ ಜವಾಬ್ದಾರಿ ಒಂದೇ ಅಲ್ಲ, ಸಂವಿಧಾನಾತ್ಮಕವಾಗಿಯೂ ಸರ್ಕಾರಕ್ಕೆ ಜವಾಬ್ದಾರಿ ಇರುತ್ತದೆ. ಈಗ ಗೃಹ ಇಲಾಖೆಯಲ್ಲಿ, ಪೊಲೀಸ್ ಸ್ಟೇಷನ್‌ಗಳಲ್ಲಿ ಪೊಲೀಸರು ಬಹಳ ಜವಾಬ್ದಾರಿಯಿಂದ ಇರಬೇಕಾಗುತ್ತದೆ. ಕೇವಲ ಕೇಸ್‌ಗಳನ್ನು ದಾಖಲೆ ಮಾಡಿಕೊಂಡು ಮತ್ತು ಅವರನ್ನು ಕೋರ್ಟ್‌ಗೆ ಕಳುಹಿಸತಕ್ಕಂಥ ಒಂದೇ ಜವಾಬ್ದಾರಿ ಅವರಿಗೆ ಇರುವುದಿಲ್ಲ. ಅಥವಾ ಗಲಾಟೆ ಆದ ಕಡೆ ಲಾಠಿ ಛಾರ್ಜ್ ಮಾಡತಕ್ಕ ಒಂದೇ ಜವಾಬ್ದಾರಿ ಮಾತ್ರ ಅವರಿಗಿರುವುದಿಲ್ಲ. ಇದನ್ನು ಸೇರಿಕೊಂಡಂತೆ ಆ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಸಾಮಾಜಿಕ ಪರಿಸ್ಥಿತಿ ಹೇಗಿದೆ, ಸಾರ್ವಜನಿಕರ ಸಮಸ್ಯೆಗಳು ಏನು, ಕುಟುಂಬಗಳಲ್ಲಿ ಸಮಸ್ಯೆಗಳು ಏನಾದರೂ ಇವೆಯೇ, ಆ ಗ್ರಾಮಗಳಲ್ಲಿ ಸಮಸ್ಯೆಗಳು ಏನಾದರೂ ಇವೆಯೇ ಎಂಬ ಬಗ್ಗೆ ಜನ ಸಂಪರ್ಕ ಸಭೆಗಳಲ್ಲಿ ಚರ್ಚೆ ಮಾಡಿ ತಿಳಿದುಕೊಳ್ಳಬೇಕು. ಈ ಕಾರ್ಯಕ್ರಮ ಈಗ ಸಮರ್ಪಕವಾಗಿ ಆಗುತ್ತಿಲ್ಲವೆಂಬುದು ಈ ಘಟನೆಯಿಂದಾಗಿ ಗೊತ್ತಾಗುತ್ತಿದೆ.

ಯಾವ ಒಂದು ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿಯೇ ಆಗಲಿ ಆ ಊರಿನ ಮುಖಂಡರುಗಳನ್ನು ಕರೆಸಿ ಅಲ್ಲಿಯ ಪ್ರತಿಯೊಂದು ಕುಟುಂಬದ ಸಮಸ್ಯೆಗಳೇನು ಎಂದು ತಿಳಿದುಕೊಳ್ಳತಕ್ಕಂಥ ಪದ್ಧತಿಯನ್ನು ನಾವು ಹಾಕಿಕೊಂಡು ಬಂದಿದ್ದೆವು. ಆದರೆ ಆ ಕೆಲಸವಾಗಿಲ್ಲವೆಂದು ನಾನಾದರೂ ತಿಳಿದುಕೊಳ್ಳುತ್ತೇನೆ. ಎಲ್ಲಾದರೂ ಒಂದು ಕಡೆ ಆತ್ಮಹತ್ಯೆ ಆಗಿದೆ ಎಂದಾಗ ಈ ಸರ್ಕಾರ ಸ್ಪಂದಿಸಿದ್ದಿದ್ದರೆ ಬಹುಶಃ ಇಷ್ಟೊಂದು ಪ್ರಮಾಣದಲ್ಲಿ ಆತ್ಮಹತೆಗಳು ಆಗುತ್ತಿರಲಿಲ್ಲ. ಆದರೆ ಸರ್ಕಾರ ಈ ಬಗ್ಗೆ ಅಷ್ಟೊಂದು ತೀವ್ರತರವಾಗಿ ಸಮಸ್ಯೆಗಳ ಪರಿಹಾರಕ್ಕೆ ಪರಿಶೀಲನೆ ಮಾಡಿಲ್ಲವೆನ್ನತಕ್ಕಂಥದ್ದು ನಮ್ಮ ಒಂದು ಅನಿಸಿಕೆ. ನಾನು ಹಿಂದೆ ದಿನಾಂಕ 24-4-1998 ರಲ್ಲಿ ಕಂದಾಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡೆ. ಅದೇ ದಿನ ಬಾಲ್ಕಿಯಲ್ಲಿ ಒಬ್ಬ ರೈತ ಸತ್ತರು ಎಂದು ಸುದ್ದಿ ಬಂದ ತಕ್ಷಣ, ನಾನು ರಾಜ್ಯಪಾಲರಿಂದ ಪ್ರಮಾಣ ವಚನವನ್ನು ಹನ್ನೆರಡು ಗಂಟೆಗೆ ಸ್ವೀಕಾರ ಮಾಡಿ ಅದೇ ದಿನ ನಾಲ್ಕು ಗಂಟೆಗೆ ಪ್ಲೈಟ್‌ನಲ್ಲಿ ನಾನು ಬಾಲ್ಕಿಗೆ ಹೋದೆ. ಅವೊತ್ತು ಭಾನುವಾರವಾಗಿದ್ದರೂ ಕೂಡ ಅಲ್ಲಿಯ ಡಿವಿಶನಲ್ ಕಮಿಶನರ್, ಜಿಲ್ಲಾಧಿಕಾರಿಗಳು, ಎಸ್.ಪಿ.ಎಲ್ಲ ಸೇರಿ ಚೆಕ್‌ಅನ್ನು ತಯಾರು ಮಾಡಿ ನಾನೇ ಖುದ್ದಾಗಿ ಅವರ ಮನೆಗೆ ಹೋದೆ. ಏಕೆಂದರೆ ನಾನು ಪ್ರಮಾಣ ವಚನ ಸ್ವೀಕಾರ ಮಾಡಿದ ದಿನವೇ ನನಗೆ ಜವಾಬ್ದಾರಿ ಬಂತು. ನಾನೇ ಖುದ್ದಾಗಿ ಹೋದಾಗ ಅಲ್ಲಿಯ ವಾತಾವರಣ ಹೇಗಿತ್ತೆಂದರೆ, ಸರ್ಕಾರ ರೈತರ ಕಷ್ಟಕ್ಕೆ ಸ್ಪಂದಿಸುತ್ತಿದೆ ಎನ್ನುವ ಒಂದು ಸಮಾಧಾನ ಅವರಲ್ಲಿತ್ತು. ನಾವೇನು ಸತ್ತವರನ್ನು ಬದುಕಿಸುವುದಕ್ಕೆ ಆಗುವುದಿಲ್ಲ ಆದರೆ ಸರ್ಕಾರ ಯಾವ ರೀತಿ ಸ್ಪಂದಿಸಬೇಕೋ ಆ ರೀತಿಯಲ್ಲಿ ಒಂದೆರಡು ಪ್ರಕರಣಗಳಲ್ಲಾದರೂ ಸ್ಪಂಧಿಸಿದ್ದರೆ ಇಂಥ ಒಂದು ಪ್ರಕರಣ ನಡೆಯುತ್ತಿರಲಿಲ್ಲವೆನ್ನುವುದು ನನ್ನ ಒಂದು ಅನಿಸಿಕೆ. ಈಗಲೂ ಹೀಗೆಯೇ ಬಿಟ್ಟರೆ ಈ ರೀತಿಯ ಪ್ರಕರಣ ನಿರಂತರವಾಗಿ ನಡೆಯಬಹುದು. ಮಾನ್ಯ ಹಿರಿಯ ಸದಸ್ಯರಾದ ಎಸ್.ಎಸ್. ಪಾಟೀಲರು ಸರ್ಕಾರಕ್ಕೆ ಒಂದು ನೋಟೀಸ್ ಕೊಡುವ ಮೂಲಕ ಅವರು ಬಹಳ ನೋವಿನಿಂದ ಒಂದು ಪ್ರಕಣವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಬ್ಯಾಡಗಿಯಲ್ಲಿ 51 ಜನ ರೈತರು ನಾವು ನೇಣು ಹಾಕಿಕೊಳ್ಳುತ್ತೇವೆಂದು ಸಾಲಾಗಿ ನಿಂತಿದ್ದಾರೆ ಎನ್ನುವ ಸುದ್ದಿಯನ್ನು ಕೇಳಿದ್ದೇವೆ. ಅಲ್ಲಿ ನೇಣು ಹಾಕಿಕೊಳ್ಳುವುದಕ್ಕೆ ಹೊರಟ್ಟಿದ್ದಾರೆ. ಏನಾದರೂ ಹೆಚ್ಚು ಕಡಿಮೆಯಾಗಿಬಿಟ್ಟರೆ ಏನು ಮಾಡುತ್ತೀರಿ? ಈಗ ಇದೇ ರೀತಿಯಲ್ಲಿ ನಿರಂತರವಾಗಿ ನಡೆಯುತ್ತಿದ್ದರೆ ನಿಮ್ಮ ಸರ್ಕಾರದ ಕರ್ತವ್ಯವೇನು? ನೀವು ಕಣ್ಣು ಮುಚ್ಚಿಕೊಂಡು ಸುಮ್ಮನೇ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ಇಷ್ಟೊಂದು ಹಗುರವಾಗಿ ನೀವು ತೆಗೆದುಕೊಳ್ಳುತ್ತಿದ್ದೀರಾ? ಆದ್ದರಿಂದ ನಾನು ಈ ಸಂದರ್ಭದಲ್ಲಿ ಇದನ್ನು ಅಷ್ಟೊಂದು ಹಗುರವಾಗಿ ತೆಗೆದುಕೊಳ್ಳಬಾರದು ಎಂದು ಹೇಳುತ್ತೇನೆ. ಕೊಪ್ಪಳದಲ್ಲಿ ಯಾವ ಪರಿಸ್ಥಿತಿ ಇದೆ ಎಂಬ ಬಗ್ಗೆ ನಮ್ಮ ಪಕ್ಷದ ಶಾಸಕರಾದ ಶ್ರೀ ಕರಡಿ ಸಂಗಣ್ಣನವರು ಹೇಳುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ, ಈ ಪ್ರಕಣ ಯಾವ ರೀತಿಯಾಗಿದೆ ಎಂಬ ಬಗ್ಗೆ ತಕ್ಷಣ ಅಧ್ಯಯನ ಮಾಡಿ ಪರಿಹಾರವನ್ನು ಪ್ರತಿಯೊಬ್ಬರಿಗೂ ತಕ್ಷಣ ಕೊಡಬೇಕಲ್ಲದೆ ಈ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆಗೆ ಅವಕಾಶ ಮಾಡಿಕೊಡಬೇಕೆಂದು ನಾನೂ ಸಹ ಒತ್ತಾಯವನ್ನು ಮಾಡುತ್ತೇನೆ. ಇದಕ್ಕೆ ಕಾರಣಕರ್ತರು ಯಾರು? ಯಾವ ಒಂದು ಕಾರಣದಿಂದ ಈ ಆತ್ಮಹತ್ಯೆ ಆಗಿದೆ ಎಂಬ ಬಗ್ಗೆ ತನಿಖೆ ಮಾಡಬೇಕು. ಇನ್ನು ಮುಂದೆ ಇಂಥ ಒಂದು ಪ್ರಕರಣಗಳು ಮರುಕಳಿಸದಂತೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿಯೂ ಸರ್ಕಾರದಿಂದ ಆಗಬೇಕು. ಈಗೇನು ಬ್ಯಾಡಗಿಯಲ್ಲಿ 51 ಜನರು ಸಾಲದ ಹೊರೆಯನ್ನು ಹೊರಲಾರದೆ ನೇಣು

ಹಾಕಿಕೊಳ್ಳಲು ಸಾಲಾಗಿ ನಿಂತಿದ್ದಾರೆ ಅದನ್ನೂ ಕೂಡ ತಾವು ತಪ್ಪಿಸಬೇಕು. ಮೊನ್ನೆ ಇದರ ಬಗ್ಗೆ ಸ್ಪಷ್ಟವಾದಂತಹ ಉತ್ತರವನ್ನು ಸರ್ಕಾರ ಕೊಡಲಿಲ್ಲ ಆದರೆ ಅದಕ್ಕೂ ಸಹ ಏನೂ ಅಚಾತುರ್ಯ ಆಗಬಾರದು ಎನ್ನುವ ಕಾರಣದಿಂದ ಅದನ್ನು ನಿಲ್ಲಿಸಬೇಕು ಎನ್ನುವಂತಹ ನಿಲುವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯವನ್ನು ಮಾಡುತ್ತಾ ಈ ಬಗ್ಗೆ ತಾವು ಈ ಸದನದಲ್ಲಿ ಹೇಳಬೇಕು, ಅವತ್ತು ನಾನು ಏನು ಸರ್ಕಾರದ ಗಮನಕ್ಕೆ ತಂದಿದ್ದೇವೆ, ಅದಕ್ಕೆ ಸರ್ಕಾರ ಏನೂ ಉತ್ತರ ಕೊಟ್ಟಿಲ್ಲ. ಅದನ್ನು ಈ ಸಂದರ್ಭದಲ್ಲಿ ಹೇಳಬೇಕು, ಹಾಗೂ ಈ ಒಂದು ವಿಚಾರಕ್ಕೆ ಸಂಬಂಧಪಟ್ಟ ಹಾಗೆ ನ್ಯಾಯಾಂಗ ತನಿಖೆಗೆ ಆದೇಶ ಮಾಡಬೇಕೆಂದು ಹಾಗೂ ಸತ್ತವರ ಕುಟುಂಬಕ್ಕೆ ಪರಿಹಾರವನ್ನು ಸರಿಯಾದ ರೀತಿಯಲ್ಲಿ ಕೊಡಬೇಕೆಂದು ಒತ್ತಾಯ ಮಾಡುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಈಗ ಸಿಂಧ್ಯರವರು ಮಾತನಾಡಿದ ಮೇಲೆ, ಮುದ್ದಹನುಮೇಗೌಡರು ಹಾಗೂ ಕರಡಿ ಸಂಗಣ್ಣನವರು ಮಾತನಾಡಿ.

+ **ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ)** :– ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ವಿಚಾರಗಳನ್ನು ಮಾತ್ರ ಹೇಳುವುದಿದೆ. ಈ ಹೃದಯವನ್ನು ತಲ್ಲಣಗೊಳಿಸತಕ್ಕಂಥ ವರದಿಗಳೇನಿವೆ ಇವುಗಳನ್ನು ನೋಡಿದರೆ ಮನುಷ್ಯತ್ವ ಇರತಕ್ಕಂಥ ಸರ್ಕಾರಗಳು ಇದ್ದರೆ ಆ ಸರ್ಕಾರಗಳೂ ಕೂಡ ತಲ್ಲಣಗೊಳ್ಳಬೇಕು. ಕಳೆದ ಐದು ವರ್ಷಗಳಿಂದ ಸತತವಾಗಿ ರಾಜ್ಯದಲ್ಲಿ ಆತ್ಮಹತ್ಯೆ ನಡೆಯುತ್ತಿವೆ. ಇವತ್ತು ನಾವೆಲ್ಲಾ ರೈತರ ಆತ್ಮಹತ್ಯೆ ಬಗ್ಗೆ ಕೇಳಿದ್ದೇವೆ. ಶ್ರೀಮಾನ್ ಬೈರೇಗೌಡರು ದಿವಂಗತರಾಗಿದ್ದಾರೆ. ಈ ಆತ್ಮಹತ್ಯೆ ಕಾಂಗ್ರೆಸ್ ಸರ್ಕಾರ ಬಂದಮೇಲೆ ಹುಟ್ಟಿಕೊಂಡಿತೆ? ಇಲ್ಲ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಬೈರೇಗೌಡರು ಕೃಷಿ ಮಂತ್ರಿಗಳಾಗಿ ಇಡೀ ರಾಷ್ಟ್ರಕ್ಕೆ ಮಾದರಿಯಾಗಿರತಕ್ಕಂಥ ಒಂದು ಕೃಷಿ ನೀತಿಯನ್ನು ಕೊಟ್ಟಂತಹ ಒಬ್ಬ ಕೃಷಿ ಪಂಡಿತರು ಅವರು ಕೃಷಿ ಮಂತ್ರಿಗಳಾಗಿದ್ದಾಗ ಸಹ ರೈತರ ಆತ್ಮಹತ್ಯೆ ಪ್ರಾರಂಭವಾಗಿತ್ತು. ಇದು ವಾಸ್ತಾವಂಶ. ಆದರೆ ಈ ರೈತರ ಆತ್ಮಹತ್ಯೆ ಅಂದರೆ ಒಂದು ಕುಟಂಬದಲ್ಲಿ ಒಬ್ಬ ಸಾಯುತ್ತಿದ್ದ ಆದರೆ ನನಗೆ ಅರ್ಥವಾಗುತ್ತಿಲ್ಲ, ಇಡೀ ಕುಟುಂಬವೇ ಸಾಮೂಹಿಕವಾಗಿ ಆತ್ಮಹತ್ಯೆ ಆಗುತ್ತಿರುವಂತಾದ್ದು ಇದೇ ಮೊದಲನೇ ಬಾರಿಗೆ. ಕುಟುಂಬ ಕುಟುಂಬಗಳೇ ಆತ್ಮಹತ್ಯೆ ಮಾಡಿಕೊಳ್ಳುತ್ತಿವೆ. ಇದರ ಜೊತೆಗೆ ಸರ್ಕಾರಿ ಅಧಿಕಾರಿಗಳು ಸಹ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥದ್ದು ಪ್ರಾರಂಭವಾಗಿದೆ. ನಾನೇ ಮಾನ್ಯ ಮುಖ್ಯಮಂತ್ರಿಗಳ ಸ್ಥಾನದಲ್ಲಿ ಇದ್ದಿದ್ದರೆ ಇದರ ಬಗ್ಗೆ ತತ್‌ಕ್ಷಣ ಕ್ರಮ ತೆಗೆದುಕೊಳ್ಳುವ ರಾಜಕೀಯ ಎದೆಗಾರಿಕೆಯನ್ನು ತೋರಿಸುತ್ತಿದ್ದೆ. ಅದು ಆಗಲಿಲ್ಲ. ಸರ್ಕಾರಿ ಅಧಿಕಾರಿಗಳು ಸಹ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅದು ಈಗಾಗಲೇ ತಮ್ಮ ಗಮನಕ್ಕೆ ಬಂದಿದೆ. ಕೊಪ್ಪಳ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಘಟನೆ ಇದು ಎಂತಹ ಕಟುಕರ ಹೃದಯವನ್ನೂ ಸಹ ಕರಗಿಸತಕ್ಕಂಥ ವಿಚಾರ. ಇದಕ್ಕೆ ಕಾರಣವೇನು? ಇದರ ಬಗ್ಗೆ ಮಾನ್ಯ ಸೋಮಶೇಖರ್ ಅವರು ಬಹಳ ಚೆನ್ನಾಗಿ ಆಡಳಿತದ ಅನುಭವದಿಂದ ಮಾತನಾಡಿದ್ದಾರೆ. ಅದರ ಜೊತೆಗೆ ನಾವು ಎರಡು ಮೂರು ವಿಚಾರಗಳನ್ನು ಸೇರಿಸುವುದಕ್ಕೆ ಬಯಸುತ್ತೇನೆ. ಇವತ್ತು ಈ ರೀತಿ ರೈತರು ಆತ್ಮಹತ್ಯೆ ಮಾಡಿಕೊಳ್ಳಬೇಕಾದರೆ, ರಾಜ್ಯ ಸರ್ಕಾರದ ಜೊತೆ ಏನು ನಾವು ಸಂವಿಧಾನದ ಒಳಗೆ ಕೆಲಸ ಮಾಡುತ್ತಿದ್ದೇವೆ, ರಾಜ್ಯ ಸರ್ಕಾರಕ್ಕೂ ಸಹ ಹಣಕಾಸಿನ ಇತಿಮಿತಿಗಳು ಇರುತ್ತವೆ. ಕೇಂದ್ರ ಸರ್ಕಾರ ಮಾಡಿರತಕ್ಕಂಥಾದ್ದು ಏನು? ಈಗಾಗಲೇ

ಒಂದು ಕೃಷಿ ಜಾರಿಗೆ ತಂದಿದ್ದರೂ ಸಹ ಪಂಜಾಬಿನಲ್ಲಿ, ಹರಿಯಾಣದಲ್ಲಿ, ರಾಜಸ್ಥಾನದಲ್ಲಿ, ಆಂಧ್ರಪ್ರದೇಶದಲ್ಲಿ ಸುಮಾರು ಹತ್ತು ಸಾವಿರ ಜನ ರೈತರು ಕಳೆದ ಐದು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗ ಚುನಾವಣೆ ಬಂತು ಎಂದ್ಹೇಳಿ ಬಡ್ಡಿ ರಿಯಾಯಿತಿಯನ್ನು ಘೋಷಣೆ ಮಾಡುತ್ತಿದ್ದಾರೆ. ಇವತ್ತು ರೈತರು ಸಾಲವನ್ನು ತೆಗೆದುಕೊಳ್ಳತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಯಾವುದೇ ಎಸ್‌ಎಲ್‌ಡಿ ಬ್ಯಾಂಕ್ ಸಾಲವನ್ನು ಕೊಡತಕ್ಕಂತ ಸ್ಥಿತಿಯಲ್ಲಿ ಇಲ್ಲ. ಪಿಎಲ್‌ಡಿ ಬ್ಯಾಂಕ್‌ಗಳು ಮುಚ್ಚತಕ್ಕಂತ ಸ್ಥಿತಿಗೆ ಹೋಗಿವೆ. ಡಿಸಿಸಿ ಬ್ಯಾಂಕ್‌ಗಳು ಸೊಸೈಟಿಗೆ ಸಾಲವನ್ನು ಕೊಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಸಾಲ ಕೊಡತಕ್ಕಂಥಾದ್ದು ಸಾಲ ವಸೂಲಾತಿ ಮಾಡತಕ್ಕಂಥಾದ್ದು ಕೇವಲ ಪುಸ್ತಕದ ಮೇಲೆ ಇರುವುದು ಎಂದು ನಮಗೆಲ್ಲಾ ಗೊತ್ತಿರತಕ್ಕಂಥ ವಿಚಾರ. ಇವತ್ತು ಕೇಂದ್ರ ಸರ್ಕಾರ ಯಾವುದೇ ಒಂದು ಸ್ಪಷ್ಟ ನೀತಿಯನ್ನು ಮಾಡಬೇಕು. ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ ರಾಜ್ಯಸರ್ಕಾರದ ಸಹಕಾರವನ್ನು ತೆಗೆದುಕೊಂಡರೆ 15 ದಿವಸದ ಒಳಗಡೆ ಇವತ್ತು ಎಲ್ಲಿ ರೈತರು ಸಾಲ ತೆಗೆದುಕೊಂಡಿರುತ್ತಾರೆ, ಒಂದು ಪಿಎಲ್‌ಡಿ ಬ್ಯಾಂಕ್‌ನಲ್ಲಿ, ಒಂದು ಎಸ್‌ಎಲ್‌ಡಿ ಬ್ಯಾಂಕ್‌ನಲ್ಲಿ, ಸೊಸೈಟಿಗಳಲ್ಲಿ ಅಥವಾ ನಾನ್ ಫಾರ್ಮಿಂಗ್ ಸೆಕ್ಟಾರ್ ಎಂದು ಡಿಸಿಸಿ ಬ್ಯಾಂಕ್‌ನಿಂದ ನೇರವಾಗಿ ಕೆಲವು ಸಾಲಗಳನ್ನು ಕೊಟ್ಟಿದ್ದಾರೆ. ಈ ಬ್ಯಾಂಕಿಂಗ್ ಇನ್ಸಿಟ್ಯೂಷನ್‌ಗಳು ಏನಿವೆ ಅದರಲ್ಲಿ ಎಷ್ಟು ಜನ ರೈತರು ಸಾಲ ತೆಗೆದುಕೊಂಡಿದ್ದಾರೆ ಎಂದು ಒಂದು ಸಮೀಕ್ಷೆಯನ್ನು ಸರ್ಕಾರ ಮಾಡುವುದಕ್ಕೆ ಆಗಿಲ್ಲವೆ? ಅದಕ್ಕೆ ಪರಿಹಾರವನ್ನು ಕೊಡತಕ್ಕಂಥ ಕೆಲಸವನ್ನು ಇವತ್ತು ಕೇಂದ್ರ ಸರ್ಕಾರ ಮಾಡಬೇಕಾಗಿತ್ತು. ಒಂದು ಮಾತನ್ನು ಬಹಳ ದುಃಖದಿಂದ ಹೇಳಬೇಕಾಗುತ್ತದೆ, ನಮ್ಮ ಹಣಕಾಸಿನ ಮಂತ್ರಿಗಳು ಮತ್ತು ಕೇಂದ್ರ ಸರ್ಕಾರದವರು ಒಂದು ನಿರ್ದಿಷ್ಟವಾದ ಯೋಜನೆಯನ್ನು ಇದುವರೆಗೂ ಸಹ ಘೋಷಣೆ ಮಾಡಿಲ್ಲ. ಇದನ್ನು ನಾವು ಖಂಡಿಸಬೇಕಾಗುತ್ತದೆ. ಇವತ್ತು ಇವರು ರೈತರ ಆತ್ಮಹತ್ಯೆ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡಿರುವುದು ನಿಜವಾಗಿದ್ದರೆ, ನಿಜವಾಗಿ ಆ ರೈತರಿಗೆ ಏನಾದರೂ ಸಹಾಯ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಆಸಕ್ತಿ ಇದ್ದಿದ್ದರೆ ಈಗಾಗಲೇ ಇದರ ಘೋಷಣೆಯನ್ನು ಮಾಡಬೇಕಾಗಿತ್ತು. ಈಗಾಗಲೇ ರಿಯಾಯಿತಿ ಕೊಡಬೇಕಾಗಿತ್ತು. ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಕುಟುಂಬಗಳಿಗೆ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ 50 ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೆ ಕೊಡತಕ್ಕಂಥ ಯೋಜನೆಯನ್ನು ಈಗಾಗಲೇ ಘೋಷಣೆ ಮಾಡಬೇಕಾಗಿತ್ತು. ಆದರೆ ದುರ್ದೈವದ ವಿಚಾರ. ಕೇಂದ್ರ ಸರ್ಕಾರ ಇದನ್ನು ಮಾಡಿಲ್ಲ. ರಾಜ್ಯ ಸರ್ಕಾರ ಏನಾದರೂ ಪ್ರಧಾನ ಮಂತ್ರಿಗಳಿಗೆ ಭೇಟಿ ಮಾಡಿದಂತಹ ಸಂದರ್ಭದಲ್ಲಿ ಇದಕ್ಕೆ ಒಂದು ನೀಲಿ ನಕ್ಷೆಯನ್ನು ತಯಾರು ಮಡತಕ್ಕಂಥ ಅವಶ್ಯಕತೆ ಇದೆ. ಇಲ್ಲಿ ಅನೇಕ ಮಂದಿ ಸಹಕಾರಿಗಳು ಇದ್ದಾರೆ. ಇದು ಸಹಕಾರಿಗಳೆಲ್ಲರಿಗೂ ಸಹ ಗೊತ್ತಿರತಕ್ಕಂಥ ವಿಚಾರ. ನಮ್ಮ ಜಿಲ್ಲೆಯಲ್ಲಿ ಬಿಜಾಪುರ ಜಿಲ್ಲಾ ಬ್ಯಾಂಕ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿತ್ತು. ಅದನ್ನು ಸೂಪರ‌ಸೀಡ್ ಮಾಡಿ ಅದರಲ್ಲಿ ಏನೇನೋ ಕಿತಾಪತಿ ಮಾಡಿದರು. ಬೀದರ್‌ನಲ್ಲಿ ಇರತಕ್ಕಂಥ ಜಿಲ್ಲಾ ಬ್ಯಾಂಕ್ ಸಹ ಚೆನ್ನಾಗಿ ಕೆಲಸವನ್ನು ಮಾಡುತ್ತಿದೆ. ಅಂತಹ ಬ್ಯಾಂಕುಗಳ ಮೂಲಕ ಒಂದು ದಿವಸದ ಒಳಗಡೆ ಯಾರು ಡಿಸ್ಟ್ರೆಸ್ ಆಗಿರತಕ್ಕಂಥ ರೈತರು ಇದ್ದಾರೆ ಇದನ್ನು ತಿಳಿದುಕೊಳ್ಳುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲವೆ? ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಶಿವಣ್ಣನವರನ್ನು ದೋಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಚೆಸ್ ಗೇಮ್‌ನಲ್ಲಿ ಅವರು ಸ್ಮಾಲ್ ಪ್ಲೇಯರ್. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ, ಮೂರು ವರ್ಷದಿಂದ ನೀವು ಬರಗಾಲ ಎಂದು ಹೇಳಿ ಭಾಷಣ

ಮಾಡಿಕೊಂಡು ಗಜಗಾಂಭೀರ್ಯದಿಂದ ಬೀಗುತ್ತಿದ್ದೀರಿ. 12.50 ಸಾವಿರ ಕೋಟಿ ರೂಪಾಯಿಗಳು ರೈತರಿಗೆ ತೋಟಗಾರಿಕೆಯಲ್ಲಿ ಲುಕ್ಸಾನಾಗಿದೆ. ನಮ್ಮ ರೈತರು ಮುಂದೆ ಬರಬೇಕಾದರೆ ಎಂಟತ್ತು ವರ್ಷ ಬೇಕಾಗುತ್ತದೆ. ಇದರ ಬಗ್ಗೆ ಏನಾದರೂ ನಿಮ್ಮ ಸರ್ಕಾರ ಕರುಣೆ ತೋರಿಸಿದ್ದೀರಾ? ನೀವು ಕೇಂದ್ರ ಸರ್ಕಾರಕ್ಕೆ ಏನು ಮೆಮೋರ್ಯಾಂಡಂ ಸಬ್‌ಮಿಟ್ ಮಾಡಿದ್ದೀರಿ ಅದರಲ್ಲಿ ಎಲ್ಲಾದರೂ ನೀವು ಹೇಳಿದ್ದೀರಾ? ಈ ತೋಟಗಾರಿಕೆ ಬೆಳೆಯಲ್ಲಿ ಇಷ್ಟೊಂದು ಫಸಲು ಹೋಗಿದೆ, ಇಷ್ಟೊಂದು ದ್ರಾಕ್ಷಿ ಬೆಳೆ ಸಂಪೂರ್ಣವಾಗಿ ಒಣಗಿದೆ, ಅಡಿಕೆ ಬೆಳೆ ಸಂಪೂರ್ಣವಾಗಿ ಸರ್ವನಾಶವಾಗಿದೆ, ತೆಂಗಿನ ಬೆಳೆ ಸರ್ವನಾಶವಾಗಿದೆ, ಸಪೋಟ ಬೆಳೆ ಸರ್ವನಾಶವಾಗಿದೆ. ಈ ರೀತಿಯಾಗಿ ಎಲ್ಲಾದರೂ ಒಂದು ಕಡೆ ಸೀರಿಯಸ್ ಆಗಿ ನೀವು ಮೆಮೋರ್ಯಾಂಡಂನಲ್ಲಿ ಸಬ್‌ಮಿಟ್ ಮಾಡಿದ್ದೀರಾ ಅಥವಾ ಕೇಂದ್ರ ಸರ್ಕಾರದಿಂದ ಆಫೀಸರ್ಸ್ ಬರಬೇಕೆಂದು ಏನಾದರೂ ನೀವು ಹೇಳಿದ್ದೀರಾ? ಅದೇ ಬೇರೆ ರಾಜ್ಯಗಳು ಆಗದ್ದಿದ್ದರೆ ಎಷ್ಟೊಂದು ಗಲಾಟೆ ಮಾಡುತ್ತಿದ್ದರು. ಆದರೆ ನೀವು ಇದುವರೆಗೂ ಏನೂ ಸಹ ಮಾಡಿಲ್ಲ. ಅತ್ತು ಕರೆದ ಮೇಲೆ ಮೂರು ವರ್ಷವಾದ ಮೇಲೆ ಆತ್ಮಹತ್ಯೆ ಮಾಡಿಕೊಂಡಂತಹವರಿಗೆ ಒಂದು ಲಕ್ಷ ರೂಪಾಯಿ ಕೊಡುತ್ತೇವೆನ್ನುವ ವಿಚಾರವನ್ನು ಹೇಳಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಪ್ರಶ್ನೆಯನ್ನು ಕೇಳಿದರು. ನಮ್ಮ ಹತ್ತಿರ ಅಂಕಿಅಂಶಗಳನ್ನು ಇವೆ, ಎಷ್ಟು ಜನ ಆತ್ಮಹತ್ಯೆ ಮಾಡಿಕೊಂಡಂತಹ ರೈತರಿಗೆ ನೀವು ಇದುವರೆಗೆ ದುಡ್ಡು ಕೊಟ್ಟಿದ್ದೀರಿ? ಇದುವರೆಗೂ ಕೊಟ್ಟಿಲ್ಲ. ಬರೀ ಘೋಷಣೆ ಮಾಡಿದ್ದಾರೆ. ಅದರಿಂದಾಗಿ ನಮ್ಮ ಹೋಮ್ ಡಿಪಾರ್ಟ್‌ಮೆಂಟ್, ನಾನು ತಿಳಿದುಕೊಂಡಿರುವ ಹಾಗೆ ನನ್ನ ಅನುಭವದಿಂದ ಹೇಳತಕ್ಕಂಥ ಮಾತು ಇದು ಎಫಿಷಿಯಂಟ್ ಡಿಪಾರ್ಟ್‌ಮೆಂಟ್. ನಮ್ಮ ಕರ್ನಾಟಕದ ಪೊಲೀಸರು ಯಾರಿಗೂ ಏನು ಕಡಿಮೆಯಿಲ್ಲ. ನಮ್ಮ ವಿಲೇಜ್ ಕೇಸ್ ಹಿಸ್ಟರಿ ಏನಿದೆ ಅದನ್ನು ಪೊಲೀಸ್ ಸ್ಟೇಷನ್‌ನಲ್ಲಿ ಮೇಂಟೇನ್ ಮಾಡಿರುತ್ತಾರೆ. ಯಾವ ಊರಿನಲ್ಲಿ ಗ್ರೀನ್ ಕಾರ್ಡ್ ಕೆಳಗಡೆ ಬಡತನದಲ್ಲಿ ಇರತಕ್ಕಂಥ ಫ್ಯಾಮಿಲಿಗಳು ಎಷ್ಟಿವೆ ಎಂದು ಒಂದು ಹಳ್ಳಿಯಲ್ಲಿ ತಿಳಿದುಕೊಳ್ಳುವುದು ಬಹಳ ಕಷ್ಟದ ಕೆಲಸವೇ? ಇವತ್ತು ಇದೆ ಅದು. ಆ ವಿಲೇಜ್ ಕೇಸ್ ಹಿಸ್ಟರಿ ನೀವು ತೆಗೆದು ನೋಡಿದರೆ, ಆ ಊರಿನಲ್ಲಿ ಎಷ್ಟು ಬಡ ಕುಟುಂಬಗಳು ಇವೆ ಎನ್ನುವುದನ್ನು ನೋಡಬಹುದು. ಮಾನ್ಯ ಮುಖ್ಯಮಂತ್ರಿಗಳ ಸ್ವಂತ ಕ್ಷೇತ್ರವಾದ ಮದ್ದೂರಿನಿಂದ ಮುತ್ತತ್ತಿಗೆ ಹೋಗಿ ಆತ್ಮಹತ್ಯೆ ಮಾಡಿಕೊಂಡರು. ಮಾನ್ಯ ಸೋಮಶೇಖರ್ ಅವರ ಕ್ಷೇತ್ರದಿಂದ, ಮಾನ್ಯ ಮುಖ್ಯಮಂತ್ರಿಗಳ ತವರು ಜಿಲ್ಲೆ, ಆ ಜಿಲ್ಲೆಯಿಂದ ಹೋಗಿ ಕಾವೇರಿಯಲ್ಲಿ ಬಿದ್ದು ಸತ್ತು ಹೋದರು. ಅದಕ್ಕೆ ಎಷ್ಟು ಪರಿಹಾರ ಕೊಟ್ಟಿದ್ದೀರಿ? ಕೊನೇಪಕ್ಷ ಯಾರಾದರೂ ನಿಮ್ಮ ಜಿಲ್ಲಾಮಂತ್ರಿಗಳು ಅಲ್ಲಿ ಹೋಗಿ ನೋಡಿದಿರಾ? ಮಾನ್ಯ ಖರ್ಗೆಯವರು ಹೊರಟು ಹೋದರು. ಅವರಿಗೆ ಏನಾದರೂ ಪರಿಹಾರ ಕೊಡತಕ್ಕಂಥಾದ್ದು ಇದೆಯೇ? ನೀವು ಕೇಂದ್ರ ಸರ್ಕಾರದಿಂದ ಹಳದಿ ಕಾರ್ಡ್ ಯೋಜನೆ ಮಾಡಿದ್ದೀರಿ ಅದು ಕೇಂದ್ರ ಸರ್ಕಾರದಿಂದ ಪುಕ್ಕಟೆಯಾಗಿ ಅಕ್ಕಿ ಕೊಡುವುದು. ಮಾನ್ಯ ಪ್ರಧಾನಮಂತ್ರಿಗಳು ಹೇಳಿದ್ದಾರೆ, ಒರಿಸ್ಸಾದಲ್ಲಿ ಜನರು ಹಸಿವಿನಿಂದ ಯಾರೂ ಸತ್ತಿಲ್ಲ. ಅವರು ಸತ್ತಿದ್ದು ಬೇರೆ ಕಾರಣದಿಂದ. ಹಸಿವಿನಿಂದ ಒಂದು ದಿನದಲ್ಲಿ ಯಾರೂ ಸಾಯುವುದಿಲ್ಲ. ಒಂದು ಹೊತ್ತು, ಎರಡು ಹೊತ್ತು ಮೂರು ಹೊತ್ತು ಊಟ ಇಲ್ಲದೆ ಯಾರೂ ಸಾಯುವುದಿಲ್ಲ.

(ಶ್ರೀ ಬಿ.ಆರ್. ಯಾವಗಲ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಹೇಗೋ ಬದುಕುತ್ತಾರೆ. ಪಕ್ಕದ ಮನೆಯಿಂದಲಾದರೂ ಸಾಲ ತೆಗೆದುಕೊಂಡು ಬರುತ್ತಾರೆ. ನಮ್ಮ ಸಂಸ್ಕೃತಿಯಲ್ಲಿ ಪಕ್ಕದ ಮನೆಯವರು ಸ್ವಲ್ಪ ಸಾಲ ಕೊಡತಕ್ಕಂಥ ಪದ್ಧತಿ ಇದೆ. ಆದರೆ ವಸ್ತುಸ್ಥಿತಿಯಲ್ಲಿ

ಸರ್ಕಾರ ಈ ಹಳದಿ ಕಾರ್ಡನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದರೂ ಸಹ ಈ ಪರಿಸ್ಥಿತಿ ಬರುತ್ತಿರಲಿಲ್ಲ. ನೀವು ರಾಜ್ಯ ಸರ್ಕಾರದವರು, ಕೇಂದ್ರ ಸರ್ಕಾರಕ್ಕೆ ಕೊನೇಪಕ್ಷ ನಮಗೆ ಇಷ್ಟು ಅಕ್ಕಿ ಬೇಕು, ನಮಗೆ ಪುಕ್ಕಟೆ ಕೊಡತಕ್ಕಂಥಾದ್ದು ಇದೆ, ಕೂಲಿ ಕೊಡುವುದಕ್ಕೆ ಆಗಿಲ್ಲ ಎಂದು ಒಂದು ಸಮೀಕ್ಷೆಯನ್ನು ರಾಜ್ಯ ಸರ್ಕಾರ ಮಾಡದೆ ಇದ್ದಾಗ ನೀವು ಎಷ್ಟು ಸೀರಿಯಸ್ ಆಗಿ ಇದ್ದೀರಿ ಈ ಆತ್ಮಹತ್ಯೆ ಪ್ರಕರಣದ ಬಗ್ಗೆ ಎಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಇವತ್ತು ಬಹಳ ಪ್ರಮುಖವಾಗಿ ರಾಜ್ಯಸರ್ಕಾರ ರೈತರ ಆತ್ಮಹತ್ಯೆ ವಿಚಾರದಲ್ಲಿ ಒಂದು ರೀತಿಯ ಉದಾಸೀನ, ಅಸಡ್ಡೆ, ಅಸಹನೀಯವಾಗಿರತಕ್ಕಂಥಾದ್ದು ಇದೆ. ಆ ಒಂದು ಕಾರಣದಿಂದ ಇವತ್ತು ಆತ್ಮಹತ್ಯೆ ಪ್ರಕರಣಗಳು ಸಾಮೂಹಿಕವಾಗಿ ಹೆಚ್ಚಾಗುತ್ತಿವೆ. ಇದು ಬಹಳ ಡೇಂಜರಸ್‌ಟ್ರೆಂಡ್. ಒಬ್ಬ ಸತ್ತರೆ ಪರವಾಗಿಲ್ಲ, ಈಗ ಯಾವ ಸ್ಥಿತಿಗೆ ಬಂದಿದ್ದಾರೆಂದರೆ, ನಾನು, ನನ್ನ ಮಗ, ನನ್ನ ಹೆಂಡತಿ ನನ್ನ ಮಕ್ಕಳು, ಇವರೆಲ್ಲರೂ ದುಃಖ ಪಡುತ್ತಾರಲ್ಲವೇ, ಎಲ್ಲರೂ ಆ ಕಡೆ ಹೋಗಿ ವಿಷ ಸೇವಿಸಿ ಸತ್ತು ಹೋಗೋಣವೆನ್ನುವ ಸ್ಥಿತಿಗೆ ಬರುತ್ತಿದ್ದಾರೆ. ನಾನು ಪ್ರೊ ನಂಜುಂಡಸ್ವಾಮಿವರನ್ನು ಅಪ್ರೀಶಿಯೇಟ್ ಮಾಡುತ್ತೇನೆ, ಅವರು ಈಗ ಈ ಸದನದಲ್ಲಿ ಇಲ್ಲ. ಮಾನ್ಯ ಎಸ್.ಬಂಗಾರಪ್ಪನವರನ್ನು ಅಪ್ರೀಶಿಯೇಟ್ ಮಾಡುತ್ತೇನೆ. Atleast they have gone and they have told. ಧೈರ್ಯವಾಗಿ ಹೇಳಿದ್ದಾರೆ, ನೀವು ಸಾಯಬೇಡಿ, ಫೈಟ್ ಮಾಡೋಣ, ಬ್ಯಾಂಕ್ ಸಾಲಕ್ಕೋಸ್ಕರ ಏಕೆ ಹೆದರುತ್ತೀರಿ ಎಂದು ಧೈರ್ಯದಿಂದ ಹೇಳಿದ್ದಾರೆ. ಈ ಎದೆಗಾರಿಕೆಯನ್ನು ತೋರಿಸದೇ ಇರುವಂತಹ ಮಾನ್ಯ ಮುಖ್ಯಮಂತ್ರಿಯವರನ್ನು ಇಟ್ಟುಕೊಂಡು, ನೀವು ಈ ಸಮಸ್ಯೆಯನ್ನು ಎದುರಿಸುತ್ತೇವೆಂದು ಹೇಳಿದರೆ, ಹೇಗೆ ಆಗುತ್ತದೆ? ನಿಜ, ಪ್ರಕೃತಿ ವಿಕೋಪವಿದೆ, ಮಳೆ ಬಂದಿಲ್ಲ, ಬರಗಾಲವಿದೆ, ಹಣವಿಲ್ಲ, ಇವೆಲ್ಲವನ್ನೂ ಒಪ್ಪಿಕೊಳ್ಳೋಣ, ಆದರೆ ನಿಮಗೆ ಎದೆಗಾರಿಕೆ ಬೇಡವೇ? ಇಲ್ಲ ನೀವು ಸಾಯಬೇಡಿ, ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಡಿ, ಸರ್ಕಾರ ತಾಯಿ ಇದ್ದ ಹಾಗೆ, ನಾನು ಎಲ್ಲೋ ಒಂದು ಕಡೆ ರಕ್ಷಣೆ ಮಾಡುತ್ತೇನೆ, ನೀವು ಬದುಕಿರಿ, ಎಂದು ಧೈರ್ಯವನ್ನು ತೋರಿಸದೇ ಇರುವಂತಹ ಈ ಸರ್ಕಾರಕ್ಕೆ, ನಾವು ಏನು ಹೇಳಬೇಕೆಂಬುದನ್ನು ಮಾನ್ಯ ಎಸ್.ಪಿ. ಮುದ್ದಹನುಮೇಗೌಡರೇ, ಹೇಳಿಬಿಟ್ಟರೆ ಆಯಿತು, ಏಕೆಂದರೆ ಅದನ್ನು ನಾನು ಇಲ್ಲಿ ಹೇಳಿಬಿಟ್ಟರೆ ಅವರು ಗಲಾಟೆ ಮಾಡುವುದಕ್ಕೆ ಶುರುಮಾಡಿಬಿಡುತ್ತಾರೆ. "ಓ ಸಿಂಧ್ಯರವರು ಹೀಗೆ ಮಾತನಾಡಿಬಿಟ್ಟರು" ಎಂದು ಹೇಳುತ್ತಾರೆ, ನಿಮ್ಮ ಸರ್ಕಾರಕ್ಕೆ ನಾವು ಏನೆಂದು ಹೇಳಬೇಕು? ಬಹಳ ಷಂಡತ್ವವಿರುವಂತಹ ಸರ್ಕಾರವಿದು, ಎಂದು ಹೇಳೋಣವೇ? ಅಥವಾ ಇನ್ನು ಏನು ಹೇಳಬೇಕೆನ್ನುವ ಭಾಷೆಯನ್ನು ನೀವೇ ಹೇಳಿಬಿಡಿ, ಅದನ್ನು ನಾವು ಒಪ್ಪಿಕೊಂಡು ಬಿಡುತ್ತೇವೆ ಈಗ ಕೊಪ್ಪಳದಲ್ಲಿ ನಡೆದಿರುವಂತಹ ಘಟನೆ ಏನು ಇದೆ, ಇದು ಇಡೀ ರಾಜ್ಯದಲ್ಲಿ ಪುನರಾವರ್ತನೆಯಾಗುತ್ತದೆ, I am very sorry Mr. Sageer Ahmed. ರಾಜ್ಯದಲ್ಲಿ 155 ತಾಲ್ಲೂಕುಗಳಲ್ಲಿ ಬರಗಾಲ ಇದ್ದರೂ ಸಹ 121 ತಾಲ್ಲೂಕುಗಳಲ್ಲಿ ಮಾತ್ರ ಬರಗಾಲವಿದೆಯೆಂದು ಕೇಂದ್ರ ಸರ್ಕಾರಕ್ಕೆ ಬರೆದುಕೊಟ್ಟಿದ್ದೀರಿ. ಇದನ್ನು ಯಾವ ಅಂಕಿಅಂಶಗಳ ಆಧಾರದ ಮೇಲೆ ಬರೆದುಕೊಟ್ಟಿದ್ದೀರಿ ಎಂಬುದನ್ನು ನಾನು ಕೇಳಬಯಸುತ್ತೇನೆ. ಈ ರೀತಿ ಬರೆದುಕೊಡಬೇಕದರೆ, ನಿಮ್ಮ ರೆವಿನ್ಯೂ ಸೆಕ್ರೆಟರಿಗಳು ಏನು ಮಾಡುತ್ತಿದ್ದಾರೆ. ತೋಟಗಾರಿಕೆಯ ಇಲಾಖಾ ಸೆಕ್ರೆಟರಿಗಳು ಏನು ಮಾಡುತ್ತಿದ್ದಾರೆ? ಇದು ಮೂಲಭೂತವಾದ ಸಮಸ್ಯೆ ಇರುವಂಥಾದ್ದು ಈ ರೀತಿ ಇರುವಾಗ ಆತ್ಮಹತ್ಯೆ ಮಾಡಿಕೊಳ್ಳದೇ ಏನು ಮಾಡುತ್ತಾರೆ? ನನಗೆ ಸಂಬಳ ಬರುತ್ತದೆ, ನಾನು ಎಂಎಲ್ಎ

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಆಗದೇ ಹೋದರೆ ಪೆನ್‌ಷನ್ ಬರುತ್ತದೆ, ನಾನು ಸತ್ತರೆ ನನ್ನ ಹೆಂಡತಿಗೆ ಪೆನ್‌ಷನ್ ಕೊಡುತ್ತಾರೆ. ಇದು ನಮ್ಮಲ್ಲಿ ವ್ಯವಸ್ಥೆ ಇರುವಂಥಾದ್ದು, ಆದರೆ ಅವರಿಗೆ ಯಾರು ಕೊಡುತ್ತಾರೆ? ಆದುದರಿಂದ ಅವರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ, ಇವತ್ತು ಚನ್ನಗಿರಿ ತಾಲ್ಲೂಕಿನಲ್ಲಿ ಅಡಿಕೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ, ಅಲ್ಲಿ ರೈತರು ಏನು ಮಾಡಬೇಕು? ಅವರು ಮರ್ಯಾದೆಯಿಂದ ಬದುಕಬೇಕಲ್ಲವೇ? ಕಾರ್ಮಿಕರಾದರೆ, ಅವರು ಎಲ್ಲೋ ಹೋಟೆಲ್‌ಗೆ ಹೋಗಿ ಕೆಲಸವನ್ನು ಮಾಡಬಹುದೆಂದು ಹೇಳಬಹುದು, ಅಂತಹ ಸ್ಥಿತಿ ಬರಬೇಕಾದರೆ, ನಿಮ್ಮ ರಾಜ್ಯ ಸರ್ಕಾರದ ಅಮಾನೀಯವಾದಂತಹ ದೃಷ್ಟಿಕೋನವೇ ಇದಕ್ಕೆ ಕಾರಣ. ನಿಮ್ಮಲ್ಲಿ ಮಾನವೀಯತೆ ಎಂಬುದು ಇಲ್ಲ, ಕರುಣೆ ಎಂಬುದು ಇಲ್ಲ.

(ಛೇರ್ಮನ್‌ರವರು ಬೆಲ್ ಮಾಡಿದರು)

ಶ್ರೀ ಪಿ.ಜಿ. ಆರ್. ಸಿಂಧ್ಯ :- ಛೇರ್ಮನ್‌ರವರೇ, ತಾವು ಬೆಲ್ ಹೊಡೆಯಬೇಡಿ, ಬೇಕಾದರೆ ನಾನು ಕುಳಿತುಕೊಂಡು ಬಿಡುತ್ತೇನೆ, ಬೆಲ್ ಹೊಡೆದ ಮೇಲೆ ನಾನು ಮಾತನಾಡುವುದಕ್ಕೆ ಸಿದ್ಧನಿಲ್ಲ. ಈ ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ, ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

\+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :- ಮಾನ್ಯ ಛೇರ್ಮನ್‌ರವರೇ, ಸಾವು ಎನ್ನುವ ವಿಚಾರ ಅತ್ಯಂತ ಸೂಕ್ಷ್ಮವಾದಂತಹದ್ದು, ಬಹಳ ಕಷ್ಟ, ಯಾವುದೇ ಒಂದು ಅಭಿಪ್ರಾಯವನ್ನು ನೇರವಾಗಿ, ವ್ಯಕ್ತಪಡಿಸುವಂಥಾದ್ದು, ಅದರಲ್ಲೂ ಇಂತಹ ಜವಾಬ್ದಾರಿಯುತವಾದಂತಹ ಸದನದ ಮೂಲಕ ವ್ಯಕ್ತಪಡಿಸುವಂಥಾದ್ದು, ಬಹಳ ಕಷ್ಟ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಮಾನ್ಯ ಛೇರ್ಮನ್‌ರವರೇ, ಇದು ಏನು ನಿಲುವಳಿ ಸೂಚನೆನಾ?......

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಛೇರ್ಮನ್‌ರವರೇ, ಮಾನ್ಯ ಎಸ್.ಪಿ. ಮುದ್ದಹನುಮೇಗೌಡರು, ಮಾನ್ಯ ಮಲ್ಲಿಕಾರ್ಜುನ ನಾಗಪ್ಪನವರ ಪರವಾಗಿ ಉತ್ತರವನ್ನು ಕೊಡುತ್ತಿದ್ದಾರಾ ಏನು ಎಂದು ಗೊತ್ತಿಲ್ಲ.

ಛೇರ್ಮನ್ : ಅವರು ಇನ್ನೂ ಪ್ರಾರಂಭ ಮಾಡಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಮಾನ್ಯ ಛೇರ್ಮನ್‌ರವರೇ, ನಮಗೂ ಏನೆಂಬುದು ತಿಳಿಯಬೇಕಲ್ಲಾ?

ಗೊಂದಲ

Sri Sp. Muddahanumegowda :- I want to participate in the dabate

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಛೇರ್ಮನ್‌ರವರೇ, ಇದು ಒಂದು ಹೊಸ ಪದ್ಧತಿಯಾಗಿದೆ. ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಏನು ಬೇಕಾದರೂ ಡಿಫೆಂಡ್ ಮಾಡಲಿ ಆದರೆ ಶಾಸಕರ ಮುಖಾಂತರ ಆಗುವಂಥಾದ್ದು ಏನಿದೆ ಇದು ಸರಿಯಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ಮಾನ್ಯ ಛೇರ್ಮನ್‌ರವರೇ, ನಾನು ಸರ್ಕಾರವನ್ನು ಡಿಫೆಂಡ್ ಮಾಡುವುದಕ್ಕೆ ನಿಂತಿಲ್ಲ, I want to express my views with regard to the subject. Are you not prepared to hear me? why are you not prepared to hear me? I want to express my views here. I am not.....

Mr. Chairman :- Adjournment motion ಅನ್ನು allow ಮಾಡಿ exculsive ಆಗಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆಯೇ? ಇಲ್ಲ ಅವಕಾಶ ಕೊಟ್ಟಿಲ್ಲ, ಅಂದರೆ ಇದನ್ನು ನಿಯಮ 69ರಡಿಯಲ್ಲಿ ಅಲೋ ಮಾಡಿದ್ದಾರೋ, ಅಥವಾ ಹಾಗೇ ಅಲೋ ಮಾಡಿದ್ದಾರೋ, ಇಲ್ಲ ಶೂನ್ಯವೇಳೆಯಲ್ಲಿ ಅಲೋ ಮಾಡಿದ್ದಾರೋ ಏನೋ ಒಟ್ಟಿನಲ್ಲಿ ಮಾಡಿದ್ದಾರೆ. ವಿಷಯದ ಗಾಂಭೀರ್ಯತೆಯ ಮೇಲೆ ಮಾನ್ಯ ವಿಧಾನಸಭಾಧ್ಯಕ್ಷರು ಮಾನ್ಯ ಸದಸ್ಯರ ಹೆಸರನ್ನು ನಮೂದು ಮಾಡಿ ಸಭೆಯಲ್ಲಿ ಮಾತನಾಡಲು ಅವಕಾಶ ಕೊಡುವಂತೆ ಹೇಳಿದ್ದಾರೆ, ಅವರು ಇನ್ನೂ ವಿಷಯವನ್ನು ಮಾತನಾಡಲು ಪ್ರಾರಂಭ ಮಾಡಿಲ್ಲ. ಅವರು ಸರ್ಕಾರದ ಪರವಾಗಿ ಏನಾದರೂ ಮಾತನಾಡಿದ್ದರೆ, ನೀವು ತಕರಾರು ಮಾಡಿ. ನೀವು ಹೇಳಿದ್ದಕ್ಕೆ ಅವರು ಸಮರ್ಥನೆ ಮಾಡಿದರು.

Sri. S. Suresh kumar :- In What capacity a Member from the Ruling party......

Sri. SP. Muddahanumagowda :- I am Member here, I have got very right. I am sorry.

ಮಾನ್ಯ ಎಸ್. ಸುರೇಶ್‌ಕುಮಾರ್‌ರವರ ಅಭಿಪ್ರಾಯಕ್ಕೆ ನಾನು ವಿರೋಧ ಮಾಡುತ್ತೇನೆ.

Mr. Chairman :- Dont' assume. He may not be answering, why you assume that fact? I think, he may not be answering, why you assume I think, he has some point of view. Let him till.

ಮಾನ್ಯ ಸದಸ್ಯರು ಏನು ಹೇಳುತ್ತಾರೆಂಬುದನ್ನು ನೋಡೋಣ.

ಶ್ರೀ ಎಸ್. ಸುರೇಶ್ ಕುಮಾರ್ :– ಮಾನ್ಯ ಛೇರ್ಮನ್‌ರವರೇ, ಡಿಮಾಂಡ್ಸ್ ಮೇಲೆ ಚರ್ಚೆಯಾದರೆ ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬಹುದು. ಆದರ ಇದು new precedent ಆಗುತ್ತದೆ.

ಛೇರ್ಮನ್ :– ಈಗ ಮಾನ್ಯ ಸದಸ್ಯರು ಏನು ಮಾತನಾಡುತ್ತಾರೆಂಬುದನ್ನು ಕೇಳೋಣ. ಮಾನ್ಯ ಸಭಾಧ್ಯಕ್ಷರು, ಅವರಿಗೆ ಮಾತನಾಡುವುದಕ್ಕೆ ಅಲೋ ಮಾಡಿದ್ದಾರೆ.

ಶಿವಾನಂದ ಎಸ್. ಪಾಟೀಲ್ :– ಮಾನ್ಯ ಛೇರ್ಮನ್‌ರವರೇ, ನಾನು ನಿಮ್ಮಲ್ಲಿ ಒಂದು ಸಬ್‌ಮಿಷನ್ ಮಾಡಿಕೊಳ್ಳುತ್ತೇನೆ, ತಾವು ಅಧ್ಯಕ್ಷಪೀಠದಲ್ಲಿ ಉಪಾಧ್ಯಕ್ಷರಾಗಿ ಕುಳಿತಿದ್ದೀರಿ, I want to bring it to yout notice.

ಛೇರ್ಮನ್ :– ಇಲ್ಲ, ತಾವು Misinterpret ಮಾಡುತ್ತಿದ್ದೀರಿ, ಅಧ್ಯಕ್ಷರು, ಅವರಿಗೆ ಅಲೋ ಮಾಡಿದ್ದಾರೆ, ಆದರೆ ನಿಲುವಳಿ ಸೂಚನೆಯಡಿಯಲ್ಲಿ ಅಲ್ಲ. ತಾವು ಹೇಳಿದ್ದೀರಿ, ಅವರೂ ಪಾರ್ಟಿಸಿಪೇಟ್ ಮಾಡುತ್ತೇವೆಂದು ಹೇಳಿದ್ದಾರೆ, ತಾವು ಏಕೆ Prevent ಕೊಡುತ್ತೀರಿ? ಅವರು ರಿಪ್ಲೈ ಮಾಡುತ್ತಿಲ್ಲ,

Sri S. Sureshkumar :- My humble submission is, when the Minister is here he should answer it...

ಅಲ್ಲಿಗೆ ವಿಷಯ ಮುಕ್ತಾಯವಾಗುತ್ತದೆ,

Mr Chairman :- He will not reply......

ನಿಯಮ 69ರ ಅಡಿಯಲ್ಲಿ ಅವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಾರೆ. As a Hon'ble Member of the House, he has every right to tell his point of view, let metell ಅವರು ರಿಪ್ಲೈ ಮಾಡಿದರೆ, ನೀವು ಅಬ್ಜೆಕ್ಟ್ ಮಾಡಿ, that is the duty of the government, why you should object it? ನೀವು ಮಾತನಾಡಬಹುದು.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಛೇರ್ಮನ್‌ರವರೇ, ನಾವು ಮಾತನಾಡಿದ್ದಕ್ಕೆ ಗೌವರ್ನಮೆಂಟ್ ಉತ್ತರ ಕೊಡಬೇಕು.

ಛೇರ್ಮನ್ :- ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಮಾತನಾಡಲು ಅಲೋ, ಮಾಡಿದ್ದಾರೆ, ಅವರು ರಿಪ್ಲೈ ಮಾಡುತ್ತಿಲ್ಲ, ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಛೇರ್ಮನ್‌ರವರೇ, ಸರ್ಕಾರದ ಮಿನಿಸ್ಟ್ರಿಗೆ ಉತ್ತರವನ್ನು ಕೊಡುವುದಕ್ಕೆ Standing codnsel ಇದ್ದರೆ, ಅದನ್ನು ವೆಲ್‌ಕಂ ಮಾಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಮಾನ್ಯ ಛೇರ್ಮನ್‌ರವರೇ, ತಮಗೆ ನಾನು ಒಂದು ಸಬ್‌ಮಿಷನ್ ಮಾಡುವುದೇನೆಂದರೆ, ಇವತ್ತು ಬೆಳಿಗ್ಗೆ ಸಾಕಷ್ಟು ರಾದ್ಧಾಂತವಾಯಿತು, ನಮ್ಮಲ್ಲಿ ಎಲ್ಲರೂ ಸದನದಿಂದ expel ಆಗಿ ಹೊರಗೆ ಹೋದವರಲ್ಲಿ, ನಾನೊಬ್ಬನೇ ಒಳಗೆ ಇದ್ದೆನು, ನಿಮಗೂ ಗೊತ್ತಿದೆ, ಮಾನ್ಯ ಸಭಾಧ್ಯಕ್ಷರು ನಿಲುವಳಿ ಸೂಚನೆಗೆ ಅಲೋ ಮಾಡಿಲ್ಲವೆಂದು Proceedings stop ಮಾಡಿದ್ದರು, ಅಂದಮೇಲೆ ನಿಲುವಳಿ ಸೂಚನೆಯನ್ನು ಮೂವ್ ಮಾಡಿದ್ದವರು ಯಾರು? Principle question ಇಲ್ಲಿ arise ಆಗುತ್ತದೆ, ಈ ಕಡೆಯವರಾ ಅಥವಾ ಆ ಕಡೆಯಿರುವವರಾ?

ಛೇರ್ಮನ್ :- ಇದನ್ನು ಯಾವುದೇ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಹಲವಾರು ದಾರಿಗಳು ಇವೆ. ಈಗ ಈ ವಿಷಯವನ್ನು 69ರ ನಿಯಮದಡಿಯಲ್ಲಿ ಅಲೋ ಮಾಡಿದ್ದಾರೆ, ತಾವು ಹೇಳಿದ್ದೀರಿ, ಮಾತನಾಡಬಹುದು, ಈಗ ಮಾನ್ಯ ಸದಸ್ಯರು ಏನು ಹೇಳಬೇಕೆಂದು ಇದ್ದಾರೋ, ಅದನ್ನು ಹೇಳಲಿ, ನಂತರ ನಾವು ಮಾತನಾಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಮಾನ್ಯ ಛೇರ್ಮನ್‌ರವರೇ, Is a party for a preliminary submission?

ಛೇರ್ಮನ್ :- ನಿಯಮ 69 ರ ಅಡಿಯಲ್ಲಿ ರೂಲಿಂಗ್ ಪಾರ್ಟಿಯವರು ಕೊಟ್ಟಂತಹ ಅನೇಕ ಉದಾಹರಣೆಗಳನ್ನು ನಾನು ಕೇಳಿದ್ದೇನೆ, ಅದರಲ್ಲಿ ನಾನೂ ಭಾಗವಹಿಸಿದ್ದೇನೆ.

Sri. Shivanada S. Patil :- Since you being a ruling party Member, how can you prevent Adjournment Motion?

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಛೇರ್ಮನ್‌ರವರೇ, ತಾವು ಹೊಸ ಸಂಪ್ರದಾಯಗಳನ್ನು ಹಾಕುತ್ತಿದ್ದೀರಿ, ಇವತ್ತು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ, ಮಾನ್ಯ ಮಂತ್ರಿಯವರ ಪರವಾಗಿ ಮತ್ತೆ ರೂಲಿಂಗ್ ಪಾರ್ಟಿ ಸದಸ್ಯರುಗಳ ಪರವಾಗಿ ಉತ್ತರವನ್ನು ಕೊಡುವಂಥಾದ್ದು ನಡೆಯುತ್ತಿದೆ, ಮಾನ್ಯ ಮಂತ್ರಿಗಳಿಗೆ, ಉತ್ತರವನ್ನು ಹೇಳುವ ಕೆಪ್ಯಾಸಿಟಿ ಇಲ್ಲವೋ? ಇಲ್ಲಿ ಇದು ಸರಿಯಾಗುವುದಿಲ್ಲ.

ಗೊಂದಲ

ಶ್ರೀ ಹೆಚ್.ಎಂ. ರೇವಣ್ಣ :- ಮಾನ್ಯ ಛೇರ್ಮನ್‌ರವರೇ, ರೂಲಿಂಗ್ ಪಾರ್ಟಿ ಸದಸ್ಯರು ಮಾತನಾಡಬಾರದು ಎಂದು ಎಲ್ಲಿದೆ?

ಶ್ರೀ ಆರಗಜ್ಞಾನೇಂದ್ರ :- ಮಾನ್ಯ ಛೇರ್ಮನ್‌ವರೇ, ಈ ಸಭೆಯೇ ಒಂದು ರೀತಿಯ ಗೊಂದಲವಾಗಿದೆ, ಈಗ ಮತ್ತೆ ಮತ್ತೆ ಗೊಂದಲವಾಗುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದೀರಿ, ಈ ರೀತಿ ಮಾತನಾಡುವುದಕ್ಕೆ ನಿಯಮಾವಳಿಯಲ್ಲಿ ಅವಕಾಶ ಇದೆಯೇ? ಈಗ ನಾವು ನಿಯಮಾವಳಿಯ ಅಡಿಯಲ್ಲಿ ಏನು ನೋಟಿಸ್ ಕೊಟ್ಟಿದ್ದೇವೆ ಅದರಲ್ಲಿ ಅವಕಾಶವಿದೆಯೆ? ಅದನ್ನು ನೋಡಿ, ತಾವು ಅವಕಾಶವನ್ನು ಕೊಡಿ, ರೂಲಿಂಗ್ ಕೊಡಿ, ಆಗಲಿ, ನಾಳೆ ದಿವಸ ಏನಾದರೂ ಇಂತಹ ಸಂದರ್ಭ ಬಂದರೆ ನಾವು ಕೇಳುವುದಕ್ಕೆ ಆಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :- ಮಾನ್ಯ ಛೇರ್ಮನ್‌ರವರೇ, ಈಗ ನಿಯಮ 69ರ ಅಡಿಯಲ್ಲಿ ಇಲ್ಲಿಯವರೆಗೆ ಚರ್ಚೆ ನಡೆದಿರುವಂಥಾದ್ದು ಬರ ಪರಿಹಾರದ ಬಗ್ಗೆಯೂ ಇಲ್ಲಿ ಚರ್ಚೆ ನಡೆದಿರುವಂತಹ ಸಂದರ್ಭಗಳಲ್ಲೂ, ನಮ್ಮ ಕ್ಷೇತ್ರಗಳಲ್ಲೂ ಬರದ ಬಗ್ಗೆ ಮಾತನಾಡುವುದಕ್ಕೆ, ತಾವು ಅವಕಾಶವನ್ನು ಒದಗಿಸಿಕೊಟ್ಟಿದ್ದೀರಿ, ಈಗ ಈ ವಿಷಯವೂ ನಿಯಮ 69ರ ಅಡಿಯಲ್ಲಿ ಪ್ರಿಲಿಮಿನರಿ ಸಬ್‌ಮಿಷನ್ ಎಂದು ತಾವೇ ಹೇಳಿದ್ದೀರಿ, ಅದಕ್ಕೆ ಅನುಮತಿಯನ್ನು ಪ್ರಿಲಿಮಿನರಿ ಸಬ್‌ಮಿಷನ್ ಎಂದು ಹೇಳಿದ್ದೀರಿ, ಇನ್ನು ಯಾವ ನಿಯಮದಡಿಯಲ್ಲಿ ಚರ್ಚೆ ಮಾಡಬೇಕೆಂಬ ಬಗ್ಗೆ ತಾವು ಅನುಮತಿಯನ್ನು ಕೊಡಬೇಕು, ಅದಕ್ಕೆ ಆ ಸದಸ್ಯರಿಗೆ ಹಕ್ಕು ಇಲ್ಲವೆಂದು ಇದ್ದರೆ ತಾವು ಹೇಳಿ; ಅವರೇ ಹೀಗೆ ಆಗಬೇಕೆಂದು ಹೇಳಿದರೆ ಹೇಗೆ ಆಗುತ್ತದೆ?

ಛೇರ್ಮನ್ :- ಈಗ ನಾನು ಅಧ್ಯಕ್ಷರ ಆದೇಶದ ಮೇರೆಗೆ ವಿಷಯ ಏನಿದೆ, ಎಂಬುದನ್ನು ಓದುತ್ತೇನೆ, ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅನುಮತಿಯನ್ನು ನೀಡಿದೆ, ಅವರು ಹೇಳಿದ್ದನ್ನು ತಾವು ಕೇಳಿದಿರೋ ಇಲ್ಲವೋ ಗೊತ್ತಿಲ್ಲ ಈ ರೀತಿ ಅನುಮತಿಯನ್ನು ನೀಡಿರುವಂತಹ ಸಂದರ್ಭಗಳಲ್ಲಿ ಸದನದ ಎಲ್ಲಾ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿರುವಂತಹ ನಿದರ್ಶನಗಳು ಇವೆ.

2.50 ಪಿ.ಎಂ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಅದಕ್ಕೆ ನಾವು ಹೇಳುತ್ತಿದ್ದೇವೆ, ಚೇರ್‌ನಲ್ಲಿದ್ದವರು ತಾವೂ ಕೂಡ ಅನೌನ್ಸ್ ಮಾಡಲಿಲ್ಲ.

ಮಾನ್ಯ ಸದಸ್ಯರು :- ಮಾನ್ಯ ಸಭಾಧ್ಯಕ್ಷರು ಆಗಲೇ ಹೇಳಿದ್ದಾರೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ :- ನಾನು ವಿಷಯದ ಗಾಂಭೀರ್ಯತೆಯನ್ನು ಅರ್ಥಮಾಡಿಕೊಂಡು ಮಾನ್ಯ ಸಭಾಧ್ಯಕ್ಷರಿಗೆ ಈ ಚರ್ಚೆಯಲ್ಲಿ ಭಾಗವಹಿಸಲು ನನಗೂ ಅವಕಾಶ ಮಾಡಿಕೊಡಿ ಎಂದು ಒಂದು ಮನವಿಯನ್ನು ಕಳುಹಿಸಿಕೊಟ್ಟೆ; ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಹೊರಟೆ, ಅಷ್ಟು ಹೊತ್ತಿಗೆ ನನಗೆ ಅವಕಾಶ ಮಾಡಿಕೊಡುವುದನ್ನು ಮಾನ್ಯ ಸದಸ್ಯರು ವಿರೋಧ ಮಾಡಿದರು.

ಛೇರ್ಮನ್ :- ಅವರ ಇಚ್ಛೆ ಇಷ್ಟ, ತಾವು ಏನೆ ಹೇಳಿದರೂ ಮಂತ್ರಿಗಳು ಹೇಳುವ ಉತ್ತರವನ್ನು ನಿರೀಕ್ಷೆ ಮಾಡುವುದಿಲ್ಲ, ಅದನ್ನು ಬಿಟ್ಟು ಸಮರ್ಥನೆ ಮಾಡುವಂತಹ ವಿಚಾರವನ್ನು ಹೇಳಬಹುದು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ನಾವೆಲ್ಲಾ ಕಾಮನ್‌ಸೆನ್ಸ್ ಇಟ್ಟುಕೊಂಡು ಇಲ್ಲಿ ಸದಸ್ಯರಾಗಿ ಬಂದಿದ್ದೇವೆ ನಮಗೆ ನಮ್ಮ ಮಿತಿ ಗೊತ್ತಿದೆ, ನಮ್ಮ ಜವಾಬ್ದಾರಿ ಗೊತ್ತಿದೆ, ನಾವು ಅಷ್ಟೊಂದು ಬೇಜವಾಬ್ದಾರಿಯಿಂದ ಕುಳಿತುಕೊಂಡು, ನಮ್ಮ ಶಾಸಕರ, ಸದಸ್ಯತ್ವವನ್ನು ನಡೆಸುವುದಕ್ಕೆ ನಾವು ಇಲ್ಲಿ ಬಂದಿಲ್ಲ. ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದೇವೆ, ಈಗಲೂ ನಡೆದುಕೊಳ್ಳುತ್ತೇವೆ, ಮುಂದೆಯೂ ನಡೆದುಕೊಳ್ಳುತ್ತೇವೆ, I am not here to defend the

Government. As a Member, I have got every right to speak. I cannot understand, why my friends are trying to interfere. ನಾನು ಈ ಸದನದ ಒಬ್ಬ ಗೌರವಾನ್ವಿತ ಸದಸ್ಯನಾಗಿ ನನಗೆ ತಿಳಿದಿರುವ ಅಭಿಪ್ರಾಯವನ್ನು ನಿಯಮ 69ರ ಅಡಿಯಲ್ಲಿ ಯಾವುದೇ ಗಂಭೀರವಾದ ವಿಷಯ ಬಂದಂತಹ ಸಂದರ್ಭದಲ್ಲಿ ಅದನ್ನು ವ್ಯಕ್ತಪಡಿಸುವುದಕ್ಕೆ ನನಗೆ ಅಧಿಕಾರವಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :– ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆ ಉದ್ಭವವಾದದ್ದು ಇಲ್ಲಿಯೂ ಅಲ್ಲ ಅಲ್ಲಿಯೂ ಅಲ್ಲ ನಿಯಮ 69 ರ ಅಡಿಯಲ್ಲಿ ಅಲೋ ಮಾಡಿದ್ದೀರಾ ಇಲ್ಲವೋ ಎಂಬುದನ್ನು ಅನೌನ್ಸ್ ಮಾಡಲಿಲ್ಲ, ಅಡ್ಜರ್ನ್‌ಮೆಂಟ್ ಮೋಷನ್ ಹೌದೋ ಅಲ್ಲವೋ ಅಥವಾ ನಿಯಮ 69 ಕನ್ವರ್ಟ್ ಮಾಡಿದ್ದರ ಬಗ್ಗೆ ಹೇಳಲಿಲ್ಲ. ಶ್ರೀ ಮುದ್ದಹನುಮೇಗೌಡರಿಗೆ ಅವಕಾಶ ಕೊಡಲಿಕ್ಕೆ ನನ್ನ ಅಭ್ಯಂತರವಿಲ್ಲ. ಅದನ್ನು ಪ್ರಕಟಣೆ ಮಾಡಿದ್ದರೆ ಇಲ್ಲಿ ಚರ್ಚೆ ನಡೆಯುತ್ತಿರಲಿಲ್ಲ. ಇಲ್ಲಿ ವಿರೋಧ ಮಾಡುವ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ.

ಛೇರ್ಮನ್ :– ಮಾನ್ಯ ಅಧ್ಯಕ್ಷರ ಆದೇಶ ಈ ರೀತಿ ಇದೆಯೆಂದು ನಾನು ಆಗಲೇ ಹೇಳಿದ್ದೇನೆ. ನಾವು ಈಗಾಗಲೇ ಬಹಳಷ್ಟು ಮುಂದೆ ಬಂದಿದ್ದೇವೆ. ಮೂರ್‍ನಾಲ್ಕು ಜನರು ಚರ್ಚೆಯಲ್ಲಿ ಭಾಗವಹಿಸಿದ್ದೀರಿ ಇವರು ಮಾನ್ಯ ಅಧ್ಯಕ್ಷರ ಆದೇಶದ ಪ್ರಕಾರ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುತ್ತಿದ್ದಾರೆಂಬ ಪ್ರಿಸಂಪ್ಷನ್ ಇದ್ದೇ ಇದೆ. ದಯವಿಟ್ಟು ಮತ್ತೆ ಹಿಂದಕ್ಕೆ ಹೋಗುವುದರ ಬದಲಾಗಿ, ಇದನ್ನೇ ಮುಂದುವರೆಸಿ, ಕಂಕ್ಲೂಡ್ ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಪ್ರಾರಂಭಿಕ ಹಂತದಲ್ಲಿಯೇ ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಹೊರಟೆ, ಸರ್ಕಾರದ ಪರವಾಗಿ ಉತ್ತರ ಕೊಡುವುದು ನನ್ನ ಕೆಲಸವಲ್ಲ, ಹಾಗೆಯೇ ಮಾನ್ಯ ವಿರೋಧ ಪಕ್ಷದ ಮಾನ್ಯ ಗೌರವಾನ್ವಿತ ಸದಸ್ಯರು ಮಾತನಾಡಿದ್ದಾರೆ ಅವರ ಭಾಷಣವನ್ನು ಟೀಕೆ ಮಾಡುವ ಕೆಲಸಕ್ಕೆ ನಾನು ಹೋಗುವುದಿಲ್ಲ, ಸಾವು ನೋವು ಅತ್ಯಂತ ಸೂಕ್ಷ್ಮವಾದ ವಿಷಯ. ಒಬ್ಬ ಹಾರ್ಡ್‌ಕೋರ್ ಕ್ರಿಮಿನಲ್ ಸತ್ತರೂ ಕೂಡ ಆಯ್ಯೋ ಪಾಪ ಎನ್ನುವ ಸಂಸ್ಕೃತಿಯನ್ನು ಇಟ್ಟುಕೊಂಡಿರುವ ಜನ ನಾವು. ವಿರೋಧ ಪಕ್ಷವನ್ನು ಟೀಕೆ ಮಾಡಬೇಕೆಂದು ದೃಷ್ಟಿಯನ್ನಿಟ್ಟುಕೊಂಡು ಇಲ್ಲಿ ಮಾತನಾಡಲು ನಾನು ನಿಂತಿಲ್ಲ. ಆದರೆ ಅತ್ಯಂತ ಗೌರವಾನ್ವಿತ ಈ ಸದನದ ಸದಸ್ಯರುಗಳಾಗಿ ನಮ್ಮ ಜವಾಬ್ದಾರಿಗಳೇನು ಎನ್ನುವುದರ ಬಗ್ಗೆ ಕೆಲವು ವಿಷಯಗಳನ್ನು ಸದನದ ವಿವೇಚನೆಗೆ ಬಿಡಬೇಕೆನ್ನುವ ದೃಷ್ಟಿಯಿಂದ ಅಷ್ಟೇ ನಾನು ಮಾತನಾಡಲು ನಿಂತಿದ್ದೇನೆ. ನಾವು ಇಲ್ಲಿ ಕೆಲವು ಕಾನೂನುಗಳನ್ನು ಮಾಡಿದ್ದೇವೆ, ಕೆಲವು ಗೌರವಾನ್ವಿತ ಸದಸ್ಯರು ವಕೀಲರು ಇದ್ದಾರೆ, ಆದುದರಿಂದ ನಾವು ಆ ವಿಷಯವನ್ನು ಪುನರ್‌ಪರಿಶೀಲನೆ ಮಾಡುವ ಅವಶ್ಯಕತೆ ಇರಬಹುದು ಎನ್ನುವ ಹಿನ್ನೆಲೆಯಲ್ಲಿ ಒಂದೆರಡು ವಿಚಾರಗಳನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ ಹೇಳಲು ಹೊರಟೆ. section 309 of IPC; I will just have a plain reading of section 309 'whoever attempts to commit suicide and does any act towards the commission of such affair, shall be punished with simple imprisonment for a term, which may extend to one year or with fine or both. ಈ ದೇಶದಲ್ಲಿ ಎಂತಹ ಕಾನೂನು ಮಾಡಿದ್ದೇವೆಂದರೆ, ಯಾರಾದರೂ ಒಬ್ಬ ವ್ಯಕ್ತಿ ತಾನು ಸಾಯಬೇಕೆನ್ನುವ ಪ್ರಯತ್ನವನ್ನು ಮಾಡಿದಾಗ ಆ ಪ್ರಯತ್ನದಲ್ಲಿ ಆತ ವಿಫಲನಾದರೆ, ತಪ್ಪು ಆತನಿಗೆ ಶಿಕ್ಷೆ ಆದರೆ ಸಫಲನಾದರೆ ಅದು ಇಲ್ಲ; This provision will not apply, if he succeeds in committing suicide.

If he fails to commit suicide, that becomes an offence U/S 309. We are going to prosecute him and he is liable for punishment upto one year. ಇದು ನಮ್ಮ ದೇಶದ ಕಾನೂನು, ಇದರಲ್ಲಿ ಯಾವ ಕಾನೂನು ಅಡಿಯಲ್ಲಿ ಆತ ಆತ್ಮಹತ್ಯೆ ಮಾಡಿಕೊಳ್ಳಲು ಅಧಿಕಾರವಿದೆ ಎನ್ನುವುದನ್ನು ಹೇಳಲಿಲ್ಲ, Right to die was once a subject matter before the supreme court, the validity of Section 309 was also questioned before the Supreme Court. Ultimately, the supreme Court came to the conclusion that, the provision of Section 309 is valid. A person who tries to commit an offence is liable to be punished. He is liable for prosecution. ಆದುದರಿಂದ ನಮ್ಮ ದೇಶದಲ್ಲಿ ಮನುಷ್ಯನಿಗೆ ಸಾಯುವುದಕ್ಕೆ ಅಧಿಕಾರವಿಲ್ಲ, ಇದು ನಾವೇ ಮಾಡಿರುವ ಕಾನೂನು, ಇದೊಂದು ಕಡೆ. ನಾನು ಪತ್ರಿಕೆ ಓದಿ ಅಷ್ಟೇ ಮಾಹಿತಿ ತಿಳಿದುಕೊಂಡಿರುವುದು ಎಲ್ಲಿ ಏನು ಎನ್ನುವುದು ಗೊತ್ತಿಲ್ಲ ಕೊಪ್ಪಳ ತಾಲ್ಲೂಕಿನಲ್ಲಿ 6 ಜನರು ಸತ್ತಿದ್ದಾರೆ, I will not go to the details of this incident ಆದರೆ ನಾನು ಒಂದು ವಿಷಯವನ್ನು ಹೇಳುವುಧಕ್ಕೆ ಇಷ್ಟಪಡುತ್ತೇನೆ, ಸತ್ತವರು ಯಾರು? ಏತಕ್ಕೆ ಸತ್ತರು, ಏನು ಕಾರಣದಿಂದ ಸತ್ತರು, That is once again a subject matter for discussion. We have to take all those points into consideration. ಒಂದೇ ಸಲ ಒಂದು ಕುಟುಂಬದ 6 ಜನ ಸತ್ತರೆಂದ ತಕ್ಷಣ ಅದರಲ್ಲಿ ಸರ್ಕಾರದ ವೈಫಲ್ಯವನ್ನು, ಅಥವಾ ಇನ್ನೊಬ್ಬರ ವೈಫಲ್ಯವನ್ನು ಅಥವಾ ಸ್ಥಳೀಯ ಅಧಿಕಾರಿಗಳ ವೈಫಲ್ಯವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುವುದಕ್ಕಿಂತ ಮುಂಚೆ It is our bounded duty. It is also our responsibility to find out exactly the reasons for committing such suicide. We have to study the human psychology. ಈ ಸೂಸೈಡ್‌ಗೆ ಕಾರಣಗಳೇನೇನು ಇವೆ; ವಿಚಿತ್ರವಾದ ಸೂಸೈಡ್‌ಗಳು ನಡೆಯುತ್ತಿವೆ, ಇವತ್ತು ಇವರು ರೈತರೇ ಅಲ್ಲವೇ ಎನ್ನುವ ಪ್ರಶ್ನೆಗೆ ನಾನು ಹೋಗುವುದಿಲ್ಲ ಇನ್‌ಸಿಡೆಂಟ್ ಅದನ್ನು ಓದತಕ್ಕಂತಹ ಸಂದರ್ಭದಲ್ಲಿ The head of family. who committed a suicide. he was running a Hotel. I think, his aim was not committing sucicide. The person, who is heading the family, six members of his family have committee suicide, that man, the head of the family is running a Hotel. But, still we are arguing here, that the family of farmer's committed suicide and Government has utterly failed to come to the rescue of those family. ಇದು ಬೇರೆ ವಿಷಯ, ನಾನು ಆ ಪದವನ್ನು ಉಪಯೋಗಿಸಲು ತಯಾರಾಗಿಲ್ಲ. ನಾನು ಮೊದಲೇ ಹೇಳಿದಂತೆ ಸಾವು ಅತ್ಯಂತ ಸೂಕ್ಷ್ಮವಾದಂಥ ವಿಷಯ, ಯಾವುದೇ ಕುಟುಂಬದ ವ್ಯಕ್ತಿ ಸತ್ತಂತಹ ಸಂದರ್ಭದಲ್ಲಿ ಆ ಕುಟುಂಬದ ಪರವಾಗಿ ನಮ್ಮ ಭಾವನೆಗಳನ್ನು ವ್ಯಕ್ತಪಡಿಸತಕ್ಕಂತಹದ್ದು ನಮ್ಮ ಧರ್ಮ ಅದರ ಪ್ರಕಾರ ನಾವು ಮಾಡುತ್ತೇವೆ. ಆದರೆ ನಾನು ಏನು ಹೇಳುತ್ತೇನೆಂದರೆ, ಒಂದು ಹೋಟೆಲ್ ನಡೆಸುವ ಕುಟುಂಬದ ಸದಸ್ಯರು 6 ಜನರಲ್ಲಿ ನಾಲ್ಕೈದು ಜನರು ಕೂಡ 25–26 ವರ್ಷ ವಯಸ್ಸಿನವರು Youths at ageg 25-26, they also committeed suicide. only one lady aged about 55 years, she has joined those team.. 25–26

ವರ್ಷಗಳ ಯುವಕರು ಒಂದು ಕುಟುಂಬದವರು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಏನು ಕಾರಣ? ಇಂತಹ ಘಟನೆಯ ಹಿಂದೆ ಇರತಕ್ಕಂತಹ ಸಾಮಾಜಿಕ ದೃಷ್ಟಿ ಹಾಗೂ ಕಾರಣಗಳೇನಿವೆ ಅದರ ಬಗ್ಗೆ ಅಧ್ಯಯನ ಮಾಡಿ ಮುಂದೆ ಅಂತಹ ಘಟನೆಗಳನ್ನು ತಡೆಹಿಡಿಯುವುದಕ್ಕೆ ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳೇನು? ಆ ಬಗ್ಗೆ ಸಲಹೆ ಕೊಡತಕ್ಕಂಥ ಜವಾಬ್ದಾರಿ ಇವತ್ತು ಈ ಸದನಕ್ಕೆ ಇದೆ. ಈ ಪ್ರಾಣ ಹಾಗೂ ಆಸ್ತಿಯ ರಕ್ಷಣೆಯ ಜವಾಬ್ದಾರಿ ಸರ್ಕಾರದ ಮುಂದ್ದೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ; ಪ್ರತಿಯೊಬ್ಬರಿಗೂ ಕೂಡ ಈ ಪ್ರಪಂಚದಲ್ಲಿ ಬದುಕುವ ಹಕ್ಕಿದೆ, ಅದರ ರಕ್ಷಣೆಯು ಸರ್ಕಾರದ ಜವಾಬ್ದಾರಿ ಆದರೆ ಯಾವ ಸಂದರ್ಭದಲ್ಲಿ ಸರ್ಕಾರ ಆ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ, ಆ ಜವಾಬ್ದಾರಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾವಾಬ್ದಾರಿಯುತವಾಗಿ ನಿರ್ವಹಿಸಬೇಕಾದರೆ ಸಾರ್ವಜನಿಕರ ಸಹಕಾರ ಎಷ್ಟರ ಮಟ್ಟಿಗೆ ಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ನೋಡಬೇಕಾಗುತ್ತದೆ. ರೈತರು ದೇಶದ ಎಲ್ಲಾ ಕಡೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆನ್ನುವುದನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ, ಆದರೆ, ಯಾವ ಕಾರಣದಿಂದ ಆತ್ಮಹತ್ಯೆಯಾಯಿತೆನ್ನುವುದರ ಬಗ್ಗೆ ವಿವರಣೆ ಪಡೆಯುವುದು, ತಿಳಿದುಕೊಳ್ಳುವ ಅಧಿಕಾರವೂ ಕೂಡ ನಮಗಿದೆ ಅದನ್ನು ತಿಳಿದುಕೊಳ್ಳತಕ್ಕಂಥ ಕೆಲಸವನ್ನು ನಾವು ಮಾಡಲೇ ಇಲ್ಲ ಒಂದು ಕುಟುಂಬದವರು ಸತ್ತರೆಂದರೆ ಹೋಗಿ ಒಂದು ಲಕ್ಷ ರೂಪಾಯಿಗಳನ್ನು ಕೊಡುವುದು, ಮೋಟೋ ಹಾಕಿಸಿಕೊಳ್ಳುವುದು, ನಾವು ಕುಟುಂಬಕ್ಕೆ ಪರಿಹಾರ ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುವ ಕೆಲಸದಲ್ಲೇ ನಾವು ತಲ್ಲಿನರಾಗಿದ್ದೇವೆ. ಆದರೆ ನಿಜವಾದಂಥ ಕಾರಣವೇನು? ಯಾವ ಕಾರಣಕ್ಕೋಸ್ಕರ ಆ ಕುಟುಂಬ ಆತ್ಮಹತ್ಯೆಯ ಹಾದಿ ಹಿಡಿದಿದೆ, ಈ ಕುಟುಂಬವನ್ನು ನಾವು ಯಾವ ರೀತಿ ರಕ್ಷಣೆ ಮಾಡಬಹುದಾಗಿತ್ತು ಎನ್ನುವ ದಿಸೆಯಲ್ಲಿ ಚಿಂತನೆಯನ್ನು ಮಾಡತಕ್ಕಂಥ ಕೆಲಸವನ್ನು ನಾವು ಮಾಡಬೇಕಾಗಿದೆ ಎನ್ನುವ ಮಾತನ್ನು ನಾನು ಹೇಳಲು ತಯಾರಿದ್ದೇನೆ. ನಾನು ಒಂದು ಪ್ರಶ್ನೆಯನ್ನು ಈ ಸದನದ ವಿವೇಚನೆಗೆ ಬಿಡುತ್ತೇನೆ. ಒಂದು ಬಡ ಕುಟುಂಬದವರು ಚೀಟಿ ವ್ಯವಹಾರ ಮಾಡುತ್ತಿರುತ್ತಾರೆ ಎಂದು ಇಟ್ಟುಕೊಳ್ಳೋಣ. Unfortunately. they are depending upon that business to eke-up their livelihood. ತಮ್ಮ ಜೀವನದ ನಿರ್ವಹಣೆಗೆ ಅವರು ಆ ವ್ಯವಹಾರವನ್ನೇ ನಂಬಿಕೊಂಡಿರುತ್ತಾರೆ. ಆದರೆ ಆ ವ್ಯವಹಾರದಲ್ಲಿ ಅವರು ವಿಫಲರಾಗುತ್ತಾರೆ. They commit sucide. what is what the Government is doing for that? ಸರ್ಕಾರ ಅವರನ್ನು ಯಾವ ರೀತಿ ರಕ್ಷಣೆ ಮಾಡಲು ಆಗುತ್ತದೆ? ಒಬ್ಬ ಸರ್ಕಾರಿ ನೌಕರ ತಾನು ಮಾಡಿಕೊಂಡಿರತಕ್ಕಂಥ ಸಾಲಕ್ಕೆ ಆತ್ಮಹತ್ಯೆ ಮಾಡಿಕೊಂಡು ಬಿಡುತ್ತಾನೆ. ಅವನನ್ನು ನಾವು ಯಾವ ರೀತಿ ರಕ್ಷಣೆ ಮಾಡುತ್ತಿದ್ದೇವೆ? ಒಬ್ಬ ಬಡ ಕೂಲಿ ಕಾರ್ಮಿಕ, He is not agriculturant, a poor labourer, he commites a suicide ಯಾವುದೋ ದೃಷ್ಟಿಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. what is that we are doing for that? ಆದ್ದರಿಂದ, ಇವತ್ತು ನಾವು ಎಂದ ತಕ್ಷಣ ನಾವು ನೇರವಾಗಿ ಯಾವುದೋ ಒಂದು ಕಾರಣವನ್ನು ಅದಕ್ಕೆ ಸೇರಿಸಿ, ಯಾವುದಾದರೊಂದು ದೃಷ್ಟಿಯಲ್ಲಿ ಯಾರನ್ನಾದರೂ ಇಕ್ಕಟ್ಟಿಗೆ ಸಿಕ್ಕಿಸತಕ್ಕಂಥ ಪ್ರಯತ್ನವನ್ನು ಮಾಡುವ ಮುಂಚೆ, ಅದು ಯಾವ ಕಾರಣಕ್ಕಾಗಿ ಆಗಿದೆ ಎಂದು ದಯಮಾಡಿ ಯೋಚನೆ ಮಾಡಬೇಕು ಎಂದು ನಾನು ಈ ಸದನವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ನಿರಂತರವಾಗಿ ದೇಶದಾದ್ಯಂತ ನಡೆಯುತ್ತಿರತಕ್ಕಂಥಾದ್ದು. ನಾವು ಯಾರೂ ಕೂಡ ನಿರೀಕ್ಷೆ

ಮಾಡಲಾರದಂಥಾದ್ದು. We will not invite such incidents. We will not accept such incidents, but still such incidents do happening in all over the country.. ಆದ್ದರಿಂದ, ನಾನು ಇಲ್ಲಿ ಏನು ಹೇಳಲಿಕ್ಕೆ ಹೊರಟಿದ್ದೇನೆ ಎಂದರೆ, ಇಂಥ ಪ್ರಕರಣಗಳು ನಡೆದಾಗ ನಾವು ತಕ್ಷಣ ಹೋಗಿ ಪರಿಹಾರ ಕೊಡತಕ್ಕಂಥ ಒಂದು ಸೂತ್ರದಿಂದ ನಾವು ಪ್ರಾಣ ರಕ್ಷಣೆಯ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ ಎಂದು ಹೇಳಿ ಕೊಳ್ಳುವುದಕ್ಕೆ ಮುಂಚೆ ನಾವೆಲ್ಲರೂ, ಇಂಥ ಪ್ರಕರಣಗಳ ಹಿನ್ನೆಲೆಯೇನು, ಏಕೆ ಇಂಥ ಪ್ರಕರಣಗಳು ನಡೆಯುತ್ತಿವೆ ಎನ್ನುವುದರ ಬಗ್ಗೆ ಕೂಲಂಕುಷವಾಗಿ ಸ್ಟಡಿ ಮಾಡತಕ್ಕಂಥಾದ್ದು ಬಹಳ ಅತ್ಯಾವಶ್ಯಕವಾಗಿದೆ. ಆತ್ಮಹತ್ಯೆಯನ್ನು ಬೈಫರ್ಕೇಷನ್ ಮಾಡತಕ್ಕಂಥಾದು ಆಗುತ್ತಿದೆ. Classification of sucide. Once again we are doing that. We are only coming to the aid of sucide of a farmer. But whereas, equally other persons are also placed in the same position, but still we are not thinking those people. ಇವತ್ತು ಈ ದೇಶದಲ್ಲಿ ಅನೇಕರು ಜೀವನ ಮಾಡಲಾಗದಂಥ ಪರಿಸ್ಥಿತಿಯಲ್ಲಿ ಇರತಕ್ಕಂಥ ಸಂದರ್ಭದಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡರೆ, ಅವರ ರಕ್ಷಣೆಗೆ ನಾವು ಚಿಂತನೆ ಮಾಡುತ್ತಿಲ್ಲ, ಅವರ ಬಗ್ಗೆ ನಾವು ಮಾತನಾಡುತ್ತಿಲ್ಲ. ಇನ್ನೊಂದು ವಿಷಯ ಇಲ್ಲಿ ಪ್ರಸ್ತಾಪವಾಯಿತು, ಸುಮಾರು 50–60 ಜನರು ಒಟ್ಟಿಗೇ ಸಾಮೂಹಿಕ ಆತ್ಮಹತ್ಯೆಯ ಬೆದರಿಕೆ ಹಾಕುತ್ತಿದ್ದಾರೆ ಎಂದು ಮಾನ್ಯ ಗೌರವಾನ್ವಿತ ಸದಸ್ಯರೊಬ್ಬರು ಹೇಳಿದರು. ಇದಕ್ಕೆ ಸರ್ಕಾರ ಏನು ಮಾಡಬಹುದು? I should call that it is a sort of blackmai with all responsiblitiy I will use that word ಏಕೆಂದರೆ, ನಾನು ಆಗಲೇ ಹೇಳಿದ ಹಾಗೆ, ಮನುಷ್ಯನಿಗೆ ಸಾಯುವುದಕ್ಕೆ ಅಧಿಕಾರವಿಲ್ಲ, ಸಾಯುವುದಕ್ಕೆ ಹಕ್ಕಿಲ್ಲ. It is an offence u/s 309. But still ಆದರೂ ಯಾವುದೋ ಒಂದು ಕಾರಣಕ್ಕೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಎಂದೋ ಅಥವಾ ಒಂದು ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು ಆತ್ಮಹತ್ಯೆಯ ಬೆದರಿಕೆ ಹಾಕತಕ್ಕಂಥ ಪ್ರಕರಣಗಳಿಗೆ ಇತಿಶ್ರೀ ಹಾಡತಕ್ಕಂಥ ಜವಾಬ್ದಾರಿ ಈ ಸದನದ ಮೇಲಿದೆ. ಅದು ಈ ಸದನದ ಕರ್ತವ್ಯವಾಗಿದೆ. ಇದಕ್ಕೆ ಯಾವುದಾದರೊಂದು ಅಂತಿಮವಾದಂಥ ರೂಪವನ್ನು, ತೀರ್ಮಾನವನ್ನು ಈ ಸದನವು ತೆಗೆದುಕೊಳ್ಳಬೇಕು ಎಂದು ಪ್ರಾರ್ಥನೆ ಮಾಡಿ, ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿ ನಡೆದಿರತಕ್ಕಂಥ ಒಂದೇ ಕುಟುಂಬದ ಆರು ಜನರ, ಸಾಮೂಹಿಕ ಆತ್ಮಹತ್ಯೆಯ ಪ್ರಕರಣ ನಮ್ಮೆಲ್ಲರ ಹೃದಯವನ್ನು ಕಲಕತಕ್ಕಂಥ ಪ್ರಕರಣ ಎಂದು ನಾನು ಭಾವಿಸಿದ್ದೇನೆ. ಅದನ್ನು ನಾನು ನಿನ್ನೆ ಕೂಡ ಶೂನ್ಯವೇಳೆಯಲ್ಲಿ ಅಧ್ಯಕ್ಷರ ಅನುಮತಿಯನ್ನು ಪಡೆದು ಸಂಕ್ಷಿಪ್ತವಾಗಿ ಸದನದ ಗಮನವನ್ನು ಸೆಳೆಯತಕ್ಕಂಥ ಕೆಲಸವನ್ನು ಮಾಡಿದ್ದೇನೆ. ಯಾವ ಸಂದರ್ಭದಲ್ಲಿ ರೈತ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ, ಯಾವ ರೀತಿಯ ಸಂಕಷ್ಟದಲ್ಲಿದ್ದಾನೆ ಎನ್ನುವುದಕ್ಕೆ ಪೂರಕವಾಗಿ, ಹಿರಿಯರಾದಂಥ ಮಾನ್ಯ ಎಸ್.ಎಸ್. ಪಾಟೀಲರು, ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಹಿರಿಯರಾದಂಥ ಶ್ರೀ ಸಿಂಧ್ಯಾರವರು, ಶ್ರೀ ಶಿವಾನಂದ ಪಾಟೀಲರು ಮತ್ತು ಶ್ರೀ ಮುದ್ದಹನುಮೇಗೌಡರು ಬಹಳ ಸವಿಸ್ತಾರವಾಗಿ ಹೇಳಿ, ಆತ್ಮಹತ್ಯೆಯ ಬಗ್ಗೆ

ವಿವರಣೆಯನ್ನು ಸದನದ ಗಮನಕ್ಕೆ ತರತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಈ ಪ್ರಕರಣದಲ್ಲಿ ಆ ಕುಟುಂಬದ ಸಮಸ್ಯೆಯಾದ ಈರಬಸಮ್ಮ ಎನ್ನುವವರು ತೀರಿಕೊಂಡ ನಂತರ, ಆ ಕುಟುಂಬದ ಸದಸ್ಯರು ಪ್ರಪ್ರಥಮವಾಗಿ ಮಾನಸಿಕವಾಗಿ ಆಘಾತವನ್ನು ಹೊಂದಿದರು ಎನ್ನುವುದು ಮೊದಲನೇ ಅಂಶ. ಎರಡನೆಯ ಅಂಶವೆಂದರೆ, ಮಾನ್ಯ ಮುದ್ದಹನುಮೇಗೌಡರು ಹೇಳಿದ ಹಾಗೆ, ಈ ಆತ್ಮಹತ್ಯೆಯಲ್ಲಿ ಭಾಗಿಯಾದಂಥವರ ವಯಸ್ಸು ಬಹಳ ಕಡಿಮೆ ಇದೆ. ಅವರ ವಯಸ್ಸು 20,25,30,35 ವರ್ಷಗಳಾಗಿದೆ. ಈ ವಯಸ್ಸಿನಲ್ಲಿರತಕ್ಕಂಥವರು ಮಾನಸಿಕವಾಗಿ ಆತ್ಮಹತ್ಯೆಗೆ ತಯಾರಾಗತಕ್ಕಂಥ ಕೆಲಸಕ್ಕೆ ಹೋಗುವುದು ಬಹಳ ದುಸ್ತರವಾದುದು ಎನ್ನುವುದನ್ನು ಕೂಡ ನಾವು ನೋಡಬೇಕಾಗುತ್ತದೆ. ಈ ಹಿನ್ನೆಲೆಯನ್ನು ನೋಡಿದಾಗ ಮತ್ತು ಅಲ್ಲಿಯ ಬರದ ಬಗೆಗಿನ ವರದಿಗಳನ್ನು ನೋಡಿದಾಗ, ನಮ್ಮ ರಾಜ್ಯದ ಪ್ರಮುಖವಾದಂಥ ಪತ್ರಿಕೆಗಳಾದ ಪ್ರಜಾವಾಣಿ, ಕನ್ನಡ ಪ್ರಭ, ವಿಜಯ ಕರ್ನಾಟಕ, ಉದಯವಾಣಿ, ಸಂಯುಕ್ತ ಕರ್ನಾಟಕ ಪತ್ರಿಕೆಗಳು ಅದರ ಬಗ್ಗೆ ವಿಶ್ಲೇಷಣೆಯನ್ನು ಮಾಡಿದ್ದಾರೆ. ಮೊದಲನೇ ಹಂತದಲ್ಲಿ, ಈರಬಸಮ್ಮ ಬಹಳ ದಿವಸಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದಳು. ಆಕೆ ಮೂಲವ್ಯಾಧಿ ಮತ್ತು ಅಸ್ತಮಾ ರೋಗಗಳಿಂದ ಬಳಲುತ್ತಿದ್ದು, ಆಕೆಯ ಟ್ರೀಟ್‌ಮೆಂಟಿಗೆ ಅವರು ಬಹಳಷ್ಟು ಸಾಲವನ್ನು ಮಾಡಿದ್ದರು. ಆದರೆ ದುರ್ದೈವದಿಂದ ಆಕೆ ಮರಣವನ್ನು ಹೊಂದಿದಳು. ಆಕೆ ಮರಣ ಹೊಂದಿದ ನಂತರ ಇವರೆಲ್ಲಾ ಮಾನಸಿಕವಾಗಿ ಆಘಾತಕ್ಕೆ ಒಳಗಾಗಿ ಸಾವನ್ನಪ್ಪಿರಿದ್ದಾರೆ. ಎನ್ನುವ ವಿಚಾರವನ್ನು ಒಂದು ಕಡೆ ಇಟ್ಟುಕೊಂಡರೂ ಕೂಡ, ಬೇರೆಯವರು ಯಾರಾದರೂ ಸತ್ತರೆ, ಅವರ ಸಂಬಂಧಿಕರು ಆತ್ಮಹತ್ಯೆಯ ಪ್ರಯತ್ನಕ್ಕೆ ಹೋಗತಕ್ಕಂಥಾದ್ದು ಬಹಳ ಕಡಿಮೆ ಉದಾಹರಣೆಗೆ ಹೇಳುವುದಾದರೆ, ನಮ್ಮ ನಾಯಕರಾದ ಶ್ರೀಮಾನ್ ಶ್ರೀಮಾನ್ ಬೈರೇಗೌಡರು ತೀರಿಕೊಂಡರು. ಅವರು ತೀರಿಕೊಂಡ ತಕ್ಷಣ ನಾವ್ಯರೂ ಆತ್ಮಹತ್ಯೆಗೆ ಹೋಗತಕ್ಕಂಥ ಭಾವನೆಯನ್ನು, ಅಂಥ ಪ್ರಯತ್ನಕ್ಕೆ ಹೋಗತಕ್ಕಂಥಾದ್ದನ್ನು ಮಾಡಲಿಲ್ಲ. ಈ ವಾಸ್ತವಾಂಶವನ್ನು ಮತ್ತು ಹಿನ್ನೆಲೆಯನ್ನು ನಾವು ಗಮನಿಸಿದಾಗ, ಈ ಸಾಮೂಹಿಕ ಆತ್ಮಹತ್ಯೆಗೆ ಕಾರಣವನ್ನು ತಿಳಿಯಬಹುದು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಕೂಡ ನಮ್ಮ ಭಾಗದ ಪರಿಸ್ಥಿತಿಯನ್ನು ತಿಳಿದುಕೊಂಡಿದ್ದಾರೆ. ಅವರು ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರಾಗಿ, ಬರಗಾಲದ ಬಗ್ಗೆ ರಾಜ್ಯದಲ್ಲಿ ಪ್ರವಾಸ ಮಾಡಿ, ರಿವ್ಯೂ ಮೀಟಿಂಗ್ ಮಾಡಿದಂಥ ಸಂದರ್ಭದಲ್ಲೂ ಕೂಡ ನಾನು ಪ್ರಸ್ತಾಪ ಮಾಡಿದ್ದೆ, ವಿಶೇಷವಾಗಿ ಕೊಪ್ಪಳ ಜಿಲ್ಲೆಯಲ್ಲಿ ಮೂರು ವರ್ಷಗಳಿಂದ ಬಹಳ ಧಾರುಣವಾದಂಥ ಪರಿಸ್ಥಿತಿ ಇದೆ ಮಳೆ ಸಂಪೂರ್ಣವಾಗಿ ಬಿದ್ದಿಲ್ಲ, ರೈತರು ಬಹಳ ಚಿಂತಾಕ್ರಾಂತರಾಗಿದ್ದಾರೆ, ಸಂಕಷ್ಟದಲ್ಲಿದ್ದಾರೆ ಎಂದು ಅವರಿಗೆ ಮನವರಿಕೆ ಮಾಡಿಕೊಡತಕ್ಕಂಥಾದ್ದನ್ನೂ ಕೂಡ ನಾನು ಮಾಡಿದ್ದೇನೆ. ಬರಪರಿಹಾರದ ಯೋಜನೆಗಳನ್ನೂ ನಾವು ಕೈಗೆತ್ತಿಕೊಂಡಿದ್ದೇವೆ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಸಿಕ್ಸ್ ಪೀಸ್ ಕಾರ್ಯಕ್ರಮಗಳನ್ನೂ ಕೂಡ ನಾವು ಹಾಕಿಕೊಂಡಿದ್ದೇವೆ. ಆದರೆ ಬರದ ತೀವ್ರತೆ ಬಹಳವಾಗಿದೆ. ಆ ಬರದ ತೀವ್ರತೆಯನ್ನು ಗಮನಿಸಬೇಕು ಎಂದು ನಾನು ಅನೇಕ ಸಾರಿ ಒತ್ತಾಯ ಮಾಡಿದರೂ ಕೂಡ ಸರ್ಕಾರ ತೀವ್ರತೆಯನ್ನು ಗಮನಿಸುತ್ತಿಲ್ಲ. ಇವತ್ತು ನಾನು ಬಹಳ ನೇರವಾಗಿ ಈ ಮಾತನ್ನು ಹೇಳಲು ಬಯಸುತ್ತೇನೆ. ಶಾಸಕರಾದಂಥ ನಾವುಗಳು ಇವತ್ತು ಅಲ್ಲಿ ಅಡ್ಡಾಡತಕ್ಕಂಥ ವಾತಾವರಣವಿಲ್ಲ. ನಾವು ಪಟ್ಟಣಕ್ಕೆ ಹೋದರೆ, ಸಾವಿರಾರು ಜನ ಹೆಣ್ಣುಮಕ್ಕಳು ತಮ್ಮ ಮಕ್ಕಳನ್ನು ಎತ್ತಿಕೊಂಡು ಬಂದು, ಶಾಸಕರೇ ನಮಗೆ ಊಟಕ್ಕೆ ಆಹಾರವಿಲ್ಲ, ನಮಗೆ ಉದ್ಯೋಗ ಕೊಡಿ, ನಮಗೆ ಅಕ್ಕಿಯನ್ನು ಕೊಡಿಸಿ ಎಂದು ಕೇಳುವ ವಾತಾವರಣ ನಿರ್ಮಾಣವಾಗಿದೆ. ಅದಕ್ಕಾಗಿ ನೀವು

ಸಮರೋಪಾದಿಯಲ್ಲಿ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರದ ಗಮನಕ್ಕೆ ತಂದರೂ ಕೂಡ ಆ ಕೆಲಸಗಳು ಆಗುತ್ತಿಲ್ಲ. ಆ ಕಾರಣಕ್ಕಾಗಿ ನಾವು ಈ ಸರ್ಕಾರವನ್ನು ಖಂಡಿಸಬೇಕಾಗಿದೆ. ಕೇಂದ್ರ ಸರ್ಕಾರ ಕೂಡ ಈ ದಿಕ್ಕಿನಲ್ಲಿ ಚಿಂತನೆಯನ್ನು ಮಾಡಬೇಕಾಗಿದೆ. ಒಬ್ಬ ಮನುಷ್ಯ ಹಸಿವಿನಿಂದ ಸತ್ತರೆ, ಅವನ ರಕ್ಷಣೆಗೆ ಸರ್ಕಾರಗಳು ಬರಬೇಕು ಎಂದು ಒಂದು ಕಡೆ ಸುಪ್ರಿಂ ಕೋರ್ಟ್ ಹೇಳುತ್ತದೆ. ಅದನ್ನು ನಾವೆಲ್ಲರೂ ಕೂಡ ಒಪ್ಪುತ್ತೇವೆ ಆದರೆ ಕೇಂದ್ರದಲ್ಲಿ ಅಕ್ಕಿ ಕೊಳೆಯುತ್ತ ಬಿದ್ದಿದ್ದರೂ ಅದನ್ನು ಬರಪರಿಹಾರಕ್ಕೆ ಕೊಡುತ್ತಿಲ್ಲ. ನಾಗರೀಕ, ಸರ್ಕಾರ ಎಂದು ಕರೆಸಿಕೊಳ್ಳುವ, ಆಡಳಿತ ನಡೆಸುವ ಸರ್ಕಾರಗಳು ಈ ಚಿಂತನೆಯನ್ನು ಮಾಡಬೇಕಾಗಿದೆ. ಎಲ್ಲಿದೆ ನಿಮ್ಮ ನಾಗರೀಕರತೆ? ಸಾರ್ವಜನಿಕರ ಬದುಕನ್ನು, ಸಾರ್ವಜನಿಕರ ಜೀವನವನ್ನು, ಸಾರ್ವಜನಿಕರ ಆಸ್ತಿಯನ್ನು ಉಳಿಸತಕ್ಕಂತ ಕೆಲಸ ಸರ್ಕಾರಗಳಿಂದ ಆಗಬೇಕಾಗಿದೆ. ಆದರೆ ಅದು ಆಗುತ್ತಿಲ್ಲ. ಶ್ರೀ ಮುದ್ದಹನುಮೇಗೌಡರು ಹೇಳಿದರು, ಸಾವಿಗೆ ಕಾನೂನಿನಲ್ಲಿ ಅವಕಾಶ ಕೊಟ್ಟಿಲ್ಲ, ನಾವು ಸಾವನ್ನು ತಂದು ಕೊಳ್ಳಬಾರದು ಎಂದು ಹೇಳಿದರು. ಆದರೆ ಈ ಸರ್ಕಾರ ಅವರನ್ನು ಬದುಕಲು ಬಿಡುತ್ತಿಲ್ಲ. ಆ ಕಾರಣಕ್ಕಾಗಿ ನಾವು ಆಲೋಚನೆಯನ್ನು ಮಾಡಬೇಕಾಗಿದೆ. ನಮ್ಮ ಸಂವಿಧಾನದಲ್ಲಿ ಸಾವಿಗೆ ಅವಕಾಶವಿಲ್ಲ. ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಅವರು ಬದುಕಲು ಆಗುತ್ತಿಲ್ಲ. ಆ ಕಾರಣಕ್ಕಾಗಿ ನಾವು ಅದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗಿದೆ. ಬರದ ಛಾಯೆ ಮತ್ತು ವಸ್ತುಸ್ಥಿತಿಯನ್ನು ನಾವೆಲ್ಲರೂ ಗಮನಿಸಿದಾಗ, ಕೇಂದ್ರ ಸರ್ಕಾರ ಇದಕ್ಕೆ ಸಹಾಯ ನೀಡತಕ್ಕಂಥ ದೃಷ್ಟಿಯಲ್ಲಿ ಇಲ್ಲ, ರಾಜ್ಯ ಸರ್ಕಾರ ಕೂಡ ಇದರಲ್ಲಿ ತನ್ನ ಪಾಲು ಏನು ಎನ್ನುವುದನ್ನು ಮರೆಮಾಚುತ್ತಿದೆ. ನಿನ್ನೆಯ ದಿವಸ ಜಿಲ್ಲಾಮಂತ್ರಿಗಳು ಸಂಕ್ಷಿಪ್ತವಾದ ರಿಪೋರ್ಟ್‌ನ್ನು ಮಾಡಿದ್ದಾರೆ. ಅವರ ಆ ರಿಪೋರ್ಟ್ ಅನ್ನು ಒಪ್ಪಲಿಕ್ಕೆ ನಾವು ತಯಾರಿಲ್ಲ. ಅವರು ಆ ಘಟನೆ ನಡೆದಂಥ ಸ್ಥಳಕ್ಕೆ ಭೇಟಿ ಮಾಡಬೇಕಾಗುತ್ತದೆ. ಅಲ್ಲಿಯ ಘಟನೆಯ ಬಗ್ಗೆ ಪ್ರಮುಖವಾಗಿ ದಿನಪತ್ರಿಕೆಗಳಲ್ಲಿ ಬಂದ ವರದಿಯನ್ನು ನೋಡಿದಾಗ, ಅಲ್ಲಿಯ ಗ್ರಾಮಸ್ಥರು ಮತ್ತು ಅವರ ಇಬ್ಬರು ಆಪ್ತರು ಸ್ಟೇಟ್‌ಮೆಂಟ್ ಅನ್ನು ಪತ್ರಿಕೆಗೆ ಕೊಡುತ್ತಾ, 'ಬಹಳಷ್ಟು ದಿನಗಳಿಂದ ಅವರಿಗೆ ಕೆಲಸ ಸಿಕ್ಕಿಲ್ಲ, ಸುಮಾರು ದಿವಸಗಳಿಂದ ಅವರು ಒಂದು ಹೊತ್ತು ಮಾತ್ರ ಊಟ ಮಾಡಿದ್ದಾರೆ, ಒಂದು ವಾರದಿಂದ ಒಲೆಯನ್ನೇ ಹಚ್ಚಿಲ್ಲ. ಎಂದು ಹೇಳಿದ್ದಾರೆ. ಆ ಕುಟುಂಬದಲ್ಲಿ ಅಡಿಗೆಯನ್ನೇ ಮಾಡಿಲ್ಲ ಎಂದರೆ ಇನ್ನು ಮನುಷ್ಯ ಬದುಕಲಿಕ್ಕೆ ಪ್ರಯತ್ನ ಮಾಡುತ್ತಾನೆಯೇ ಹೇಳಿ. ತಾವೆಲ್ಲರೂ ಕೂಡ ಈ ಪ್ರಶ್ನೆಯ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಆದ್ದರಿಂದ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ ಎಂಬುದರ ಬಗ್ಗೆ ಸ್ಪಷ್ಟಪಡಿಸಬೇಕಾಗಿದೆ. ಮಾನ್ಯ ಖರ್ಗೆ ಸಾಹೇಬರು ಮಾತನಾಡುತ್ತಾ, ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣದಲ್ಲಿ ಸರ್ಕಾರದಿಂದ ಪರಿಹಾರದ ಘೋಷಣೆಯನ್ನು ಮಾಡುತ್ತೇವೆ, ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಆ ಮಾತನ್ನು ಬಹಳ ತಡವಾಗಿ ಹೇಳಿದ್ದೀರಿ... ಅಲ್ಲಿ ಸಾರ್ವಜನಿಕರು ಕೂಡ ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆಂದರೆ...

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಛೇರ್‌ಮನ್‌ರವರೇ, ಅಲ್ಲೊಬ್ಬರು ಕುಲಕರ್ಣಿ ಎಂದು ತಿಳಿದುಕೊಂಡು, ಅವರ ಹೆಸರು ಸರಿಯಾಗಿ ನನ್ನ ನೆನಪಿನಲ್ಲಿ ಇಲ್ಲ, ಅವರು ಹಿರಿಯರು, ಕಾಂಗ್ರೆಸ್ ಮುಖಂಡರಾಗಿದ್ದಾರೆ. ಅವರು ಟಿ.ವಿ ಸಂದರ್ಶನ ಮಾಡುತ್ತಾ- ಯಾರು ರೈತರು ಸತ್ತಿದ್ದಾರೆ ಅವರಿಗೆ ಕೆಲಸ ಇಲ್ಲದೆ ಉಪವಾಸದಿಂದಲೇ ಸತ್ತಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಮಾನ್ಯ ಛೇರ್‌ಮನ್‌ರವರೇ, ಖಂಡಿತವಾಗಿ ಅಲ್ಲಿ ಸಾರ್ವಜನಿಕರು ಹೇಳಿದ್ದಾರೆ, ಅವರ ಆಪ್ತರೂ ಕೂಡ ಹೇಳಿದ್ದಾರೆ ಮತ್ತು ಪತ್ರಿಕಾ ವರದಿ ಮಾಡತಕ್ಕಂಥವರು ಯಾರು ಇದ್ದಾರೆ ಅವರು ವಾಸ್ತವಾಂಶವನ್ನು ಸರ್ಕಾರದ ಗಮನಕ್ಕೆ ತರತಕ್ಕಂಥದ್ದು, ಸಾರ್ವಜನಿಕರ ಗಮನಕ್ಕೆ ತರತಕ್ಕಂಥ ಕೆಲಸವನ್ನು ಪತ್ರಿಕೆಗಳು ಮಾಡಿವೆ. ಆದರೆ ತಾವು ಇವತ್ತು ಹೇಳಿಕೆಯನ್ನು ಏನು ಕೊಡುತ್ತೀರಿ ಎನ್ನುವುದನ್ನೂ ಸಹ ನಾವು ಗಮನಿಸಬೇಕಾಗಿದೆ. ಇವತ್ತು ಜ್ವಲಂತ ಸಮಸ್ಯೆ ಇದೆ, ತೋಟಗಾರಿಕಾ ಬೆಳೆಗಳ ಬಗ್ಗೆಯೂ ಇವತ್ತು ಕೇಂದ್ರ ಅಥವಾ ರಾಜ್ಯಸರ್ಕಾರ ಇರಬಹುದು, ಹೀಗೆ ಯಾವುದೇ ಸರ್ಕಾರಗಳು ಚಕಾರವೆತ್ತುತ್ತಿಲ್ಲ. ಆ ದಿಶೆಯಲ್ಲಿ ಈ ಇಶ್ಯೂಸ್ ಅನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದರೆ ಕೆಲಸ ಆಗಬಹುದು. ಇದನ್ನು ರಾಜ್ಯಸರ್ಕಾರ ಮಾಡಬೇಕು. ಬಳ್ಳಾರಿ ಜಿಲ್ಲೆಯಲ್ಲಿ ಕೂಡ ಒಂದು ತಿಂಗಳ ಹಿಂದೆ ಅರಗಿನದೋಣಿ ಎಂಬಲ್ಲಿ ಹಸಿವಿನಿಂದ ಸಾವನ್ನಪ್ಪಿದ್ದಾರೆ ಎಂದೂ ಕೂಡ ವರದಿಯಾಗಿತ್ತು. ಅದನ್ನು ಟೋಟಲಿ ಈ ಸರ್ಕಾರದವರು ಅಲ್ಲಗಳೆದರು. ಇವತ್ತು ನೀವು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತನ್ನಿ. ಇಷ್ಟೊಂದು ಜನ ಇವತ್ತು ಹಸಿವಿನಿಂದ ಸಾಯುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕಂಥ ಬಂಡವಾಳ ಸಾಕಾಗುತ್ತಿಲ್ಲ. ಇವತ್ತು ನಾವು ಜನರ ಮಾನವನ್ನು ಜನರ ಜೀವವನ್ನು ಉಳಿಸಿಕೊಳ್ಳಬೇಕಾಗಿದೆ. ಅದಕ್ಕೆ ನಿಮ್ಮ ಸಹಾಯವನ್ನು ಕೊಡಿ ಎಂದು ಕೇಂದ್ರಕ್ಕೆ ರಾಜ್ಯಸರ್ಕಾರದಿಂದ ನೀವು ಒತ್ತಾಯ ಮಾಡಬೇಕು. ಆ ದೃಷ್ಟಿಯಿಂದ ಸರ್ಕಾರ ತನ್ನ ಪಾಲಿನ ಕರ್ತವ್ಯವನ್ನು ಮಾಡಿ ಈ ರಾಜ್ಯದ ಜನತೆಯ ಮಾನ ಮತ್ತು ಜೀವವನ್ನು ಉಳಿಸತಕ್ಕಂಥ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಮತ್ತು ಆ ಕುಟುಂಬಕ್ಕೆ, ಇವತ್ತು ರಾಷ್ಟ್ರೀಯ ಭದ್ರತಾ ಯೋಜನೆ ಎನ್ನುವ ಒಂದು ಯೋಜನೆ ಇದೆ. ಅದಕ್ಕೆ ದುಡ್ಡು ಇಲ್ಲ. ಅದು ಕೇಂದ್ರ ಸರ್ಕಾರದ ಯೋಜನೆಯಾಗಿತ್ತು. ಈಗ ಅದು ಮಾರ್ಪಾಡಾಗಿ ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅಲ್ಲಿ ಇರುವಂಥ ಅಪ್ಲಿಕೇಷನ್ಸ್ ಅನ್ನು ನಾವು ನೋಡಿದರೆ ಕುಟುಂಬವನ್ನು ನಡೆಸತಕ್ಕಂಥ ಯಜಮಾನ ಸತ್ತಾಗ ಆ ಕುಟುಂಬದವರಿಗೆ ಸ್ವಲ್ಪ ಆರ್ಥಿಕ ನೆರವನ್ನು ಕೊಟ್ಟರೆ, ಆ ಯಜಮಾನನ ಸಾವಿನಿಂದ ಕುಸಿದಿರತಕ್ಕಂಥ ಕುಟುಂಬಕ್ಕೆ ಸಹಾಯ ಮಾಡುವುದಕ್ಕೆ ಇದ್ದಂಥ ಯೋಜನೆ ಏನು ಇದೆ, ಅದರಲ್ಲಿ ಕೂಡ ಇವತ್ತು ಹಣ ಇಲ್ಲ. ಆ ಕಾರಣಕ್ಕಾಗಿ 10 ಸಾವಿರ ರೂಪಾಯಿಗಳನ್ನು ಕೊಡತಕ್ಕಂಥ ರಾಷ್ಟ್ರೀಯ ಭದ್ರತಾ ಯೋಜನೆ ಅದನ್ನು ಕೂಡ ಇವತ್ತು ಜಾರಿಗೊಳಿಸತಕ್ಕಂಥ ಕೆಲಸ ಆಗಬೇಕೆಂದು ಒತ್ತಾಯ ಮಾಡಿ, ಈ ಒಂದು ಸಂದರ್ಭದಲ್ಲಿ ರೈತರ ಸಾವಿನ ನೋವಿನ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :- ಮಾನ್ಯ ಛೇರಮನ್‌ರವರೇ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮೊದಲನೆಯದಾಗಿ, ಈ ನಮ್ಮ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ರಾಮಾಪುರದ ಘಟನೆ ಒಂದು ಹೃದಯವಿದ್ರಾವಕ ಘಟನೆ ಎನ್ನುವಂಥದ್ದರ ಬಗ್ಗೆ ಬಹುಶಃ ಈ ಸದನದಲ್ಲಿರುವಂಥ ಅಥವಾ ಯಾವುದೇ ಜನತೆಯೂ ಸಹ ಇದಕ್ಕೆ ಬೇರೆ ರೀತಿಯ ಅಭಿಪ್ರಾಯವನ್ನು ಕೊಡಲಿಕ್ಕೆ ಸಾಧ್ಯವೇ ಇಲ್ಲ. ನಾವೆಲ್ಲರೂ ಕೂಡ ಇಂಥ ಘಟನೆಗಳು ಆಗದಿರುವಂಥ ವಿಶ್ವಾಸವನ್ನು ಮೂಡಿಸುವಂಥ ಸಂದೇಶವನ್ನು ಈ ಸದನದ ಮೂಲಕ ಕಳುಹಿಸುವಂತೆ ಆಗಬೇಕು ಎನ್ನುವಂಥ ನನ್ನ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಅನೇಕ ಸಲಹೆ ಸೂಚನೆಗಳನ್ನು ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಉಳಿದ

ಕೆಲವು ಸದಸ್ಯರುಗಳು ಈ ಸಂದರ್ಭದಲ್ಲಿ ಕೊಟ್ಟಿದ್ದಾರೆ. ನಾನು ಆ ಎಲ್ಲಾ ಸಲಹೆಗಳನ್ನು ಪುನರುಚ್ಚಾರ ಮಾಡುವುದಕ್ಕೆ ಬಯಸದೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಹಿರಿಯ ಸಚಿವರುಗಳಲ್ಲಿ ನಾನು ನನ್ನ ಒಂದು ವಿನಂತಿಯನ್ನು ಆಗ್ರಹಪೂರ್ವಕವಾಗಿ ಮಾಡುಪವನಿದ್ದೇನೆ. ರಾಜ್ಯದ, ಸರ್ಕಾರದ ಜವಾಬ್ದಾರಿ ಇರುವಂಥವರಿಗೆ ವಿಶೇಷವಾಗಿ ಮಂತ್ರಿಗಳಿಗೆ ಸಮಾಜದಲ್ಲಿ ವಿಶೇಷವಾದಂಥ ಜವಾಬ್ದಾರಿ ಇದೆ. ಹಾಗಾಗಿ ಮಾನ್ಯ ಖರ್ಗೆಯವರಲ್ಲಿ ಮತ್ತು ಉಳಿದಂಥ ಹಿರಿಯ ಸಚಿವರುಗಳಲ್ಲಿ ನನ್ನ ವಿನಂತಿ ಏನೆಂದರೆ, ನಾವು ಹೇಗೆ ನಡೆದುಕೊಳ್ಳುತ್ತೇವೆ, ನಾವು ಹೇಗೆ ಇರುತ್ತೇವೆ, ನಮ್ಮ ಜೀವನದ ರೀತಿ ನೀತಿಗಳು ಅಥವಾ ನಮ್ಮ ಎಲ್ಲಾ ವ್ಯವಹಾರದ ಚಟುವಟಿಕೆಗಳನ್ನು ಸಾರ್ವಜನಿಕರು ಬಹಳ ಸೂಕ್ಷ್ಮತೆಯಿಂದ ಬಹಳ ಗಂಭೀರವಾಗಿ ಗಮನಿಸುತ್ತಿರುತ್ತಾರೆ. ಕಳೆದ ಮೂರು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಬರಗಾಲವಿರುವುದು ನಮಗೆಲ್ಲರಿಗೂ ಗೊತ್ತಿರುವಂಥ ವಿಚಾರ. ರಾಜ್ಯದಲ್ಲಿ 155 ತಾಲ್ಲೂಕುಗಳಲ್ಲಿ ಬರಗಾಲವಿದೆ. ಇವತ್ತು ಜನತೆಗೆ ಕೆಲಸ ಇಲ್ಲದೆ ಈ ರೀತಿ ಆತ್ಮಹತ್ಯೆ ಮಾಡಿಕೊಳ್ಳುವಂಥ ಸ್ಥಿತಿ, ಹೊರರಾಜ್ಯಗಳಿಗೆ ಕೆಲಸಕ್ಕಾಗಿ, ಕೂಲಿಗಾಗಿ ಗುಳೆ ಹೋಗುತ್ತಿರುವಂಥ ಸಂದರ್ಭ, ದನಕರುಗಳು ಇವತ್ತು ಕಟುಕರ ಪಾಲಾಗುತ್ತಿರುವಂಥ ಸಂದರ್ಭ, ಇತ್ಯಾದಿ ಅನೇಕ ಘಟನೆಗಳು ರಾಜ್ಯದಲ್ಲಿ ನಡೆಯುತ್ತಿವೆ, ಇಂಥ ಸಂದರ್ಭದಲ್ಲಿಯೂ ನಾವೆಲ್ಲರೂ ಊಟ ಮಾಡುತ್ತೇವೆ, ತಿಂಡಿತಿನ್ನುತ್ತೇವೆ. ಉಪಹಾರ ಮಾಡುತ್ತೇವೆ ಹೀಗೆ ಅವಶ್ಯವಿರುವಂಥದ್ದೆಲ್ಲವನ್ನು ಮಾಡುತ್ತೇವೆ. ಆದರೆ ಸರ್ಕಾರದ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ಇಂಥದ್ದೆಲ್ಲವನ್ನೂ ಮಾಡುವಂಥ ಸಂದರ್ಭದಲ್ಲಿ ಯಾವ ದೃಷ್ಟಿಕೋನದಲ್ಲಿ ಆ ಎಲ್ಲಾ ಚಟುವಟಿಕೆಯನ್ನು ಮಾಡುತ್ತಿದ್ದೇವೆ ಎನ್ನುವಂಥದ್ದನ್ನೂ ಕೂಡ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾನು ಇಲ್ಲಿ ಉಲ್ಲೇಖ ಮಾಡುತ್ತಿರುವಂಥ ಪ್ರಸಂಗ ಯಾವುದೆಂದರೆ, ಮಾನ್ಯ ಮುಖ್ಯಮಂತ್ರಿಗಳು ದೋಸೆ ತಿನ್ನಲಿಕ್ಕೆ ಹೋಗಿದ್ದರು. ಅದು ತಪ್ಪು ಎಂದು ನಾನು ಹೇಳುವುದಿಲ್ಲ. ನಾವೆಲ್ಲರೂ ದೋಸೆ ತಿನ್ನುತ್ತೇವೆ, ಇಡ್ಲಿ ತಿನ್ನುತ್ತೇವೆ, ಊಟ ಮಾಡುತ್ತೇವೆ. ಆದರೆ ಅದನ್ನು ಮೀಡಿಯಾ ಈವೆಂಟ್ ಆಗಿ ಮಾಡಿದ್ದಿದೆಯಲ್ಲಾ ಅದನ್ನು ಈ ರಾಜ್ಯದ ಜನ ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ತುಪ್ಪ ಜಾಸ್ತಿ ಇತ್ತು, ತುಪ್ಪ ಕಡಿಮೆ ಇತ್ತು ಎನ್ನುವುದು ಸುದ್ದಿಮಾಧ್ಯಮದಲ್ಲಿ ಬರುವುದು ಅಗತ್ಯ ಇರಲಿಲ್ಲ. ಈ ಸಂದರ್ಭದಲ್ಲಿ ಬರ ಪ್ರದೇಶದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಹೆಚ್. ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :- ಮಾನ್ಯ ಛೇರ್‌ಮನ್‌ರವರೇ, ಇವರು ಬುದ್ಧಿ ಹೇಳುವ ಮಾತಿನಲ್ಲಿ ಯಾವ ರೀತಿಯಾಗಿ ಹೇಳಿಕೊಂಡು ಹೋಗುತ್ತಿದ್ದಾರೆ ನೋಡಿ ಸಚಿವರಿಗೆ ಬುದ್ಧಿ ಹೇಳುತ್ತೇನೆಂದು ಅವರು ಹೇಳಿದರು. ಬುದ್ಧಿ ಹೇಳುವ ರೀತಿಯೇ ಇದು? ಇವರಿಂದ ಬುದ್ಧಿ ಹೇಳಿಸಿಕೊಳ್ಳುವಂಥದ್ದೇನೂ ನಮಗೆ ಬಂದಿಲ್ಲ. ಬುದ್ಧಿ ಹೇಳುತ್ತೇನೆ ಎಂದು ನೀವು ಹೇಳುವುದಲ್ಲ, ಏನು ಕ್ರಮ ಕೈಗೊಳ್ಳಬೇಕಾಗಿದೆ ಎಂಬುದನ್ನು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನಾನು ಹೇಳುತ್ತಿರುವಂಥ ಭಾವನೆ ದೃಷ್ಟಿಕೋನವನ್ನು ನೀವು ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ನಾನು ಆಗಲೇ ಹೇಳಿದ ಹಾಗೆ ನಾವು ಯಾರೂ ದೋಷ ತಿನ್ನದೇ ಇಲ್ಲ, ಇಡ್ಲಿ ತಿನ್ನದೇ ಇಲ್ಲ, ಊಟ ಉಪಹಾರ ಮಾಡದೇ ಇಲ್ಲ. ಆದರೆ ರಾಜ್ಯದ ಜನತೆ ಇಷ್ಟು ಭೀಕರವಾದಂಥ ಕಷ್ಟವನ್ನು ಅನುಭವಿಸುತ್ತಿದ್ದಂಥ ಸಂದರ್ಭದಲ್ಲಿ ಇವರು ದೋಸೆ ತಿನ್ನುವುದನ್ನು ಮೀಡಿಯಾ ಈವೆಂಟ್ ಆಗಿ ಮಾಡುವುದು ತಪ್ಪು. ಅದೂ ಕೂಡ ಮುಖ್ಯಮಂತ್ರಿಗಳ ಸ್ಥಾನದಲ್ಲಿ ಅಂದರೆ ಬಹಳ ಜವಾಬ್ದಾರಿ ಸ್ಥಾನದಲ್ಲಿ ಇರುವಂಥವರು ಈ ರೀತಿಯಾಗಿ ಮಾಡುವುದು

ತಪ್ಪು ಎಂದು ಹೇಳಿದ್ದೇನೆಯೇ ಹೊರತು ಅಲ್ಲಿ ಹೋಗಿ ತಿನ್ನುವುದು ತಪ್ಪು ಎಂದು ಹೇಳುತ್ತಿಲ್ಲ. ಅದರರ್ಥ ನಾವೆಲ್ಲರೂ ಉಪವಾಸದಿಂದ ಇದ್ದೇವೆಂದು ಅಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ :– ಮಾನ್ಯ ಛೇರ್‌ಮನ್‌ರವರೇ, ನಾನು ಸಚಿವಸಂಪುಟದ ಒಬ್ಬ ಸದಸ್ಯನಾಗಿದ್ದೇನೆ. ನಾಗರೀಕರು, ಈ ರಾಜ್ಯದ ಜನತೆ ಆಯ್ಕೆ ಮಾಡಿದ್ದರಿಂದ ನಾನು ಇಲ್ಲಿ ಇದ್ದೇನೆ. ನಾನು ನನ್ನ ಸ್ವಂತ ವಾಹನವನ್ನು ನಾನು ನಡೆಸಿಕೊಂಡು ಹೋದರೆ, ಅದನ್ನು ನಮ್ಮ ಪತ್ರಿಕಾ ಮಿತ್ರರು ನಮಗೆ ಪ್ರಚಾರ ಕೊಟ್ಟರೆ ನಾನು ಕೇಳಿಕೊಂಡ ಹಾಗೆ ಆಗುತ್ತದೆಯೇ? ನಾನು ಒಂದು ಸಾರಿ ನನ್ನ ಸ್ವಂತ ಕಾರನ್ನು ನಡೆಸಿಕೊಂಡು ಹೋಗುವಂಥ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಬಂತು. ಅದರ ಅರ್ಥ ನಾನು ನನ್ನ ಪ್ರಚಾರಕ್ಕಾಗಿ ಮಾಡಿದ್ದೇನೆಂದಾಗಿದೆಯೇ? ಮಾನ್ಯ ಮುಖ್ಯಮಂತ್ರಿಗಳಿಗೆ ಹಸಿವು ಆಗಿದ್ದರಿಂದ ದೋಸೆ ತಿನ್ನುವುದಕ್ಕೆ ಹೋಗಿದ್ದರೆಂದು ಕಾಣುತ್ತದೆ. ಅದಕ್ಕೆ ಪ್ರಚಾರ ಸಿಕ್ಕಿದೆ. ಆದ್ದರಿಂದ ಇವರು ಅದನ್ನು ಉದಾಹರಣೆ ಕೊಟ್ಟುಕೊಂಡು ಈ ರಾಜ್ಯದ ಬರಪರಿಹಾರದ ಬಗ್ಗೆ ಮಾತನಾಡಿದರೆ, ಇವರೇನು ಊಟ ಬಿಟ್ಟಿದ್ದಾರೆಯೇ? ಇವರು ಮೀನು ತಿನ್ನುವುದನ್ನು ಬಿಟ್ಟಿದ್ದಾರೆಯೇ? ಮುದ್ದೆ ತಿನ್ನುವುದನ್ನು ಏನಾದರೂ ಬಿಟ್ಟಿದ್ದಾರೆಯೇ? ಕೋಳಿ ತಿನ್ನುವುದನ್ನು ಏನದರೂ ಬಿಟ್ಟಿದ್ದಾರೆಯೇ? ಮಾತನಾಡುವುದು ಬಹಳ ಸುಲಭ ಇದೆ. ಆದರೆ ಅದನ್ನು ಕಾರ್ಯಾಚರಣೆಗೆ ತರುವುದು ಬಹಳ ಕಷ್ಟ ಇದೆ.

ಛೇರ್‌ಮನ್ :– ಮೀನಿಗೂ ಹೆಗಡೆಯವರಿಗೂ ಏನು ಸಂಬಂಧ ಸ್ವಾಮಿ?

ಶ್ರೀ ಕೆ. ಷಡಕ್ಷರಿ :– ಈಗ ದೇಶ ಬರಗಾಲದಲ್ಲಿದೆ. ಪ್ರಧಾನಮಂತ್ರಿಗಳು ವಿದೇಶಯಾತ್ರೆ ಮಾಡಲಿಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಛೇರ್‌ಮನ್‌ರವರೇ, ನಾನು ಬಹಳ ಜವಾಬ್ದಾರಿಯುತವಾಗಿ ಈ ಮಾತನ್ನು ಹೇಳಿದ್ದೇನೆ. ನಾನು ಅಥವಾ ನೀವು, ಯಾವ ಸಂಗತಿಯನ್ನೂ ಬಿಟ್ಟಿಲ್ಲ ಎನ್ನುವುದನ್ನೂ ಸಹ ಸ್ಪಷ್ಟಪಡಿಸಿದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ದು :– ಶ್ರೀ ಸಗೀರ್ ಅಹಮದ್‌ರವರು ಶಿವಾಜಿನಗರದ ಹೋಟೆಲ್‌ನಲ್ಲಿ ಪ್ರತಿ ದಿನ ಬಿರಿಯಾನಿ ತಿನ್ನುತ್ತಾರೆ. ನಗು ಅದರ ಬಗ್ಗೆ ಪ್ರಚಾರವೇ ಬಂದಿಲ್ಲ.

ಛೇರ್ಮನ್ :– ಮಾನ್ಯ ಸದಸ್ಯರು ಏಕೆ ಅಲ್ಲಿ ಹೋಗಿದ್ದರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಛೇರ್‌ಮನ್‌ರವರೇ, ಶ್ರೀ ಸಗೀರ್ ಅಹಮ್ಮದ್‌ರವರು ಎಲ್ಲಾ ವಿಷಯವನ್ನು ಹೇಗೆ ಲಘುವಾಗಿ ಪರಿಗಣಿಸುವುದಕ್ಕೆ ಬಯಸುತ್ತಾರೋ ಆ ರೀತಿ ಈ ವಿಷಯವನ್ನು ಪರಿಗಣಿಸುವುದಕ್ಕೆ ನನು ಬಯಸುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ :– ಮಾನ್ಯ ಛೇರ್‌ಮನ್‌ರವರೇ, ಬಡವರ ಬಗ್ಗೆ ಕಾಳಜಿ ಇದ್ದಂಥವರು, ಬಡವರ ಬಗ್ಗೆ ಅನುಕಂಪ ಇದ್ದಂಥವರು ಈಗ ತಿಂಗಳಿಗೆ ಮೂರೇ ದಿವಸ ಇವರು ಊಟ ಮಾಡುತ್ತಿರುವುದು ಬಾಕಿ ಎಲ್ಲಾ ಇವರು ಬಡವರಿಗೆ ಹಂಚಿಕೆ ಮಾಡಿಕೊಡುತ್ತಿದ್ದಾರೆ, ಈ ದೇಶದ ಜನರಿಗೆ, ಈ ರಾಜ್ಯದ ಜನರಿಗೆ ಬಟವಾಡೆ ಮಾಡುತ್ತಿದ್ದಾರೆ.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ :– ಏಕೆಂದು ಹೇಳಿದರೆ ಇದು ಕೇವಲ ನಮ್ಮ ರಾಜ್ಯದ ಒಂದೇ ಸಮಸ್ಯೆ ಅಲ್ಲ. ಹಿರಿಯ ಸದಸ್ಯರಾದಂಥ ಮಾನ್ಯ ಸಿಂಧ್ಯಾರವರು ಎಷ್ಟು ಚೆನ್ನಾಗಿ ಮಾತನಾಡಿದರು. ವಿಚಾರವನ್ನು ನಾವೂ ಒಪ್ಪಬೇಕಾಗುತ್ತದೆ, ನೀವೂ ಒಪ್ಪಬೇಕಾಗುತ್ತದೆ. ಈ ರಾಜ್ಯದ

ಜನರ ಹಿತವನ್ನು ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿರುತ್ತದೆ. ಕೇವಲ ಟೀಕೆಟಿಪ್ಪಣಿಯಿಂದ ಯಾವುದೇ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಏನು ಮಾಡಬೇಕೆಂಬುದರ ಬಗ್ಗೆ ಆಲೋಚನೆ ಮಾಡಿದ್ದೀರಿ ಅದನ್ನು ಹೇಳಿ. ನಾವು ಏನು ಆಲೋಚನೆ ಮಾಡಬೇಕೆಂಬುದರ ಬಗ್ಗೆ ಸಲಹೆ ಕೊಡಿ ಅದರ ಬಗ್ಗೆ ಈ ರಾಜ್ಯದ ರೈತರ ಹಿತದೃಷ್ಟಿಯಲ್ಲಿ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಇಲ್ಲಿ ಲಘುವಾಗಿ ತೆಗೆದುಕೊಳ್ಳುವ ವಿಚಾರ ಏನು ಬಂತು?

- ಗೊಂದಲ -

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :- "ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ. ಕೂಡಲಸಂಗಮ ದೇವಾ"... ಎಂದು ಬಸವಣ್ಣನವರ ವಚನದಲ್ಲಿ ಹೇಳಿರುವುದು ಗೊತ್ತಿಲ್ಲವೇ?

ಗೊಂದಲ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಛೇರ್‌ಮನ್‌ರವರೇ, ನಾನು ಈ ವಿಷಯವನ್ನು ಬೆಳೆಸುವುದಕ್ಕೆ ಬಯಸುವುದಿಲ್ಲ. ಆದರೆ ಸರ್ಕಾರ ನಡೆಸುವಂಥ, ಪ್ರಮುಖ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ಈ ರೀತಿಯ ಸಂಗತಿಗಳನ್ನು ಮೀಡಿಯಾ ಈವೆಂಟ್ ಆಗಿ ಮಾಡಬಾರದೆಂದು ಮತ್ತೊಮ್ಮೆ ಪುನರುಚ್ಚಾರ ಮಾಡುವುದಕ್ಕೆ ಬಯಸುತ್ತೇನೆ. ಇದನ್ನು ಜನ ಒಪ್ಪುವುದಿಲ್ಲ. ಇದರಿಂದ ಜನರಿಗೆ ಸರಿಯಾದಂಥ ವಿಶ್ವಾಸವನ್ನು ಮೂಡಿಸುವಂಥ ಸಂದೇಶ ಹೋಗುವುದಿಲ್ಲ. ಹಾಗಾಗಿ ಈ ರೀತಿ ಚಟುವಟಿಕೆಗಳು ಆಗಬಾರದೆನ್ನುವುದನ್ನು ಮತ್ತೊಮ್ಮೆ ಹೇಳುತ್ತಾ,

3.20 ಪಿಎಂ

ನಮ್ಮ ನಾಯಕರು ಈಗಾಗಲೇ ಪ್ರಸ್ತಾಪಿಸಿದ್ದಾರೆ. ಡಾ: ವೀರೇಶ್ ವರದಿಯಲ್ಲಿರುವ ಅನೇಕ ಸಂಗತಿಗಳನ್ನು ಗಮನಿಸಿ, ಸರ್ಕಾರ ತನ್ನ ಬಜೆಟ್ ಭಾಷಣದಲ್ಲಿ, ರೈತರ ಪರವಾಗಿ ಈ ರೀತಿಯಾದ ಸಂದರ್ಭದಲ್ಲಿ ತಕ್ಷಣ ಪರಿಹಾರ ಕೊಡುವ ಬಗ್ಗೆ ನಾವು ಮುಂದಾಗುವುದರ ಜೊತೆಗೆ, ಈ ರೀತಿ ಅವರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದಕ್ಕೆ ಬೇಕಾಗಿರುವ ರೀತಿಯಲ್ಲಿ ಸರ್ಕಾರ ಇನ್ನಷ್ಟು ಯೋಜನೆಗಳನ್ನು ತನ್ನ ಸ್ವಂತ ನಿಧಿಯಿಂದ, ಕೇಂದ್ರ ಸರ್ಕಾರದಿಂದ ಬರುವ ಹಣ ತೆಗೆದುಕೊಳ್ಳಲು ನಾವೆಲ್ಲರೂ ಜೊತೆ ಸೇರಿ ಪ್ರಯತ್ನಿಸೋಣ. ಆದರೆ, ತನ್ನ ಶಕ್ತಿಯಧಾರದ ಮೇಲೆ ತನ್ನ ಆರ್ಥಿಕ ಕ್ರೋಢೀಕರಣದಿಂದ ಅದನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ತಕ್ಷಣದಲ್ಲಿ ಇಂಥ ಘಟನೆಗಳು ನಡೆದ ಸಂದರ್ಭದಲ್ಲಿ ಸರ್ಕಾರ ಸ್ಪಂದಿಸಿ, ಸಮಾಜದಲ್ಲಿ, ರೈತರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವ ಪ್ರಯತ್ನ ಮಾಡಬೇಕೆಂದು ನಾನು ಆಗ್ರಹಿಸುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ..........

ಛೇರ್ಮನ್ :- ಶಿವಾನಂದ ಪಾಟೀಲರೆ, ನೀವು ಜಗಳ ಹಚ್ಚಿ ಟೈಂ ತೆಗೆದುಕೊಳ್ಳುತ್ತೀರಿ. ಹಾಗೆ ಮಾಡಬೇಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಈ ವಿಚಾರ ನಿಮಗೆ ಇವತ್ತೇ ಗೊತ್ತಾಯಿತೇ?

ಛೇರ್ಮನ್ :- ಅಲ್ಲಿ ಕುಳಿತಾಗ ಗೊತ್ತಾಯಿತು.

ಶ್ರೀ ಶಿವಾನಂದ ಎಸ್. ಪಾಟೀಲ್ :- ನಾನು ವಿನಂತಿ ಮಾಡುತ್ತೇನೆ, ನೀವು ನಮ್ಮ ಜೊತೆ ಇದ್ದೀರಿ. ನಾನು ನಿಮ್ಮ ಜೊತೆ ಜಗಳ ಆಡಿಲ್ಲ; ನನ್ನ ಜೊತೆ ನೀವೂ ಜಗಳವಾಡಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ನಿಮ್ಮದೆಲ್ಲಾ ಕೆಲಸವೆಂದರೆ ಏನಾದರೂ ಉದ್ಯೋಗ ಮಾಡಬೇಕಾದರೆ ಬಂಡವಾಳ ಬೇಕು, ನಿಮ್ಮದೇನೆಂದರೆ ದಿನಬೆಳಗಾದರೆ ಏನಾದರೊಂದು ಬಿಸಿನೆಸ್, ರಾಮ ಮಂದಿರ ಹಿಡಿದು ದಿನ ಬೆಳಗಾದರೆ ಬಿಸಿನೆಸ್ ಮಾಡುತ್ತೀರಿ.

ಶ್ರೀ ಶಿವಾನಂದ ಎಸ್. ಪಾಟೀಲ್ :– ನಾನು ರಾಮನೂ ಅಲ್ಲ, ರಹೀಮನೂ ಅಲ್ಲ, ನಾನು ಅದಕ್ಕಾಗಿ ವಿಶ್ವೇಶ್ವರ ಹೆಗಡೆಯವರಿಗೆ, ಇದನ್ನೇಕೆ ಡೈಲ್ಯೂಟ್ ಮಾಡಲು ಹೊರಟಿರಿ ಎಂದು ಹೇಳಿದ್ದು.

ಶ್ರೀ ಸಿ.ಆರ್. ಸಗೀರ್ ಅಹಮದ್ :– ನೀವು ಎಸ್.ಎಸ್. ಪಾಟೀಲರ ಜೊತೆ ಸೇರಿಕೊಳ್ಳಿ.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) :– ಮಾನ್ಯ ಅಧ್ಯಕ್ಷರೆ, ನಾನು ಇವತ್ತಿನ ವಿಚಾರದಲ್ಲಿ ಇಷ್ಟೇ ಹೇಳಲು ಇಚ್ಛೆಪಡುತ್ತೇನೆ. ಕೊಪ್ಪಳದಲ್ಲಿ ಅಲ್ಲ ಮೊನ್ನೆ 3 ದಿವಸಗಳ ಹಿಂದೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಕೂಡ ಒಂದು ಆತ್ಮಹತ್ಯೆಯಾಯಿತು. ಅದನ್ನು ಉದಯಟೀವಿಯಲ್ಲಿ ಎಲ್ಲರೂ ನೋಡಿರಬಹುದು ಮಾನ್ಯ ಕಾಗೋಡು ತಿಮ್ಮಪ್ಪನವರು ಅಲ್ಲಿಗೆ ಹೋಗುತ್ತಾರೆಂದು ನಾನು ಆಸೆಪಟ್ಟಿದ್ದೆ. 3–4 ದಿವಸಗಳ ಹಿಂದೆ ಆಯಿತು. ಅದು ಪ್ರಾಯಶಃ ಗೃಹ ಸಚಿವರ ಗಮನಕ್ಕೆ ಬಂದಿರಬಹುದೆಂದು ನಾನು ಭಾವಿಸುತ್ತೇನೆ. ಆದರೆ, ಶ್ರೀಮನಾಸ್ ಮುದ್ದಹನುಮೇಗೌಡರು ಸಬ್‌ಮಿಷನ್ ಮಾಡುವಾಗ ಒಂದು ಮಾತು ಹೇಳಿದರು. ಆತ್ಮಹತ್ಯೆ ಮಾಡಿಕೊಳ್ಳುವುದು ಅಪರಾಧ ಅದನ್ನು ಸರ್ವಥಾ ನಾನೂ ಒಪ್ಪುತ್ತೇನೆ, ನೀವೂ ಒಪ್ಪುತ್ತೀರಿ. ಆ ತರಹದ ಕಾನೂನನ್ನು ನಾವು ಸೃಷ್ಟಿ ಮಾಡಿದ್ದೇವೆ. ಆದರೂ ಸುದೈವದಿಂದ ನಿಮಗೆ ಈ ಸಂಗತಿ ಗೊತ್ತಿರಬಹುದು. ನೀವು, ನಾವು ಶಾಸಕರಾಗಿದ್ದಾಗ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಈ ವಿಷಯವನ್ನು ಎತ್ತಿದ್ದರು. ನಂತರ ಹೌಸ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಲಾಗಿತ್ತು. ನಂತರ, ಇಡೀ ರಾಜ್ಯ ಪ್ರದಕ್ಷಿಣೆ ಹಾಕಿ ವರದಿ ಕೊಟ್ಟೆವು. ವರದಿ ಕೊಟ್ಟು ಇವತ್ತಿಗೆ ಪ್ರಾಯಶಃ 5 ವರ್ಷಗಳಾಗಿರಬಹುದು. ಅದರಲ್ಲಿ ಆತ್ಮಹತ್ಯೆ ಮಾಡಿಕೊಳ್ಳಿ ಎಂದು ಯಾರಿಗೂ ಹೇಳಿಲ್ಲ. ಆದರೆ, ನಿಜವಾಗಲೂ ಆತ್ಮಹತ್ಯೆ ಮಾಡಿಕೊಳ್ಳುವವರು ಯರೂ ಇಲ್ಲ ಎನ್ನುವ ಪರಿಶೀಲನೆ ಮಾಡುವುದರಲ್ಲಿ ಸ್ವಲ್ಪ ಎಡವಿದ್ದೇವೆನ್ನುವ ಮಾತನ್ನೂ ಕೂಡ ಆ ವರದಿಯಲ್ಲಿ ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಪಟ್ಟಿದ್ದೇವೆ. ಆದರೆ, ಇದನ್ನು ನಿವಾರಿಸಲು ಶಾಶ್ವತ ಪರಿಹಾರ ಕೊಡಬೇಕಲ್ಲವೇ? ಆ ದಿಶೆಯಲ್ಲಿ ಸರ್ಕಾರ ಸಾಗಬೇಕೋ ಬೇಡವೋ? ಸಾಗಿದೆಯೋ, ಇಲ್ಲವೋ ಎನ್ನುವ ಮೂಲಭೂತ ಪ್ರಶ್ನೆ ನಮ್ಮೆದುರಿಗಿದೆ. ಅದಕ್ಕೆ ಪದೇ ಪದೇ ನಾವು ಹೇಳುವುದೇನೆಂದರೆ, ರಾಜ್ಯದಲ್ಲಿ 84 ತಾಲ್ಲೂಕುಗಳು ಶಾಶ್ವತ ಬರಗಾಲಕ್ಕೆ ತುತ್ತಾಗುತ್ತವೆ. ಅದಕ್ಕೆ ಕಾರಣವಿಷ್ಟೆ, ಒಂದೇ ಒಂದು ಮುಂಗಾರಿ ಮಳೆ ಬರದಿರುವುದರಿಂದ ಮಾತ್ರ ಬರಗಾಲಕ್ಕೆ ತುತ್ತಾಗುತ್ತವೆ. ಆಕಸ್ಮಾತ್ ಹಿಂಗಾರಿ ಮಳೆ ಬರದಿದ್ದರೆ, ಸಂಪೂರ್ಣ ಬರಗಾಲಕ್ಕೆ ತುತ್ತಾಗುತ್ತವೆ. ಅದಕ್ಕೆ ನಾವು ಒಂದು ವಿನಂತಿ ಮಾಡಿಕೊಂಡಿದ್ದು. ಮೊನ್ನೆ ಕೂಡ ತಾವು ಗಮನಿಸಿದ್ದೀರೋ ಇಲ್ಲವೋ ಗೊತ್ತಿಲ್ಲ, ನಾನು ಹೇಳಿದೆ, ಒಂದು ಕಡೆ ನಾವು ಬೃಹತ್ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದೇವೆ. This is related to that ನಾನು ನಿಮಗೆ ಅದಕ್ಕೇ ಹೇಳುತ್ತಿದ್ದೇನೆ.

ಛೇರ್ಮನ್ :– ಡಿಮಾಂಡ್ ಮೇಲೆ ಮಾತನಾಡುವಾಗ ಮಾತನಾಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಡಿಮಾಂಡ್ ಮೇಲೆ ಮಾತನಾಡುವಾಗ ಅದನ್ನು ಹೇಳುವುದಿಲ. ಶಾಶತವಾಗಿ ಬರಗಾಲವನ್ನು ಹೋಗಲಾಡಿಸಲು ಕೆಲವು ಯೋಜನೆಗಳನ್ನಾದರೂ

ಸರ್ಕಾರ ಸೃಷ್ಟಿಸಬೇಕಾಗಿತ್ತು. ಸೃಷ್ಟಿ ಕೊಡುಗೆ ವಿರುದ್ಧ ನಾವು ಹೋಗುವುದಕ್ಕಾಗುವುದಿಲ್ಲ. ಸ್ವಲ್ಪ ಮಟ್ಟಿಗಾದರೂ ಪರಿಹಾರದ ದಿಕ್ಕಿನಲ್ಲಿ ಸಾಗಿದ್ದರೆ ಪ್ರಾಯಶಃ ಪರಿಹಾರ ಸಿಗುತ್ತಿತ್ತೋ ಏನೋ? ಆದರೆ ಮಾನ್ಯ ಮುದ್ದಹನುಮೇಗೌಡರಿಗೆ ಈ ವಿಚಾರದಲ್ಲಿ ಒಂದು ಹೇಳಲು ಇಚ್ಛಿಸುತ್ತೇನೆ. ರಾಜ್ಯಾಂಗದಲ್ಲಿ ಎಲ್ಲಿ ಕೂಡ ಯಾರನ್ನಾದರೂ ಕಿಡ್ನಾಪ್ ಮಾಡಿ ಎಂದು ಬರೆದಿಲ್ಲ. ಆದರೂ ಕೆಲವೊಬ್ಬರನ್ನು ಕಿಡ್ನ್ಯಾಪ್ ಮಾಡುತ್ತಾರೆ. ಆ ಸಂದರ್ಭದಲ್ಲಿ ಯಾವ ಸಂದಿಗ್ಧ ಪರಿಸ್ಥಿತಿಗೆ ಸರ್ಕಾರ ಸಿಕ್ಕಿಕೊಳ್ಳುತ್ತದೆ ಎನ್ನುವುದು ನಿಮಗೆ ಗೊತ್ತಿದೆ. ಆದರೆ, ನಾವು ಯಾವ ರೀತಿ ಸಂಧಾನ ಮಾಡಿಸಿಕೊಂಡು, ಬಿಡಿಸಿಕೊಂಡು ಬರುತ್ತೇವೆ ಎಂಬುದು ಗೊತ್ತಿದೆ. ನಾವು ನಿಮ್ಮಲ್ಲಿ ಇಷ್ಟೇ ವಿನಂತಿ ಮಾಡುವುದು, ಯಾರನ್ನಾದರೂ ಯಾರಾದರೂ ಕಿಡ್ನ್ಯಾಪ್ ಮಾಡಿದಾಗ ನೀವು, ಸರ್ಕಾರದ ಪತಿಯಿಂದ ಮನೆತನಕ್ಕೆ ರಾಜ್ಯಕ್ಕೆ, ಸಮಾಜಕ್ಕೆ ಸಂದೇಶ ಕೊಡುತ್ತೀರಿ. ನಿಮ್ಮ ಜೊತೆಯಲ್ಲಿ ನಾವಿದ್ದೇವೆ, ನಿಮ್ಮನ್ನು ಬಿಡಿಸಿಕೊಂಡು ಬರುತ್ತೇವೆ ಎಂದು ಹೇಳುತ್ತೀರಲ್ಲ, ಹಾಗೆಯೇ ಈಗ ಆತ್ಮಹತ್ಯೆ ಮಾಡಿಕೊಳ್ಳುವ ರೈತರಿಗೆ ನಿಮ್ಮಿಂದ ಸ್ವಲ್ಪವಾದರೂ ಸಂದೇಶ ಹೋಗಲಿ. ಈಗಾಗಲೇ ಮಾನ್ಯ ಸಿಂಧ್ಯಾ ಅವರು ಸೋಮಶೇಖರ್‌ರವರು ತೋಟಗಾರಿಕೆಯಲ್ಲಿ, ಕೃಷಿಯಲ್ಲಿ ಎಷ್ಟು ಹಾನಿಯಾಗಿದೆ ಎಂದು ಹೇಳಿದರು. ಆದರೆ, ಸರ್ಕಾರ ರೈತರ ಪರ ಇದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ, ನಾವು ನಿಮ್ಮ ಜೊತೆಯಲ್ಲಿದ್ದೇವೆ, ನಿಮಗೆ ಯಾವ ರೀತಿ ಪರಿಹಾರ ಬೇಕೆಂದು ಕೇಳುತ್ತಿಲ್ಲ. ನೀವು 127 ಕೋಟಿ ರೂ. ಬಡ್ಡಿಯನ್ನು ಮನ್ನಾ ಮಾಡಿದ್ದೇವೆಂದು ಹೇಳಬಹುದು. ಅದು ಕೆಲವೊಬ್ಬರಿಗೆ ಮಾತ್ರ ಸೀಮಿತವಾಗಿ ಸಿಗುವ ಲಾಭ ಆದರೆ, ಇಡೀ ರೈತ ಸಮುದಾಯಕ್ಕೆ ಅದು ಸಿಗಬೇಕು. ಈಗಾಗಲೇ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡಿದರು. ಪಿಸ್ಕಲ್ ಡಿಫಿಸಿಟ್ ಅನ್ನು ಅರೆಸ್ಟ್ ಮಾಡಿದ್ದೇವೆ, ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್ ಅನ್ನು 2000 ಕೋಟಿ ರೂ. ಗಳವರೆಗೆ ಕಡಿಮೆ ಮಾಡಿದ್ದೇವೆಂದು ಹೀಗೆ 4-6 ಮೆಷರ್ಸ್ ಅನ್ನು ಇಲ್ಲಿ ಹೇಳಿದರು. ಅಲ್ಲದೆ ರೆವಿನ್ಯೂ ರೆಸೀಟ್ಸ್ ಇನ್‌ಕ್ರೀಸ್ ಆಗಿದೆ ಎಂದು ಹೇಳಿದರು. ನಿಮ್ಮ ಕಡೆ ಇಷ್ಟೊಂದು ಆದಾಯ ಇದ್ದಾಗ, ರೈತರಿಗೋಸ್ಕರ 200-300 ಕೋಟಿ ರೂಗಳ ಯೋಜನೆಯನ್ನಾದರೂ ತ್ವರಿತವಾಗಿ ಅನೌನ್ಸ್ ಮಾಡುವ ಕಾರ್ಯಕ್ರಮ ಹಾಕಿಕೊಂಡರೆ ನಿಜವಾಗಲೂ ಆತ್ಮಹತ್ಯೆ ಪ್ರಕರಣಗಳು ಇಲ್ಲಿಗೇ ನಿಲ್ಲುತ್ತವೆ. ಇಲ್ಲದಿದ್ದರೆ ನಿರಂತರವಾಗಿ ಇದು ನಡೆಯುತ್ತದೆ. ಇವತ್ತು ಕೇಂದ್ರ ಸರ್ಕಾರ ಏನು ಮಾಡಿತು ಎನ್ನುವ ದಿಸೆಯಲ್ಲಿ ನನ್ನ ಎರಡು ಮಾತಿಲ್ಲ. ಅವರೂ ಮಾಡಬೇಕು ಇವತ್ತು ಹೇಗೆ ಯಾರನ್ನಾದರೂ ಯಾರಾದರು ಕಿಡ್ನ್ಯಾಪ್ ಮಾಡಿದರೆ, ಇವತ್ತು 32 ಕೋಟಿ ರೂ.ಗಳನ್ನು ವೀರಪ್ಪನ್ ಹಿಡಿಯಲು ಖರ್ಚು ಮಾಡಿದ್ದೀರಿ ಆದರೆ, ಇವತ್ತು ರೈತರ ಬಡ್ಡಿ ಮನ್ನಾ ಮಾಡುವ ಕಾರ್ಯಕ್ರಮವಿದ್ದರೂ ಕೂಡ ಆತ್ಮಹತ್ಯೆ ಮಾಡಿಕೊಳ್ಳುವ ಸಂದಿಗ್ಧ ಪರಿಸ್ಥಿತಿ ಉದ್ಭವವಾಗದಿರುವ ಹಾಗೆ ಲಾಂಗ್ ಟರ್ಮ್ ಮೆಷರ್‌ಗಳನ್ನು ಸರ್ಕಾರ ಘೋಷಣೆ ಮಾಡಿದೆಯೇ ಎಂದು ನಾನು ತಮ್ಮ ಮೂಲಕ ಅವರನ್ನು ಕೇಳಬಯಸುತ್ತೇನೆ. ಇದನ್ನೊಂದಾದರೂ ಮಾಡಲೆಂದು ನಾನು ತಮ್ಮ ಮೂಲಕ ಕೇಳುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಗಡ್ಡದೇವರ ಮಠ್ (ಶಿರಹಟ್ಟಿ) :- ಮಾನ್ಯ ಅಧ್ಯಕ್ಷರೆ, ಕೊಪ್ಪಳ ಜಿಲ್ಲೆಯಲ್ಲಿ ನಡೆದ ಘಟನೆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈ ವಿಚಾರದಲ್ಲಿ ನಾನೂ ಸಹ ವಿಷಾದ ವ್ಯಕ್ತಪಡಿಸುತ್ತೇನೆ. ಆದರೆ, ಬಹಳ ಮುಖ್ಯವಾಗಿ ನನ್ನ ತಾಲ್ಲೂಕಿನಲ್ಲಿ ನಡೆದ ಕೆಲವು ಸಂಗತಿಗಳನ್ನು ಸಭೆಯ ಗಮನಕ್ಕೆ ತರಲು ಸಾಕಷ್ಟು ಪ್ರಯತ್ನ ಮಾಡಿದರೂ ಇಲ್ಲಿ ವೇಳೆ ಸಿಗದಿದ್ದರಿಂದ ಅಷ್ಟೇ ವಿಷಾದದಿಂದ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಿನ್ನೆ ತಾನೇ ನನ್ನ ತಾಲ್ಲೂಕಿನಲ್ಲಿ ಅನೇಕ ಜನ ರೈತರು ಚಾಪಡಿಗೆ

ಕೀಲಿ ಹಾಕುವ ಸಂದರ್ಭ ಅಥವಾ ತಾಲ್ಲೂಕು ಕಛೇರಿಗೆ ಕೀಲಿ ಹಾಕುವ ಸಂದರ್ಭದಲ್ಲಿ ಮುಂದಾಗಿದ್ದಾರೆ. ಅದಕ್ಕೆ ಕಾರಣವನ್ನು ಅವರು ಹೇಳುವುದೇನೆಂದರೆ, ಈಗ 31ನೇ ತಾರೀಖಿಗೆ ಏನು ಬೆಳೆ ವಿಮೆಗೆ ಪ್ರೀಮಿಯಂ ತುಂಬುವ ಕಡೆಯ ದಿನಾಂಕವನ್ನು ನಿಗದಿಪಡಿಸಲಾಗಿತ್ತು ಅದನ್ನು ವಿಸ್ತರಿಸುವ ಬಗ್ಗೆ ಕೇಳಿದ್ದಾರೆ. ಆದರೆ, ನಾನು ಇವತ್ತಿನ ಸಂದರ್ಭದಲ್ಲಿ ಸ್ವಾಗತಿಸುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದಾರೆ.

ಛೇರ್ಮನ್ :- ಅದರ ಬಗ್ಗೆ ಪ್ರಾಸಂಗಿಕವಾಗಿ ಹೇಳಿ.

ಶ್ರೀ ಗಡ್ಡದೇವರ ಮಠ್ :- ಆದರೆ, ಅದಕ್ಕೋಂದು ಏನಾದರೂ ವಿವರಣೆ ಕೇಳಿದರೆ, ಅಲ್ಲಿಯ ಜನರಿಗೆ ತೃಪ್ತಿಪಡಿಸಲು, ಸಮಾಧಾನ ಹೇಳಲು ಸಾಧ್ಯವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಅಗ್ರಿಕಲ್ಚರ್ ಮಿನಿಸ್ಟರ್‌ರವರು ಎಕ್ಸ್‌ಟೆನ್‌ಷನ್‌ಗೆ ಬರೆದಿದ್ದಾರೆ. ಅದನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಮೊನ್ನೆ ಡೆಲಿಗೇಷನ್ ಹೋದಾಗಲೂ ಕೂಡ ಮಾನ್ಯ ರಾಜ್‌ನಾಥ್‌ಸಿಂಗ್‌ರವರನ್ನು ರಿಕ್ವೆಸ್ಟ್ ಮಾಡಿದ್ದೆವು. ಒಂದು ತಿಂಗಳು ಎಕ್ಸ್‌ಟೆನ್‌ಷನ್‌ಗೆ ಅವರನ್ನು ಕೋರಿದ್ದೇವೆ. ಅವರು ಕನ್‌ಸಿಡರ್ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ಅವರ ಆದೇಶವನ್ನು ಕಾಯುತ್ತಿದ್ದೇವೆ.

ಛೇರ್ಮನ್ :- ಇಲ್ಲಿಗೆ ಚರ್ಚೆ ಮುಗಿಯಿತೆಂದು ಭಾವಿಸುತ್ತೇನೆ. ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಮಾನ್ಯ ಅಧ್ಯಕ್ಷರೆ, ಜಿಲ್ಲಾಧಿಕಾರಿಗಳ.....

ಛೇರ್ಮನ್ :- ನಾನು ಪದೇ ಪದೇ ಹೇಳುವುದಕ್ಕಾಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಅದರ ಪೂರ್ವದಲ್ಲಿ, ನಾನು ಈ ವಿಷಯದ ಮೇಲೆ ಮಾತನಾಡಲು ಬಯಸಿದ್ದೆ. ದಯವಿಟ್ಟು ಕ್ಷಮಿಸಬೇಕು. ಇದು ಗಂಭೀರವಾದ ವಿಷಯ. ವರ್ಷದಿಂದ ವರ್ಷಕ್ಕೆ ಈ ಪ್ರಕರಣಗಳು ಜಾಸ್ತಿಯಾಗುತ್ತಿವೆ. ಪ್ರತಿಯೊಂದು ಸಾವನ್ನೂ ಸಹ ಆತ್ಮಹತ್ಯೆ ಎಂದು ಪರಿಗಣನೆ ಮಾಡುವುದು ಅಥವಾ ಸಂಬಂಧವಿಲ್ಲವೆಂದು ಹೇಳುವ ಪ್ರವೃತ್ತಿಗೆ ಅವಕಾಶ ಕೊಡಬಾರದು. ನಿಜವಾಗಲೂ ಯಾರಿಗೆ ಸಿಗಬೇಕಾಗಿದೆ ಅವರಿಗೆ ದೊರೆಯುವ ಪ್ರಯತ್ನ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಅವರು ಬಹಳ ಕಷ್ಟದಲ್ಲಿದ್ದಾರೆ. ಒಂದೇ ಕಾರಣಕ್ಕಾಗಿ ಇದು ಆಗಿದೆ ಎಂದು ಹೇಳುವುದು ಕಷ್ಟ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಅಲ್ಲ, ಜಾಗತಿಕ ಪರಿಸ್ಥಿತಿ, ಉದಾರೀಕರಣದ ನೀತಿಯಲ್ಲಿ ನಾವು ಹೋಗುವಾಗ ಬಹಳಷ್ಟು ಮಟ್ಟಿಗೆ ಇದು ಕಾರಣವಾಗಿದೆ. ಇರುವಂಥ ನೈಸರ್ಗಿಕ ಪರಿಸ್ಥಿತಿಯು ಕಾರಣವಾಗಿದೆ, ರೈತ ತನ್ನ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ಇವತ್ತು ಬಂದಿದೆ, ಬಹುತೇಕ ಸದನದ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಉತ್ತರ ಕೊಡುತ್ತದೆ ಎಂದು ನಾನು ಭಾವಿಸುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :- ಮಾನ್ಯ ಛೇರ್ಮನ್‌ರವರೇ, ಸುಮಾರು ಎರಡು ತಾಸುಗಳ ಕಾಲ ಕೊಪ್ಪಳ ಜಿಲ್ಲೆಯಲ್ಲಿ ನಡೆದಂಥ ಘಟನೆಯ ಬಗ್ಗೆ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು, ಸೋಮಶೇಖರ್‌ರವರು, ಪಿ.ಜಿ.ಆರ್. ಸಿಂಧ್ಯಾರವರು, ಮುದ್ದಹನುಮೇಗೌಡರವರು, ಕರಡಿ ಸಂಗಣ್ಣನವರು, ವಿಶ್ವೇಶ್ವರ ಹೆಗಡೆಯವರು, ಶಿವಾನಂದ ಪಾಟೀಲ್‌ರವರು, ಗಡ್ಡದೇವರ್ ಮಠ್‌ರವರು, ಇವರೆಲ್ಲರೂ ಇದರ ಬಗ್ಗೆ ಸಾಕಷ್ಟು ತಿಳಿಸಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :- ಕೊನೆಯದಾಗಿ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವವರು ತಮಗೆ ಬಹಳ ಚೆನ್ನಾಗಿ ಹೇಳಿದರು, ಅದನ್ನೇ ನೀವು ಬಿಟ್ಟುಬಿಟ್ಟಿರಿ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ :- ತಾವೂ ಕೂಡ ಹೇಳಿದಿರಿ, ಇವತ್ತು ಕೊಪ್ಪಳ ಜಿಲ್ಲೆಯಲ್ಲಿ ಕುಷ್ಟಗಿ ತಾಲ್ಲೂಕಿನ ಎಂ.ರಾಂಪುರ ಗ್ರಾಮದಲ್ಲಿ ನಿನ್ನೆ ಬೆಳಗಿನ ಜಾವ 4–30 ಗಂಟೆಗೆ ಇದು ನಡೆದಂಥ ದುರ್ಘಟನೆ. ಈ ಕುಟುಂಬದಲ್ಲಿ ತಂದೆ–ತಾಯಿ ಹಾಗೂ ಮಕ್ಕಳು ಸೇರಿದಂತೆ ಒಟ್ಟು ಎಂಟು ಮಂದಿ ಇರತಕ್ಕಂತ ಕುಟುಂಬ. ಇದರಲ್ಲಿ ನಾಲ್ಕು ಜನ ಗಂಡು ಮಕ್ಕಳು, ನಾಲ್ಕು ಜನ ಹೆಣ್ಣು ಮಕ್ಕಳು ಹಾಗೂ ತಂದೆ–ತಾಯಿ ಇರುವಂಥ ಕುಟುಂಬ. ಇವತ್ತು ಇಲ್ಲಿ ಮಾತನಾಡಿದ ಮಾನ್ಯ ಸದಸ್ಯರುಗಳು ಸಾಕಷ್ಟು ಅವರ ಬಗ್ಗೆ ತಿಳಿಸಿದರು, ಅವರಿಗೆ ಬಡತನ ಇತ್ತು, ರೈತರಾಗಿದ್ದರು. ಸಾಲ ಹೆಚ್ಚಿಗೆ ಆಗಿತ್ತು, ಹಸಿವಿನಿಂದ ಬಳಲುತ್ತಿದ್ದರು, ಸುಮಾರು 2–3 ದಿನಗಳಿಂದಲೂ ಅವರ ಮನೆಯಲ್ಲಿ ಒಲೆಯನ್ನೇ ಹಚ್ಚಿಲ್ಲ ಎಂದು ಪತ್ರಿಕೆಯಲ್ಲಿ ಬಂದಂಥ ವಿಷಯವನ್ನು ಸಹ ತಾವು ಹೇಳಿದಿರಿ. ನಾನೂ ಕೂಡ ಈ ದಿವಸದ ಎಲ್ಲಾ ಪತ್ರಿಕೆಗಳನ್ನು ಓದಿದ್ದೇನೆ. ಏಕೆಂದರೆ, ಈ ಎಂ. ರಾಂಪುರ ನನ್ನ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಪಕ್ಕದ ಹಳ್ಳಿ ನಾನು ಈ ಹಿಂದೆ ಈ ಗ್ರಾಮಕ್ಕೆ ಎರಡು ಸಲ ಭೇಟಿ ಕೊಟ್ಟಿದ್ದೆ ಬರಗಾಲ ಕಾಮಗಾರಿಯಲ್ಲಿ ಎರಡು ಕಾಮಗಾರಿಗಳನ್ನು ನಾನು ಹಾಗೂ ಸ್ಥಳೀಯ ಶಾಸಕರು ಹೋಗಿ ವಿಸಿಟ್ ಮಾಡಿ ಕೆಲಸ ಪ್ರಾರಂಭ ಮಾಡಿಸಿದ್ದು ನಿಜ. ಪ್ರಜಾವಾಣಿ ಹಾಗೂ ಕನ್ನಡಪ್ರಭ ಪತ್ರಿಕೆಯಲ್ಲಿ ಈ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದು, ಉಳಿದ ಪತ್ರಿಕೆಗಳಲ್ಲಿ ಹಸಿವಿನಿಂದಾಗಲಿ ಅಥವಾ ಒಲೆಯಲ್ಲಿ ಬೆಂಕಿ ಹಾಕಿಲ್ಲ ಎಂದು ಎಲ್ಲೂ ವರದಿ ಮಾಡಿಲ್ಲ. ಇದು ವರದಿ ಬಂದಂಥ ವಿಷಯ. ಇವತ್ತು ಅಲ್ಲಿರತಕ್ಕಂಥ ನತದೃಷ್ಟ ತಂದೆಗೆ 70 70 ವರ್ಷ, ತಾಯಿಗೆ 50 ವರ್ಷ, ಆ ಒಂದು ಗ್ರಾಮದಲ್ಲಿ ಅವರು ಚಿಕ್ಕದಾದ ಕಿರಾಣಿ ಅಂಗಡಿ ಇಟ್ಟುಕೊಂಡು ಅಂದರೆ ಹೋಟೆಲ್ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಇವರ ಕುಟುಂಬದ ನಾಲ್ಕು ಜನ ಗಂಡು ಮಕ್ಕಳಲ್ಲಿ ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳಲ್ಲಿ ಕೇವಲ ಒಬ್ಬ ಹೆಣ್ಣುಮಕ್ಕಳಿಗೆ ಮದುವೆಯಾಗಿತ್ತು, ಮೊದಲನೆಯದಾಗಿ ಸತ್ತಂಥ ಶ್ರೀಮತಿ ಈರಬಸಮ್ಮನವರು ಸುಮಾರು 20,25 ವರ್ಷಗಳಿಂದ ಮೂಲವ್ಯಾಧಿ ಹಾಗೂ ಕೆಮ್ಮು ಇತರ ಖಾಯಿಲೆಗಳಿಂದ ಬಾಧೆಪಡುತ್ತಿದ್ದರು. ಇವರ ಮನೆಯವರು ಎಲ್ಲರೂ ದುಡಿದು ಇವರ ಆರೋಗ್ಯ ಸುಧಾರಣೆಗಾಗಿ ಎಷ್ಟೇ ಹಣ ಖರ್ಚು ಮಡಿದರೂ ಆ ತಾಯಿಗೆ ಗುಣ ಮುಖವಾಗಲಿಲ್ಲ. ಅವರು ಎಷ್ಟೇ ಪ್ರಯತ್ನಪಟ್ಟರೂ ಅದು ಸಾಧ್ಯವಾಗಲಿಲ್ಲ, ಸುಮಾರು 20 ವರ್ಷಗಳಿಂದ ನಾವು ತೋರಿಸಿದರೂ ಆ ತಾಯಿಗೆ ಆರಾಮಾಗಲಿಲ್ಲವೆಂದು ಅವರೆಲ್ಲರು ಬಹಳ ನೊಂದಿದ್ದರು. ಆ ತಾಯಿ ಈರಬಸಮ್ಮನವರು ಬೆಳಿಗಿನ ಜಾವ ನಾಲ್ಕು ಮೂವತ್ತು ಗಂಟೆಗೆ ವಿಧಿವಶರಾದರು. ಆ ಸಂದರ್ಭದಲ್ಲಿ ಮೂರು ಜನ ತಮ್ಮಂದಿರು ಹಾಗೂ ಮೂರು ಜನ ತಂಗಿಯರು ಒಟ್ಟು ಆರು ಜನ ಮನೆಯಲ್ಲಿ ಇದ್ದರು. ಅದರಲ್ಲಿ ಒಬ್ಬ ಮಹಿಳೆಗೆ ಮದುವೆಯಾಗಿದ್ದು ಆಕೆ ಮದುವೆಯಾದ ಮೇಲೆ ಗಂಡನನ್ನು ಬಿಟ್ಟು ತಾಯಿಯ ಮನೆಯಲ್ಲಿಯೇ ಇದ್ದಳೆಂಬ ವರದಿ. ನಮ್ಮ ಪಕ್ಕದ ಹಳ್ಳಿಯಾದ್ದರಿಂದ ಅದು ನಮಗೆ ಗೊತ್ತಿದ್ದ ವಿಷಯ. ಇವರೆಲ್ಲರೂ ಈರಬಸಮ್ಮನವರು ಮರಣ ಹೊಂದಿದತಕ್ಷಣವೇ ಬಹಳ ಜಿಗುಪ್ಸೆಗೊಂಡು, ಇಷ್ಟೆಲ್ಲಾ ನಾವು ಆಸ್ಪತ್ರೆಗೆ ತೋರಿಸಿ ಹಣ ಖರ್ಚು ಮಾಡಿದರೂ ನಮ್ಮಕ್ಕ ಉಳಿಯಲಿಲ್ಲ, ನಾವು ಇಷ್ಟೆಲ್ಲಾ ಖರ್ಚು ಮಾಡಿದ್ದು ವೇಸ್ಟ್ ಆಯಿತು, ಅವರಿಗೋಸ್ಕರ ಉಳಿದವರು ಇದುವರೆವಿಗೂ ಇನ್ನೂ ಮದುವೆಯಾಗಿಲ್ಲ ಎಂದು ಹತಾಶರಾಗಿದ್ದರು. ಮುಖ್ಯವಾದ ಅಂಶ ಏನೆಂದರೆ, ಉಳಿದಿದ್ದ 6–7 ಜನರಿಗೆ ಮದುವೆಯಾಗಿರಲಿಲ್ಲ. ಏಕೆಂದರೆ ಆ

ತಾಯಿಗೆ ಅರಾಮ ಆದರನೇ ನಾವು ಮದುವೆಯಾಗುವುದು ಎಂದು ತಮ್ಮನವರು ಹಾಗೂ ತಂಗಿಯರ ಅಭಿಪ್ರಾಯವಾಗಿತ್ತು ಹಾಗಾಗಿ ಈ ದುರ್ಘಟನೆಯಾದ ತಕ್ಷಣ ಅಲ್ಲಿರತಕ್ಕಂಥ ಕ್ರಿಮಿನಾಶವನ್ನು ತೆಗೆದುಕೊಂಡು ಅವರೆಲ್ಲರೂ ಆತ್ಮಹತ್ಯೆ ಮಾಡಿಕೊಂಡಿರುವುದು ನಿಜ. ಇದರ ಬಗ್ಗೆ ನಮ್ಮದೇನೂ ಇಲ್ಲ. ಈ ವಿಷಯ ತಿಳಿದಾಕ್ಷಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಅಸಿಸ್ಟೆಂಟ್ ಕಮಿಷನರ್ ಅವರು, ಅಲ್ಲಿರತಕ್ಕಂಥ ಜೆಡ್‌ಪಿ ಮೆಂಬರ್ ಇರಬಹುದು, ಟಿಪಿ ಮೆಂಬರ್ ಇರಬಹುದು, ಇವರೆಲ್ಲರೂ ಸ್ಥಳಕ್ಕೆ ಹೋಗಿ ವಿಸಿಟ್ ಮಾಡಿದ್ದಾರೆ. ವಿಧಾನಸಭಾ ಅಧಿವೇಶನ ನಡೆಯುತ್ತಿದ್ದುದರಿಂದ ಆ ಭಾಗದ ಎಲ್ಲಾ ಶಾಸಕರು ಇಲ್ಲಿಯೇ ಇದ್ದರು. ಅವರು ಈ ವಿಷಯವನ್ನು ನಿನ್ನೆ ರೈಸ್ ಮಾಡಿದರು, ಅವರು ಇವತ್ತು ತಕ್ಷಣ ಜಿಲ್ಲೆಗೆ ಹೋಗಿ ಆ ಒಂದು ಕುಟುಂಬಕ್ಕೆ ಸಾಂತ್ವನ ಹೇಳಿದ್ದಾರೆ. ನಾನೂ ಕೂಡ ಮಾರನೇ ದಿವಸ ಹೋಗಬೇಕೆಂದು ಇದ್ದದ್ದು ನಿಜ, ನಾನು ಹೋಗಬಾರದು ಎಂದಲ್ಲ, ವಿಧಾನಸಭಾ ಅಧಿವೇಶನ ಇದ್ದ ಕಾರಣ ಇವತ್ತು ಹೋಗಬೇಕಾದುದು ನಮ್ಮೆಲ್ಲರ ಕರ್ತವ್ಯ. ಇವತ್ತು ಎಲ್ಲೆಲ್ಲಿ ಇಂಥ ಅಹಿತಕರ ಘಟನೆ ನಡೆಯುತ್ತದೆ, ಅಂಥ ಇರತಕ್ಕಂಥ ಎಲ್ಲಾ ಜಿಲ್ಲಾ ಸಚಿವರು ಪ್ರಮಾಣಿಕವಾಗಿ ಹೋಗುತ್ತಾರೆ, ಭೇಟಿ ಕೊಡುತ್ತಾರೆ, ಪ್ರತಿಯೊಂದೂ ವಿಷಯವನ್ನು ನೋಡುತ್ತರೆ. ನಾನೂ ಕೂಡ ನಾಳೆ ಅಲ್ಲಿಗೆ ಭೇಟಿ ಕೊಡುತ್ತೇನೆ. ಏಕೆಂದರೆ, ಅದು ನನ್ನ ಜಿಲ್ಲೆಯಾಗಿದ್ದು ಆ ಹಳ್ಳಿ ನನ್ನ ಪಕ್ಕದ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವುದರಿಂದ ನನಗೆ ಇವತ್ತು ಬಹಳ ದುಃಖವಾಗುತ್ತದೆ. ಅವರು ಇಂಥ ಒಂದು ಕೆಟ್ಟ ಮನಸ್ಸು ಮಾಡಿದರಲ್ಲಾ ಎಂದು ನನಗೂ ಕೂಡ ಬಹಳ ನೋವು ಆಗುತ್ತದೆ. ಅದಕ್ಕೆ ನಾನು ನಾಳೆ ಅಲ್ಲಿಗೆ ಭೇಟಿ ಕೊಟ್ಟು ಇನ್ನು ಅಲ್ಲಿರತಕ್ಕಂಥ ಅವರ ತಂದೆ–ತಾಯಿಯಂದಿರು ಮತ್ತು ಇನ್ನೊಬ್ಬ ಮಗ ಏನು ಇದ್ದಾರೆ ಅವರಿಂದ ಕೂಡ ವಾಸ್ತವಿಕವಾಗಿ ಅಲ್ಲಿ ಏನು ಆಯಿತು ಎಂಬ ಬಗ್ಗೆ ಮಾಹಿತಿ ತೆಗೆದುಕೊಳ್ಳುತ್ತೇನೆ. ಇದಲ್ಲದೇ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ವಿಷಯ ತಿಳಿಸಿದ್ದೇನೆ.

(ಉಪಾಧ್ಯಕ್ಷರು (ಮನೋಹರ್ ಹೆಚ್. ತಹಸೀಲ್ದಾರ್) ಅಧ್ಯಕ್ಷ ಸ್ಥಾನವನ್ನಲಂಕರಿಸಿದರು.)

ಅವರು ಕೂಡ ವಿಷಯವನ್ನು ಆಲಿಸಿದ್ದಾರೆ, ನಾನು ಮತ್ತು ಸ್ಥಳೀಯ ಶಾಸಕರು ಇದಕ್ಕಾಗಿ ತಮ್ಮ ವಿಶೇಷ ಅನುದಾನದಲ್ಲಿ ಹೆಚ್ಚಿಗೆ ಹಣ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ಮಾನ್ಯ ಕರಡಿ ಸಂಗಣ್ಣನವರು ಹೇಳಿದ ಪ್ರಕಾರ, ಅಲ್ಲಿ ಮುಖ್ಯಸ್ಥರು ಯಾರು ಇದ್ದಾರೆ ಆ ಕುಟುಂಬದವರಿಗೆ ಈಗಾಗಲೇ ನಿನ್ನೆ ದಿವಸ ಹತ್ತು ಸಾವಿರ ರೂಪಾಯಿಗಳ ಚೆಕ್ ಅನ್ನು ಕೊಡಲಾಗಿದೆ. ಇನ್ನೂ ಇಬ್ಬರಿಗೆ ಕೊಡಬೇಕೆನ್ನು ಉದ್ದೇಶ ಇದ್ದು ಅದರ ಬಗ್ಗೆ ನಾಳೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ವಿಷಯದಲ್ಲಿ ನಾನು ಮುದಾಂ ಅಲ್ಲಿಗೆ ಹೋಗಿ ಎಲ್ಲಾ ವಿಷಯ ತಿಳಿದುಕೊಂಡು ಹೇಳಲಿಕ್ಕೆ ಅನುಕೂಲವಾಗುತ್ತಿತ್ತು. ಆದರೂ ತಾವೇನು ಇವತ್ತು ಸದನದಲ್ಲಿ ಹೇಳಿದ್ದೀರಿ ಹಾಗೂ ನನ್ನ ಹತ್ತಿರ ಬಂದಂಥ ವರದಿ ನಾನು ಅಲ್ಲಿರತಕ್ಕಂಥ ಚುನಾಯಿತ ಪ್ರತಿನಿಧಿಗಳೊಡನೆ ಚರ್ಚೆ ಮಾಡಿದ್ದು, ಎಲ್ಲಾ ವಿಷಯಗಳನ್ನು ಸದನಕ್ಕೆ ಹೇಳಿದ್ದೇನೆ. ಇವತ್ತು ಬರಗಾಲ ಕಾಮಗಾರಿ ಎಲ್ಲಾ ಹೆಚ್ಚಿನ ರೀತಿಯಲ್ಲಿ ನಡೆಯಬೇಕೆನ್ನುವುದೇ ಈ ಮನೆಯ ಬಹುತೇಕ ಸದಸ್ಯರ ಅಭಿಪ್ರಾಯವಾಗಿದೆ. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ, ಹೋದ ಸಲ ನಾವು ಸುಮಾರು 159 ತಾಲ್ಲೂಕುಗಳನ್ನು ಬರಗಾಲವೆಂದು ಘೋಷಣೆ ಮಾಡಿದ್ದೆವು. ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರು ಕೇವಲ 126 ತಾಲ್ಲೂಕುಗಳಲ್ಲಿ ಇವತ್ತು ಘೋಷಣೆ ಮಾಡಿರುವುದು ಬಹಳ ಕಡಿಮೆಯಾಯಿತು ಎಂದು ಹೇಳಿದರು. ರಾಜ್ಯ ಮಟ್ಟದಲ್ಲಿ ಇರತಕ್ಕಂಥ ಅಡಿಷನಲ್ ಚೀಫ್ ಸೆಕ್ರೆಟರಿ, ಸೆಕ್ರೆಟರಿ ಮತ್ತು ಡೆವಲಪ್‌ಮೆಂಟ್ ಕಮೀಷನರ್ ರೆವಿನ್ಯೂ ಕಮಿಷನರ್ ಮತ್ತು ಹವಮಾನ ತಜ್ಞರು, ಪ್ರತಿವಾರ ಒಂದು ಸಭೆ ನಡೆಸುತ್ತಾರೆ, ಕಳೆದ ಮೂರು ವರ್ಷಗಳಲ್ಲಿ

ಆದಂಥ ಮಳೆ, ಅಂದರೆ, ಮೇ-ಏಪ್ರಿಲ್-ಜೂನ್, ಈ ಮೂರು ತಿಂಗಳಲ್ಲಿ ಯಾವ್ಯಾವ ವರ್ಷ ಹೆಚ್ಚಿಗೆ ಮಳೆಯಾಗಿದೆ ಅದನ್ನು ನೋಡಿಕೊಂಡು ನಾವು ಇವತ್ತು ಈ 126 ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂದು ಘೋಷಣೆ ಮಾಡಿದ್ದೇವೆ. ತಾವು ಇದನ್ನು ಏಕೆ ಹೆಚ್ಚಿಸಿಲ್ಲವೆಂದು ಪ್ರಶ್ನೆ ಕೇಳಿದರು? ಪ್ರತಿವಾರ ನೆಡೆಯತಕ್ಕಂಥ ಸಭೆಯಲ್ಲಿ ಎಲ್ಲೆಲ್ಲಿ ಮಳೆಯ ಪ್ರಮಾಣ ಕಡಿಮೆಯಗುತ್ತದೆ ಅದನ್ನು ನೋಡಿಕೊಂಡು ಮಾಡಲಿಕ್ಕೆ ಇನ್ನೂ ಅವಕಾಶವಿದೆ. ಹಿಂದೆ ಹೋದ ಸಲ ಕೂಡ ನಾವು 136 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಗುರುತಿಸಿ ನಂತರ ಎಲ್ಲೆಲ್ಲಿ ಮಳೆಯಾಗಿಲ್ಲವೆಂದು ನೋಡಿಕೊಂಡು ನಂತರ 159 ತಾಲ್ಲೂಕುಗಳಿಗೆ ವಿಸ್ತಾರ ಮಾಡಿದ್ದು ತಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಇವತ್ತು ಅಲ್ಲಿ ಬರಗಾಲ ಕಾಮಗಾರಿ ನಡೆದಿಲ್ಲ, ಕೂಲಿಗಾಗಿ ಕಾಳು ಯೋಜನೆಯ ಕೆಲಸ ನಡೆದಿಲ್ಲ. ಎನ್ನುವುದು ವಿರೋಧ ಪಕ್ಷದ ನಾಯಕರ ಆರೋಪ ಮಾನ್ಯ ಅಧ್ಯಕ್ಷರೆ, ನಾನೇ ಸ್ವತಃ ಅಲ್ಲಿಗೆ ಹೋಗಿದ್ದು, ಅಲ್ಲಿ ಎರಡು ಕಾಮಗಾರಿಗಳನ್ನು ಅಂದರೆ ಗೋಕಟ್ಟೆ ಮಾಡತಕ್ಕಂಥ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಸ್ವತಃ ನಾನೇ ಸ್ಥಳಕ್ಕೆ ಭೇಟಿ ಕೊಟ್ಟಿದ್ದೇನೆ. ಇವತ್ತು ಒಂದೊಂದು ಜಿಲ್ಲೆಯಲ್ಲಿ ನಾಲ್ಕು ಅಥವಾ ಐದು ತಾಲ್ಲೂಕುಗಳು ಇರಬಹುದು, ಆ ಜಿಲ್ಲೆಯಲ್ಲಿ ಹಣ ಎಷ್ಟು ಬಂತು, ಅಕ್ಕಿ ಎಷ್ಟು ಬಂತು, ಎಂಬ ಅಂಕಿ ಅಂಶಗಳನ್ನು ನೋಡಿಕೊಂಡು ಆ ತಾಲ್ಲೂಕಿನ ಟಾಸ್ಕ್‌ಫೋರ್ಸ್‌ನಲ್ಲಿ ನಾವು ಹಣ ಬಿಡುಗಡೆ ಮಾಡುತ್ತೇವೆ. ಅಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಪ್ರತಿಯೊಂದು ಹಳ್ಳಿಗೂ ಕೆಲಸ ಕೊಡಬೇಕು ಎನ್ನುವುದು ನಮ್ಮ ಉದ್ದೇಶವಿದ್ದು, ಇವತ್ತು ಈ ಗ್ರಾಮ ಪಂಚಯಿತಿಗೆ ಕೊಟ್ಟರೆ ಮತ್ತೊಂದು ದಿವಸ ಬೇರೆ ಗ್ರಾಮ ಪಂಚಾಯಿತಿಗೆ ಕೆಲಸ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಂಡು, ಇವತ್ತು ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಈ ಒಂದು ಬರ ಕಾಮಗಾರಿಯಲ್ಲಿ ಕೂಲಿಗಾಗಿ ಕಾಳು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದರೆ ಅಲ್ಲಿ ಒಮದು ವಾರದಿಂದ ಅವರಿಗೆ ಏನೂ ಕೆಲಸ ಸಿಕ್ಕಿಲ್ಲ. ಒಂದು ವಾರದಿಂದ ಅವರಿಗೆ ಆಹಾರ ಸಿಕ್ಕಿಲ್ಲ ಎನ್ನುವುದು ಏನು ಇದೆ. ಈ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆದರೂ ಅವರು ಮುಖ್ಯವಾಗಿ ಹಸಿವಿನಿಂದ ಸತ್ತರು ಎಂದು ಹೇಳಿದರು. ಇದು ಮಾತ್ರ ಆಗಬಾರದು ಯಾವುದೇ ಕಾರಣಕ್ಕೂ ಈ ರಾಜ್ಯದಲ್ಲಿ ಇವತ್ತಾದರೂ ಅಥವಾ ಮುಂದಾದರೂ ಕೂಡ ಹಸಿವಿನಿಂದ ಯಾರೂ ಸಾಯಬಾರದು, ಈ ಸದನದ ಉದ್ದೇಶವೇ ಅದು ಇದೆ. ಅದಕ್ಕೆ ನಾನು ಇಡೀ ಜನತೆಗೆ ಮನವಿ ಮಾಡುತ್ತೇನೆ, ಈ ಒಂದು ಪರಿಸ್ಥಿತಿ ಮುಂದೆ ಬರಬಾರದು ಎನ್ನುವ ಉದ್ದೇಶದಿಂದ ನಾನು ಯವುದೇ ಕಾರಣಕ್ಕೂ ಈ ಹಸಿವಿನಿಂದ ಸಾಯಬಾರದು ಎಂದು ಹೇಳುತ್ತೇನೆ. ಅವರು ಏನು ಹಸಿವಿನಿಂದ ಸತ್ತರು ಎಂದು ಹೇಳಿದರು, ಅದು ಸತ್ಯಕ್ಕೆ ದೂರದ ಮಾತು ನಾನು ಕೂಡ ದೂರವಾಣಿಯಲ್ಲಿ ಮಾತನಾಡಿ ವಿಷಯವನ್ನು ತಿಳಿದುಕೊಂಡಿದ್ದೇನೆ. ಇವತ್ತು ಜೀವನದಲ್ಲಿ ಜುಗುಪ್ಸೆಗೊಂಡು ಈ ರೀತಿಯಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೇ ಇನ್ನು ಮುಖ್ಯವಾಗಿ ರೈತರ ಬಗ್ಗೆ ಹೇಳುವುದಾದರೆ, ಎಷ್ಟು ಜನ ರೈತರು ಸತ್ತಿದ್ದಾರೆ? ನನ್ನ ಹತ್ತಿರ ಬಂದಂಥ ಮಾಹಿತಿ ಪ್ರಕಾರ ಸುಮಾರು 185 ಜನ ರೈತರು ಸತ್ತಿದ್ದಾರೆ ಎಂದು ನನಗೆ ಒಂದು ರಿಪೋರ್ಟ್ ಇದೆ. 185 ಜನ ರೈತರು ಎಂದಾಕ್ಷಣ ಅವರು ಯವ ಕಾರಣಕ್ಕೆ ಸತ್ತರು? ಯಾವ ವಿಷಯಕ್ಕೆ ಸತ್ತರೇ, ಸಾಲ ಮಾಡಿಕೊಂಡಿದ್ದಾರೆ ಅಥವಾ ಬೇರೆ ಬೇರೆ ಕಾರಣಗಳಿಗೆ ಸತ್ತರು ಎನ್ನುವುದಕ್ಕೆ ಡಾ. ವೀರೇಶ್ ಅವರು ವರದಿ ಕೊಟ್ಟಿದ್ದಾರೆ, ನಾವು ಒಂದು ಕಮಿಟಿ ಮಾಡಿದ್ದೇವೆ. ಈಗಾಗಲೇ ನಮ್ಮ ಹಿರಿಯ ಸಚಿವರು ತಿಳಿಸಿದಂತೆ ಆ ಕಮಿಟಿಯನ್ನು ಚಿಸುವ ಬಗ್ಗೆ 16-7-03 ರಂದು ಆದೇಶ ಕೂಡ ಆಗಿದೆ.

ಶ್ರೀ ಪಿ.ಜಿ. ಆರ್. ಸಿಂಧ್ಯ :- ಮಾನ್ಯ ಉಪಾಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಗೃಹಮಂತ್ರಿಯವರ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಇಲ್ಲೊಂದು ಡಿಸ್‌ಪ್ಯೂಟ್ ಇದೆ. ಸುಮಾರು 450 ಕ್ಕಿಂಥ ಹೆಚ್ಚು ಜನರು ಸತ್ತಿದ್ದಾರೆಂದು ನಾವು ಹೇಳುತ್ತಿದ್ದೇವೆ. ಆದರೆ, ಚೀಟಿ ವ್ಯವಹಾರ ನಡೆಸತಕ್ಕಂಥವರು ಮತ್ತು ಮಟ್ಕಾ ಆಟ ಆಡತಕ್ಕಂಥವರು ಸತ್ತು ಹೋಗಿದ್ದಾರೆ, ಇವರಿಗೆಲ್ಲಾ ಸರ್ಕಾರ ಏನು ಮಾಡುವುದಕ್ಕೆ ಆಗುತ್ತದೆ ಎಂದು ಮಾನ್ಯ ಮುದ್ದಹನುಮೇಗೌಡರು ಹೇಳಿದರು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಷಯವನ್ನು ಉದಾಹರಣೆ ಕೊಡುವುದಕ್ಕೋಸ್ಕರ ಉಪಯೋಗ ಮಾಡಿದ್ದೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ :- ಮಾನ್ಯ ಸದಸ್ಯರು ಉದಾಹರಣೆ ಕೊಟ್ಟಿದ್ದೇನೆಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಕೇಂದ್ರದಲ್ಲಿ ಬೇರೆ ಪಾರ್ಟಿಯ ಸರ್ಕಾರ ಅಧಿಕಾರದಲ್ಲಿದೆ; ಮತ್ತೆ ಇಲ್ಲಿ ನಿಮ್ಮ ಸರ್ಕಾರ ಇದೆ. ನಾನು ಹೇಳಿರತಕ್ಕಂಥ ಅಂಕಿ-ಅಂಶಗಳಲ್ಲಿ ತಮಗೆ ಅಪನಂಬಿಕೆ ಇದ್ದರೆ ಇದನ್ನು ತನಿಖೆ ಮಾಡುವುದಕ್ಕೋಸ್ಕರ ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮೀಷನ್‌ರಿಗೆ ಪತ್ರ ಬರೆದು ತಿಳಿಸಿ ಏಕೆಂದರೆ ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮೀಷನ್ ಒಂದು ಸ್ವತಂತ್ರ ಸಂಸ್ಥೆಯಾಗಿದೆ. ಆದ್ದರಿಂದ, ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ಹಸಿವಿನಿಂದ ಸತ್ತಿದ್ದಾರೆ ಮತ್ತು ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನು ಅವರೇ ತನಿಖೆ ಮಾಡಿದರೆ ಒಳ್ಳೆಯದು. ಸಿ.ಬಿ.ಐ. ವಿಚಾರದಲ್ಲಿ ಯಾವುದೋ ಒಂದು ಪ್ರಕರಣದಲ್ಲಿ ಎನ್.ಹೆಚ್.ಆರ್.ಸಿ. ಕೇಂದ್ರ ಸರ್ಕಾರದ ಮೇಲೆ ಹೋಗಿರತಕ್ಕಂಥದ್ದು ನಮ್ಮ ಕಣ್ಣುಗಳ ಮುಂದೆ ಇದೆ. ಇವರು ತನಿಖೆ ಮಾಡಿದರೆ ಸತ್ಯಾಂಶ ಹೊರಕ್ಕೆ ಬರುತ್ತದೆ ಆದ್ದರಿಂದ ಇದರ ಬಗ್ಗೆ ನೀವು ಹೆದರತಕ್ಕಂಥ ಅವಶ್ಯಕತೆ ಇಲ್ಲ. ಆದ್ದರಿಂದ ಇದನ್ನು ಎನ್.ಹೆಚ್.ಆರ್.ಸಿ. ಗೆ ರೆಫರ್ ಮಾಡಬೇಕೆಂದು ಮಾನ್ಯ ಗೃಹಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ಮಾನ್ಯ ಗೃಹಮಂತ್ರಿಯವರೇ ಇವತ್ತಿನ ದಿವಸ ಬರಗಾಲ ಪರಿಸ್ಥಿತಿಯನ್ನು ಮಾನಿಟರ್ ಮಾಡುತ್ತಿರುವುದರಿಂದ ಇದಕ್ಕೆ ದಯಮಾಡಿ ಒಪ್ಪಿಗೆ ಕೊಟ್ಟರೆ ರಾಜ್ಯದ ಜನತೆಗೆ ಬಹಳ ಉಪಯೋಗ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾಗಿರತಕ್ಕಂಥ ಮಾನ್ಯ ಸಿಂಧ್ಯಾರವರಿಗೂ ಕೂಡ ಈ ವಿಷಯದ ಬಗ್ಗೆ ಗೊತ್ತಿದೆ. ಕರ್ನಾಟಕ ರಾಜ್ಯದಲ್ಲಿ ಇದುವರೆಗೆ ಯಾವುದೇ ಸರ್ಕಾರ ಆಡಳಿತ ನಡೆಸಿರುವಂಥ ಸಂದರ್ಭದಲ್ಲಿ ಎಂಥಂಥ ಬರಗಾಲದ ಪರಿಸ್ಥಿತಿಯನ್ನು ನಾವು ನೀವು ಎದುರಿಸಿದ್ದೇವೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಯಾವ ಕಾಲಕ್ಕೂ ಕೂಡ ಎಲ್ಲಿಯೂ ಹಸಿವಿನಿಂದ ರೈತರು ಸತ್ತಿದ್ದಾರೆ ಎನ್ನತಕ್ಕಂಥ ವರದಿ ಹಿಂದೆ ಕೂಡ ಆಗಿಲ್ಲ. ಮತ್ತೆ ಇವತ್ತೂ ಎಲ್ಲಿಯೂ ಆಗಿಲ್ಲ. ಆದರೆ, ಸತ್ತಿರತಕ್ಕಂಥದ್ದಕ್ಕೆ ಬೇರೆ ಬೇರೆ ಕಾರಣಗಳಿರಬಹುದು ನಮ್ಮ ರಾಜ್ಯದಲ್ಲಿ ಈಗಾಗಲೇ ಸುಮಾರು 185 ಜನ ಸತ್ತಿದ್ದಾರೆಂದು ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದಾರೆ. ರೈತರು ಬೇರೆ ಬೇರೆ ಕಾರಣಗಳಿಂದ ಅಥವಾ ಇದೇ ಕಾರಣಗಳಿಂದ ಸತ್ತಿದ್ದಾರೆ ಎನ್ನತಕ್ಕಂಥ ಮಾಹಿತಿ ನಮಗೆ ಯಾವಾಗ ಸಿಗಬಹುದು ಎಂದರೆ, ಅಸಿಸ್ಟೆಂಟ್ ಕಮೀಷನರ್‌ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ನಾವು ಈಗಾಗಲೇ ಮಾಡಿದ್ದೇವೆ. ಆ ಕಮಿಟಿ ನ್ಯಾಚುರಲ್ ಆಗಿ ಎಲ್ಲಾ ಜಿಲ್ಲಾ ತಾಲ್ಲೂಕುಗಳಿಗೆ ಭೇಟಿ ನೀಡಿ ತನಿಖೆ ಮಾಡಿದ ನಂತರ ನಮಗೆ ನಿಜವಾದ ಅಂಶ ತಿಳಿಯುತ್ತದೆ.

ಕಮಿಟಿ ರಚನೆ ಮಾಡಿರುವ ಬಗ್ಗೆ ಸರ್ಕಾರ ದಿನಾಂಕ 18-07-2003 ರಂದು ಆದೇಶ ಕೂಡ ಹೊರಡಿಸಿದೆ. ಸದರಿ ಕಮಿಟಿಯವರು ಇಂಥ ಕೆಲಸವನ್ನು ಪರಿಶೀಲಿಸುತ್ತಾರೆ. ರೈತರು ನಿಜವಾಗಿಯೂ ಹಸಿವಿನಿಂದ ಅಥವಾ ಸಾಲ ಮಾಡಿರುವುದರಿಂದ ಅಥವಾ ಬೇರೆ ಬೇರೆ ಯಾವುದಾದರೊಂದು ಕಾರಣಗಳಿಂದ ಸತ್ತಿದ್ದಾರೆಯೇ ಎನ್ನತಕ್ಕಂಥದ್ದನ್ನು ಅವರು ಪರಿಶೀಲನೆ ಮಾಡುತ್ತಾರೆ. ಭಾರತ ದೇಶ ಮತ್ತು ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಕೃಷಿ ಕ್ಷೇತ್ರವೇ ಪ್ರಧಾನವಾಗಿರುವುದರಿಂದ ಇಲ್ಲಿರತಕ್ಕಂಥ ಎಲ್ಲರೂ ಕೂಡ ರೈತರು ಅಥವಾ ರೈತ ಕಾರ್ಮಿಕರೇ ಹೆಚ್ಚಾಗಿ ಇದ್ದಾರೆ. ನಮ್ಮ ದೇಶದಲ್ಲಿ 100ಕ್ಕೆ 70ರಷ್ಟು ಜನ ರೈತರು ಅಥವಾ ರೈತ ಕಾರ್ಮಿಕರು ಇದ್ದಾರೆ. ಮತ್ತೆ ಇವತ್ತಿನದಿವಸ ಯಾವುದೇ ಒಂದು ಹಳ್ಳಿಯಲ್ಲಿ ಹೆಚ್ಚು ಕಡಿಮೆ ರೈತರೇ ಸಾಯುತ್ತಾರೆ. ಅಥವಾ ಕೃಷಿಕರು ಸಾಯುತ್ತಾರೆ. ಆದರೆ, ಇವರು ಯಾವ ಕಾರಣಕ್ಕಾಗಿ ಸತ್ತಿದ್ದಾರೆ ಎನ್ನತಕ್ಕಂಥದ್ದು ಬಹಳ ಮುಖ್ಯ. ಇದನ್ನು ತಾವು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ಈಗಾಗಲೇ ಕಮಿಟಿ ಮಾಡಿದ್ದೇವೆ. ಈ ಕಮಿಟಿ ಮುಂದೆ ನಿಜವಾದ ಅಂಶ ಬರುತ್ತದೆ. ಇಂಥವರಿಗೆ ಪರಿಹಾರ ಕೊಡಬೇಕೆಂದು ಕಮಿಟಿ ತಿಳಿಸಿದರೆ ಅಂಥವರಿಗೆ ನಾವು ಖಂಡಿತ ಪರಿಹಾರ ಕೊಡುತ್ತೇವೆ. ಪರಿಹಾರ ಕೊಡುವುದಕ್ಕಿಂಥ ಮುಂಚಿತವಾಗಿ ಎಲ್ಲಾ ವಿಷಯ ಗೊತ್ತಾಗುತ್ತದೆ. ಈ ಒಂದು ಕಮಿಟಿಯಲ್ಲಿ ಅಸಿಸ್ಟೆಂಟ್ ಕಮಿಷನರ್ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ತನಿಖಾ ಅಧಿಕಾರಿಗಳು ಇರುತ್ತಾರೆ, ಇವರೆಲ್ಲರೂ ತನಿಖೆ ಮಾಡಿದ ಮೇಲೆ ನಿಜವಾದ ಅಂಶ ಹೊರಕ್ಕೆ ಬರುತ್ತದೆ. ಇದಕ್ಕಾಗಿಯೇ ಆಗಿದೆ ಎನ್ನತಕ್ಕಂಥದ್ದನ್ನು ನಾವು ಕೂಡ ಹೇಳುತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಇದುವರೆಗೂ ಆ ಪರಿಸ್ಥಿತಿ ಬಂದಿಲ್ಲ. ನಮ್ಮ ದೇಶದಲ್ಲಿ ಒರಿಸ್ಸಾ ಅಥವಾ ಬೇರೆ ಬೇರೆ ರಾಜ್ಯದಲ್ಲಿ ಇಂಥ ಒಂದು ಪರಿಸ್ಥಿತಿ ಬಂದಿದೆ. ಇದನ್ನು ನೀವು ಕೂಡ ಒಪ್ಪಿಕೊಳ್ಳಬೇಕು. ಇಲ್ಲಿ ಒಬ್ಬರ ಮೇಲೊಬ್ಬರು ಸುಮ್ಮನೆ ಚಾರ್ಜ್ ಮಾಡತಕ್ಕಂಥದ್ದು ಸರಿಯಲ್ಲ. ಇದಕ್ಕಾಗಿ ಅವರು ಸತ್ತಿಲ್ಲ ಎನ್ನತಕ್ಕಂಥದ್ದನ್ನು ನೀವು ಒಪ್ಪಿಕೊಳ್ಳಿ. ನೀವು ಏನೂ ಕೆಲಸ ಮಾಡಿಲ್ಲ ಅಥವಾ ಸರ್ಕಾರ ಅತ್ತಕಡೆ ಗಮನಹರಿಸಿಲ್ಲ ಎನ್ನತಕ್ಕಂಥದ್ದು ಅಷ್ಟೊಂದು ಸರಿಯಲ್ಲ. ಇದು ಸತ್ಯಕ್ಕೆ ದೂರವಾದಂಥ ಮಾತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಈಗ 185 ಜನರಿಗೆ ಪರಿಹಾರ ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಎನ್ನತಕ್ಕಂಥದ್ದನ್ನು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಈಗಾಗಲೇ ಹೇಳಿದ ಹಾಗೆ ಇದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಕಮಿಟಿಯನ್ನು ರಚನೆ ಮಾಡಿದ್ದೇವೆ. ಇದು ಕಮಿಟಿ ಮುಂದೆ ಬಂದ ನಂತರ ಸತ್ಯಾಂಶ ಹೊರಕ್ಕೆ ಬರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಇನ್ನು ಯಾವಾಗ ಬರುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಯಾವಾಗ ಅಂದರೆ, ಈಗ ಆರ್ಡರ್ ಹೋಗಿದೆ. ಇನ್ನು ಮುಂದೆ ಕಮಿಟಿಯ ಕೆಲಸ ಪ್ರಾರಂಭವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಉಪಾಧ್ಯಕ್ಷರೆ, ಇವರೆಲ್ಲರೂ ಸತ್ತು ಬಹಳಷ್ಟು ದಿನಗಳಾಗಿವೆ. 185 ಜನ ಸತ್ತಿದ್ದಾರೆಂದು ಅವರು ಹೇಳುತ್ತಿದ್ದಾರೆ. ಆದರೆ ನಮ್ಮ ಸಂಖ್ಯೆಯೇ ಬೇರೆ ಇದೆ. ಇನ್ನು ಯಾವಾಗ ಪರಿಹಾರ ಕೊಡಲಾಗುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ಮಾನ್ಯ ಗೃಹ ಮಂತ್ರಿಗಳು ಹೇಳತಕ್ಕಂಥದ್ದನ್ನು ನೋಡಿದರೆ, ರೈತರು ಸತ್ತಾಗ ತಕ್ಷಣವೇ ಆತ ತನ್ನ ತೊಂದರೆಯಿಂದ

ಸತ್ತಿದ್ದಾನೆಂದು ತೀರ್ಮಾನ ಮಾಡಿ 1 ಲಕ್ಷ ರೂಪಾಯಿಗಳನ್ನು ಹಿಂದಿನ ಸರ್ಕಾರ ಕೊಟ್ಟಿದೆ. ಅವರು ಕಟ್ಟಿಕೊಟ್ಟಿದ್ದಾರೆಂದು ಹೇಳುತ್ತೀರೇನು? ಇದು ಪ್ರಶ್ನೆ ಅವರು ಸತ್ತವರಿಗೆಲ್ಲ ಕೊಟ್ಟಿದ್ದಾರೇನು? ರೈತರು ಸತ್ತ ತಕ್ಷಣವೇ ಅವರನ್ನು ಗುರುತು ಮಾಡಿ ಅವರೆಲ್ಲರಿಗೂ ಕೂಡ ಹಿಂದೆ ಇದ್ದಂಥ ನಮ್ಮ ಸರ್ಕಾರ ಪರಿಹಾರದ ಹಣವನ್ನು ಕೊಟ್ಟಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಆ ಸಂದರ್ಭದಲ್ಲಿ ಇದಕ್ಕೆ ನಾವು ಎಷ್ಟು ಹೋರಾಟ ಮಾಡಿದ್ದೇವೆ ಎನ್ನತಕ್ಕಂಥದ್ದು ನಮಗೆ ಗೊತ್ತಿದೆ. ಈಗ ಸುಮ್ಮನೆ ಇದರ ಬಗ್ಗೆ ಏಕೆ ಮಾತನಾಡುವುದಕ್ಕೆ ಹೋಗುತ್ತೀರಿ. ಈಗ ನಾನು ಹೇಳುವುದೇನೆಂದರೆ, ವೀರೇಶ್ ಕಮಿಟಿಯ ವರದಿ ಬಂದ ಮೇಲೆ ಏನಾದರೂ ಕೊಡುವುದಕ್ಕೆ ಒಂದು ಆಧಾರ ಬೇಕಲ್ಲವೆ? ನೀವು ಇದ್ದಂಥ ಸಂದರ್ಭದಲ್ಲಿ ರೈತರು ಸತ್ತ ಕೂಡಲೇ ನೀವೇನು ಚೆಕ್ ಬರೆದು ಕೊಟ್ಟಿದ್ದೀರಾ? ಈಗ ಆ ವಿಷಯವೆಲ್ಲವನ್ನೂ ಮಾತನಾಡುವುದು ಬೇಡ. ಸದನದಲ್ಲಿ ಚರ್ಚೆಯಾದ ಪ್ರಕಾರವೇ ಒಂದು ಕಮಿಟಿಯನ್ನು ಮಾಡಿದ್ದೇವೆ. ಈಗ ಒಂದು ಸಿಸ್ಟೆಮ್ಯಾಟಿಕ್ ಪ್ರೊಸೀಜರ್ ಪ್ರಾರಂಭವಾಗಿದೆ. ಅವರು ಪರಿಶೀಲನೆ ಮಾಡಿ ನಮಗೆ ವರದಿ ಕೊಡಲಿ. ಆನಂತರ ಪರಿಹಾರ ಕೊಡೋಣ. ತಮ್ಮೆಲ್ಲರ ಅಭಿಪ್ರಾಯ ಏನಿದೆ, ಅದೇ ಅಭಿಪ್ರಾಯ ಎಲ್ಲರಿಗೂ ಕೂಡ ಇದೆ. ನಾನು ಈಗಾಗಲೇ ಹೇಳಿದ ಹಾಗೆ, ನಮ್ಮ ದೇಶದಲ್ಲಿ 100ಕ್ಕೆ 70ರಷ್ಟು ರೈತರಿದ್ದಾರೆ. ಮತ್ತೆ ಇಲ್ಲಿರತಕ್ಕಂಥ ನಾವೆಲ್ಲರೂ ಕೂಡ ರೈತರ ಮತ ಕ್ಷೇತ್ರದಿಂದಲೇ ಬಂದಿದ್ದೇವೆ. ನಾವ್ಯಾರು ಅರ್ಬನ್ ಏರಿಯಾದಿಂದ ಆರಿಸಿ ಬಂದಂಥವರಲ್ಲ. ಇದರ ಬಗ್ಗೆ ತಮಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಕೂಡ ಇದೆ. ತಮಗೆ ಸ್ವಲ್ಪ ಜಾಸ್ತಿ ಇರಬಹುದು. ಆದರೆ ನಮಗೂ ಕೂಡ ಕಡಿಮೆ ಏನಿಲ್ಲ. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :– ಇದು ಇಷ್ಟರಲ್ಲಿಯೇ ಗೊತ್ತಾಗುತ್ತದೆ. ಮಾನ್ಯ ಸಚಿವರು ನಿನ್ನೆದಿವಸ ಹೇಳಿದ ಉತ್ತರವನ್ನೇ ಇವತ್ತೂ ಕೂಡ ಹೇಳುತ್ತಿದ್ದಾರೆ. ಮತ್ತೆ ವೀರೇಶ್ ಕಮಿಟಿ ಮಾಡಿದ್ದೇವೆ, ಇವರು ವರದಿ ಕೊಟ್ಟ ಮೇಲೆ ನಾವು ಕೊಡುತ್ತೇವೆಂದು ಆಗಿನಿಂದ ಹೇಳಿಕೊಂಡು ಬರುತ್ತಿದ್ದಾರೆ. ಹಿಂದಿನ ಸರ್ಕಾರ, ಇವ್ಯಾವುದನ್ನು ಮಾಡದೇ ಕೊಟ್ಟಿರತಕ್ಕಂಥ ಉದಾಹರಣೆಗಳಿವೆ. ಆ ಸಂದರ್ಭದಲ್ಲಿ ನೀವೂ ಕೂಡ ಇಲ್ಲಿದ್ದೀರಿ. ಅದೇ ರೀತಿಯಾಗಿ ಈ ಸಾರಿಯೂ ಕೂಡ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಂಡ್ಯ ಜಿಲ್ಲೆಯ ಶಾಸಕರಾಗಿದ್ದಂಥ ಶ್ರೀ ಶಿವಕುಮಾರ್‌ರವರ ಅಧ್ಯಕ್ಷತೆಯಲ್ಲಿ ತೊಗರಿ ಮತ್ತು ರೈತರ ಸಮಸ್ಯೆ ಬಗ್ಗೆ ರಚನೆ ಮಾಡಿದಂಥ ಸಮಿತಿಯು ಒಂದು ವರದಿಯನ್ನು ಕೊಟ್ಟಿತ್ತು. ಆ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ನೀವೇನು ಕೊಟ್ಟಿದ್ದೀರಿ? ಈಗ ಸುಮ್ಮನೆ ಇದೆಲ್ಲಾ ಚರ್ಚೆ ಬೇಡ. ಮೊದಲು ಈ ವಿಷಯದ ಬಗ್ಗೆ ಪೂರ್ಣ ಮಾಡೋಣ. ಆ ನಂತರ ಇದಕ್ಕೆ ಉತ್ತರ ಕೊಡುತ್ತೇವೆ.

ಶ್ರೀ ಸಿ.ಆರ್. ಸಗೀರ್ ಆಹಮದ್ :– ಈ ರಾಜ್ಯದ ರೈತರ ಬಗ್ಗೆ ನೀವು ಯಾವ ರೀತಿ ಚಿಂತನೆ ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ನಾವೂ ಕೂಡ ನೋಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಶಿವಕುಮಾರ್‌ರವರು ನೀಡಿರತಕ್ಕಂಥ ವರದಿಯನ್ನು ತರಿಸಿಕೊಟ್ಟಿದ್ದೇವೆ.

ಗೊಂದಲ

ಉಪಾಧ್ಯಕ್ಷರು :– ಒಬ್ಬೊಬ್ಬರು ಮಾತನಾಡಿ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಮಾನ್ಯ ಉಪಾಧ್ಯಕ್ಷರೆ, ವೀರೇಶ್ ಕಮಿಟಿ ಪೋರ್ಟ್‌ನ್ನು ಯಾವ ಹಿನ್ನಲೆಯಲ್ಲಿ ಮಾಡಿದ್ದಾರೆ ಎಂಬುದನ್ನು ಮತ್ತು ಈ ಕಮಿಟಿ ವರದಿಯನ್ನು ರಸ್ಕಾರ ಮಾಡಿ ಮತ್ತು ಅದನ್ನು ರದ್ದು ಮಾಡಬೇಕೆಂದು ನಾವೇ ಹೇಳಿದ್ದೇವೆ. ಯಾವ ಉದ್ದೇಶಕ್ಕೋಸ್ಕರ ಈ ಸಮಿತಿಯನ್ನು ರಚನೆ ಮಾಡಿದ್ದಾರೆಂದರೆ, ರೈತರು ಯಾವುದೋ ಕಾರಣಕ್ಕೋಸ್ಕರ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಎಲ್ಲರಿಗೂ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲವೆಂದು ರೆಸಿಕೊಳ್ಳುವುದಕ್ಕೋಸ್ಕರ ಇದನ್ನು ಮಾಡಿದ್ದಾರೆ. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಕೇವಲ ದಿವಸದೊಳಗೆ ಪರಿಹಾರದ ಹಣ ಕೊಡಿ ಎಂದು ನಾವು ಹೇಳಿದ್ದೆವು. ಆ ಸಂಧರ್ಭದಲ್ಲಿ ಮಂತ್ರಿಗಳಿರಬಹುದು ಅಥವಾ ಶಾಸಕರು ಮನೆಗೆ ಹೋಗಿ ಅವರ ಕುಟುಂಬದವರಿಗೆ 8 ದಿವಸದಲ್ಲಿ ಚೆಕ್ ವಿತರಣೆ ಮಾಡತಕ್ಕಂಥ ಕೆಲಸ ಮಾಡಿದ್ದೇವೆ. ಇಷ್ಟೊಂದು ಬಡತನ ನಿಮ್ಮ ಸರ್ಕಾರಕ್ಕೆ ಏಕಾಯಿತು ಇವತ್ತಿನ ದಿವಸ ಯಾರೂ ಸಹ ಬೇಕೆಂದು ಸಾಯುವುದಕ್ಕೆ ಹೋಗುವುದಿಲ್ಲ. ಮತ್ತೆ ಯಾರೂ ಕೂಡ ಬೇಕೆಂದು ಪ್ರಣ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ಸಾಯುತ್ತಿರುವವರು ಇದಕ್ಕಾಗಿಯೇ ಸಾಯುತ್ತಿದ್ದಾರೆಂದು ಇವರು ಬಹಳ ಹಗುರವಾಗಿ ಮಾತನಾಡುತ್ತಿದ್ದಾರೆ. ಆದ್ದರಿಂದ, ಇದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಮಾನ್ಯ ಸಚಿವರು ನಿನ್ನೆದಿವಸ ಕೂಡ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಮತ್ತೆ ಇವತ್ತೂ ಕೂಡ ಅದೇ ಉತ್ತರವನ್ನು ಹೇಳುತ್ತಿದ್ದಾರೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಯಾವುದೇ ರೀತಿಯ ಕಾಳಜಿ ವಹಿಸಿಲ್ಲ. ಇದನ್ನು ನಾವು ಸಂಪೂರ್ಣವಾಗಿ ಶಿರಸ್ಕಾರ ಮಾಡುತ್ತೇವೆ. ಈ ಸರ್ಕಾರದ ಧೋರಣೆಯನ್ನು...

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, 51 ಜನ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕ್ಯೂ ನಿಂತಿದ್ದಾರೆ. ಇದರ ಬಗ್ಗೆ ಅವರೇನೂ ಹೇಳಲಿಲ್ಲ.

ಶ್ರೀ ಬಿ. ಸೋಮಶೇಖರ್ :- 51 ಜನ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕ್ಯೂ ನಿಂತಿದ್ದಾರೆ. ಇದರ ಬಗ್ಗೆ ನಿಮ್ಮಲ್ಲಿ ಏನು ಮಾಹಿತಿ ಇದೆ ಎನ್ನತಕ್ಕಂಥದ್ದನ್ನು ತಿಳಿಸಬೇಕು. ಏಕೆಂದರೆ, ನಾಳೆದಿವಸ ಏನದರೂ ಹೆಚ್ಚು ಕಡಿಮೆ ಆದರೆ ಅದು ಸಾಮೂಹಿಕ ಹತ್ಯೆಯಾಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಹಸಿವಿನಿಂದ ಅವರು ಸತ್ತಿದ್ದಾರೆಂದು ಜಿಲ್ಲಾಧಿಕಾರಿಗಳು ಈಗಾಗಲೇ ವರದಿ ಕೊಟ್ಟಿದ್ದಾರೆ. ಆದರೆ ಅವರು ಹಸಿವಿನಿಂದ ಸತ್ತಿಲ್ಲ, ಅವರು ಅನಾರೋಗ್ಯದ ನಿಮಿತ್ತ ಸತ್ತಿದ್ದಾರೆಂದು ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ.

ಗೊಂದಲ

ಶ್ರೀ ಮಲ್ಲಿಕಾರ್ಜುನ ನಾಗಪ್ಪ :- ಅಲ್ಲಿ ಏನು ನಡೆದಿದೆ ಎನ್ನತಕ್ಕಂಥದ್ದು ನಿಮಗೆ ಗೊತ್ತಿದೆ. ಆದ್ದರಿಂದ ಇಲ್ಲಿ ಈ ರೀತಿಯಾಗಿ ಹೇಳುವುದಕ್ಕೆ ಹೋಗಬೇಡಿ.

ಗೊಂದಲ

ಉಪಾಧ್ಯಕ್ಷರು :- ಮಾನ್ಯ ಸಚಿವರು ಮೊದಲು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ಮೊದಲು ಸಚಿವರು ಮಾತನಾಡುವುದಿಕ್ಕೆ ಅವಕಾಶ ಕೊಡಿ. ಆನಂತರ ಅವರು ಕ್ಲಾರಿಫಿಕೇಶನ್ ಕೇಳಲಿ

ಉಪಾಧ್ಯಕ್ಷರು :- ಮೊದಲು ಸಚಿವರು ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಸ್ಟೇಟ್‌ಮೆಂಟ್ ಮಾಡಿದ ಮೇಲೆ ನೀವು ಏನಾದರು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಪಿ.ಜಿ. ಆರ್. ಸಿಂಧ್ಯ :- ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಕ್ಲಾರಿಫಿಕೇಶನ್ ಕೇಳಿದ್ದೇನೆ. ಮಾನ್ಯ ಗೃಹ ಸಚಿವರು ಬಹಳ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಬಂದಿರತಕ್ಕಂಥ ಬರಗಾಲದ ರಿಲೀಫ್‌ಗೆ ಮಾನಿಟರ್ ಮಾಡತಕ್ಕಂಥ ಒಂದು ಸೆಲ್‌ಗೆ ಚೀಫ್ ಆಗಿದ್ದಾರೆ. ನ್ಯಾಯಬದ್ಧವಾಗಿ ಈ ವಿಷಯಕ್ಕೆ ಅವರೇ ಉತ್ತರ ಕೊಡಬೇಕಾಗಿತ್ತು. ಆದರೆ, ಮಾನ್ಯ ಮಲ್ಲಿಕಾರ್ಜುನ ಸಾಗಪ್ಪನವರು ಕೊಡುತ್ತಿರುವ ಉತ್ತರ ನಮಗೆ ಸಮಾಧಾನ ಇದೆ. ಈಗ ಇರತಕ್ಕಂಥ ಡಿಸ್‌ಪ್ಯೂಟ್ ಏನೆಂದರೆ, ಬಡತನದಿಂದ ಮತ್ತು ಸಾಲದಿಂದ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ನಾವು ಹೇಳುತ್ತಿದ್ದೇವೆ. ಆದರೆ ಇಲ್ಲವೆಂದು ನೀವು ಹೇಳುತ್ತಿದ್ದೀರಿ. This you give it to the NHRC ಎನ್.ಹೆಚ್.ಆರ್.ಸಿ. ಅವರಿಗೆ ಕೊಡುವುದಕ್ಕೆ ನಿಮಗೇನು ತೊಂದರೆ? It is a very fair body. ಇದರಲ್ಲಿ ಸುಪ್ರೀಂ ಕೋರ್ಟ್‌ನ ಜಡ್ಜ್ ಇರುತ್ತಾರೆ. Let them probe into the matter, somewhere or the other, truth has to come out. ಸತ್ಯಾಂಶ ಆಚೆಗೆ ಬರಬೇಕೆಂಬ ಉದ್ದೇಶದಿಂದ ಅವರಿಗೆ ಕೊಡಿ ಎಂದು ನಾವು ಹೇಳುತ್ತಿದ್ದೇವೆ. ನಿಮಗೆ ಗೊತ್ತಿರುವ ಹಾಗೆ, ಎನ್.ಹೆಚ್.ಆರ್.ಸಿ. ಗೆ ನೇಮಕ ಮಾಡಬೇಕಾದರೆ ಸಂಬಂಧಪಟ್ಟಂಥ ರಾಜ್ಯದ ಮುಖ್ಯಮಂತ್ರಿಯವರು ಮತ್ತು ಮುಖ್ಯ ನ್ಯಾಯಧೀಶರು ಹಾಗು ರಾಜ್ಯಪಾಲರೆಲ್ಲರೂ ಕೂಡ ಒಪ್ಪಿಗೆ ಕೊಡಬೇಕಾಗುತ್ತದೆ. ಮತ್ತೆ ಇದೇ ರೀತಿಯಾಗಿ ರಾಷ್ಟ್ರಪತಿಗಳು ಮತ್ತು ಪ್ರಧಾನಮಂತ್ರಿಗಳು ಹಾಗೂ ಮುಖ್ಯ ನ್ಯಾಯಧೀಶರು ಕೇಂದ್ರದಲ್ಲಿ ಎನ್.ಹೆಚ್. ಆರ್.ಸಿ. ಗೆ ಒಪ್ಪಿಗೆ ಕೊಡುತ್ತಾರೆ. N.H.R.C. is a very fair body ಸುಮ್ಮನೆ ಏಕೆ ಡಿಬೇಟ್ ಮಾಡಿಕೊಳ್ಳತಕ್ಕಂಥದ್ದು. ಮೂರು ವರ್ಷಗಳ ಹಿಂದೆ ಸತ್ತವರ ಕುಟುಂಬದವರಿಗೆ ಪರಿಹಾರ ಸಿಕ್ಕಿರಲಿಲ್ಲ. ಆಗ ಡಾ॥ ವೀರೇಶ್ ವರದಿಯ ನೆಪ ಬಂತು, ಅದು ಬಂದ ಮೇಲೂ ಸತ್ತವರ ಪೋಸ್ಟ್ ಮಾರ್ಟಂ ಮಾಡುವುದಕ್ಕೆ ಮೂರು ವರ್ಷವಾಗುತ್ತದೆ. ಈಗ ಇನ್ನು ಮೂರು ವರ್ಷಬೇಕು ಎಂದು ಹೇಳುತ್ತೀರಿ. Even assuming all that, ನೀವು ಮಾಡುತ್ತೀರೆಂದು ನಾನು ಒಪ್ಪಿಕೊಳ್ಳುತ್ತೇನೆ. ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮಿಷನ್‌ಗೆ ಕರ್ನಾಟಕದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಆತ್ಮಹತ್ಯೆಗಳು ಆಗುತ್ತಿವೆ, ನಾವು ಹೇಳುತ್ತೇವೆ ಹಸಿವಿನಿಂದ, ಬಡತನದಿಂದ ಮತ್ತು ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ ಎನ್ನುವಂಥದ್ದು, Let the NHRC probe, Why can't the Home Minister agree for this proposition?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ಇದು ಎಲ್ಲರಿಗೂ ಅಧಿಕಾರವಿದೆ, ನ್ಯಾಷನಲ್ ಹ್ಯೂಮನ್‌ರೈಟ್ಸ್ ಕಮಿಷನ್ ಮುಂದೆ ಇವರು ಹೋಗಬಹುದು, ಸೋಮೋ ಮೋಟೋ ಅವರು ಬರಬಹುದು. ಬೇಡವೆಂದು ಯಾರು ಹೇಳುತ್ತಾರೆ. ಆದರೆ ನೀವು ನಮಗೆ ಏಕೆ ಹೇಳುತ್ತೀರಿ, ಆಗಿದೆ ಎನ್ನುವ ಬಗ್ಗೆ ನಿಮಗೆ ಭಾವನೆ ಇದ್ದರೆ ಹೋಗಿ. ಇಂತಹ ಕೇಸ್‌ಗಳಲ್ಲಿ ಹಾಕಿದ್ದೇವೆಂದು ಹೇಳಿ. ಇದು ಏನಾಗುತ್ತಿದೆ. ಎಂದರೆ ವಿತ್ತಂಡವಾದ . ಹಿಂದೆ ಮಾನ್ಯ ಸಿಂಧ್ಯಾಜಿಯವರೇ ಹೇಳಿದ್ದರು. ಒಂದು ಕಮಿಟಿಯನ್ನು ಮಾಡಿ, ಎಲ್ಲ ಕಡೆ ಹೋಗಲಿ, ನಿಜವಾಗಿ ಅದು ಕಾಂಪೆನ್‌ಸೇಷನ್ ಬಗ್ಗೆ ಕೂಡ ಕೊಡತಕ್ಕಥದ್ದು ಆಗುತ್ತದೆ ಎನ್ನುವ ಸಲಹೆಯನ್ನು ಕೊಟ್ಟವರೂ ಸಹ ಅವರೇ. ಈಗ ಆ ಸಲಹೆಯ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೇವೆಂದು ಹೇಳಿದರೆ ಇದು ಸರಿಯಿಲ್ಲವೆಂದು ಹೇಳುವವರೂ ಅವರೇ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಉಪಾಧ್ಯಕ್ಷರೆ, ಇದು ನಮ್ಮ ಮೇಲೆ ಗೂಬೆ ಕೂಡಿಸುವುದಕ್ಕೆ ಮಾಡುತ್ತಿರುವ ಪ್ರಯತ್ನ. ನಾನು ಏನು ಹೇಳಿದೆ, ಮಾನ್ಯ ಮುಖ್ಯಮಂತ್ರಿಯವರು ಬಹಳ

ಬುದ್ಧಿವಂತರು, ಅವರ ಪಕ್ಕದಲ್ಲಿ ಇವರು ಕುಳಿತುಕೊಂಡಿರುವುದರಿಂದ ಅವರಿಗೂ ಕೂಡ ಮಾನ್ಯ ಮುಖ್ಯಮಂತ್ರಿಗಳ ತರಹ ಸುಳ್ಳು ಹೇಳುವ ಕಾಯಿಲೆ ಬಂದು ಬಿಟ್ಟಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಉಪಾಧ್ಯಕ್ಷರೆ, ನೀವು ಹೇಳಿದ್ದು ರೆಕಾರ್ಡ್‌ನಲ್ಲಿ ಅಸಿಸ್ಟೆಂಟ್ ಕಮಿಷನರ್ ಲೆವೆಲ್ ಕಮಿಟಿ ಮಾಡಿ ಎಂದು ಹೇಳಿರುತ್ತೀರಿ ಅದರ ಬಗ್ಗೆ ಮಾನ್ಯ ಕರಡಿ ಸಂಗಣ್ಣನವರಿಗೂ ಗೊತ್ತಿದೆ. ಗೊತ್ತಿದ್ದರೂ ಕೂಡ ಪದೇ ಪದೇ ರೈತರು ಸಾಲದಿಂದ ಸತ್ತರು, ಹಸಿವಿನಿಂದ ಸತ್ತರು ಎಂದರೆ ಹೇಗೆ? ಅವರು ಹೋಟೆಲ್ ಇಟ್ಟಿರುವುದನ್ನು ಹೇಳಿದರು, ಅವರಿಗೆ 4 ಎಕರೆ ಜಮೀನು ಇದ್ದದ್ದು ಹೇಳಿದರು, ಅವರ ಮನೆಯೊಳಗೆ ಏನಿತ್ತು ಎಂಬುದು ಎಲ್ಲವು ಕೂಡ ಅವರಿಬ್ಬರಿಗೂ ಸ್ಪಷ್ಟವಾಗಿ ಗೊತ್ತಿದೆ. ಗೊತ್ತಿರದ್ದರೂ ಕೂಡ ಈ ವಾದ–ವಿವಾದವನ್ನು ಮಾಡಿಕೊಂಡು ಹೋಗುತ್ತಿದ್ದಾರೆ ಮುಂಡರಗಿಯ ಶ್ರೀ ಎಸ್.ಎಸ್. ಪಾಟೀಲ್‌ರು ಇನ್ನೂ ದೂರ ಇದ್ದಾರೆ, ಆ ಮಾತು ಬೇರೆ. ಗೊತ್ತಿದ್ದು ಪದೇ ಪದೇ ಹಸಿವಿನಿಂದ ಸತ್ತಿದ್ದಾರೆಂದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಇವರ ಸರ್ಕಾರ ಏನಾಗಿದೆ ಎಂದರೆ. ಇನ್ನು 51 ಜನ ಸಾಯುವುದಕ್ಕೆ ಸಾಮೂಹಿಕವಾಗಿ...

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಉಪಾಧ್ಯಕ್ಷರೆ, ಆರು ಜನ ಸಾಮೂಹಿಕ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ, ಅದಕ್ಕಾಗಿ ನಾವು ಇದನ್ನು ನ್ಯಾಯಾಂಗ ತನಿಖೆಗೆ ಕೊಡಿ ಎಂದು ಒತ್ತಾಯವನ್ನು ಮಾಡುತ್ತಿದ್ದೇವೆ

ಶ್ರೀ ಬಿ. ಸೋಮಶೇಖರ್ :– ಮಾನ್ಯ ಉಪಾಧ್ಯಕ್ಷರೆ, 51 ಜನ ರೈತರು ಸಾಮೂಹಿವಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭದಲ್ಲಿದ್ದಾರೆ. ಅದರ ಬಗ್ಗೆ ಸರ್ಕಾರ ಏನೂ ಪ್ರತಿಕ್ರಿಯೆ ಮಾಡಿಲ್ಲ, ನಾಳೆ ಇದೊಂದು ಅಚಾತುರ್ಯವಾದರೆ ಇನ್ನೊಂದು ದೊಡ್ಡ ಎಂಬರಾಸ್‌ಮೆಂಟ್ ಆಗುತ್ತದೆ. ಅದರ ಬಗ್ಗೆ ಸರ್ಕಾರ ಏನಾದರೂ ಹೇಳಬೇಕಾಗುತ್ತದೆ. ಆದರೆ ಇಲ್ಲಿ ಏನೂ ಉತ್ತರವನ್ನು ಕೊಟ್ಟಿಲ್ಲ, ಅದು ಬಹಳ ಗಾಬರಿಯಾಗುವಂಥ ವಿಚಾರ. 51 ಜನರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ನಾಳೆಯಿಂದಲೇ ತಯಾರಾಗಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಅವರು ಏನು ಮಾಡಿಕೊಂಡರು ಎನ್ನುವುದನ್ನು ಹೇಳಬೇಕಾಗುತ್ತದೆ, ಅವರು ಉರುಲು ಹಾಕಿಕೊಂಡರೋ ಅವರನ್ನು ಅರೆಸ್ಟ್ ಮಾಡಿದರೋ? ಅದು ತಮ್ಮ ಜಿಲ್ಲೆಯದು ಇರುವುದರಿಂದ ಅದನ್ನು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು :– ತಾವು ಮೊದಲು ಕೇಳಿ, ಲೆಟ್ ಹಿಮ್ ಕಂಪ್ಲೀಟ್.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಅವರು ಅಷ್ಟನ್ನು ಮಾತ್ರ ಹೇಳಿದರು, ಹೊಸದನ್ನು ಅವರು ಏನೂ ಹೇಳಲಿಲ್ಲ ಅವರು ಅದರಿಂದ ಸತ್ತಿಲ್ಲ, ಅದು ಕರಡಿ ಸಂಗಣ್ಣರವರಿಗೆ ಗೊತ್ತಿದೆ ಎಂದು ಅವರ ಮೈಮೇಲೆ ಹಾಕುತ್ತಾರೆ.

ಉಪಾಧ್ಯಕ್ಷರು :– ಮಾನ್ಯ ಸಚಿವರು ಮಾತನಾಡಿ ಮುಗಿಸುವುದಕ್ಕಾದರೂ ನೀವು ಅವಕಾಶವನ್ನು ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ :– ಮಾನ್ಯ ಉಪಾಧ್ಯಕ್ಷರೆ, ಇರತಕ್ಕಂಥ ವಿಷಯವನ್ನು ನಾನು ಯಾವ ಮುಚ್ಚುಮರೆ ಇಲ್ಲದೆ ಸದನದ ಮುಂದಿಟ್ಟಿದ್ದೇನೆ. ಬೇರೆ ಹೇಳುವ ಪ್ರಶ್ನೆಯೇ ಇಲ್ಲ. ಹುಟ್ಟಿಸಿ ಹೇಳುವಂಥ ಅವಶ್ಯಕತೆಯೂ ಇಲ್ಲ. ಅವರು ಹಿಂದೆ ಸಚಿವರಾಗಿ ಕೆಲಸವನ್ನು ಮಾಡಿದ್ದಾರೆ, ಅವರಿಗೂ ಸಾಕಷ್ಟು ಅನುಭವ ಇದೆ. ಮಾನ್ಯ ಕರಡಿ ಸಂಗಣ್ಣನವರಿಗೂ ನನ್ನ ಜಿಲ್ಲೆಯೇ ಬರುತ್ತದೆ,

ಕುಷ್ಟಗಿ ಅಥವಾ ಕೊಪ್ಪಳ ಜಿಲ್ಲೆಯ ಪ್ರತಿಯೊಂದು ವಿಷಯವೂ ಅವರಿಗೆ ಗೊತ್ತಿದೆ. ಇವತ್ತು ನಾನು ಏನು ಹೇಳಿದನೆಂದರೆ ಡಾ।। ವೀರೇಶ್ ವರದಿಯ ಪ್ರಕಾರ ಇವತ್ತು ಅಸಿಸ್ಟೆಂಟ್ ಕಮಿಷನರ್ ಲೆವಲ್‌ನಲ್ಲಿ ಒಂದು ಕಮಿಟಿಯನ್ನು ಮಾಡಿರುತ್ತೇವೆ. ಆ ಒಂದು ಕಮಿಟಿಯ ರಿಪೋರ್ಟ್ ಬಂದಮೇಲೆ ಯರು ನಿಜವಾಗಿ ರೈತರು ಇರುತ್ತಾರೆ ಅವರಿಗೆ ಕೊಡುವುದಕ್ಕೆ ಒಂದು ಆದೇಶವನ್ನು ಈಗಾಗಲೇ ಹೊರಡಿಸಿರುತ್ತದೆ. ಅದರ ಬಗ್ಗೆ ಬೇರೆ ಏನೂ ಅನುಮಾನವಿಲ್ಲ. ಕಳೆದ ಎರಡು ಮುರು ದಿವಸಗಳ ಹಿಂದೆ ಹಾವೇರಿ ಜಿಲ್ಲೆಯಲ್ಲಿ 51 ಜನ ರೈತರ ಬಗ್ಗೆ ಇಲ್ಲಿ ಪ್ರಸ್ತಾಪವನ್ನು ಮಾಡಿದರು. ಕ್ರಾಪ್ ಇನ್‌ಷ್ಯೂರೆನ್ಸ್ ಬಂದಿಲ್ಲ. ಆಮೇಲೆ ಬಡ್ಡಿ ಮನ್ನಾ ಮಾಡುವುದರ ಬಗ್ಗೆಯೂ ಹೇಳಿದರು. ಈಗಾಗಲೇ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇನ್‌ಷ್ಯೂರೆನ್ಸ್ ಕಂಪನಿಯ ಜೊತೆ ಈಗಾಗಲೇ ಚರ್ಚೆಯನ್ನು ಮಾಡಿದ್ದಾರೆ. ಇನ್‌ಷ್ಯೂರೆನ್ಸ್ ದುಡ್ಡು ಬಂದಮೇಲೆ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಆ 51 ಜನರ ಪರಿಸ್ಥಿತಿ ಏನಾಯಿತು ಎನ್ನುವುದರ ಬಗ್ಗೆ ತಕ್ಷಣ ಉತ್ತರವನ್ನು ನೀವು ಹೇಳಬೇಕು. ಅವರು ಏನು ಉರುಳು ಹಾಕಿಕೊಂಡರೋ ಅಥವಾ ಅದನ್ನು ತಡೆಹಿಡಿದಿರೋ ಅಥವಾ ಏನು ಮಾಡಿದಿರಿ ಎಂಬ ಬಗ್ಗೆ ನಮಗೆ ಉತ್ತರ ಹೇಳಬೇಕು. ಇವರಿಗೆ ಎಲ್ಲಾ ಮೆಸೇಜ್ ಬಂದಿರುತ್ತದೆ.

ಉಪಾಧ್ಯಕ್ಷರು :– ನೀವು ಅದನ್ನು ನಂತರ ಕೇಳಿ, ಮಾನ್ಯ ಮಂತ್ರಿಗಳು ಮೊದಲು ಉತ್ತರವನ್ನು ಕೊಡಲಿ. ಆಮೇಲೆ ಮತ್ತೆ ಏನಾದರೂ ಕೇಳುವುದಿದ್ದರೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ :– ಮಾನ್ಯ ಉಪಾಧ್ಯಕ್ಷರೆ, ಮನ್ಯ ಸದಸ್ಯರುಗಳು ಕೊಟ್ಟಿರುವ ಸಲಹೆಯನ್ನು ಸರ್ಕಾರ ಬಹಳ ಗಂಭೀರವಾಗಿ ಆಲೋಚನೆಯನ್ನು ಮಾಡಿದೆ. ನಾವು ಏನೂ ಸುಮ್ಮನೆ ಕುಳಿತುಕೊಂಡಿರುವುದಿಲ್ಲ. ಅವರಿಗೆ ರೈತರ ಬಗ್ಗೆ ಎಷ್ಟು ಕಾಳಜಿ ಇದೆ ಅದರ 100 ಪಟ್ಟು ಕಾಳಜಿ ಈ ಭಾಗದ ಜನರಿಗೆ ಇದೆ. ಅದರ ಬಗ್ಗೆ ಯಾವ ತೊಂದರೆಯೂ ಇಲ್ಲ. ನಾವು ಕೂಡ ರೈತರ ಪರವಾಗಿಯೇ ಅಸೆಂಬ್ಲಿಗೆ ಗೆದ್ದು ಬಂದಿರುತ್ತವೆ, ನಾವೇನೂ ಬೇರೆ ಕಡೆಯಿಂದ ಗೆದ್ದು ಬಂದಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ನೀವು ಬರೀ ಡಾ।। ರಾಜಕುಮಾರ್ ಬಗ್ಗೆ ಕಾಳಜಿಯನ್ನು ಮಾಡುತ್ತೀರಿ. I stund by it I can prove it clso

ಶ್ರೀ ಮಲ್ಲಿಕಾರ್ಜುನ ನಾಗಪ್ಪ :– ಮಾನ್ಯ ಉಪಾಧ್ಯಕ್ಷರೆ, ನಿಜವಾಗಿ ಎಷ್ಟು ಜನ ರೈತರ, ಆತ್ಮಹತ್ಯೆಯಾಗಿದೆ ಎನ್ನುವ ಬಗ್ಗೆ ಲಿಸ್ಟ್‌ನ್ನು ಕೊಡುತ್ತೇವೆ, ನೀವು ಹೇಳುವುದು ಈಗ ಅದು ಬೇಕಿಲ್ಲ. ಅದನ್ನು ನೀವು ದೊಡ್ಡದು ಮಾಡುವ ಅವಶ್ಯಕತೆ ಇಲ್ಲ. ಇರತಕ್ಕಂಥ ಸಮಸ್ಯೆಯನ್ನು ಯಾವ ತರಹವಾಗಿ ಬಗೆಹರಿಸಬೇಕು. ಮುಂದೆ ಈ ತರಹ ಆಗಬಾರದು ಎನ್ನುವ ಬಗ್ಗೆ ನಾವು ಚರ್ಚೆ ಮಾಡಿದರೆ ಅದು ಒಳ್ಳೆಯ ವಿಚಾರ. ಮಾನ್ಯ ಶಿವಾನಂದ ಪಾಟೀಲರೇ ನನಗೆ ಗೊತ್ತು, ನಾವು ನೀವು ಎಲ್ಲ ಒಂದೇ ಜಿಲ್ಲೆಯವರಿದ್ದೇವೆ. ಅಂದರೆ ಪಕ್ಕದ ಜಿಲ್ಲೆ ಏನೂ ದೂರವಿಲ್ಲ. ನಿಮ್ಮದು ಬಿಜಾಪುರ–ಬಾಗಲಕೋಟೆ ಒಂದು ಜಿಲ್ಲೆಯಿದ್ದರೆ, ನಮ್ಮ ರಾಯಚೂರು–ಕೊಪ್ಪಳ ಒಂದೇ ಜಿಲ್ಲೆ ಇತ್ತು. ಎಲ್ಲರೂ ಪಕ್ಕಪಕ್ಕದ ಜಿಲ್ಲೆಯವರಾಗಿದ್ದೇವೆ. ಇವತ್ತು ಆ ರಿಪೋರ್ಟ್ ಪ್ರಕಾರ ನಿಜವಾದ ರೈತರು ಯಾರು ಸತ್ತಿದ್ದಾರೆ ಅಂಥವರಿಗೆ ಸಹಾಯ ಮಾಡತಕ್ಕ ಅಧಿಕಾರ ಸರ್ಕಾರಕ್ಕಿದೆ. ಆ ಪ್ರಕಾರ ನಾವು ಆದೇಶ ಕೊಟ್ಟಿದ್ದೇವೆ. ಇನ್ನು ಇವತ್ತು ಬರಗಾಲ ಕಾಮಗಾರಿ ಆಗಬೇಕೆಂದು ಹೇಳಿದರು. ಅದು ನಿಜ, ನಾವೂ

ಕೂಡ ಮೊನ್ನೆ ದಿವಸ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೇವೆ. ಮಾನ್ಯ ರಾಜನಾಥಸಿಂಗ್‌ರವರಿಗೂ ಕೂಡ ಭೇಟಿಯಾಗಿ ಕೊಟ್ಟಿರುತ್ತೇವೆ. ತತ್‌ಕ್ಷಣ ನಮ್ಮ ರಾಜ್ಯಕ್ಕೆ 9.99 ಲಕ್ಷ ಮೆಟ್ರಿಕ್ ಟನ್ ಕಾಳು ಕೇಳಿದ್ದೇವೆ, 1888 ಕೋಟಿ ರೂ. ಹಣ ಕೇಳಿರುತ್ತೇವೆ. ಅದರಲ್ಲಿ ನೀವು 1/3 ಭಾಗವಾದರೂ ಕೊಟ್ಟು ನಮ್ಮ ರಾಜ್ಯದಲ್ಲಿರತಕ್ಕಂಥ ಬರದ ಪರಿಸ್ಥಿತಿಗೆ ಅನುಕೂಲ ಮಾಡಿಕೊಡಿ ಎಂದು ಕೇಳಿಕೊಂಡಿದ್ದೇವೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಉಪಾಧ್ಯಕ್ಷರೆ, ಪರಿಹಾರವನ್ನು ಎಷ್ಟು ಕೊಟ್ಟಿದ್ದೇವೆಂದು ಹೇಳುವುದಕ್ಕೆ ತಯಾರಿಲ್ಲ. ಇವರು ರೈತ ವಿರೋಧಿ ಧೋರಣೆಯನ್ನು ಮಾಡುತ್ತಿದ್ದಾರೆ. ಪರಿಹಾರವನ್ನು ಕೊಡುವುದಕ್ಕೂ ಇವರು ತಯಾರಿಲ್ಲ. ಇಲ್ಲಿಯವರೆಗೂ ಅದು ಎನ್‌ಕ್ವೈರಿ ಆಗಲಿಲ್ಲ. ಆ ನ್ಯಾಯಾಂಗ ತನಿಖೆ ಬಗ್ಗೆಯೂ ಹೇಳಲಿಲ್ಲ. ರೈತ ವಿರೋಧಿ ಧೋರಣೆಯನ್ನು ನಾವು ಪ್ರೊಟೆಸ್ಟ್ ಮಾಡಿ ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಬಿಜೆಪಿ ಹಾಗೂ ಜನತಾದಳ ಸಂಯುಕ್ತ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ :– ಮಾನ್ಯ ಉಪಾಧ್ಯಕ್ಷರೆ, ನಾನು ಇರತಕ್ಕಂಥ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇವತ್ತು ಇಡೀ ಜನತೆಗೆ ನಾವು ಮನವಿಯನ್ನು ಮಾಡಿಕೊಂಡಿದ್ದೇವೆ, ಇವತ್ತು ಈ ಸದನದ ಮುಖಾಂತರ ಮುಂದಿನ ದಿನಗಳಲ್ಲಿ ಯಾವುದೇ ಕಾರಣಕ್ಕೂ ನಮ್ಮ ರಾಜ್ಯದ ಜನತೆ ಈ ರೀತಿಯಾದ ಆತ್ಮಹತ್ಯೆಯನ್ನು ಮಾಡಿಕೊಳ್ಳಕೂಡದೆಂದು ಹೇಳಿ, ನಾನು ಜನತೆಯಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಜನರು ಹಸಿವಿನಿಂದ ಸತ್ತಿದ್ದಾರೆನ್ನುವುದು ಸತ್ಯಕ್ಕೆ ದೂರವಾದಂಥ ಮಾತು. ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೆ ಯಾರೂ ಹಸಿವಿನಿಂದ ಸತ್ತಿಲ್ಲ, ಸಾಯುವುದಕ್ಕೂ ಅವಕಾಶವಿಲ್ಲವೆಂದು ನಾನು ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ :– ಮಾನ್ಯ ಉಪಾಧ್ಯಕ್ಷರೆ; ನಾನು ಎರಡು ಪ್ರಮುಖವಾಗಿರತಕ್ಕಂಥ ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತೇನೆ. ಅದಕ್ಕೆ ನಾನು ಮಾನ್ಯ ಮಂತ್ರಿಗಳಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ನೀವು ರಾಜ್ಯದ ಎಲ್ಲಾ ಕಡೆಗಳಲ್ಲಿ ಬಡತನ ರೇಖೆಯ ಕೆಳಗಿರುವವರಿಗೆ ಕೇಂದ್ರ ಸರ್ಕಾರದ ಸಹಾಯದಿಂದ ಹಳದಿ ಕಾರ್ಡ್‌ನ್ನು ಕೊಟ್ಟಿದ್ದೀರಿ ಸ್ವಾಮಿ. ನಮ್ಮ ಕಡೆ ಹಳದಿ ಕಾರ್ಡ್ ಎಂದು ಕರೆಯುತ್ತಾರೆ. ನಿಮ್ಮ ಗುಲ್ಬರ್ಗಾ ಕಡೆ ಏನೆಂದು ಕರೆಯುತ್ತಾರೆ ನನಗೆ ಗೊತ್ತಿಲ್ಲ. ಇವರು ಹೇಳುವ ಪ್ರಕಾರವೇ 121 ತಾಲ್ಲೂಕುಗಳಲ್ಲಿ ಬರಗಾಲ ಇದೆ.ನೀವು ಈಗ 5 ಅಥವಾ 10 ಕೆಜಿ. ಅಕ್ಕಿಯನ್ನು ಕೊಡುತ್ತಿದ್ದೀರಿ ಅದನ್ನು ಕನಿಷ್ಟ ಪಕ್ಷ ಒಂದು ತಿಂಗಳಿಗೆ 35 ಕೆಜಿ ಅಕ್ಕಿಯನ್ನು ಕೊಡುವುದಕ್ಕೆ ಸಾಧ್ಯವೇ? ಹಳದಿ ಕಾರ್ಡುಗಳ ಎಷ್ಟು ಇವೆ? ಇಡೀ ರಾಜ್ಯದಲ್ಲಿ 4 ಅಥವಾ 5 ಲಕ್ಷ ಇರಬಹುದು. ತಮಗೆ ಗೊತ್ತಿರುವ ಹಾಗೆ ಈ ಹಳದಿ ಕಾರ್ಡ್‌ಗಳ ಸಂಖ್ಯೆಯ ಬಗ್ಗೆ ಬಹಳ ಡಿಸ್‌ಪ್ಯೂಟ್ ಇದೆ. ಇರತಕ್ಕಂಥದ್ದು ಎರಡೂವರೆ ಲಕ್ಷ ಆದ್ದರಿಂದ ಸರ್ಕಾರಕ್ಕೆ ಅಕ್ಕಿಯನ್ನು ಜಾಸ್ತಿ ಮಾಡುವುದಕ್ಕೆ ಏನು ತೊಂದರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಇವರು ಹಸಿವಿನಿಂದ ಸತ್ತಿದ್ದಾರೆಂದು ಹೇಳುತ್ತಿದ್ದಾರೆ. ಹಸಿವು ಆದರೆ ಪಕ್ಕದ ಮನೆಯಿಂದ ಹಸಿ ಹಿಟ್ಟನ್ನಾದರೂ ತಂದು ಗಂಜಿ ಮಾಡಿಕೊಂಡು ಕುಡಿಯುತ್ತಾರೆ. ಮಾನ್ಯ ಖರ್ಗೆಯವರು ಹೇಳಿರತಕ್ಕಂಥ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆವತ್ತಿನ ದಿವಸ ಹಸಿವಿನಿಂದ ಸಾಯದೆ ಇರಬಹುದು, ಓವರ್ ದಿ ಟೈಮ್, ಆ ಬಡತನ ಹಸಿವು, ಸಾಲ, ಹಿಂಸೆ, ಚಿತ್ರಹಿಂಸೆ ಇದರಿಂದ ಸತ್ತಿರುತ್ತಾರೆ, ಇದಕ್ಕೆ ಕೊಡುವುದಕ್ಕೆ ತೊಂದರೆ ಏನು? ನನಗೆ

ಇದು ಗೊತ್ತಾಗಬೇಕು, ಇದು ಮೊದಲನೆಯದು. ಇನ್ನು ಎರಡನೆಯದಾಗಿ ನಾವು ಏನು ಡಿಸ್‌ಪ್ಯೂಟ್ ಮಾಡುತ್ತಿದ್ದೇವೆ, ನೀವು ಕೊಡತಕ್ಕಂಥ ಅಂಕಿ-ಅಂಶಗಳು ಸರಿಯಲ್ಲ. ಇದನ್ನು ಎನ್‌ಹೆಚ್‌ಆರ್‌ಸಿ.ಗೆ ಕೊಡಬೇಕೆಂದು ನಾವು ಬೇಡಿಕೆಯನ್ನು ಇಡುತ್ತಿದ್ದೇವೆ. ಎನ್‌ಹೆಚ್‌ಆರ್‌ಸಿ ಗೆ ಕೊಡುವುದಕ್ಕೆ ತೊಂದರೆ ಏನು? ಎಲ್ಲಾ ಕಡೆಗಳಲ್ಲೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ನಂ:1 ಮುಖ್ಯಮಂತ್ರಿಗಳು ಎಂಬ ಬಿರುದು ತೆಗೆದುಕೊಳ್ಳಬೇಕಲ್ಲಾ ಇದರಲ್ಲಿ ಕೂಡ ಅವರು ನಂ:1 ಆಗುತ್ತಾರೆ. ಇವರು ಇಷ್ಟೊಂದು ನಿಷ್ಪಕ್ಷಪಾತವಾಗಿ ತನಿಖೆಗೆ ಆದೇಶವನ್ನು ಎನ್‌ಹೆಚ್‌ಆರ್‌ಸಿಗೆ ಮಾಡಿದ್ದಾರೆ ಎನ್ನುವಂಥದ್ದೂ ಸಹಿತ ಬರುತ್ತದೆ. ಇದು ಎರಡನೆಯದು ಮೂರನೆಯದಾಗಿ, ನಾನು ಕೇಳತಕ್ಕಂಥದ್ದು ಏನೆಂದರೆ, ತತ್‌ಕ್ಷಣ ಹತ್ತು ಸಾವಿರ ರೂ.ಗಳನ್ನು ಕೊಡತಕ್ಕಂಥದ್ದು ಏನಿದೆ, ಅದು ಎರಡು-ಮೂರು ವರ್ಷಗಳಿಂದ ಅಸಿಸ್ಟೆಂಟ್ ಕಮಿಷನರ್ ಆಫೀಸಿನಲ್ಲಿ ಬಾಕಿ ಇದೆ. ಬೇಕಾದರೆ ನೀವು ಶಾಸಕರುಗಳನ್ನು ಕೇಳಿ. ಮೂರು ನಾಲ್ಕು ವರ್ಷದಿಂದ ಬಾಕಿ ಇದೆ, ಇದಕ್ಕೆ ಹೊಣೆ ಯಾರು? ಬೇಜವಾಬ್ದಾರಿಯಿಂದ ನಾವು ಕೇಳುತ್ತಿದ್ದೇವೆಂದು ತಾವು ತಿಳಿದುಕೊಳ್ಳುವುದಕ್ಕೆ ಹೋಗಬೇಡಿ. ಇದಕ್ಕೆ ಸ್ಪೆಷಿಫಿಕ್ಕಾಗಿ ಹೇಳಿ, ಇದಕ್ಕೆ ಬಹಳ ಉದ್ದವಾದ ಭಾಷಣವು ಬೇಕಾಗಿಲ್ಲ. ಈ ಮೂರು ಪಾಯಿಂಟ್‌ಗೆ ನನಗೆ ಉತ್ತರ ಬೇಕು ಸ್ವಾಮಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ನಮ್ಮ ಫುಡ್ ಮಿನಿಸ್ಟರ್ ಬಂದ ನಂತರ ಅದರ ಮಾಹಿತಿಯನ್ನು ಒದಗಿಸಿ ಕೊಡುತ್ತೇವೆ, ಎನ್‌ಹೆಚ್‌ಆರ್‌ಸಿ ಬಗ್ಗೆ ನಾನೇ ಬಹಳ ಸ್ಪಷ್ಟವಾಗಿ ಹೇಳಿರುತ್ತೇನೆ. ಯಾವುದೇ ಗ್ರೀವೆನ್ಸಸ್ ಇದ್ದರೂ ಕೂಡ ಅವರಿಗೆ ಕೊಟ್ಟು ಹೇಳಿಕೊಳ್ಳಬಹುದು. ನಾವು ಈಗಾಗಲೇ ಹೇಳಿದ್ದೇವೆ, ನಮ್ಮ ರಾಜ್ಯದಲ್ಲಿ ಅಂತಹ ಘಟನೆಗಳು ನಡೆದಿಲ್ಲ, ಅದಕ್ಕಾಗಿ ಅದರ ಅವಶ್ಯಕತೆ ಇಲ್ಲವೆನ್ನುವ ಬಗ್ಗೆ ನಮ್ಮ ನಿಲುವು ಇದೆ ಅದನ್ನು ನಾವು ಸ್ಪಷ್ಟಪಡಿಸುತ್ತೇವೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ :- ನೀವು ಬರೆದುಕೊಡುವುದಕ್ಕೆ ತಯಾರು ಇದ್ದೀರಾ? I am going before the NHRC. ಎನ್‌ಹೆಚ್‌ಆರ್‌ಸಿಯವರು ಏನು ಹೇಳುತ್ತಾರೆಂದರೆ, ನಾನು ಎನ್‌ಹೆಚ್‌ಆರ್‌ಸಿಯ ಮುಂದೆ ಅಪೀಲ್ ಹಾಕಿದಾಗ ನೋಡಪ್ಪಾ ಗೌರ್ನಮೆಂಟ್ last resart ಒಂದು ವೇಳೆ ಸರ್ಕಾರ ಒಪ್ಪುವುದಿಲ್ಲ ಎಂದು ಹೇಳಿದರೆ ನಾನು ಇದನ್ನು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ ಎನ್ನುವಂತಹ ಮಾತನ್ನು ಅವರು ಹೇಳುತ್ತಾರೆ. ನೀವು ಹೋಂ ಮಿನಿಸ್ಟರ್ ಆಗಿ ಮಾತನಾಡತಕ್ಕಂತಹ ಮಾತು ಅದು ಸರ್ಕಾರದ ಮಾತಾಗಿರಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಾಹಿತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಹಸಿವಿನಿಂದ ಇಲ್ಲಿಯವರೆವಿಗೆ ಯಾವುದೇ ಒಬ್ಬ ರೈತ ಸತ್ತಿಲ್ಲ ಎನ್ನತಕ್ಕಂತಹ ಇನ್‌ಫರ್ಮೇಷನ್ ಇದೆ, ಅದು ತಮಗೂ ಕೂಡ ಗೊತ್ತಿದೆ. ಆದರೆ ತಾವು ಹೇಳಿದಹಾಗೆ ಹಂತಹಂತವಾಗಿ ಅಥವಾ ಕೆಲಸ ಸಿಗದೆ ಇರುವ ಮಟ್ಟಿಗೆ ಬೇರೆ ರೀತಿಯಿಂದ ರೋಗದಿಂದ ಬಳಲಿ ಸತ್ತಂತವರು ಇರಬಹುದು ಎನ್ನತಕ್ಕಂತಹ ಆತಂಕವನ್ನು ತಾವು ವ್ಯಕ್ತಪಡಿಸಿದ್ದೀರಿ. ಅದರ ಬಗ್ಗೆ ನಾನು ಈಗಾಗಲೇ ನಮ್ಮಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ, ಅಂತಹ ಯವುದಾದರೂ ತೊಂದರೆಗಳು ಇದ್ದರೆ ಅಂತಹ ಗ್ರೀವೆನ್ಸ್ ಇದ್ದರೆ ಆ ಕಮಿಟಿಯ ಮುಂದೆ ಹೋಗಿ ಅವರು ಪ್ರೆಸೆಂಟ್ ಮಾಡಿ ಕಾಂಪನ್‌ಸೇಷನನ್ನು ಕೂಡ ತೆಗೆದುಕೊಳ್ಳಬಹುದು, ಇಲ್ಲದಿದ್ದರೆ ನಾವು ಜಿಲ್ಲೆಯಲ್ಲಿ ಇಂತಹ ಕೇಸಸ್ ಎಷ್ಟು ಇದೆ ಎನ್ನುವುದರ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಇನ್‌ಫರ್ಮೇಷನ್ ತರಿಸಿಕೊಡುತ್ತೇವೆ ಯಾವ ಯಾವ ಜಿಲ್ಲೆಗಳಲ್ಲಿ ಹಸಿವಿನಿಂದ ಸತ್ತಿದ್ದಾರೆ ಅಥವಾ ಇಂತಹ ಕಾರಣಕ್ಕಾಗಿ

ಸತ್ತಿದ್ದಾರೆ ಎಂಬ ಮಾಹಿತಿಯನ್ನು ಬೇಕಾದರೆ ತರಿಸಿಕೊಂಡು ತಮಗೆ ಒದಗಿಸಿಕೊಡುತ್ತೇನೆ. ಆದರೆ ಇಲ್ಲಿಯವರೆಗೆ ನಾನು ಹೇಳಿದ ಹಾಗೆ ಇದೇ ಸರ್ಕಾರವೆಂದು ಹೇಳಲಿಲ್ಲ, ಕನಾಟಕ ರಾಜ್ಯದಲ್ಲಿ ಹಿಂದಿನಿಂದಲೂ ಕೂಡ ಇಲ್ಲಿಯವರೆವಿಗೆ ಹಸಿವಿನಿಂದ ಸತ್ತಿದ್ದಾರೆ ಅಥವಾ ಅನ್ನ ಇರಲಾರದಕ್ಕೆ ಸತ್ತಿದ್ದಾರೆ ಎನ್ನುವುದು ಕಡಿಮೆ ಅಂಥ ಯಾವುದೇ ಉದಾಹರಣೆಯೂ ಕೂಡ ನಮ್ಮ ಮುಂದೆ ಬಂದಿಲ್ಲ. ಸಾಯುವುದಕ್ಕೆ ಅನೇಕ ಕಾರಣಗಳಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಏಕೆಂದರೆ ಇದು minister pretation ಆಗಬಾರದು varions reasons ರೋಗದಿಂದ ಬಳಲಿ ಸತ್ತಿರಬಹುದು, ಮತ್ತೆ ಯಾವುದೇ ಕಾರಣಕ್ಕಾಗಿ ಸೂಯಿಸೈಡ್ ಮಾಡಿಕೊಂಡಿರಬಹುದು, ರೈತ ಸಾಲ ಮಾಡಿಕೊಂಡು ಸತ್ತಿರಬಹುದು ಇನ್ನು ಅನೇಕ ಕಾರಣಗಳಿರಬಹುದು. ಆದರೆ ಇದಕ್ಕೇ ನೇರವಾಗಿ ಜೋಡಿಸತಕ್ಕಂತಹದ್ದು ಸರಿಯಲ್ಲ ಎನ್ನತಕ್ಕಂತಹ ಮಾತನ್ನು ನಾನು ಹೇಳಿದ್ದೇನೆ. ಅದಕ್ಕಾಗಿ ಮಾನ್ಯ ಸದಸ್ಯರು ಇದರ ಮೇಲೆ ಹೇಳತಕ್ಕಂತಹದ್ದು ಅಂದರೆ ಈ ಮಾತಿಗೆ ಇನ್‌ಸಿಸ್ಟ್ ಮಾಡತಕ್ಕಂತಹದ್ದು ಅಷ್ಟೊಂದು ಸರಿಯಲ್ಲ. ಎನ್‌ಹೆಚ್‌ಆರ್‌ಸಿ ಮುಂದೆ ಬೇರೆ ಗ್ರಿವೆನ್ಸ್ ಇದ್ದವರು ಹೋಗುವುದಕ್ಕೆ ಅವಕಾಶವಿದೆ, ಅವರು ಹೋಗಬಹುದು.

ಉಪಾಧ್ಯಕ್ಷರು :– ಮಾನ್ಯ ಸಿಂಧ್ಯಾರವರು ಅಂಕಿಗಳಲ್ಲಿ ವ್ಯತ್ಯಾಸ ಇದೆ ಎಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ನೋ, ನೋ, ಪುನ: ಇದರ ಬಗ್ಗೆ ಬೇಕಾದರೆ ಜಿಲ್ಲಾಧಿಕಾರಿಗಳಿಂದ ಇನ್ನೊಂದು ಮಾಹಿತಿಯನ್ನು ತರಿಸಿಕೊಡುತ್ತೇವೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ :– ಸ್ವಾಮಿ, ಇರೋದು ಎರಡೂವರೆ ಲಕ್ಷ ಹಳದಿ ಕಾರ್ಡ್‌ಗಳು ತಾವು ಕನ್ಸಿಡರ್ ಮಾಡಿ You are the Chairman of that committee. ಹೇಳಿ ಅದು ಎಷ್ಟಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಆ ರೀತಿಯಾಗಿ ಹೇಳುವುದಕ್ಕೆ ಬರುವುದಿಲ್ಲ. ಬಟ್ ಎನಿವೇ ನಾವು ಫುಡ್ ಮಿನಿಸ್ಟರ್‌ರವರು ಬಂದ ಮೇಲೆ ಅದರ ಬಗ್ಗೆ ನಾನು ವಿಚಾರಿಸಿ ಅವರಿಂದ ಸ್ಟೇಟ್‌ಮೆಂಟ್‌ನ್ನು ಮಾಡಿಸುತ್ತೇನೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ತಾವು ಬರಗಾಲದ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂದು ಕೇಳಿದ್ದೀರಿ, ಅದನ್ನು ನಾನು ಸೋಮವಾರ ದಿವಸ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ನಿನ್ನೆ ಕಾವೇರಿಯಲ್ಲಿ ನೀರು ಬಿಟ್ಟಿದ್ದಾರೆ, ಜನರು ನೀರಿಲ್ಲವೆಂದು ಹೇಳುತ್ತಿದ್ದಾರೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ನಾಳೆ ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದರು. ಇವತ್ತು ಜಲಸಂಪನ್ಮೂಲ ಮಂತ್ರಿಗಳೇ ಈ ಸದನದಲ್ಲಿಲ್ಲ. ಅವರು ದೆಹಲಿಗೆ ಹೋದರು, ಮೆಮೋರ್‍ಯಾಂಡಮ್‌ನ್ನು ಕೊಟ್ಟರು, ಇಲ್ಲೊಂದು ಸ್ಟೇಟ್‌ಮೆಂಟ್ ಕೂಡ ಮಾಡಲಿಲ್ಲ. ನಾವು ಕಸದಕಡ್ಡಿಗಿಂತಲೂ ಕಡಿಮೆಯಾಗಿದ್ದೇವೆ, ಇಲ್ಲಿ ವಿರೋಧಪಕ್ಷಗಳು ಸತ್ತುಹೋಗಿದೆಯಲ್ಲಾ? ನಾವು ಕಸದಕಡ್ಡಿಗಿಂತಲೂ ಕಡಿಮೆಯಾಗಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಇಲ್ಲಾ ಸತ್ತಿಲ್ಲ, ಬಹಳ ಜೀವಂತವಾಗಿದ್ದಾರೆಂದು ಹೇಳಿ ಹೊರಗೆ ಹೋದವರನ್ನು ಒಳಗೆ ಕರೆದುಕೊಂಡು ಬಂದು ನಾವು ಮಾತನಾಡಿಸಿದ್ದೇವೆ. ಸ್ಟೇಟ್‌ಮೆಂಟ್ ಮಾಡೋಣವೆಂದರೆ ಅದರ ಕಾಪೀಸ್ ಇಲ್ಲ, ನೀವು ಹೇಳಿ ಎಂದರೆ ಹೇಳುತ್ತೇನೆ. ಪ್ರತಿಗಳನ್ನು ಆಮೇಲೆ ಸರ್ಕ್ಯುಲೇಟ್ ಮಾಡುತ್ತೇನೆ. ಅದನ್ನು ನಾವು ಹೇಳಬೇಕಾಗುತ್ತದೆ, ಏಕೆಂದರೆ ಕಾಪಿಯಿಲ್ಲವೆಂದು ತಕರಾರು ಮಾಡುವುದು ಬೇಡ.

ಉಪಾಧ್ಯಕ್ಷರು :- ತಾವು ಸ್ಟೇಟ್‌ಮೆಂಟ್ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಸೋಮವಾರ ದಿವಸ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಉಪಾಧ್ಯಕ್ಷರು :- ಈಗ ಸದನವನ್ನು ಸೋಮವಾರ ಬೆಳಿಗ್ಗೆ 11-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 4 ಗಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ: 4ನೇ ಆಗಸ್ಟ್ 2003ರ ಸೋಮವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು.)

ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

9 ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದ ಅಂತ್ಯೋದಯ ಅನ್ನಯೋಜನೆಯ ಅನುಷ್ಠಾನ

4191 (4870) : ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾರತ ಸರ್ಕಾರದ ಅಂತ್ಯೋದಯ ಅನ್ನ ಯೋಜನೆಯಡಿ ಎಷ್ಟು ಅತೀ ಕಡು ಬಡ ಕುಟುಂಬಗಳನ್ನು ಗುರುತಿಸಲಾಗಿದೆ; ಈ ಕುಟುಂಬಗಳಿಗೆ ಯವ ಯಾವ ಆಹಾರ ಧಾನ್ಯಗಳನ್ನು ಎಷ್ಟು ಪ್ರಮಾಣದಲ್ಲಿ ನೀಡಲಾಗಿದೆ; ಇದರ ದರ ಎಷ್ಟು; (ಪೂರ್ಣ ಮಾಹಿತಿ ನೀಡುವುದು)

ಆ) ಕೇಂದ್ರ ಸರ್ಕಾರಿ ಅಂತ್ಯೋದಯ ಅನ್ನ ಯೋಜನೆಯಡಿ ಎಷ್ಟು ಅಹಾರ ಧಾನ್ಯ ಬಿಡುಗಡೆ ಮಾಡಿದೆ;

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರತ ಸರ್ಕಾರದ ಅಂತ್ಯೋದಯ ಅನ್ನ ಯೋಜನೆಯಡಿ ಎಷ್ಟು ಅತೀ ಕಡು ಬಡ ಕುಟುಂಬಗಳಿವೆ; ಅವರಿಗೆ ಎಷ್ಟು ಪ್ರಮಾಣದ ಪಡಿತರ ವಿತರಿಸಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ) ಸುಳ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದ ಈ ಯೋಜನೆಯಡಿ ಎಷ್ಟು ಕಡು ಬಡ ಕುಟುಂಬಗಳನ್ನು ಗುರುತಿಸಲಾಗಿದೆ; (ವಿವರವನ್ನು ಗ್ರಾಮವಾರು ನೀಡುವುದು)?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ರಾಜ್ಯದಲ್ಲಿ ಅಂತ್ಯೋದಯ ಅನ್ನ ಯೋಜನೆಯಡಿ ಈಗಾಗಲೆ 4,79,700 ಫಲಾನುಭವಿಗಳನ್ನು ಫಲಾನುಭವಿಗಳನ್ನು ಗುರುತಿಸಲಾಗಿದೆ ಪ್ರಸ್ತುತ ರಾಜ್ಯದಲ್ಲಿ 2,40,000 ಫಲಾನುಭವಿಗಳನ್ನು ಹೆಚ್ಚುವರಿಯಾಗಿ ಗುರುತಿಸಲು ಆದೇಶಿಸಲಾಗಿದೆ. ಅಂತ್ಯೋದಯ ಅನ್ನ ಯೋಜನೆಯಡಿ ಫಲಾನುಬವಿ ಕುಟುಂಬಗಳಿಗೆ ಪ್ರತಿ ಮಾಹೆ ಕೆಳಕಂಡಂತೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ;

ಕ್ರಮ ಸಂ.	ಆಹಾರ ಧಾನ್ಯ ಗಳ ವಿವರ	ಪ್ರಮಾಣ ಪ್ರತಿ ಪಡಿತರ ಚೀಟಿಗೆ (ಮಾಹೆಯಾನ)	ದರ ಪ್ರತಿ ಕೆ.ಜಿ.ಗೆ ರೂ. ಗಳಲ್ಲಿ
1.	ಅಕ್ಕಿ	28 ಕೆ.ಜಿ.	3.00
2.	ಗೋಧಿ	7 ಕೆ.ಜಿ.	2.00

ಆ) ಅಂತ್ಯೋದಯ ಅನ್ನ ಯೋಜನೆಯಡಿ ಪ್ರತಿ ಮಾಹೆ ಬಿಡುಗಡೆಯಾಗುತ್ತಿರುವ ಆಹಾರ ಧಾನ್ಯಗಳ ಪ್ರಮಾಣ ಕೆಳಕಂಡಂತಿದೆ;

ಕ್ರ. ಸಂ.	ಆಹಾರಧಾನ್ಯಗಳ ವಿವರ	ಪ್ರಮಾಣ (ಮೆಟ್ರಿಕ್ ಟನ್‌ಗಳಲ್ಲಿ)
1.	ಅಕ್ಕಿ	13430
2.	ಗೋಧಿ	3360

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತ್ಯೋದಯ ಅನ್ನ ಯೋಜನೆಯಡಿ 8535 ಫಲಾನುಭವಿಗಳನ್ನು ಗುರುತಿಸಲಾಗಿದೆ. ಇದೀಗ ಹೆಚ್ಚುವರಿಯಾಗಿ 10655 ಫಲಾನುಭವಿಗಳನ್ನು ಗುರುತಿಸಲು ಗುರಿಯನ್ನು ನಿಗದಿಪಡಿಸಲಾಗಿರುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ಅಂತ್ಯೋದಯ ಅನ್ನ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ತಾಲ್ಲೂಕುವಾರು ವಿವರ ಕೆಳಕಂಡಂತಿದೆ;

ಕ್ರ.	ತಾಲ್ಲೂಕಿನ ಹೆಸರು	ಅಂತ್ಯೋದಯ ಅನ್ನ ಪಡಿತರ ಚೀಟಿ ಹೊಂದಿರುವ ಕುಟುಂಬಳ ಸಂಖ್ಯೆ
1.	ಮಂಗಳೂರು (ಅ.ಪ)	35
2.	ಮಂಗಳೂರು ತಾ.	2918
3.	ಬಂಟ್ವಾಳ ತಾಲ್ಲೂಕು	1729
4.	ಪುತ್ತೂರು ತಾಲ್ಲೂಕು	1340
5.	ಬೆಳ್ತಂಗಡಿ ತಾಲ್ಲೂಕು	1618
6.	ಸುಳ್ಯ ತಾಲ್ಲೂಕು	889
	ಒಟ್ಟು	8535

ಈ ಕುಟುಂಬಗಳಿಗೂ ಸಹ 'ಅ' ಉಪ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ತಿಳಿಸಿದ ಪ್ರಮಾಣ ಹಾಗೂ ದರದಲ್ಲಿಯೇ ಪ್ರತಿ ಮಾಹೆ ಪಡಿತರ ವಿತರಿಸಲಾಗುತ್ತಿದೆ.

ಈ) ಸುಳ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸುಳ್ಯ ತಾಲ್ಲೂಕಿನ ಎಲ್ಲಾ ಗ್ರಾಮಗಳು ಹಾಗೂ ಪುತ್ತೂರು ತಾಲ್ಲೂಕಿನ ಕೆಲವು ಗ್ರಾಮಗಳು ಒಳಗೊಂಡಿದ್ದು ಒಟ್ಟು 1384 ಅಂತ್ಯೋದಯ ಅನ್ನ ಫಲಾನುಭವಿಗಳಿರುತ್ತಾರೆ. ಗ್ರಾಮವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಸುಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿತರಿಸಲಾಗಿರುವ ಅಂತ್ಯೋದಯ ಅನ್ನ ಯೋಜನೆ ಫಲಾನುಭವಿಗಳ ಗ್ರಾಮವಾರು ವಿವರ

ಸುಳ್ಯ ತಾಲ್ಲೂಕು

ಕ್ರ.ಸಂ.	ಗ್ರಾಮದ ಹೆಸರು	ಅಂತ್ಯೋದಯ ಅನ್ನ ಯೋಜನೆ ಫಲಾನುಭವಿಗಳ ಸಂಖ್ಯೆ
1.	ಕನಕಮಜಲು	22
2.	ಜಾಲ್ಸೂರು	48
3.	ಮಂಡೆ ಕೋಲು	28

1	2	3
4.	ಅಜ್ಜಾವರ	30
5.	ಐವರ್ನಾಡು	28
6.	ಮರ್ಕಂಜ	53
7.	ಅರೆಟ್ಟಿ	27
8.	ಅಮರ ಮುಡ್ನೂರು	19
9.	ಅಮರ ಪಡ್ನೂರು	25
10.	ಉಬರಡ್ಕ ಮಿತ್ತೂರು	19
11.	ನೆಲ್ಲೂರು ಕೆಮ್ರಾಜೆ	23
12.	ಅರಂತೋಡು	23
13.	ಸಂಪಾಜೆ	56
14.	ಕಲ್ಮಡ್ಕ	11
15.	ಕೊಡಿಯಾಲ	25
16.	ಬೆಳ್ಳಾರೆ	40
17.	ಮಡಪ್ಪಾಡಿ	17
18.	ಮುಪ್ಪೇರಿಯಾ	20
19.	ಬಾಳಿಲ	17
20.	ಸುಬ್ರಮಣ್ಯ	29
21.	ಐನೆಕಿದು	5
22.	ಏನೆಕಲ್ಲು	24
23.	ಮುರುಳ್ಯ	7
24.	ಏಡಮಂಗಲ	15
25.	ಎಣ್ಮೂರು	7
26.	ನಾಲ್ಕೂರು	10
27.	ಗುತ್ತಿಗಾರು	14
28.	ದೇವಚಳ್ಯ	16
29.	ಪೆರುವಾಜೆ	49
30.	ಹರಿಹರ ಪಲ್ಲತಡ್ಕ	10
32.	ಬಾಳುಗೋಡು	9
33.	ಕಲ್ಮಕಾರು	19

1	2	3
34.	ಬಳ್ಪ	19
35.	ಕೇನ್ಯ	14
36.	ಕೂತುನಂಜ	15
37.	ಪಂಬೆತ್ತಡಿ	11
38.	ತೂಡಿಕ್ಕಾನ	15
39.	ಐದತ್ತೊಕ್ಲು	20
40.	ಕಳಂಜ	26
ಪುತ್ತೂರು ತಾಲ್ಲೂಕು ವ್ಯಾಪ್ತಿ		
1.	ಕೊಲ	14
2.	ಹಳೇನೇರೆಂಕಿ	6
3.	ರಾಮಕುಂಜ	9
4.	ಆಲಂಕಾರು	15
5.	ಪೆರಾಬೆ	18
6.	ಕುಂತೂರು	10
7.	ಬಲ್ಯ	17
8.	ಕುಟ್ರುಪ್ಪಾಡಿ	42
9.	ನುಜಿ ಬಾಳ್ತಿಲ	36
10.	ಕಡಬ	42
11.	ಕೋಡಿಂಬಾಳ	35
12.	ಐತ್ತೂರು	6
13.	ಬಂಟ್ರ	43
14.	ಬಿಳಿ ನೆಲೆ	48
15.	ಕೊಂಬಾರು	14
16.	ಕಾಣಿಯೂರು	35
17.	ದೋಲ್ಪಾಡಿ	7
18.	ಬೆಳಂದೂರು	14
19.	ಕ್ಯಾಮಣ	17
20.	ಕುದ್ಮಾರು	9

1	2	3
21.	ಚಾವರ್ಾಕ	16
22.	ಪುಣ್ಣಪಾಡಿ	16
23.	ಸವಣೂರು	27
24.	ಪಾಲ್ತಾಡಿ	2
	ಒಟ್ಟು	1384

ಕೊಡಗು ಜಿಲ್ಲೆಯಲ್ಲಿ ಚಿಕ್ಲೀಹೊಳೆ ನೀರಾವರಿ ಯೋಜನೆಯ ಅನುಷ್ಠಾನದ ಬಗ್ಗೆ

4192 (4833) : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ನೀರಾವರಿ ಯೋಜನೆಯಾದ ಚಿಕ್ಲೀಹೊಳೆ ಯೋಜನೆಯು ಯಾವ ಹಂತದಲ್ಲಿದೆ;

ಆ) ಈ ಯೋಜನೆಯಿಂದ 1 ಎಕರೆಗೂ ಸಹ ನೀರಾವರಿ ಸೌಲಭ್ಯ ಸಿಗದಿರುವುದು ಸರ್ಕಾರದ ಗಮನದಲ್ಲಿದೆಯೇ;

ಇ) ಹಾಗಿದ್ದಲ್ಲಿ, ಇದುವರೆವಿಗೂ ನೀರು ಒದಗಿಸುವ ವ್ಯವಸ್ಥೆಗೆ ಗಮನ ನೀಡಿಲ್ಲದಿರುವುದು ಕಾರಣವೇನು;

ಈ) ಇದರ ಗೇಟ್‌ಗಳು ಒಡೆದು ಹಾಳಾಗಿರುವುದು ಕಂಡು ಬಂದಿದೆಯೇ ವಿವರ ನೀಡುವುದು;

ಉ) ಈ ಗೇಟುಗಳನ್ನು ಸರಿಪಡಿಸಲು ಯವ ಕ್ರಮ ಕೈಗೊಳ್ಳಲಾಗಿದೆ;

ಊ) ಇದಕ್ಕಾಗಿಯೇ ನಿರ್ಮಿಸಿರುವಂತಹ ಶಾಶ್ವತ ಕಟ್ಟಡಗಳು ಯಾವ ಉಪಯೋಗವಿಲ್ಲದೇ ಖಾಲಿ ಇರುವ ಬಗ್ಗೆ ಸರ್ಕಾರದ ನಿಲುವೇನು;

ಋ) ಹಾಗೂ ಈ ಯೋಜನೆಯಲ್ಲಿ ನಿರಾಶ್ರಿತರಾದ ಸಂತ್ರಸ್ತ ಕುಟುಂಬಗಳಿಗೆ ನೀಡಿರುವ ಪರಿಹಾರ ಹಣ ಎಷ್ಟು ಮತ್ತು ಈ ಯೋಜನೆಗೆ ಖರ್ಚು ಮಾಡಿರುವ ಹಣ ಎಷ್ಟು?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಕೊಡಗು ಜಿಲ್ಲೆಯಡಿಯಲ್ಲಿ ಬರುವ ಮಧ್ಯಮ ನೀರಾವರಿ ಯೋಜನೆಯಾದ ಚಿಕ್ಲಿಹೊಳೆ ಎಡದಂಡೆ ನಾಲೆ? ನೇ ಮತ್ತು 8ನೇ ಕಿ.ಮೀ.ನಲ್ಲಿ 395 ಮೀ ಉದ್ದದ ನಾಲಾ ಅಗ್ರೆತ ಕಾರ್ಯ ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತದೆ.

ಆ) ಈ ಯೋಜನೆಯಡಿಯಲ್ಲಿ ಬರತಕ್ಕ ಒಟ್ಟು ಒಟ್ಟು 865 ಹೆಕ್ಟೇರ್ ನೀರಾವರಿ ಸಾಮರ್ಥ್ಯದಲ್ಲಿ ಇದುವರೆಗೆ 436 ಹೆಕ್ಟೇರ್ ಪ್ರದೇಶಕ್ಕೆ ನೀರೊದಗಿಸಲಾಗುತ್ತಿದೆ.

ಇ) ಈ ಯೋಜನೆಯ ಕಾಲುವೆಗೆ ಬೇಕಾಗಿರುವ ಸುಮಾರು 395 ಮೀ. ಉದ್ದದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ವಿಳಂಬವಾಗಿದ್ದು ಈಗ ಇತ್ಯರ್ಥವಾಗಿದ್ದು, ಪರಿಹಾರ ಧನವನ್ನು ಒದಗಿಸಿದ್ದು ಬಾಕಿ ಕಾಮಗಾರಿಯನ್ನು ಬರುವ ಮಳೆಗಾಲದೊಳಗೆ ಪೂರ್ಣಗೊಳಿಸಿ ನೀರನ್ನು ಒದಗಿಸಲಾಗುವುದು

ಈ) 2002ರಲ್ಲಿ ನೀರು ಬಿಟ್ಟುಕೊಳ್ಳುವುದಕ್ಕೋಸ್ಕರ ಗೇಟುಗಳನ್ನು ಒಡೆದು ಹಾನಿ ಮಾಡಿರುತ್ತಾರೆ. ದಿನಾಂಕ:13-6-02 ರಂದು ಕುಶಾಲನಗರದ ಪೋಲೀಸ ಠಾಣೆಯಲ್ಲಿ ದೂರು ನೀಡಲಾಗಿದೆ ದುರಸ್ತಿ ಕಾರ್ಯ ಮುಗಿದ ನಂತರ ಜಲಾಶಯದಿಂದ ನೀರು ಬಿಡಲಾಗುತ್ತದೆ.

ಉ) ನಾಲೆಯಲ್ಲಿ ಬರುವ ಗೇಟುಗಳಲ್ಲಿ ಸಾಮಾನ್ಯ ನೀರು ಸೋರುವಿಕೆ ಕಂಡು ಬಂದಲ್ಲಿ ವಾರ್ಷಿಕ ನಿರ್ವಹಣೆ ವೆಚ್ಚದಲ್ಲಿ ದುರಸ್ತಿ ಮಾಡಿ ನೀರನ್ನು ಹರಿಸಲಾಗುತ್ತಿದೆ.

ಊ) ಈ ಯೋಜನೆಗೆ ಸಂಬಂಧಿಸಿದಂತೆ ರಂಗಸಮುದ್ರ ಗ್ರಾಮದಲ್ಲಿ ನಿರ್ಮಿಸಲಾಗಿರುವ ಕಛೇರಿ ಮತ್ತು ವಸತಿ ಕಟ್ಟಡಗಳನ್ನು ಇಲಾಖೆಯ ನಿರ್ವಹಣಾ ಸಿಬ್ಬಂದಿಗಳ ವಸತಿ ಸೌಕರ್ಯಗಳಿದ್ದು ಕೆಲವು ಕಟ್ಟಡಗಳನ್ನು ಅನ್ಯ ಇಲಾಖೆ ಸಿಬ್ಬಂದಿಯ ಬೇಡಿಕೆ ಮೇರೆಗೆ ಬಾಡಿಗೆ ಆಧಾರದ ಮೇಲೆ ನೀಡಲಾಗಿದೆ. ಖಾಲಿ ಉಳಿದಿರುವ ಕಟ್ಟಡಗಳನ್ನು ಬಾಡಿಗೆ ಆಧಾರದ ಮೇಲೆ ಅರಣ್ಯ ಇಲಾಖೆ ಹಾಗೂ ಬೇರೆ ಇಲಾಖೆಗಳಿಗೆ ಕೊಡುವ ಬಗ್ಗೆ ವ್ಯವಹರಿಸಲಾಗುತ್ತಿದೆ.

ಋ) ಈ ಯೋಜನೆಯ ಮುಳುಗಡೆ ಪ್ರದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಗ್ರಾಮ ಅಥವಾ ಮನೆಗಳು ಮುಳುಗಡೆ ಆಗಿರದ ಕಾರಣ. ಸಂತ್ರಸ್ತ ಕುಟುಂಬದವರಿಗೆ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸಿರುವುದಿಲ್ಲ. ಈ ಯೋಜನೆಗೆ ಇದುವರೆವಿಗೆ ಆಗಿರುವ ಖರ್ಚು ರೂ. 17.70 ಕೋಟಿಗಳು.

ಹಾರಂಗಿ ಯೋಜನೆಯ ಉದ್ಯಾನವನದ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸುವ ಬಗ್ಗೆ

4193 (4834) : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾರಂಗಿ ಯೋಜನೆಯ ಗಾರ್ಡನ್ (ಉದ್ಯಾನವನದ) ನಿರ್ವಹಣೆಯನ್ನು ಸರ್ಕಾರವೇ ನೋಡಿಕೊಳ್ಳುವುದೇ ಅಥವಾ ಖಾಸಗೀಯವರಿಗೆ ನೀಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ; ವಿವರ ನೀಡುವುದು;

ಆ) ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಉದ್ಯಾನವನದ ನಿರ್ವಹಣೆಯನ್ನು ಖಾಸಗೀಯವರಿಗೆ ವಹಿಸುವ ಬಗ್ಗೆ ಭರವಸೆ ನೀಡಿದ್ದರೇ;

ಇ) ಹಾಗಿದ್ದಲ್ಲಿ ಈ ಪ್ರಸ್ತಾಪ ಯಾವ ಹಂತದಲ್ಲಿದೆ;

ಈ) ಸರ್ಕಾರವೇ ನಿರ್ವಹಣೆ ಮಾಡಿ ನೋಡಿಕೊಳ್ಳಲು ಇರುವ ತೊಂದರೆಗಳೇನು;

ಉ) ಖಾಸಗಿಯವರಿಗೆ ಕೊಡಲು ಮುಂದಾಗಿದ್ದಲ್ಲಿ ಯಾರಿಗೆ ವಹಿಸಲಾಗಿದೆ; ಎಷ್ಟು ಮೊತ್ತಕ್ಕೆ ನೀಡಲು ಉದ್ದೇಶಿಸಲಾಗಿದೆ; ವಿವರಗಳೊಂದಿಗೆ ಮಾಹಿತಿ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಹಾರಂಗಿ ಅಣೆಕಟ್ಟೆಯ ಕೆಳಭಾಗದಲ್ಲಿ ಬರುವ ಬೃಂದಾವನವನ್ನು ಕಾವೇರಿ ನೀರಾವರಿ ನಿಗಮದ ಮೂಲಕ ನಿರ್ವಹಿಸಲಾಗುತ್ತಿದೆ.

ಆ) ಉದ್ಯಾನವನ್ನು ಅಭಿವೃದ್ಧಿಗೊಳಿಸಲು ಯೋಜಿಸಲಾಗಿದ್ದು ಅಭಿವೃದ್ಧಿಗೊಳಿಸಿದ ನಂತರ ನಿರ್ಣಯಿಸಲಾಗುವುದು.

ಇ) ಪ್ರಸ್ತಾವನೆಯ ಹಂತದಲ್ಲಿದೆ

ಈ) ಸದ್ಯಕ್ಕೆ ಉದ್ಭವಿಸುವುದಿಲ್ಲ.

ಉ) ಪ್ರಸ್ತಾವನೆಯ ಹಂತದಲ್ಲಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀದರ್‌ನಲ್ಲಿ ಶಿಶು ಮಾರಾಟ ಪ್ರಕರಣದ ತನಿಖಾ ವರದಿಯ ಬಗ್ಗೆ

4195 (4945) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್‌ನಲ್ಲಿ ಶಿಶು ಮಾರಾಟ ಪ್ರಕರಣದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಿದ್ದಾರೆಯೇ? ಸಲ್ಲಿಸಿದ್ದರೆ ಯಾವಾಗ ಸಲ್ಲಿಸಲಾಯಿತು?

ಆ) ವರದಿಯಲ್ಲಿ, ಪ್ರಕರಣದಲ್ಲಿ ಭಾಗಿಯಾದವರನ್ನು ಗುರುತಿಸಲಾಗಿದೆಯೇ? ಗುರುತಿಸಿದ ವ್ಯಕ್ತಿ / ಸಂಸ್ಥೆಗಳು ಯಾವುವು?

ಇ) ಈ ವರದಿಯ ಆಧಾರದ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಕ್ರಮ ಕೈಗೊಳ್ಳದಿದ್ದಲ್ಲಿ ಕಾರಣವೇನು? ಯಾವಾಗ ಕೈಗೊಳ್ಳಲಾಗುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಬೀದರ್‌ನಲ್ಲಿ ಶಿಶು ಮಾರಾಟ ಪ್ರಕರಣ ನಡೆದಿಲ್ಲ.
ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹೊಸನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಶಿಫಾರಸ್ಸು ಕುರಿತು

4196 (4946) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊಸನಗರ ಕೃಷಿ ಉತ್ಪನ್ನ ಉಪ ಮಾರುಕಟ್ಟೆಯನ್ನು ಸಾಗರ ಮಾರುಕಟ್ಟೆಯಿಂದ ಬೇರ್ಪಡಿಸಿ ಸ್ವತಂತ್ರ ಮಾರುಕಟ್ಟೆಯಿಂದ ಬೇರ್ಪಡಿಸಿ ಸ್ವತಂತ್ರ ಮಾರುಕಟ್ಟೆಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಈ ಬಗ್ಗೆ ಸಾಗರ ಮಾರುಕಟ್ಟೆ ಸಮಿತಿ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದೆಯೇ;

ಇ) ಹೊಸನಗರ ಮಾರುಕಟ್ಟೆ ಅಭಿವೃದ್ಧಿ ದೃಷ್ಟಿಯಿಂದ ಅದರಲ್ಲೂ ವಿಶೇಷವಾಗಿ ಅಡಿಕೆ ಬೆಳೆಗಾರರ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಸರ್ಕಾರ ತೀರ್ಮಾನ ಕೈಗೊಳ್ಳುವುದೇ; ಯಾವಾಗ;

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಹೌದು.

ಆ) ಹೌದು.

ಇ) ಆರ್ಥಿಕ ಕಾರ್ಯಸಾಧ್ಯತೆಯು ಪ್ರಮುಖ ಮಾನದಂಡವಾಗಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ತುಂಗಾ ಮೇಲ್ದಂಡೆ ಯೋಜನೆಯ ನಿರಾಶ್ರಿತ ಕುಟುಂಬಗಳ ಮಾಹಿತಿ ಬಗ್ಗೆ

4197 (4947) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಜಾರಿಯಾಗಿರುವ ಯೋಜನೆಗಳಿಂದ ನಿರಾಶ್ರಿತರಾಗಿರುವ (ಸಂತ್ರಸ್ಥರ) ಕುಟುಂಬಗಳ ಸಂಖ್ಯೆ ಎಷ್ಟು;

ಆ) ತುಂಗಾ ಮೇಲ್ದಂಡೆ ಯೋಜನೆಯಿಂದ ನಿರಾಶ್ರಿತರ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆಯೇ;

ಇ) ತುಂಗಾ ಮೇಲ್ದಂಡೆಗಾಗಿ ವೆಚ್ಚ ಮಾಡಲಿರುವ ಹಣ ಎಷ್ಟು; ಕಾಮಗಾರಿ ಯಾವ ಹಂತದಲ್ಲಿದೆ; ಯಾವಾಗ ಪೂರ್ಣಗೊಳ್ಳುತ್ತದೆ;

ಈ) ಈ ಯೋಜನೆಯಿಂದ ಜಿಲ್ಲೆಯ ಹಗೂ ಸಉತ್ತಮುತ್ತಲಿನ ಎಷ್ಟು ಗ್ರಾಮಗಳು ಮುಳುಗಡೆಯಾಗಲಿವೆ;

ಉ) ಪುನರ್ವಸತಿ ಕೇಂದ್ರ ನಿರ್ಮಾಣ ಕಾಮಗಾರಿಗೆ ಎಷ್ಟು ಹಣ ನಿಗದಿಪಡಿಸಲಾಗಿದೆ; ಇದುವರೆಗೆ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯ ತುಂಗಾ ಅಣೆಕಟ್ಟು ಯೋಜನೆಯು 1946 ರಲ್ಲಿ ಪ್ರಾರಂಭಿಸಿ 1956 ರಲ್ಲಿ ಪೂರ್ಣಗೊಂಡಿರುತ್ತದೆ. ಈ ಯೋಜನೆಯಿಂದ 120 ಮನೆಗಳು ಮುಳುಗಡೆಯಾಗಿದ್ದು, ಈ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲಾಗಿದೆ.

ಆ) ಇದೆ.

ಇ) ಮಾರ್ಪಾಡಿತ ಯೋಜನಾ ವರದಿಯಂತೆ ಅಂದಾಜು ವೆಚ್ಚವು ರೂ. 1052.33 ಕೋಟಿ. ಯೋಜನೆಯ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ. ಈ ಯೋಜನೆಯನ್ನು 2005 ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಚಿಸಲಾಗಿದೆ.

ಈ) ಶಿವಮೊಗ್ಗ ಜಿಲ್ಲೆಯು ಎರಡು ಗ್ರಾಮಗಳು ಮುಳುಗಡೆಯಿಂದ ಭಾಗಶಃ ತೊಂದರೆಗೊಳಗಾಗುತ್ತವೆ ಮತ್ತು ಮೂರು ಗ್ರಾಮಗಳ 214ಎ–07 ಗುಂ ಜಮೀನುಗಳು ಮುಳುಗಡೆಯಾಗುತ್ತವೆ ಚಿಕ್ಕಮಗಳೂರು ಜಿಲ್ಲೆಯ ಎರಡು ಗ್ರಾಮಗಳ 105ಎ.– 22ಗುಂ. ಜಮೀನುಗಳು ಮುಳುಗಡೆಯಾಗುತ್ತವೆ.

ಉ) ಪುನರ್ವಸತಿ ಕೇಂದ್ರ ನಿರ್ಮಾಣ ಕಾಮಗಾರಿಗೆ ರೂ. 350.00 ಲಕ್ಷ ನಿಗದಿಪಡಿಸಲಾಗಿದೆ. ಇದುವರೆಗೆ ಪುನರ್ವಸತಿ ಕೇಂದ್ರದ ನಿರ್ಮಾಣ ಕಾರ್ಯಕ್ಕಾಗಿ ಯಾವುದೇ ವೆಚ್ಚ ಭರಿಸಲಾಗಿಲ್ಲ.

ರಾಜ್ಯದಲ್ಲಿ ರೈತ ಸಂಪರ್ಕ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

4198 (4948) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಪ್ರತಿಯೊಂದು ರೈತ ಸಂಪರ್ಕ ಕೇಂದ್ರಕ್ಕೆ ಮಂಜೂರಾದ ಹುದ್ದೆಗಳು ಯಾವುವು;

ಇ) ರೈತ ಸಂಪರ್ಕ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಹುದ್ದವಾರು, ಜಿಲ್ಲಾವಾರು ವಿವರ ಒದಗಿಸುವುದು)

ಈ) ಈ ರೈತ ಸಂಪರ್ಕ ಕೇಂದ್ರಗಳಲ್ಲಿ ತೋಟಗಾರಿಕೆ, ಕೃಷಿ, ರೇಷ್ಮೆ ಮತ್ತು ಪಶುಸಂಗೋಪನೆ ವಿಸ್ತರಣಾ ಯೋಜನೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೆ;

ಉ) ಈ ಕೇಂದ್ರಗಳಿಗೆ ಭೂಮಿ, ಕೃಷಿ ಉತ್ಪನ್ನ ಮಾರುಕಟ್ಟೆ, ಸಹಕಾರ ಸಂಘಗಳು ಮತ್ತು ಕೃಷಿ ವಿಶ್ವವಿದ್ಯಾಲಯದ ಜೊತೆ ಸಂಪರ್ಕವನ್ನು ಜೋಡಿಸಲಾಗಿದೆಯೇ;

ಊ) ರಾಜ್ಯದ ಎಷ್ಟು ಕೇಂದ್ರಗಳಲ್ಲಿ ಈ ಜೋಡಣೆ ಆಗಿದೆ? (ಜಿಲ್ಲಾವಾರು ವಿವರ ಒದಗಿಸುವುದು)

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ರಾಜ್ಯದಲ್ಲಿ 745 ರೈತ ಸಂಪರ್ಕ ಕೇಂದ್ರಗಳಿವೆ.

ಆ) ಪ್ರತಿಯೊಂದು ರೈತ ಸಂಪರ್ಕ ಕೇಂದ್ರಕ್ಕೆ ಮಂಜೂರಾದ ಹುದ್ದೆಗಳು ಇಂತಿವೆ.

1. ಕೃಷಿ ಅಧಿಕಾರಿ – 1
2. ಸಹಾಯಕ ಕೃಷಿ ಅಧಿಕಾರಿ – 0 ರಿಂದ 4
3. ಕೃಷಿ ಸಹಾಯಕರು – 2 ರಿಂದ 14

ಇ) ಒಟ್ಟು 856 ಹುದ್ದೆಗಳು ಖಾಲಿ ಇವೆ. ಹುದ್ದೆವಾರು ಜಿಲ್ಲಾವಾರು ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ.

ಈ) ಹೌದು.

ಉ) ಕೃಷಿ ವಿಶ್ವವಿದ್ಯಾನಿಲಯ, ಕೃಷಿ ಉತ್ಪನ್ನ ಮಾರುಕಟ್ಟೆ, ಸಹಕಾರ ಸಂಘಗಳ ಜೊತೆಗೆ ಕ್ರಿಯಾತ್ಮಕ ಸಂಪರ್ಕ ಜೋಡಿಸಲಾಗಲಿದ್ದು, ಪ್ರಾಯೋಗಿಕವಾಗಿ ಭೂಮಿ ಕಾರ್ಯಕ್ರಮವನ್ನು ಐದು ಕೇಂದ್ರಗಳಲ್ಲಿ ಅಳವಡಿಸಲು ಯೋಜಿಸಿದೆ.

ಊ) ಕೃಷಿ ತಾಂತ್ರಿಕತೆಗಳಿಗೆ ಸಂಬಂಧಿಸಿದಂತೆ ಎಲ್ಲಾ ರೈತ ಸಂಪರ್ಕ ಕೇಂದ್ರಗಳ ಮುಖ್ಯಸ್ಥರುಗಳು ಪ್ರತಿ ಎರಡು ತಿಂಗಳಿಗೊಮ್ಮೆ ಕೃಷಿ ವಿಶ್ವವಿದ್ಯಾಲಯಗಳ ತಜ್ಞರುಗಳೊಡನೆ ಸಮಾಲೋಚಿಸಲು ಪ್ರತಿ ಜಿಲ್ಲಾ ಮಟ್ಟದಲ್ಲಿ ತಾಂತ್ರಿಕ ಸಮಾವೇಶಗಳನ್ನು ಏರ್ಪಡಿಸಲಗುತ್ತಿದೆ. ಮಾರುಕಟ್ಟೆ ಮಾಹಿತಿ ಒದಗಿಸುವ ದಿಸೆಯಲ್ಲಿ ರೈತ ಮಿತ್ರ ವೆಬ್ ಸೈಟ್‌ನ್ನು ಮಾರಾಟ ವಾಹಿನಿ ವೆಬ್ ಸೈಟ್‌ನೊಂದಿಗೆ ಸಂಪರ್ಕಿಸಲಾಗಿದೆ. ಸದರಿ ಸೌಲಭ್ಯವನ್ನು ಹಾಲಿ ಇಂಟರ್ನೆಟ್ ಸಂಪರ್ಕ ಪಡೆದಿರುವ 56 ಕೇಂದ್ರಗಳಲ್ಲಿ ಪಡೆಯಲಾಗುತ್ತಿದೆ. ಜಿಲ್ಲಾವಾರು ಇಂಟರ್ನೆಟ್ ಸೌಲಭ್ಯ ಪಡೆದ ಸ್ಥಳಗಳ ವಿವರಗಳನ್ನು ಅನುಬಂಧ –2 ರಲ್ಲಿ ನೀಡಲಾಗಿದೆ.

ಅನುಬಂಧ – 1

ರೈತ ಸಂಪರ್ಕ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳ ಜಿಲ್ಲಾವಾರು ವಿವರ

1	2	3	4	5	6	7
ಕ್ರ ಸಂ	ಜಿಲ್ಲೆ	ಹೋಬಳಿಗಳ ಸಂಖ್ಯೆ	ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳು ಕೃಷಿ ಅಧಿಕಾರಿ	ಸಹಾಯಕ ಕೃಷಿ ಅಧಿಕಾರಿ	ಕೃಷಿ ಸಹಾಯಕ
1.	ಬೆಂಗಳೂರು (ನ)	17	17	2	13	6
2.	ಬೆಂಗಳೂರು (ಗ್ರಾ)	35	35	15	9	4
3.	ಕೋಲಾರ	53	53	28	38	43
4.	ತುಮಕೂರು	50	50	19	19	0
5.	ಶಿವಮೊಗ್ಗ	40	40	20	12	0
6.	ಚಿತ್ರದುರ್ಗ	22	22	4	3	0
7.	ದಾವಣಗೆರೆ	24	24	10	4	0
8.	ಮೈಸೂರು	33	33	11	11	0
9.	ಚಾಮರಾಜನಗರ	16	16	9	8	1
10.	ಮಂಡ್ಯ	31	31	17	6	32

1	2	3	4	5	6	7
11.	ಕೊಡಗು	16	16	11	12	13
12.	ಹಾಸನ	38	37	24	29	0
13.	ಚಿಕ್ಕಮಗಳೂರು	32	32	20	16	4
14.	ದಕ್ಷಿಣ ಕನ್ನಡ	17	17	13	7	0
15.	ಉಡುಪಿ	9	9	5	0	0
16.	ಧಾರವಾಡ	14	14	3	0	0
17.	ಗದಗ	11	11	4	0	0
18.	ಹಾವೇರಿ	19	19	12	0	6
19.	ಉತ್ತರ ಕನ್ನಡ	35	35	25	13	0
20.	ಬೆಳಗಾವಿ	35	35	09	3	31
21.	ಬಿಜಾಪುರ	18	18	0	0	0
22.	ಬಾಗಲಕೋಟೆ	18	18	0	0	21
23.	ರಾಯಚೂರು	37	37	32	29	19
24.	ಕೊಪ್ಪಳ	20	20	10	7	0
25.	ಬಳ್ಳಾರಿ	27	27	14	15	12
26.	ಗುಲ್ಬರ್ಗಾ	48	48	35	23	0
27.	ಬೀದರ್	30	30	20	7	8
	ಒಟ್ಟು	745	744	372	284	200

ಅನುಬಂಧ -2

ದೂರವಾಣಿ ಮತ್ತು ಇಂಟರ್‌ನೆಟ್ ಸೌಲಭ್ಯ ಹೊಂದಿರುವ ರೈತ ಸಂಪರ್ಕ ಕೇಂದ್ರಗಳ ಜಿಲ್ಲಾವಾರು ವಿವರ

1	2	3	4	5
ಕ್ರ ಸಂ.	ಜಿಲ್ಲೆ	ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ	ದೂರವಾಣಿ ಹೊಂದಿರುವ ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ	ಇಂಟರ್ನೆಟ್ ಸೌಲಭ್ಯ ಹೊಂದಿರುವ ಕೇಂದ್ರಗಳ ಸಂಖ್ಯೆ
1.	ಬೆಂಗಳೂರು (ನ)	17	1	0
2.	ಬೆಂಗಳೂರು (ಗ್ರಾ)	35	15	1
3.	ಕೋಲಾರ	53	28	0

1	2	3	4	5
4.	ತುಮಕೂರು	50	17	5
5.	ಶಿವಮೊಗ್ಗ	40	24	4
6.	ಚಿತ್ರದುರ್ಗ	22	21	0
7.	ದಾವಣಗೆರೆ	24	0	2
8.	ಮೈಸೂರು	33	15	7
9.	ಚಾಮರಾಜನಗರ	16	12	4
10.	ಮಂಡ್ಯ	31	21	1
11.	ಕೊಡಗು	16	0	4
12.	ಹಾಸನ	38	38	5
13.	ಚಿಕ್ಕಮಗಳೂರು	32	22	0
14.	ದಕ್ಷಿಣ ಕನ್ನಡ	17	8	5
15.	ಉಡುಪಿ	9	5	3
16.	ಧಾರವಾಡ	14	3	0
17.	ಗದಗ	11	8	1
18.	ಹಾವೇರಿ	19	13	0
19.	ಉತ್ತರ ಕನ್ನಡ	35	33	0
20.	ಬೆಳಗಾವಿ	35	18	6
21.	ಬಿಜಾಪುರ	18	1	0
22.	ಬಾಗಲಕೋಟೆ	18	11	0
23.	ರಾಯಚೂರು	37	9	0
24.	ಕೊಪ್ಪಳ	20	12	1
25.	ಬಳ್ಳಾರಿ	27	6	0
26.	ಗುಲ್ಬರ್ಗಾ	48	4	5
27.	ಬೀದರ್	30	0	2
	ಒಟ್ಟು	745	345	56

ರಾಜ್ಯದಲ್ಲಿ ತೋಟಗಾರಿಕಾ ಉತ್ಪನ್ನಗಳ ರಫ್ತು ವಲಯಗಳ ಬಗ್ಗೆ

4199 (4873) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕಾ ಉತ್ಪನ್ನಗಳ ರಫ್ತು ವಲಯಗಳನ್ನು ಗುರುತಿಸಿ ರೂಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಇದರ ವಿವರಗಳೇನು?

ಇ) ರಫ್ತು ವಲಯದಲ್ಲಿನ ತೋಟಗಾರಿಕಾ ಉತ್ಪನ್ನಗಳ ಕೃಷಿ ಮಾಡುವ ರೈತರಿಗೆ ದೊರೆಯುವ ಸೌಲಭ್ಯಗಳೇನು? ವಿವರ ಒದಗಿಸುವುದು.

ಶ್ರೀ ಎಂ.ಶಿವಣ್ಣ (ತೋಟಗಾರಿಕಾ ಸಚಿವರು)

ಅ) ಹೌದು.

ಮಿಡಿಸೌತೆಕಾಯಿ (ಗರ್ಕಿನ್ಸ್) ಬೆಂಗಳೂರು ಗುಲಾಬಿ ಈರುಳ್ಳಿ (ರೋಸ್ ಅನಿಯನ್) ಮತ್ತು ಪುಷ್ಪಾಭಿವೃದ್ಧಿಗಾಗಿ ರಫ್ತು ವಲಯಗಳನ್ನು ಗುರುತಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ವಿವರಗಳು ಕೆಳಕಂಡಂತ್ತಿರುತ್ತದೆ:-

ಮಿಡಿಸೌತೆ – ರಫ್ತುವಲಯದಲ್ಲಿ ಒಳಗೊಂಡ ಜಿಲ್ಲೆಗಳು ಯಾವುವೆಂದರೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಹಾಸನ, ತುಮಕೂರು, ಚಿತ್ರದುರ್ಗ, ಧಾರವಾಡ ಹಾಗೂ ಬಾಗಲಕೋಟೆ

ಬೆಂಗಳೂರು ಗುಲಾಬಿ ಈರುಳ್ಳಿ – ರಫ್ತುವಲಯದಲ್ಲಿ ಒಳಗೊಂಡ ಜಿಲ್ಲೆಗಳು ಯಾವುವೆಂದರೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಗೂ ಕೋಲಾರ.

ಪುಷ್ಪಾಭಿವೃದ್ಧಿ – ರಫ್ತುವಲಯದಲ್ಲಿ ಒಳಗೊಂಡ ಜಿಲ್ಲೆಗಳು ಯಾವುವೆಂದರೆ, ಬೆಂಗಳೂರು ನಗರ ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಕೊಡಗು, ಬೆಳಗಾವಿ ಹಾಗೂ ಚಿತ್ರದುರ್ಗ.

ಈ ವಲಯಗಳಲ್ಲಿ ಆಯಾ ಬೆಳೆಗಳನ್ನು ರಫ್ತು ಗುಣಮಟ್ಟಕ್ಕೆ ಅನುಸಾರವಾಗಿ ಬೆಳೆಸಲು ರೈತರಿಗೆ ತರಭೇತಿ ನೀಡಲಾಗುತ್ತಿದೆ.

ಉತ್ಪಾದನಾ ಸಾಮಗ್ರಿಗಳನ್ನು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಬೆಳೆಗಾರರು ಮತ್ತು ರಫ್ತುದಾರರ ನಡುವೆ ಸಮನ್ವಯ ಸಾಧಿಸಿ, ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಮೇಲೆ ತಿಳಿಸಿರುವ ರಫ್ತು ವಲಯಗಳ ಜೊತೆಗೆ ಸುಗಂಧ ಮತ್ತು ಔಷಧಿ ಬೆಳೆ, ವೆನಿಲ್ಲಾ ಬೆಳೆ, ದ್ರಾಕ್ಷಿ, ಮಾವು, ದಾಳಿಂಬೆ ಮತ್ತು ನಿಂಬೆ ಬೆಳೆಗಳ ರಫ್ತು ವಲಯ ಗುರುತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ರಫ್ತು ವಲಯದಲ್ಲಿ ಗುಣಮಟ್ಟದ ಉತ್ಪನ್ನಗಳನ್ನು ಬೆಳೆಸುವ ಬಗ್ಗೆ ರೈತರಿಗೆ ತಾಂತ್ರಿಕ ಮಾಹಿತಿಯನ್ನು ಮತ್ತು ತರಬೇತಿಯನ್ನು ನೀಡಲಾಗುವುದು.

2) ಕೇಂದ್ರ ರಾಜ್ಯ ಮತ್ತು ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅಗತ್ಯ ಮೂಲಭೂತಸೌಕರ್ಯಗಳನ್ನು ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದು.

3) ಕೊಯಿಲು ನಂತರದ ನಿರ್ವಹಣೆ ಮತ್ತು ಮಾರುಕಟ್ಟೆ ಮಾಹಿಯನ್ನು ರೈತರಿಗೆ ಒದಗಿಸಲಾಗುವುದು.

4) ರಫ್ತಿಗೆ ಪ್ರೋತ್ಸಾಹದಾಯಕವಾದ ನೀತಿಯನ್ನು ಅನುಸರಿಸಲಾಗುವುದು.

5) ಉತ್ಪಾದಕರು ಮತ್ತು ರಫ್ತುದಾರರ ನಡುವೆ ವ್ಯವಹಾರಿಕ ಸಂಪರ್ಕ ಏರ್ಪಡಿಸಲಾಗುವುದು.

6) ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ಪನ್ನಗಳನ್ನು ಪರಿಚಯ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅಚ್ಚುಕಟ್ಟು ಪ್ರದೇಶದಲ್ಲಿ ನೀರಿನ ಕೊರತೆ ಮತ್ತು ಕೆರೆಗಳ ಅಭಿವೃದ್ಧಿ ಕುರಿತು

4200 (4953) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲಾ ಬಯಲಿನ ಪ್ರದೇಶದಲ್ಲಿರುವ ನಾಲಾ ಕೊನೆಯ ಭಾಗದ ಅಚ್ಚುಕಟ್ಟು ಪ್ರದೇಶ ನೀರಿನ ಕೊರತೆ ಸಮಸ್ಯೆ ಅನುಭವಿಸುತ್ತಾ ಇರುವುದನ್ನು ಗಮನಿಸಲಾಗಿದೆಯೇ ಅಂತೆಯೇ, ವಿ.ಸಿ. ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯ ರೈತರಿಗೆ ಕೆರೆಯ ಉಪಯುಕ್ತತೆ ಮತ್ತು ಅವಶ್ಯಕತೆಯನ್ನು ಸರ್ಕಾರವು ಅರಿತಿದೆಯೇ;

ಆ) ಹಾಗಿದ್ದಲ್ಲಿ, ನಾಲಾ ಭಾಗದ ಕೊನೆಯ ಪ್ರದೇಶದ ಅಚ್ಚುಕಟ್ಟಿನ ನೀರಿನ ಕೊರತೆಯ ಸಮಸ್ಯೆಯನ್ನು ನಿವಾರಿಸಲು ಹಾಗೂ ಕೆರೆಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ವಿಶೇಷವಾದ ಕ್ರಮಗಳನ್ನೇನಾದರೂ ಸರ್ಕಾರವು ಆಲೋಚಿಸಿ ರೂಪಿಸಿದ್ದಲ್ಲಿ ಅದರ ವಿವರಗಳೇನು;

ಇ) ರೂಪಿಸದೇ ಇದ್ದಲ್ಲಿ ಕಾರಣಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ವಿಶ್ವೇಶ್ವರಯ್ಯ ನಾಲ ಬಯಲಿನ ಪ್ರದೇಶದಲ್ಲಿರುವ ನಾಲಾ ಕೊನೆಯ ಭಾಗದ ಅಚ್ಚುಕಟ್ಟು ಪ್ರದೇಶ ನೀರನ್ನು ಒದಗಿಸುವ ಸಲುವಾಗಿ ಈಗಾಗಲೇ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಅಚ್ಚುಕಟ್ಟು ಪ್ರದೇಸದಲ್ಲಿ ನೀರನ್ನು ಮಿತವಾಗಿ ಬಳಸುವ ಸಲುವಾಗಿ ವಿವಿಧ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ವಿ.ಸಿ. ಅಚ್ಚುಕಟ್ಟಿನ ಪ್ರದೇಶದ ವ್ಯಾಪ್ತಿಯ ಕೆರೆಗಳನ್ನು ಅಭಿವೃದ್ಧಿಪಡಿಸಿ ನೀರನ್ನು ಶೇಖರಿಸುವುದರಿಂದ ಅಂತರ್ಜಲ ಹೆಚ್ಚುತ್ತದೆ ಜೊತೆಗೆ ರೈತರಿಗೆ ಹೆಚ್ಚು ಉಪಯೋಗವಾಗುತ್ತದೆ. ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಹಂತಹಂತವಾಗಿ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಕಾವೇರಿ ಜಲಾನಯನ ಪ್ರದೇಸದ ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸುವ ಹಾಗೂ ಅಚ್ಚುಕಟ್ಟು ಪ್ರದೇಶವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸರ್ಕಾರವು ಕಾವೇರಿ ನೀರಾವರಿ ನಿಗಮವನ್ನು ಸ್ಥಾಪಿಸಿದೆ. ವಿ.ಸಿ. ನಾಲಾ ಅಚ್ಚುಕಟ್ಟು ಪ್ರದೇಶವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರಥಮವಾಗಿ ಮತ್ತು ಪ್ರಾಯೋಗಿಕವಾಗಿ ಮದ್ದೂರು ಕೆರೆ, ಸೂಳೆಕೆರೆ ಮತ್ತು ಮಂಗಳ ಕೆರೆಯಲ್ಲಿ ಹೂಳೆತ್ತಿ ಅಭಿವೃದ್ಧಿಪಡಿಸುವುದಕ್ಕಾಗಿ ಅಂದಾಜು ತಯಾರಿಸಿ ಅನುಮೋದಿಸಲಾಗಿದೆ ಮದ್ದೂರು ಕೆರೆ ಮತ್ತು ಸೂಳೆಕೆರೆಗಳಲ್ಲಿ ಕಾಮಗಾರಿಯು ಪ್ರಗತಿಯಲ್ಲಿದೆ. 2001-2 ನೇ ಸಾಲಿನಲ್ಲಿ ಬೋಳಾರೆ ಕೆರೆ ಅಭಿವೃದ್ಧಿಗಾಗಿ ರೂ 95.30 ಲಕ್ಷಗಳು ಹಗೂ ಚಂದಹಳ್ಳಿ ಕೆರೆಯ ಅಭಿವೃದ್ಧಿಗಾಗಿ ರೂ. 20.00 ಲಕ್ಷಗಳ ವೆಚ್ಚದಲ್ಲಿ ಪೂರ್ಣಗೊಳಿಸಲಗಿದೆ. 2002–03 ನೇ ಸಾಲಿನಲ್ಲಿ ಬೆಸಗರಹಳ್ಳಿ ಕೆರೆ ಅಭಿವೃದ್ಧಿಗಾಗಿ ರೂ. 44.98 ಲಕ್ಷಗಳು, ಕೊಪ್ಪ ಕೆರೆ ಅಭಿವೃದ್ಧಿಗಾಗಿ ರೂ. 14.80 ಲಕ್ಷಗಳು, ಮದ್ದೂರು ಕೆರೆ ಅಭಿವೃದ್ಧಿಗಾಗಿ ರೂ. 13.05 ಲಕ್ಷಗಳು ಮತ್ತು ನಿಲುವಾಗಿಲು ಕೆರೆ ಅಭಿವೃದ್ಧಿಗಾಗಿ ರೂ. 14.98 ಲಕ್ಷಗಳ ಅಂದಾಜಿನ ಕಮಗಾರಿಗಳು ಪ್ರಗತಿಯಲ್ಲಿವೆ. ಅಲ್ಲದೇ ಹೊಸಕೆರೆ ವಳಗೆರೆಹಳ್ಳಿಕೆರೆ ಹೋಳೆತ್ತುವ ಕಾಮಗಾರಿಗಾಗಿ ರೂ. 44.10 ಲಕ್ಷ ಮತ್ತು ಬೆಕ್ಕಾಳಲೆ ಕೆರೆಯ ಹೂಳೆತ್ತುವ ಕಾಮಗಾರಿಗಾಗಿ ರೂ.

19.95 ಲಕ್ಷಗಳ ಅಂದಾಜಿನಲ್ಲಿ ಕಾಮಗಾರಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಇವುಗಳನ್ನು ಹೊರತುಪಡಿಸಿ ವಿ.ಸಿ. ನಾಲಾ ಅಚ್ಚುಕಟ್ಟಿನಲ್ಲಿ ಬರುವ ನಾಲೆಗಳ ಮತ್ತು ಇತರೆ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಅವಶ್ಯಕತೆ ಮತ್ತು ಅಗತ್ಯತೆಯನ್ನು ಮನಗಂಡು ಅನುದಾನದ ಲಭ್ಯತೆ ಮೇರೆಗೆ ಕಾರ್ಯಕ್ರಮ ರೂಪಿಸಿ ಹಂತ ಹಂತವಾಗಿ ಕೈಗೊಳ್ಳಲಾಗುವುದು

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕಬ್ಬಿನ ಬೆಳೆಗೆ ಹನಿ ನೀರಾವರಿ ಪದ್ಧತಿಯ ಅಳವಡಿಕೆ ಕುರಿತು

4201 (4954) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ವಲಯದಲ್ಲಿ, ಯಾವ ಯಾವ ಬೆಳೆಗಳಿಗೆ "ಹನಿ ನೀರಾವರಿ" ಸೌಲಭ್ಯವನ್ನು ಬಳಸಲಾಗುತ್ತಿದೆ:

ಆ) ರಾಜ್ಯದಲ್ಲಿನ ಪ್ರಮುಖ ವಾಣಿಜ್ಯ ಬೆಳೆಯಾದ, ಕಬ್ಬಿನ ಬೆಳೆಗೆ "ಹನಿ ನೀರಾವರಿ ಪದ್ಧತಿ" ಅಳವಡಿಸಬೇಕಾದ ಅನಿವಾರ್ಯತೆಯನ್ನು ಸರ್ಕಾರವು ಮನಗಂಡಿದೆಯೇ;

ಇ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರದ ನಿಲುವೇನು;

ಈ) "ಹನಿ ನೀರಾವರಿ" ಪದ್ಧತಿಯನ್ನು ಕಬ್ಬಿನ ಬೆಳೆಯಲ್ಲಿ ಅನುಷ್ಠಾನಕ್ಕೆ ತರಲು ಸರ್ಕಾರದ ಪ್ರಯತ್ನವೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ರಾಜ್ಯದ ಕೃಷಿ ವಲಯದಲ್ಲಿ ಹನಿ ನೀರಾವರಿ ಸೌಲಭ್ಯವನ್ನು ಕಬ್ಬು ಮತ್ತು ಹತ್ತಿ ಬೆಳೆಗಳಿಗೆ ಬಳಸಲಾಗುತ್ತಿದೆ.

ಆ) ಹೌದು.

ಇ) ಸರ್ಕಾರವು ಕಬ್ಬು ಬೆಳೆಗಾರರಿಗೆ ಹನಿ ನೀರಾವರಿ ಸೌಲಭ್ಯ ಕಲ್ಪಿಸಲು ಪ್ರೋತ್ಸಾಹ ನೀಡಲು ಬದ್ಧವಾಗಿದೆ.

ಈ) 2003–04 ನೇ ಸಾಲಿನಲ್ಲಿ ಹನಿ ನೀರಾವರಿ ಯೋಜನೆಯಡಿ ರೂ. 10 ಕೋಟಿಗಳ ಕಾರ್ಯಕ್ರಮವನ್ನು ಘೋಷಿಸಿದ್ದು, ಶೇಕಡಾ 50 ರ ರಿಯಾಯಿತಿ ದರದಲ್ಲಿ ಕಬ್ಬಿನ ಬೆಳೆಗೂ ಸಹ ಹನಿ ನೀರಾವರಿ ಘಟಕಗಳ ವಿತರಣೆ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ:

ರಾಜ್ಯದಲ್ಲಿ ಕೃಷಿ ಉತ್ಪನ್ನಗಳಿಗೆ ರಫ್ತಿನ ಸೌಲಭ್ಯ ಕುರಿತು

4203 (4956) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕಾ ಬೆಳೆಯ ಕೃಷಿ ಪ್ರದೇಶದ ವಿಸ್ತೀರ್ಣವೆಷ್ಟು;

ಆ) ತೋಟಗಾರಿಕೆಯ ಕೃಷಿಯಲ್ಲಿನ ಉತ್ಪನ್ನಗಳಲ್ಲಿ ಯಾವ್ಯಾವ ಉತ್ಪನ್ನಗಳನ್ನು ರಫ್ತು ಯೋಗ್ಯವೆಂದು ಗುರುತಿಸಲಾಗಿದೆ;

ಇ) ಹಾಗೆ ಗುರುತಿಸಲಾಗಿರುವ ರಫ್ತು ಯೋಗ್ಯ ತೋಟಗಾರಿಕಾ ಕೃಷಿ ಉತ್ಪನ್ನಗಳಿಗೆ ಸರಕಾರದಿಂದ ನೀಡುತ್ತಿರುವ ಸೌಲಭ್ಯ ಮತ್ತು ದೊರಕುತ್ತಿರುವ ಪ್ರೋತ್ಸಾಹ ವಿವರಗಳೇನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಒಟ್ಟು ಪ್ರದೇಶ 15.30 ಲಕ್ಷ ಹೆಕ್ಟೇರ್‌ಗಳು.

ಆ) ಮಾವು, ವೆನಿಲ್ಲಾ, ಕಲ್ಲಂಗಡಿ, ದ್ರಾಕ್ಷಿ ದಾಳಿಂಬೆ, ಪಪ್ಪಾಯಿ, ಕದಂಬ ಹಣ್ಣು, ಗುಲಾಬಿ ಈರುಳ್ಳಿ, ಮಿಡಿ ಸೌತೇಕಾಯಿ, ಆಲೂಗೆಡ್ಡೆ, ಗೋಡಂಬಿ, ಅರಶಿನ, ಹೂಗಳು, ಅಣಬೆ ಸಂಸ್ಕರಿಸಿ ಇತರೇ ಪದಾರ್ಥಗಳು ಮತ್ತು ಸಾಂಬಾರು ಪದಾರ್ಥಗಳು ರಫ್ತು ಯೋಗ್ಯವೆಂದು ಗುರುತಿಸಲಾಗಿದೆ.

ಇ) ಸರ್ಕಾರ ನೀಡುತ್ತಿರುವ ಸೌಲಭ್ಯ ಮತ್ತು ಪ್ರೋತ್ಸಾಹದ ವಿವರಗಳು:

1. ಗುಲಾಬಿ ಈರುಳ್ಳಿ, ಗರ್ಕಿನ್ಸ್ ಮತ್ತು ಪುಷ್ಪೋದ್ಯಮಗಳಿಗೆ ರಫ್ತು ವಲಯಗಳನ್ನು ಭಾರತ ಸಕಾರದ ಸಹಯೋಗದೊಂದಿಗೆ ಸ್ಥಾಪಿಸಿದೆ. ಹಾಗೂ ಮಾವು, ದ್ರಾಕ್ಷಿ, ವೆನಿಲ್ಲಾ, ದಾಳಿಂಬೆ, ನಿಂಬೆ, ಔಷಧೀಯ ಹಾಗೂ ಸುಗಂಧದ್ರವ್ಯ ಬೆಳೆಗಳಿಗೆ ಕೃಷಿ ರಫ್ತು ವಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

2. ರಫ್ತು ಉತ್ತೇಜನ ನೀತಿ (2002–2007) ಯನ್ನು ಪ್ರಕಟಿಸಿದೆ.

3. ಕೇಂದ್ರ ಸರ್ಕಾರದ ಅಸ್ಸೈಡ್ ಯೋಜನೆಯ ಅಡಿಯಲ್ಲಿ ಹಣ ಪಡೆದು ಮೂಲಭೂತ ಸೌಕರ್ಯಗಳಾದ ಸಂಗ್ರಹಣಾ ಕೇಂದ್ರಗಳು, ವಿಂಗಡಣೆ, ವಾಷಿಂಗ್, ಪ್ಯಾಕಿಂಗ್ ಸೌಲಭ್ಯ, ಹವಾನಿಯಂತ್ರಿತ ಸಾಗಾಣಿಕೆ, ಪ್ರೀಕೂಲಿಂಗ್, ಶೀತಲಗೃಹಗಳು, ಮಧ್ಯಂತರ ಶೀತಲ ಗೃಹಗಳು, ಸಂಸ್ಕರಣ ಘಟಕಗಳು ಮತ್ತು ರಫ್ತು ಸಂಕೀರ್ಣಗಳನ್ನು ಸೃಷ್ಟಿಸಲು ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು.

4. ಪುಷ್ಪೋಧ್ಯಮದ ಅಭಿವೃದ್ಧಿಗೆ ಅಂತರ ರಾಷ್ಟ್ರೀಯ ಮಟ್ಟದ ಹರಾಜು ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ.

5. ರಾಜ್ಯದಲ್ಲಿನ ರೈತ ಸಂಪರ್ಕ ಕೇಂದ್ರಗಳಿಂದ ಮಾರುಕಟ್ಟೆ ಬಗ್ಗೆ ಮಾಹಿತಿ ಒದಗಿಸಲಾಗುತ್ತಿದೆ.

6. ಕೃಷಿ/ತೋಟಗಾರಿಕೆ ಉತ್ಪನ್ನಗಳ ರಫ್ತಿನ ಅಭಿವೃದ್ಧಿಗಾಗಿ ಕೆಪೆಕ್ ಸಂಸ್ಥೆಯನ್ನು ಸ್ಥಾಪಿಸಿದೆ. ಹೂವುಗಳ ಮಾರಾಟಕ್ಕಾಗಿ ಕೆ.ಎ.ಐ.ಸಿ. ವತಿಯಿಂದ ಹೂವು ಹರಾಜು ಕೇಂದ್ರವನ್ನು ಸ್ಥಾಪಿಸಲಾಗಿದೆ.

7. ಕೊಯ್ಲಿನ ನಂತರದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಶೀತಲ ಗೃಹಗಳು ಉಪಯೋಗಿಸುವ ವಿದ್ಯುಚ್ಛಕ್ತಿಯ ಪ್ರತಿ ಯೂನಿಟ್‌ಗೆ ರೂ. 1/– ರಂತೆ ಸಹಾಯಧನ ನೀಡಲಾಗುತ್ತಿದೆ.

8. ಕೇಂದ್ರ ಸರ್ಕಾರದ ಎನ್.ಹೆಚ್.ಬಿ., ಅಪೆಡಾ, ಸಿ.ಡಿ.ಬಿ., ಎನ್.ಸಿ.ಡಿ.ಸಿ., ಆಹಾರ ಸಂಸ್ಕರಣ ಮಂತ್ರಾಲಯ ಮತ್ತು ವಿವಿಧ ಮಂಡಳಿಗಳಿಂದ ಹಣ ಕಾಸಿನ ನೆರವನ್ನು ತೋಟಗಾರಿಕೆ ಉತ್ಪನ್ನಗಳ ಉತ್ಪಾದನೆ, ಶೇಖರಣೆ ಹಗೂ ಮಾರುಕಟ್ಟೆಗಾಗಿ ಹಣಕಾಸಿನ ನೆರವನ್ನು ನೀಡಲಾಗುತ್ತಿದೆ.

9. ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳ ವೈಜ್ಞಾನಿಕ ಸಂಸ್ಕರಣೆ, ಮಾರುಕಟ್ಟೆ ಮತ್ತು ರಫ್ತನ್ನು ಉತ್ತೇಜಿಸಲು 6 ಆಹಾರ ಮತ್ತು ಕೃಷಿ ತಂತ್ರಜ್ಞಾನ ಪಾರ್ಕುಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಧಾರವಾಡ ಮಹಾನಗರದಲ್ಲಿ ರೈತ ಸಂತೆಯನ್ನು ಪ್ರಾರಂಭಿಸುವ ಬಗ್ಗೆ

4208 (4930) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಮಹಾನಗರದಲ್ಲಿ ರೈತ ಸಂತೆ ಪ್ರಾರಂಭಿಸುವ ಯೋಜನೆ ಸರ್ಕಾರಕ್ಕಿದೆಯೇ; ಹಾಗಾದರೆ ಸಂತೆ ನಡೆಸಲು ಅವಶ್ಯಕವಾದ ಮೂಲಭೂತ ಸೌಕರ್ಯಗಳೇನು;

ಆ) ಧಾರವಾಡ ತಾಲ್ಲೂಕಿನಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವ ರೈತರ ಮಾಹಿತಿ ಇದೆಯೇ; ಇದ್ದರೆ, ಮಾಹಿತಿ ಯಾವ ರೀತಿ ಪಡೆಯಲಾಗಿದೆ;

ಇ) ಧಾರವಾಡ ನಗರದ ಮಧ್ಯವರ್ತಿ ಮಾರುಕಟ್ಟೆಯಲ್ಲಿ ಸಂತೆ ನಡೆಸಲು ನಗರ ವಾಹನ ನಿಲ್ದಾಣ ಪಡೆದರೆ ಸೂಕ್ತ ಆಗಬಹುದೇ; ಅಥವಾ ಬೇರೆ ಯವ ಸ್ಥಳ ಪಡೆಯಲಾಗುವುದು;

ಈ) ನಗರದ ಮಧ್ಯದಲ್ಲಿ ಸಂಪರ್ಕ ಸ್ಥಳಗಳಲ್ಲಿ, ಸರ್ಕಾರದ ನಿವೇಶನಗಳು ಇರುವುದನ್ನು ಗುರುತಿಸಿ ರೈತ ಸಂತೆ ಪ್ರಾರಂಬಿಸಲಾಗುವುದೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು, ರೈತರ ಸಂತೆಯನ್ನು ಸ್ಥಾಪಿಸುವ ಬಗ್ಗೆ ಸಮೀಕ್ಷೆ ವರದಿ ನೀಡಲು ಧಾರವಾಡ ಕೃಷಿ ವಿಶ್ವವಿದ್ಯಾಲಯ ಇವರನ್ನು ಕೋರಲಾಗಿದೆ. ಸಮೀಕ್ಷೆ ವರದಿ ಪರಿಶೀಲಿಸಿ ರೈತರ ಸಂತೆ ಸ್ಥಾಪನೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಧಾರವಾಡ ಕೃಷಿ ವಿಶ್ವವಿದ್ಯಾಲಯದ ವರದಿಯಲ್ಲಿ ಈ ಮಾಹಿತಿಯನ್ನು ಪಡೆಯಲಾಗುವುದು.

ಇ) ಧಾರವಾಡ ಕೃಷಿ ವಿಶ್ವವಿದ್ಯಾಲಯದ ವರದಿಯನ್ನು ಆದರಿಸಿ ನಿರ್ಧಾರ ಕೈಗೊಳ್ಳಲಾಗುವುದು.

ಈ) ಧಾರವಾಡ ಕೃಷಿ ವಿಶ್ವವಿದ್ಯಾಲಯದ ವರದಿಯನ್ನು ಆದರಿಸಿ ನಿರ್ಧಾರ ಕೈಗೊಳ್ಳಲಾಗುವುದು.

ಕೂಡಲ ಸಂಗಮದ ಜಲಾನಯನ ಪ್ರದೇಶದ ಬಸವಸಾಗರದಲ್ಲಿ ಮೊಸಳೆಗಳ ಹಾವಳಿ

4209 (4839) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ)ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೂಡಲಸಂಗಮದ ಜಲಾನಯನ ಪ್ರದೇಶ ಬಸವಸಾಗರವೆಂದು ನಾಮಕರಣವಾದ ಮೇಲೆ ಆ ಪ್ರಕಾರ ದಾಖಲೆಗಳಲ್ಲಿ ಎಂದು ನಮೂದಿಸಲಾಗಿದೆ; ಹಾಗಿದ್ದಲ್ಲಿ ಅದರ ಸುತ್ತಲೂ ನಾಮಫಲಕಗಳನ್ನು ಯಾಕೆ ನಿರ್ಮಿಸಿರುವುದಿಲ್ಲ?

ಆ)ಬಸವಸಾಗರದ ಜಲಾನಯನ ಪ್ರದೇಶದಲ್ಲಿ ಮೊಸಳೆಗಳು ಇರುವುದು ನಿಜವೇ; ಅದರಲ್ಲಿ ಈವರೆಗೆ ಎಷ್ಟು ಜನರ ಜೀವ ಆಹುತಿಯಗಿದೆ; ಆಹುತಿಯಾದ ಸಂಖ್ಯೆ ವಿವರ ನೀಡುವುದು;

ಇ) ಕೂಡಲಸಂಗಮ ಈಗ ಅಂತರಾಷ್ಟ್ರೀಯ ಪ್ರವಾಸಿ ತಾಣವಾಗಿದೆ ಪವಿತ್ರವಾದ ಬಸವಸಾಗರ ನೀರಿನಲ್ಲಿ ಸ್ನಾನ ಮಾಡಲು ನೀರಿನ ಸುತ್ತಲೂ ಮೆಟ್ಟಿಲುಗಳ ಕಟ್ಟೆಗಳನ್ನು ನಿರ್ಮಿಸುವುದು ಅವಶ್ಯಕವಲ್ಲವೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) 1982–83 ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಜಲಾಶಯವನ್ನು "ಬಸವ ಸಾಗರ" ಎಂದು ನಾಮಕರಣ ಮಾಡಲಾಗಿದ್ದು, ಈ ಜಲಾಶಯದ ಮೇಲೆ ಮತ್ತು ಜಲಾಶಯಕ್ಕೆ ಬರುವ ಕೂಡು ರಸ್ತೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ನಾಮಫಲಕಗಳನ್ನು ನಿರ್ಮಿಸಲಾಗಿದೆ.

"ಬಸವ ಸಾಗರ" ಕ್ಷೇತ್ರದ ಉದ್ದ 60 ಕಿ.ಮೀ.ಅಗಲ 4 ರಿಂದ 5 ಕಿ.ಮೀ ಇರುವುದರಿಂದ ಇಷ್ಟು ದೊಡ್ಡ ಕ್ಷೇತ್ರದ ಸುತ್ತಲು ನಾಮಫಲಕಗಳನ್ನು ನಿರ್ಮಿಸಲು ಕಷ್ಟವಾಗಿರುತ್ತದೆ. ಆದರೆ 4 ರಿಂದ 5 ಸ್ಥಳಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ನಾಮಫಲಕಗಳನ್ನು ಅಳವಡಿಸಲಾಗಿದೆ.

ಆ) ಬಸವಸಾಗರದ ಮೊಸಳೆಗಳು ಇರುವ ಸಂಗತಿ ನಿಜ. ಪ್ರತಿ ವರ್ಷ 4 ರಿಂದ 5 ಪ್ರಕರಣಗಳಲ್ಲಿ ಜೀವ ಆಹುತಿಗೆ ಸಂಬಂಧಿಸಿದಂತೆ ದಾಖಲಾಗಿರುತ್ತವೆ. ಆದರೆ ಅವೆಲ್ಲ ಮೊಸಳೆಯಿಂದ ಆಹುತಿಯಾಗಿರುವುದೆಂದು ನಿಶ್ಚಯಿಸುವುದು ಕಷ್ಟ ಸಾಧ್ಯ.

ಇ) ಪವಿತ್ರವಾದ ಬಸವ ಸಾಗರದ ನೀರಿನಲ್ಲಿ ಸ್ನಾನ ಮಾಡಲು ಸುತ್ತಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ.

ಮಾರುಕಟ್ಟೆಗಳಿಗೆ ಬರುತ್ತಿರುವ ಕೃಷಿ ಉತ್ಪನ್ನಗಳ ಪ್ರಮಾಣದ ಬಗ್ಗೆ

4210 (4924) : ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾರುಕಟ್ಟೆಯ ನಿರ್ಮಾಣದ ಮುಖ್ಯ ಉದ್ದೇಶ ಏನು;

ಆ) ರಾಜ್ಯದ ಮಾರುಕಟ್ಟೆಗಳ ಜಿಲ್ಲಾವಾರು ವಿವರ ನೀಡುವುದು; ಪ್ರತಿ ಮಾರುಕಟ್ಟೆಗಳಲ್ಲಿ ರೈತರ ಕೃಷಿ ಮತ್ತು ತೋಟಗಾರಿಕಾ ಪ್ರಮುಖವಾದ ಬೆಳೆಗಳು ಆವಕ ಆಗುತ್ತಿರುವ ಪ್ರಮಾಣದ ವಿವರ ನೀಡುವುದು;

ಇ) ಪ್ರತಿ ಮಾರುಕಟ್ಟೆಗಳಿಗೆ ಬರುತ್ತಿರುವ ಸುತ್ತಲಿನ ಪ್ರದೇಶದ ಹುಟ್ಟುವಳಿಗಳ ಪ್ರಮಾಣ ಎಷ್ಟು; ಪೂರ್ಣ ಪ್ರಮಾಣದ ಹುಟ್ಟುವಳಿ ಮಾರುಕಟ್ಟೆಗೆ ಬರುವಂತೆ ಯಾವ ಕ್ರಮ ಸರ್ಕಾರ ತೆಗೆದುಕೊಳ್ಳಲಬೇಕಾಗಿದೆ?

ಶ್ರೀ ಬಿ.ಎಸ್. ಪಾಟೀಲ (ಸಾಸನೂರು) (ಕೃಷಿ ಮರುಕಟ್ಟೆ ಸಚಿವರು)

ಅ) ರೈತರು ಬೆಳೆದ ಕೃಷಿ ಉತ್ಪನ್ನಗಳ ಮಾರಾಟಕ್ಕಾಗಿ ಸೌಲಭ್ಯಗಳನ್ನು ಒದಗಿಸಿ ಸ್ಪರ್ಧಾತ್ಮಕ ಧಾರಣೆ ದೊರೆಯುವಂತೆ ಮಾಡುವುದು ಹಾಗೂ ವ್ಯವಹಾರ ನಿಯಂತ್ರಣವು ಮಾರುಕಟ್ಟೆಯ ನಿರ್ಮಾಣದ ಮುಖ್ಯ ಉದ್ದೇಶವಾಗಿರುತ್ತದೆ.

ಆ) ವಿವರ ಅನುಬಂಧ - 1 ಮತ್ತು 2 ರಲ್ಲಿ ನೀಡಿದೆ.

ಇ) ರೈತರು ತಮ್ಮ ಉತ್ಪನ್ನಗಳನ್ನು ಮಾರಾಟಕ್ಕಾಗಿ ಯಾವುದೇ ಮಾರುಕಟ್ಟೆಗೆ ಕೊಂಡೊಯ್ಯಲು ಸ್ವತಂತ್ರರಿದ್ದು, ಯವುದೇ ನಿರ್ಭಂದವಿರುವುದಿಲ್ಲ. ಸಾಮಾನ್ಯವಾಗಿ ಮಾರುಕಟ್ಟೆ ಕ್ಷೇತ್ರದಲ್ಲಿ ಬೆಳೆಯುವ ಹುಟ್ಟುವಳಿಗಳು ಮಾರಾಟಕ್ಕಾಗಿ ಹತ್ತಿರದ ಮಾರುಕಟ್ಟೆಗೆ ಅವಕಾಶವಾಗುತ್ತವೆ. ಉಳಿದಂತೆ ಬೇಡಿಕೆ ಪೂರೈಕೆ, ಉತ್ತಮ ಧಾರಣೆ ಅಂಶ ಆಧರಿಸಿ ದೂರದ ಮಾರುಕಟ್ಟೆಗಳಿಗೂ ಸಹ ರೈತರು ಉತ್ಪನ್ನಗಳನ್ನು ಕೊಂಡೊಯ್ಯುತ್ತಾರೆ.

ರಾಜ್ಯದಲ್ಲಿ ಈಗಾಗಲೇ 144 ಕೃಷಿ ಉತ್ಪನ್ನ ಮರುಕಟ್ಟೆ ಸಮಿಗಳನ್ನು ಸ್ಥಾಪಿಸಿದ್ದು, ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಜರುಗಿಸಲಾಗಿದೆ. ನೇರ ಮಾರಾಟ ವ್ಯಸ್ಥೆಯ ರೈತರ ಸಂತೆಗಳನ್ನು ರಾಜ್ಯದಲ್ಲಿನ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸುವ ಉದ್ದೇಶ ಹೊಂದಿದ್ದು, ಈ ಬಗ್ಗೆ ಸಮೀಕ್ಷಾ ಕಾರ್ಯ ನಡೆಸಲಾಗುತ್ತಿದೆ.

ಗ್ರಾಮೀಣ ಸಂತೆಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಿದ್ದು, ನಬಾರ್ಡ್ ಸಂಸ್ಥೆ ನೆರವಿನಿಂದ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು.

ಈ ಮೇಲಿನ ಕಾರ್ಯಗಳು ಪೂರ್ಣ ಮಟ್ಟದಲ್ಲಿ ಮಾರಾಟವಾಗಲು ಸಾಧ್ಯವಾಗುತ್ತದೆ.

ಅನುಬಂಧ – 1

ರಾಜ್ಯದಲ್ಲಿನ ಮಾರುಕಟ್ಟೆ ಸಮಿತಿಗ ವಿವರ

ಕ್ರಮ ಸಂಖ್ಯೆ	ಜಿಲ್ಲೆ ಮತ್ತು ಮಾರುಕಟ್ಟೆ ಸಮಿತಿಯ ಜನರು
	ಬೆಂಗಳೂರು ವಿಭಾಗ
	ಬೆಂಗಳೂರು ನಗರ :
1.	ಬೆಂಗಳೂರು
2.	ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಉಮಾಸ ಬೆಂಗಳೂರು
	ಬೆಂಗಳೂರು ಗ್ರಾಮಾಂತರ
3.	ಚನ್ನಪಟ್ಟಣ
4.	ರಾಮನಗರ
5.	ಕನಕಪುರ
6.	ದೊಡ್ಡಬಳ್ಳಾಪುರ
	ಚಿತ್ರದುರ್ಗ ಜಿಲ್ಲೆ:
7.	ಚಿತ್ರದುರ್ಗ
8.	ಚಳ್ಳಕೆರೆ
9.	ಹಿರಿಯೂರು
10.	ಹೊಸದುರ್ಗ
	ದಾವಣಗೆರೆ ಜಿಲ್ಲೆ ;
11.	ದಾವಣಗೆರೆ
12.	ಜಗಳೂರು
13.	ಹರಿಹರ
14.	ಹರಪನಹಳ್ಳಿ
15.	ಹೊನ್ನಾಳಿ
16.	ಚೆನ್ನಗಿರಿ
	ಕೋಲಾರ ಜಿಲ್ಲೆ :
17.	ಕೋಲಾರ

18. ಮಾಲೂರು
19. ಚಿಕ್ಕಬಳ್ಳಾಪುರ
20. ಚಿಂತಾಮಣಿ
21. ಬಂಗಾರಪೇಟೆ
22. ಗೌರಿಬಿದನೂರು
23. ಮುಳಬಾಗಿಲು
24. ಶ್ರೀನಿವಾಸಪುರ

ಶಿವಮೊಗ್ಗ ಜಿಲ್ಲೆ

25. ಶಿವಮೊಗ್ಗ
26. ಸಾಗರ
27. ಶಿಕಾರಿಪುರ
28. ಭದ್ರಾವತಿ

ತುಮಕೂರು ಜಿಲ್ಲೆ

29. ತುಮಕೂರು
30. ಗುಬ್ಬಿ
31. ಹುಳಿಯಾರು
32. ಕುಣಿಗಲ್
33. ಮಧುಗಿರಿ
34. ಪಾವಗಡ
35. ಶಿರಾ
36 ತುರುವೇಕೆರೆ
37. ತಿಪಟೂರು

ಮೈಸೂರು ವಿಭಾಗ

ಮೈಸೂರು ಜಿಲ್ಲೆ

1. ಮೈಸೂರು
2. ಕೃಷ್ಣರಾಜನಗರ
3. ಹುಣಸೂರು
4. ಪಿರಿಯಾಪಟ್ಟಣ
5. ಟಿ. ನರಸೀಪುರ

6. ನಂಜನಗೂಡು
7. ಸಂತೆಸರಗೂರು

ಚಾಮರಾಜನಗರ ಜಿಲ್ಲೆ

8. ಚಾಮರಾಜನಗರ
9. ಗುಂಡ್ಲುಪೇಟೆ
10. ಕೊಳ್ಳೇಗಾಲ

ದಕ್ಷಿಣ ಕನ್ನಡ ಜಿಲ್ಲೆ :

11. ಮಂಗಳೂರು
12. ಭಂಟ್ವಾಳ
13. ಪುತ್ತೂರು
14. ಸುಳ್ಯ
15. ಬೆಳ್ತಂಗಡಿ

ಉಡುಪಿ ಜಿಲ್ಲೆ :

16. ಉಡುಪಿ
17 ಕುಂದಪುರ
18. ಕಾರ್ಕಳ

ಕೊಡಗು ಜಿಲ್ಲೆ

19. ಮಡಿಕೇರಿ
20. ಸೋಮವಾರ ಪೇಟೆ (ಕೇಂದ್ರ ಸ್ಥಾನ)
21. ಗೋಣಿಕೊಪ್ಪಲ್

ಚಿಕ್ಕಮಗಳೂರು ಜಿಲ್ಲೆ

22. ಚಿಕ್ಕಮಗಳೂರು ಜಿಲ್ಲೆ
23. ಕಡೂರು
24. ತರೀಕೆರೆ
25. ಮೂಡಿಗೆರೆ
26. ಕೊಪ್ಪ
27. ಶೃಂಗೇರಿ

ಹಾಸನ ಜಿಲ್ಲೆ

28. ಹಾಸನ

29. ಬೇಲೂರು

30. ಅರಸೀಕೆರೆ

31. ಹೊಳೆನರಸೀಪುರ

32. ಚನ್ನರಾಯಪಟ್ಟಣ

33. ಸಕಲೇಶಪುರ

ಮಂಡ್ಯ ಜಿಲ್ಲೆ :

34. ಮಂಡ್ಯ

35. ಮದ್ದೂರು

36. ಕೆ.ಆರ್. ಪೇಟೆ

37. ನಾಗಮಂಗಲ

38. ಪಾಂಡವಪುರ

ಬೆಳಗಾಂ ವಿಭಾಗ

ಬೆಳಗಾವಿ ಜಿಲ್ಲೆ :

1. ಬೆಳಗಾವಿ

2. ಬೈಲಹೊಂಗಲ

3. ಅಥಣಿ

4. ಗೋಕಾಕ್

5. ಕುಡಚಿ

6. ನಂದಗಡ

7. ನಿಪ್ಪಾಣಿ

8. ರಾಮದುರ್ಗ

9. ಸೌಂದತ್ತಿ

10. ಸಂಕೇಶ್ವರ

ಬಿಜಾಪುರ ಜಿಲ್ಲೆ :

11. ಬಿಜಾಪುರ

12. ಸಿಂಧಗಿ

13. ತಾಳಿಕೋಟೆ

ಬಾಗಲಕೋಟೆ ಜಿಲ್ಲೆ :

14. ಬಾಗಲಕೋಟೆ

15. ಬಾದಾಮಿ
16. ಹುನಗುಂದ
17. ಜಮಖಂಡಿ
18. ಮಹಾಲಿಂಗಪುರ

ಧಾರವಾಡ ಜಿಲ್ಲೆ :

19. ಧಾರವಾಡ
20. ಅಣ್ಣಿಗೇರಿ
21. ಹುಬ್ಬಳ್ಳಿ
22. ಕುಂದಗೋಳ
23. ಕಲಘಟಗಿ
24. ಶಿಗ್ಗಾಂವ್

ಗದಗ್ ಜಿಲ್ಲೆ :

25. ಗದಗ್
26. ಮುಂಡರಗಿ
27. ನರಗುಂದ
28. ರೋಣ (ಕೇಂದ್ರ ಸ್ಥಾನ ಹೊಳೆ ಆಲೂರು)
29. ಲಕ್ಷ್ಮೀಶ್ವರ

ಹಾವೇರಿ ಜಿಲ್ಲೆ :

30. ಹಾವೇರಿ
31. ಹಿರೇಕೆರೂರು
32. ರಾಣಿಬೆನ್ನೂರು
33. ಬ್ಯಾಡಗಿ
34. ಸವಣೂರು
35. ಹಾನಗಲ್

ಉತ್ತರ ಕನ್ನಡ ಜಿಲ್ಲೆ

36. ಹಳಿಯಾಳ
37. ಕುಮಟಾ
38. ಹೊನ್ನಾವರ
39. ಸಿದ್ದಾಪುರ

40. ಯಲ್ಲಾಪುರ
41. ಶಿರಸಿ
42. ಮುಂಡಗೋಡ
43. ಕಾರಾವಾರ

ಗುಲ್ಬರ್ಗಾ ವಿಭಾಗ

ಗುಲ್ಬರ್ಗಾ ಜಿಲ್ಲೆ :

1. ಗುಲ್ಬರ್ಗಾ
2. ಚಿತ್ತಾಪುರ
3. ಶಹಪುರ
4. ಶೋರಾಪುರ
5. ಸೇಡಂ
6. ಯಾದಗಿರಿ
7. ಚಿಂಚೋಳಿ

ಬಳ್ಳಾರಿ ಜಿಲ್ಲೆ :

8. ಬಳ್ಳಾರಿ
9. ಕೊಟ್ಟೂರು
10. ಹೊಸಪೇಟೆ
11. ಹೆಚ್.ಬಿ.ಹಳ್ಳಿ
12. ಹಡಗಲಿ
13. ಸಿರಗುಪ್ಪ

ಬೀದರ್ ಜಿಲ್ಲೆ :

14. ಬೀದರ್
15. ಹುಮ್ನಾಬಾದ್
16. ಬಸವಕಲ್ಯಾಣ
17. ಭಾಲ್ಕಿ
18. ಔರಾದ್

ರಾಯಚೂರು ಜಿಲ್ಲೆ :

19. ರಾಯಚೂರು
20. ಲಿಂಗಸುಗೂರು
21. ಮಾನ್ವಿ
22. ಸಿಂಧನೂರು

23. ಕೊಪ್ಪಳ
24. ಗಂಗಾವತಿ
25. ಯಲ್ಬುರ್ಗಾ (ಕೇಂದ್ರಸ್ಥಾನ ಕುಕನೂರು)
26. ಕುಷ್ಟಗಿ

ಸಂಕ್ಷಿಪ್ತ

ಕ್ರಮ	ವಿಭಾಗ	ಮುಖ್ಯ ಮಾರುಕಟ್ಟೆಗಳು
1.	ಬೆಂಗಳೂರು	27
2.	ಮೈಸೂರು	38
3.	ಬೆಳಗಾವಿ	43
4.	ಗುಲ್ಬರ್ಗಾ	26
	ಒಟ್ಟು	**144**

ಅನುಬಂಧ – 2

2001-2002ನೇ ಸಾಲಿನಲ್ಲಿ ರಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಆವಕವಾದ ಪ್ರಮುಖ ಕೃಷಿ ಮತ್ತು ತೋಟದ ಬೆಳೆಗಳ ಆವಕ ಮತ್ತು ಮೌಲ್ಯದ ವಿವರ

ಕ್ರ. ಸಂ	ಮಾರುಕಟ್ಟೆ ಸಮಿತಿ	ಆವಕ	ಮೌಲ್ಯ
	1. ಭತ್ತ :		
	ಬೆಂಗಳೂರು ವಿಭಾಗ		
1.	ಬೆಂಗಳೂರು	3781	24.61
	ಜಿಲ್ಲಾ ಮೊತ್ತ	**3781**	**24.61**
2.	ಚನ್ನಪಟ್ಟಣ	19581	120.82
3.	ದೊಡ್ಡಬಳ್ಳಾಪುರ	3369	54.39
4.	ಕನಕಪುರ	2194	14.42
	ಜಿಲ್ಲಾ ಮೊತ್ತ	**31144**	**189.63**
5.	ಚಳ್ಳಕೆರೆ	212545	1040.17
6.	ಹಿರಿಯೂರು	5554	26.76
7.	ಹೊಸದುರ್ಗ	3083	14.05
	ಜಿಲ್ಲಾ ಮೊತ್ತ	**221182**	**1080.98**
8.	ದಾವಣಗೆರೆ	1086064	6570.23
9.	ಹರಿಹರ	35297	238.25
10.	ಚನ್ನಗಿರಿ	73301	440.04
11.	ಹೊನ್ನಾಳಿ	172892	778.02

1	2	3	4
12.	ಹರಪನಹಳ್ಳಿ	1418	21.68
	ಜಿಲ್ಲಾ ಮೊತ್ತ	**1368972**	**8048.22**
13.	ಕೋಲಾರ	2201	11.32
14.	ಬಂಗಾರಪೇಟೆ	10708	53.54
15.	ಚಿಂತಾಮಣಿ	4964	27.30
16.	ಗೌರಿಬಿದನೂರು	2490	13.81
17.	ಚಿಕ್ಕಬಳ್ಳಾಪುರ	10413	55.32
18.	ಮುಳಬಾಗಿಲು	5348	26.40
19.	ಮಾಲೂರು	60	0.30
20.	ಶ್ರೀನಿವಾಸಪುರ	2950	14.75
	ಜಿಲ್ಲಾ ಮೊತ್ತ	39134	202.74
21.	ತುಮಕೂರು	67708	406.85
22.	ತುರುವೇಕೆರೆ	7276	32.74
23.	ಪಾವಗಡ	3963	19.03
24.	ಗುಬ್ಬಿ	31934	154.88
25.	ಹುಳಿಯಾರು	18755	78.38
26.	ಮಧುಗಿರಿ	81293	405.63
27.	ಸಿರಾ	25852	116.33
28.	ಕುಣಿಗಲ್	41514	228.33
	ಜಿಲ್ಲಾ ಮೊತ್ತ	**278295**	**1442.17**
29.	ಶಿವಮೊಗ್ಗ	270405	1471.94
30.	ಸಾಗರ	237499	1398.15
31.	ಶಿಕಾರಿಪುರ	172692	901.38
32.	ಭದ್ರಾವತಿ	485217	2557.09
	ಜಿಲ್ಲಾ ಮೊತ್ತ	**1165813**	**6328.56**
	ವಿಭಾಗದ ಮೊತ್ತ	**3108321**	**17316.91**
	ಮೈಸೂರು ವಿಭಾಗ		
33.	ಮೈಸೂರು	23448	1404.89
34.	ಕೃಷ್ಣರಾಜನಗರ	230628	1156.70
35.	ನಂಜನಗೂಡು	189194	1030.34
36.	ಹುಣಸೂರು	24165	126.37

1	2	3	4
37.	ಪಿರಿಯಾಪಟ್ಟಣ	645	3.14
38.	ಟಿ. ನರಸೀಪುರ	863176	4745.95
39.	ಸಂತೆಸರಗೂರು	72670	318.11
40.	ಚಾಮರಾಜನಗರ	33731	171.54
41.	ಗುಂಡ್ಲುಪೇಟೆ	8545	43.00
42.	ಕೊಳ್ಳೇಗಾಲ	262850	1363.17
	ಜಿಲ್ಲಾ ಮೊತ್ತ	**305126**	**1577.71**
43.	ಮಂಡ್ಯ	92449	479.96
44.	ಕೃಷ್ಣರಾಜಪೇಟೆ	52753	262.15
45.	ಮದ್ದೂರು	155302	842.23
46.	ನಾಗಮಂಗಲ	78954	404.56
	ಜಿಲ್ಲಾ ಮೊತ್ತ	**379458**	**1988.90**
47.	ಹಾಸನ	72581	363.83
48.	ಅರಸೀಕೆರೆ	428	1.93
49.	ಚನ್ನರಾಯಪಟ್ಟಣ	16687	70.82
50.	ಹೊಳೆನರಸೀಪುರ	23399	106.92
51.	ಸಕಲೇಶಪುರ	87947	411.57
52.	ಬೇಲೂರು	90067	379.28
	ಜಿಲ್ಲಾ ಮೊತ್ತ	**291109**	**1333.35**
53.	ಚಿಕ್ಕಮಗಳೂರು	77224	419.28
54.	ಕಡೂರು	4725	22.61
55.	ತರೀಕೆರೆ	204105	1020.53
56.	ಮೂಡಿಗೆರೆ	46362	256.91
57.	ಕೊಪ್ಪ	22442	117.63
58.	ಶೃಂಗೇರಿ	530	2.74
	ಜಿಲ್ಲಾ ಮೊತ್ತ	**355388**	**1839.70**
59.	ಮಡಿಕೇರಿ	31174	140.28
60.	ಗೋಣಿಕೊಪ್ಪಲು	113219	559.13
61.	ಸೋಮವಾರಪೇಟೆ	13875	64.52
	ಜಿಲ್ಲಾ ಮೊತ್ತ	**158268**	**763.93**

1	2	3	4
62.	ಮಂಗಳೂರು	14655	78.74
63.	ಪುತ್ತೂರು	193	1.07
64.	ಬೆಳ್ತಂಗಡಿ	69421	384.17
65.	ಬಂಟ್ವಾಳ	14002	533.69
66.	ಉಡುಪಿ	11417	65.08
67.	ಕುಂದಾಪುರ	5121	30.73
68.	ಕಾರ್ಕಳ	21191	121.86
	ಜಿಲ್ಲಾ ಮೊತ್ತ	**37729**	**217.67**
	ವಿಭಾಗದ ಮೊತ್ತ	**3239975**	**17040.35**
		ಗುಲ್ಬರ್ಗಾ ವಿಭಾಗ	
69.	ಗುಲ್ಬರ್ಗಾ	1632	8.17
70.	ಯಾದಗಿರಿ	3690	18.82
	ಜಿಲ್ಲಾ ಮೊತ್ತ	**5322**	**26.99**
71.	ಬೀದರ್	8106	63.31
72.	ಹುಮ್ನಾಬಾದ್	10	0.05
73.	ಬಸವಕಲ್ಯಾಣ	476	2.14
74.	ಔರಾದ್	25	0.11
	ಜಿಲ್ಲಾ ಮೊತ್ತ	**8617**	**65.61**
75.	ಬಳ್ಳಾರಿ	591169	3842.60
76.	ಹೊಸಕೋಟೆ	345620	20703.72
77.	ಕೊಟ್ಟೂರು	810	3.24
78.	ಸಿರಗುಪ್ಪ	1070790	7120.75
79.	ಹಗರಿಬೊಮ್ಮನಹಳ್ಳಿ	74989	449.93
80.	ಹೂವಿನ ಹಡಗಲಿ	8940	49.17
	ಜಿಲ್ಲಾ ಮೊತ್ತ	**2092318**	**13539.41**
81.	ರಾಯಚೂರು	2390500	15818.76
82.	ಮಾನ್ವಿ	934468	6541.28
83.	ಲಿಂಗಸ್ಗೂರು	460678	3404.38
84.	ಸಿಂಧನೂರು	2606576	15639.46
	ಜಿಲ್ಲಾ ಮೊತ್ತ	**6392222**	**41403.88**

1	2	3	4
85.	ಕೊಪ್ಪಳ	69059	416.19
86.	ಕುಷ್ಟಗಿ	4546	24.5
87.	ಗಂಗಾವತಿ	7084300	51715.39
	ಜಿಲ್ಲಾ ಮೊತ್ತ	**7157905**	**52156.08**
	ವಿಭಾಗದ ಮೊತ್ತ	**15656384**	**107191.97**
	ಬೆಳಗಾಂ ವಿಭಾಗ		
88.	ಬೆಳಗಾಂ	3936	25.58
89.	ಅಥಣಿ	415	2.42
90.	ನಂದಗಡ	15911	87.51
	ಜಿಲ್ಲಾ ಮೊತ್ತ	**20262**	**115.51**
91.	ಧಾರವಾಡ	5092	25.45
92.	ಅಣ್ಣಿಗೇರಿ	125	0.63
93.	ಕಲಘಟಗಿ	4104	20.93
	ಜಿಲ್ಲಾ ಮೊತ್ತ	**9321**	**47.02**
94.	ಹಾವೇರಿ	6234	35.78
85.	ಹಿರೇಕೆರೂರು	15525	77.63
96.	ರಾಣಿಬೆನ್ನೂರು	20321	111.77
97.	ಹಾನಗಲ್	56541	265.18
	ಜಿಲ್ಲಾ ಮೊತ್ತ	**98621**	**490.36**
98.	ರೋಣ	84	0.27
	ಜಿಲ್ಲಾ ಮೊತ್ತ	**84**	**0.27**
99.	ಕಾರವಾರ	4781	24.28
100.	ಹಳಿಯಾಳ	13218	72.31
101.	ಕುಮಟಾ	3940	21.64
102.	ಶಿರಸಿ	45178	229.75
103.	ಸಿದ್ದಾಪುರ	4037	8.8
104.	ಹೊನ್ನಾವರ	2509	14.55
105.	ಯಲ್ಲಾಪುರ	1397	7.25
106.	ಮುಂಡಗೋಡ	36073	184.72
	ಜಿಲ್ಲಾ ಮೊತ್ತ	**111133**	**563.30**

1	2	3	4
107.	ತಾಳಿಕೋಟೆ	7222	32.50
108.	ಹುನಗುಂದ	508	2.54
	ಜಿಲ್ಲಾ ಮೊತ್ತ	**7730**	**35.04**
	ವಿಭಾಗದ ಮೊತ್ತ	**148530**	**761.14**
	ರಾಜ್ಯದ ಮೊತ್ತ	**22153210**	**142310.37**
		2. ಅಕ್ಕಿ	
		ಬೆಂಗಳೂರು ವಿಭಾಗ	
1.	ಬೆಂಗಳೂರು	3880288	68875.11
	ಜಿಲ್ಲಾ ಮೊತ್ತ	**3880288**	**68875.11**
2.	ಚನ್ನಪಟ್ಟಣ	101410	918.84
3.	ದೊಡ್ಡಬಳ್ಳಾಪುರ	58777	734.71
4.	ಕನಕಪುರ	1417	18.35
	ಜಿಲ್ಲಾ ಮೊತ್ತ	**161604**	**1671.90**
5.	ಚಿತ್ರದುರ್ಗ	5567	77.94
6.	ಚಳ್ಳಕೆರೆ	7883	86.10
7.	ಹಿರಿಯೂರು	4973	43.33
8.	ಹೊಸದುರ್ಗ	461	4.53
	ಜಿಲ್ಲಾ ಮೊತ್ತ	**18884**	**211.90**
9.	ದಾವಣಗೆರೆ	281942	3436.69
10.	ಹರಿಹರ	6957	66.09
11.	ಚನ್ನಗಿರಿ	12345	145.71
12.	ಹೊನ್ನಾಳಿ	160165	1081.19
13.	ಹರಪನಹಳ್ಳಿ	620	6.30
	ಜಿಲ್ಲಾ ಮೊತ್ತ	**452029**	**4735.88**
14.	ಕೋಲಾರ	26448	304.27
15.	ಬಂಗಾರಪೇಟೆ	465417	4770.52
16.	ಚಿಂತಾಮಣಿ	52739	672.42
17.	ಗೌರಿಬಿದನೂರು	37247	330.30
18.	ಚಿಕ್ಕಬಳ್ಳಾಪುರ	14741	160.54
19.	ಮುಳಬಾಗಿಲು	6940	79.05

1	2	3	4
20.	ಮಾಲೂರು	7665	77.06
	ಜಿಲ್ಲಾ ಮೊತ್ತ	**614236**	**6424.5**
21.	ಶ್ರೀನಿವಾಸಪುರ	3039	30.3
22.	ತುಮಕೂರು	341063	4348.5
23.	ಪಾವಗಡ	251621	1997.2
24.	ಗುಬ್ಬಿ	12618	164.0
25.	ಹುಳಿಯಾರು	1167	12.84
26.	ಹುಳಿಯಾರು	3538	30.40
27.	ಮಧುಗಿರಿ	5373	45.90
28.	ತಿಪಟೂರು	1167	12.84
29.	ಸಿರಾ	1825	21.90
30.	ಕುಣಿಗಲ್	9628	91.47
	ಜಿಲ್ಲಾ ಮೊತ್ತ	**628000**	**6725.15**
31.	ಶಿವಮೊಗ್ಗ	159889	1610.22
32.	ಸಾಗರ	27308	409.42
33.	ಶಿಕಾರಿಪುರ	51948	44562
34.	ಭದ್ರಾವತಿ	12872	141.92
	ಜಿಲ್ಲಾ ಮೊತ್ತ	**252017**	**2607.18**
	ವಿಭಾಗದ ಮೊತ್ತ	**6007058**	**91251.67**
		ಮೈಸೂರು ವಿಭಾಗ	
35.	ಮೈಸೂರು	375317	3993.47
36.	ಕೃಷ್ಣರಾಜನಗರ	247643	2022.69
37.	ನಂಜನಗೂಡು	25530	405.53
38.	ಹುಣಸೂರು	9776	79.82
39.	ಪಿರಿಯಾಪಟ್ಟಣ	5392	43.80
40.	ಟಿ. ನರಸೀಪುರ	126155	1101.64
41.	ಸಂತೆಸರಗೂರು	8703	67.94
	ಜಿಲ್ಲಾ ಮೊತ್ತ	**798516**	**7714.89**
42.	ಚಾಮರಾಜನಗರ	10046	96.49
43.	ಗುಂಡ್ಲುಪೇಟೆ	295	2.98

1	2	3	4
44.	ಕೊಳ್ಳೇಗಾಲ	77909	670.85
	ಜಿಲ್ಲಾ ಮೊತ್ತ	**88250**	**770.32**
45.	ಮಂಡ್ಯ	480822	4567.81
46.	ಕೃಷ್ಣರಾಜಪೇಟೆ	26058	229.19
47.	ಮದ್ದೂರು	298348	2518.86
48.	ನಾಗಮಂಗಲ	53482	481.44
	ಜಿಲ್ಲಾ ಮೊತ್ತ	**858710**	**7797.30**
49.	ಹಾಸನ	192953	1627.65
50.	ಅರಸೀಕೆರೆ	15964	167.62
51.	ಚನ್ನರಾಯಪಟ್ಟಣ	3356	31.61
52.	ಹೊಳೆನರಸೀಪುರ	55081	425.73
53.	ಸಕಲೇಶಪುರ	14682	131.25
54.	ಬೇಲೂರು	1761	17.58
	ಜಿಲ್ಲಾ ಮೊತ್ತ	**283797**	**2401.44**
55.	ಚಿಕ್ಕಮಗಳೂರು	9798	87.56
56.	ಕಡೂರು	2447	23.79
57.	ತರೀಕೆರೆ	6759	60.83
58.	ಮೂಡಿಗೆರೆ	5451	54.14
59.	ಕೊಪ್ಪ	6869	44.99
60.	ಶೃಂಗೇರಿ	822	6.21
	ಜಿಲ್ಲಾ ಮೊತ್ತ	**32146**	**277.52**
61.	ಮಡಿಕೇರಿ	4808	46.83
62.	ಗೋಣಿಕೊಪ್ಪಲು	9673	85.48
63.	ಸೋಮವಾರಪೇಟೆ	33	32.08
	ಜಿಲ್ಲಾ ಮೊತ್ತ	**14514**	**164.39**
64.	ಮಂಗಳೂರು	309.114	3032.37
65.	ಪುತ್ತೂರು	19338	187.40
66.	ಸುಳ್ಯ	34142	358.49
67.	ಬೆಳ್ತಂಗಡಿ	44885	445.61

1	2	3	4
68.	ಬಂಟ್ವಾಳ	36211	309.96
	ಜಿಲ್ಲಾ ಮೊತ್ತ	**443690**	**4333.83**
69.	ಉಡುಪಿ	59923	694.59
70.	ಕುಂದಾಪುರ	20023	200.23
71.	ಕಾರ್ಕಳ	127318	1277.02
	ಜಿಲ್ಲಾ ಮೊತ್ತ	**207264**	**2171.84**
	ವಿಭಾಗದ ಮೊತ್ತ	**2726887**	**25631.533**
		ಗುಲ್ಬರ್ಗಾ ವಿಭಾಗ :	
72.	ಗುಲ್ಬರ್ಗಾ	125075	1461.44
73.	ಸುರಪುರ	115	11.38
74.	ಸೇಡಂ	5943	83.20
75.	ಯಾದಗಿರಿ	9314	899.66
76.	ಶಹಾಪುರ	1160	12.89
77.	ಚಿಂಚೋಳಿ	50	0.60
	ಜಿಲ್ಲಾ ಮೊತ್ತ	**226057**	**2469.17**
78.	ಬೀದರ್	67756	1050.22
79.	ಹುಮ್ನಾಬಾದ್	195	2.93
80.	ಔರಾದ್	11	0.13
	ಜಿಲ್ಲಾ ಮೊತ್ತ	**67962**	**1053.28**
81.	ಬಳ್ಳಾರಿ	45618	478.28
82.	ಹೊಸಕೋಟೆ	98460	1033.83
83.	ಕೊಟ್ಟೂರು	425	3.83
84.	ಸಿರಗುಪ್ಪ	268.27	380.94
85.	ಹರಗರಿಬೊಮ್ಮನಹಳ್ಳಿ	9166	90.29
86.	ಹೂವಿನ ಹಡಗಲಿ	26	0.27
	ಜಿಲ್ಲಾ ಮೊತ್ತ	**180522**	**1988.15**
87.	ರಾಯಚೂರು	2985	11.28
88.	ಮಾನ್ವಿ	34875	305.51
89.	ಲಿಂಗಸ್ಗೂರು	5200	46.07
90.	ಸಿಂಧನೂರು	109930	1319.16
	ಜಿಲ್ಲಾ ಮೊತ್ತ	**152990**	**1682.02**

1	2	3	4
91.	ಕೊಪ್ಪಳ	309	0.46
92.	ಕುಷ್ಟಗಿ	100	1.60
93.	ಗಂಗಾವತಿ	7526	109.46
84.	ಯಲಬುರ್ಗಾ	5269	52.69
	ಜಿಲ್ಲಾ ಮೊತ್ತ	**13204**	**164.21**
	ವಿಭಾಗದ ಮೊತ್ತ	**640735**	**7356.83**
		ಬೆಳಗಾವಿ ವಿಭಾಗ	
95.	ಬೆಳಗಾಂ	40058	560.81
96.	ಅಥಣಿ	1051	13.25
97.	ಬೈಲಹೊಂಗಲ	1294	14.58
98.	ನಂದಗಡ	745	7.04
99.	ನಿಪ್ಪಾಣಿ	260	2.50
100.	ಸಂಕೇಶ್ವರ	1183	11.08
101.	ಸವದತ್ತಿ	78	0.93
	ಜಿಲ್ಲಾ ಮೊತ್ತ	**44669**	**610.19**
102.	ಧಾರವಾಡ	13314	153.11
103.	ಅಣ್ಣಿಗೇರಿ	1166	10.56
104.	ಹುಬ್ಬಳ್ಳಿ	18590	260.26
105.	ಕುಂದಗೋಳ	1414	15.15
106.	ಕಲಘಟಗಿ	426	3.62
	ಜಿಲ್ಲಾ ಮೊತ್ತ	**34910**	**442.70**
107.	ಹಾವೇರಿ	769	6.83
108.	ಹಿರೇಕೆರೂರು	1053	10.53
109.	ರಾಣಿಬೆನ್ನೂರು	109595	1041.15
110.	ಸವಣೂರು	3750	32.51
111.	ಹಾನಗಲ್	36757	349.19
	ಜಿಲ್ಲಾ ಮೊತ್ತ	**151924**	**1440.21**
112.	ಗದಗ	23719	169.42
113.	ಲಕ್ಷ್ಮೇಶ್ವರ	494	5.93

1	2	3	4
114.	ರೋಣ	1290	9.03
	ಜಿಲ್ಲಾ ಮೊತ್ತ	**25503**	**184.38**
115.	ಕಾರವಾರ	27365	268.16
116.	ಹಳಿಯಾಳ	666	7.72
117.	ಕುಮಟಾ	4105	49.39
118.	ಶಿರಸಿ	10809	91.27
119.	ಸಿದ್ದಾಪುರ	2607	25.42
120.	ಹೊನ್ನಾವರ	20160	191.52
121.	ಯಲ್ಲಾಪುರ	12982	113.44
122.	ಮುಂಡಗೋಡ	16708	140.61
ಉ) ಈ ಯೋಜನೆಗೆ ಇದುವರೆವಿಗೂ ಖರ್ಚಾದ ಹಣ ಎಷ್ಟು ಹಾಗೂ ಇನ್ನು ಎಷ್ಟು ಹಣದ ಅವಶ್ಯಕತೆ ಇದೆ? (ವಿವರ ಒದಗಿಸುವುದು)

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಒಟ್ಟು ರೂ. 141.40 ಲಕ್ಷ ವೆಚ್ಚ ಭರಿಸಲಾಗಿದೆ.

ಆ) 2000–01 ನೇ ಸಾಲಿಗೆ ರೂ. 67,64 ಲಕ್ಷ
2001–02 ನೇ ಸಾಲಿಗೆ ರೂ. 40,97 ಲಕ್ಷ
2002–03ನೇ ಸಾಲಿಗೆ ರೂ. 26.24 ಲಕ್ಷ
2003–04ನೇ ಸಾಲಿಗೆ
ಜೂನ್ –03 ರ ಅಂತ್ಯಕ್ಕೆ ರೂ 5.65 ಲಕ್ಷ
ಒಟ್ಟು ರೂ.141.40 ಲಕ್ಷ

ಇ) ತುಂಗಾ ಮೇಲ್ದಂಡೆ ಯೋಜನೆಯ ತುಂಗಾ ಅಣೆಕಟ್ಟೆಯ ಅಂದಾಜು ವೆಚ್ಚ ರೂ. 271.41 ಕೋಟಿ

ಈ) ತುಂಗಾ ಮೇಲ್ದಂಡೆ ಯೋಜನೆಯ ಅಣೆಕಟ್ಟೆಯ ಸಿವಿಲ್ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಗೇಟ್ ಅಳವಡಿಸುವ ಕೆಲಸ ಪ್ರಗತಿಯಲ್ಲಿದೆ. ತುಂಗಾ ಮೇಲ್ದಂಡೆ ಕಾಲುವೆಯು 329.5 ಕಿ.ಮೀ. ಉದ್ದ ಇದ್ದು ಈ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಉ) ಯೋಜನೆ ಪ್ರಾರಂಭವಾದಾಗಿನಿಂದ ಜೂನ್ 2003 ರ ಅಂತ್ಯದವರೆಗೆ ಒಟ್ಟು ರೂ. 253.70 ಕೋಟಿ ವೆಚ್ಚವಾಗಿರುತ್ತದೆ. ಈ ಯೋಜನೆಯ ಮಾರ್ಪಾಡಿತ ಅಂದಾಜು ವೆಚ್ಚ ರೂ. 1052.33 ಕೋಟಿಯಿದ್ದು ಪೂರ್ಣಗೊಳಿಸಲು ಇನ್ನೂ ರೂ. 798.63 ಕೋಟಿಗಳ ಅವಶ್ಯಕತೆ ಇದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವವರಿಗೆ ಪಡಿತರ ಚೀಟಿಗಳ ವಿತರಣೆಯ ಬಗ್ಗೆ

4217 (4898) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿತರಿಸಲಾಗಿರುವ ಹಸಿರು ಕಾರ್ಡ್, ಹಳದಿ ಕಾರ್ಡ್ ಹಾಗೂ ಕೆಂಪು ಪಡಿತರ ಚೀಟಿಗಳ ವಿವರಗಳನ್ನು ತಾಲ್ಲೂಕುವಾರು ನೀಡುವುದು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ವಿತರಿಸಲಾಗಿರುವ ಹಸಿರು ಕಾರ್ಡ್, ಹಳದಿ ಕಾರ್ಡ್ ಹಾಗೂ ಕೇಸರಿ ಪಡಿತರ ಚೀಟಿಗಳ ವಿವರ ಕೆಳಗಿಂತಿದೆ.

ಕ್ರ. ಸಂ.	ತಾಲ್ಲೂಕಿನ ಹೆಸರು	ವಿತರಿಸಲಾಗಿರುವ ಪ. ಚೀ.ವಿವರ ಹಸಿರು	ಹಳದಿ	ಅಂ.ಅ.	ಕೇಸರಿ ಪೋಟೋ	ಒಟ್ಟು
1.	ಶಿವಮೊಗ್ಗ ಅ.ಪ	7154	–	534	43376	95889
	ಶಿವಮೊಗ್ಗ ಗ್ರಾ	30596	–	2074	12155	

1	2	3	4	5	6	7
2.	ಭದ್ರಾವತಿ	5234	–	998	26032	
	ಅ.ಪ					80398
	ಭದ್ರಾವತಿ	32233	–	2217	13684	
3.	ಸಾಗರ	1281	–	785	11070	
	ಪಟ್ಟಣ					41034
	ಸಾಗರ	15134	–	2418	10336	
	ಗ್ರಾ					
4.	ಶಿಕಾರಿಪುರ	1000	–499	4484		
	ಪಟ್ಟಣ					42200
	ಶಿಕಾರಿಪುರ	27740	–	2402	6075	
	ಗ್ರಾಮ					
5.	ತೀರ್ಥಹಳ್ಳಿ	622	–	217	2623	
	ಪಟ್ಟಣ					32432
	ತೀರ್ಥಹಳ್ಳಿ	16916	–	1440	10614	
	ಗ್ರಾ					
6.	ಹೊಸ	14478	–1648	8341	24467	
	ನಗರ					
7.	ಸೊರಬ	24547	–	1964	11044	37555
	ಒಟ್ಟು	**176935**	–	**17206**	**159834**	**353875**

ಉದ್ಯೋಗಿನಿ ಯೋಜನೆಯ ಫಲಾನುಭವಿಗಳ ಬಗ್ಗೆ

4218 (4888) : ಶ್ರೀ ದಿನೇಶ್ ಗುಂಡುರಾವ್ (ಗಾಂಧೀನಗರ) ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–2003ನೇ ಸಾಲಿನಲ್ಲಿ ಉದ್ಯೋಗಿನಿ ಯೋಜನೆಯಡಿ ಗಾಂಧಿನಗರ ಕ್ಷೇತ್ರದಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು;

ಆ) ಇವರುಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಬ್ಯಾಂಕುಗಳವರು ಸಾಲದ ಹಣ ಬಿಡುಗಡೆ ಮಾಡಿರುತ್ತಾರೆ;

ಇ) ಬ್ಯಾಂಕುಗಳಿಂದ ಹಣ ಬಿಡುಗಡೆ ಮಾಡಲು ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ನಾಲ್ಕು

ಆ) ಒಬ್ಬರಿಗೆ

ಇ) ಬಂದಿದೆ

ಈ) ಈ ವಿಷಯವನ್ನು ಸ್ಟೇಟ್ ಲೆವಲ್ ಬ್ಯಾಂಕರ್ಸ್ ಕಮೀಟಿಯ ಮುಂದೆ ತಂದು ಉದ್ಯೋಗಿನಿ ಯೋಜನೆಯಡಿ ರೂ. 50,000/– ರವರೆಗೆ ಸಾಲ ಮಂಜೂರು ಮಾಡಲು ಶ್ಯೂರಿಟಿಯನ್ನು / ಗ್ಯಾರಂಟಿಯನ್ನು ನೀಡುವಂತೆ ಒತ್ತಾಯಿಸಬಾರದೆಂದು ಬ್ಯಾಂಕರ್‌ಗಳಿಗೆ ಸೂಚನೆಯನ್ನು ನೀಡಬೇಕೆಂದು ಕೋರಲಾಗುವುದು.

ಉಡುಪಿ ಜಿಲ್ಲೆಯ ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

4219 (4836) : ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿನ ಕೃಷಿ ಇಲಾಖೆಯಲ್ಲಿ ಯಾವ ಯಾವ ಹುದ್ದೆಗಳು ಖಾಲಿಯಿದೆ; ತಾಲ್ಲೂಕುವಾರು ಅಂಕಿ ಅಂಶಗಳು ಒದಗಿಸುವುದು:

ಆ) ಇತ್ತೀಚೆಗೆ ಹೊಸ ಭತ್ತದ ತಳಿಗಳನ್ನು ಉಡುಪಿ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲೆಗೆ ಒಗ್ಗುವಂತಹದ್ದು ಯಾವುದಾದರೂ ಬಿಡುಗಡೆಗೊಳಿಸಲಾಗಿದೆಯೇ, ಹಾಗಿದ್ದರೆ, ವಿವರ ಒದಗಿಸುವುದು;

ಇ) ಉಡುಪಿ ಜಿಲ್ಲೆಯ ಕಾರ್ಕಳ, ಉಡುಪಿ, ಕುಂದಾಪುರ, ತಾಲ್ಲೂಕಿನಲ್ಲಿ ಯಾವ ಯಾವ ಬೆಳೆಯನ್ನು ಎಷ್ಟೆಷ್ಟು ಎಕರೆಯಲ್ಲಿ ಬೆಳೆಸುತ್ತಾರೆ. ತಾಲ್ಲೂಕುವಾರು ವಿವರ ಒದಗಿಸುವುದು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿನ ಕೃಷಿ ಇಲಾಖೆಯಲ್ಲಿ ಈ ಕೆಳಕಂಡ ಹುದ್ದೆಗಳು ಖಾಲಿ ಇದ್ದು ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.

ಹುದ್ದೆ	ಉಡುಪಿ	ಕುಂದಾಪುರ	ಕಾರ್ಕಳ
ಸಹಾಯಕ ಕೃಷಿ ನಿರ್ದೇಶಕರು (ಜಕೃನಿ ಕಛೇರಿ ಮತ್ತು ಉಡುಪಿ ಕಛೇರಿ)	4	1	–
ಕೃಷಿ ಅಧಿಕಾರಿಗಳು	11	5	4
ಸಹಾಯಕ ಕೃಷಿ ಅಧಿಕಾರಿ (ರೈತ ಮಹಿಳೆ)	–	–	1
ಅಧೀಕ್ಷರು	1	–	1
ಪ್ರಥಮ ದರ್ಜೆ ಸಹಾಯಕರು	1	2	1
ದ್ವಿತೀಯ ದರ್ಜೆ ಸಹಾಯಕರು	–	2	–
ಬೆರಳಚ್ಚುಗಾರರು	1	–	–
ಕೃಷಿ ಸಹಾಯಕರು	8	8	8
ವಾಹನ ಚಾಲಕರು	2	1	–
ಗ್ರೂಫ್ – ಡಿ	3	–	2
ಒಟ್ಟು :	31	19	18

ಆ) ವಲಯ – 10ರ ಉಡಪಿ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲೆಗೆ ಒಗ್ಗುವಂತಹ ಭತ್ತದ ತಳಿ ಕೆ.ಸಿ.ಪಿ–1 ಇತ್ತೀಚೆಗೆ ಬಿಡುಗಡೆಯಾಗಿದೆ.

ಇ) ಉಡುಪಿ ಜಿಲ್ಲೆಯಲ್ಲಿ ಮುಖ್ಯವಾಗಿ ಭತ್ತ , ಕಬ್ಬು ಮತ್ತು ದ್ವಿದಳ ಧಾನ್ಯಗಳು (ಉದ್ದು, ಹೆಸರು, ಅಲಸಂದೆ) ಹಾಗೂ ಎಣ್ಣೆ ಕಾಳು (ಎಳ್ಳು ಹಾಗು ಶೇಂಗ) ಬೆಳೆಗಳನ್ನು ಬೆಳೆಯುತ್ತಾರೆ. ತಾಲೂಕುವಾರು, ಎಕರೆವಾರು, ಬೆಳೆ ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.

ಬೀದರ್‌ನ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯ ವ್ಯವಹಾರದ ಬಗ್ಗೆ

4220 (4859) : ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ನರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಸಲುವಾಗಿ ರೈತರಿಂದ ಪಡೆದ ಷೇರು ಹಣ ಎಷ್ಟು;

ಆ) ಪ್ರತಿ ರೈತರಿಂದ 5000 ರೂ V.S.S.S.N ನಲ್ಲಿ ಸಾಲ ಮಂಜೂರಿ ಮಾಡಿಸಿ ಆ ಹಣವನ್ನು ಕಾರ್ಖಾನೆಗೆ ಷೇರು ಹಣವೆಂದು ಜಮಾ ಮಾಡಿಕೊಂಡು 4200 ರೂ. Share certifivate ಕೊಟ್ಟು ಉಳಿದ 800 ರೂ. ಹಣ ಪ್ರತಿ ರೈತರಿಗೆ ಕೊಡದೇ ದುರುಪಯೋಗ ಪಡಿಸಿಕೊಂಡಿರುವುದು ಸಕಾರದ ಗಮನಕ್ಕೆ ಬಂದಿದೆಯೇ; ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಳ್ಳಬೇಕೆಂದಿರುವ ಕ್ರಮವೇನು; ವಿವರ ಒದಗಿಸುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಒಟ್ಟು ರೂ. 895. 21 ಲಕ್ಷ ಶೇರು ಹಣವನ್ನು ಸಂಗ್ರಹಿಸಲಾಗಿದೆ.

ಆ) ಇಲ್ಲ

ಔರಾದ್ ತಾಲ್ಲೂಕಿನ ಅಂಗನವಾಡಿಗಳಿಗೆ ಕಳಪೆ ಮಟ್ಟದ ಆಹಾರ ಧಾನ್ಯ ಪೂರೈಕೆಯ ಬಗ್ಗೆ

4221(4860) : ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ C.D.P.O. ಆಫೀಸ್ ಸಂತಪೂರದಿಂದ ಅಂಗನವಾಡಿಗಳಿಗೆ ಸರಬರಾಜು ಮಾಡುತ್ತಿರುವ ಆಹಾರ ಧಾನ್ಯಗಳು ಕಳಪೆ ಮಟ್ಟದಾಗಿರುವುದು ಮಾನವ ಉಪಯೋಗಕ್ಕೆ ಯೋಗ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇಂಥ ಅವ್ಯವಹಾರದ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಜಿಲ್ಲಾ ಪಂಚಾಯತ್ ಬೀದರ್ ಇವರು ದಾಳಿ ಮಾಡಿರುವ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಅದರ ಸತ್ಯಂಶದ ವಿವರ ಒದಗಿಸುವುದು;

ಇ) ಔರಾದ್ ತಾಲ್ಲೂಕಿನಲ್ಲಿ ಕಳಪೆ ಮಟ್ಟದ ಆಹಾರಧಾನ್ಯ ಸರಬರಾಜು ಮಾಡುವ ಏಜೆನ್ಸಿ ಯಾವುದು; ಇಂಥವರ ಬಗ್ಗೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ; ವಿವರ ನೀಡುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಔರಾದ್ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುತ್ತಿರುವ ಆಹಾರ ಧಾನ್ಯಗಳು ಕಳಪೆ ಮಟ್ಟವಾಗಿರುವುದಿಲ್ಲ.

ಆ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬೀದರ್ ಇವರು ದಿನಾಂಕ : 9–7–03 ರಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬೀದರ್‌ಗೆ ಆಕಸ್ಮಿಕ

ಭೇಟಿ ನೀಡಿ ಉಗ್ರಾಣದಲ್ಲಿಯ ಆಹಾರ ಸಾಮಗ್ರಿಗಳು ಕಳಪೆ ಮಟ್ಟದ್ದಾಗಿದೆಯೆಂದು ಆಕ್ಷೇಪಿಸಿ ಗುತ್ತಿಗೆದಾರರಾದ " ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಬೀದರ್" ಇವರ ಗುತ್ತಿಗೆಯನ್ನು ರದ್ದು ಪಡಿಸಿರುತ್ತಾರೆ ಹಾಗೂ ಹೆಸರುಕಾಳು ಆಯೋಡೈಜ್ಡ್ ಇಲ್ಲದ ಉಪ್ಪು ಮತ್ತು ಇನ್ನುಳಿದ ಕಡಲೇಬೇಳೆ, ಕೆಂಪು ಮೆಣಸಿನಕಾಯಿ ಮತ್ತು ಬೆಲ್ಲ ಈ ಆಹಾರ ಸಾಮಗ್ರಿಗಳು ಕಳಪೆ ಮಟ್ಟದ್ದಾಗಿರುವುದರಿಂದ ಪ್ರಭಾರಿ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ಹಾಗೂ ಕರಣಿಕರರು ಇವರನ್ನು ಅಮಾನತ್ತು ಗೊಳಿಸಿ ಕ್ರಮ ಕೈಗೊಂಡಿರುತ್ತಾರೆ.

ಇ). ಔರಾದ ತಾಲ್ಲೂಕಿನಲ್ಲಿ ಆಹಾರ ಧಾನ್ಯ ಸರಬರಾಜು ಮಾಡುವ ಗುತ್ತಿಗೆದಾರರು ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ ಔರಾದ್ ಅವರು ಆಗಿರುತ್ತಾರೆ ಸರಬರಾಜು ಆಗಿರುವ ಆಹಾರ ಪದಾರ್ಥಗಳು ಒಳ್ಳೆಯ ಗುಣಮಟ್ಟದ್ದಾಗಿರುವುದರಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಬೀದರ್ ಜಿಲ್ಲೆಯ "ಮಾಂಜರಾ" ನದಿಗೆ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣ ಮಾಡುವ ಬಗ್ಗೆ

4222 (4861) : ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ "ಮಂಜರಾ" ನದಿಯ ನೀರು ಆಂಧ್ರ ಪ್ರದೇಶಕ್ಕೆ ಹರಿದು ಹೋಗುತ್ತಲಿದ್ದು, "ಗೋದಾವರಿ ಬೇಸಿನ್" ನಲ್ಲಿ ಬರುವ ಬಚಾವತ್ ಅವಾರ್ಡ್ ಪ್ರಕಾರ 7 ಟಿ.ಎಂ.ಸಿ. ನೀರು ಕರ್ನಾಟಕ ರಾಜ್ಯ ಉಪಯೋಗಿಸಬೇಕಗಿದ್ದು. ಈಗ ಹಾಲಿ ಎಷ್ಟು ಟಿ.ಎಂ.ಸಿ. ನೀರು ಉಪಯೋಗಿಸಲಾಗುತ್ತಿದೆ; ವಿವರ ಒದಗಿಸುವುದು;

ಆ) ಹರಿದು ಹೋಗುವ ನೀರು ಕರ್ನಾಟಕ ರಾಜ್ಯ ಉಪಯೋಗಿಸಲು ಮೇಲೆ ತಿಳಿಸಿರುವ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಮ್ – ಬ್ಯಾರೇಜ್ ಕಟ್ಟುವ ಯೋಜನೆ ಏನಾದರೂ ಇದೆಯೆ?

ಶ್ರಿ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) ಗೋದಾವರಿ ಜಲಾವಿವಾದ ನ್ಯಾಯಾಧೀಕರಣ ತೀರ್ಪಿನನ್ವಯ ಗೋದಾವರಿ ಕಣಿವೆಯಲ್ಲಿ ರಾಜ್ಯವು 22.37 ಟಿ.ಎಂ.ಸಿ. ಪ್ರಮಾಣದ ನೀರನ್ನು ಬಳಿಸಕೊಳ್ಳಬಹುದಾಗಿದೆ. ಈ ನೀರನ್ನು ಕೆಳಕಂಡ ಯೋಜನೆಗಳ ಮೂಲಕ ಬಳಸಲು ಉದ್ದೇಶಿಸಲಾಗಿದೆ.

ಕ್ರಮ ಸಂ.	ಯೋಜನೆಗಳು	ನೀರಿನ ಹಂಚಿಕೆ ಟಿ.ಎಂ.ಸಿ.
1.	ಕಾರಂಜಾ ಪ್ರಾಜೆಕ್ಟ್	13.10
2.	ಚುಲ್ಕಿನಾಲ ಪ್ರಾಜೆಕ್ಟ್	1.17
3.	ಮಾಂಜಿರಾ ಏತ ನೀರಾವರಿ ಯೋಜನೆ	1.00
4.	ಕರ್ನಾಟಕ ಭಾಗದ ನಿಜಾಮ್ ಸಾಗರ ಕೆಳಗಿನ ಭಾಗದ ಡ್ರೈನ್ ನೀರು	2.50
5.	ಈಗಿರುವ ಸಣ್ಣ ನೀರಾವರಿ ಯೋಜನೆಗಳು	4.60
	ಒಟ್ಟು	22.37

ಮಾಸ್ಟರ್ ಪ್ಲಾನ್ ಸಮಿತಿಯು ಈ ಮೇಲಿನಂತೆ ಹಂಚಿಕೆಯನ್ನು ಪುನ: 1999 ರಲ್ಲಿ ಪರಿಶೀಲಿಸಿ ಈ ಕೆಳಗಿನಂಗತೆ ಪರಿಷ್ಕರಿಸಿರುತ್ತದೆ.

ಕ್ರಮ ಸಂ.	ಯೋಜನೆಗಳು	ಪರಿಷ್ಕರಿಸಿದ ಹಂಚಿಕೆ
1.	ಕಾರಂಜಾ ಪ್ರಾಜೆಕ್ಟ್	9.27
2.	ಚುಲ್ಕಿನಾಲಾ ಪ್ರಾಜೆಕ್ಟ್	1.17
3.	ಮಾಂಜಿರಾ ಹನಿ ನೀರಾವರಿ ಯೋಜನೆ	
4.	ಕರ್ನಾಟಕ ಭಾಗದ ನಿಜಾಮ್ ಸಾಗರ ಕೆಳಗಿನ ಭಾಗದ ಡ್ರೈನ್ ನೀರು	0.67
5.	ಈಗಿರುವ ಸಣ್ಣ ನೀರಾವರಿ ಯೋಜನೆಗಳು.	2.95
	ಒಟ್ಟು	18.86

ಆ) ಮಾಂಜಿರಾ ನದಿಗೆ ಅಡ್ಡಲಾಗಿ ಈ ಕೆಳಗೆ ವಿವರಿಸಿರುವ 4 ಬ್ರಿಡ್ಜ್ –ಕಮ್ ಬ್ಯಾರೇಜ್‌ಗಳನ್ನು 21.76 ಕೋಟಿ ರೂ.ಗಳ ಅಂದಾಜಿನಲ್ಲಿ ನಿರ್ಮಿಸಲು ಯೋಜನೆಯನ್ನು ತಯಾರಿಸಲಾಗಿದೆ. ಈ ಬ್ಯಾರೇಜುಗಳನ್ನು ಕೂಡಲೇ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮೂಲಕ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

1) ಜಿರಗಿಹಾಳ್
2) ಮಣಿಕೇಶ್ವರ್
3) ಹಾಲಹಳ್ಳಿ
4) ಚಂದಾಪುರ

ಬೀದರ್ ಜಿಲ್ಲೆಯ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಸಿಬ್ಬಂದಿ ನೇಮಕಾತಿಯ ಬಗ್ಗೆ

4223 (4869) : ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಇದೇ ಜನವರಿ ತಿಂಗಳಲ್ಲಿ ಹೊಸದಾಗಿ ಪ್ರಾರಂಭವಾಗಿದ್ದು, ಈ ಪ್ರಸಕ್ತ ವರ್ಷದಲ್ಲಿ ಗಳಿಸಿರುವ ನಿವ್ವಳ ಲಾಭವೆಷ್ಟು;

ಆ) ಸದರಿ ಕಾರ್ಖಾನೆಯಲ್ಲಿ ಈ ವರ್ಷದಲ್ಲಿ ಹಂಗಾಮಿ ಕೆಲಸ ಮಾಡಿರುವ ಸಿಬ್ಬಂದಿ ಸಂಖ್ಯೆ ಎಷ್ಟು;

ಇ) ಸದರಿ ಕಾರ್ಖಾನೆಗೆ ಸರ್ಕಾರ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿದೆಯೇ; ಹಾಗಾದರೆ ನೇಮಕಗೊಂಡ ಸಿಬ್ಬಂದಿಗಳ ವಿವರಗಳೇನು; ವಿವರ ಒದಗಿಸುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆಯು 2002 ರ ನವೆಂಬರ್ ತಿಂಗಳಲ್ಲಿ ಕಬ್ಬು ನುರಿಸುವಿಕೆ ಪ್ರಾರಂಭಿಸಿ ಪ್ರಸಕ್ತ ವರ್ಷ 2002–03 ರ ತಾತ್ಕಾಲಿಕ ತಃಖ್ತೆ ಪ್ರಕಾರ ರೂ. 253.22 ಲಕ್ಷಗಳ ನಿವ್ವಳ ಲಾಭಗಳಿಸಿದೆ. ಈ ಲಾಭವು ಸವಕಳಿ ತೆಗೆಯದೆ ಇದೆ. ಸವಕಳಿ ತೆಗೆದರೆ ರೂ. 11.53 ಲಕ್ಷಗಳಷ್ಟು ನಷ್ಟವಾಗಲಿದೆ.

ಆ) ಈ ವರ್ಷ ಕಾರ್ಖಾನೆಯಲ್ಲಿ 471 ಸಿಬ್ಬಂದಿ ತರಬೇತಿದಾರರೆಂದು (ಟ್ರೇನೀಜ್) ಕೆಲಸ ಮಾಡಿರುತ್ತಾರೆ.

ಇ) ಸದರಿ ಕಾರ್ಖಾನೆಗೆ ಪ್ರಾರಂಭಿಕ ಹಂತದಲ್ಲಿ 1989 ರಲ್ಲಿ ಸರ್ಕಾರವು ಒಟ್ಟು 11 ಹುದ್ದೆಗಳನ್ನು ಮಂಜೂರು ಮಾಡಿರುತ್ತದೆ. ಈ ಪೈಕಿ ಕೇವಲ 4 ಜನ ಮಾತ್ರ ಖಾಯಂ ನೇಮಕಾತಿಗೊಂಡಿರುತ್ತಾರೆ. ಕಾರ್ಖಾನೆಯು 2500 ಟಿಸಿಡಿ ಸಾಮರ್ಥ್ಯವಾಗಿದ್ದು, ಸಾಮರ್ಥ್ಯಕ್ಕನುಗುಣವಾಗಿ ಸಿಬ್ಬಂದಿ ವೃಂದಬಲ ವೇತನಶ್ರೇಣಿ ಮಂಜೂರಾತಿಗೆ ಕಾರ್ಖಾನೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಕೃಷಿ ಪಾಠಶಾಲೆಗಳ ಮಾಹಿತಿ ಬಗ್ಗೆ

4224 (4842) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೃಷಿ ಪಾಠಶಾಲೆಗಳು ಎಷ್ಟು;

ಆ) ಕಳೆ ಮೂರು ವರ್ಷಗಳಲ್ಲಿ ಈ ಪಾಠಶಾಲೆಗಳಲಿ ತರಬೇತಿ ಹೊಂದಿದ ರೈತರ ಸಂಖ್ಯೆ ಎಷ್ಟು; ಪಾಠಶಾಲೆವಾರು ಮತ್ತು ವರ್ಷವಾರು ವಿವರ ಕೊಡುವುದು;

ಇ) ಈ ರೀತಿ ತರಬೇತಿ ಪಡೆದ ರೈತರಲ್ಲಿ ಎಷ್ಟು ಜನ ಸ್ವಯಂ ಉದ್ಯೋಗ ಪ್ರಾರಂಭಿಸಿದ್ದಾರೆ; ತರಬೇತಿ ಪಡೆದ ರೈತರು ಬೇರೆ ಕಡೆ ಗುಳೆ ಹೋಗಿದ್ದಾರೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌಆದರೆ ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು;

ಈ) ಕೃಷಿ ಮತ್ತು ಸಂಬಂಧಪಟ್ಟ ವಿಷಯಗಳ ಬಗ್ಗೆ ವಿದ್ಯಾಪೀಠಗಳಲ್ಲಿ ಡಿಪ್ಲೋಮಾ ಶೈಲಿಯ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸಿಕೊಡುವ ಉದ್ದೇಶ ಇದೆಯೇ;

ಉ) ಹೌದಾದರೆ ಈ ನಿಟ್ಟಿನಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ರಾಜ್ಯದಲ್ಲಿ 12 ಕೃಷಿ ಪಾಠಶಾಲೆಗಳು ಇವೆ ಅವುಗಳ ವಿವರಗಳು ಇಂತಿದೆ.

ಕ್ರ.ಸಂ.	ಸ್ಥಳ	ಜಿಲ್ಲೆ
1)	ಅರಕಲಗೂಡು	ಹಾಸನ
2)	ಬ್ರಹ್ಮಾವರ	ಉಡುಪಿ
3)	ಭೂವನಹಳ್ಳಿ	ಕೋಲಾರ
4)	ಚಿಕ್ಕನಹಳ್ಳಿ	ತುಮಕೂರು
5)	ಹೊಂಬಳ	ಗದಗ್
6)	ಚಂದೂರಾಯನಹಳ್ಳಿ	ಬೆಂಗಳೂರು (ಗ್ರಾ)
7)	ಹರದನಹಳ್ಳಿ	ಚಾಮರಾಜನಗರ
8)	ಕುಮಟಾ	ಉತ್ತರ ಕನ್ನಡ
9)	ಮಳಗಿ	ಉತ್ತರ ಕನ್ನಡ
10)	ಕೊಟ್ನೂರು	ಗುಲ್ಬರ್ಗಾ
11)	ಸೋಮನಹಳ್ಳಿ	ಮಂಡ್ಯ
12)	ಹಳ್ಳಿಕೆರೆ	ಶಿವಮೊಗ್ಗ

ಆ) ವಿವರಗಳು ಇಂತಿವೆ.

ಕ್ರ.ಸಂ	ಸ್ಥಳ	ವರ್ಷ		
		2000 –01	2001 –02	2002 –03
1.	ಅರಕಲಗೂಡು	72	48	–
2.	ಬ್ರಹ್ಮಾವರ	64	146	376
3.	ಭುವನಹಳ್ಳಿ .	–	–	–
4.	ಚಿಕ್ಕನಹಳ್ಳಿ	57	192	–
5.	ಹೊಂಬಳ (ಕಂಪ್ಲಿ)	45	48	–
6.	ಚಂದೂರಾಯನಹಳ್ಳಿ (ಕಾಗತಿ) .	50	81	–
7.	ಹರದನಹಳ್ಳಿ (ಕೊಡಿಗೆ).	59	73	-
8.	ಕುಮಟಾ	59	73	–
9.	ಮಳಗಿ	40	19	–
10.	ಕೊಟ್ಟೂರು	59	61	–
11.	ಸೋಮನಹಳ್ಳಿ	50	136	–
12.	ಹಳ್ಳಿಕೆರೆ (ತ್ಯವಣಿಗೆ)	53	40	

.ಆವರಣಗಳಲ್ಲಿರುವ ಹೆಸರುಗಳು ವರದಿಯ ಅವಧಿಯಲ್ಲಿ ಶಾಲೆ ಇದ್ದ ಸ್ಥಳಗಳನ್ನು ಸೂಚಿಸುತ್ತವೆ

ವಸತಿನಿಲಯ ಸೌಕರ್ಯ ಇಲ್ಲದ ಮೂಲಕ ಕಾಗತಿಗೆ ತರಬೇತಿಗಳನ್ನು ವರ್ಗಾಯಿಸಲಾಗಿತ್ತು.

ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಅಸ್ತಿತ್ವಕ್ಕೆ ಬಂದುದರಿಂದ 2002–03ನೇ ಸಾಲಿನಲ್ಲಿ ಬ್ರಹ್ಮಾವರ ಹೊರತು ಉಳಿದೆಡೆಗಳಲ್ಲಿ ತರಬೇತಿಗಳನ್ನು ನಡೆಸಲಿಲ್ಲ ತನ್ಮೂಲಕ ಎಂಟು ಕೃಷಿ ಪಾಠಶಾಲೆಗಳನ್ನು ರದ್ದುಪಡಿಸುವ ಮತ್ತು ನಾಲ್ಕು ಪಾಠಶಾಲೆಗಳನ್ನು (ಹರದನಹಳ್ಳಿ, ಬ್ರಹ್ಮಾವರ, ಹೊಂಬಳ ಮತ್ತು ಚಂದೂರಾಯನಹಳ್ಳಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳನ್ನಾಗಿ ಉನ್ನತೀರಕರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.)

ಇ) ವೈಜ್ಞಾನಿಕ ಕೃಷಿಯನ್ನು ಅಳವಡಿಸಲು ಸಹಾಯ ಮಾಡುವ ಮುಖ್ಯ ಉದ್ದೇಶದೊಂದಿಗೆ ರೈತರ ಮಕ್ಕಳಿಗೆ ತರಬೇತಿಯನ್ನು ನೀಡಲಾಗುತ್ತದೆ. ಈ ರೀತಿ ತರಬೇತಿ ಪಡದೆ ವ್ಯಕ್ತಿಗಳು ಬೇರೆಡೆಗೆ ವಲಸೆ ಹೋದ ಮಾಹಿತಿಯು ಸರ್ಕಾರದಲ್ಲಿ ಇರುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದ ವಹಿವಾಟಿನ ಬಗ್ಗೆ

4224 (4840) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಕೃಷಿ ಮತ್ತು ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕಡೆ ಹೊಸದಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣ ನಿರ್ಮಿಸಲಾಗಿದೆ; ತಾಲ್ಲೂಕುವಾರು ವಿವರ ಕೊಡುವುದು;

ಆ) ಇವುಗಳಲ್ಲಿ ಎಷ್ಟು ಕಡೆ ವಹಿವಾಟನ್ನು ಇನ್ನೂ ಸ್ಥಳಾಂತರಗೊಳಿಸಿರುವುದಿಲ್ಲ;

ಇ) ಈ ಸಮಿತಿಗಳ ಸ್ಥಾಪನೆಗೆ ಹೂಡಿರುವ ಬಂಡವಾಳ ಎಷ್ಟು;

ಈ) ಈ ಹೊಸ ಪ್ರಾಂಗಣಗಳಿಗೆ ವಹಿವಾಟನ್ನು ಯಾವಾಗ ಸ್ಥಳಾಂತರಗೊಳಿಸಲಾಗುವುದು;

ಉ) ವಹಿವಾಟು ಸ್ಥಳಾಂತರಗೊಳಿಸಲು ಇರುವ ತೊಂದರೆಗಳೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಆ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ಈ) ಉ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

ಹೊಸದಾಗಿ ಅಭಿವೃದ್ಧಿಪಡಿಸಿದ ಪ್ರಾಂಗಣಗಳು ಹಾಗೂ ವ್ಯಾಪಾರ ವಹಿವಾಟು ಸ್ಥಳಾಂತರ ಮಾಹಿತಿ

ಕ್ರ ಸಂ.	ಮಾರುಕಟ್ಟೆ ಸಮಿತಿಯ ಹೆಸರು	ಅಭಿವೃದ್ಧಿಪಡಿಸಿದ ಪ್ರಾಂಗಣ	ಅಭಿವೃದ್ಧಿ ಪಡಿಸಿದ ವೆಚ್ಚ (ರೂ. ಲಕ್ಷಗಳಲ್ಲಿ)	ವ್ಯಪಾರ ಸ್ಥಳಾಂತರ ಬಗ್ಗೆ ಮಾಹಿತಿ
1.	ದೊಡ್ಡಬಳ್ಳಾಪುರ	ಮುಖ್ಯ ಪ್ರಾಂಗಣ	7\69.19	ತರಕಾರಿ ಮತ್ತು ಹಣ್ಣು ವಹಿವಾಟನ್ನು ಸ್ಥಳಾಂತಿಸಲಾಗಿದೆ ಆಹಾರ ಧಾನ್ಯಗಳ ವಹಿವಾಟು ಸ್ಥಳಾಂತರವಾಗಬೇಕಿದೆ. ಪೇಟೆ ಕಾರ್ಯಕ್ರಕರ್ತರಿಗೆ ನಿವೇಶನ-ಗಳನ್ನು ಹಂಚಿಕೆ ಮಾಡಿದ್ದು. ಅಂಗಡಿ ಗೋದಾಮುಗಳ ನಿರ್ಮಾಣ ಕಾರ್ಯ ಮುಗಿದ ನಂತರ ವ್ಯಾಪಾರ ವಹಿವಾಟು ಸ್ಥಳಾಂತರಿಸಲಾಗುವುದು
2.	ಚಳ್ಳಕೆರೆ	ರಾಮಪುರ ಮಾರುಕಟ್ಟೆ ಪ್ರಾಂಗಣ	85.00	ನೀರು ಮತ್ತು ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸಲು ಕ್ರಮ ಜರುಗಿಸಿದ್ದು, ಇವುಗಳ ಪೂರ್ಣಗೊಂಡ ನಂತರ ಪ್ರಸ್ತುತ ಸಾಲಿನಲ್ಲಿ ವಹಿವಾಟು ಸ್ಥಳಾಂತರಿಸಲಾಗುವುದು
3.	ಹೊನ್ನಾಳಿ	ಮುಖ್ಯ ಮಾರುಕಟ್ಟೆ ಪ್ರಾಂಗಣ	102.44	ಅಡಿಕೆ ವ್ಯಾಪಾರ ಸ್ಥಳಾಂತರಗೊಂಡಿರುತ್ತದೆ. ಆಹಾರ ಧಾನ್ಯಗಳ ವಹಿವಾಟು ಸ್ಥಳಾಂತರಿಕ್ಕೆ ಕ್ರಮ ಜರುಗಿಸಲಾಗಿದೆ. ಹಂಚಿಕೆಯಾಗಿರುವ ನೀವೇಶನಗಳಲ್ಲಿಗೋದಾಮುಗಳನ್ನು ತ್ವರಿತಂಗವಾಗಿ ವರ್ತಕರು ನಿರ್ಮಿಸಿ

1	2	3	4	5
				ಪ್ರಾಂಗಣದಲ್ಲಿಯೇ ವಹಿವಾಟು ನಡೆಸುವಂತೆ ಸಮಿತಿ ತಿಳುವಳಿಕೆ ನೀಡಿ ಕ್ರಮ ಜರುಗಿಸಿದೆ.
4.	ಹರಿಹರ	ಮುಖ್ಯ ಮಾರುಕಟ್ಟೆ ಪ್ರಾಂಗಣ	163.09	ಪ್ರಾಂಗಣದಲ್ಲಿ ವರ್ತಕರಿಗೆ ನಿವೇಶನ ಹಂಚಿಕೆ ಮಾಡಿ ನಂತರ ಅಂಗಡಿ ಗೋದಾಮು ನಿರ್ಮಾಣಗೊಮಡ ನಂತರ ವ್ಯಪಾರ ವಹಿವಾಟು ಸ್ಥಳ ಅಂತರಿಸಲಾಗುವುದು ಪ್ರಸ್ತುತ ಭಾಗಶ: ವಹಿವಾಟು ನಡೆಯುತ್ತಿದೆ.
5.	ಹುಳಿಯಾರು	ಚಿಕ್ಕನಾಯ್ಕನಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣ	15.03	ಭಾಗಶಃ ವಹಿವಾಟು ಸ್ಥಳಾಂತರಗೊಂಡಿದೆ. ಪೂರ್ಣ ವಹಿವಾಟು ಸ್ಥಳಾಂತರಿಸಲು ಕ್ರಮ ಜರುಗಿಸಲಾಗುವುದು
6.	ಯಲಬುರ್ಗಾ	ಮುಖ್ಯ ಮಾರುಕಟ್ಟೆ ಪ್ರಾಂಗಣ	35.75	ನಿವೇಶನ ಹಂಚಿಕೆ ಪ್ರಕ್ರಿಯೆ ಪೂರ್ಣ ವಹಿವಾಟು ಸ್ಥಳಾಂತರಿಸಲಗುವುದು
7.	ಕುಷ್ಟಗಿ	ತಾವರಕೆರೆ ಉಪ ಮಾರುಕಟ್ಟೆ ಪ್ರಾಂಗಣ	18.33	ವರ್ತಕರಿಗೆ ನೀಡಿರುವ ನಿವೇಶನಗಳಲ್ಲಿ ಅಂಗಡಿ-ವ-ಗೋದಾಮು ನಿರ್ಮಿಸುತ್ತಿದ್ದು. ಇವುಗಳು ಪೂರ್ಣಗೊಂಡ ನಂತರ ವ್ಯಾಪಾರ ವಹಿವಾಟು ಸ್ಥಳಾಂತರಿಸಲಾಗುವುದು.
8.	ಗುಲ್ಬರ್ಗಾ	1. ಆಳಂದ ಉಪ ಮಾರುಕಟ್ಟೆ ಪ್ರಾಂಗಣ	7.74	ನಿವೇಶನ ಹಂಚಿಕೆ ನಂತರ ವ್ಯಾಪಾರ ವಹಿವಾಟು ಸ್ಥಳಾಂತಿಸಲಾಗುವುದು
		2. ಆಫಜಲ್ ಪುರ ಮಾರುಕಟ್ಟೆ ಪ್ರಾಂಗಣ	7.78	ನಿವೇಶನ ಹಂಚಿಕೆ ನಂತರ ವ್ಯಾಪಾರ ವಹಿವಾಟು ಸ್ಥಳಾಂತರಿಸಲಾಗುವುದು
		3. ಜೇವರ್ಗಿ ಉಪ ಮಾರುಕಟ್ಟೆ ಪ್ರಾಂಗಣ	8.44	ನಿವೇಶನ ಹಂಚಿಕೆ ನಂತರ ವ್ಯಾಪಾರ ವಹಿವಾಟು ಸ್ಥಳಾಂತರಿಸಲಾಗುವುದು
		4. ಯಡ್ರಾಮಿ ಉಪ ಮಾರುಕಟ್ಟೆ ಪ್ರಾಂಗಣ	2.00	ನಿವೇಶನ ಹಂಚಿಕೆ ನಂತರ ವ್ಯಾಪಾರ ವಹಿವಾಟು ಸ್ಥಳಾಂತರಿಸಲಾಗುವುದು
9.	ಯಾದಗಿರಿ	1. ಗುರುಮಿಟಕಲ್ ಉಪ ಮಾರುಕಟ್ಟೆ	28.86	ನಿವೇಶನ ಹಂಚಿಕೆಯಾಗಿದ್ದು, ಅಂಗಡಿ-ವ-ಗೋದಾಮು ನಿರ್ಮಿಸಿ

1	2	3	4	5
		ಪ್ರಾಂಗಣ		ಕೊಂಡ ನಂತರ ವಹಿವಾಟು ಸ್ಥಳಾಂತರಿಸಲಾಗುವುದು
		2. ಸೈದಾಪುರ	23.99	ನಿವೇಶನ ಹಂಚಿಕೆಯಾಗಿದ್ದು. ಅಂಗಡಿ-ವ-ಗೋದಾಮು ನಿರ್ಮಿಸಿಕೊಂಡ ನಂತರ ವ್ಯಾಪಾರ ವಹಿವಾಟು ಸ್ಥಳಾಂತರಿಸಲಾಗುವುದು
10.	ಚಿತ್ತಾಪುರ	1. ಶಹಾಬಾದ್ ಉಪ ಮಾರುಕಟ್ಟೆ ಪ್ರಾಂಗಣ	30.50	ನಿವೇಶನ ಹಂಚಿಕೆಯಾಗಿದ್ದು, ಅಂಗಡಿ-ವ-ಗೋದಾಮು ನಿರ್ಮಿಸಿಕೊಂಡ ನಂತರ ವ್ಯಾಪಾರ ವಹಿವಾಟು ಸ್ಥಳಾಂತಿಸಲಾಗುವುದು
		2. ವಾಡಿ	2.00	ನಿವೇಶನ ಹಂಚಿಕೆ ಮಾಡಬೇಕಿರುತ್ತದೆ
		3. ನಾಲ್ವಾರ	3.20	ನಿವೇಶನ ಹಂಚಿಕೆ ಮಾಡಬೇಕಿರುತ್ತದ
		4. ಕೊಳ್ಳೂರು	1.50	ನಿವೇಶನ ಹಂಚಿಕೆ ಮಾಡಬೇಕಿರುತ್ತದ
11.	ಸುರಪುರ	1. ಹುಣಸಗಿ	45.96	ನಿವೇಶನ ಹಂಚಿಕೆ ಮಾಡಬೇಕಿರುತ್ತದ
		2. ಕೆಂಭಾವಿ	8.60	ನಿವೇಶನ ಹಂಚಿಕೆ ಮಾಡಬೇಕಿರುತ್ತದ
12.	ಚಿಂಚೋಳಿ	ಮುಖ್ಯ ಮಾರುಕಟ್ಟೆ ಪ್ರಾಂಗಣ	18.12	ನಿವೇಶನ ಹಂಚಿಕೆಯಾಗಿದ್ದು. ವರ್ತಕರು ಕಟ್ಟಡ ನಿರ್ಮಿಸಬೇಕಾಗಿದೆ.
13.	ಕಾರ್ಕಳ	ಮುಖ್ಯ ಮಾರುಕಟ್ಟೆ ಪ್ರಾಂಗಣ	110.62	ವ್ಯಾಪಾರ ವಹಿವಾಟು ಸ್ಥಳಾಂತರಕ್ಕೆ ಸಮಿತಿಯು ಕ್ರಮ ಜರುಗಿಸಿದ್ದು. ಆದಷ್ಟು ಶೀಘ್ರದಲ್ಲಿ ಪೂರ್ಣ ವಹಿವಾಟು ಸ್ಥಳಾಂತಿಸಲಾಗುವುದು.
14.	ಸುಳ್ಯ	ಮುಖ್ಯ ಮಾರುಕಟ್ಟೆ ಪ್ರಾಂಗಣ	135.32	ಭಾಗಶಃ ವಹಿವಾಟು ಸ್ಥಳಾಂತರಗೊಂಡಿದೆ. ಎಲ್ಲಾ ವರ್ತಕರಿಗೆ ಅಗತ್ಯವಾದ ಗೋದಾಮು ನಿರ್ಮಿಸಲು ಸಮಿತಿಯು ಕ್ರಮ ಜರುಗಿಸಿದ್ದು. ಇವು ಪೂರ್ಣಗೊಂಡ ನಂತರ ಸಂಪೂರ್ಣ ವಹಿವಾಟನ್ನು ಸ್ಥಳಾಂತರಿಸಲಾಗುವುದು
15.	ಪುತ್ತೂರು	ಮುಖ್ಯ ಮಾರುಕಟ್ಟೆ ಪ್ರಾಂಗಣ	264.00	ವ್ಯಾಪಾರ ವಹಿವಾಟು ಸ್ಥಳಾಂತರದ ವಿರುದ್ಧ ವರ್ತಕರು ಮಾನ್ಯ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಸ್ತುತ ಸಮಿತಿಯ ಪರವಾಗಿ ಇತ್ಯರ್ಥವಾಗಿ

1	2	3	4	5
				ರುತ್ತದೆ. ಈ ತಿಂಗಳ ಅಂತ್ಯದೊಳಗಾಗಿ ವಹಿವಾಟು ಸ್ಥಳಾಂತರಿಸಲು ಕ್ರಮ ಜರುಗಿಸಲಾಗಿದೆ.
16.	ಮಂಗಳೂರು	ಮುಖ್ಯಮಾರುಕಟ್ಟೆ ಪ್ರಾಂಗಣ	2318.53	ಭಾಗಶಃ ವಹಿವಾಟು ಸ್ಥಳಾಂತರವಾಗಿದೆ. ಪ್ರಸ್ತುತ ವಹಿವಾಟು ನಡೆಯುವ ಪ್ರದೇಶದಿಂದ ಅಲ್ಲಿಯ ವಹಿವಾಟನ್ನು ಪೂರ್ಣವಾಗಿ ಸ್ಥಳಾಂತರಿಸಲು ಸಮಿತಿಯು ಕ್ರಮ ಜರುಗಿಸಿದ್ದು ವರ್ತಕರ ಅಸಹಕಾರದಿಂದ ಸಾಧ್ಯವಾಗಿರುವುದಿಲ್ಲ. ಆದಷ್ಟು ಶೀಘ್ರದಲ್ಲಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು
17.	ಸಕಲೇಶಪುರ	ಮುಖ್ಯ ಮಾರುಕಟ್ಟೆ ಪ್ರಾಂಗಣ	93.23	ಗೋದಾಮುಗಳ ಹಂಚಿಕೆಯನ್ನು ಕಾಳ ಮೆಣಸು, ಅಂಟುವಾಳ, ಸೀಗೆಕಾಯಿ ಉತ್ಪನ್ನಗಳ ವರ್ತಕರಿಗೆ ಮಾಡಿ ಮುಂದಿನ ಸುಗ್ಗಿಯ ಕಾಲಕ್ಕೆ ವಹಿವಾಟನ್ನು ಸ್ಥಳಾಂತಿಸಲಾಗುವುದು
18.	ಸವದತ್ತಿ	ಯರಗಟ್ಟಿ ಉಪ ಮಾರುಕಟ್ಟೆ ಪ್ರಾಂಗಣ	190.00	ನಿವೇಶನಗಳ ಹಂಚಿಕೆಗೆ ಹಾಗೂ ಬೆಲೆ ನಿಗದಿ ಬಗ್ಗೆ ಕ್ರಮ ಜರುಗಿಸಿದ್ದು ಇವುಗಳನ್ನು ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಿ ನಂತರ ವ್ಯಾಪಾರ ವಹಿವಾಟು ಸ್ಥಳಾಂತರಿಸಲು ಕ್ರಮ ಜರುಗಿಸಲಾಗುವುದು
19.	ಜಮಖಂಡಿ	ತೆರದಾಳ ಉಪ ಮಾರುಕಟ್ಟೆ ಪ್ರಾಂಗಣ	15.20	ಪೇಟೆ ಕಾರ್ಯಕ್ರರ್ತಕರಿಗೆ ನಿವೇಶನ ಹಂಚಿಕೆ ಬಗ್ಗೆ ಕ್ರಮ ಜರುಗಿಸಲಾಗಿದೆ ನಿವೇಶನ ವಿತರಿಸಿ ಕಟ್ಟಡ ಕಟ್ಟಲು ಕಾಲಾವಕಾಶ ನೀಡಿ ನಂತರ ವಹಿವಾಟನ್ನು ಸ್ಥಳಾಂತರಿಸಲಾಗುವುದು
20.	ಬೈಲಹೊಂಗಲ	ಜಾನುವಾರು ಉಪ ಪ್ರಾಂಗಣ	35.00	ನೀರು ಸೌಕರ್ಯ ಒದಗಿಸುವ ಕಾರ್ಯ ಪ್ರಗತಿಯಲ್ಲಿದ್ದು. ಕಾಮಗಾರಿ ಮುಗಿದ ನಂತರ ಜಾನುವಾರು ವ್ಯವಹಾರವನ್ನು ಅಭಿವೃದ್ಧಿಪಡಿಸಿದ ಪ್ರಾಂಗಣಗಳಕ್ಕೆ ಸ್ಥಳಾಂತರಿಸಲಾಗುವುದು.

1	2	3	4	5
21.	ಹಾನಗಲ್		31.20	ಪೇಟೆ ಕಾರ್ಯಕರ್ತರು ಗೋದಾಮುಗಳನ್ನು ಇನ್ನೂ ನಿರ್ಮಿಸದೇ ಇರುವುದರಿಂದ ಸ್ಥಳಾಂತರ ಕಾರ್ಯಗೊಳ್ಳಲು ವಿಳಂಭವಾಗಿದೆ.
22.	ಹಾವೇರಿ	1. ಮಾರುಕಟ್ಟೆ ಉಪ ಪ್ರಾಂಗಣ	15.48	ನಿವೇಶನ ಹಂಚಿಕೆಗಾಗಿ ಕ್ರಮ ಜರುಗಿಸಿದ್ದು. ನಂತರ ವಹಿವಾಟು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು.
		2. ಗುತ್ತಲ ಉಪ ಮಾರುಕಟ್ಟೆ	10.90	ನಿವೇಶನ ಹಂಚಿಕೆಗಾಗಿ ಕ್ರಮ ಜರುಗಿಸಿದ್ದು, ನಂತರ ವಹಿವಾಟು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು
23.	ಕುಡಚಿ	ಹಾರೋಗೇರಿ ಉಪ ಮಾರುಕಟ್ಟೆ	19.27	ವ್ಯಾಪಾರ ವಹಿವಾಟು ಸ್ಥಳಾಂತರಿಸಲು ಪ್ರಸ್ತುತ ಸಮಿತಿ ಕ್ರಮ ಜರುಗಿಸಿರುತ್ತದೆ
24.	ನರಗುಂದ	ಮುಖ್ಯ ಮಾರುಕಟ್ಟೆ ಪ್ರಾಂಗಣ	46.77	ಭಾಗಶಃ ವಹಿವಾಟು ಸ್ಥಳಾಂತರವಾಗಿದೆ. ಪೂರ್ಣ ವಹಿವಾಟು ಸ್ಥಳಾಂತರಿಸಲು ಸಮಿತಿ ಕ್ರಮ ಜರುಗಿಸಿದೆ.
25.	ಮಹಾಲಿಂಗಾಪುರ	ಲೋಕಾಪುರ ಉಪ ಮಾರುಕಟ್ಟೆ	58.00	ಹತ್ತಿ ವಹಿವಾಟಿಗಾಗಿ ಪ್ರಾಂಗಣ ಅಭಿವೃದ್ಧಿಪಡಿಸಿದೆ. ನಿವೇಶನ ಹಂಚಿಕೆಗೆ ಕ್ರಮ ಜರುಗಿಸಿದ್ದು. ಹಂಚಿಕೆಯಾದ ನಿವೇಶನಗಳಲ್ಲಿ ಅಂಗಡಿ-ವ-ಗೋದಾಮು, ನಿರ್ಮಾಣವಾದ ನಂತರ ವ್ಯಾಪಾರ ವಹಿವಟನ್ನು ಸ್ಥಳಾಂತರಿಸಲಾಗುವುದು.
26.	ಧಾರವಾಡ	ಮುಖ್ಯ ಪ್ರಾಂಗಣದ ವಿಸ್ತೃತ ಪ್ರದೇಶ	208.00	ಪ್ರಾಂಗಣಕ್ಕೆ ಸಂಪರ್ಕ ರಸ್ತೆ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಅದು ಪೂರ್ಣಗೊಂಡ ನಂತರ ಹತ್ತಿ ವಹಿವಾಟು ಸ್ಥಳಾಂತರಿಸಲಾಗುವುದು.
27.	ಹಣ್ಣು ಮತ್ತು ತರಕಾರಿ ವಿಶೇಷ ಕೃಉಮಾಸ ಬೆಂಗಳೂರು	ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣ	2080.00	ಅಭಿವೃದ್ಧಿಪಡಿಸಿರುವ ಪ್ರಾಂಗಣದಲ್ಲಿ ನಿರ್ಮಿಸಿರುವ ಗೋದಾಮು, ಅಂಗಡಿ ಹಂಚಿಕೆಗೆ ಕ್ರಮ ಜರುಗಿಸಲಾಗಿದೆ. ಬೆಂಗಳೂರು ನಗರದ ಮಾರ್ಕೆಟ್ ಪ್ರದೇಶದಲ್ಲಿ ನಡೆಯುತ್ತಿರುವ ಹಣ್ಣಿನ

1	2	3	4	5
				ಸಗಟು ವಹಿವಾಟನ್ನು ಸ್ಥಳಾಂತರಿಸಲು ಪೂರ್ವಭಾವಿ ಸಿದ್ಧತೆಗಳು ನಡೆದಿದ್ದು ಆದಷ್ಟು ಶೀಘ್ರದಲ್ಲಿ ಪೂರ್ಣ ವಹಿವಾಟನ್ನು ಸ್ಥಳಾಂತಿಸಲಾಗುವುದು.
		ಒಟ್ಟು ವೆಚ್ಚ	**6309.04**	

ರಾಜ್ಯದಲ್ಲಿರುವ ಬಾಲ ಭವನಗಳ ಕಾರ್ಯ ವೈಖರಿ ಬಗ್ಗೆ

4226 (4843) : ಶ್ರೀ ಎ.ಎನ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲಿ ಎಲ್ಲಿ ಬಾಲ ಭವನಗಳು ಇವೆ? ಇವು ಯಾವಾಗ ಸ್ಥಾಪನೆಯಾಗಿದೆ?

ಆ) ಬಾಲ ಭವನಗಳು ನೋಂದಾಯಿತ ಸಂಸ್ಥೆಗಳಾಗಿದ್ದರೂ ಸಹ ತಪ್ಪದೆ ವಾರ್ಷಿಕ ಮಹಾ ಸಭೆ ಕರೆಯಲಾಗಿದೆಯೇ? ಇಲ್ಲವಾದರೆ ಎಷ್ಟು ವರ್ಷದಿಂದ ಕರೆದಿರುವುದಿಲ್ಲ?

ಇ) ಈ ಬಾಲ ಭವನಗಳ ಲೆಕ್ಕ ಪತ್ರಗಳನ್ನು ಪರಿಶೋಧಿಸಿ ಒಪ್ಪಲಾಗಿದೆಯೇ? ಇಲ್ಲವಾದರೆ ಈ ಆರೋಪಕ್ಕೆ ಹೊಣೆ ಯಾರು?

ಈ) ಕಳೆದ ಮೂರು ವರ್ಷಗಳಲ್ಲಿ ಬಾಲ ಭವನಗಳಿಗೆ ನೀಡಿರುವ ಅನುದಾನ ಎಷ್ಟು/ ಇದನ್ನು ಹೇಗೆ ವೆಚ್ಚ ಮಾಡಲಾಗಿದೆ?

ಉ) ಬಾಲ ಭವನದ ಹಣಕಾಸು ದುರುಪಯೋಗ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ? ಹೌದಾದರೆ ಇದರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು)

ಅ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಬಾಲ ಭವನಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಇವು ಸ್ಥಾಪನೆಯಾದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ತಪ್ಪದೆ ವಾರ್ಷಿಕ ಮಹಾಸಭೆಗಳನ್ನು ಕರೆಯಲಾಗಿದೆ.

ಇ) ವಿವಿಧ ಜಿಲ್ಲೆಗಳ ಬಾಲ ಭವನಗಳ ಲೆಕ್ಕ ಪತ್ರಗಳನ್ನು ಜಿಲ್ಲಾ ಆಡಳಿತ ವ್ಯಾಪ್ತಿಯಲ್ಲಿ ಬಾಲ ಭವನ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳ ನಿರ್ದೇಶನ ಅನ್ವಯ ದೃಢೀಕೃತ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲಾಗುತ್ತಿರುತ್ತದೆ.

ಈ) ಕಳೆದ 3 ವರ್ಷಗಳಿಂದ ಯೋಜನೆ ಮತ್ತು ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ ಬಿಡುಗಡೆಯಾದ ಅನುದಾನವು ಈ ಕೆಳಕಂಡಂತಿರುತ್ತದೆ. (ರೂ. ಲಕ್ಷಗಳಲ್ಲಿ)

ಅವಧಿ	ಯೋಜನೆ	ಯೋಜನೇತರ
2000–01	40.00	30.97

2001–02	40.00	36.86
2002–03	30.00	32.00

ಈ ವೆಚ್ಚವನ್ನು ಅನುದಾನ ವಿನಿಯೋಗದ ನಿಯಮಗಳನ್ವಯ ಮಾಡಲಾಗಿದೆ.

ಉ) ಇಲ್ಲ.

ಉದ್ಭವಿಸುವುದಿಲ್ಲ.

ವಿಧಾನಸಭಾ ಸದಸ್ಯರಾ ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4843ಕ್ಕೆ ಅನುಬಂಧರ

ಕ್ರ.ಸಂ.	ಜಿಲ್ಲೆಗಳ ಹೆಸರು	ಸ್ಥಾಪನೆ
01	ಬೆಂಗಳೂರು ನಗರ ಜಿಲ್ಲೆ	
	ರಾಜ್ಯ ಬಾಲ ಭವನ, ಬೆಂಗಳೂರು	1977
02.	ಬೆಂಗಳೂರು ಗ್ರಾಮಾಂತರ ಜಿಲ್ಲೆ	1991–98
03.	ಬಿಜಾಪುರ ಜಿಲ್ಲೆ	1996
04.	ಬಳ್ಳಾರಿ	1995
05.	ಬೆಳಗಾಂ ಜಿಲ್ಲೆ	1994
06.	ಬೀದರ್ ಜಿಲ್ಲೆ	1995
07.	ಬಾಗಲಕೋಟೆ	1997–98
08.	ಚಿಕ್ಕಮಗಳೂರು ಜಿಲ್ಲೆ	1996
09.	ಚಾಮರಾಜನಗರ ಜಿಲ್ಲೆ	1997–98
10.	ಚಿತ್ರದುರ್ಗ ಜಿಲ್ಲೆ	1997–98
11.	ದಾವಣಗೆರೆ ಜಿಲ್ಲೆ	1997–98
12.	ಧಾರವಾಡ ಜಿಲ್ಲೆ	1998
13.	ಗುಲ್ಬರ್ಗಾ ಜಿಲ್ಲೆ	1988
14.	ಗದಗ ಜಿಲ್ಲೆ	1997–98
15.	ಹಾಸನ ಜಿಲ್ಲೆ	1995
16.	ಹಾವೇರಿ ಜಿಲ್ಲೆ	1997–98
17.	ಕೋಲಾರ ಜಿಲ್ಲೆ	1995

1	2	3
18.	ಕಾರವಾರ ಜಿಲ್ಲೆ	1997
19.	ಕೊಪ್ಪಳ ಜಿಲ್ಲೆ	1997--98
20.	ಮೈಸೂರು ಜಿಲ್ಲೆ	1997
21.	ಮಂಗಳೂರು ಜಿಲ್ಲೆ	1985
22.	ಮಂಡ್ಯ ಜಿಲ್ಲೆ	1995
23.	ಮಡಿಕೇರಿ ಜಿಲ್ಲೆ	1999
24.	ರಾಯಚೂರು ಜಿಲ್ಲೆ	1998
25.	ಶಿವಮೊಗ್ಗ ಜಿಲ್ಲೆ	1986
26.	ತುಮಕೂರು ಜಿಲ್ಲೆ	1981
27.	ಉಡುಪಿ ಜಿಲ್ಲೆ	1997--98

ತುಂಗಭದ್ರಾ ಯೋಜನೆಯ ಎಡದಂಡೆ ನಾಲೆಯ ಕಾಮಗಾರಿ ಕುರಿತು

4227 (4844) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಭದ್ರ ಯೋಜನೆಯ ಎಡದಂಡೆ ನಾಲೆಯ 109 ಮೈಲಿ ಬಳಿ ಕಾಮಗಾರಿಗೆ ಮಾಡಲಾದ ಅಂದಾಜು ವೆಚ್ಚ ಎಷ್ಟು;

ಆ) ತಾಂತ್ರಿಕ ಮಂಜೂರಾತಿ ಇಲ್ಲದೆ ಈ ಕಾಮಗಾರಿ ನಿರ್ವಹಿಸಲು ತೀರ್ಮಾನ ತೆಗೆದುಕೊಂಡವರು ಯಾರು;

ಇ) ಈ ಕಾಮಗಾರಿಯನ್ನು ನೇರವಾಗಿ ಒಪ್ಪಿಸಿದ ಕಾರಣ ಉಂಟಾದ ನಷ್ಟ ಎಷ್ಟು; ಇದನ್ನು ಹೇಗೆ ವಸೂಲಿ ಮಾಡಲಾಗಿದೆ;

ಈ) ಸರ್ಕಾರವು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಎಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ತುಂಗಭದ್ರಾ ಎಡದಂಡೆ ಕಾಲುವೆ ಮೈಲು 109 ರಲ್ಲಿ ಸಮತೋಲನಾ ಜಲಾಶಯದ ಕಾಮಗಾರಿಗೆ ಈವರೆಗೆ ರೂ. 39.68 ಕೋಟಿ ವೆಚ್ಚ ಮಾಡಲಾಗಿದ್ದು, ಇದರಲ್ಲಿ ರೂ. 15.15 ಕೋಟಿಗಳನ್ನು ಭೂ ಸ್ವಾಧೀನ ಪ್ರಕ್ರಿಯೆಗೆ ವಿನಿಯೋಗಿಸಲಾಗಿದೆ.

ಇ) ಈ ಕಾಮಗಾರಿ ಮತ್ತು ತುಂಗಭದ್ರಾ ಎಡದಂಡೆ ಕಾಲುವೆಯ ಆಧುನೀಕರಣ ಕಾಮಗಾರಿಗೆ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ, ದಿನಾಂಕ: 5--6--1996ರಲ್ಲಿ ಆಡಳಿತಾತ್ಮಕ-

ಮಂಜೂರಾತಿ ನೀಡಿದ್ದು, ನಂತರ 1998ರಲ್ಲಿ ಮುಖ್ಯ ಇಂಜಿನಿಯರ್, ತುಂಗಭದ್ರಾ ಯೋಜನಾ ವಲಯ, ಮುನಿರಾಬಾದ್ ಇವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ) ಸದರಿ ಕಾಮಗಾರಿಯನ್ನು ಸರ್ಕಾರದ ಆದೇಶದಲ್ಲಿ ಸೂಚಿಸಿದ ಗುತ್ತಿಗೆದಾರರಿಗೆ ವಹಿಸಿ ಕೆಲಸ ಪೂರ್ಣಗೊಳಿಸಲಾಗಿದೆ. ಮಹಾಲೇಖಪಾಲರು ಈ ಕಾಮಗಾರಿ ನಿರ್ವಹಿಸುವಲ್ಲಿ ಹೆಚ್ಚುವರಿ ಹಣ ಪಾವತಿಯಾಗಿರುವ ಬಗ್ಗೆ ವರದಿ ನೀಡಿದ್ದಾರೆ. ಈ ಬಗ್ಗೆ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

ಈ) ವರದಿಯನ್ನು ಪರಿಶೀಲಿಸಿ ಕ್ರಮ ಜರುಗಿಸಲಾಗುವುದು

ರಾಜ್ಯದಲ್ಲಿ ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿಯ ಬಗ್ಗೆ

4228 (4952) : ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಜಿಲ್ಲಾ ಮಟ್ಟದಲ್ಲಿರುವ ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ 1999 ರಿಂದ 2003ರ ಅಂತ್ಯದವರೆಗೆ ವಿವಿಧ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಲಾಗುವುದು?

ಆ) ಮಾಡಿದ್ದರೆ, ನಿಯಮಗಳು, ವರ್ಗಾವಾರು ನೇಮಕಗೊಂಡಿರುವ ಹುದ್ದೆಗಳ ವಿವರವನ್ನು ಹಾಗೂ ಮೀಸಲಾತಿಯ ವಿವರಗಳನ್ನು ಜಿಲ್ಲಾವಾರು ನೀಡುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) 1999 ರಿಂದ 2003ರ ಅವಧಿಯಲ್ಲಿ (ತಹಲ್‌ವರೆಗೆ) 13 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು 659 ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿರುತ್ತವೆ (ತಃಖ್ತೆ ಲಗತ್ತಿಸಿದೆ)

ಆ) ಮೈಸೂರು ಮತ್ತು ಚಾಮರಾಜನಗರ ಡಿ.ಸಿ.ಸಿ. ಬ್ಯಾಂಕ್‌ನ್ನು ಹೊರತುಪಡಿಸಿ ಉಳಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಮೀಸಲಾತಿ ನಿಯಮಗಳನ್ನು ಪಾಲಿಸಿವೆ, ಮೈಸೂರು ಮತ್ತು ಚಾಮರಾಜ ನಗರ ಡಿ.ಸಿ.ಸಿ ಬ್ಯಾಂಕು ಗೌರವ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 7475 93ಗೆ ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಮೀಸಲಾತಿ ನಿಯಮಗಳನ್ನು ಅನುಸರಿಸಿರುವುದಿಲ್ಲ. (ತಃಖ್ತೆ ಲಗತ್ತಿಸಿದೆ)

ತಃಖ್ತೆ

ರಾಜ್ಯದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪೈಕಿ 1999 ರಿಂದ 2003 ತಹಲ್‌ವರೆಗೆ ನೇಮಕಾತಿ ಮಾಡಿಕೊಂಡಿರುವ ಸಿಬ್ಬಂದಿ ವಿವರ

ಜಿಲ್ಲಾ ಕೇಂದ್ರ ಬ್ಯಾಂಕಿನ ಹೆಸರು

ಕ್ರ ಸಂ.	ಹುದ್ದೆಯ ವಿವರ	ಬೆಂಗಳೂರು	ತುಮಕೂರು	ಶಿವಮೊಗ್ಗ	ಚಿತ್ರದುರ್ಗ	ಕೋಲಾರ	ಮೈಸೂರು	ಹಾಸನ	ಕೊಡಗು	ದಕ್ಷಿಣ ಕನ್ನಡ	ಬೆಳಗಾಂ	ವಿಜಾಪುರ	ಧಾರವಾಡ	ಕೆನರಾ ಡಿಸಿಸಿ
1	2	3	4	5	6	7	8	9	10	11	12	13	14	15
1)	ಚಾಲಕರು	2	4	1	1	1	–	1	–	–	–	5	–	–
2)	ಹಿರಿಯ ಶಾಖಾಧಿಕಾರಿ	–	4	–	–	–	–	–	–	–	–	–	–	–
3)	ಕಿರಿಯ ಶಾಖಾಧಿಕಾರಿ	–	5	–	–	–	–	–	–	–	–	–	–	–
4)	ಪ್ರಥಮ ದರ್ಜೆ ಗುಮಾಸ್ತ	–	13	–	–	1	–	–	–	1	–	65	–	–
5)	ದ್ವಿತೀಯ ದರ್ಜೆ ಗುಮಾಸ್ತ	–	31	47	40	–	32	45	9	3	1	–	112	6
6)	ಕಂಪ್ಯೂರಟ್ ಪ್ರೋಗ್ರಾಮರ್	–	1	–	–	–	–	2	–	1	–	2	–	–
7)	ಶೀಘ್ರಲಿಪಿಗಾರರು	–	3	–	–	–	–	1	–	–	–	–	–	–
8)	ಸಹಾಯಕರು	–	21	23	2	–	7	15	6	11	–	53	70	–
9)	ರಾತ್ರಿ ಕಾವಲುಗಾರರು	–	2	–	–	–	–	–	–	–	–	–	–	–
10)	ಬೆರಳಚ್ಚುಗಾರರು	–	–	1	1	–	–	2	–	2	–	–	–	–
11)	ದಫೇದಾರ	–	–	1	–	–	–	–	–	–	–	–	–	–
12)	ಜಲಗಾರರು	–	–	2	–	–	–	–	–	–	–	–	–	–
	ಒಟ್ಟು	2	84	75	44	2	39	66	15	18	1	125	182	6

ತಃಖ್ತೆ

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ವರ್ಗಾವಾರು ನೇಮಕಗೊಂಡಿರುವ ವಿವರ

ಕ್ರಮ ಸಂ.	ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಹೆಸರು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪ್ರ ವರ್ಗ –1	ಪ್ರವರ್ಗ 2(2)	2(ಬಿ)	ಪ್ರವರ್ಗ 3 (ಅ)	3(ಬಿ)	ಸಾಮಾನ್ಯ ಅಭ್ಯರ್ಥಿ	ಒಟ್ಟು	ಷರಾ
1.	ಬೆಂಗಳೂರು	–	–	–	–	–	–	–	02	02	
2.	ಚಿತ್ರದುರ್ಗ	06	01	03	07	03	02	03	19	44	
3.	ಶಿವಮೊಗ್ಗ	15	01	03	10	03	03	04	36	75	
4.	ಕೋಲಾರ	02	–	–	–	–	–	–	–	02	
5.	ತುಮಕೂರು	17	05	03	09	02	04	–	44	84	
6.	ಮೈಸೂರು	01	–	–	–	–	–	–	38	39	ಮೀಸಲಾತಿ ನಿಯಮ
7.	ಹಾಸನ	11	03	03	08	02	02	03	34	66	ವನ್ನು ಅನುಸರಿಸಿರುವುದಿಲ್ಲ.
8.	ಕೊಡಗು	02	–	–	01	01	01	02	08	15	
9.	ದಕ್ಷಿಣ ಕನ್ನಡ	03	02	–	02	–	02	–	09	18	ಮೀಸಲಾತಿ ನಿಯಮ
10.	ಬೆಳಗಾಂ	01	–	–	–	–	–	–	–	01	ವನ್ನು ಪಾಲಿಸಿದೆ.
11.	ವಿಜಾಪುರ	21	06	05	18	05	04	05	61	125	
12.	ಧಾರವಾಡ	27	06	07	27	09	05	08	93	182	
13.	ಶಿರಸಿ (ಕೆನರಾ ಡಿಸಿಸಿಬಿ)	01	–	–	01	01	–	–	03	05	

ಅಮರ್ಜಾ ಎಡ ಮತ್ತು ಬಲದಂಡೆ ಕಾಲುವೆಯ ಕಾಮಗಾರಿಗಳನ್ನು ಪೂರ್ಣಗೊಳಿಸುವುದರ ಬಗ್ಗೆ

4229 (4837) : ಶ್ರೀ ಗುತ್ತೇದಾರ್ ಸುಬಾಶ್ ರುಕ್ಕಯ್ಯ (ಆಳಂದ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಮರ್ಜಾ ಎಡ ಮತ್ತು ಬಲದಂಡೆ ಕಾಲುವೆಯ ಕಾಮಗಾರಿಯು ಅರ್ಧಕ್ಕೆ ನಿಂತಿರುವುದು ನಿಜವೇ? ಹಾಗಿದ್ದಲ್ಲಿ ಅದನ್ನು ಯಾವಾಗ ಮುಗಿಸಲಾಗುವುದು?

ಆ) ಅಮರ್ಜಾ ಎಡ ಮತ್ತು ಬಲದಂಡೆ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಯಾವಾಗ ನೀರು ಸರಬರಾಜು ಮಾಡಲಾಗುವುದು?

ಇ) ಅಮರ್ಜಾ ಗುತ್ತಿಗೆದಾರರ ಬಾಕಿ ಉಳಿದಿರುವ ಬಿಲ್ಲು ಯಾವಾಗ ಸಂದಾಯ ಮಾಡಲಾಗುವುದು?

ಶ್ರೀ ಹೆಚ್. ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) ಅಮರ್ಜಾ ಯೋಜನೆಯ ಬಲದಂಡೆ ಕಾಲುವೆಯು ಒಟ್ಟು 45 ಕಿ.ಮೀ ಉದ್ದವಿರುತ್ತದೆ. ಕಾಮಗಾರಿಯ ಇತ್ತೀಚಿನ ಹಂತ ಈ ಕೆಳಗಿನಂತಿದೆ.

ಬಲದಂಡೆ ಕಾಲುವೆ ಒಟ್ಟು ಉದ್ದ 45 ಕಿ.ಮೀ:

1) ಕಿ.ಮೀ 0.00 ಯಿಂದ ಕಿ.ಮೀ 12.00 ವರೆಗೆ ಕಾಮಗಾರಿಗಳು ಪೂರ್ಣಗೊಂಡಿವೆ.

2) ಕಿ.ಮೀ. 12.00 ಯಿಂದ ಕಿ.ಮೀ. 45.00 ವರೆಗೆ (ರೈಲ್ವೇ ಕ್ರಾಸಿಂಗ್ ನಿರ್ಮಾಣ ಹೊರತುಪಡಿಸಿ) ಪ್ರಗತಿಯಲ್ಲಿವೆ. ರೈಲ್ವೇ ಕ್ರಾಸಿಂಗ್ ನಿರ್ಮಾಣಕ್ಕಾಗಿ ಬೇಕಾಗಿರುವ ಹಣವನ್ನು ರೈಲ್ವೇ ಇಲಾಖೆಗೆ ನೀಡಲಾಗಿದ್ದು ಅವರಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ಎಡದಂಡೆ ಕಾಲುವೆ ಒಟ್ಟು ಉದ್ದ 55 ಕಿ.ಮೀ :

1) ಕಿ.ಮೀ. 0.00 ಯಿಂದ 18.00 ವರೆಗೆ ಕಾಮಗಾರಿಗಳು ಪೂರ್ಣಗೊಂಡಿವೆ.

2) ಕಿ.ಮೀ. 18.00 ರಿಂದ 55.00 ವರೆಗೆ ಕೆಲಸಗಳು ಪ್ರಗತಿಯಲ್ಲಿವೆ (ರೈಲ್ವೇ ಕ್ರಾಸಿಂಗ್ ನಿರ್ಮಾಣದ ಕಾಮಗಾರಿ ಹೊರತುಪಡಿಸಿ) ರೈಲ್ವೇ ಕ್ರಾಸಿಂಗ್ ನಿರ್ಮಾಣಕ್ಕಾಗಿ ಬೇಕಾಗಿರುವ ಹಣವನ್ನು ರೈಲ್ವೇ ಇಲಾಖೆಗೆ ನೀಡಲಾಗಿದ್ದು ಅವರಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ.

2003–04ನೇ ಸಾಲಿನಲ್ಲಿ ಅವಶ್ಯಕವಿರುವ ಹಣಕಾಸನ್ನು ಒದಗಿಸಿಕೊಂಡು ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಆ) ಈ ಪ್ರಸಕ್ತ ಸಾಲಿನಲ್ಲಿ ಎಡ ಮತ್ತು ಬಲದಂಡೆ ಕಾಲುವೆಯಲ್ಲಿ ಪ್ರಾರಂಭಿಕ 10 ಕಿ.ಮೀ ವರೆಗೆ ನೀರನ್ನು ಹರಿಸಲು ಯೋಜಿಸಿದ್ದು. 2800 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

ಬಾಕಿ 7739 ಹೆಕ್ಟೇರ್ ಪ್ರದೇಶದ ನೀರಾವರಿಯನ್ನು ವಿತರಣಾ ಕಾಲುವೆ ಹಾಗೂ ಹೊಲಗಾಲುವೆಗಳನ್ನು ಪೂರ್ಣಗೊಳಿಸಿ 2003–04 ನೇ ಸಾಲಿನಲ್ಲಿ ಕಲ್ಪಿಸಲಾಗುವುದು.

ಇ) ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿಗಳನ್ನು ಇಲಾಖೆಯ ವಿಚಕ್ಷಣಾ ದಳವು ಪರಿಶೀಲಿಸಿ ನೀಡಿರುವ ವರದಿಯನ್ನು ಆಧರಿಸಿ ಬಿಲ್ಲು ಪಾವತಿಯನ್ನು ತಡೆಹಿಡಿದಿದ್ದು, ಪರಿಶೀಲಿಸಿ ಆದ್ಯತೆ ಮೇಲೆ ಸಂದಾಯ ಮಾಡಲಾಗುವುದು.

ಜಲಾನಯನ ಇಲಾಖೆಯ ಅವಶ್ಯಕತೆಯ ಬಗ್ಗೆ

4230 (4845) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಲಾನಯನ ಇಲಾಖೆಯ ಅವಶ್ಯಕತೆ ಇದೆಯೆಂದು ಸರ್ಕಾರ ಭಾವಿಸಿದೆಯೆ?

ಆ) ಹಾಗಾದರೆ ಈ ಇಲಾಖೆ ಕಳೆದ 2 ವರ್ಷಗಳಲ್ಲಿ ಯಾವ ಯಾವ ಉದ್ದೇಶಗಳಿಗೆ ಎಷ್ಟು ಹಣ ನೀಡಲಾಗಿದೆ (ವರ್ಷಾವಾರು ವಿವರ ನೀಡುವುದು)

ಇ) ತಾಲ್ಲೂಕು ಮಟ್ಟದಲ್ಲಿ ಜಲಾನಯನ ಇಲಾಖೆಗೆ ಎಷ್ಟು ಅಧಿಕಾರಿಗಳನ್ನು ಮತ್ತು ನೌಕರರನ್ನು ಒದಗಿಸಲಾಗಿದೆ. (ವೃಂದವಾರು ವಿವರ ನೀಡುವುದು) ತಾಲ್ಲೂಕು ಮಟ್ಟದ ಇಲಾಖೆಯ ಮುಖ್ಯಸ್ಥರು ಯಾರು? ಅಧಿಕಾರಿ ಮತ್ತು ನೌಕರರ ಕೆಲಸ ಕಾರ್ಯಗಳೇನು? ಅವರ ಕೇಂದ್ರಸ್ಥಾನ ಯಾವುದು? ನೌಕರರಿಗೆ ಸಾಕಷ್ಟು ಕೆಲಸಗಳಿವೆಯೆ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಹೌದು.

ಆ) ಕಳೆದೆರಡು ವರ್ಷಗಳ ಅವಧಿಯಲ್ಲಿ ನೀಡಲಾಗಿರುವ ಹಣದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಇ) ಜಲಾನಯನ ಇಲಾಖೆಗೆ ತಾಲ್ಲೂಕು ಮಟ್ಟದಲ್ಲಿ ಒಟ್ಟು 13 ಸಿಬ್ಬಂದಿಯನ್ನು ಒದಗಿಸಲಾಗಿದ್ದು ಇದರ ವೃಂದವಾರು ವಿವರಗಳು ಹೀಗಿವೆ.

	ವೃಂದ	ಹುದ್ದೆಗಳ ಸಂಖ್ಯೆ
1.	ಕೃಷಿ ಅಧಿಕಾರಿ	1
2.	ಸಹಾಯಕ ಕೃಷಿ ಅಧಿಕಾರಿ	1
3.	ಕೃಷಿ ಸಹಾಯಕರು	6
4.	ತೋಟಗಾರರು	1
5.	ಅರಣ್ಯ ರಕ್ಷಕರು	3
6.	ಅರಣ್ಯ ಪಾಲಕರು	1
	ಒಟ್ಟು	13

ಇವರುಗಳು ಜಿಲ್ಲೆಯ ಉಪ ವಿಭಾಗೀಯ ಮಟ್ಟದ ಘಟಕ ಮುಖ್ಯಸ್ಥರುಗಳಾದ ಸಹಾಯಕ ಕೃಷಿ ನಿರ್ದೇಶಕರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಸಹಾಯಕ ತೋಟಗಾರಿಕಾ ನಿರ್ದೇಶಕರು ಇವರ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಇವರುಗಳು ಕೃಷಿ ಅಧಿಕಾರಿಗಳ ನೇತೃತ್ವದ ತಂಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರುಗಳು

ಜಲಾನಯನ ಅಭಿವೃದ್ಧಿ ಇಲಾಖೆಯು ಆಯಾ ಘಟಕಗಳ ಕಾಮಗಾರಿಗಳ ನಿರ್ವಹಣೆ ಮತ್ತು ಉಸ್ತುವಾರಿಯನ್ನು ಕೈಗೊಳ್ಳುತ್ತಿದ್ದಾರೆ. ಇವರುಗಳ ಕೇಂದ್ರಸ್ಥಾನ ತಾಲ್ಲೂಕು ಕೇಂದ್ರವಾಗಿರುತ್ತದೆ. ಇವರುಗಳಿಗೆ ಸಾಕಷ್ಟು ಕೆಲಸಗಳಿವೆ.

ನಮೂನೆ -1

2001-02 ಮತ್ತು 2002 ನೇ ಸಾಲಿಗೆ ಜಲಾನಯನ ಅಭಿವೃದ್ಧಿ ಇಲಾಖೆಗೆ ನೀಡಲಾದ ಹಣದ ವಿವರ

(ಹಣ ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ಯೋಜನೆಯ ಹೆಸರು	2001-02ನೇ ಸಾಲಿಗೆ ನೀಡಲಾದ ಹಣ	2002-03ನೇ ಸಾಲಿಗೆ ನೀಡಲಾದ ಹಣ
	ಕೇಂದ್ರ ಪುರಸ್ಕೃತ ಯೋಜನೆ		
1.	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ	1917.43	891.01
2.	ನದಿ ಕಣಿವೆ ಯೋಜನೆ	970.718	1557.24
3.	ಉಪ್ಪು ಮತ್ತು ಕ್ಷಾರೀಯ ನೀರು ಆವೃತ ಪ್ರದೇಶಾಭಿವೃದ್ಧಿ	0.00	149.00
	ಕೇಂದ್ರ ಪುರಸ್ಕೃತ ಯೋಜನೆಯ ಒಟ್ಟು	2888.15	2597.25
	ರಾಜ್ಯ ವಲಯ		
4.	ಜಲಾನಯನ ಅಭಿವೃದ್ಧಿ ಇಲಾಖೆ ಸಿಬ್ಬಂದಿ		
	ಅ) ಯೋಜನೆ	966.81	94.00
	ಆ) ಯೋಜನೇತರ	53.21	57.74
5.	ಜಲಾನಯನ ತರಬೇತಿ ಕೇಂದ್ರ		
	ಅ) ಯೋಜನೆ	0.00	4.00
	ಆ) ಯೋಜನೇತರ	46.88	55.65
	ರಾಜ್ಯ ವಲಯ ಒಟ್ಟು	1066.90	211.39
	ಹೊರ ನೆರವಿನ ಯೋಜನೆ		
6.	ಸುಜಲ ಜಲಾನಯನ ಯೋಜನೆ	129.88	882.40
7.	ನಬಾರ್ಡ್	0.00	101.54
8.	ಕೆಕವಾಡ	500.0	500.00
	ಹೊರ ನೆರವಿನ ಯೋಜನೆಯ ಒಟ್ಟು	629.88	1483.94
	ಒಟ್ಟು ಮೊತ್ತ	4584.93	4292.58

ಧಾರವಾಡದ ಕೆ.ಸಿ.ಸಿ. ಬ್ಯಾಂಕಿನ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ

4231 (4229) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಕೆ.ಸಿ.ಸಿ. ಬ್ಯಾಂಕಿನ ಪುನಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಕೆ.ಸಿ.ಸಿ. ಬ್ಯಾಂಕಿನ ಪುನಶ್ಚೇತನಕ್ಕೆ ಕೈಗೊಂಡ ಕ್ರಮಗಳು :-

1) ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಗಾರರನ್ನು ನೇಮಕ ಮಾಡಿದೆ.

2) ಬ್ಯಾಂಕಿನ ಸಾಲ ವಸೂಲಾತಿಯು ಬಹಳ ಕಡಿಮೆಯಾಗಿದ್ದು ಠೇವಣಿದಾರರಿಗೆ ಠೇವಣಿ ವಾಪಸ್ಸು ಮಾಡಲು ಕೊರತೆ ಉಂಟಾಗಿದ್ದು ಸರ್ಕಾರದ ಹಾಗೂ ಅಪೆಕ್ಸ್ ಬ್ಯಾಂಕಿನ ಪ್ರಯತ್ನದ ಫಲವಾಗಿ ಬ್ಯಾಂಕು ರೂ. 41.37 ಕೋಟಿ ಸಂಪನ್ಮೂಲಗಳನ್ನು ಸಂಗ್ರಹಿಸಿದೆ.

3) 1999-2000ದ ಸಾಲಿನಲ್ಲಿ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲಾಗಿತ್ತು. ಇದರ ಬಾಬ್ತು ನಬಾರ್ಡಿನಿಂದ ಪುನರ್‌ಧನ ರೂ. 19.10 ಕೋಟಿಯನ್ನು ಪಡೆಯಲು ಸರ್ಕಾರ ರೂ. 6.84 ಕೋಟಿಯನ್ನು ದಿನಾಂಕ: 11.4.2002 ರಂದು ಮಂಜೂರು ಮಾಡಿದ್ದು ಈಗಾಗಲೇ ಅಪೆಕ್ಸ್ ಬ್ಯಾಂಕಿಗೆ ಈ ಹಣವನ್ನು ಬಿಡುಗಡೆ ಮಾಡಲಾಗಿದೆ.

4. ನಬಾರ್ಡಿನ "ಏಕ ಕಾಲಿಕ" ಸಾಲ ತೀರುವಳಿ ಯೋಜನೆಯನ್ನು ಅನುಷ್ಠಾನಗೊಳಿಸಲು ಬ್ಯಾಂಕಿಗೆ ಅನುಮತಿಯನ್ನು ನೀಡಲಾಗಿದೆ.

5. ಬ್ಯಾಂಕು ಬಿ.ಆರ್. ಆಕ್ಟ್ ಕಲಂ 11(1) ರಿಂದ ಹೊರಬರಲು ಹಾಗೂ ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲವಾಗುವಂತೆ ವಿನಾಯ್ತಿ ನೀಡಲು ಆರ್.ಬಿ.ಐ.ಗೆ ಶಿಫಾರಸ್ಸು ಮಾಡಿದೆ.

6. ಲಾಭ ಗಳಿಸಿದ ಆಸ್ತಿಗಳನ್ನು ನಬಾರ್ಡ್‌ನ ಓ.ಟಿ.ಎಸ್. ಯೋಜನೆಯಡಿಯಲ್ಲಿ ಶೇ 8.16 ರ ಬಡ್ಡಿ ದರದಲ್ಲಿ ವಸೂಲಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.

7. ಪುನಶ್ಚೇತನ ಕೆಲಸಗಳನ್ನು ತ್ವರಿತಗೊಳಿಸಲು ಹಾಗೂ ಸೂಕ್ತ ಸಲಹೆ ನೀಡಲು ಸಲಹಾ ಸಮಿತಿಯನ್ನು ರಚಿಸಲಾಗಿದೆ.

8. ಪಟ್ಟಣ ಬ್ಯಾಂಕುಗಳು ರೂ. 161.46 ಕೋಟಿ ಠೇವಣಿಯನ್ನು ಹೊಂದಿದ್ದು ಆರ್.ಬಿ.ಐ ಸೂಚನೆ ಪ್ರಕಾರ ನೆಟ್ ಡಿಮ್ಯಾಂಡ್ ಅಂಡ್ ವೈರಿ ಲಯಬಲಿಟಿಯ ಶೇ.11 ರಿಂದ 15 ರಷ್ಟನ್ನು ಸಕಾರದ ಭದ್ರತೆಯಲ್ಲಿ ತೊಡಗಿಸಬೇಕಾಗಿದ್ದು ಇದಕ್ಕೆ ಕೆ.ಸಿ.ಸಿ. ಬ್ಯಾಂಕಿನಿಂದ ಠೇವಣಿಯನ್ನು ವಾಸ್ಸು ಪಡೆದಲ್ಲಿ ಅದಕ್ಕೆ ಇನ್ನೂ ಹೆಚ್ಚಿನ ಆರ್ಥಿಕ ಮುಗ್ಗಟ್ಟು ಆಗುತ್ತದೆಂಬ ಕಾರಣದಿಂದ ಒಂದು ವರ್ಷದ ಅವಧಿಗೆ ವಿನಾಯ್ತಿ ಕೋರಲಾಗಿದೆ.

9. ಎಲ್ಲಾ ಸುಸ್ತಿ ಸಾಲಗಳನ್ನು ವಸೂಲಿ ಮಾಡಲು ಕಾನೂನು ರೀತ್ಯಾ ಎಲ್ಲಾ ಕ್ರಮ ಕೈಗೊಳ್ಳಲಾಗಿದೆ.

10. ಅಪೆಕ್ಸ್ ಬ್ಯಾಂಕಿನಿಂದ ಅಲ್ಪಾವಧಿ ಪತ್ತಿನ ಮಿತಿ ರೂ. 75.00 ಕೋಟಿಯನ್ನು ಮಂಜೂರು ಮಾಡಲಾಗಿದೆ.

11. ಸಾಲದ ಅಂತರ ಯೋಜನೆಯಡಿಯಲ್ಲಿ ದಿನಾಂಕ 31.3.2002 ರ ವರೆಗೆ ಸರ್ಕಾರವು ರೂ. 516.07 ಲಕ್ಷಗಳನ್ನು ತನ್ನ ಪಾಲಾಗಿ ನೀಡಿದೆ. ಇದರಲ್ಲಿ ಧಾರವಾಡ ಕೆ.ಸಿ.ಸಿ. ಬ್ಯಾಂಕಿಗೆ ರೂ. 103.79 ಲಕ್ಷ ನೀಡಲಾಗಿದೆ.

ರಾಜ್ಯದ ಅಂಗನವಾಡಿ ಮೇಲ್ವಿಚಾರಕಿಯರ ಹುದ್ದೆಯ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರವನ್ನು ಕುರಿತು.

4233 (4872) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗನವಾಡಿ ಮೇಲ್ವಿಚಾರಕಿಯರ ಹುದ್ದೆಗೆ ಎಷ್ಟು ಜನರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ, ಜಿಲ್ಲಾವಾರು ವಿವರ ನೀಡುವುದು?

ಆ) ನೇಮಕಾತಿ ಮಾಡಿಕೊಂಡಿದ್ದರೆ ಯಾವ ಆಧಾರದ ಮೇಲೆ ಮಾಡಿಕೊಳ್ಳಲಾಗಿದೆ. ವಿವರ ನೀಡುವುದು.

ಇ) ಈ ನೇಮಕಾತಿಯಲ್ಲಿ ಅವ್ಯವಹಾರ ನಡೆದಿರುವುದಾಗಿ ವ್ಯಾಪಕವಾದ ದೂರುಗಳು ಬಂದಿದ್ದು, ಇದು ಸರ್ಕಾರಕ್ಕೆ ತಿಳಿದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಇನ್ನೂ ನೇಮಕಾತಿ ಮಾಡಿಕೊಂಡಿರುವುದಿಲ್ಲ. ಇಲಾಖೆಯಲ್ಲಿ ಖಾಲಿ ಇರುವ 1325 ಅಂಗನವಾಡಿ ಮೇಲ್ವಿಚಾರಕಿಯರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದ್ದು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ನಂತರ ನೇಮಕಾತಿ ಮಾಡಿಕೊಳ್ಳಲಾಗುವುದು. ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಆ) ನೇಮಕಾತಿ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ವಿಶೇಷ ನೇಮಕಾತಿ ನಿಯಮಗಳನ್ವಯ ಅರ್ಹತೆ ಹಾಗೂ ಮೀಸಲಾತಿ ಆಧಾರದ ಮೇಲೆ ಮಾಡಲಾಗುತ್ತಿದೆ.

ಇ) ಯಾವುದೇ ದೂರುಗಳು ಇರುವುದಿಲ್ಲ. ಹಾಗೂ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಹಿರೇಹಳ್ಳ ಯೋಜನೆಯ ಖರ್ಚು ವೆಚ್ಚದ ಬಗ್ಗೆ

4234 (4934) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿರೇಹಳ್ಳ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು. ಈ ಯೋಜನೆಗೆ ನಿಗದಿಪಡಿಸಲಾಗಿದ್ದ ಹಣ ಎಷ್ಟು?

ಆ) ಈ ಯೋಜನೆಯಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು;

ಇ) ಯೋಜನೆಯು ಪ್ರಾರಂಭವಾಗಿ ಇಷ್ಟು ವರ್ಷಗಳಾಗಿದ್ದರೂ ಮುಗಿಸದಿರಲು ಕಾರಣವೇನು; ಈ ಯೋಜನೆಗಾಗಿ ಇಲ್ಲಿಯವರೆಗೂ ಖರ್ಚು ಮಾಡಿರುವ ಹಣ ಎಷ್ಟು;

ಈ) ಇಷ್ಟೊಂದು ಹಣ ಖರ್ಚು ಮಾಡಲು ಕಾರಣವೇನು; ಈ ಯೋಜನೆಯನ್ನು ಯಾವಾಗ ಮುಗಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಹಿರೇಹಳ್ಳ ಯೋಜನೆಯನ್ನು 1977 ರಲ್ಲಿ ಪ್ರಾರಂಭಿಸಲಾಯಿತು. ಯೋಜನೆಯ ಮೂಲ ಅಂದಾಜು ವೆಚ್ಚ ರೂ. 635.00 ಲಕ್ಷಗಳು 1977–78 ರ ದರಗಳರತೆ) ಯೋಜನೆಯ ಪ್ರಸ್ತುತ ಅಂದಾಜು ವೆಚ್ಚ ರೂ. 175.00 ಕೋಟಿಗಳು (2002–03 ನೇ ಸಾಲಿನ ದರಗಳಂತೆ)

ಆ) ಈ ಯೋಜನೆಯು ಪೂರ್ಣಗೊಂಡ ನಂತರ 20,000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಿದ್ದು ಜೂನ್ 2003 ರ ತನಕ 5,950 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ.

ಇ) ಈ ಯೋಜನೆಗೆ 1977 ರಿಂದ 1992 ರ ವರೆಗೆ ಅನುದಾನದ ಕೊರತೆಯಿದ್ದು ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುತ್ತದೆ. ಯೋಜನೆಗೆ ಜೂನ್ 2003 ರ ಅಂತ್ಯದವರೆಗೆ ರೂ. 162.86 ಕೋಟಿ ವೆಚ್ಚ ಮಾಡಲಾಗಿದೆ.

ಈ) ವಿನ್ಯಾಸದಲ್ಲಿನ ಬದಲಾವಣೆ, ಭೂಸ್ವಾದೀನದಲ್ಲಿನ ಹೆಚ್ಚಳ ಮತ್ತು ಆಯಾ ವರ್ಷದ ದರಪಟ್ಟಿಯ ಹೆಚ್ಚಳಗಳು ಈ ಯೋಜನೆಯ ಅಂದಾಜಿನ ಮೊತ್ತ ಹೆಚ್ಚಳವಾಗಲು ಕಾರಣವಾಗಿರುತ್ತವೆ. ಈಗ ಈ ಯೋಜನೆಯನ್ನು ಎ.ಐ.ಬಿ.ಪಿ. ಕಾರ್ಯಕ್ರಮದಡಿಯಲ್ಲಿ "ತ್ವರಿತಗತಿ"ಯಲ್ಲಿ ತೆಗೆದುಕೊಳ್ಳಲಾಗಿದ್ದು ಡಿಸೆಂಬರ್ 2003 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಕಲ್ಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಲಂಬಾಣಿ ತಾಂಡಾಗಳಲ್ಲಿ ಶಿಶುಗಳ ಮಾರಾಟದ ಬಗ್ಗೆ

4235 (4935) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಲಂಬಾಣಿ ತಾಂಡಾಗಳಲ್ಲಿ ನಡೆಯುತ್ತಿದ್ದ ಶಿಶು ಮಾರಾಟವನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆಯೇ?

ಆ) ನಿಲ್ಲಿಸಲಾಗಿದ್ದರೆ, ಈ ತಾಂಡಾಗಳ ಅಭಿವೃದ್ಧಿಗೆ ನಿಗದಿಪಡಿಸಲಾಗಿದ್ದ ಹಣವೆಷ್ಟು?

ಇ) ಈ ತಾಂಡಾಗಳನ್ನು ಅಭಿವೃದ್ಧಿಗೊಳಿಸಲಾಗಿದೆಯೇ? ಹಾಗಿದ್ದರೆ ಖರ್ಚುಮಾಡಿರುವ ಹಣವೆಷ್ಟು?

ಈ) ಈ ವಾತಾವರಣಗಳನ್ನು ಅಭಿವೃದ್ಧಿಗೊಳಿಸಲು ನೀಡಿದ್ದ ಭರವಸೆಯು ಈಡೇರದಿರುವುದು ನಿಜವೇ?

ಉ) ಹಾಗಿದ್ದರೆ, ಸುಳ್ಳು ಆಶ್ವಾಸನೆ ನೀಡಿದಂತಾಗಿದ್ದು, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾವುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಹೌದು

ಆ)ಮತ್ತು ಇ) ಈ ತಾಂಡಾಗಳನ್ನು ಅಭಿವೃದ್ಧಿಗೊಳಿಸಲು ರೂ. 415.655 ಲಕ್ಷಗಳು ಖರ್ಚಾಗಿರುತ್ತದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದ ಅಂಗನವಾಡಿ ಮಕ್ಕಳಿಗೆ ಉಚಿತ ಹಾಲು ಸರಬರಾಜು ಮಾಡುವ ಬಗ್ಗೆ

4236 (4847) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ವಿವಿಧ ಅಂಗನವಾಡಿಗಳಲ್ಲಿರತಕ್ಕ ಮಕ್ಕಳ ಸಂಖ್ಯೆ ಎಷ್ಟು;

ಆ) ರಾಜ್ಯದಲ್ಲಿ ಹಾಲಿನ ಉತ್ಪಾದನೆ ಅಧಿಕವಾಗಿದ್ದು, ಈ ಅಂಗನವಾಡಿ ಮಕ್ಕಳಿಗೆ ಉಚಿತ ಹಾಲನ್ನು ಸರಬರಾಜು ಮಾಡಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) 27.17 ಲಕ್ಷ

ಆ) ಹಂತಹಂತವಾಗಿ ಅಂಗನವಾಡಿ ಮಕ್ಕಳಿಗೆ ಉಚಿತ ಹಾಲನ್ನು ಸರಬರಾಜು ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಬೆಂಗಳೂರು ನಗರದಲ್ಲಿ ಸ್ತ್ರೀಶಕ್ತಿ ಯೋಜನೆ ಜಾರಿಗೊಳಿಸುವುದರ ಬಗ್ಗೆ

4237 (4853) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರ ಪ್ರದೇಶಗಳಲ್ಲಿರುವ ಕಡು ಬಡ ಮಹಿಳೆಯರವನ್ನು ಆರ್ಥಿಕವಾಗಿ ಬಲಪಡಿಸಲು ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಬೆಂಗಳೂರು ನಗರದಲ್ಲಿ ಎಷ್ಟು ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲಾಗಿದೆ.

ಇ) ಇದಕ್ಕಾಗಿ ಸರ್ಕಾರ ಖರ್ಚು ಮಾಡುವ ಹಣವೆಷ್ಟು? ವಿವರ ಒದಗಿಸುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಇಲ್ಲ. ಆದಾಗ್ಯೂ ನಗರಾಭಿವೃದ್ಧಿ ಇಲಾಖೆಯು ನಗರ ಪ್ರದೇಸಗಳಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ಪ್ರಾರಂಭಿಸುವುದನ್ನು ಪರಿಶೀಲಿಸುತ್ತಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಗೋದಾಮು ಕಛೇರಿ ಕಟ್ಟಡ ನಿರ್ಮಾಣದ ಬಗ್ಗೆ

4238 (4899) : ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಕಾಡಾ ಕಚೇರಿಯಿಂದ ಈ ವರ್ಷ ರೈತರಿಗೆ ಮಾಲು ಸಂಗ್ರಹಣೆ ಮಡಲು ಎಷ್ಟು ಗೋದಾಮು ಕಂ–ಕಚೇರಿಗಳನ್ನು ಕಟ್ಟಲು ಉದ್ದೇಶಿಸಲಾಗಿದೆ?

ಆ) ಕಳೆದ ವರ್ಷ ಹಾಗೂ ಈ ವರ್ಷ ಎಷ್ಟು ಗೋದಾಮು–ಕಂ–ಕಚೇರಿ ಗಳನ್ನು ಕಟ್ಟಲಾಗಿದೆ; ಹಾಗೂ ಯವ ಯಾವ ಸ್ಥಳಗಳಲ್ಲಿ ಕಟ್ಟಲಾಗಿದೆ?

ಇ) ಬೈಲಹೊಂಗಲ ತಾಲ್ಲೂಕಿನ ಅನಿಗೋಳ ಗ್ರಾಮದಲ್ಲಿ ಗೋದಾಮು–ಕಂ–ಕಚೇರಿ ಕಟ್ಟಲು ಪ್ರಸ್ತಾವನೆ ಕಳುಹಿಸಿದ್ದರೂ ಕೂಡಾ ಇದುವರೆಗೂ ಮಂಜೂರಾತಿ ನೀಡದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಗೋದಾಮು-ಕಂ-ಕಚೇರಿಗಳನ್ನು ಕಟ್ಟುವ ಕೆಲಸ ಬಹಳ ವಿಳಂಬವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ವಿಳಂಬವಾಗಲು ಕಾರಣಗಳೇನು?

ಉ) ಹಾಗಿದ್ದಲ್ಲಿ ಗೋದಾಮು-ಕಂ-ಕಚೇರಿಗಳನ್ನು ತ್ವರಿತವಾಗಿ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಬೆಳಗಾವಿ ಕಾಡಾ ಕಚೇರಿಯಿಂದ ಈ ವರ್ಷ ಅಂದರೆ 2003-04 ನಲ್ಲಿ ಒದಗಿಸಲಾದ ರೂ. 10.00 ಲಕ್ಷಗಳ ಅನುದಾನದಲ್ಲಿ ಎರಡು ಗೋದಾಮು ಕಂ-ಕಚೇರಿ ಕಟ್ಟಡಗಳನ್ನು ನಿರ್ಮಿಸಲು ಹಾಗೂ ಕಳೆದ ವರ್ಷದಲ್ಲಿ ಮಂಜೂರಾತಿ ಮಾಡಿ ನಿರ್ಮಾಣ ಹಂತದಲ್ಲಿರುವ ಮೂರು ಗೋದಾಮುಗಳನ್ನು ಸಹ ಪೂರ್ಣಗೊಳಿಸುವ ಉದ್ದೇಶವಿರುತ್ತದೆ. ಜೊತೆಗೆ ಅಚ್ಚುಕಟ್ಟು ಪ್ರದೇಶದಲ್ಲಿ ಜಲ ಸಂಪನ್ಮೂಲ ಇಲಾಖೆಯ ವಶದಲ್ಲಿರುವ ನಿರುಪಯುಕ್ತ ಕಟ್ಟಡಗಳನ್ನು ಸಂಬಂಧಿಸಿದ ನೀರು ಬಳಕೆದಾರರ ಸಹಕಾರ ಸಂಘಗಳ ಕಛೇರಿ-ಕಂ-ಗೋಡಾನ್‌ಗಳನ್ನಾಗಿ ಪರಿವರ್ತಿಸಲು ನಿರ್ಧರಿಸಲಾಗಿದೆ.

ಆ) ಕಳೆದ ವರ್ಷ ತೆಗೆದುಕೊಂಡ ನಿರ್ಮಾಣ ಹಂತದಲ್ಲಿರುವ ಮೂರು ಗೋದಾಮು-ಕಂ-ಕಚೇರಿ ಕಟ್ಟಡಗಳ ವಿವರ ಈ ಕೆಳಕಂಡಂತಿವೆ.

ಕ್ರ. ಸಂ.	ಸಂಘದ ಹೆಸರು	ಸ್ಥಳ
1.	ನೀಬಸಸಂ ನಿ., ಕಲಹಾಳ	ಕಲಹಾಳ
2.	ಮಲಪ್ರಭಾ ನೀಬಸಸಂ ನಿ., ಚಿಕ್ಕೋಪ್ಪ ಎಸ್.ಕೆ.	ಚಿಕ್ಕೋಪ್ಪ
3.	ನೀಬಸಸಂ ನಿ., ಮುಳ್ಳೂರ	ಮುಳ್ಳೂರ

ಪ್ರಸ್ತುತ ವರ್ಷದಲ್ಲಿ ಅಂದರೆ 2003-04 ನೇ ಸಾಲಿನಲ್ಲಿ 2 ಗೋದಾಮು-ಕಂ-ಕಚೇರಿ ಕಟ್ಟಡಗಳ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ಇ) ಬೈಲಹೊಂಗಲ ತಾಲ್ಲೂಕಿನ ಅನಿಗೋಳ ಗ್ರಾಮದ ಜಾಲಿಕೊಪ್ಪ ಏತ ನೀರಾವರಿ ನೀಬಸಸಂಘ ನಿ. ಅನಿಗೋಳ, ಇವರು ಗೋದಾಮು-ಕಂ-ಕಚೇರಿ ಕಟ್ಟಡ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ದಿನಾಂಕ:19-4-2003 ರಂದು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆ ಪರಿಶೀಲಿಸಲಾಗಿ ನೀಲನಕ್ಷೆ ಹಗೂ ಅಂದಾಜು ಪತ್ರಿಕೆಗೆ ಕಾರ್ಯನಿರ್ವಾಹಕ ಅಭಿಯಂತರು ಕನೀನಿನಿ ನವಿಲುತೀರ್ಥ ಇವರ ತಾಂತ್ರಿಕ ಶಿಫಾರಸ್ಸು ಇಲ್ಲದೇ ಇರುವುದರಿಂದ ಅದನ್ನು ಸರಿಪಡಿಸಲು ಕೋರಿದ್ದು, ಪರಿಷ್ಕೃತ ಪ್ರಸ್ತಾವನೆ ಬಂದ ನಂತರ ಕ್ರಮ ಜರುಗಿಸಲಾಗುವುದು.

ಈ) ಈ ಕಾರ್ಯಕ್ರಮಕ್ಕೆ ಒದಗಿಸಲಾಗುತ್ತಿರುವ ಅನುದಾನದ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದು, ಯಾವುದೇ ವಿಳಂಬಕ್ಕೆ ಅವಕಾಶವಿರುವುದಿಲ್ಲ.

ಉ) ಈ ಕುರಿತು ಬಂದಿರುವ ಹೆಚ್ಚಿನ ಬೇಡಿಕೆಗಳನ್ನು ಪೂರೈಸಲು ಹೆಚ್ಚುವರಿ ಅನುದಾನವನ್ನು ಒದಗಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಳಗಾವಿ ಜಿಲ್ಲೆಯಲ್ಲಿ ಬಂಡಿಂಗ್ ಯೋಜನೆಯನ್ನು ಕೈಗೊಳ್ಳುವ ಬಗ್ಗೆ

4240 (4901) : ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ)-ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಷ ಎಷ್ಟು ಮೊತ್ತದ ಬಂಡಿಂಗ್ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

ಆ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಈ ವರ್ಷ ಎಷ್ಟು ಮೊತ್ತದ ಬಂಡಿಂಗ್ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ;

ಇ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಈ ವರ್ಷ ಹೆಚ್ಚಿನ ಬರಗಾಲವಿರುವುದರಿಂದ ಇಲ್ಲಿ ಹೆಚ್ಚಿನ ಬಂಡಿಂಗ್ ಯೋಜನೆಗಳನ್ನು ಕೈಗೊಂಡು ರೈತರಿಗೆ ಕೆಲಸ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಷ ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ವಿವಿಧ ಯೋಜನೆಗಳಡಿಯಲ್ಲಿ ರೂ. 69.26 ಲಕ್ಷ ಮೊತ್ತದ ಬಂಡಿಂಗ್ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಇದರ ತಾಲ್ಲೂಕುವಾರು ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ;

ಆ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಈ ವರ್ಷ ಕ್ರಮವಾಗಿ ರೂ. 19.20 ಲಕ್ಷ ಮತ್ತು ರೂ. 15.066 ಲಕ್ಷ ಮೊತ್ತದ ಬಂಡಿಂಗ್ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಇ) ಹೌದು.

ಅನುಬಂಧ-1

2003-04ನೇ ಸಾಲಿನಲ್ಲಿ ಕೈಗಳ್ಳುವ ಬಂಡಿಂಗ್ ಕಾಮಗಾರಿಗಳ ವಿವರ

(ರೂ. ಲಕ್ಷಗಳಲ್ಲಿ)

1	2	3	4	5	6	7	8
ಕ್ರ. ಸಂ.	ತಾಲ್ಲೂಕು	ನದಿಕಣಿವೆ ಯೋಜನೆ	ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	ಬರಗಾಲ ಪರಿಹಾರ ಯೋಜನೆ	ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆ	ವಿಶೇಷ ಘಟಕ ಯೋಜನೆ	ಒಟ್ಟು
1.	ಸವದತ್ತಿ	2.310	2.800	9.100	0.500	0.356	15.066
2.	ಬೈಲಹೊಂಗಲ	–	10,000	8,700	0,500	–	19,200
3.	ಖಾನಾಪುರ	–	–	–	0.5000	–	0.500
4.	ಬೆಳಗಾವಿ	–	–	–	0,500	–	0,500
5.	ಹುಕ್ಕೇರಿ	–	2,530	9,100	0,500	–	12,130
6.	ಚಿಕ್ಕೋಡಿ	–	–	1,600	0,500	0,356	2,456
7.	ರಾಯಬಾಗ	–	–	2,700	0,500	0356	3,556

1	2	3	4	5	6	7	8
8.	ಗೋಕಾಕ್	–	–	2,000	0,500	0,356	2,856
9.	ರಾಮದುರ್ಗ	–	–	8,250	0,500	0,356	9,106
10.	ಅಥಣಿ	–	–	3,600	0,500	0,356	4,456
	ಒಟ್ಟು	2,310	15,330	45,050	5,000	2,136	69,826

ರಾಜ್ಯದ ರೈತರಿಗೆ ಬೆಳೆ ವಿಮೆ ಕಡ್ಡಾಯಗೊಳಿಸುವುದರ ಬಗ್ಗೆ

4241(4902) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರಿಗೆ ಬೆಳೆ ವಿಮೆಯನ್ನು ಕಡ್ಡಾಯಗೊಳಿಸಿ ಎಲ್ಲಾ ಬೆಳೆಗಳನ್ನು ವಿಮೆ ವ್ಯಾಪ್ತಿಗೆ ಒಳಪಡಿಸುವ ಸಂಗತಿ ಸರ್ಕಾರದ ಮುಂದೆ ಇದೆಯೇ;

ಆ) ಸರ್ಕಾರ ಈಗ ಬೆಳೆ ವಿಮೆ ಮಾಡಲು ಯಾವ ಯಾವ ನೀತಿಯನ್ನು ಅನುಸರಿಸುತ್ತಿದೆ;

ಇ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ರೈತರು ಬೆಳೆ ವಿಮೆ ಪಡೆಯಲು ಅರ್ಹರಿದ್ದರೂ ಕೂಡಾ ಅಧಿಕಾರಿಗಳು ವಿಮಾ ಅದಿಕಾರಿಗಳಿಗೆ ತಪ್ಪು ಮಾಹಿತಿ ನೀಡಿರುವುದರಿಂದ ರೈತರಿಗೆ ವಿಮೆ ಹಣ ದೊರೆಯದೇ ಇರುವ ಸಂಗತಿ ಸಕರದ ಗಮನಕ್ಕೆ ಬಂದಿದೆಯೇ;

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ರೈತರು ಎಷ್ಟು ಮೊತ್ತದ ವಿಮೆ ಮಾಡಿಸಿದ್ದರು; ಹಾಗೂ ಎಷ್ಟು ಪ್ರೀಮಿಯಂ ಹಣವನ್ನು ಪಾವತಿಸಿದ್ದರು;

ಉ) ವಿಮೆ ಇಲಾಖೆಯವರು ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಎಷ್ಟು ವಿಮೆ ಹಣವನ್ನು ಯಾವ ಯಾವ ಬೆಳೆಗಳಿಗೆ ಕೊಟ್ಟಿರುವರು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಇಲ್ಲ.

ಆ) ಈ ಬಗ್ಗೆ ಕೇಂದ್ರ ಸರ್ಕಾರವು ರೂಪಿಸಿರುವ ನೀತಿಯ ಪ್ರಕಾರ ಬೆಳೆ ವಿಮೆ ಯೋಜನೆಯು ಸಂಘ:ಸಂಸ್ಥೆಗಳ ಮೂಲಕ ಬೆಳೆ ಸಾಲ ಪಡೆದ ರೈತರಿಗೆ ಕಡ್ಡಾಯವಾಗಿದ್ದು ಉಳಿದವರಿಗೆ ಐಚ್ಛಿಕವಾಗಿರುತ್ತದೆ.

ಇ) ಇಲ್ಲ.

ಈ) 2002ರ ಮುಂಗಾರು ಹಂಗಾಮಿನಲ್ಲಿ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ರೈತರು ಕ್ರಮವಾಗಿ ರೂ. 8,56,800–00 ಮತ್ತು ರೂ. 6,94, 195–00 ಪ್ರೀಮಿಯಂ ಹಣ ತುಂಬಿ ರೂ. 2,26,89, 262–00 ಮತ್ತು ರೂ. 2,53,27,015–00 ಗಳ ಮೊತ್ತಕ್ಕೆ ವಿಮೆ ಮಾಡಿಸಿರುವರು.

ಉ) ಭಾರತೀಯ ಸಾಮಾನ್ಯ ವಿಮಾ ನಿಗಮವು ಬೈಲಹೊಂಗಲ ತಾಲ್ಲೂಕಿಗೆ ಅಧಿಸೂಚಿಸಿದ ಜೋಳ, ಹೆಸರು, ತೊಗರಿ ಮತ್ತು ಸೋಯಾ ಅವರೆ ಬೆಳೆಗಳಿಗೆ ಹಾಗೂ ಸವದತ್ತಿ ತಾಲ್ಲೂಕಿಗೆ ಅಧಿಸೂಚಿಸಿದ ಜೋಳ, ಹೆಸರು ತೊಗರಿ ಮತ್ತು ಸೂರ್ಯಕಾಂತಿ ಬೆಳೆಗಳಿಗೆ ಬೆಳ ನಷ್ಟ ಪರಿಹಾರವನ್ನು ಕ್ರಮವಾಗಿ ರೂ. 31,85, 282–00 ಮತ್ತು ರೂ. 1,54,94,474–00 ಗಳೆಂದು ಇತ್ಯರ್ಥಗೊಳಿಸಿದ್ದು,

ರೈತರ ಜೊತೆಗೆ ಬೆಳೆ ನಷ್ಟ ಪರಿಹಾರದ ಮೊತ್ತವನ್ನು ಇಷ್ಟರಲ್ಲೇ ಜಮಾ ಮಾಡಲು ಕ್ರಮ ಕೈಗೊಂಡಿರುತ್ತದೆ. ಬೆಳೆವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಬೆಳಗಾವಿ ಕಾಡಾ ರಸ್ತೆಗಳ ದುರಸ್ತಿ ಮಾಡುವುದರ ಬಗ್ಗೆ

4242 (4903) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಕಾಡಾ ರಸ್ತೆಗಳ ದುರಸ್ತಿಗಾಗಿ ಕಳೆದ ವರ್ಷದ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿತ್ತು; ಹಗೂ ಎಷ್ಟು ಹಣ ಖರ್ಚಾಗಿರುವುದು;

ಆ) ಕಾಡಾ ರಸ್ತೆಗಳನ್ನು ಧುರಸ್ತಿ ಮಾಡದೇ ಇರುವುದರಿಂದ ರೈತರಿಗೆ ತಮ್ಮ ತಮ್ಮ ಹೊಲಗಳಿಗೆ ಮನೆಗಳಿಗೆ ಹೋಗಲು ತುಂಬಾ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಎಷ್ಟು ಕಿ.ಮೀ ಕಾಡಾ ರಸ್ತೆ ಇರುತ್ತದೆ;

ಈ) ಈ ರಸ್ತೆಯನ್ನು ದುರಸ್ತಿ ಮಾಡಲು ಸರ್ಕಾರ ಯಾವ ವಿಶೇಷವಾದ ಕ್ರಮ ಹಮ್ಮಿ ಕೊಳ್ಳುವುದು?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಕಾಡಾ ಕಾರ್ಯಕ್ರಮಗಳಡಿಯಲ್ಲಿ ರಸ್ತೆ ದುರಸ್ತಿ ಕೈಗೊಳ್ಳಲು ಅವಕಾಶವಿಲ್ಲದಿರುವುದರಿಂದ ಆಯವ್ಯಯದಲ್ಲಿ ಅನುದಾನ ನಿಗದಿಪಡಿಸಿರಲಿಲ್ಲ.

ಆ) ಬಂದಿದೆ.

ಇ) ಬೈಲಹೊಂಗಲ ತಾಲ್ಲೂಕು ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ 34,70 ಕಿ.ಮೀ ಮತ್ತು 60,62 ಕಿ.ಮೀ ಕಾಡಾ ರಸ್ತೆ ಇರುತ್ತದೆ.

ಈ) 2003–04 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054ರ ಅಡಿಯಲ್ಲಿ ರೂ. 100.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, ಈ ಹಣದಿಂದ ಮುಖ್ಯ ಇಂಜಿನಿಯರ್, ನೀರಾವರಿ ಉತ್ತರ ವಲಯ, ಬೆಳಗಾಂ ಇವರ ಮೂಲಕ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಕೃಷಿ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿಗಳಾಗಿ ಬಡ್ತಿ ನೀಡುವಾಗ ಶಾಸನಬದ್ಧ ನಿಯಮವನ್ನು ಅನುಷ್ಠಾನಗೊಳಿಸುವ ಬಗ್ಗೆ

4243 (4880) : ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿಗಳ ಬಡ್ತಿ ನೀಡುವಾಗ 1984ರ ಶಾಸನಬದ್ಧ ನಿಯಮವನ್ನು ಅನುಷ್ಠಾನಗೊಳಿಸಲಾಗಿದೆಯೇ?

ಆ) 1976ರ ಶಾಸನಬದ್ಧ ನಿಯಮದಲ್ಲಿ ಫೀಲ್ಡ್ ಅಸಿಸ್ಟೆಂಟ್‌ಗಳಿಗೆ ಗ್ರಾಮೀಣ ಅಭಿವೃದ್ಧಿ ತರಬೇತಿ ಅವಶ್ಯಕತೆ ಇತ್ತೇ? ತರಭೇತಿಯನ್ನು ನೀಡಲಾಗಿದೆಯೇ?

ಇ) ಫೀಲ್ಡ್ ಅಸಿಸ್ಟೆಂಟ್ ರವರ ನೇಮಕಾತಿ 1976 ಶಾಸನಬದ್ಧ ನಿಯಮದಲ್ಲಿ ಮುಂದುವರೆದಿತ್ತೇ? ಮುಂದುವರಿಯದಿದ್ದಲ್ಲಿ, ನೇಮಕಾತಿ ಮಾಡಿರುವುದಕ್ಕೆ ಕಾರಣಗಳೇನು?

ಈ) ಉಚ್ಛ ನ್ಯಾಯಾಲಯದ ದಿನಾಂಕ : 2–3–81ರ ತೀರ್ಪನ್ನು ಮಾನ್ಯತೆ ನೀಡಲಾಗಿದೆಯೇ?

ಉ) ಗ್ರಾಮ ಸೇವಕ, ಕೃಷಿ ಸಹಾಯಕರ, ಫೀಲ್ಡ್ ಅಸಿಸ್ಟೆಂಟ್, ಫೀಲ್ಡ್ ಮನ್‌ಗಳ ಜೇಷ್ಠತಾ ಪಟ್ಟಿಯನ್ನು ಸರ್ವೋಚ್ಚ ನ್ಯಾಯಾಲಯದ ದಿನಾಂಕ : 16–1–2001 ರ ತೀರ್ಪಿನಂತೆ ಅಂತಿಮಗೊಳಿಸಲಾಗಿದೆಯೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಹೌದು, ಅನುಷ್ಠಾನಗೊಳಿಸಲಾಗಿದೆ.

ತರುವಾಯ, ಕರ್ನಾಟಕ ಆಡಳಿತ ನ್ಯಾಯಮಂಡಳಿಯು ನೀಡಿದ ತೀರ್ಪಿನ ಅನುಸಾರ ಬಡ್ತಿ ನೀಡಲಾಗಿರುತ್ತದೆ.

ಆ) ಅವಶ್ಯಕತೆ ಇತ್ತು.

ತರಭೇತಿಯನ್ನು ನೀಡಲಾಗಿರುತ್ತದೆ.

ಇ) ಮುಂದುವರೆದಿತ್ತು

ಸರ್ಕಾರದ ಆದೇಶ ಸಂಖ್ಯೆ : AAH 73 AEM 77 ದಿನಾಂಕ : 2–8–78 ರನ್ವಯ ಫೀಲ್ಡ್ ಅಸಿಸ್ಟೆಂಟ್‌ಗಳನ್ನು ಕೃಷಿ ಸಹಾಯಕರೆಂದು ಮರು ಪದನಾಮಗೊಳಿಸಿದೆ. ಈ ದಿನಾಂಕದ ತರುವಾಯ ಫೀಲ್ಡ್ ಅಸಿಸ್ಟೆಂಟ್ ನೇಮಕಾತಿಗೆ ಬದಲಾಗಿ ಕೃಷಿ ಸಹಾಯಕರನ್ನು ನೇಮಕ ಮಾಡಲಾಗಿದೆ.

ಈ) ಹೌದು, ಮಾನ್ಯತೆ ನೀಡಿದೆ.

ಉ) ಹೌದು.

ಸರ್ವೋಚ್ಚ ನ್ಯಾಯಾಲಯದ ದಿನಾಂಕ : 16–1–2001 ರ ತೀರ್ಪಿನಂತೆ ಕೃಷಿ ಸಹಾಯಕರ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ, ದಿನಾಂಕ : 27–5–2003ರಂದು ಪ್ರಕಟಿಸಲಾಗಿದೆ.

ತುರುವೇಕೆರೆಯಲ್ಲಿ ಖಾದಿ ಗ್ರಾಮೋದ್ಯೋಗ ಕಸುಬುದಾರರ ಕೈಗಾರಿಕಾ ಸಹಕಾರ ಸಂಘಕ್ಕೆ ಸೌಲಭ್ಯ ನೀಡದಿರುವ ಬಗ್ಗೆ

4244 (4763) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ಖಾದಿ ಗ್ರಾಮೋದ್ಯೋಗ ಕಸಬುದಾರರ ಕೈಗಾರಿಕೆ ಸಹಕಾರ ಸಂಘ ಎಂದು ಪ್ರಾರಂಭವಾಯಿತು;

ಆ) ಹಾಗಿದ್ದಲ್ಲಿ, ಇಷ್ಟು ವರ್ಷ ಈ ಸಂಘ ಯಾವುದೇ ವಹಿವಾಟು ಮಾಡದಿರಲು ಕಾರಣವೇನು

ಇ) ಸಾರ್ವಜನಿಕರಿಗೆ ಇದರಿಂದ ಯಾವ್ಯಾವ ಪ್ರಯೋಜನಗಳು ದೊರೆಯುತ್ತದೆ;

ಈ) ಸರ್ಕಾರ ಈ ಸಂಘಕ್ಕೆ ಯಾವುದೇ ಸೌಲಭ್ಯ ಕೊಡದಿರಲು ಕಾರಣವೇನು;

ಉ) ಬರಗಾಲ ಬಂದಿರುವ ಈ ಸಂದರ್ಭದಲ್ಲಿ ಸಣ್ಣ ಪ್ರಮಾಣದ ಕಸುಬುದಾರರಿಗೆ ಸಾಲ ಸೌಲಭ್ಯಗಳು ಇಲ್ಲದೇ ತೊಂದರೆಯಾಗಿರುವ ಸಮಯದಲ್ಲಿ ಇಲಾಖೆ ಸ್ಪಂದಿಸಿ ಎಲ್ಲಾ ಸವಲತ್ತುಗಳನ್ನು ತಕ್ಷಣ ಒದಗಿಸುವುದೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) 1954ರಲ್ಲಿ ಪ್ರಾರಂಭವಾಯಿತು.

ಆ) ಆರ್ಥಿಕ ಮುಗ್ಗಟ್ಟಿನಿಂದ ಸಂಘವು ಹೆಚ್ಚಿನ ವಹಿವಾಟು ಮಾಡಿರುವುದಿಲ್ಲ.

ಇ) ಸಂಘದ ಉಪನಿಯಮಗಳ ಪ್ರಕಾರ ಸಂಘದ ಸದಸ್ಯರುಗಳಿಗೆ ಕಮ್ಮಾರಿಕೆ, ಬಿದಿರು ಕಸುಬು ಇತ್ಯಾದಿ ಕೈಗಾರಿಕೆಗಳನ್ನು ನಡೆಸಲು ಹಣಕಾಸಿನ ಸೌಲಭ್ಯ ಒದಗಿಸುವ ಉದ್ದೇಶ ಹೊಂದಿರುತ್ತದೆ.

ಈ) ಸಂಘವು ಖಾದಿ ಗ್ರಾಮೋದ್ಯೋಗ ಮಂಡಳಿಗೆ ರೂ. 2,27,432.00ಗಳ ಕೈಗಾರಿಕಾ ಸಾಲವನ್ನು ತುಮಕೂರು ಕೈಗಾರಿಕಾ ಬ್ಯಾಂಕ್‌ಗೆ ರೂ. 25,765.00ಗಳ ಸಾಲ ಮರುಪಾವತಿ ಮಾಡದೆ ಸುಸ್ತಿಯಾಗಿರುತ್ತದೆ. ಸದಸ್ಯರುಗಳಿಂದ ಸಾಲದ ಬಾಬ್ತು ರೂ. 1.70,136.00 ಬರಬೇಕಾಗಿದ್ದು, ಸಂಘವು ರೂ. 1,95,224.00 ಗಳಷ್ಟು ಕ್ರೋಢೀಕೃತ ನಷ್ಟದಲ್ಲಿರುತ್ತದೆ ಸದಸ್ಯರಿಂದ ಅಲ್ಪ ಪ್ರಮಾಣದಲ್ಲಿ ವಸೂಲಾದ ಸಾಲದ ಮೊತ್ತದಲ್ಲಿ ಸಂಘದ ಬಾಡಿಗೆ ಇನ್ನಿತರ ಖರ್ಚುಗಳನ್ನು ಭರಿಸಲಾಗುತ್ತಿದ್ದು, ಸಂಘದ ವಹಿವಾಟು ಕುಂಠಿತವಾಗಿರುತ್ತದೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲು ಸರ್ಕಾರವು ರೂ. 1,665.00ಗಳ ಶೇರು ಹಣವನ್ನು ಧನಸಹಾಯ ರೂಪದಲ್ಲಿ ನೀಡಿರುತ್ತದೆ.

ಉ) ಈ ಸಂಘವು ಹೆಚ್ಚಿನ ಸಂಪನ್ಮೂಲ ಕ್ರೋಢೀಕರಿಸಿ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅಳವಡಿಸಿಕೊಂಡು ಪುನಃಶ್ಚೇತನಗೊಳಿಸಲು ಕ್ರಮವಹಿಸಲಾಗುವುದು. ಈ ಮೂಲಕ ಸಣ್ಣ ಪ್ರಮಾಣದ ಕಸುಬುದಾರರಿಗೆ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು.

ತುರುವೇಕೆರೆ ತಾಲ್ಲೂಕಿನ ದುಂಡ ಗ್ರಾಮದ ಬಳಿ ಹೇಮಾವತಿ ಯೋಜನೆಯ ಚಾನಲ್ ಕೆಲಸ ಸ್ಥಗಿತಗೊಂಡಿರುವ ಬಗ್ಗೆ

4245 (4958) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದುಂಡ ಗ್ರಾಮದ ಬಳಿ ಬರುವ ಚಾನಲ್ (ರೈಲ್ವೆ ಲೈನ್ ಕೆಳಗೆ ಹಾದುಹೋಗುವ) ಕೆಲಸ ಸ್ಥಗಿತಗೊಳ್ಳಲು ಕಾರಣವೇನು;

ಆ) ರೈಲ್ವೆ ಇಲಾಖೆಗೆ ಹಣ ಕಟ್ಟಿದ್ದರೂ ಅನುಮತಿ ಕೊಡದಿರಲು ಕಾರಣವೇನು;

ಇ) ಹಲವಾರು ವರ್ಷದಿಂದ ರೈತರು ಆ ಭಾಗದಲ್ಲಿ ನೀರಿಲ್ಲದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

ಈ) ಈಗಲಾದರೂ ಕೆಲಸ ಪ್ರಾರಂಭ ಮಾಡಲಾಗುವುದೇ?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ರೈಲ್ವೆ ಇಲಾಖೆಗೆ ಪಾವತಿಸಬೇಕಾಗಿದ್ದ ಠೇವಣಿ ಮೊತ್ತ ರೂ. 29,69,197.00ಗಳು ಪಾವತಿಸಲು ವಿಳಂಬವಾದ್ದರಿಂದ ಕಾಮಗಾರಿ ಪ್ರಾರಂಭಿಸಲು ತಡವಾಗಿರುತ್ತದೆ.

ಆ) ರೈಲ್ವೆ ಇಲಾಖೆಯಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲು ರೂ. 20,69,197,00 ಗಳನ್ನು ಠೇವಣಿ ಇಡಲಾಗಿದೆ. ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆದಿರುತ್ತಾರೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ರೈಲ್ವೆ ಇಲಾಖೆಯು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಟೆಂಡರ್ ಕರೆದಿರುತ್ತಾರೆ.

ಕಾವೇರಿ ನೀರಾವರಿ ನಿಗಮದ ಯೋಜನೆಗಳ ಬಗ್ಗೆ

4246 (4959) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾವೇರಿ ನೀರಾವರಿ ನಿಗಮದ ಯೋಜನೆಗಳು ಯಾವಾಗ ಜಾರಿಗೆ ಬಂದಿದೆ?

ಆ) ನಿಗಮದ ಉದ್ದೇಶಗಳೇನು?

ಇ) ಈ ನಿಗಮವು ಹೇಮಾವತಿ ಯೋಜನೆಗೆ ಮಾಡಬಹುದಾದ ಕಾರ್ಯಕ್ರಮಗಳನ್ನು ಗುರುತಿಸಲಾಗಿದೆಯೇ; (ವಿವಗ ಕೊಡುವುದು)?

ಈ) ಕಾರ್ಯಕ್ರಮಗಳು ಯಾವಾಗ ಪ್ರಾರಂಭ ಆಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಕಾವೇರಿ ಜಲಾನಯುನ ಪ್ರದೇಶದಲ್ಲಿ ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸುವುದು ಹಾಗೂ ಅಚ್ಚುಕಟ್ಟು ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕಾರ್ಯವು ಪ್ರಸಕ್ತ ವರ್ಷದಿಂದ ಜಾರಿಗೆ ಬಂದಿದೆ

ಆ)1) ಕಾವೇರಿ ಜಲಾನಯನ ಪ್ರದೇಶದಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ವಹಿಸಿಕೊಡುವ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸುವುದು. ಯೋಜನೆಗಳ ನಿರ್ವಹಣೆ, ಚಾಲನೆ ಅಭಿವೃದ್ಧಿ ಹಾಗೂ ಆಧುನೀಕರಣ ಕೈಗೊಳ್ಳುವುದು.

2) ನೀರನ್ನು ಸದ್ಬಳಕೆಯಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಲು ಕಾರ್ಯಕ್ರಮ ರೂಪಿಸಿಕೊಳ್ಳುವುದು.

3) ಕುಡಿಯುವ ನೀರಿನ ಸರಬರಾಜಿಗಾಗಿ ಎಲ್ಲಾ ರೀತಿಯ ಪ್ರೋತ್ಸಾಹ ನೀಡುವುದು

4) ಯೋಜನೆಗಳಿಂದ ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸುವುದು.

5) ಕೃಷಿ ಉತ್ಪಾದನೆಯನ್ನು ಅಭಿವೃದ್ಧಿಗೊಳಿಸಲು ಆಧುನಿಕ ವ್ಯವಸಾಯ ಪದ್ಧತಿಯಾದ ಹನಿ ಮತ್ತು ತುಂತುರು ನೀರಾವರಿ ರೀತಿಯನ್ನು ಪ್ರೋತ್ಸಾಹಿಸುವುದು.

6) ಅಂತರ್ಜಲದ ಪುನರ್ ಬಳಕೆಯನ್ನು ಪರಿಣಾಮಕಾರಿಯಾಗಿ ಬಳಸಲು ಅಗತ್ಯ ಕ್ರಮವನ್ನು ಕೈಗೊಳ್ಳುವುದು.

7) ನೀರಾವರಿ ನಿರ್ವಹಣೆಯಲ್ಲಿ ಸಹಬಾಗಿತ್ವ ಪ್ರೋತ್ಸಾಹಿಸುವುದು

8) ನೀರಾವರಿ ಯೋಜನೆಗಳ ಪ್ರದೇಶದಲ್ಲಿ ಪರಿಸರ ಸಂರಕ್ಷಣೆ ಹಾಗೂ ಅರಣ್ಯಾಧೀಕರಣವನ್ನು ಹಾಗೂ ಇತ್ಯಾದಿ ಕ್ರಮಗಳನ್ನು ತೆಗೆದುಕೊಳ್ಳುವುದು

9) ಜಲಾಶಯದ ಪ್ರದೇಶದಲ್ಲಿ ಪ್ರವಾಸೋಧ್ಯಮ ಅಭಿವೃದ್ಧಿಗೊಳಿಸುವುದು ಹಾಗೂ ಮೀನು ಉತ್ಪಾದನೆ ಇತ್ಯಾದಿಗಳನ್ನು ಪ್ರೋತ್ಸಾಹಿಸುವುದು

10) ಈ ಮೇಲ್ಕಂಡ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವಾಗ ನ್ಯಾಯಮಂಡಳಿಗಳ ತೀರ್ಪು ಹಾಗೂ ನಿರ್ಧಾರಗಳಿಗೆ ಬದ್ಧವಾಗಿರುವುದು.

ಇ) ಹೇಮಾವತಿ ಯೋಜನೆಗೆ ಸಂಬಂಧಿಸಿದಂತೆ ಹೇಮಾವತಿ ಯೋಜನಾ ವಲಯ, ಗೋರೂರು ಹಾಗೂ ಹೇಮಾವತಿ ಕಾಲುವೆ ವಲಯ, ತುಮಕೂರು ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಮಗಾರಿಗಳು ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಸೇರಿರುತ್ತದೆ.

ಈ) ಕಾವೇರಿ ನೀರಾವರಿ ನಿಗಮ ಅಸ್ಥಿತ್ವದಲ್ಲಿ ಬಂದಿದ್ದು ಕಾರ್ಯ ಆರಂಭಿಸಿದೆ.

ರಾಜ್ಯದ ಬರಗಾಲದ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಮಾಡಿರುವ ಸಹಾಯದ ಬಗ್ಗೆ

4247 (4960) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಭೀಕರ ಬರಗಾಲ ಬಂದಂತೆ ಈ ಸಮಯದಲ್ಲಿ ಕೃಷಿಗೆ ಕೇಂದ್ರ ಸರ್ಕಾರ ಮಾಡಿರುವ ಸಹಾಯ ಏನು?

ಆ) ಈ ಇಲಾಖೆಯಲ್ಲಿ ತೆಗೆದುಕೊಂಡಿರುವ ಕಾರ್ಯಕ್ರಮಗಳಾವುವು?

ಇ) ಪ್ರತಿ ತಾಲ್ಲೂಕಿನಲ್ಲಿಯೂ ತಡೆ ಅಣೆಗಳ ನಿರ್ಮಾಣಕ್ಕೆ ಪಟ್ಟಿ ಮಾಡಲಾಗಿದೆಯೇ;

ಈ) ಹಾಗಿದ್ದಲ್ಲಿ ಯಾವಾಗ ಕೆಲಸ ಆರಂಭ ಮಾಡಲಾಗುವುದು.

ಉ) ಪ್ರತಿ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ತುರುವೇಕೆರೆ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆ ಆಗಿದೆ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ)1) ಕೇಂದ್ರ ಸರ್ಕಾರದ ಆರ್ಥಿಕ ನೆರವಿನ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಬರಗಾಲ ಪ್ರದೇಶವೆಂದು ಘೋಷಣೆ ಮಾಡಲಾಗಿರುವ ತಾಲ್ಲೂಕಿನ ರೈತರಿಗೆ ರಿಯಾಯಿತಿ ಧರದಲ್ಲಿ ಬಿತ್ತನೆ ಬೀಜಗಳ ಪೂರೈಕೆ.

2) ಜಲಾನಯನ ಅಭಿವೃದ್ಧಿ ಇಲಾಖೆಯ ಕಾಮಗಾರಿಗಳ ಅನುಷ್ಠಾನದಲ್ಲಿ ಕೇಂದ್ರ ಸರ್ಕಾರವು ಒದಗಿಸಿರುವ ಕೂಲಿಗಾಗಿ ಕಾಳಿನ ಬಳಕೆ

ಆ) ರಿಯಾಯಿತಿ ದರದಲ್ಲಿ ಬಿತ್ತನೆ ಬೀಜದ ಪೂರೈಕೆ ಜಲಾನಯನ ಅಭಿವೃದ್ಧಿ ಯೋಜನೆಯ ಕಾಮಗಾರಿಗಳಲ್ಲಿ ಕೂಲಿಗಾಗಿ ಕಾಳಿನ ಬಳಕೆ, ತಡವಾಗಿ ಮಳೆ ಬಂದ ಭಾಗಗಳಲ್ಲಿ ಪರ್ಯಾಯ ಬೆಳೆ ಪದ್ಧತಿ ಅಳವಡಿಕೆಗೆ ರೈತ ವರ್ಗದವರಿಗೆ ಮಾರ್ಗದರ್ಶನ.

ಇ) ಹೌದು

ಈ) ರಾಜ್ಯದ ಕೆಲವು ಭಾಗಗಳಲ್ಲಿ ಈಗಾಗಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು ಉಳಿದ ಭಾಗಗಳಲ್ಲಿ ಋತು ಮಾನ ಹಾಗೂ ಅನುದಾನದ ಲಭ್ಯತೆ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಉ) ತುಮಕೂರು ಜಿಲ್ಲೆಯ ತಾಲ್ಲೂಕುಗಳಿಗೆ 2002-03 ಮತ್ತು 2003-04ನೇ ಸಾಲಿನಲ್ಲಿ ಒಟ್ಟು ರೂ. 793.23 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ತಾಲ್ಲೂಕುವಾರು ಬಿಡುಗಡೆ ಮಾಡಿದ ಹಣದ ವಿವರ ಈ ರೀತಿ ಇದೆ. 1) ತುಮಕೂರು ರೂ. 97.52 ಲಕ್ಷ 2) ಕುಣಿಗಲ್ ರೂ. 52.22 ಲಕ್ಷ, 3) ಕೊರಟಗೆರೆ ರೂ. 84.65 ಲಕ್ಷ 4) ಮಧುಗಿರಿ ರೂ. 86.90 ಲಕ್ಷ 5) ಪಾವಗಡ ರೂ. 74.76 ಲಕ್ಷ 6) ಶಿರಾ ರೂ. 99.98 ಲಕ್ಷ 7) ಚಿಕ್ಕನಾಯಕನಹಳ್ಳಿ ರೂ. 51.91 ಲಕ್ಷ 8) ತಿಪಟೂರು ರೂ. 80.70 ಲಕ್ಷ 9) ತುರುವೇಕೆರೆ ರೂ. 64.04 ಲಕ್ಷ 10) ಗುಬ್ಬಿ ರೂ. 100.55 ಲಕ್ಷ ತುರುವೇಕೆರೆ ತಾಲ್ಲೂಕಿಗೆ ರೂ. 64.04 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯ ಅಡಿಯಲ್ಲಿ ಸ್ತ್ರೀಯರಿಗೆ ಕಲ್ಪಿಸಿರುವ ಅನುಕೂಲಗಳು

4248 (4961) : ಶ್ರೀ ಲಕ್ಷ್ಮಿನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಿದ ಮೇಲೆ ಸ್ತ್ರೀಯರಿಗೆ ಯಾವ ಯಾವ ಅನುಕೂಲ ಮಾಡಿಕೊಡಲಾಗಿದೆ.

ಆ) ಹಳ್ಳಿಗಳಲ್ಲಿ ಸಾರಾಯಿ ಮಾರಾಟ ನಿಷೇಧಿಸುವಂತೆ ಧರಣಿ ಸತ್ಯಾಗ್ರಹ ಮನವಿ ಕೊಟ್ಟು ಸಾರಾಯಿ ಅಂಗಡಿ ಮುಚ್ಚಿಸಲು ಪ್ರಯತ್ನ ಪಟ್ಟ ಸ್ತ್ರೀಶಕ್ತಿ ಗುಂಪುಗಳು ವಿಫಲವಾಗಿರುವುದು ನಿಜವೇ

ಇ) ಹಾಗಿದ್ದಲ್ಲಿ ಈ ವಿಚಾರದಲ್ಲಿ ಸ್ತ್ರೀಶಕ್ತಿ ಗುಂಪುಗಳು ವಿಫಲವಾಗಿರುವುದರಿಂದ ಇವರಿಂದ ಮತ್ತೆ ಸಂಘಟನೆ ಮಾಡಲು ಸಾಧ್ಯವೆ?

ಈ) ದುಶ್ಚಟಗಳನ್ನು ದೂರ ಮಾಡಲು ಬಯಸಿದಾಗ ಸರ್ಕಾರ ಸ್ಪಂದಿಸದಿರಲು ಕಾರಣವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಸ್ತ್ರೀ ಶಕ್ತಿ ಯೋಜನೆಯಿಂದ ಸ್ತ್ರೀಯರಿಗೆ ಕೆಳಕಂಡ ಅನುಕೂಲ ಮಾಡಿಕೊಡಲಾಗಿದೆ.

– ಸುಮಾರು 11 ಲಕ್ಷ ಮಹಿಳೆಯರನ್ನು ಸಂಘಟನೆ ಮಾಡಲು ಸಹಕಾರ ನೀಡಿದೆ.

– ಗ್ರಾಮೀಣ ಬಡ ಮಹಿಳೆಯರಲ್ಲಿ ಉಳಿತಾಯ ಮಾಡುವ ರೂಢಿ ಅಭಿವೃದ್ಧಿ ಮಾಡಿದೆ.

– ಮಹಿಳೆಯರಲ್ಲಿ ಆರ್ಥಿಕ ಸ್ವಾವಲಂಬನೆ ಉಂಟುಮಾಡಿದೆ.

– ಗುಂಪುಗಳನ್ನು ಸಾಲ ನೀಡುವ ಸಂಸ್ಥೆಗಳಿಗೆ ಸಂಪರ್ಕ ಕೊಡಿಸಲಾಗುತ್ತಿದೆ. ಇದರಿಂದ ಸದಸ್ಯರಿಗೆ ವಿವಿಧ ಚಟುವಟಿಕೆಗಳಿಗೆ ಸಾಲದ ಅವಶ್ಯಕತೆ ಇದ್ದು ಬಡತನ ನಿರ್ಮೂಲನವಾಗುತ್ತದೆ

– ಪ್ರತಿ ಗುಂಪಿಗೆ ರೂ. 5,000/– ಸುತ್ತು ನಿಧಿ ನೀಡುತ್ತಿದ್ದು. ಇದನ್ನು ಸಾಮಾನ್ಯ ನಿಧಿಯಾಗಿ ಗುಂಪಿನ ಸದಸ್ಯರು ಬಳಸಿಕೊಳ್ಳುತ್ತಿದ್ದಾರೆ.

– ಸರ್ಕಾರದ ವಿವಿಧ ಇಲಾಖೆಗಳಿಂದ ಸಿಗುವಂತಹ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

– ಗುಂಪಿನ ಲೆಕ್ಕ ಪತ್ರ ನಿರ್ವಹಣೆಗಾಗಿ ಬೇಕಾಗುವ ಪುಸ್ತಕಗಳನ್ನು ನೀಡಿದ್ದು, ಅವರಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸಲು ತರಬೇತಿಯನ್ನು ನೀಡಲಾಗಿದೆ.

ಆ) ಸ್ತ್ರೀಶಕ್ತಿ ಯೋಜನೆಯ ಧ್ಯೇಯೋದ್ದೇಶಗಳಲ್ಲಿ ಇದು ಒಳಗೊಂಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ಗುರುತಿಸಲ್ಪಟ್ಟಿರುವ ಫಲಾನುಭವಿಗಳು

4249 (4848) : ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಶಸ್ವಿನಿ ಯೋಜನೆಯಲ್ಲಿ ರಾಜ್ಯದಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಗುರುತಿಸಲಾಗಿದೆ.

ಆ) ಈ ಯೋಜನೆಯಲ್ಲಿ ರಾಜ್ಯದಲ್ಲಿ ಎಷ್ಟು ಆರೋಗ್ಯ ಕೇಂದ್ರಗಳು ಇದರ ವ್ಯಾಪ್ತಿಗೆ ಬರುತ್ತದೆ,

ಇ) ಈ ಯೋಜನೆಗೆ ತಾಲ್ಲೂಕುವಾರು ಕೇಂದ್ರಗಳನ್ನು ಪ್ರಾರಂಭಿಸದಿರಲು ಕಾರಣಗಳೇನು? ವಿವರ ಒದಗಿಸುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಈ ವರೆಗೂ 16.01 ಲಕ್ಷ ರೈತ ಸದಸ್ಯರನ್ನು ನೋಂದಾಯಿಸಲಾಗಿದೆ.

ಆ) ಈ ಯೋಜನೆಯಡಿಯ ವ್ಯಾಪ್ತಿಗೆ ಆರೋಗ್ಯ ಕೇಂದ್ರಗಳನ್ನು ಒಳಪಡಿಸಿರುವುದಿಲ್ಲ. ರಾಜ್ಯಾದ್ಯಂತ 71 ಖಾಸಗಿ ಆಸ್ಪತ್ರೆಗಳು ಹಾಗೂ ನರ್ಸಿಂಗ್ ಹೋಂಗಳನ್ನು ಈ ಯೋಜನೆಯ ವ್ಯಾಪ್ತಿಯಲ್ಲಿ ಗುರುತಿಸಲಾಗಿದೆ.

ಇ) ಈ ಯೋಜನೆಯು 1600 ವಿವಿಧ ಶಸ್ತ್ರ ಚಿಕಿತ್ಸೆಗಳನ್ನು ಒಳಗೊಂಡಿದ್ದು ಇದಕ್ಕೆ ಮೂಲ ಸೌಕರ್ಯ ಮತ್ತು ತಾಂತ್ರಿಕ ಸೌಲಭ್ಯ ಲಭ್ಯವಿರುವ ಆಸ್ಪತ್ರೆಗಳನ್ನು ಮಾತ್ರ ಗುರುತಿಸಲಾಗಿದೆ.

ರಾಜ್ಯದಲ್ಲಿರುವ ಸ್ವಸಹಾಯ ಗುಂಪುಗಳು

4250 (4849) : ಶ್ರೀ ನೀಲಕಂಠಪ್ಪ ಬಿ.ಆರ್ (ತರೀಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷದಿಂದ ಎಷ್ಟು ಎಸ್.ಎಸ್.ವೈ (ಸ್ವಸಹಾಯಗುಂಪು) ಪ್ರಾರಂಭವಾಗಿವೆ?

ಆ) ಈ ಸಂಘಗಳ ಕಾರ್ಯವ್ಯಾಪ್ತಿ ಮತ್ತು ನಿಯಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿರುವ 75958 ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಪೈಕಿ 643 ಗುಂಪುಗಳು ಈ ವರ್ಷದಿಂದ ಪ್ರಾರಂಭವಾಗಿವೆ.

ಆ) ರಾಜ್ಯದ ಎಲ್ಲಾ 175 ತಾಲ್ಲೂಕಿನಲ್ಲಿರುವ ಗ್ರಾಮಾಂತರ ಪ್ರದೇಶದಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಮಾರ್ಗ ಸೂಚಿಗಳು ಈ ಕೆಳಗಿನಂತಿವೆ:-

1) ಸಮಾನ ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆಯುಳ್ಳ 15 ರಿಂದ 20 ಜನ ಮಹಿಳೆಯರು ಗುಂಪಿನ ಸದಸ್ಯರಾಗಿರುತ್ತಾರೆ.

2) ನಿಗದಿತವಾಗಿ ಉಳಿತಾಯ ಮಾಡುವುದು

3) ವಾರಕ್ಕೊಮ್ಮೆ ಸಭೆ ಸೇರುವುದು

4) ಸಾಮಾನ್ಯ ನಿಧಿಯನ್ನು ರೂಢಿಸುವುದು

5) ತಮ್ಮದೇ ಹಣವನ್ನು ಸ್ವಸಹಾಯ ತತ್ವದ ಮೂಲಕ ಸಾಲ ನೀಡುವುದು.

6) ಗುಂಪಿನಲ್ಲಿ ವಿವಿಧ ದಾಖಲಾತಿಗಳನ್ನು ನಿರ್ವಹಿಸಿ ಯಾವುದಾದರೊಂದು ಬ್ಯಾಂಕಿನಲ್ಲಿ ಜಂಟಿ ಖಾತೆಯಲ್ಲಿ ಉಳಿತಾಯ ಖಾತೆಯನ್ನು ಪ್ರಾರಂಭಿಸುವುದು

7) ಒಮ್ಮತದ ತೀರ್ಮಾನದಿಂದ ಎಲ್ಲಾ ಸಮಸ್ಯೆಗಳನ್ನು ತಮ್ಮಲ್ಲೇ ಬಗೆಹರಿಸಿಕೊಂಡು ಅಭಿವೃದ್ಧಿ ಸಾಧಿಸುವುದು.

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಸ್ತ್ರೀಶಕ್ತಿ ಸಂಘಗಳಿಗೆ ರಾಜ್ಯ ಸರ್ಕಾರದ ಸಹಾಯಧನ

4251 (4850) : ಶ್ರೀ ನೀಲಕಂಠಪ್ಪ. ಬಿ.ಆರ್. (ತರೀಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರುವ ಸ್ತ್ರೀಶಕ್ತಿ ಸಂಘಗಳು ಎಷ್ಟು ತಾಲ್ಲೂಕುವಾರು ಸಂಘಗಳ ವಿವರ ಒದಗಿಸುವುದು

ಆ) ಸ್ತ್ರೀ ಶಕ್ತಿ ಸಂಘಗಳಿಗೆ ರಾಜ್ಯ ಸರ್ಕಾರದ ಸಹಾಯಧನದ ವಿವರ ಹಾಗೂ ಬ್ಯಾಂಕುಗಳಲ್ಲಿ ಇಟ್ಟಿರುವ ಠೇವಣಿ ಹಣದ ಮೊತ್ತ ಎಷ್ಟು ಮತ್ತು ಬ್ಯಾಂಕುಗಳಿಂದ ಎಷ್ಟು ಸಾಲ ಪಡೆದಿವೆ. ವಿವರ ಒದಗಿಸುವುದು.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 1285 ಸ್ತ್ರೀಶಕ್ತಿ ಗುಂಪುಗಳಿವೆ.

ತಾಲ್ಲೂಕುವಾರು ಗುಂಗಪುಗಳ ವಿವರ

1. ಚಿಕ್ಕಮಗಳೂರು	:	369
2. ಕಡೂರು	:	182
3. ತರೀಕೆರೆ	:	330
4. ಕೊಪ್ಪ	:	100
5. ಶೃಂಗೇರಿ	:	92
6. ಎನ್.ಆರ್. ಪುರ	:	78
7. ಮೂಡಿಗೆರೆ	:	134
ಒಟ್ಟು	:	1285

ಆ) ಈ ಸ್ತ್ರೀಶಕ್ತಿ ಗುಂಪುಗಳಿಗೆ ಸರ್ಕಾರದಿಂದ ರೂ. 86,65 ಲಕ್ಷಗಳನ್ನು ಸುತ್ತುನಿಧಿಯಾಗಿ ಸಹಾಯಧನ ಬಿಡುಗಡೆ ಮಾಡಲಾಗಿದೆ. ಬ್ಯಾಂಕ್‌ನಲ್ಲಿ ಇಟ್ಟಿರುವ ಠೇವಣಿ ಹಣ ರೂ. 2539,25 ಲಕ್ಷಗಳು ಹಾಗೂ ಬ್ಯಾಂಕುಗಳಿಂದ ಸಾಲ ಪಡೆದಿರುವ ಮೊತ್ತ ರೂ. 348,90 ಲಕ್ಷಗಳು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಿ.ಪಿ.ಎಲ್. ಕಾರ್ಡ್‌ಗಳನ್ನು ವಿತರಿಸುವ ಬಗ್ಗೆ

4252 (4852) : ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಿ.ಪಿ.ಎಲ್. ಕಾರ್ಡುಗಳನ್ನು ಎಷ್ಟು ಜನರಿಗೆ ವಿತರಿಸಲಾಗಿದೆ;

ಆ) ತರೀಕೆರೆ ತಾಲ್ಲೂಕಿನಲ್ಲಿ ಬಿ.ಪಿ.ಎಲ್. ಕಾರ್ಡುಗಳನ್ನು ಪಡೆಯಲು ಹೆಚ್ಚುವರಿ ಅರ್ಜಿಗಳನ್ನು ಸಲ್ಲಿಸಿರುವವರಿಗೆ ಕಾರ್ಡುಗಳನ್ನು ನೀಡುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ; ವಿವರ ಒದಗಿಸುವುದು?

ಶ್ರೀ ರಾಮ ಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮನೆ-ಮನೆ ಸಮೀಕ್ಷೆಯ ಮೂಲಕ 1,11,360 ಕುಟುಂಬಗಳನ್ನು ಬಿ.ಪಿ.ಎಲ್. ಕುಟುಂಬಗಳಾಗಿ ಗುರುತಿಸಲಾಗಿದ್ದು, ಈ ಎಲ್ಲಾ ಕುಟುಂಬಗಳಿಗೂ ಬಿ.ಪಿ.ಎಲ್ ಪಡಿತರ ಚೀಟಿ ವಿತರಣೆ ಕಾರ್ಯ ನಡೆಯುತ್ತಿದೆ. ತಹಲ್‌ವರೆಗೆ 12,308 ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಆ) ತರೀಕೆರೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶದಿಂದ 19,386 ಹಾಗೂ ಪಟ್ಟಣ ಪ್ರದೇಶದಿಂದ 1428 ಕುಟುಂಬಗಳು ಬಿ.ಪಿ.ಎಲ್ ಪಡಿತರ ಚೀಟಿಯನ್ನು ಕೋರಿ ಅರ್ಜಿ ಸಲ್ಲಿಸಿದ್ದು, ಈ ಎಲ್ಲಾ ಅರ್ಜಿಗಳನ್ನು ಪರಿಶೀಲನೆಗೆ ಒಳಪಡಿಸಲಾಗಿರುತ್ತದೆ. ಪರಿಶೀಲನೆಯ ನಂತರ ಅರ್ಹ ಕುಟುಂಬಗಳಿಗೆ ದಿನಾಂಕ : 2.10.2003 ರೊಳಗಾಗಿ ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ಜೋಳ ಮತ್ತು ಭತ್ತ ಇವುಗಳ ಇಳುವರಿ ಹಾಗೂ ಖರ್ಚುಗಳ ವಿವರದ ಬಗ್ಗೆ

4253 (4882) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತ್ರಿಕೋಟ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಒಂದು ಹೆಕ್ಟೇರ್ ಪ್ರದೇಶದಲ್ಲಿ ಬರುವ ಜೋಳದ ಇಳುವರಿ ಎಷ್ಟು:

ಆ) ಒಂದು ಹೆಕ್ಟೇರ್ ಪ್ರದೇಶದಲ್ಲಿ ಬರುವ ಭತ್ತದ ಇಳುವರಿ ಎಷ್ಟು;

ಇ) ಭತ್ತದ ಬೆಳೆಗೆ ಒಂದು ಹೆಕ್ಟೇರ್ ಪ್ರದೇಶಕ್ಕೆ ತಗಲುವ ಖರ್ಚು ಎಷ್ಟು;

ಈ) ಜೋಳದ ಇಳುವರಿಗೆ ಒಂದು ಹೆಕ್ಟೇರ್ ಪ್ರದೇಶಕ್ಕೆ ತಗಲುವ ವೆಚ್ಚ ಎಷ್ಟು

ಶ್ರೀ ವಿ.ಎಸ್.ಕೌಜಲಗಿ (ಕೃಷಿ ಸಚಿವರು):

ಅ) ಸಾಮಾನ್ಯವಾಗಿ ಒಂದು ಹೆಕ್ಟೇರ್ ಪ್ರದೇಶದಲ್ಲಿ ಜೋಳದ ಇಳುವರಿ ಮಳೆ ಆಶ್ರಯದಲ್ಲಿ 10 ರಿಂದ 14 ಕ್ವಿಂಟಾಲ್ ಹಾಗೂ ನೀರಾವರಿಯಲ್ಲಿ 40–50 ಕ್ವಿಂಟಾಲ್ ಇರುತ್ತದೆ.

ಆ) ಮುಂಗಾರು ಹಂಗಾಮಿನಲ್ಲಿ ಸಾಮಾನ್ಯವಾಗಿ ಒಂದು ಹೆಕ್ಟೇರ್ ನೀರಾವರಿ ಪ್ರದೇಶಗಳಲ್ಲಿ ಭತ್ತದ ಇಳುವರಿ 40 ರಿಂದ 55 ಕ್ವಿಂಟಾಲ್ ಮತ್ತು ಮಳೆಯಾಶ್ರಯದಲ್ಲಿ 30–40 ಕ್ವಿಂಟಾಲ್ ಇರುತ್ತದೆ.

ಇ)	ಮುಂಗಾರು ನೀರಾವರಿಯಲ್ಲಿ ಅಧಿಕ ಇಳುವರಿ ತಳಿಗಳು	ವೆಚ್ಚ (ರೂ)
		20000–00 ದಿಂದ 27500–00
	ಮುಂಗಾರು ಖಚಿತವಾಗಿ ಮಳೆ ಯಾಗುವ ಪ್ರದೇಶಗಳಲ್ಲಿ ಅಧಿಕ ಇಳುವರಿ ತಳಿಗಳು	19000–00 ದಿಂದ 22500–00
	ಬೇಸಿಗೆಯಲ್ಲಿ ಅಧಿಕ ಇಳುವರಿ ತಳಿಗಳು	20400–00 ರಿಂದ 25500–00
ಈ)	ಮುಂಗಾರಿನಲ್ಲಿ ಹೈಬ್ರೀಡ್ ಮಳೆಯಾಶ್ರಿತ	ವೆಚ್ಚ (ರೂ)
		ರೂ. 5,300–00 ರಿಂದ 10,800–00
	ಮುಂಗಾರಿನಲ್ಲಿ ಸ್ಥಳೀಯ ಮಳೆಯಾಶ್ರಿತ	ರೂ. 8,200–00 ರಿಂದ 10,500–00
	ಹಿಂಗಾರಿನಲ್ಲಿ ಹೈಬ್ರೀಡ್ ಮಳೆಯಾಶ್ರಿತ	ರೂ. 6,000–00 ರಿಂದ 6,300–00
	ಹಿಂಗಾರಿನಲ್ಲಿ ಸ್ಥಳೀಯ ಮಳೆಯಾಶ್ರಿತ	ರೂ. 4,000–00 ದಿಂದ 5,000–00

ಮೇಲಿನ (ಇ) ಮತ್ತು (ಈ)ಗೆ

ಸಂಬಂಧಿಸಿದಂತೆ, ನೀಡಲಾಗಿರುವ ಸಾಗುವಳಿ ವೆಚ್ಚದಲ್ಲಿ ಬದಲಾಗುವ ವೆಚ್ಚಗಳಾದ ಬೀಜ, ಕೊಟ್ಟಿಗೆ ಗೊಬ್ಬರ ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿಗಳು, ನೀರಾವರಿ ಕೂಲಿ ಆಳುಗಳ

ಮಜೂರಿ ಇತ್ಯಾದಿಗಳು ಹಾಗೂ ಸ್ಥಿರ ವೆಚ್ಚಗಳಾದ ಕೃಷಿ ಉಪಕರಣಗಳ ಮೇಲೆ ಹೂಡಿದ ಬಂಡವಾಳಕ್ಕೆ ಬಡ್ಡಿ, ಭೂ ಕಂದಾಯ, ತೆರಿಗೆ, ಹೂಡಿದ ಬಂಡವಾಳಕ್ಕೆ ಬಡ್ಡಿ, ನಿರ್ವಹಣಾ ಸಂಭಾವನೆ, ಗೇಣಿ ಮೌಲ್ಯ, ಇತ್ಯಾದಿಗಳು ಸೇರಿರುತ್ತವೆ.

(ಆಧಾರ:ಬೆಳೆಗಳ ವಲಯವಾರು ಸಾಗುವಳಿ ವೆಚ್ಚದ 1999–2000 ರ ವರದಿ)

ಬಿಜಾಪುರ ಜಿಲ್ಲೆಯ ತೋಟಗಾರಿಕಾ ಇಲಾಖೆಯ ದ್ರಾಕ್ಷಿ ಯೋಜನಾ ವಿಭಾಗದ ಕಾರ್ಯಗಳ ಬಗ್ಗೆ

4254 (4883) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತ್ರಿಕೋಟ)ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ತೋಟಗಾರಿಕೆ ಇಲಾಖೆಯಲ್ಲಿ ದ್ರಾಕ್ಷಿ ಯೋಜನಾ ವಿಭಾಗ ಕಾರ್ಯನಿರ್ವಹಿಸುತ್ತಿದೆಯೇ;

ಆ) ಈ ದ್ರಾಕ್ಷಿ ಯೋಜನೆ ವಿಭಾಗದ ಕಾರ್ಯಗಳೇನು;

ಇ) ವಿಭಾಗಕ್ಕೆ ಮಂಜೂರಾದ ಹುದ್ದೆಗಳೆಷ್ಟು; ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳೆಷ್ಟು;

ಈ) ದ್ರಾಕ್ಷಿ ಯೋಜನಾ ವಿಭಾಗವು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳ ಕೊರತೆ ಇರುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ದ್ರಾಕ್ಷಿ ಹೆಚ್ಚಾಗಿ ಬೆಳೆಯುವ ಈ ಜಿಲ್ಲಿಯಲ್ಲಿಯೇ ದ್ರಾಕ್ಷಿ ಯೋಜನಾ ಕಾರ್ಯ ಚಟುವಟಿಕೆಗಳು ಶೂನ್ಯವಾಗಿರುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುವುದು;

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಕಾರ್ಯನಿರ್ವಹಿಸುತ್ತಿದೆ

ಆ) ಈ ವಿಭಾಗವು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಬಿಜಾಪುರ ರವರ ಅಧೀನದಲ್ಲಿದ್ದು ದ್ರಾಕ್ಷಿಗೆ ಸಂಬಂಧಪಟ್ಟ ವಿಷಯು/ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಇ) 3 ಹುದ್ದೆಗಳು

ಹಾಲಿ ಎಲ್ಲಾ ಹುದ್ದೆಗಳು ಖಾಲಿಯಿರುತ್ತವೆ.

ಈ) ಸ್ಥಳೀಯ ಇಲಾಖಾ ಪ್ರಭಾರಿ ಅಧಿಕಾರಿಗಳು ದ್ರಾಕ್ಷಿಯೋಜನೆ ಅನುಷ್ಠಾನಗಳ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾರೆ ದ್ರಾಕ್ಷಿ ಯೋಜನಾ ವಿಭಾಗದಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಉ) ಬಿಜಾಪುರ ಜಿಲ್ಲೆಯಲ್ಲಿ ಇಲಾಖೆಯಿಂದ ಹೆಚ್ಚಿನ ರೀತಿಯ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ ಮತ್ತು ದ್ರಾಕ್ಷಿ ಅಭಿವೃದ್ಧಿಗಾಗಿ ಇಲಾಖೆಯಿಂದ ಅನೇಕ ರೈತಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯ ದ್ರಾಕ್ಷಿ ರೈತರುಗಳಿಗೆ ಪ್ರದೇಶ ವಿಸ್ತರಣಾ, ಮಿನಿಕಿಟ್‌ಗಳ ವಿತರಣೆ, ಪ್ಲಾಸ್ಟಿಕ್ ಕ್ರೆಟ್ ಹಾಗೂ ಕಾರೋಗೆಟೆಡ್ ಕಾರ್ಡ್‌ಬೋರ್ಡ್ ಬಾಕ್ಸ್‌ಗಳ (ಒಣದ್ರಾಕ್ಷಿಪ್ಯಾಕಿಂಗ್‌ಗಾಗಿ) ವಿತರಣೆ, ಪಕ್ಷಿ ನಿರೋಧಕ ಬಲೆಗಳ ವಿತರಣೆ ಪ್ರತಿಕೂಲ ಹವಾಮಾನದಲ್ಲಿ

ಬೆಳದ ದ್ರಾಕ್ಷಿಯನ್ನು ರಕ್ಷಿಸಲು ಪಾಲಿಥೀನ ಹಾಳೆಗಳ ವಿತರಂಎ, ದ್ರಾಕ್ಷಿಯನ್ನು ಬಿಸಿಲಿನ ತಾಪದಿಂದ ರಕ್ಷಿಸಲು ನೆರಳು ಪರದೆಗಳ ವಿತರಣೆ, ದ್ರಾಕ್ಷಿಯನ್ನು ಹೊರದೇಶಗಳಿಗೆ ರಫ್ತು ಮಾಡಲು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ಇತ್ಯಾದಿ ಕಾರ್ಯಕ್ರಮಗಳಡಿ ಸವಲತ್ತುಗಳನ್ನು ನೀಡಲಾಗಿದೆ.

ಬಿಜಾಪುರ ಜಿಲ್ಲೆ ಸೇರಿದಂತೆ ದ್ರಾಕ್ಷಿ ರಫ್ತುವಲಯವನ್ನು ಸ್ಥಾಪಿಸಲು ಕೇಂದ್ರ ಸರ್ಕಾರದ ಅಪೇಡಾ ಸಂಸ್ಥೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಬಿಜಾಪುರ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆಯನ್ನಾಗಿ ಘೋಷಿಸುವ ಬಗ್ಗೆ

4255 (4884) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತ್ರಿಕೋಟ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಎಷ್ಟೆಷ್ಟು ಪ್ರದೇಶದಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ; ಅವುಗಳ ಪ್ರಮಾಣ ಎಷ್ಟು;

ಆ) ಜಿಲ್ಲೆ ತೋಟಗಾರಿಕೆ ಬೆಳೆಗಳನ್ನು ಬೆಳೆಯುವಲ್ಲಿ ರಾಜ್ಯದಲ್ಲಿ ವಿಜಾಪುರ ಜಿಲ್ಲೆಯು ಎಷ್ಟನೇ ಸ್ಥಾನದಲ್ಲಿದೆ;

ಇ) ವಿಜಾಪುರ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ ಎಂದು ಘೋಷಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಈ) ವಿಜಾಪುರ ಜಿಲ್ಲೆಯನ್ನು ತೋಟಗಾರಿಕಾ ಜಿಲ್ಲೆ ಎಂದು ಘೋಷಿಸಲಾಗಿದೆಯೇ;

ಉ) ಹಾಗಿದ್ದರೆ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ; ವಿಳಂಬಕ್ಕೆ ಕಾರಣಗಳೇನು;

ಊ) ಯಾವ ಕಾಲಮಿತಿಯಲ್ಲಿ ತೋಟಗಾರಿಕಾ ಜಿಲ್ಲೆ ಎಂದು ಘೋಷಿಸಲಾಗುವುದು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ವಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳನ್ನು ಒಟ್ಟು 46,361 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುಲಾಗುತ್ತಿದ್ದು, ಒಟ್ಟು ಉತ್ಪಾದನೆ 7.31 ಲಕ್ಷ ಟನ್‌ಗಳಷ್ಟಿದೆ. ವಿಜಾಪುರ ಜಿಲ್ಲೆಯುಲ್ಲಿ ಬೆಳೆಯಲಾಗುತ್ತಿರುವ ತೋಟಗಾರಿಕೆ ಬೆಳೆಗಳ ವಿವರ, ಪ್ರದೇಶ ಹಾಗೂ ಪ್ರಮಾಣದ ಬೆಳೆವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ತೋಟಗಾರಿಕೆ ಬೆಳೆಗಳನ್ನು ಬೆಳೆಯುವಲ್ಲಿ ರಾಜ್ಯದಲ್ಲಿ ವಿಜಾಪುರ ಜಿಲ್ಲೆಯು 16ನೇ ಸ್ಥಾನದಲ್ಲಿದೆ.

ಇ) ಇಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಊ) ಉದ್ಭವಿಸುವುದಿಲ್ಲ

ಅನುಬಂಧ

2000-01ನೇ ಸಾಲಿನ ಬಿಜಾಪುರ ಜಿಲ್ಲೆಯ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ (ಹೆಕ್ಟೇರುಗಳಲ್ಲಿ) ಮತ್ತು ಉತ್ಪನ್ನ (ಟನ್ನುಗಳಲ್ಲಿ) ವಿವರಗಳು.

ಕ್ರಮ ಸಂಖ್ಯೆ	ಬೆಳೆಯ ಹೆಸರು	Bijapur	
		ವಿಸ್ತೀರ್ಣ	ಉತ್ಪನ್ನ
1. ಹಣ್ಣಿನ ಬೆಳೆಗಳು			
1	ಮಾವು	1405	9842
2	ಬಾಳೆ ಹಣ್ಣು	1524	38352
3	ಸೀಬೆ	226	4520
4	ಸಪೋಟ	601	6010
5	ಹುಳಿಜಾತಿ	5451	136212
6	ದಾಳಿಂಬೆ	4251	42510
7	ಹಲಸು	2	0
8	ಪರಂಗಿ	157	11775
9	ಬೋರೆ	438	13140
10	ದ್ರಾಕ್ಷಿ	3108	46591
11	ಅಂಜೂರ	4	40
12	ಇತರೇ	179	537
	ಒಟ್ಟು – ಹಣ್ಣಿನ ಬೆಳೆಗಳು	17346	309529
2. ತರಕಾರಿ ಬೆಳೆಗಳು			
1	ಟೊಮಾಟೋ	963	30835
2	ಬದನೆ	736	18400
3	ಹುರುಳಿಕಾಯಿ	33	330
4	ಈರುಳ್ಳಿ	14024	280480
5	ಹಸಿರು ಮೆಣಸಿನಕಾಯಿ	995	6965
6	ಸಿಹಿ ಗೆಣಸು	143	1716
7	ಕೋಸು	130	2132
8	ಬಟಾಣಿ	2	30
9	ಬೆಂಡೇಕಾಯಿ	969	6783
10	ಮೂಲಂಗಿ	656	6560
11	ಬೀಟ್ ರೂಟ್	41	697

1	2	3	4
12	ಕೆಂಪು ಮೂಲಂಗಿ	883	18538
13	ದೊಣ್ಣೆ ಮೆಣಸಿನಕಾಯಿ	108	972
14	ಕುಂಬಳ	1252	17247
15	ಸೊಪ್ಪಿನ ತರಕಾರಿಗಳು	615	4963
16	ಇತರೇ	981	3896
	ಒಟ್ಟು – ತರಕಾರಿ ಬೆಳೆಗಳು	**22531**	**400544**
3.	ಸಾಂಬಾರು ಬೆಳೆಗಳು		
1	ಹುಣಸೆ	691	3455
2	ಅರಿಶಿಣ	174	1322
3	ಬೆಳ್ಳುಳ್ಳಿ	941	7528
4	ಮೆಣಸಿನ ಕಾಯಿ	886	886
5	ಧನಿಯಾ	1410	1410
6	ಸಬ್ಬೀಗೆ	70	420
7	ಪಾಪ್ರಿಕಾ	3	36
8	ಇತರೇ	293	919
	ಒಟ್ಟು – ಸಾಂಬಾರು ಬೆಳೆಗಳು	**4468**	**16046**
4.	ತೋಟದ ಬೆಳೆಗಳು		
1	ತೆಂಗು (ಲಕ್ಷ ಕಾಯಿಗಳಲ್ಲಿ)	994	108
2	ಅಡಿಕೆ	4	0
3	ವಿಳ್ಯೇದೆಲೆ (ಲಕ್ಷ ಎಲೆಗಳಲ್ಲಿ)	451	9020
	ಒಟ್ಟು ತೋಟದ ಬೆಳೆಗಳು	1449	
5.	ವಾಣಿಜ್ಯ ಪುಷ್ಪಾಭಿವೃದ್ಧಿ ಬೆಳೆಗಳು		
1	ಆಸ್ಟರ್	7	42
2	ಕನಕಾಂಬರ	2	4
3	ಚೆಂಡುಹೂ	333	3330
4	ಮಲ್ಲಿಗೆ	63	441
5	ಸೇವಂತಿಗೆ	87	1305
6	ಸುಗಂಧರಾಜ	16	176
7	ಸುಗಂಧರಾಜ	19	285
8	ಗುಲಾಬಿ	36	72
9	ಇತರೇ	4	6
	ಒಟ್ಟು – ವಾಣಿಜ್ಯ ಪ್ರಷ್ಪಾಭಿವೃದ್ಧಿ ಬೆಳೆಗಳು	**567**	**5304**
	ಒಟ್ಟು – ಎಲ್ಲಾ ಬೆಳೆಗಳು	46361	731423

	ವಿಸ್ತೀರ್ಣ (ಎಕರೆ)	ಉತ್ಪನ್ನ (ಟನ್ನುಗಳಲ್ಲಿ)
1) ಹಣ್ಣಿನ ಬೆಳೆಗಳು	17,346	309529
2) ತರಕಾರಿ ಬೆಳೆಗಳು	22,531	400544
3) ಸಾಂಬಾರು ಬೆಳೆಗಳು	4,468	16046
4) ಪುಷ್ಪ ಬೆಳೆಗಳು	567	5304
5) ತೋಟದ ಬೆಳೆಗಳು	1,449	–
ಒಟ್ಟು	46,361	7,31,423

ರಾಜ್ಯದಲ್ಲಿ ಕೃಷಿ ಆಹಾರ ಉದ್ಯಮ ಸ್ಥಾಪನೆಯ ಬಗ್ಗೆ

4256 (4885) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತ್ರಿಕೋಟ) ಮಾನ್ಯ ಕೃಷಿ ಉತ್ಪನ್ನ ಸಂಸ್ಕರಣಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಆಹಾರ ಉದ್ಯಮವನ್ನು ಕಟ್ಟಲು ಇರುವಂತಹ ಅನುಕೂಲತೆಗಳೇನು?

ಆ) ರಾಜ್ಯದ ಯಾವ ಜಿಲ್ಲೆಗಳಲ್ಲಿ ಇಂತಹ ಅನುಕೂಲತೆಗಳಿವೆ;

ಇ) ಕೃಷಿ ಆಹಾರ ಉದ್ಯಮಕ್ಕೆ ಸರ್ಕಾರದಿಂದ ಪ್ರೋತ್ಸಾಹ ನೀಡಲಾಗುತ್ತಿದೆಯೇ;

ಈ) ಹಾಗಿದ್ದರೆ, ಯಾವ ಅನುಕೂಲಕರವಾದ ನಿರ್ಧಾರವನ್ನು ಕೈಗೊಂಡು ಪ್ರೋತ್ಸಾಹ ನೀಡಲಾಗುವುದು;

ಉ) " ಆಹಾರ ಕರ್ನಾಟಕ ನಿಯಮಿತ " ಎನ್ನುವ ವಿಶೇಷವಾಹಿನಿಯ ಸ್ಥಾಪನೆಯ ಉದ್ದೇಶಗಳೇನು;

ಊ) ಹಾಗಿದ್ದರೆ, ಈ ವಿಶೇಷವಾಹಿನಿಯನ್ನು ಸ್ಥಾಪಿಸಲಾಗಿದೆಯೇ ? ಸ್ಥಾಪನೆಗಾಗಿ ಸರ್ಕಾರ ಹಾಕಿಕೊಂಡಿರುವ ನಿರ್ದಿಷ್ಟವಾದ ಕಾಲಮಿತಿ ಏನು ?

ಋ) ವಿಶೇಷವಾಹಿನಿಯ ಮೂಲಕ ರಾಜ್ಯದ ಯಾವ ಜಿಲ್ಲೆಗಳಲ್ಲಿ ಕೃಷಿ ಆಹಾರ ಸಂರಕ್ಷಣೆಯನ್ನು ಕೈಗೊಳ್ಳಲಾಗುವುದು ?

ಶ್ರೀ ಜಿ.ರಾಜುಗೌಡ (ಕೃಷಿ ಉತ್ಪನ್ನ ಸಂಸ್ಕರಣಾ ರಾಜ್ಯ ಸಚಿವರು):

ಅ) ಅನುಬಂಧ – 1 ರಲ್ಲಿ ನೀಡಲಾಗಿದೆ.

ಆ) ಬೆಳಗಾಂ, ಮಂಡ್ಯ, ಕೋಲಾರ, ಚಿತ್ರದುರ್ಗ, ಬಾಗಲಕೋಟೆ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಅನುಕೂಲತೆಗಳಿರುವುದನ್ನು ಗುರುತಿಸಸಲಾಗಿದೆ.

ಇ) ಪ್ರೋತ್ಸಾಹ ನೀಡಲಾಗುವುದು.

ಈ) ಅನುಬಂಧ – 1 ರಲ್ಲಿ ನೀಡಲಾಗಿದೆ.

ಉ) ರಾಜ್ಯದಲ್ಲಿ, ಆಯ್ಕೆ ಮಾಡಿದ ಸ್ಥಳಗಳಲ್ಲಿ ಆಹಾರ ಸಂಸ್ಕರಣ ಘಟಕಗಳನ್ನು ಸ್ಥಾಪಿಸುವ ಸಲುವಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲು.

ಊ) ಸ್ಥಾಪಿಸಲಾಗಿದೆ.

ಋ) ಮೇಲೆ (ಅ) ದಲ್ಲಿರುವಂತೆ.

ANNEXURE

The following incentives and concessions will be extended to the Agro Food Processing Industries.

a) Agro Food Processing Industries will be declared as "Seasonal Industries" for the purpose of Labour Act. Those industries will also be exempted from payment of minimum demand charges to the KPCTL, during closure period of more than 90 days at a time.

b) 100% exemption from payment of Electricity Tax and levy of concessional ST of 4% of liquid fuel used for Captive Power Generation, without any time limit, except for the units located in Bangalore Urban and Bangalore Rural Districts.

c) All Agro Food Processing Industries which purchase fruits and vegetables directly from the farmers on contract farming basis would be exempted from payment of Market Fee/Cess under the APMC Act.

d) All Agro Food Processing Industries will be exempted from payment of Conversion Fine when they purchase agricultural lands for establishing the industriy/Food park, this benefit will be available in all Agro Food Technology Parks without any restrictions on the extent of land, however for industries to be set up out side the parks, the benefits will be available only for a maximum of 100 acres of land in each case.

e) Agro Food Processing Industries will be encouraged to participate in national and international exhibitions and seminars for which purpose an appropriate incentives scheme will be formulated separetely.

f) The incentives available under the New Industries Policy for obtaining ISO and other international certification will be extended for Agro Food Processing Industries in respect of HACCP and other similar safety related regulations and processes.

g) All Agro Food Processing Industries listed Annexure-2 will be eligible for incentives as per the New Industrial Policy 2001-2006 vide Government Order No.CI 167 SPI 2001 dated 20th June 2001.

h) Reimbursement of technology transfer fee, consultancy fee/ contract research fee, if the technology is transferred through a R & D Institutions like Central Food Technological Research Institute, Defence

Food Research Laboratory etc. subject to a ceilling of Rs.25,000/- or 25% of technology fee whichever is lower from the Technology Upgradation fund.

Annexure-2

Unless specified otherwise, Agro Food Processing Industries are defined to include the following:

1. Fruit & Vegetable processing, including grading/packing;

2. Food grain milling/processing, using modern technology and equipment to be specified separately by the directorate of industries & Commerce;

3. Dairy products (including milk processing and milk based products);

4. Processing of poultry, eggs, meat and meat products;

5. Fish pocessing;

6. Bread, Oilseed meals (edible), breakfast foods, biscuits, confectionery (including cocoa processing and chocolate oil expellers and refining, malt extract, protein isolates, high protein food, weaning foods, extruded/other ready to eat food products and all other processed foods (excluding non-packed food items served in Hotels and Restaurants of all categories);

7. Fruit based ready to serve beverages;

8. Tissue Culture Laboratories, Green Houses, Green House Nurseries & Seed Production Units, based on modern scientific methods to meet industry standards;

9. Floiculture;

10. Cold Storage Units;

11. Refrigerated Transport Vehicles/Containers (excluding second hand refurbished vehicles/containers);

12. Units manufacturing food-grade packaging materials for Food Processing Industry;

13. Units engaged in packaging, canning and bottling of processed foods;

14. Units manufacturing additives, preservatives, colours and fragrant for the Processed Food Industry;

15. Bio-technology and Bio-informatics industries.

16. Commodity grading and packaging industry;

17. Processing of plantation crops including tea and coffee, forest produce such as herbal, medicinal and aromatic plants, coconut based products and Arecanut/ Arecanut based products.

18. Sugar Industry (excluding Molasses/Alcohol).

Note: Any ambiguity/difference of opinion in interpretation of the above definition will be decided upon by the FPMC as detailed in Para No.6 of Policy Implementation & Monitoring.

ರಾಜ್ಯದಲ್ಲಿ ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಯ ಬಗ್ಗೆ

4257 (4886) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತ್ರಿಕೋಟ) ಮಾನ್ಯ ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಹಾರ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲಾಗಿದೆಯೇ;

ಆ) ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಆಹಾರ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲಾಗಿದೆ;

ಇ) ಆಹಾರ ಸಂಸ್ಕರಣ ಘಟಕಗಳನ್ನು ಸ್ಥಾಪಿಸದೇ ಇದ್ದಲ್ಲಿ ಸರ್ಕಾರ ಇಂತಹ ಘಟಕಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆಯೇ;

ಈ) ಹಾಗಿದ್ದರೇ ರಾಜ್ಯದ ಯಾವ ಜಿಲ್ಲೆಗಳಲ್ಲಿ ಘಟಕಗಳನ್ನು ಸ್ಥಾಪಿಸಲಾಗುವುದು ?

ಉ) ಸ್ಥಾಪನೆಗಾಗಿ ನಿಗದಿಪಡಿಸಿದ ನಿರ್ದಿಷ್ಟ ಕಾಲಮಿತಿ ಏನು ?

ಶ್ರೀ ಜಿ.ರಾಜುಗೌಡ (ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು):

ಅ) ಇಲ್ಲ.

ಆ) ರಾಜ್ಯದಲ್ಲಿ ಬೆಳಗಾಂ, ಮಂಡ್ಯ, ಗುಲ್ಬರ್ಗಾ, ಕೋಲಾರ, ಬಾಗಲಕೋಟೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಆಹಾರ ಸಂಸ್ಕರಣಾ ಘಟಕಗಳು ಸ್ಥಾಪಿಸಲಾಗುವುದು.

ಇ) ಮೇಲೆ ತಿಳಿಸಿರುವಂತೆ 6 ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಸಲುವಾಗಿ ಫುಡ್ ಕರ್ನಾಟಕ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಈ) ಮೇಲೆ (ಆ) ದಲ್ಲಿರುವಂತೆ.

ಉ) 3 ರಿಂದ 5 ವರ್ಷಗಳು.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಬೈಲಾ ಬದಲಾವಣೆ ಕುರಿತು

4258 (4938) : ಶ್ರೀ ರವೀಂದ್ರನಾಥ್.ಎಸ್.ಎ. (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ. ದೊಡ್ಡಬಾತಿ ಇದರ ಕಬ್ಬು ನುರಿಸುವ ಸಾಮರ್ಥ್ಯವನ್ನು ಹಾಲಿ 1250 ಟಿಸಿಡಿ 1800 ಟಿಸಿಡಿಗೆ ಹೆಚ್ಚಿಸುತ್ತಿರುವುದರಿಂದ ಕಾರ್ಖಾನೆಯ ಬೈಲಾ ಸಂಖ್ಯೆ. 4(vii)(ಸಿ)ಗೆ ಸೂಕ್ತ ತಿದ್ದುಪಡಿ ತಂದು ಅರ್ಹತೆ ಇರುವವರನ್ನು

'ಎ' ತರಗತಿ ಸದಸ್ಯರನ್ನಾಗಿ ಮಾಡಿಕೊಳ್ಳಲು ಕ್ರಮವಿಡತಕ್ಕದ್ದೆಂದು ಕಬ್ಬು ಅಭಿವೃದ್ಧಿ ಆಯುಕ್ತರು ಸದರಿ ಕಾರ್ಖಾನೆಯವರು ಜೂನ್ 1999ರಲ್ಲಿ ಆದೇಶಿಸಿರುವುದು ನಿಜವೇ; ಸದರಿ ಆದೇಶದ ಪ್ರತಿ ಒದಗಿಸುವುದು

ಆ) ಸದರಿ ಆದೇಶವನ್ನು ಕಾರ್ಖಾನೆಯವರು ಪಾಲಿಸಿರುತ್ತಾರೆಯೇ; ವಿವರಿಸುವುದು;

ಇ) ಪಾಲಿಸಿರದೇ ಇದ್ದಲ್ಲಿ, ಸರ್ಕಾರ ಸದರಿ ಕಾರ್ಖಾನೆಯ ಮೇಲೆ ತೆಗೆದುಕೊಂಡಿರುವ ಮತ್ತು ತೆಗೆದುಕೊಳ್ಳುವ ಕ್ರಮಗಳೇನು ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

ಅ) ಅಂತಹ ಆದೇಶ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ N.C.D.C.ನೀಡುವ ಸಾಲದ ಬಗ್ಗೆ

4259 (4940) : ಶ್ರೀ ರವೀಂದ್ರನಾಥ್ ಎಸ್.ಎ.(ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ(N.C.D.C.) ಮತ್ತು ಕೇಂದ್ರ ಸರ್ಕಾರದ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಕೊಡುವ ಸಾಲಕ್ಕೆ ರಾಜ್ಯ ಸರ್ಕಾರದ ಗ್ಯಾರಂಟಿ ಕಡ್ಡಾಯವೇ;

ಆ) ಹೌದಾದಲ್ಲಿ, ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ ಇದಕ್ಕೆ ಇದುವರೆಗೆ (N.C.D.C.) ರವರು ಮತ್ತು ಸಕ್ಕರೆ ಅಭಿವೃದ್ಧಿ ನಿಧಿಯಿಂದ ಕೊಟ್ಟಿರುವ ಸಾಲವೆಷ್ಟು;

ಇ) ಇವುಗಳಿಗೆ ವಿಧಿಸುವ ಬಡ್ಡಿ ದರವೇನು;

ಈ) ಇದುವರೆಗೂ ಕಾರ್ಖಾನೆಯವರು ವಾಪಾಸ್ ಮಾಡಿರುವ ಸಾಲದ ಮೊತ್ತವೇನು; ಈ ಸಾಲಗಳಿಗೆ ಸರ್ಕಾರ ಕೊಟ್ಟಿರುವ ಗ್ಯಾರಂಟಿ ಪತ್ರಗಳ ದೃಢೀಕೃತ ಪ್ರತಿಗಳನ್ನು ಒದಗಿಸುವುದು.

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

ಅ) ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಕೇಂದ್ರ ಸರ್ಕಾರದ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಕಬ್ಬು ಅಭಿವೃದ್ಧಿಗೆ, ಆಧುನೀಕರಣ ಮತ್ತು ಸಾಮರ್ಥ್ಯ ವಿಸ್ತರಣೆ ಸಹ ವಿದ್ಯುತ್ ಮತ್ತು ಎಥನಾಲ್ ಉತ್ಪಾದನೆಗೆ ಕೊಡುವ ಸಾಲಕ್ಕೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸಕ್ಕರೆ ಕಾರ್ಖಾನೆಗಳ ನಡುವೆ ತ್ರಿಪಕ್ಷಿಯ ಒಡಂಬಡಿ ಕೆಮಾಡಿಕೊಳ್ಳಬೇಕಾಗುತ್ತದೆ ಹಾಗೂ ಸರ್ಕಾರದ ಗ್ಯಾರಂಟಿ/ಬ್ಯಾಂಕ್ ಗ್ಯಾರಂಟಿ ನೀಡಬೇಕಾಗಿರುತ್ತದೆ.

ಎನ್‌ಸಿಡಿಸಿಯು ಸಕ್ಕರೆ ಕಾರ್ಖಾನೆಗಳಿಗೆ ನೇರವಾಗಿ ಸಾಲ ನೀಡುವಂತಹ ಸಂದರ್ಭದಲ್ಲಿ ಆಯಾ ಪ್ರಕರಣಗಳಿಗೆ ಅನುಗುಣವಾಗಿ ಸರ್ಕಾರದ ಗ್ಯಾರಂಟಿ ಅವಶ್ಯವೆನಿಸಿದಲ್ಲಿ, ಅಂತಹ ಪ್ರಕರಣಗಳನ್ನು ಪರಿಶೀಲಿಸಿ ಸರ್ಕಾರದ ಗ್ಯಾರಂಟಿ ನೀಡಲಾಗುತ್ತಿದೆ.

(ಆ) ಮತ್ತು (ಇ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯು ಎಸ್‌ಡಿಎಫ್‌ನಿಂದ ರೂ.228.17 ಲಕ್ಷ ಸಾಲ ಪಡೆದಿರುತ್ತದೆ. ಸದರಿ ಸಾಲಕ್ಕೆ ಶೇ 9 ರಷ್ಟು ಬಡ್ಡಿ ಹಾಗೂ ಸುಸ್ತಿಯಾದರೆ ಶೇ 2.5 ರಂತೆ ಸುಸ್ತಿ ಬಡ್ಡಿ ವಿಧಿಸಲಾಗುತ್ತಿದೆ ಅದೇ ರೀತಿ ಎನ್‌ಸಿಡಿಸಿಯು ರಾಜ್ಯ ಸರ್ಕಾರದ ಮುಖಾಂತರ ರೂ.125.00 ಲಕ್ಷ ಬಿಡುಗಡೆ ಮಾಡಿದ್ದು, ಶೇ 15.5ರಷ್ಟು ಬಡ್ಡಿ ವಿಧಿಸುತ್ತಿದೆ.

ಈ) ಎಸ್‌ಡಿಎಫ್‌ನಿಂದ ಪಡೆದ ಸಾಲದ ಬಾಬ್ತು ರೂ.164.38 ಲಕ್ಷಗಳನ್ನು ಈಗಾಗಲೇ ಮರುಪಾವತಿ ಮಾಡಿದ್ದು, ಬಾಕಿಯಿರುವ ಸಾಲ ರೂ.63.79 ಲಕ್ಷಗಳನ್ನು ನಿಗದಿಪಡಿಸಿರುವ ಕಂತುಗಳ ಪ್ರಕಾರ ಪಾವತಿಸಲು ಕ್ರಮ ಕೈಗೊಳ್ಳಾಗುವುದು. ರಾಜ್ಯ ಸರ್ಕಾರದ ಮೂಲಕ ಪಡೆದಿರುವ ಎನ್‌ಸಿಡಿಸಿ ಸಾಲ ಮರುಪಾವತಿಯನ್ನು ಪ್ರಾರಂಭಿಸಿರುವುದಿಲ್ಲ. ಮೇಲ್ಕಂಡ ಸಾಲಗಳಿಗೆ ಸರ್ಕಾರವು ಗ್ಯಾರಂಟಿ ನೀಡದಿರುವುದರಿಂದ ಗ್ಯಾರಂಟಿ ಪತ್ರದ ದೃಢೀಕೃತ ಪ್ರತಿ ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯು ಇಬ್ಬಗೆಯ ನೀತಿಯನ್ನು ಅನುಸರಿಸುತ್ತಿರುವ ಬಗ್ಗೆ

4260 (4940) : ಶ್ರೀ ರವೀಂದ್ರನಾಥ್ ಎಸ್.ಎ.(ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಇದರ ಆಡಳಿತ ವರ್ಗದವರು ಕಾರ್ಮಿಕರಲ್ಲಿ ಇಬ್ಬಗೆಯ ನೀತಿ ಅನುಸರಿಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ) ಕಾರ್ಖಾನೆಯಲ್ಲಿ ಆಡಳಿತ ವರ್ಗದವರು ಕಾರ್ಮಿಕರಲ್ಲಿ ಇಬ್ಬಗೆಯ ನೀತಿ ಅನುಸರಿಸುತ್ತಿರುವುದಿಲ್ಲ

ಉದ್ಭವಿಸುವುದಿಲ್ಲ.

ಭದ್ರ ಸಹಕಾರಿ ಸಕ್ಕರೆ ಕಾರ್ಖಾನೆಯ ಅವ್ಯವಹಾರಗಳನ್ನು ತಡೆಗಟ್ಟುವ ಬಗ್ಗೆ

4261 (4942) : ಶ್ರೀ ರವೀಂದ್ರನಾಥ್ ಎಸ್.ಎ.(ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತ ವಿರೋಧಿ ನೀತಿ, ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿರುವ ಮತ್ತು ಸರ್ಕಾರದ ಹಣಕ್ಕೆ ವಂಚನೆ ಮಾಡಲು ಹೊರಟಿರುವ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ ಇದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿ ಸದರಿ ಕಾರ್ಖಾನೆಯ ಷೇರುದಾರರೊಬ್ಬರು ದಾವಣಗೆರೆ ಜಿಲ್ಲಾಧಿಕಾರಿಗಳಿಗೆ 2001ರಲ್ಲಿ ಮನವಿ ಸಲ್ಲಿಸಿರುವುದು ನಿಜವೇ;

ಆ) ಹೌದಾದಲ್ಲಿ, ಈ ಬಗ್ಗೆ ಸದರಿ ಜಿಲ್ಲಾಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ದೊಡ್ಡಬಾತಿ, ಇದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿ ಸದರಿ ಕಾರ್ಖಾನೆಯ ಷೇರುದಾರರೊಬ್ಬರು 2001ರಲ್ಲಿ ಮನವಿ ಸಲ್ಲಿಸಿರುವ ಬಗ್ಗೆ ಕಂಡು ಬಂದಿರುವುದಿಲ್ಲವೆಂಬ ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ.

2) ಪ್ರಶ್ನೆ ಉದ್ಭವಿಸುವುದಿಲ್ಲ.

ಕಮಲಾಪುರ ಕ್ಷೇತ್ರದ ವ್ಯಾಪ್ತಿಯ ಮುಳುಗಡೆ ಪ್ರದೇಶದ ಸಂತ್ರಸ್ತ ಕುಟುಂಬದವರಿಗೆ ಪರಿಹಾರ ನೀಡುವ ಬಗ್ಗೆ.

4262 (4904) : ಶ್ರೀ ರೇವು ನಾಯಕ್ ಬೆಳಮಗಿ(ಕಮಲಪೂರ್) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ-ಜಿಲ್ಲೆ ಕಮಲಾಪುರ ಮತಕ್ಷೇತ್ರ ವ್ಯಾಪ್ತಿಯ ಬೆಳಕೋಟಾ ಧಮ್ಮೂರ ಗಂಡೋರಿ ನಾಲಾ ಯೋಜನೆಗಳಡಿಯಲ್ಲಿ ಮುಳಗಡೆ ಪ್ರದೇಶದ ವಸತಿ ಭೂ ಪರಿಹಾರವನ್ನು ಎಷ್ಟು ಕುಟುಂಬಗಳಿಗೆ ನೀಡಲಾಗಿದೆ ?

ಆ) ಪರಿಹಾರಕ್ಕೆ ಬಾಕಿ ಇರುವ ಕುಟುಂಬಗಳೆಷ್ಟು; ಬಾಕಿ ಇರಲು ಕಾರಣಗಳೇನು ? (ವಿವರ ಒದಗಿಸುವುದು)

ಶ್ರೀ ಹೆಚ್.ಕೆ.ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಗಂಡೋರಿ ನಾಲಾ ಯೋಜನೆ ಮುಳುಗಡೆಯಲ್ಲಿ ಬರುವ ಬೆಳಕೋಟ ಹಾಗೂ ಧಮ್ಮೂರ ಗ್ರಾಮಗಳಲ್ಲಿ ಒಟ್ಟು 686 ಕುಟುಂಬಗಳಿಗೆ ಭೂ ಹಾಗೂ ವಸತಿ ಪರಿಹಾರ ಧನ ನೀಡಲಾಗಿದೆ. (ಬೆಳಕೋಟ ಗ್ರಾಮದ 383 ಕುಟುಂಬಗಳಿಗೆ ಹಾಗೂ ಧಮ್ಮೂರ ಗ್ರಾಮದ 303 ಕುಟುಂಬಗಳಿಗೆ ಭೂ ಹಾಗೂ ವಸತಿ ಪರಿಹಾರವನ್ನು ನೀಡಲಾಗಿದೆ).

ಆ) ಬಾಕಿ 60 ಕುಟುಂಬಗಳಿಗೆ ಪರಿಹಾರ ನೀಡಬೇಕಾಗಿದೆ. ಈ ಕುಟುಂಬಗಳ ಮನೆಗಳ ಸ್ವಾಧೀನಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು. ಪ್ರಸ್ತಾವನೆ ವಿವಿಧ ಹಂತದಲ್ಲಿರುತ್ತದೆ.

ಕಮಲಾಪುರ ಮತಕ್ಷೇತ್ರದಲ್ಲಿ ಬ್ರಿಜ್ ಕಮ್ ಬ್ಯಾರೇಜ್ ನಿರ್ಮಾಣ ಮಾಡುವ ಬಗ್ಗೆ.

4263 (4905) : ಶ್ರೀ ರೇವು ನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಕಮಲಾಪುರ ಮತಕ್ಷೇತ್ರದಲ್ಲಿರುವ ನೀರಾವರಿ ಇಲಾಖೆಯ ವಿವಿಧ ಯೋಜನೆಗಳ ಬ್ರಿಜ್–ಕಮ್–ಬ್ಯಾರೇಜುಗಳು ಎಷ್ಟು ? ಅವು ಯಾವುವು ? (ವಿವರ ನೀಡುವುದು)

ಆ) ಬೆಣ್ಣೆತೋರಾ ಹತ್ತರಗಾ–ಹಿಪ್ಪರಗಾ ಬಳಿಗಳಲ್ಲಿ ಬ್ರಿಜ್–ಕಮ್–ಬ್ಯಾರೇಜುಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಯೋಜನೆ ಯಾವ ಹಂತದಲ್ಲಿದೆ.

ಇ) ಯಾವಾಗ ಈ ಬ್ರಿಜ್–ಕಮ್–ಬ್ಯಾರೇಜನ್ನು ನಿರ್ಮಾಣ ಮಾಡಲಾಗುವುದು ? ಇವುಗಳಿಗೆ ತಗಲುವ ವೆಚ್ಚವೆಷ್ಟು ? (ವಿರವ ನೀಡುವುದು)

ಶ್ರೀ ಹೆಚ್.ಕೆ.ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) "ನಮ್ಮೂರ ಬಾಂದಾರ" ಯೋಜನೆಯಡಿಯಲ್ಲಿ ರಾಜ್ಯದ ಎಲ್ಲಾ ನದಿಗಳು/ಮುಖ್ಯ ಹಳ್ಳಗಳಿಗೆ ಬಾಂದಾರುಗಳನ್ನು ನಿರ್ಮಿಸಲು ಸ್ಥಳ ಗುರುತಿಸುವಿಕೆಯು ನಡೆದಿದ್ದು ಇದಾದ ನಂತರ ವಿವರಗಳು ಲಭ್ಯವಾಗುವುದು.

ಆ) ಈ ಯೋಜನೆ ಬಗ್ಗೆ ವರದಿಯನ್ನು ಪಡೆಯಲಾಗುತ್ತಿದೆ.

ಇ) "ನಮ್ಮೂರ ಬಾಂದಾರ" ಯೋಜನೆಯಡಿಯಲ್ಲಿ ಕೈಗೊಳ್ಳಲು ಯೋಜಿಸಿರುವ ಬ್ಯಾರೇಜುಗಳ ಸ್ಥಳ ಗುರುತಿಸುವಿಕೆ ಕಾರ್ಯವನ್ನು ನಡೆಸಿದ್ದು ತನಿಖಾ ವರದಿಯ ನಂತರ ಯೋಜನೆಗಳ ಅಂದಾಜುಗಳನ್ನು ತಯಾರಿಸಲಾಗುವುದು. ಇದರ ನಂತರ ಈ ವಿವರಗಳು ಲಭ್ಯವಾಗುವುದು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಯಾಂತ್ರೀಕೃತ ಕೃಷಿ ಉಪಕರಣಗಳ ವಿತರಣೆ ಬಗ್ಗೆ

4264 (4890) : ಶ್ರೀ ಯು.ಆರ್.ಸಭಾಪತಿ (ಉಡುಪಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 2001–02 ಮತ್ತು 2002–03ರಲ್ಲಿ ವಿತರಿಸಲ್ಪಟ್ಟ ಸಹಾಯ ಧನ ಆಧಾರಿತ ಯಾಂತ್ರೀಕೃತ ಕೃಷಿ ಉಪಕರಣಗಳ ವಿವರಗಳನ್ನು ನೀಡುವುದು (ಉಪಕರಣದ ಹೆಸರು, ಸಹಾಯ ಧನದ ವಿವರಗಳು).

2) ಈ ಕೃಷಿ ಉಪಕರಣಗಳಿಗೆ ಕೇಂದ್ರ ಹಾಗೂ ರಾಜ್ಯದ ಸಹಾಯಧನ ವೆಷ್ಟು, ವಿವರ ನೀಡುವುದು

3) 2001–02 ಮತ್ತು 2002–03ರ ಸಾಲಿನಲ್ಲಿ ವಿತರಿಸಲ್ಪಟ್ಟ ಸಹಾಯ ಧನ ಆಧಾರಿತ ಎಷ್ಟು ಯಾಂತ್ರೀಕೃತ ಕೃಷಿ ಉಪಕರಣಗಳನ್ನು ವಿತರಿಸಲಾಗಿದೆ. ಜಿಲ್ಲಾವಾರು ವಿವರಗಳನ್ನು ನೀಡುವುದು.

ಶ್ರೀ ವಿ.ಎಸ್.ಕೌಜಲಗಿ (ಕೃಷಿ ಸಚಿವರು)

1) 2001–02 ಮತ್ತು 2002–03ನೇ ಸಾಲುಗಳಲ್ಲಿ ಈ ಕೆಳಗೆ ನಮೂದಿಸಿರುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ವಿಸ್ತೃತ ನಿರ್ವಹಣೆ ಮಾದರಿ ಯೋಜನೆಯಡಿ ವಿತರಿಸಲಾಗಿದೆ.

ಹೈಟೆಕ್ ಕೃಷಿ ಯಂತ್ರೋಪಕರಣ

1) ಕೈ ಚಾಲಿತ ಕೃಷಿಯಂತ್ರೋಪಕರಣಗಳು ಶೇ.50 ಅಥವಾ ಗರಿಷ್ಠ ರೂ.2000–00 ಸಹಾಯ ಧನ.
2) ಎತ್ತು ಚಾಲಿತ ಉಪಕರಣಗಳು ಶೇ.50 ಅಥವಾ ಗರಿಷ್ಠ ರೂ.3000–00 ಸಹಾಯ ಧನ.
3) ಎತ್ತು ಚಾಲಿತ ಟೋಲ್ ಕ್ಯಾರಿಯರ್ ಶೇ.50 ಅಥವಾ ಗರಿಷ್ಠ ರೂ.5000–00 ಸಹಾಯಧನ
4) ಯಂತ್ರ ಚಾಲಿತ ಉಪಕರಣ ಶೇ.30 ಅಥವಾ ಗರಿಷ್ಠ ರೂ.10000–00 ಸಹಾಯ ಧನ.
5) ಯಂತ್ರ ಚಾಲಿತ ಒಕ್ಕಣೆ ಯಂತ್ರ ಶೇ.30 ಅಥವಾ ಗರಿಷ್ಠ ರೂ.15000–00 ಸಹಾಯಧನ
6) ವಿಶೇಷ ಯಂತ್ರ ಚಾಲಿತ ಉಪಕರಣಗಳು (ಜೀರೋ ಟಿಲ್ ಡ್ರಿಲ್.ರೀಯ್ಯಸ್ಡ್ ಬೆಡ್ ಪ್ಲಾನಟರ್, ಕಬ್ಬಿನ ಕಟ್ಟಾವು ಯಂತ್ರ, ಆಲೂಗಡ್ಡೆ ಡಿಗ್ಗರ್, ನೆಲಗಡಲೆ ಡಿಗ್ಗರ್ ರೋಟವೇಟರ್ ಸ್ಟ್ರೀಪ್ ಟಿಲ್‌ಡ್ರಿಲ್ ಟ್ರಾಕ್ಟರ್‌ಚಾಲಿತ ರೀಪರ್ ಕ್ಲೀನರ್ ಕಂ ಗ್ರೇಡರ್, ಡ್ರೈಯರ್, ಸ್ಟಬಲ್ ಶೇವರ್, ಮೊಬಯಲ್ ಹಣ ಕಟಾವು ಯಂತ್ರ ಪವರ್ ಫೀಡರ್ ಮುಂತಾದವು) ಶೇ. 50 ಅಥವಾ ಗರಿಷ್ಠ ರೂ. 30000–00 ಸಹಾಯ ಧನ
7) ಸೆಲ್ಫ್ ಪ್ರೊಪೆಲ್ಡ್ ರೀಪರ್, ಬಿತ್ತದ ನಾಟಿ ಯಂತ್ರ ಮತ್ತು ಇದೇ ಬಗೆಯ ಸ್ವಯಂ ಚಾಲಿತ ಯಂತ್ರಗಳು ಶೇ. 50 ಅಥವಾ ರೂ. 50000–00 ಸಹಾಯಧನ.
8) ಸಣ್ಣ ಟ್ರಾಕ್ಟರ್ ಶೇಕಡಾ 30 ಅಥವಾ ಗರಿಷ್ಠ ರೂ. 3000–00 ಸಹಾಯ ಧನ
9) ಪವರ್ ಟಿಲ್ಲರ್ ಶೇ. 50 ಅಥವಾ ಗರಿಷ್ಠ ರೂ 30000–00 ಸಹಾಯಧನ
10) ಟ್ರಾಕ್ಟರ್ ಟಿಲ್ಲರ್‌ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳಿಗೆ ಶೇ. 25 ಅಥವಾ ಗರಿಷ್ಠ ರೂ. 40000–00 ಸಹಾಯಧನ.
11) ಹನಿ ನೀರಾವರಿ ಮತ್ತು ಶ್ರೀಯುತರು ನೀರಾವರಿ ಘಟಕ

ತುಂತುರು ನೀರಾವರಿ ಘಟಕಕ್ಕೆ ಶೇ. 50 ಅಥವಾ ಗರಿಷ್ಠ ರೂ. 1500–00 ಪರಿಶಿಷ್ಟ ಜಾತಿ ಪಂಗಡ : ಸಣ್ಣ ಮತ್ತು ಅತಿ ಸಣ್ಣ ರೈತರು: ಮಹಿಳಾ ರೈತರಿಗೆ ಶೇ. 33 ಅಥವಾ ರೂ 10000–00 ಗರಿಷ್ಠ ಸಾಮಾನ್ಯ ವರ್ಗದ ರೈತರಿಗೆ ಹನಿ ನೀರಾವರಿ ಘಟಕ 50 ಅಥವಾ ರೂ. 22500 ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ : ಸಣ್ಣ ಮತ್ತು ಅತಿ ಸಣ್ಣ ಮಹಿಳಾ ರೈತರಿಗೆ, ಶೇ. 25 ಅಥವಾ ಗರಿಷ್ಟ ರೂ. 16000–00 ಸಾಮಾನ್ಯ ವರ್ಗದ ರೈತರಿಗೆ.

12) ನವೀನ ಕೃಷಿ ಯಂತ್ರೋಪಕರಣ ಶೇ. 50 ಅಥವಾ ಗರಿಷ್ಟ ರೂ. 1000–00 ಸಹಾಯ ಧನ

13) ಸೋಲಾರ್ ಪಂಪಸೆಟ್ ಶೇ. 50 ಅಥವಾ ಗರಿಷ್ಟ ರೂ. 50000–00 ಸಹಾಯ ಧನ

ಆ) ವಿಸ್ತೃತ ನಿರ್ವಹಣಾ ಮಾದರಿಯಡಿಯಲ್ಲಿ ಕೃಷಿಯಾಂತ್ರೀಕರಣ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಶೇ. 90 ಪಾಲು ಅನುಧಾನ ಮತ್ತು ರಾಜ್ಯದ ಶೇಕಡ 10 ಪಾಲು ಅನುಧಾನದಲ್ಲಿ ವಿತರಿಸಲಾಗಿದೆ.

ಇ) ಈ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

2001–02 ಮತ್ತು 2002–03ನೇ ಸಾಲುಗಳಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿಯಲ್ಲಿ ರಿಯಾಯಿತಿ ಅನುಬಂಧ ದರದಲ್ಲಿ ವಿತರಣೆಯಾದ ಕೃಷಿ ಯಂತ್ರೋಪಕರಣಗಳ ಸಂಖ್ಯೆ

ಕ್ರ.ಸ	ಜಿಲ್ಲೆ	ಹೈಟೆಕ್ ಕೃಷಿ ಯಾಂತ್ರೀಕರಣ		ಸಣ್ಣ ಟ್ರಾಕ್ಟರ್ ವಿತರಣೆ		ಪವರ್ ಟಿಲ್ಲರ್ ವಿತರಣೆ		ಯಂತ್ರಚಾಲಿತ ಸಸ್ಯ ಸಂರಕ್ಷಣ ಉಪಕರಣ		ಹನಿ ಮತ್ತು ತುಂತುರು ನೀರಾವರಿ		ನವೀನ ಕೃಷಿ ಉಪಕರಣ		ಸೋಲಾರ್ ಪಂಪ್ ಸೆಟ್ ವಿತರಣೆ		ಒಟ್ಟು	
		2001–02	2002–03	2001–02	2002–03	2001–02	2002–03	2001–02	2002–03	2001–02	2002–03	2001–02	2002–03	2001–02	2002–03	2001–02	2002–03
1	ಬೆಂಗಳೂರು (ನಗರ)	34	0	0	2	22	18	0	0	0	0	0	0	0	0	56	20
2	ಬೆಂಗಳೂರು (ಗ್ರಾ)	15	33	0	0	14	0	0	0	0	0	0	0	0	0	29	33
3	ಕೋಲಾರ	103	18	0	27	21	12	0	3	0	0	0	0	0	1	124	61
4	ತುಮಕೂರು	99	5	0	12	64	34	0	0	0	0	0	0	0	10	163	61
5	ಶಿವಮೊಗ್ಗ	63	47	0	16	62	130	0	0	12	161	0	0	0	0	137	354
6	ಚಿತ್ರದುರ್ಗ	326	22	0	39	8	10	0	0	0	52	5	0	0	0	339	123
7	ದಾವಣಗೆರೆ	64	77	2	24	25	12	1	0	7	90	2	0	0	0	101	203
8	ಮೈಸೂರು	1	11	0	8	18	13	0	0	0	88	9	2	0	1	28	123
9	ಚಾಮರಾಜನಗರ	1	6	0	1	12	7	0	0	0	0	0	0	0	0	13	14
10	ಮಂಡ್ಯ	449	506	0	0	29	25	0	0	0	0	0	79	0	0	478	610
11	ಕೊಡಗು	2	1	0	0	8	26	15	0	15	55	0	0	0	0	40	82
12	ಹಾಸನ	100	2	0	7	19	16	5	0	25	0	27	0	0	0	174	25
13	ಚಿಕ್ಕಮಗಳೂರು	3	45	0	18	6	15	14	0	2	19	0	0	0	0	32	98
14	ದಕನ್ನಡ	2	287	0	0	16	74	0	0	0	22	0	0	0	0	18	383
15	ಉಡುಪಿ	14	64	2	1	20	113	0	0	0	79	0	0	0	0	36	257
16	ಧಾರವಾಡ	57	11	5	18	1	0	0	0	0	55	0	30	0	0	63	114
17	ಗದಗ	146	1	0	20	0	1	0	0	0	23	0	0	0	0	146	49
18	ಹಾವೇರಿ	17	4	3	38	3	1	10	0	0	8	0	0	0	0	33	51
19	ಉತ್ತರ ಕನ್ನಡ	0	157	0	8	50	62	0	0	0	10	0	0	0	22	50	259
20	ಬೆಳಗಾಂ	582	1250	2	12	0	15	0	0	31	95	0	35	0	0	615	1407
21	ಬಿಜಾಪುರ	282	375	2	8	0	1	0	0	8	306	25	10	0	0	317	700
22	ಬಾಗಲಕೋಟೆ	347	857	4	17	11	10	0	0	50	235	0	0	10	0	422	1119
23	ರಾಯಚೂರು	25	89	2	18	20	3	0	0	0	23	0	0	0	0	47	133
24	ಕೊಪ್ಪಳ	101	1	1	22	9	4	6	0	0	0	28	95	0	0	145	122
25	ಬಳ್ಳಾರಿ	39	37	0	77	4	6	0	0	0	72	0	0	0	0	43	192
26	ಗುಲ್ಬರ್ಗಾ	161	4998	2	11	0	0	0	0	0	41	0	0	0	2	163	5052
27	ಬೀದರ್	286	0	0	11	9	4	3	41	4	43	4	0	2	0	310	99
	ಒಟ್ಟು	3287	8904	25	415	451	613	52	44	161	1482	100	251	12	36	4122	11744

ರಾಜ್ಯದಲ್ಲಿ "ಬಿಸಿಯೂಟ" ಕಾರ್ಯಕ್ರಮಕ್ಕೆ ಆಹಾರ ಮತ್ತು ನಾಗರೀಕ ಇಲಾಖೆಯಿಂದ ಬಿಡುಗಡೆಯಾಗಿರುವ ಆಹಾರ ಪದಾರ್ಥಗಳ ವಿವರ ನೀಡುವ ಬಗ್ಗೆ.

4266 (4892) : ಶ್ರೀ ಯು.ಆರ್.ಸಭಾಪತಿ (ಉಡುಪಿ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ಬಿಸಿಯೂಟ ಕಾರ್ಯಕ್ರಮಕ್ಕೆ ಆಹಾರ ಮತ್ತು ನಾಗರೀಕ ಇಲಾಖಾ ವತಿಯಿಂದ ಬಿಡುಗಡೆಯಾಗಿರುವ ಅಕ್ಕಿ ಬೇಳೆಕಾಳುಗಳ ವಿವರಗಳನ್ನು ನೀಡುವುದು: (ಜಿಲ್ಲಾವಾರು):

ಆ) ಈಗಾಗಲೇ ಅನೇಕ ಜಿಲ್ಲೆಗಳಲ್ಲಿ ಕಳೆದ ಹಲವಾರು ವರ್ಷಗಳಿಂದ ಅತ್ಯಂತ ಯಶಸ್ವಿಯಾಗಿ ಅಕ್ಕಿ ವಿತರಣೆ ಮಾಡಿಕೊಂಡು ಬರುತ್ತಿದ್ದ ತಾಲ್ಲೂಕು ಕೃಷಿ ಉತ್ಪಾದಕ ಮಾರ್ಕೆಟಿಂಗ್ ಸೊಸೈಟಿಗಳಿಂದ ಈ ಅಕ್ಕಿ ವಿತರಣೆ ಮುಂದುವರಿಸಲು ಸರ್ಕಾರ ಕ್ರಮ ತೆಗೆದು ಕೊಂಡಿದೆಯೇ; ಈ ಬಗ್ಗೆ ಸರ್ಕಾರದ ನಿಲುವನ್ನು ವಿವರಿಸುವುದು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖಾ ವತಿಯಿಂದ ಬಿಸಿಯೂಟ ಕಾರ್ಯಕ್ರಮಕ್ಕೆ ಯಾವುದೇ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡುತ್ತಿಲ್ಲ. ಆದರೆ, ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಬಿಸಿಯೂಟ ಕಾರ್ಯಕ್ರಮಕ್ಕೆ ಬಿಡುಗಡೆಯಾಗುತ್ತಿರುವ ಜಿಲ್ಲಾವಾರು ಆಹಾರ ಧಾನ್ಯಗಳ ವಿವರಗಳು ಕೆಳಕಂಡಂತಿರುತ್ತದೆ:

(ಪ್ರಮಾಣ ಕ್ವಿಂ.ಗಳಲ್ಲಿ)

ಜಿಲ್ಲೆಯ ಹೆಸರು ವಿಭಾಗವಾರು	ಬಿಡುಗಡೆ ಮಾಡಿರುವ ಆಹಾರಧಾನ್ಯಗಳು		ಬೇಳೆಕಾಳು ಗಳು
	ಗೋಧಿ	ಅಕ್ಕಿ	ತೊಗರಿಬೇಳೆ
1. ಬೆಂಗಳೂರು ನಗರ	–	87368.70	492.51
2. ಬೆಂಗಳೂರು (ಗ್ರಾ)	–	47892.60	823.15
3. ಬಾಗಲಕೋಟೆ	14645.18	29290.36	1141.00
4. ಬೆಳಗಾಂ	–	66237.90	1800.00
ಚಿಕ್ಕೋಡಿ	–	78006.00	1314.00
5. ಬಳ್ಳಾರಿ	–	59660.26	700.00
6. ಬೀದರ್	16234.31	32468.63	920.70
7. ಬಿಜಾಪುರ	20420.03	40840.07	1176.00
8. ಚಾಮರಾಜನಗರ	–	23417.70	405.00

1	2	3	4	5
9.	ಚಿಕ್ಕಮಗಳೂರು	–	31080.00	576.00
10.	ಚಿತ್ರದುರ್ಗ	–	49675.50	905.00
11.	ದಾವಣಗೆರೆ	–	57702.60	972.00
12.	ದಕ್ಷಿಣಕನ್ನಡ	–	50116.20	860.00
13.	ಧಾರವಾಡ	–	50281.20	860.00
14.	ಗದಗ	–	32273.40	621.00
15.	ಗುಲ್ಬರ್ಗಾ	22659.19	45318.39	1183.00
	ಯಾದಗಿರಿ	12478.00	24955.63	513.00
16.	ಹಾಸನ	–	43571.10	800.00
17.	ಹಾವೇರಿ	–	53295.90	887.00
18.	ಕೊಡಗು	–	12474.90	243.50
19.	ಕೋಲಾರ	–	39543.30	1159.60
	ಚಿಕ್ಕಬಳ್ಳಾಪುರ	–	34045.50	–
20.	ಕೊಪ್ಪಳ	11667.55	23335.11	859.15
21.	ಮಂಡ್ಯ	–	42630.30	745.00
22.	ಮೈಸೂರು	–	69559.20	1045.00
23.	ರಾಯಚೂರು	16145.14	32290.28	1028.14
24.	ಶಿವಮೊಗ್ಗ	–	44071.50	804.00
25.	ತುಮಕೂರು	–	40942.50	695.00
	ಮಧುಗಿರಿ	–	30601.20	631.00
26.	ಉಡುಪಿ	–	28809.90	390.00
27.	ಉತ್ತರ ಕನ್ನಡ	–	42526.80	802.00
	ಒಟ್ಟು	1,14,249,40	13,44,282,63	25031,75

ಆ) ಬಿಸಿಯೂಟ ಯೋಜನೆಯಡಿಯಲ್ಲಿ ಆಯಾ ಜಿಲ್ಲೆಗಳಲ್ಲಿರುವ ಸಗಟು ಮಳಿಗೆದಾರರು ಅಂದರೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ಮತ್ತು ಟಿ.ಎ.ಪಿ.ಸಿ.ಎಂ.ಎಸ್.ಗಳು ಭಾರತ ಆಹಾರ ನಿಗಮದಿಂದ ಸಂಬಂದಿಸಿದ ಅಡಿಗೆ ಕೇಂದ್ರಕ್ಕೆ ಅಕ್ಕಿ/ಗೋಧಿಯನ್ನು ಸರಬರಾಜು ಮಾಡುತ್ತಿದ್ದಾರೆ (ಉಡುಪಿ ಜಿಲ್ಲೆಯೊಂದನ್ನು ಹೊರತುಪಡಿಸಿ). ಆದರೆ 3 ಕೆ.ಜಿ. ಅಕ್ಕಿಯನ್ನು ಶಾಲಾ ಮಕ್ಕಳಿಗೆ ವಿತರಿಸಲು ಸಗಟು ಮಳಿಗೆದಾರರು ಭಾರತ ಆಹಾರ ನಿಗಮದಿಂದ ಎತ್ತುವಳಿ ಮಾಡಿ ನ್ಯಾಯ ಬೆಲೆ ಅಂಗಡಿಗಳಿಗೆ ಸರಬರಾಜು ಮಾಡಿ ಆ ಮೂಲಕ ಶಾಲಾ ಮಕ್ಕಳಿಗೆ ವಿತರಣೆ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳ ಠೇವಣಿ ಮತ್ತು ಸಾಲ ನೀಡಿಕೆಯ ಬಗ್ಗೆ.

4267 (4893) : ಶ್ರೀ ಯು.ಆರ್.ಸಭಾಪತಿ (ಉಡುಪಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿರುವ ವಿವಿಧ ಕೇಂದ್ರ ಸಹಕಾರಿ ಬ್ಯಾಂಕ್‌ಗಳ 2001–02, 2002–03 ರಲ್ಲಿ ಸಂಗ್ರಹಿಸಿರುವ ಠೇವಣಿ ಮೊತ್ತ ಜಿಲ್ಲಾವಾರು ವಿವರಗಳನ್ನು ನೀಡುವುದು.

ಆ) ಈ ಕೇಂದ್ರ ಸಹಕಾರಿ ಬ್ಯಾಂಕ್‌ಗಳ ಮೂಲಕ ವಿವಿಧ ಜಿಲ್ಲೆಗಳಲ್ಲಿ ಬಿಡುಗಡೆಯಾಗಿರುವ ಕೃಷಿ ಸಾಲಗಳ ವಿವರಗಳನ್ನು ನೀಡುವುದು.

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ) ರಾಜ್ಯದಲ್ಲಿರುವ ಎಲ್ಲಾ ಡಿ.ಸಿ.ಸಿ. ಬ್ಯಾಂಕ್‌ಗಳಿಂದ 2001–02 ಮತ್ತು 2002–03ನೇ ಸಾಲಿಗೆ ಸಂಗ್ರಹಿಸಿರುವ ಒಟ್ಟು ಠೇವಣಿ ಅನುಕ್ರಮವಾಗಿ ರೂ:3496–71 ಹಾಗೂ ರೂ.3577–41 ಕೋಟಿ ಇರುತ್ತದೆ. ಠೇವಣಿ ಮೊತ್ತದ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಸಲ್ಲಿಸಿದೆ.

ಆ) ರಾಜ್ಯದಲ್ಲಿ ಈ ಕೇಂದ್ರ ಸಹಕಾರಿ ಬ್ಯಾಂಕ್‌ಗಳ ಮೂಲಕ ವಿವಿಧ ಜಿಲ್ಲೆಗಳಲ್ಲಿ ಬಿಡುಗಡೆಯಾಗಿರುವ ಕೃಷಿ ಸಾಲಗಳ ಒಟ್ಟು ಮೊತ್ತ 2002–03ನೇ ಸಾಲಿಗೆ ರೂ.1303.79 ಕೋಟಿ ಇರುತ್ತದೆ. ಇದರ ವಿವರಗಳನ್ನು ಅನುಬಂಧದ ಕಲಂ (5) ಮತ್ತು (6)ರಲ್ಲಿ ಸಲ್ಲಿಸಿದೆ.

ಅನುಬಂಧ–1

ಡಿ.ಸಿ.ಸಿ.ಬ್ಯಾಂಕುಗಳಿಂದ 2001–02 ಮತ್ತು 2002–03 ನೇ ಸಾಲಿನಲ್ಲಿ ಸಂಗ್ರಹಿಸಿರುವ ಠೇವಣಿ ಮೊತ್ತ ಮತ್ತು ಕೃಷಿ ಸಾಲದ ಮೊತ್ತ ಜಿಲ್ಲಾವಾರು ವಿವರಗಳು (ರೂ.ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಠೇವಣಿ 2001–02	ಠೇವಣಿ 2002–03	ವಿತರಿಸಿರುವ ಬೆಳೆಸಾಲ 2001–02	ವಿತರಿಸಿರುವ 2002–03
1	2	3	4	5	6
01.	ಬೆಂಗಳೂರು–1	187.78	170.87	35.76	24.43
02.	ಬೆಂಗಳೂರು–2				
03.	ಬೆಂಗಳೂರು–(ಗ್ರಾ)				
04.	ಚಿತ್ರದುರ್ಗ	32.95	34.37	10.22	14.61
05.	ಕೋಲಾರ	71.80	80.04	39.17	52.46
06.	ಶಿವಮೊಗ್ಗ	122.95	123.81	105.02	42.86
07.	ದಾವಣಗೆರೆ	85.69	83.89	60.49	71.14
08.	ತುಮಕೂರು	73.83	94.17	31.04	32.65
09.	ಚಿಕ್ಕಮಗಳೂರು	69.28	81.19	58.38	20.87
10.	ಹಾಸನ	95.87	97.18	56.93	43.86

1	2	3		4	5
11.	ಕೊಡಗು	87.90	101.99	97.51	93.20
12.	ಮಂಡ್ಯ	174.10	204.47	65.62	36.12
13.	ಮೈಸೂರು	88.90	90.27	45.03	45.98
14.	ಚಾಮರಾಜನಗರ				
15.	ದಕ್ಷಿಣ ಕನ್ನಡ	381.89	373.93	80.68	93.51
16.	ಉಡುಪಿ				
17.	ಬೆಳಗಾಂ	528.00	490.87	191.15	167.30
18.	ಬಿಜಾಪುರ	195.69	191.21	116.77	101.61
19.	ಬಾಗಲಕೋಟೆ	231.56	226.89	97.33	123.25
20.	ಧಾರವಾಡ	310.72	307.39	63.35	21.45
21.	ಗದಗ				
22.	ಹಾವೇರಿ				
23.	ಉತ್ತರ ಕನ್ನಡ	319.45	349.49	38.42	54.35
24.	ಬಳ್ಳಾರಿ	109.97	123.31	42.43	33.33
25.	ಬೀದರ್	249.04	267.45	140.79	170.76
26.	ಗುಲ್ಬರ್ಗಾ	21.66	24.65	13.53	19.11
27.	ರಾಯಚೂರು	58.49	59.92	29.40	40.94
28.	ಕೊಪ್ಪಳ				
	ಒಟ್ಟು	3496.71	3577.41	1419.02	1303.79

ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ತೂಕ ಯಂತ್ರಗಳ ಸತ್ಯಾಪನೆ ಮತ್ತು ಮುದ್ರೆಗಾಗಿ ಕಾನೂನು ಮಾಪನ ಶಾಸ್ತ್ರ ಇಲಾಖೆಗೆ ಪಾವತಿಸುವ ಶುಲ್ಕದ ಬಗ್ಗೆ

4268 (4864) : ಶ್ರೀ ಸದಾನಂದ ಗೌಡ ಡಿ.ವಿ.(ಪುತ್ತೂರು) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ತೂಕದ ಯಂತ್ರಗಳಿಗೆ ಸತ್ಯಾಪನೆ ಮತ್ತು ಮುದ್ರೆಗಾಗಿ ಕಾನೂನು ಮಾಪನ ಶಾಸ್ತ್ರ ಇಲಾಖೆಗೆ ಪಾವತಿಸುವ ಒಟ್ಟು ಶುಲ್ಕ ಎಷ್ಟು:
(ಜಿಲ್ಲಾವಾರು ವಿವರ ಒದಗಿಸುವುದು)

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಪಾವತಿಸುವ ಶುಲ್ಕದ ತಾಲ್ಲೂಕುವಾರು ಮಾಹಿತಿ ಒದಗಿಸುವುದು.

ಇ) ಅಂಗನವಾಡಿ ಕೇಂದ್ರಗಳ ತೂಕ ಯಂತ್ರಗಳ ಸತ್ಯಾಪನೆ ಮತ್ತು ಮುದ್ರೆ ಮಾಡುವ ಮೂಲಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಸಂಗ್ರಹಿಸುವ ಶುಲ್ಕವನ್ನು ಕಾನೂನು

ಮತ್ತು ಮಾಪನ ಶಾಸ್ತ್ರ ಇಲಾಖೆಯು ರಾಜ್ಯದ ರಾಜಸ್ವ ಸಂಗ್ರಹಣೆಯಲ್ಲಿ ತನ್ನ ಗುರಿ ಸಾಧನೆಯೆಂದು ಪರಿಗಣಿಸುವುದರಿಂದಾಗಿ ಇಲಾಖೆಯಿಂದ ಇಲಾಖೆಗೆ ವರ್ಗಾವಣೆಸುವ ಈ ಮೊತ್ತವು ವಾಸ್ತವವಾಗಿ ರಾಜ್ಯದ ಆದಾಯ(ರಾಜಸ್ವ) ಆಗುವುದಿಲ್ಲ. ಹೀಗಿರುವಾಗ ಈ ಶುಲ್ಕ ಪಾವತಿಯನ್ನು ಸರ್ಕಾರವು ಮನ್ನಾ ಮಾಡಲು ಕ್ರಮ ತೆಗೆದುಕೊಳ್ಳುವುದು ಸೂಕ್ತವೆಂದು ಸರ್ಕಾರವು ಏಕೆ ಪರಿಗಣಿಸಬಾರದು:

ಈ) ಸತ್ಯಾಪನೆ ಮತ್ತು ಮುದ್ರೆ ಮಾಡುವ ಬಗ್ಗೆ ಕೇಂದ್ರ ಸರ್ಕಾರವು ವಿನಾಯಿತಿ ನೀಡದೇ ಇರುವುದರಿಂದ ಇಲಾಖೆಯಿಂದ ಇಲಾಖೆಗೆ ವರ್ಗಾವಣೆಯಾಗುವ ರಾಜ್ಯ ಸರ್ಕಾರಕ್ಕೆ ಸೇರಿದ ಈ ಅನುದಾನವನ್ನು ಸತ್ಯಾಪನೆ ಮತ್ತು ಮುದ್ರ ಶುಲ್ಕ ವಿನಾಯಿತಿ ನೀಡುವ ಮೂಲಕ ಬೇರೆ ಅಭಿವೃದ್ಧಿ ಕಾರ್ಯಕ್ಕೆ ಬಳಸಬಹುದಲ್ಲವೆ: ಈ ನಿಟ್ಟಿನಲ್ಲಿ ಸರ್ಕಾರದ ನಿಲುವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಪ್ರತಿ ವರ್ಷ ರೂ.69.53 ಲಕ್ಷಗಳನ್ನು ಪಾವತಿಸಲಾಗುತ್ತಿದೆ.

ಜಿಲ್ಲಾವಾರು ಮಾಹಿತಿ ಅನುಬಂಧ 1 ರಲ್ಲಿ ಲಗತ್ತಿಸಿದೆ

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಸಂಸಬಂಧಿಸಿದ ತಾಲ್ಲೂಕುವಾರು ಮಾಹಿತಿ ಅನುಬಂಧ 2 ರಲ್ಲಿ ಲಗತ್ತಿಸಿದೆ.

ಇ) ದಿ ಕರ್ನಾಟಕ ಸ್ಟಾಂಡರ್ಸ್ ಆಫ್ ವೇಟ್ಸ್ ಅಂಡ್ ಮೆಸರ್ಸ್ (ಎನ್‌ಫೋರ್ಸ್‌ಮೆಂಟ್) ಕಾಯ್ದೆ 1985 ರನ್ವಯ ಶುಲ್ಕ ವಿನಾಯಿತಿ ನೀಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವುದಿಲ್ಲ.

ಈ) ಕಾಯ್ದೆಯನ್ನು ತಿದ್ದುಪಡಿ ಮಾಡಿ ಸತ್ಯಾಪನೆ ಮತ್ತು ಮುದ್ರೆಗೆ ತಗಲುವ ಶುಲ್ಕವನ್ನು ಕೇಂದ್ರ ಸರ್ಕಾರ ಮಾತ್ರ ಮನ್ನಾ ಮಾಡಬಹುದು.

ಅನುಬಂಧ-1

ಕ್ರ. ಸಂ	ಜಿಲ್ಲೆಯ ಹೆಸರು	ತೂಕದ ಯಂತ್ರಗಳನ್ನು ಸರಬರಾಜು ಮಾಡಿದ ಅಂಗನವಾಡಿ ಕೇಂದ್ರಗಳ ಸಂಖ್ಯೆ	ವಾರ್ಷಿಕ ಸತ್ಯಾಪನ ಹಾಗೂ ದುರಸ್ಥಿಗೆ ಪ್ರತಿ ಅಂಗನವಾಡಿ ಕೇಂದ್ರಕ್ಕೆ ರೂ: 172,00 ರಂತೆ ತಗಲುವ ಅಂದಾಜು ವೆಚ್ಚ ರೂಗಳಲ್ಲಿ	ಜಿಲ್ಲೆಯಲ್ಲಿ ಇರುವ ಒಟ್ಟು ಯೋಜನೆಗಳ ಸಂಖ್ಯೆ	ಯೋಜನೆಯಲ್ಲಿರುವ ಪ್ಲಾಟ್ ಫಾರಂ ತೂಕದ ಯಂತ್ರವನ್ನು ವಾರ್ಷಿಕ ಸತ್ಯಾಪನೆ ಹಾಗೂ ದುರಸ್ತಿಗೆ ರೂ:250-00 ರಂತೆ ತಗಲುವ ವೆಚ್ಚ ರೂಗಳಲ್ಲಿ	ವಾರ್ಷಿಕ ಸತ್ಯಾಪನೆ ಹಾಗೂ ದುರಸ್ತಿಗೆ ತಗಲುವ ಒಟ್ಟು ವೆಚ್ಚ ರೂಗಳಲ್ಲಿ (ಅಂಗನವಾಡಿ ಕೇಂದ್ರಗಳ ಹಾಗೂ ಯೋಜನೆಗಳ)
1	ಬಾಗಲಕೋಟೆ	1366	234952	6	1500	236452
2	ಬೆಂಗಳೂರು ನಗರ	1192	205024	6	1500	206524
3	ಬೆಂಗಳೂರು (ಗ್ರಾ)	1891	325252	8	2000	327252
4	ಬೆಳಗಾಂ	3673	631756	11	2750	634506
5	ಬಳ್ಳಾರಿ	1372	235984	8	2000	237984
6	ಬೀದರ್	1151	197972	5	1250	199222
7	ಬಿಜಾಪುರ	1301	223772	5	1250	225022
8	ಚಾಮರಾಜನಗರ	1085	186620	4	1000	187620

1	2		3	4	5	6
9	ಚಿಕ್ಕಮಗಳೂರು	1213	208636	7	1750	210386
10	ಚಿತ್ರದುರ್ಗ	1336	229792	6	1500	231292
11	ದಕ್ಷಿಣಕನ್ನಡ	1775	305300	6	1500	306800
12	ದಾವಣಗೆರೆ	1262	217064	6	1500	218564
13	ಧಾರವಾಡ	806	138632	6	1500	140132
14	ಗದಗ	826	142072	5	1250	143322
15	ಗುಲ್ಬರ್ಗ	2350	404200	11	2750	406950
16	ಹಾಸನ	1594	274168	8	2000	276168
17	ಹಾವೇರಿ	1249	214828	7	1750	216168
18	ಕೊಡಗು	692	119024	3	750	119774
19	ಕೋಲಾರ	2361	406092	11	2750	408842
20	ಕೊಪ್ಪಳ	893	153596	4	1000	154596
21	ಮಂಡ್ಯ	1655	284660	7	1750	286410
22	ಮೈಸೂರು	1930	331960	8	2000	333960
23	ರಾಯಚೂರು	1308	224976	5	1250	226226
24	ಶಿವಮೊಗ್ಗ	1323	227556	7	1750	229306
25	ತುಮಕೂರು	2337	401964	11	2750	404714
26	ಉಡುಪಿ	1027	176644	3	750	177394
27	ಉತ್ತರ ಕನ್ನಡ	1202	206744	11	2750	209494
	ರಾಜ್ಯದ ಒಟ್ಟು	48170	6808240	185	46250	6955490

ಅನುಬಂಧ – 2

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತೂಕದ ಯಂತ್ರಗಳನ್ನು ಸರಬರಾಜು ಮಾಡಿದ ಅಂಗನವಾಡಿ ಕೇಂದ್ರಗಳ ಸಂಖ್ಯೆ	ವಾರ್ಷಿಕ ಸತ್ಯಾಪನ ಹಾಗೂ ದುರಸ್ಥಿಗೆ ಪ್ರತಿ ಅಂಗನವಾಡಿ ಕೇಂದ್ರಕ್ಕೆ ರೂ: 172,00 ರಂತೆ ತಗಲುವ ಅಂದಾಜು ವೆಚ್ಚ ರೂ: ಗಳಲ್ಲಿ	ಯೋಜನೆಯಲ್ಲಿರುವ ಪ್ಲಾಟ್ ಫಾರಂ ತೂಕದ ಯಂತ್ರವನ್ನು ವಾರ್ಷಿಕ ಸತ್ಯಾಪನೆ ಹಾಗೂ ದುರಸ್ತಿಗೆ ರೂ:250–00 ರಂತೆ ತಗಲುವ ವೆಚ್ಚ ರೂ: ಗಳಲ್ಲಿ
	ದಕ್ಷಿಣ ಕನ್ನಡ			
1	ಬೆಳ್ತಂಗಡಿ	193	33196	250
2	ಬಂಟ್ವಾಳ	537	92364	250
3	ಮಂಗಳೂರು ನಗರ	141	24252	250
4	ಮಂಗಳೂರು (ಗ್ರಾ)	425	73100	250
5	ಪುತ್ತೂರು	363	62436	250
6	ಸುಳ್ಯ	116	19952	250

	ಒಟ್ಟು	1775	305300	1500
	ಉಡುಪಿ			
1	ಕಾರ್ಕಳ	189	32508	250
2	ಕುಂದಾಪುರ	343	58996	250
3	ಉಡುಪಿ	495	85140	250
	ಒಟ್ಟು	1027	176644	750

ಯಶಸ್ವಿನಿ ಯೋಜನೆಯ ಮಾಹಿತಿಯ ಬಗ್ಗೆ

4269 (4865) : ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ಸಹಕಾರ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಶಸ್ವಿನಿ ಯೋಜನೆಯಡಿಯಲ್ಲಿ ಸದಸ್ಯರಾಗಿರುವ ರೈತರ ಸಂಖ್ಯೆ ಎಷ್ಟು?

ಆ) ಈ ಯೋಜನೆಯಡಿಯಲ್ಲಿ ಕಾಯಿಲೆಗೆ ಚಿಕಿತ್ಸೆ ಪಡೆದುಕೊಳ್ಳಲು ಆಯಾ ಜಿಲ್ಲಾ ಮಟ್ಟದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಸೌಲಭ್ಯ ಒದಗಿಸಲಾಗಿದೆಯೇ?

ಇ) ಖಾಸಗಿ ಆಸ್ಪತ್ರೆಗಳಲ್ಲಿ ಈ ಯೋಜನೆಯ ಸೌಲಭ್ಯ ಒದಗಿಸಲಾಗಿದ್ದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಾವ ಯಾವ ಖಾಸಗಿ ಆಸ್ಪತ್ರೆಗಳಲ್ಲಿ ಈ ಯೋಜನೆಯನ್ವಯ ವೈದ್ಯಕೀಯ ಚಿಕಿತ್ಸೆ ಪಡೆದುಕೊಳ್ಳಲು ಅವಕಾಶವಿದೆ.

ಈ) ಖಾಸಗಿ ಆಸ್ಪತ್ರೆಗಳ ಸೌಲಭ್ಯವಿಲ್ಲದಿದ್ದಲ್ಲಿ, ಕಾರಣವೇನು?

ಶ್ರೀ. ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ) ಈ ವರೆಗೂ 16.01 ಲಕ್ಷ ರೈತ ಸದಸ್ಯರನ್ನು ನೊಂದಾಯಿಸಲಾಗಿದೆ.

ಆ) ಈ ಯೋಜನೆಯಡಿ ಚಿಕಿತ್ಸೆ ಪಡೆದುಕೊಳ್ಳಲು ರಾಜ್ಯಾದ್ಯಂತ 71 ಖಾಸಗಿ ಆಸ್ಪತ್ರೆಗಳು ಹಾಗೂ ನರ್ಸಿಂಗ್ ಹೋಂಗಳಲ್ಲಿ ಸೌಲಭ್ಯ ಒದಗಿಸಲಾಗಿದೆ.

ಇ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕೆಳಕಂಡ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದುಕೊಳ್ಳಲು ಅವಕಾಶವಿದೆ.

ದಕ್ಷಿಣ ಕನ್ನಡ ಜಿಲ್ಲೆ

1) ಫಾದರ್ ಮುಲ್ಲ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಬೆಂಗಳೂರು.

2) ಎ.ಜೆ.ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಬೆಂಗಳೂರು.

ಉಡುಪಿ ಜಿಲ್ಲೆ

1) ವಿನಯಾ ಆಸ್ಪತ್ರೆ, ಕುಂದಾಪುರ

2) ಆದರ್ಶ ಆಸ್ಪತ್ರೆ, ಕುಂದಾಪುರ

3) ಮಿತ್ರಾ ಆಸ್ಪತ್ರೆ ಮತ್ತು ಡಯಾಗ್ನಸ್ಟಿಕ್ ಸೆಂಟರ್ ಉಡುಪಿ.

4) ಸಿಟಿ ಆಸ್ಪತ್ರೆ ಮತ್ತು ಡಯಾಗ್ನಸ್ಟಿಕ್ ಸೆಂಟರ್ ಉಡುಪಿ

ಈ) ಖಾಸಗಿ ಆಸ್ಪತ್ರೆಗಳಲ್ಲಿ ಈ ಸೌಲಭ್ಯ ಒದಗಿಸಲಾಗಿದೆ.

ಯಶಸ್ವಿನಿ ಯೋಜನೆಯ ಸೌಲಭ್ಯ ವಿಸ್ತರಣೆಯ ಬಗ್ಗೆ

4270 (4866) : ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ಸಹಕಾರ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಶಸ್ವಿನಿ ಯೋಜನೆಯನ್ವಯ ಪ್ರಕೃತ ಸಂಗ್ರಹವಾಗಿರುವ ಸದಸ್ಯತ್ವ ಶುಲ್ಕದ ಮೊತ್ತವೆಷ್ಟು, ಮತ್ತು ಎಷ್ಟು ಮಂದಿ ಸದಸ್ಯರುಗಳು ತಮ್ಮ ಹೆಸರನ್ನು ಈ ಯೋಜನೆಯನ್ವಯ ನೋಂದಾಯಿಸಿರುತ್ತಾರೆ.

ಆ) ಅಸಂಘಟಿತ ಕಾರ್ಮಿಕ ವಲಯಕ್ಕೆ ಈ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆಯೇ;

ಇ) ಹಾಗಿದ್ದರೆ, ಈ ಯೋಜನೆಯನ್ನು ಅಸಂಘಟಿತ ಕಾರ್ಮಿಕ ವಲಯಕ್ಕೆ ಯಾವಾಗ ವಿಸ್ತರಿಸಲಾಗುವುದು.

ಈ) ಈ ಯೋಜನೆಯನ್ನು ಅಸಂಘಟಿತ ಕಾರ್ಮಿಕ ವಲಯಕ್ಕೆ ವಿಸ್ತರಿಸಲಾಗಿಲ್ಲದಿದ್ದಲ್ಲಿ, ಈ ಬಗ್ಗೆ ಪರಿಶೀಲಿಸುವುದು ಉಚಿತವೆಂದು ಸರ್ಕಾರವು ಭಾವಿಸಿಲ್ಲವೇ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ) ಯಶಸ್ವಿನಿ ಸಹಕಾರ ರೈತರ ಆರೋಗ್ಯ ಯೋಜನೆಯಡಿಯಲ್ಲಿ ದಿನಾಂಕ:31.5.2003ರ ವರೆಗೆ ರೂ:9.62 ಕೋಟಿಗಳ ವಂತಿಗೆಯನ್ನು ಸಂಗ್ರಹಿಸಲಾಗಿರುತ್ತದೆ.

ಆ) ಸದ್ಯಕ್ಕಿಲ್ಲ,

ಇ) ಉದ್ಭವಿಸುವುದಿಲ್ಲ,

ಈ) ಉದ್ಭವಿಸುವುದಿಲ್ಲ,

ಪುತ್ತೂರು ಎಪಿ.ಎಂ.ಸಿ.ಪರವಾನಿಗೆಯನ್ನು ನವೀಕರಣ ಮಾಡದೇ ಇರುವ ಬಗ್ಗೆ

4271 (4867) : ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪುತ್ತೂರಿನಲ್ಲಿ ಕೃಷಿ ಹುಟ್ಟುವಳಿ ಖರೀದಿ ಮಾರಾಟ ವ್ಯವಹಾರ ನಡೆಸುವ ವರ್ತಕರು ಫೆಬ್ರವರಿ 2003 ರಂದು 2003-04ರ ಪರವಾನಿಗೆ ನವೀಕರಣ ಶುಲ್ಕವನ್ನು ಎಪಿಎಂಸಿಯೇ ಪಾವತಿಸಿದರೂ ಕೂಡ ಇದುವರೆಗೆ ಪರವಾನಿಗೆ ನವೀಕರಣ ಮಾಡದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬರದೇ ಇದ್ದಲ್ಲಿ, ಈ ರೀತಿ ವರ್ತಕರಿಗೆ ಕಿರುಕುಳ ನೀಡುವ ಕಾರ್ಯದರ್ಶಿಯವರ ಮೇಲೆ ಏನು ಕ್ರಮ ಕೈಗೊಳ್ಳಲಾಗುವುದು;

ಇ) ವಹಿವಾಟನ್ನು ಎಪಿಎಂಸಿಗೆ ಸ್ಥಳಾಂತರ ಮಾಡದೇ, ಪರವಾನಿಗೆ ನವೀಕರಣ ಮಾಡಲಾಗುವುದಿಲ್ಲವೆಂದು ಪುತ್ತೂರು ಎಪಿಎಂಸಿ ಅಧಿಕಾರಿಗಳು ನಿರ್ಧಾರ ಕೈಗೊಂಡಿದ್ದಾರೆಯೇ;

ಈ) ಪರವಾನಿಗೆ ನವೀಕರಣ ಕೋರಿ ಶುಲ್ಕ ಪಾವತಿಸಿರುವ ವರ್ತಕರಿಗೆ ನವೀಕರಣ ಪರವಾನಗಿ ಯಾವಾಗ ನೀಡಲಾಗುವುದು; ನೀಡಲಾಗುವುದಿಲ್ಲವೆಂದಲ್ಲಿ, ಕಾರಣವೇನು;

ಉ) ಹೀಗೆ ಶುಲ್ಕ ಪಾವತಿಸಿದರೂ ಕೂಡ ಪರವಾನಗಿ ನೀಡದೇ ಇರುವುದು ಕಾನೂನು ಬದ್ಧವೆಂದು ಸರ್ಕಾರವು ತಿಳಿದಿದೆಯೇ: ಇಲ್ಲವೆಂದಾದಲ್ಲಿ, ಇದುವರೆಗೆ ನೀಡದೇ ಇರಲು ಕಾರಣವೇನು; ವಿವರ ಒದಗಿಸುವುದು?

ಶ್ರೀ ಬಿ.ಎಸ್.ಪಾಟೀಲ್ ಸಾಸನೂರು (ಕೃಷಿ ಮಾರುಕಟ್ಟೆ ಸಚಿವರು)

ಅ) 2003–04ನೇ ಸಾಲಿಗೆ ಲೈಸನ್ಸ್ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದ 201 ಪೇಟೆ ಕಾರ್ಯಕರ್ತರ ಲೈಸನ್ಸ್ ನವೀಕರಣ ಮಾಡಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) 2003–04ನೇ ಸಾಲಿಗೆ ಲೈಸನ್ಸ್ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದ 201 ಪೇಟೆ ಕಾರ್ಯಕರ್ತರ ಲೈಸನ್ಸ್ ನವೀಕರಣ ಮಾಡಲಾಗಿದೆ.

ಪ್ರಾಂಗಣದಲ್ಲಿ ವ್ಯವಹರಿಸಲು ಲೈಸನ್ಸ್‌ಗಾಗಿ ಬರುವ ಹೊಸ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುವುದು.

ಈ) ಮೇಲಿನಂತೆ

ಉ) 2003–04ನೇ ಸಾಲಿಗೆ ಲೈಸನ್ಸ್ ನವೀಕರಣಕ್ಕಾಗಿ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಿದ 201 ಪೇಟೆ ಕಾರ್ಯಕರ್ತರ ಲೈಸನ್ಸ್ ನವೀಕರಿಸಲಾಗಿದೆ.

ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳ ರಫ್ತಿನ ಬಗ್ಗೆ

4329 (4865) : ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ಸಹಕಾರ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಯನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತದೆ;

ಆ) ತೋಟಗಾರಿಕೆ ಬೆಳೆಗಳ ಪೈಕಿ ಯಾವ ಯಾವ ಬೆಳೆಗಳನ್ನು ಯಾವ ಯಾವ ದೇಶಕ್ಕೆ ರಫ್ತು ಮಾಡಲಾಗುತ್ತಿದೆ;

ಇ) ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ವರ್ಷಗಳಲ್ಲಿ ರಫ್ತಿನಿಂದ ಎಷ್ಟೆಷ್ಟು ಆದಾಯ ಬಂದಿದೆ;

ಈ) ಈ ಬೆಳೆಗಳ ರಫ್ತನ್ನು ಉತ್ತೇಜಿಸಲು ಕೈಗೊಂಡ/ಕೈಗೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು **15.30** ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಸಲಾಗುತ್ತಿದೆ. ವಿವರಗಳು ಕೆಳಕಂಡಂತಿದೆ.

ವಿವರಗಳು	ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ)	ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)
ಹಣ್ಣುಗಳು	2.60	41.64
ತರಕಾರಿಗಳು	3.78	66.54
ಸಾಂಬಾರು ಬೆಳೆಗಳು	2.45	4.96
ತೋಟದ ಬೆಳೆಗಳು	6.26	3.34

1	2	3
ವಾಣಿಜ್ಯ ಪುಷ್ಪಗಳು	0.20	1.56
ಔಷಧಿಯ ಗಿಡಗಳು	0.004	0.045
ಸುಗಂಧಿತ ಗಿಡಗಳು	0.006	0.091
ಒಟ್ಟು	15.30	118.17

ಆ) ರಾಜ್ಯದಿಂದ ತೋಟಗಾರಿಕೆ ಉತ್ಪನ್ನಗಳಾದ ಗುಲಾಬಿ ಈರುಳ್ಳಿ, ಆಲೂಗಡ್ಡೆ, ಮಿಡಿ ಸೌತೆಕಾಯಿ, ದ್ರಾಕ್ಷಿ, ಗೋಡಂಬಿ, ಮಾವು, ದಾಳಿಂಬೆ, ನಿಂಬೆ, ಕಲ್ಲಂಗಡಿ, ಅರಿಶಿನ, ಪುಷ್ಪಗಳು, ಸಂಸ್ಕರಿಸಿದ ಉತ್ಪನ್ನಗಳು ಮತ್ತು ಇತರೆ ಪದಾರ್ಥಗಳನ್ನು ಯೂರೋಪ್ ಅಮೆರಿಕ, ಮೆಕ್ಸಿಕೊ, ಇಂಡೋನೇಷಿಯ, ಶ್ರೀಲಂಕಾ, ಆಸ್ಟ್ರೇಲಿಯಾ ಸಿಂಗಾಪೂರ್, ಜಪಾನ್, ಮಧ್ಯಪ್ರಾಚ್ಯ ಮತ್ತು ಇತರೆ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ.

ಇ) ಕಳೆದ 3 ವರ್ಷಗಳಲ್ಲಿ ರಫ್ತಾದ ಉತ್ಪನ್ನಗಳ ಮೌಲ್ಯವು ಕೆಳಕಂಡಂತಿರುತ್ತದೆ. (ಕೋಟಿ ರೂಗಳಲ್ಲಿ)

2000–01 – 1666

2001–02 – 1670

2002–03 – 1230 (ಏಪ್ರಿಲ್ 02ರಿಂದ ಡಿಸೆಂಬರ್ 02ರವರೆಗೆ)

ಈ) 1. ಗುಲಾಬಿ ಈರುಳ್ಳಿ, ಗರ್ಕಿನ್ಸ್ ಮತ್ತು ಪುಷ್ಪೋದ್ಯಮಗಳಿಗೆ ರಫ್ತುವಲಯಗಳನ್ನು ಭಾರತ ಸರ್ಕಾರದ ಸಹಯೋಗದೊಂದಿಗೆ ಸ್ಥಾಪಿಸಿದೆ. ಹಾಗೂ ಮಾವು, ದ್ರಾಕ್ಷಿ, ವೆನಿಲ್ಲಾ, ದಾಳಿಂಬೆ, ನಿಂಬೆ, ಔಷಧೀಯ ಹಾಗೂ ಸುಗಂಧದ್ರವ್ಯ ಬೆಳೆಗಳಿಗೆ ಕೃಷಿ ರಫ್ತು ವಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

2. ರಫ್ತು ಉತ್ತೇಜನ ನೀತಿ (2002–2007) ಯನ್ನು ಪ್ರಕಟಿಸಿದೆ.

3. ಕೇಂದ್ರ ಸರ್ಕಾರದ ಅಸ್ಸೈಡ್ ಯೋಜನೆಯಡಿಯಲ್ಲಿ ಹಣ ಪಡೆದು ಮೂಲಭೂತ ಸೌಕರ್ಯಗಳಾದ ಸಂಗ್ರಹಣಾ ಕೇಂದ್ರಗಳು, ವಿಂಗಡಣೆ, ವಾಷಿಂಗ್, ಪ್ಯಾಕಿಂಗ್ ಸೌಲಭ್ಯ, ಹವಾನಿಯಂತ್ರಿತ ಸಾಗಾಣಿಕೆ, ಪ್ರೀಕೂಲಿಂಗ್, ಶೀತಲಗೃಹಗಳು, ಮಧ್ಯಂತರ ಶೀತಲಗೃಹಗಳು, ಸಂಸ್ಕರಣ ಘಟಕಗಳು ಮತ್ತು ರಫ್ತು ಸಂಕೀರ್ಣಗಳನ್ನು ಸೃಷ್ಟಿಸಲು ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು.

4. ಪುಷ್ಪೋದ್ಯಮದ ಅಭಿವೃದ್ಧಿಗೆ ಅಂತರ ರಾಷ್ಟ್ರೀಯ ಮಟ್ಟದ ಹರಾಜು ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ.

5. ರಾಜ್ಯದಲ್ಲಿನ ರೈತ ಸಂಪರ್ಕ ಕೇಂದ್ರಗಳಿಂದ ಮಾರುಕಟ್ಟೆ ಬಗ್ಗೆ ಮಾಹಿತಿ ಒದಗಿಸಲಾಗುತ್ತಿದೆ.

6. ಕೃಷಿ/ತೋಟಗಾರಿಕೆ ಉತ್ಪನ್ನಗಳ ರಫ್ತಿನ ಅಭಿವೃದ್ಧಿಗಾಗಿ ಕೆಪೆಕ್ ಸಂಸ್ಥೆಯನ್ನು ಸ್ಥಾಪಿಸಿದೆ. ಹೂವುಗಳ ಮಾರಾಟಕ್ಕಾಗಿ ಕೆ.ಎ.ಐ.ಸಿ.ವತಿಯಿಂದ ಹೂವು ಹರಾಜು ಕೇಂದ್ರವನ್ನು ಸ್ಥಾಪಿಸಲಾಗಿದೆ.

7. ಕೊಯ್ಲಿನ ನಂತರದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಶೀತಲ ಗೃಹಗಳು ಉಪಯೋಗಿಸುವ ವಿದ್ಯುಚ್ಛಕ್ತಿಯ ಪ್ರತಿ ಯೂನಿಟ್‌ಗೆ ರೂ. 1/–ರಂತೆ ಸಹಾಯಧನ ನೀಡಲಾಗುತ್ತಿದೆ.

8. ಕೇಂದ್ರ ಸರ್ಕಾರದ ಎನ್.ಹೆಚ್.ಬಿ., ಅಪೆಡಾ, ಸಿ.ಡಿ.ಬಿ., ಎನ್.ಸಿ.ಡಿ.ಸಿ., ಆಹಾರ ಸಂಸ್ಕರಣ ಮಂತ್ರಾಲಯ ಮತ್ತು ವಿವಿಧ ಮಂಡಳಿಗಳಿಂದ ಹಣ ಕಾಸಿನ ನೆರವನ್ನು ತೋಟಗಾರಿಕೆ ಉತ್ಪನ್ನಗಳ ಉತ್ಪಾದನೆ, ಶೇಖರಣೆ-ಹಾಗೂ ಮಾರುಕಟ್ಟೆಗಾಗಿ ಹಣಕಾಸಿನ ನೆರವನ್ನು ನೀಡಲಾಗುತ್ತಿದೆ.

9. ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳ ವೈಜ್ಞಾನಿಕ ಸಂಸ್ಕರಣೆ, ಮಾರುಕಟ್ಟೆ ಮತ್ತು ರಫ್ತನ್ನು ಉತ್ತೇಜಿಸಲು 6 ಆಹಾರ ಮತ್ತು ಕೃಷಿ ತಂತ್ರಜ್ಞಾನ ಪಾರ್ಕುಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಮೈಸೂರು ನಗರದಲ್ಲಿ ತೋಟಗಾರಿಕಾ ಇಲಾಖೆಯ ಉದ್ಯಾನವನಗಳ ಅಭಿವೃದ್ಧಿ ಕುರಿತು

4273 (4874) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ತೋಟಗಾರಿಕೆ ಇಲಾಖೆಯ ಉದ್ಯಾನವನಗಳು ಯಾವುವು?

ಆ) ಅವುಗಳ ಅಭಿವೃದ್ಧಿಗೆ ಸರ್ಕಾರ ಎಷ್ಟುವೆಚ್ಚದಲ್ಲಿ ಯಾವ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಮೈಸೂರು ನಗರದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 14 ಉದ್ಯಾನವನಗಳಿವೆ. ಅವು ಈ ಕೆಳಕಂಡಂತಿದೆ:

1) ಕರ್ಜನ್ ಪಾರ್ಕ್ ಬ್ಲಾಕ್–1
2) ಕರ್ಜನ್ ಪಾರ್ಕ್ ಬ್ಲಾಕ್–2
3) ಕರ್ಜನ್ ಪಾರ್ಕ್ ಬ್ಲಾಕ್–3
4) ಕುಪ್ಪಣ್ಣಾ ಪಾರ್ಕ್, ನಿಶಾದ ಬಾಗ್.
5) ಕೇಂದ್ರ ಸಸ್ಯಗಾರ
6) ಜಲದರ್ಶಿನಿ ಅತಿಥಿಗೃಹ ಉದ್ಯಾನವನ
7) ಜಲಸನ್ನಿಧಿ ಉದ್ಯಾನವನ (ಜಿಲ್ಲಾಧಿಕಾರಿಗಳ ನಿವಾಸ)
8) ವಿಭಾಗಧಿಕಾರಿ ಕಛೇರಿ ತೋಟ ಮತ್ತು ಉದ್ಯಾನವನ
9) ಗಾರ್ಡನ್ ಪಾರ್ಕ್ ಸಸ್ಯಗಾರ
10) ಜಿಲ್ಲಾಧಿಕಾರಿಗಳ ಕಛೇರಿ ಜಿಲ್ಲಾ ಉದ್ಯಾನವನ
11) ಕೃಷ್ಣ ರಾಜೇಂದ್ರ ಆಸ್ಪತ್ರೆ ಉದ್ಯಾನವನ
12) ಸರ್ಕಾರಿ ಭವನ ಅತಿಥಿ ಗೃಹ ಉದ್ಯಾನವನ ಮತ್ತು ಸಸ್ಯಗಾರ. ಸುಬ್ಬರಾಯನ ಕೆರೆ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ. ವಸ್ತು ಪ್ರದರ್ಶನ ಇಲಾಖೆ ಉದ್ಯಾನವನ.
13) ಸುಬ್ಬರಾಯನ ಕೆರೆ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ.
14) ವಸ್ತು ಪ್ರದರ್ಶನ ಇಲಾಖೆ ಉದ್ಯಾನವನ.

ಆ) ಅವುಗಳ ಅಭಿವೃದ್ಧಿಗೆ ಅಲಂಕಾರಿಕ ಗಿಡಗಳನ್ನು ನೆಡುವುದು, ಹುಲ್ಲುಹಾಸು ನವೀಕರಣ, ನೀರಿನ ವ್ಯವಸ್ಥೆ, ಯಂತ್ರೋಪಕರಣಗಳ ವ್ಯವಸ್ಥೆ ಮತ್ತು ನಿರ್ವಹಣೆಗಾಗಿ ಅಗತ್ಯ ಸಾಮಗ್ರಿಗಳನ್ನು ಒದಗಿಸಲಾಗಿದೆ. ಇದಕ್ಕಾಗಿ 2002–03ನೇ ಸಾಲಿನಲ್ಲಿ ರೂ.6.72 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಮೈಸೂರಿನಲ್ಲಿ ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಅನುಮತಿ ಕೋರಿಕೆಯ ಬಗ್ಗೆ

4274 (4875) : ಶ್ರೀ ಶಂಕರ ಲಿಂಗೇಗೌಡ, ಹೆಚ್.ಎಸ್. (ಚಾಮರಾಜ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ಯಾವ ಯಾವ ಬಡಾವಣೆಗಳಲ್ಲಿ ನ್ಯಾಯಬೆಲೆ ಅಂಗಡಿಗಳಿವೆ; ತಿಳಿಸುವುದು;

ಆ) ನಗರದ ಇನ್ನೂ ಅನೇಕ ಬಡಾವಣೆಗಳಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿ ತೆರೆಯಲು ಅನುಮತಿ ಕೋರಿ ಅರ್ಜಿ ಬಂದಿದೆಯೇ;

ಇ) ಬಂದಿದ್ದರೆ, ಸದರಿ ಅರ್ಜಿಗಳ/ಅರ್ಜಿದಾರರ ವಿವರ ನೀಡುವುದು;

ಈ) ಹೊಸದಾಗಿ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಸರ್ಕಾರದ ನಿಲುವೇನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ಮೈಸೂರು ನಗರದಲ್ಲಿ ಪ್ರತಿ ಮೊಹಲ್ಲಾವಾರು ಕಾರ್ಯ ನಿರ್ವಹಿಸುತ್ತಿರುವ ನ್ಯಾಯಬೆಲೆ ಅಂಗಡಿಗಳ ವಿವರ ಕೆಳಕಂಡಂತಿದೆ.

ಕ್ರ.ಸ.	ಮೊಹಲ್ಲಾ ಹೆಸರು	ನ್ಯಾಯಬೆಲೆ ಅಂಗಡಿಗಳ ಸಂಖ್ಯೆ
1	ವಿ.ವಿ.ಮೊಹಲ್ಲಾ	38
2	ಚಾಮರಾಜ ಮೊಹಲ್ಲಾ	35
3	ಕೆ.ಆರ್.ಮೊಹಲ್ಲಾ	35
4	ಖಿಲ್ಲೆ ಮೊಹಲ್ಲಾ	37
5	ನಜರ್‌ಬಾದ್ ಮೊಹಲ್ಲಾ	34
6	ಮಂಡಿ ಮೊಹಲ್ಲಾ	34
7	ಲಷ್ಕರ್ ಮೊಹಲ್ಲಾ	35
8	ದೇವರಾಜ ಮೊಹಲ್ಲಾ	32
	ಒಟ್ಟು	280

ಆ) ಮೈಸೂರು ನಗರ ಪ್ರದೇಶದಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿಯನ್ನು ಕೋರಿ 4 ಅರ್ಜಿಗಳು ಸ್ವೀಕೃತವಾಗಿರುತ್ತವೆ.

ಇ) ಹೊಸ ನ್ಯಾಯಬೆಲೆ ಅಂಗಡಿಯನ್ನು ಕೋರಿ ಸಲ್ಲಿಸಿರುವ ಅರ್ಜಿದಾರರ ವಿವರ ಈ ಕಳಕಂಡಂತಿದೆ.

1) ಶ್ರೀ ಕೆ.ರಮೇಶ್, ಮಂಜುನಾಥಪುರ.

2) ಶ್ರೀ ಎಸ್.ಮನೋಹರ್ ಸಿಂಗ್, ರಮಾಬಾಯಿ ನಗರ, ಮೈಸೂರು.

3) ಕೆ.ಎಸ್.ಆರ್.ಪಿ., ಮೈಸೂರು

4) ಶ್ರೀಮತಿ ಜಯಮ್ಮ, ಕೈಲಾಸಪುರಂ, ಮೈಸೂರು.

ಈ) ಅವಶ್ಯಕತೆ ಕಂಡುಬರುವ ಸ್ಥಳದಲ್ಲಿ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಸದ್ಯದಲ್ಲಿ ರಾಜ್ಯಾದ್ಯಂತ

ಹಳದಿ ಪಡಿತರ ಚೀಟಿ ಯೋಜನೆಯಡಿ ಪಡಿತರ ಚೀಟಿಗಳ ವಿತರಣೆ ಕಾರ್ಯ ನಡೆಯುತ್ತಿರುವುದರಿಂದ ಹೊಸ ನ್ಯಾಯಬೆಲೆ ಅಂಗಡಿ ಮಂಜೂರಾತಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ. (B) 0252230

ಕರ್ನಾಟಕ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ, 1992ಕ್ಕೆ ಸೂಕ್ತ ತಿದ್ದುಪಡಿ ತಂದು ನ್ಯಾಯಬೆಲೆ ಅಂಗಡಿಗಳನ್ನು ಸ್ತ್ರೀಶಕ್ತಿ ಗುಂಪುಗಳಿಗೆ ಪ್ರಥಮ ಆದ್ಯತೆಯ ಮೇಲೆ ಮಂಜೂರು ಮಾಡಲು ಕ್ರಮ ವಹಿಸಲಾಗುತ್ತಿದೆ.

ರಾಜ್ಯದ ಸ್ತ್ರೀಶಕ್ತಿ ಸಂಘಟನೆ ಸಹಕಾರದಿಂದ ಅಕ್ಷರ ದಾಸೋಹ ಕಾರ್ಯಕ್ರಮ ಜಾರಿಗೊಳಿಸುವ ಬಗ್ಗೆ

4275 (4876) : ಶ್ರೀ ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 'ಸ್ತ್ರೀ ಶಕ್ತಿ' ಸಂಘಟನೆ ಪ್ರಾರಂಭವಾದ ಮೇಲೆ ರಾಜ್ಯದಾದ್ಯಂತ ಎಷ್ಟು ಮಂದಿ ಮಹಿಳೆಯರಿಗೆ ಈ ಮೂಲಕ ಪ್ರಯೋಜನ, ಅನುಕೂಲವಾಗಿದೆ;

ಆ) ಈ ಸಂಘಟನೆಯಲ್ಲಿ ತೊಡಗಿಸಿ ಕೊಂಡಿರುವ ಮಹಿಳೆಯರ ಸಂಖ್ಯೆ ಎಷ್ಟು;

ಇ) ಈ ಸಂಘಟನೆಗಳ ಮೂಲಕ ಅಥವಾ ಈ ಸಂಘಟನೆಗಳ ಸಹಕಾರದಿಂದ 'ಅಕ್ಷರ ದಾಸೋಹ' ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ವಿಚಾರದಲ್ಲಿ ಸರ್ಕಾರದ ನಿಲುವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) 11.16 ಲಕ್ಷ ಮಹಿಳೆಯರು ಪ್ರಯೋಜನವನ್ನು ಪಡೆದು ಕೊಂಡಿದ್ದಾರೆ.

ಆ) 11.16 ಲಕ್ಷ

ಇ) ಸಾಧ್ಯವಾದ ಕಡೆಗಳಲೆಲ್ಲ ಸ್ತ್ರೀಶಕ್ತಿ ಗುಂಪುಗಳ ಸಹಕಾರದಿಂದ 'ಅಕ್ಷರ ದಸೋಹ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ರಾಜ್ಯದಲ್ಲಿ ರೈತರ ಸಾಲದ ಬಡ್ಡಿ ಮನ್ನಾ ಮಾಡುವ ಬಗ್ಗೆ

4276 (4877) : ಶ್ರೀ ಶಂಕರ ಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳ ಯಾವ ಯಾವ ಊರಿನ ಎಷ್ಟೆಷ್ಟು ಮಂದಿ ರೈತರು ಯಾವ ಯಾವ ಉದ್ದೇಶಕ್ಕಾಗಿ ಎಷ್ಟು ಪ್ರಮಾಣದಲ್ಲಿ ಸಾಲ ಮಾಡಿರುವರು:

ಆ) ಸದರಿ ಸಾಲದ ಮೇಲೆ ವಿಧಿಸಿರುವ ಬಡ್ಡಿ ಪ್ರಮಾಣ ಎಷ್ಟು

ಇ) ರೈತರಿಂದ ಸರ್ಕಾರಕ್ಕೆ ಬಾಕಿ ಇರುವ ಅಸಲು ಮೊತ್ತ ಎಷ್ಟು: ಬಡ್ಡಿ ಮೊತ್ತ ಎಷ್ಟು:

ಈ) ಬರಗಾಲದಿಂದ (ಸತತ ಮೂರು) ನೊಂದಿರುವ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬೇಕೆಂಬ ಬಗ್ಗೆ ಸರ್ಕಾರದ ನಿಲುವೇನು: ತಿಳಿಸುವುದು?

ಶ್ರೀ ವಿ.ಎಸ್.ಕೌಜಲಗಿ (ಕೃಷಿ ಸಚಿವರು):

ಅ) ರಾಜ್ಯದ ಎಲ್ಲಾ ಜಿಲ್ಲೆಗಳಿಂದ : ಎಲ್ಲಾ ಊರುಗಳಿಂದ ಮಾಹಿತಿಯನ್ನು ಸಂಗ್ರಹಿಸಬೇಕಾಗಿದ್ದು ಇದು ಅಗಾಧ ಪ್ರಮಾಣದ ಕೆಲಸವಾಗಿರುತ್ತದೆ. ಮಾನ್ಯ ಸದಸ್ಯರು ನಿರ್ದಿಷ್ಟವಾದ ಜಿಲ್ಲೆಯ ಅಥವಾ ಊರಿನ ನಿರ್ದಿಷ್ಟ ಮಾಹಿತಿಯನ್ನು ಕೇಳಿದಲ್ಲಿ ಒದಗಿಸಲಾಗುವುದು.

ಆ) ಸಹಕಾರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ರೈತರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಇರುವುದಿಲ್ಲ.

ಇ) ದಿನಾಂಕ:1.3.2002 ರಿಂದ 30.9.2002ರ ಖಾರಿಫ್ ಅವಧಿಯಲ್ಲಿ ಸಹಕಾರ ಸಂಘಗಳು ರೈತರಿಗೆ ನೀಡಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ.

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಸಶಾಮು. ತುಮಕೂರು.
ಕಾಸೂ. 21 - 350 ಪುಸ್ತಕಗಳು, ದಿ: 18-07-2004.